
ಉಜ್ಜಯಿನಿ ಸದ್ಧರ್ಮ ಪೀಠದ ಸಾಂಸ್ಕೃತಿಕ ಅಧ್ಯಯನ

ಶ್ರೀ ಜ. ಮರುಳಸಿದ್ದೇಶ್ವರ ವೈಭವ



ಡಾ. ಆರ್.ಎಮ್. ಷಡಕ್ಷರಯ್ಯ
ಎಂ.ಎ., ಡಿಪ್.-ಇನ್-ಎಪಿ., ಪಿಹೆಚ್.ಡಿ.,

ANI.

ಕ್ರೋಧ ಬುದ್ಧಿಯನ್ನು ತಿನ್ನುತ್ತದೆ. Afternoon Time 3.15, p.m.

ಅಹಂಕಾರ ಜ್ಞಾನವನ್ನು ತಿನ್ನುತ್ತದೆ.

ಪ್ರಾಯಶ್ಚಿತ್ತ ಪಾಪವನ್ನು ತಿನ್ನುತ್ತದೆ.

ಮೋಹ ಮರ್ಯಾದೆಯನ್ನು ತಿನ್ನುತ್ತದೆ.

ಲಂಚ ಗೌರವವನ್ನು ತಿನ್ನುತ್ತದೆ.

ಚಿಂತೆ ಆಯುಷ್ಯವನ್ನು ತಿನ್ನುತ್ತದೆ. Rekha

3-11-06
Friday
Time 3.15 A.
Early morning

AT
N.G.

ಶಿವ ಹೇಳಿದ ಎನಗೆ

ಅರ್ಥವಿಲ್ಲದ ಓದು ಬೇಡ
ಶಾಂತಿ ಇಲ್ಲದ ಮನೆ ಬೇಡ
ರುಚಿ ಇಲ್ಲದ ಅಡಿಗೆ ಬೇಡ
ಬುದ್ಧಿ ಇಲ್ಲದ ಜೀವನ ಬೇಡ
ಮಧುರತೆಯಿಲ್ಲದ ಮಾತು ಬೇಡ
ನೀತಿ ಇಲ್ಲದ ಬದುಕು ಬೇಡ
ನಿಷ್ಠೆ ಇಲ್ಲದ ಧ್ಯಾನ ಬೇಡ
ಶಿವನನ್ನು ಮಾತ್ರ ನೀ ಮರೆಯಬೇಡ.

ಉಸಿರಿರುವವರೆಗೆ ಮರೆಯಲಾರೆ, ಏಕೆಂದರೆ ನೀನೇ ನನಗೆ ತಂದೆ ತಾಯಿ, ಗಂಡ, ಬಂಧು ಬಳಗವು ಬಾಂಧವರು ಆಗಿರುವಿ. ಶಿವನನ್ನು ಮಾತ್ರ ನೀ ಮರೆಯಬೇಡ, ಮರೆತು ನೀ ಹಾಳಾಗಬೇಡ ಓ.... ರೇಖಾ. ಸತ್ಯವಾಗಲು ಇಷ್ಟು ದಿವಸಗಳು ನಿನ್ನ ಮರೆತು ಅಹಂನಿಂದ ಬದುಕಿದೆ. ಇನ್ನು ಮುಂದೆ ಯಾವ ಪ್ರಾಣವಿಲ್ಲದವರು ಹಾಗಾದಲ್ಲಿ ಅಲ್ಲಿಯೇ ನನ್ನನ್ನು ಇಹ ಲೋಕದಿಂದ ಪರಲೋಕಕ್ಕೆ, ನಿನ್ನ ಬಳಿ ತುಕಡಿಗಳನ್ನು ಲೆಕ್ಕಿಸದೇ ಕಳುಹಿಸಿಬಿಡು ನನ್ನ ಪರಮಾತ್ಮನೇ. ನಿನಗೆ ಶರಣು. ಶರಣಾಗು ಉಸಿರುವವರೆಗೆ.

Rekha

25-11-06 ವರದಾನ ಆಧ್ಯಾತ್ಮಿಕತೆಯಿಂದ ಹೊಸ ಬದುಕು, ರೇಖಾಗೆ
at H.N.D.
Time 10-00 p

d is Grate
Bless Me

Buy on → 30-10-06 Monday.

AL → UJJINI

ಉಜ್ಜಯಿನಿ ಸದ್ಧರ್ಮ ಪೀಠದ ಸಾಂಸ್ಕೃತಿಕ ಅಧ್ಯಯನ

ಯಾವುದು ಶಾಶ್ವತವಲ್ಲ ಜೀವನದಲ್ಲಿ, ಎಲ್ಲವೂ ನಶ್ವರ, ಶಿವನಾಮವೊಂದೆ ಶಾಶ್ವತ ನೆನೆಯಿರಲಿ ನಿನಗೆ
ರೇಖಾ ಮೂರ್ತಿ

ಡಾ. ಆರ್. ಎಮ್. ಷಡಕ್ಷರಯ್ಯ

ಇತಿಹಾಸ ಮತ್ತು ಪುರಾತತ್ವ ಪ್ರಾಧ್ಯಾಪಕರು

ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನವಿಜ್ಞಾನ ವಿಭಾಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ -580 003

ರೇಖಾ ಮೂರ್ತಿ
ರೇಖಾ ದೊಡ್ಡಮನಿ

ಪ್ರಕಾಶಕರು :

ಶ್ರೀ ಜಗದ್ಗುರು ಸದ್ಧರ್ಮಸಿಂಹಾಸನ ಜ್ಞಾನಗುರು ವಿದ್ಯಾಪೀಠ,

ಉಜ್ಜಯಿನಿ- ೫೮೩ ೧೩೬

ಬಳ್ಳಾರಿ ಜಿಲ್ಲೆ

God is Great
Bless Me

Ujjayini Saddharma Pithada Samskrutika Adhyayana by Dr. R. M. Shadakshariah, Professor, Dept. of Ancient Indian History & Epigaphy, Karnatak University, Dharwad-3

Publisher :
Shree Jagadguru Saddharma Simhasana
Jnanaguru Vidhya Pitha,
Ujjayini-583 136
Bellary Dist., Karnataka State, India.

ಮೊದಲ ಮುದ್ರಣ: ಅಗಸ್ಟ ೨೦೦೩
(First Edition)

Size : 1/8th

ಬೆಲೆ (Price) : ರೂ. ೭೫/-

ಪ್ರತಿಗಳು : ೧೦೦೦

ಪುಟಗಳು : (xxx) + 260 + 44

ಮುಖಪುಟ ವಿನ್ಯಾಸ : ಯತಿಗಳುಳ್ಳ ಮಕರ ತೋರಣ ಮಧ್ಯ ಶ್ರೀ ಜ. ಮರುಳಸಿದ್ಧ ದೇವಾಲಯದ ಶಿಖರದ ತೈಲಾಭಿಷೇಕ

ಮುದ್ರಣ :

ಆಶಾ ಗ್ರಾಫಿಕ್ಸ್ ಪ್ರೈ.ಲಿ.,
ಕುಮಾರಪಟ್ಟಣಂ-581 123,
ರಾಣೇಬೆನ್ನೂರು ತಾ|, ಹಾವೇರಿ ಜಿ|.
ದೂರವಾಣಿ : (08373) 841471, 840921

॥ ಶ್ರೀಮದ್ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥
ಶ್ರೀ ವಿಮಲ ವೀರಶೈವ ಮಹಾಮತ ಸ್ಥಾಪನಾಚಾರ್ಯ ಶ್ರೀ ವಟಕ್ಷೇತ್ರ ಸಿದ್ಧೇಶ್ವರ ಲಿಂಗಾವಿರ್ಭೂತ ಶ್ರೀ ದಾರುಕಾಚಾರ್ಯ ಪರಂಪರಾಗತ
ಶ್ರೀಮದ್ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು
ಶ್ರೀ ಮರುಳಸಿದ್ಧ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳು
ಉಜ್ಜಯಿನಿ ಪೀಠ - ೫೮೩ ೧೩೬. ಕೂಡ್ಲಿಗಿ ತಾಲೂಕು, ಬಳ್ಳಾರಿ ಜಿಲ್ಲೆ, ಕರ್ನಾಟಕ ರಾಜ್ಯ
Shreemad Oojein Saddharma Simhasanadheeshwara Shree 1008 Jagadguru
Shree Marulasidda Rajadeshikendra Shivacharya Bhagavatpada Mahaswamiji
Oojein Peetha - 583 136. Kudligi Taluk, Bellary District, Karnataka State.
☎: (08391) 68425, 68456, 68465



ಪ್ರೊ. ಆರ್. ಎಂ. ಷಡಕ್ಷರಯ್ಯ, ಪ್ರಾಧ್ಯಾಪಕ
ಕ.ವಿ.ವಿ., ಧಾರವಾಡ
ಲೇಖಕರು, ಉಜ್ಜಯಿನಿ ಸದ್ಧರ್ಮಪೀಠದ
ಸಾಂಸ್ಕೃತಿಕ ಅಧ್ಯಯನ

ನೀವು ಬರೆದ ಶ್ರೀ ಉಜ್ಜಯಿನಿ ಸದ್ಧರ್ಮ ಪೀಠದ ಸಾಂಸ್ಕೃತಿಕ ಅಧ್ಯಯನ ಅರ್ಥಾತ್ ಶ್ರೀ ಜ|| ಮರುಳಸಿದ್ಧೇಶ್ವರ ವೈಭವ ಸಂಶೋಧನ ಗ್ರಂಥ ನೋಡಿ ಆನಂದವಾಯಿತು.

ಶ್ರೀಪೀಠದ ಇತಿಹಾಸದಲ್ಲಿ ಈ ಕಾರ್ಯವನ್ನು ನೀವು ಮಾಡಿರುವುದು ಶ್ರೀ ಜ|| ಪಂಚಪೀಠಾಧೀಶ್ವರರಿಗೆ ಮತ್ತು ಸರ್ವ ಭಕ್ತರಿಗೆ, ಸಾಹಿತಿಗಳಿಗೆ, ಧರ್ಮಾಭಿಮಾನಿಗಳಿಗೆ ಅಮಿತಾನಂದವಾಗಿದೆ. ಈ ಪುಸ್ತಕವನ್ನು ಓದಿದರೆ ಸಾಕ್ಷಾತ್ ಉಜ್ಜಯಿನಿ ಪೀಠವನ್ನು ದರ್ಶನ ಮಾಡಿದಂತಾಗುತ್ತದೆ.

ಯುಗ ಯುಗಾಂತರಗಳಿಂದ ಬಂದ ಪಂಚಪೀಠಗಳಲ್ಲಿ ಒಂದಾದ ಅದರಲ್ಲೂ ಮಧ್ಯಪ್ರದೇಶದ ಉಜ್ಜಯಿನಿಯಿಂದ ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯ ಉಜ್ಜಯಿನಿಗೆ ಸ್ಥಳಾಂತರಗೊಂಡ ಈ ಕ್ಷೇತ್ರವನ್ನು ಕುರಿತು "ಹಂಪಿ ಹೊರ ನೋಡು- ಉಜ್ಜಯಿನಿ ಒಳನೋಡು" ಎಂಬ ಗಾದೆಯಿದ್ದು ಅದರ ಪ್ರಕಾರ ಅಲ್ಲಿರುವ ವೈವಿಧ್ಯಮಯ ವಾಸ್ತು - ಶಿಲ್ಪಕಲೆ ಹಾಗೂ ವಿಭಿನ್ನ ಸಾಂಸ್ಕೃತಿಕ ಚಟುವಟಿಕೆ ಇವುಗಳನ್ನು ಈ ಕೃತಿಯಲ್ಲಿ ವಿವರಿಸಿರುವುದು ಉಜ್ಜಯಿನಿ ನೋಡದ ಭಕ್ತರಿಗೂ ಉಜ್ಜಯಿನಿ ನೋಡಿದಂತಾಗುತ್ತದೆ. ಆ ರೀತಿಯಲ್ಲಿ ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ, ವಾಸ್ತು ಶಿಲ್ಪ ಕಲೆ, ಶ್ರೀಪೀಠದ ಹಬ್ಬ ಉತ್ಸವಗಳ ಪರಂಪರೆ, ಸರ್ಕಾರದ ಮಾನ್ಯತೆಗಳು, ಶ್ರೀ ಸದ್ಧರ್ಮ ಸಿಂಹಾಸನದ ೭೨ ಬಿರುದಾವಳಿಗಳು, ಶ್ರೀಪೀಠದ ಜಗದ್ಗುರುಗಳ ಪಟ್ಟಾವಲ್ಲರಿ, ಐತಿಹ್ಯಗಳು, ಜರ್ಮಲೆಯ ಪಾಳೆಗಾರರ ಚರಿತ್ರೆ, ವಿಭಿನ್ನ ಅರಸು ಮನೆತನಗಳ ಕಾಲದ ಶಾಸನಗಳು, ಜ್ಞಾನಗುರು ವಿದ್ಯಾಪೀಠ, ಪ್ರಸಾದ ನಿಲಯ

ಇದ್ಯಾದಿ.ಈ ರೀತಿಯಾಗಿ ಪ್ರತಿಯೊಂದನ್ನೂ ಲೇಖನಿಯ ಮೂಲಕ ಚಿತ್ರಿಸಿರುವ ಈ ಕೃತಿಯು ಉಜ್ಜಯಿನಿ ಶ್ರೀಪೀಠದ ಪರಂಪರೆಯಲ್ಲಿ ಕನ್ನಡದ ಮೊದಲ ಕೃತಿಯಾಗಿದೆ. ಶ್ರೀ ಪೀಠದ ಕಾರ್ತಿಕ, ಭರತ ಹುಣ್ಣಿಮೆ, ದಸರಾ, ಶ್ರಾವಣ ಮುಂತಾದ ಹಬ್ಬ-ಉತ್ಸವಗಳಲ್ಲಿ ಸ್ಥಳೀಯ ಪ್ರತಿಯೊಂದು ಜನಾಂಗಕ್ಕೂ ಒಂದೊಂದು ಕಾಯಕ ಸೇವೆಯನ್ನು ನೀಡಿರುವುದು ಇಂದಿಗೂ ನಡೆದುಕೊಂಡು ಹೋಗುತ್ತಿರುವುದನ್ನು ಬಹಳ ಸುಂದರವಾಗಿ ರಚಿಸಿರುವುದು ಮಾನವ ಧರ್ಮಕ್ಕೆ ಅತ್ಯಾನಂದವಾಗಿದೆ. ಹೆಚ್ಚಿನ ಅಧ್ಯಯನಕ್ಕೆ ಸಂಶೋಧಕರಿಗೂ ಈ ಕೃತಿಯೊಂದು ಮೂಲ ಆಕರ ಸಾಮಗ್ರಿಯಾಗಿದೆ.

ಕೊಟ್ಟೂರಿನ ರುದ್ರಒಡೆಯರ ಮಠದ ಡಾ. ಆರ್. ಎಂ. ಷಡಕ್ಷರಯ್ಯನವರು ಪೀಠಾಭಿಮಾನಿಗಳಾಗಿ, ಅಪಾರ ಗೌರವ, ಭಕ್ತಿ-ಭಾವಗಳಿಂದ ಈ ಕೃತಿಯನ್ನು ಸಂಶೋಧನಾತ್ಮಕವಾಗಿ ರಚಿಸಿದ್ದಾರೆ. ಇನ್ನು ಶ್ರೀ ಪೀಠದ ಅನೇಕ ಗ್ರಂಥಗಳನ್ನು ಬರೆಯುವ ಶಕ್ತಿಯನ್ನು ಇವರಿಗೆ ಶ್ರೀ ಜಗದ್ಗುರು ಮರುಳಸಿದ್ಧೇಶ್ವರ, ಗೌರೀ ಮಾತಾ ಕರುಣಿಸಲಿ ಎಂದು ಹಾರೈಸುತ್ತಾ, ಈ ಕೃತಿಗೆ ಮುನ್ನುಡಿಯನ್ನು ಬರೆದು ಕೊಟ್ಟ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಂ. ಖಾಜಾಫೀರ್ ಅವರಿಗೂ, ಅನಿಸಿಕೆಗಳನ್ನು ಬರೆದು ಕೊಡಮಾಡಿದ ನಾಡಿನ ಹಿರಿಯ ಕನ್ನಡ ದಿಗ್ಗಜ ಡಾ. ಎಸ್. ಎಂ. ವೃಷಬೇಂದ್ರಸ್ವಾಮಿ ಅವರಿಗೂ, ಹಿರಿಯ ಕನ್ನಡ ವಿದ್ವಾಂಸ ಡಾ. ಬಿ. ವಿ. ಮಲ್ಲಾಪೂರ ಅವರಿಗೂ, ಇತಿಹಾಸ ವಿದ್ವಾಂಸ ಡಾ. ಶ್ರೀನಿವಾಸ ಪಾಡಿಗಾರ ಅವರಿಗೂ, ಶ್ರೀ ಮಹಾಗಣಪತಿ ಕಂಪ್ಯೂಟರ್ಸ್‌ರವರಿಗೂ, ಮುದ್ರಣ ಕಾರ್ಯ ಮಾಡಿದ ಶ್ರೀ ಪ್ರಕಾಶ್‌ರಾವ್ ಹಾಗೂ ದಾನಿಗಳಿಗೂ, 'ಸದ್ಧರ್ಮ ಪ್ರಭಾ' ಸಂಪಾದಕರಾದ ಶ್ರೀ ಅ. ಸಿ. ಹಿರೇಮಠ, ಡಾ. ಷಡಕ್ಷರಯ್ಯ ಅವರ ವಿದ್ಯಾರ್ಥಿಗಳಿಗೂ, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸೇವೆ ಸಲ್ಲಿಸಿದ ಸರ್ವರಿಗೂ ಶ್ರೀ ಜಗದಾದಿ ಜಗದ್ಗುರು ಪಂಚಾಚಾರ್ಯರು, ಶ್ರೀ ಜ|| ಮರುಳಸಿದ್ಧೇಶ್ವರ ಆಯುರಾರೋಗ್ಯೈಶ್ವರ್ಯಾದಿ ಸಕಲ ಭಾಗ್ಯಗಳನ್ನು ಕೊಟ್ಟು ಕಾಪಾಡಲೆಂದು ತುಂಬು ಹೃದಯದಿಂದ ಆಶೀರ್ವದಿಸುತ್ತೇವೆ.

ಮುಕ್ಕಾಂ: ಶ್ರೀಪೀಠ, ಉಜ್ಜಯಿನಿ

ದಿನಾಂಕ: ೩-೬-೨೦೦೩

Sri Shree UJJINI SIDDAPPAJ

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ



ಭಾರತ ದೇಶವು ಅನೇಕ ಜಾತಿ, ಧರ್ಮ, ಭಾಷೆ, ಸಂಸ್ಕೃತಿಗಳ ಬೀಡಾಗಿದ್ದರೂ ಅದು ಶಾಂತಿ, ಸುವ್ಯವಸ್ಥಿತ ಬದುಕನ್ನು ನಡೆಸುತ್ತಿರುವುದು ಸರ್ವರಿಗೂ ಸಂತಸದ ಸಂಗತಿ. ಈ ದೇಶದ ಪ್ರತಿಯೊಂದು ಧರ್ಮಕ್ಕೂ ವೈಯಕ್ತಿಕ ವ್ಯವಸ್ಥಿತ ಸಾಂಸ್ಕೃತಿಕ ಪರಂರೆಗಳಿವೆ. ಅವುಗಳ ಪ್ರಾಚೀನತೆ, ಬೆಳವಣಿಗೆ ಹಾಗೂ ಸಾಂಸ್ಕೃತಿಕ ಅಂಶಗಳ ಕುರಿತು ಸರಿಯಾದ ಸಂಶೋಧನೆಗಳು ವಿಶ್ವವಿದ್ಯಾಲಯದ ಮಟ್ಟದಲ್ಲೂ ನಡೆಯಬೇಕಿದೆ. ವೀರಶೈವ ಧರ್ಮದ ಪಂಚಪೀಠಗಳಲ್ಲಿ ಒಂದೆನಿಸಿದ ಉಜ್ಜಯಿನಿ ಸದ್ಧರ್ಮ ಪೀಠದ ಸಾಂಸ್ಕೃತಿಕ ಪರಂಪರೆ ತನ್ನದೇ ಆದ ಸಾಂಸ್ಕೃತಿಕ ಚೌಕಟ್ಟನ್ನು ರೂಪಿಸಿಕೊಂಡು ಸಮಾಜಕ್ಕೆ ವಿವಿಧ ಕೊಡುಗೆಗಳನ್ನು ನೀಡಿದೆ. ಹೀಗಾಗಿ ಈ ವಿಷಯವನ್ನು ಮುಂದಿಟ್ಟುಕೊಂಡು ಡಾ. ಆರ್. ಎಂ. ಷಡಕ್ಷರಯ್ಯ ಅವರು ಆ ಪೀಠದ ವಿವಿಧ ಮಗ್ಗಲುಗಳನ್ನು ಕರ್ನಾಟಕ ವಿಶ್ವವಿದ್ಯಾಲಯದ ಯು. ಜಿ. ಸಿ. ಅನುದಾನದಡಿಯಲ್ಲಿ, ಕಿರು ಆರ್ಥಿಕ ನೆರವನ್ನು ಪಡೆದು, ಅಧ್ಯಯನ ಮಾಡಿ, ಅದರ ವರದಿಯನ್ನು ವಿಶ್ವವಿದ್ಯಾಲಯಕ್ಕೆ ಈ ಮೊದಲು ಸಲ್ಲಿಸಿದ್ದರು.

ಈ ವರದಿಯನ್ನು ಪುನಃ ಪರಿಷ್ಕರಿಸಿ ಈ ಪೀಠದ ಸಾಂಸ್ಕೃತಿಕ ಅಧ್ಯಯನಕ್ಕೆ ಸಂಬಂಧಿಸಿದ ಸಕಲ ಮೂಲ ಆಕರಗಳೆನಿಸಿದ ಶಾಸನ, ಸಾಹಿತ್ಯ, ವಾಸ್ತುಶಿಲ್ಪ, ಕಲೆ, ಐತಿಹ್ಯ, ಪರಂಪರೆ ಮುಂತಾದ ಪುರಾವೆಗಳನ್ನು ತಮ್ಮ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿ, ಸಂಶೋಧನಾತ್ಮಕವಾಗಿ ಬಳಸಿಕೊಂಡು ಪ್ರಸ್ತುತ ಕೃತಿಯನ್ನು ತಯಾರಿಸಿದ್ದಾರೆ. ಈ ಕೃತಿಯನ್ನು ಉಜ್ಜಯಿನಿಯ ಸದ್ಧರ್ಮ ಪೀಠದ ವತಿಯಿಂದ ಪ್ರಕಟಿಸಲಾಗುತ್ತಿರುವ ವಿಷಯ ತಿಳಿದು ನನಗೆ ಅತೀವ ಸಂತಸವಾಗಿದೆ. ಇದು ಇನ್ನಿತರ ಧಾರ್ಮಿಕ ಸಂಸ್ಥೆಗಳ ಅಧ್ಯಯನಕ್ಕೆ ಮಾದರಿಯಾಗಲೆಂದು ಹಾರೈಸುತ್ತೇನೆ. **ಉಜ್ಜಯಿನಿ ಸದ್ಧರ್ಮ ಪೀಠದ ಸಾಂಸ್ಕೃತಿಕ ಅಧ್ಯಯನ** ಎಂಬ ಈ ಕೃತಿಯನ್ನು ರಚಿಸಿರುವ ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನ ವಿಜ್ಞಾನ

ವಿಭಾಗದ ಪ್ರಾಧ್ಯಾಪಕರಾಗಿರುವ ಡಾ. ಆರ್.ಎಂ. ಷಡಕ್ಷರಯ್ಯ ಅವರು ಅಭಿನಂದನೀಯರು.

ಡಾ. ಎಂ. ಖಾಜಾಪೀರ್
ಕುಲಪತಿಗಳು
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ - 580 003

ದಿ. 30.04.2003

ಅಭಿಪ್ರಾಯ - ಅಭಿನಂದನೆ

ಡಾ॥ ಎಸ್.ಎಮ್.ವೃಷಭೇಂದ್ರಸ್ವಾಮಿ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಭಾರತದ ಪ್ರಾಚೀನ ಧರ್ಮ-ಜನಜೀವನ - ಇತಿಹಾಸಕ್ಕೆ ಮೂಲವಾದುದು ಅದರ ಸಮೃದ್ಧ ಪರಂಪರೆ. ಭಾರತೀಯ ಸಂಸ್ಕೃತಿ ಅತ್ಯಂತ ಪುರಾತನವಾದುದು ಅಲ್ಲದೇ ಜೀವಂತವಾಗಿರುವ ವಿಶ್ವದ ಸಂಸ್ಕೃತಿಗಳಲ್ಲಿ ಅತ್ಯಂತ ಮುಖ್ಯವಾದುದು. ಈ ಸಂಸ್ಕೃತಿಯ ಅಧ್ಯಯನ ಪಾಶ್ಚಾತ್ಯ ಹಾಗೂ ಪೌರಾತ್ಯ ವಿದ್ವಾಂಸರಿಂದ ನಡೆದಿದೆ. ಅಲ್ಲಿ ಖಚಿತತೆಗಿಂತ, ಪರಂಪರೆಯ ನಂಬಿಕೆಗಳ ಐಹಿತ್ಯಗಳನ್ನು ಆಧರಿಸಿದ ದಾಖಲೆಯೇ ಮುಖ್ಯವಾದುದು. ವಿಶಾಲ ಭಾರತದ ಸಮಗ್ರ ಸಂಸ್ಕೃತಿಯ ಸವಿಸ್ತಾರವಾದ ಅಧ್ಯಯನ ಇನ್ನೂ ಆಗಬೇಕಾಗಿರುವ ಕಾರ್ಯ. ಅನೇಕ ಧರ್ಮಗಳ, ಹಲವಾರು ರಾಜವಂಶಗಳ, ನೂರಾರು ಐತಿಹಾಸಿಕ ಸಂಸ್ಕೃತಿ ಉಪ-ಸಂಸ್ಕೃತಿಗಳ ಸಮೀಕೃತ ಸಂಶೋಧನೆ - ಅಧ್ಯಯನ - ದಾಖಲೆಗೆ, ಪ್ರೇರಕ-ಪೋಷಕವಾಗುವ ಕಿರು ಅಧ್ಯಯನ-ಸಂಶೋಧನೆಗಳು ಈಗೀಗ ವ್ಯಾಪಕವಾಗಿ ನಡೆಯುತ್ತಿರುವುದು ಶುಭಲಕ್ಷಣ. ಸಂಸ್ಕೃತಿಯೆಂಬುದು ಜೀವಂತ ಪ್ರವಾಹ, ನಿತ್ಯ ಪರಿವರ್ತನಶೀಲತೆ ಅದರ ಸಹಜ ಲಕ್ಷಣ. ಪಳೆಯುಳಿಕೆ- ಪರಂಪರೆ-ಉತ್ಖನನ ಹಾಗೂ ಐತಿಹ್ಯ ಮತ್ತು ಪುರಾಣಗಳ ಸಮೀಕೃತ ಮೊತ್ತವೇ ಸಂಸ್ಕೃತಿಯ ಜೀವಾಳ. ಈ ಹಿನ್ನೆಲೆಯಲ್ಲಿ ಭಾರತದ ಅತ್ಯಂತ ಪ್ರಾಚೀನ ಶೈವಧರ್ಮದ ಇತಿಹಾಸ- ಬೌದ್ಧ- ಜೈನಧರ್ಮಗಳ ಇತಿಹಾಸದಂತೆ ನಿಷ್ಠವಾಗಿ ದೊರಕುತ್ತಿಲ್ಲ. ಶೈವಧರ್ಮದ ವಿವಿಧ ಶಾಖೆಗಳಲ್ಲಿ ಅತ್ಯಂತ ಪ್ರಾಚೀನವಾದ ವೀರಶೈವಧರ್ಮ - ಪುರಾತನ ಶೈವದ ಸರ್ವ ಸಾರಸಂಗ್ರಹದ ಪರಿಷ್ಕೃತ ರೂಪವಾಗಿದೆ. ಈ ದಿಸೆಯಲ್ಲಿ ವೀರಶೈವಧರ್ಮದ ಜೀವಕೇಂದ್ರಗಳಾದ ಪಂಚಗುರುಪೀಠಗಳು ಬೆಳೆದು ಬಂದ ಬಗೆ, ನೀಡಿದ ಸಾಂಸ್ಕೃತಿಕ ಕೊಡುಗೆಗಳ ಸಂಶೋಧನೆ ಅಧ್ಯಯನಕ್ಕೆ ಒಂದು ಐತಿಹಾಸಿಕ ಮಹತ್ವವಿದೆ. ಕರ್ನಾಟಕ ವಿಶ್ವವಿದ್ಯಾಲಯದ, ಭಾರತೀಯ ಇತಿಹಾಸ ಮತ್ತು ಶಾಸನವಿಜ್ಞಾನ ವಿಭಾಗದ ಪ್ರಾಧ್ಯಾಪಕರಾಗಿರುವ ಡಾ.ರು.ಮ.ಷಡಕ್ಷರಯ್ಯ ಅವರು ಇತಿಹಾಸ ಸಂಶೋಧನೆ, ಪುರಾತತ್ವ ಅಧ್ಯಯನ, ಶಿಲ್ಪ-ವಾಸ್ತುಶಿಲ್ಪ ಶಾಸ್ತ್ರದ ಅಭ್ಯಾಸ ಹಾಗೂ ಇತಿಹಾಸ ಬೋಧನೆಯ ಸಮಗ್ರ ಅನುಭವ ಹಾಗೂ ಕೃತಿರಚನೆಗಳಿಂದ ಪ್ರಸಿಸದ್ಧಿ ಪಡೆದವರು. ರೋಮ್, ಗ್ರೀಸ್, ಆಸ್ಟ್ರಿಯಾ ದೇಶಗಳಲ್ಲಿ ಪುರಾತತ್ವ ಸಂಶೋಧನೆಗಳು ವಿಶೇಷ ಅನುಭವ ಹಾಗೂ ನಿತ್ಯ ಕ್ರಿಯಾಶೀಲ ಪ್ರಾಧ್ಯಾಪಕರಾಗಿರುವ ಇವರು ಇದೀಗ ಅತ್ಯಂತ ಶ್ರಮವಹಿಸಿ ಕ್ಷೇತ್ರಕಾರ್ಯ ಕೈಗೊಂಡು, ವೀರಶೈವ ಪಂಚ ಪೀಠಗಳಲ್ಲಿ ಒಂದಾದ

ಉಜ್ಜಯಿನಿ ಸದ್ಧರ್ಮಪೀಠದ ''ಸಾಂಸ್ಕೃತಿಕ ಅಧ್ಯಯನ''ವನ್ನು ಸಿದ್ಧಗೊಳಿಸಿರುವರು. ಪೂಜ್ಯ ಜಗದ್ಗುರು ಶ್ರೀ ಮರುಳಸಿದ್ಧದೇಶೀಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಉದಾರ ಹೃದಯದಿಂದ ಈ **ಸಂಸ್ಕೃತಿ ಸಂಶೋಧನೆ**ಯ ಕೃತಿಯನ್ನು ಮುದ್ರಿಸಿ ಪ್ರಕಟಿಸಲು ಮನಸ್ಸು ಮಾಡಿರುವುದು ಅತ್ಯಂತ ಅಭಿಮಾನದ ಸಂಗತಿ. ಸದ್ಧರ್ಮಪೀಠ ಸದ್ಧರ್ಮ ಪೀಠದ ಸಂಸ್ಕೃತಿಗೆ ಸಂಬಂಧಿಸಿದ ನೂರಾರು 'ಭಾವಚಿತ್ರ'ಗಳು, ಐತಿಹಾಸಿಕ ದಾಖಲೆಗಳು ಹಾಗೂ ಜನಸಮುದಾಯದಲ್ಲಿ ಪ್ರಚಲಿತವಾಗಿರುವ 'ಐತಿಹ್ಯ'ಗಳನ್ನು ಒಳಗೊಂಡ ಈ ಸಮಗ್ರ ಸಂಸ್ಕೃತಿ ಸಂಶೋಧನ ಕೃತಿ - ಇತರ **ಧರ್ಮಪೀಠ**ಗಳ ಅಧ್ಯಯನಕ್ಕೆ ಪ್ರೇರಣೆ ನೀಡಲಿ, ಮಾದರಿಯನ್ನು ಒದಗಿಸಲಿ ಎಂದು ಹಾರೈಸುತ್ತೇನೆ. ಲೇಖಕರನ್ನೂ, ಪ್ರಕಾಶಕರನ್ನು ಅಭಿಮಾನತುಂಬಿ ಅಭಿನಂದಿಸುತ್ತೇನೆ.

ಉಜ್ಜಯಿನಿ ಸದ್ಧರ್ಮ ಪೀಠದ ಸಾಂಸ್ಕೃತಿಕ ಅಧ್ಯಯನ ಇಪ್ಪತ್ತೊಂದು ಅಧ್ಯಾಯಗಳನ್ನು ಒಳಗೊಂಡಿದೆ. ನೂರಾರು 'ಭಾವಚಿತ್ರ' - ಸಂಬಂಧಿಸಿದ ಶಾಸನ, ವಾಸ್ತುಶಿಲ್ಪ ಹಾಗೂ ಸಾಂಸ್ಕೃತಿಕ ಪುರಾವೆಗಳ ಎಲ್ಲ ದಾಖಲೆಗಳನ್ನು ಈ ಅಧ್ಯಯನದಲ್ಲಿ ಒಳಗೊಳಿಸಲಾಗಿದೆ. ಹಾಗೂ ಅವುಗಳ ಆಧಾರದಿಂದ ಈ 'ಸಾಂಸ್ಕೃತಿಕ ಅಧ್ಯಯನ'ಕ್ಕೆ ವ್ಯಾಪಕತೆ, ನಿರ್ದಿಷ್ಟತೆ ಹಾಗೂ ಸಮಿಚೀನತೆ ಒದಗಿ ಬಂದಿದೆ.

''ಪೀಠಿಕೆ ಮತ್ತು ವೀರಶೈವ ಪರಂಪರೆ ಮತ್ತು ಆಚರಣೆ'' ಎಂಬ ಅಧ್ಯಾಯಗಳಲ್ಲಿ 'ಸದ್ಧರ್ಮಪೀಠ'ದ ಹಿಂದು-ಮುಂದುಗಳ ಸಮೀಕ್ಷೆ ಮಾಡಲಾಗಿದೆ. ಮುಖ್ಯವಾಗಿ ಆ ಪೀಠದ ಬಗೆಗೆ ದೊರೆತ ಎಲ್ಲ ಹಿರಿ-ಕಿರಿಯ ಶಾಸನಗಳನ್ನು ಪರಿವೀಕ್ಷಿಸಿ ಆ ಪೀಠದ 'ಇತಿಹಾಸ'ವನ್ನು ಲಿಖಿಸಲಾಗಿದೆ. ಇಲ್ಲಿ ಕೊಡಮಾಡಿರುವ ಜಾತವೇದ ಮುನಿಗಳ ಸಾರಂಗಮಠ ಪರಂಪರೆಯನ್ನು ಕುರಿತ ವಿಚಾರಗಳು ಮಹತ್ವವಾದವುಗಳಾದರೂ, ಇನ್ನೂ ಹೆಚ್ಚಿನ ಸಂಶೋಧನೆಯನ್ನು ಆಹ್ವಾನಿಸುತ್ತವೆ. ಪೀಠದ 'ಪಟ್ಟವಲ್ಲರಿ' ಯನ್ನಾಧರಿಸಿ, ಈ ಸದ್ಧರ್ಮ ಸಿಂಹಾಸನವನ್ನೇರಿದ 'ಜಗದ್ಗುರುಗಳ ಪರಂಪರೆ', ಯನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಅಲ್ಲಲ್ಲಿ 'ಕಳಚಿರುವ ಕೊಂಡಿ'ಗಳು, 'ಅಸ್ಪಷ್ಟವಾಗಿರುವ ದಾಖಲೆಗಳು' ಹಾಗೂ 'ಜೀವಂತವಾಗಿರುವ ಪರಂಪರೆ' ಯ ಆಧಾರದಿಂದ 'ಗುರುಪರಂಪರೆ' ಯ ಇತಿಹಾಸಕ್ಕೆ ಸ್ಪಷ್ಟ ರೂಪ ಕೊಡುವ ಸಾರ್ಥಕ ಪ್ರಯತ್ನ ಮಾಡಲಾಗಿದೆ. ಅಂತೆಯೇ ನಾಡಿನಾದ್ಯಂತ ಹಬ್ಬಿರುವ ಶಾಖಾಮಠಗಳ ಸಮೀಕ್ಷೆ ಹಾಗೂ ಗುರುಗಳ ಗದ್ದುಗೆಗಳ ಪರಿಶೀಲನೆ ಇಲ್ಲಿನ ವಿಶೇಷ ಕೊಡುಗೆ.

ಎರಡನೆಯದಾಗಿ, ಉಜ್ಜಯಿನಿ ಸದ್ಧರ್ಮ ಪೀಠದ ಕೇಂದ್ರಬಿಂದುವಾದ 'ಶ್ರೀಮರುಳಸಿದ್ಧೇಶ್ವರ ದೇವಸ್ಥಾನ ಹಾಗೂ ಆ ಸಮುಚ್ಚಯ'ದ ಪ್ರಾಚೀನ ಕಟ್ಟಡಗಳ

OM NAMA SHIVAYA

ಮತ್ತು ಒಂಬತ್ತು ಪಾದಗಟ್ಟೆಗಳ ವಾಸ್ತುಶಿಲ್ಪ ಹಾಗೂ ರಚನೆಗಳ' ಸವಿಸ್ತಾರವಾದ ಅಧ್ಯಯನ ಈ ಕೃತಿಯ ಮಹತ್ವದ ವಿಷಯ. ಸಂಶೋಧಕ ಡಾ॥ ಷಡಕ್ಷರಯ್ಯನವರ 'ಶಾಸ್ತ್ರಪಾಂಡಿತ್ಯ' ಹಾಗೂ 'ವಿಶ್ಲೇಷಣೆಯ ಚತುರತೆ' ಯ ಪ್ರತೀಕ ಈ ಭಾಗ. ಇದು ವಿಶೇಷ ಅಭಿನಂದನೀಯ ಕಾರ್ಯ.

ಮೂರನೆಯದಾಗಿ, ಶ್ರೀಪೀಠದ 'ಸಾಂಸ್ಕೃತಿಕ ಅಧ್ಯಯನ' ದಲ್ಲಿ ಪೂಜಾಪರಿಕರಗಳು, ಹಬ್ಬ ಹರಿದಿನ, ಉತ್ಸವ, ಜಾತ್ರೆ, ವ್ರತಾಚರಣೆ ಮುಂತಾದವುಗಳ ವಿಸ್ತಾರ ವಿವೇಚನೆ ಇದೆ. ಇದು ಅತ್ಯಂತ ಮಹತ್ವದ ಹಾಗೂ ವೈಶಿಷ್ಟ್ಯಪೂರ್ಣ ದಾಖಲೆ. ಇಲ್ಲಿ ಶ್ರೀಪೀಠ ಹೇಗೆ ಸರ್ವಜನಸಮುದಾಯದ ಆದರಣೆಗೆ-ಮುಖ್ಯವಾಗಿ ಹರಿಜನ-ಗಿರಿಜನರ ಭಾಗವಹಿಸುವಿಕೆಗೆ ದಾರಿಮಾಡಿಕೊಟ್ಟು, ಸಮಾಜದಲ್ಲಿ ಸಮನ್ವಯವನ್ನು ಹೇಗೆ ಸಾಧಿಸುತ್ತಿದೆ ಎಂಬ ಅಂಶದ ವಿವೇಚನೆ ಅರ್ಥಪೂರ್ಣವಾಗಿದೆ. ಇಲ್ಲಿದೆ 'ಜನತೆಯ ಸಂಸ್ಕೃತಿ' ಮತ್ತು 'ಧರ್ಮಪೀಠಗಳ ಕರ್ತವ್ಯದ ವಿವೇಚನೆ'.

ಉಜ್ಜಯಿನಿಯ ಸದ್ಧರ್ಮಪೀಠ 'ಜನತೆಯ ನ್ಯಾಯಾಲಯ' ವಾಗಿ ಬ್ರಿಟಿಷ್ ಸರಕಾರದಿಂದಲೂ ಮನ್ನಣೆ ಪಡೆದಿದ್ದಿತು. ಧಾರ್ಮಿಕ ಹಾಗೂ ಸಾಮಾಜಿಕ ಸಂಘರ್ಷಗಳಲ್ಲಿ ಪೂಜ್ಯ ಜಗದ್ಗುರುಗಳು 'ನ್ಯಾಯಾಧೀಶ' ರೆಂಬ ಗೌರವ ಸ್ಥಾನವನ್ನು ಪಡೆದಿದ್ದುದು ಅತ್ಯಂತ ವಿಶೇಷ ಸಂಗತಿ. ಆ ಪೀಠದ ಸೇವೆಯಲ್ಲಿ ನಿರತರಾಗಿರುವ ವಿವಿಧ ಆಯಗಾರರು (ಅವರು ಎಲ್ಲ ಧರ್ಮ-ಜಾತಿ -ಪಂಗಡಗಳಿಗೆ ಸೇರಿದವರಾಗಿರುತ್ತಿದ್ದರು) ಜಾತ್ರೆ, ಉತ್ಸವ, ಕಾರ್ತೀಕಗಳಲ್ಲಿ ವಿವಿಧ ಕರ್ತವ್ಯಗಳನ್ನು ಜನಸಮುದಾಯವೇ ಸ್ವ ಇಚ್ಛೆಯಿಂದ ಹಂಚಿಕೊಂಡು ನಿರ್ವಹಿಸುತ್ತಿರುವ ವಿಷಯ ಮುಂತಾದ ಸಾಂಸ್ಕೃತಿಕ ಸಂಗತಿಗಳ ದಾಖಲೆ ಇಲ್ಲಿನ ನಾಲ್ಕನೆಯ ಮುಖ್ಯ ಸಂಗತಿ.

ಐದನೆಯದಾಗಿ, ಉಜ್ಜಯಿನಿ ಸದ್ಧರ್ಮಪೀಠದ ಧಾರ್ಮಿಕ ಹಾಗೂ ಸಾರ್ವಜನಿಕ ಶಿಕ್ಷಣ ಸೇವೆ, ಪ್ರಸಾದ ನಿಲಯಗಳ ವ್ಯವಸ್ಥೆ, ಜಾತ್ರೆ-ಉತ್ಸವಗಳಲ್ಲಿ ಸಭೆ-ಸಮಾರಂಭ, ವಿಚಾರ ಸಂಕಿರಣ, ಶಿವಕೀರ್ತನ ಹಾಗೂ ಜಾನಪದ ಕಲಾವಿದರ ಸೇವೆ ಮುಂತಾದ ಸಂಗತಿಗಳ ಸಮೀಕ್ಷೆ, 'ಜಾನಪದೀಯ ಅಧ್ಯಯನ'ಕ್ಕೆ ದಾರಿ ತೋರುತ್ತದೆ. ಈ ಬಗೆಗೆ ಲೇಖಕರು ನಡೆಸಿದ ಕ್ಷೇತ್ರಕಾರ್ಯ - ಒಟ್ಟೈಯಿಸಿದ ಮಾಹಿತಿ - ಅವುಗಳ ವಿಶ್ಲೇಷಣೆ ಅರ್ಥಪೂರ್ಣವಾಗಿದೆ; ಸಾರ್ಥಕವಾಗಿದೆ.

ಒಟ್ಟಿನಲ್ಲಿ, ಡಾ॥ ಆರ್.ಎಂ.ಷಡಕ್ಷರಯ್ಯನವರ ಸಂಶೋಧನೆ, ಮಾಹಿತಿ ಸಂಗ್ರಹ, ಶಾಸನ-ಶಿಲ್ಪಗಳ ಪರಿವೀಕ್ಷಣೆ, ಧರ್ಮಪೀಠದ ಸಮಗ್ರ ಪರಂಪರೆಯ ಪರಿಶೀಲನೆ, ಮುಖ್ಯವಾಗಿ ಶ್ರೀ ಮಠದ ಪರಮಭಕ್ತರಾದ 'ಜಕ್ಕಲಿ ಪಾಳೆಯಗಾರರನ್ನು

ಕುರಿತ ಸಮೀಚೀನ ಮಾಹಿತಿ ಸಂಗ್ರಹ ಇಲ್ಲಿನ ಅತ್ಯಂತ ಗಮನಾರ್ಹ ಶೋಧನೆಗಳಾಗಿವೆ. ಸಂಶೋಧನೆಯ ಶಿಸ್ತನ್ನು ಮೈಗೂಡಿಸಿಕೊಂಡಿರುವ ಲೇಖಕರು ಅತ್ಯಂತ ಶ್ರಮವಹಿಸಿ, ಶ್ರೀಪೀಠದ ಮೇಲಿನ ಭಕ್ತಿ-ನಿಷ್ಠೆಯಿಂದ ಈ 'ಸಾಂಸ್ಕೃತಿಕ ಅಧ್ಯಯನ'ವನ್ನು ಕೈಗೊಂಡಿರುವುದು ಹೆಮ್ಮೆಯ ವಿಷಯ. ನಡೆವರೆಡಹದೆ ಕುಳಿತರೆಡಹುವರೆ? ಕುಂದು-ಕೊರತೆಗಳು ಇಂಥ ಸಂಶೋಧನ ಕೃತಿಗಳಲ್ಲಿ ಅನಿವಾರ್ಯ. ಅದೇ ಮುಂದಿನ ಸಂಶೋಧನೆಗೆ ದಾರಿ ತೋರುತ್ತದೆ.

ಭಾರತೀಯ ಚಿರಂತನ ಸಂಸ್ಕೃತಿ ಪರಂಪರೆಗೆ ವೀರಶೈವ ಪಂಚಾಚಾರ್ಯ ಪೀಠಗಳ ಕೊಡುಗೆ ಅಪಾರವಾದುದು. ಭಾರತೀಯ ಧರ್ಮಪರಂಪರೆಗೆ ವೀರಶೈವ-ಧರ್ಮ- ತತ್ತ್ವ-ಆಚರಣೆ- ಸಿದ್ಧಾಂತಗಳ ಕೊಡುಗೆಯೂ ಅತ್ಯಂತ ಗಮನಾರ್ಹವಾದುದು. ಇಂದಿನ ಸಾಂಸ್ಕೃತಿಕ ಕೇಂದ್ರವಾದ ಉಜ್ಜಯಿನಿ ಸದ್ಧರ್ಮ ಪೀಠದ, ಇಂದಿನ ಪೂಜ್ಯ ಪೀಠಾಧಿಪತಿಗಳ ದೂರದೃಷ್ಟಿ, ಸಮನ್ವಯ ಚಿಂತನೆ ಹಾಗೂ ಮಹತ್ವವಾದುದನ್ನು ಸಾಧಿಸಬೇಕೆಂಬ ಸದಾಶಯದ ಜೀವಂತ ಪ್ರತೀಕ ಈ ಸಂಸ್ಕೃತಿ ಸಂಶೋಧನ ಗ್ರಂಥ. ಡಾ॥ ಆರ್.ಎಮ್.ಷಡಕ್ಷರಯ್ಯನವರ 'ಸಂಶೋಧನೆ' ಪಂಡಿತ-ಪಾಮರರಿಗೂ ಪ್ರಿಯವಾಗುತ್ತದೆಂದು ನಂಬಿ, ಅವರನ್ನು ಮತ್ತೊಮ್ಮೆ ಅಭಿನಂದಿಸುವೆ, ಅಭಿವಂದಿಸುವೆ.

ಡಾ॥ ಎಸ್.ಎಮ್.ವೃಷಭೇಂದ್ರಸ್ವಾಮಿ
ಮುಖ್ಯಸ್ಥರು(ನಿವೃತ್ತ), ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಅನಿಸಿಕೆ...

ಒಂದು ಪೀಠದ ಚರಿತ್ರೆಯನ್ನು ಅದರ ಸಮಗ್ರ ಸಾಂಸ್ಕೃತಿಕ ಆಯಾಮಗಳೊಂದಿಗೆ ಸಾಧಾರ ವಿವರಿಸುವ ಗ್ರಂಥಗಳ ಬರಗಾಲ ನಮಗೆ ಸಾಕಷ್ಟಿದೆ. ಆ ಕೊರತೆಯನ್ನು ಕೆಲಮಟ್ಟಿಗಾದರೂ ತುಂಬಿಕೊಡುವ ಡಾ. ಷಡಕ್ಷರಯ್ಯ ಅವರ ಪ್ರಮಾಣಿಕ ಪ್ರಯತ್ನದ ಫಲವೇ ಪ್ರಸ್ತುತ ಕೃತಿಯೆಂದು ನನ್ನ ಅನಿಸಿಕೆ.

ಡಾ. ಷಡಕ್ಷರಯ್ಯ ಅವರು ಉಜ್ಜಯಿನಿ ಪೀಠದ ಬಗ್ಗೆ ಅಪಾರ ಭಕ್ತಿ-ಗೌರವಗಳನ್ನು ಮೊದಲಿನಿಂದಲೂ ಬೆಳೆಸಿಕೊಂಡು ಬಂದವರು. ಇನ್ನೂ ಉಳಿಸಿಕೊಂಡು ಇರುವವರು. ಶ್ರೀಪೀಠವನ್ನು ಕುರಿತು, ಅದರ ಭೌಗೋಳಿಕ ಪರಿಸರಾದಿಗಳನ್ನು ಕುರಿತು ಅದರ ಚರಿತ್ರೆ ಹಾಗೂ ಸಂಸ್ಕೃತಿಗಳನ್ನು ಕುರಿತು ಬಂದಿರುವ ಹಲವಾರು ಗ್ರಂಥಗಳು ಮತ್ತು ಲೇಖನಗಳು ಮೂಲತಃ ಸಂಶೋಧನ ಪ್ರವೃತ್ತಿಯ ಡಾ. ಷಡಕ್ಷರಯ್ಯ ಅವರಿಗೆ ತೃಪ್ತಿ ನೀಡಿರಲಿಲ್ಲ. ಅದಕ್ಕೆ ಮುಖ್ಯ ಕಾರಣ ಅವುಗಳಲ್ಲಿಯ ಕೆಲವಾರು ಅಂಶಗಳು ಗಟ್ಟಿ ಆಧಾರಗಳ ಮೇಲೆ ನಿಂತವುಗಳಲ್ಲವೆಂಬ ಅಭಿಪ್ರಾಯ. ಅದು ಅವರ ಮನಸ್ಸಿನಲ್ಲಿ ಸದಾ ಕಟೆಯುತ್ತಿತ್ತು. ಶ್ರೀ ಪೀಠದ ಸಾಧಾರ ಚರಿತ್ರೆ ಹಾಗೂ ಮರುಳಸಿದ್ಧ ದೇವಸ್ಥಾನದ ವಾಸ್ತುಶಿಲ್ಪ-ಇತ್ಯಾದಿಗಳ ಬಗ್ಗೆ ಎಲ್ಲ ವಿವರಗಳನ್ನೊಳಗೊಂಡ ಕೃತಿಯೊಂದನ್ನು ಅವುಗಳ ಸಾಂಸ್ಕೃತಿಕ ಹಿನ್ನೆಲೆಯೊಂದಿಗೆ ಸಾಧಾರ ಪ್ರತಿಪಾದಿಸುವ ಬಯಕೆ ಸದಾ ಅವರಲ್ಲಿ ಮಿಡಿಯುತ್ತಿತ್ತೆಂದು ತೋರುತ್ತದೆ. ಆ ದಿಶೆಯಲ್ಲಿ ಕಾರ್ಯಪ್ರವೃತ್ತರಾದ ಅವರು, ಆಕರಗಳ ಸಂಗ್ರಹದಲ್ಲಿ ತಮ್ಮನ್ನು ತಾವು ಬಹಳ ಗಾಢವಾಗಿ ತೊಡಗಿಸಿಕೊಂಡರು. ಆ ಸಂದರ್ಭದಲ್ಲಿ ಅವರು ವಹಿಸಿದ ಪರಿಶ್ರಮ, ಕ್ಷೇತ್ರಕಾರ್ಯದ ಬಗ್ಗೆ ತೋರಿದ ಆಸಕ್ತಿ, ಐತಿಹ್ಯಗಳನ್ನು ವೈಜ್ಞಾನಿಕವಾಗಿ ಪರಿಶೀಲಿಸುವಾಗ ತೆಗೆದುಕೊಂಡ ಎಚ್ಚರ ಇತ್ಯಾದಿಗಳನ್ನು ಪ್ರಸ್ತುತ ಕೃತಿಯ ಪುಟಪುಟಗಳಲ್ಲಿಯೂ ಕಾಣಬಹುದಾಗಿದೆ.

ಡಾ. ಷಡಕ್ಷರಯ್ಯನವರಲ್ಲಿ ನಾನು ಗುರುತಿಸಿದ ಇನ್ನೊಂದು ಮಹತ್ವದ ಅಂಶವೆಂದರೆ ಆ ಮೊದಲು ಹೇಳಿದ ಎಲ್ಲವುಗಳನ್ನು ಸಾರಾಸಗಟಾಗಿ ಸ್ವೀಕರಿಸದೆ ಅವುಗಳ ಸತ್ಯತೆಯನ್ನು ಅಚಾಲ್ಯ ಆಧಾರಗಳ ಒರೆಗಲ್ಲಿಗೆ ತಿಕ್ಕಿ ಒಪ್ಪಿತವಾದವುಗಳನ್ನು ಮಾತ್ರ ಸ್ವೀಕರಿಸಿ ಸರಿಯೆನಿಸದವುಗಳನ್ನು ನಿರಾಕರಿಸಿರುವುದು. ಉದಾಹರಣೆಗಾಗಿ ಒಂದೆರಡನ್ನು ಇಲ್ಲಿ ನೋಡಬಹುದು :

'ಶಿವತತ್ವ ರತ್ನಾಕರ' ಕೃತಿಯಲ್ಲಿ ಕೆಳದಿಯ ಸುಪ್ರಸಿದ್ಧ ರಾಣಿ ವೀರಮ್ಮಾಜಿ ಸಮಾಧಿಯು ಉಜ್ಜಯಿನಿಯಲ್ಲಿದ್ದ ಬಗ್ಗೆ ಸೂಚನೆಯಿದೆಯಂತೆ. ಅದರ ಜಾಡು ಹಿಡಿದು ವೀರಮ್ಮಾಜಿಯ ಸಮಾಧಿಯನ್ನು ಹುಡುಕಲು ಕೆಲವರು ಪ್ರಯತ್ನಿಸಿ

ಉಜ್ಜಯಿನಿಯ ನಂದಿ ಸ್ತಂಭದ ಮುಂದಿರುವ ಶಾಸನವನ್ನು ಆಧರಿಸಿ ಅದನ್ನೇ ರಾಣಿಯ ಸಮಾಧಿಯೆಂದು ಹೇಳಿದರು. ಅದು ಪ್ರಚಾರಕ್ಕೂ ಬಂದಿತು. ಡಾ. ಷಡಕ್ಷರಯ್ಯ ಅವರಿಗೆ ಆ ಬಗ್ಗೆ ಸಂಶಯ ಬಂದು ಆ ಶಾಸನವನ್ನು ಓದಿ ಅದು ವೀರಮ್ಮಾಜಿಯ ಸಮಾಧಿಯಾಗಿರದೆ ಉಜ್ಜಯಿನಿಯ ಪೂಜಾರಿಯೊಬ್ಬನ ಹೆಂಡತಿಯ ಜೀವಂತ ಸಮಾಧಿಯೆಂಬುದನ್ನು ಸ್ಪಷ್ಟಪಡಿಸಿದರು.

ಅದೇ ರೀತಿ ಮರುಳಸಿದ್ಧ ದೇವಾಲಯದ ಜಟಾಧಾರಿ ಯತಿಯ ಮೂರ್ತಿಯು ಬಸವಣ್ಣನದೆಂದು ನಂಬಲಾಗಿತ್ತು. ಆ ಬಗ್ಗೆ ಲೇಖನವೊಂದು ಬಸವ ಜಯಂತಿ ಪ್ರಜಾವಾಣಿ ಪತ್ರಿಕೆಯಲ್ಲಿ (೨೫-೪-೧೯೮೨) ಪ್ರಕಟವೂ ಆಗಿತ್ತು. ಡಾ. ಷಡಕ್ಷರಯ್ಯ ಅವರು ಆ ಮೂರ್ತಿಯನ್ನು ಶಿಲ್ಪಶಾಸ್ತ್ರ ದೃಷ್ಟಿಯಿಂದ ಪರಿಶೀಲಿಸಿ ಅದು ಬಸವಣ್ಣನವರ ಶಿಲ್ಪವಲ್ಲವೆಂಬುದನ್ನು ಸಾಧಾರ ಪ್ರತಿಪಾದಿಸುವ ಲೇಖನವೊಂದನ್ನು ಗದಗ ನಗರದಿಂದ ಹೊರಡುವ 'ಲಿಂಗನುಡಿ' ಪತ್ರಿಕೆಯಲ್ಲಿ ಪ್ರಕಟಿಸಿದರು.

ಪ್ರಸ್ತುತ ಕೃತಿಯಲ್ಲಿ ನನ್ನ ವಿಚಾರದ ಪ್ರಕಾರ ಅತ್ಯಂತ ಗಟ್ಟಿಯಾದ ಭಾಗವೆಂದರೆ ಶಿಲಾಶಾಸನಗಳನ್ನು ಕುರಿತ ಅಧ್ಯಾಯ. ಉಜ್ಜಯಿನಿ ಗ್ರಾಮ, ಶ್ರೀಪೀಠ ಹಾಗೂ ಶ್ರೀಪೀಠದ ಜಗದ್ಗುರುಗಳ ಉಲ್ಲೇಖ ಬರುವ ಶಾಸನಗಳನ್ನು ಈ ಅಧ್ಯಾಯದಲ್ಲಿ ಒಂದೆಡೆ ತಂದು ಅವುಗಳನ್ನು ಪರಾಮರ್ಶೆಗೆ ಒಳಪಡಿಸಿದ್ದಾರೆ. ಮರುಳಸಿದ್ಧಸ್ವಾಮಿಯ ಉಲ್ಲೇಖ ಬರುವುದು ೧೭ನೇ ಶತಮಾನದಿಂದ ಎಂಬ ಅವರ ಹೇಳಿಕೆ ಗಮನಿಸುವಂತಹದಾಗಿದೆ.

ಡಾ. ಷಡಕ್ಷರಯ್ಯ ಅವರು ಮರುಳಸಿದ್ಧನ ಚರಿತ್ರೆ ಮತ್ತು ದೇವಾಲಯದ ವಾಸ್ತುಶಿಲ್ಪವನ್ನು ಕುರಿತಂತೆ ಬಂದಿರುವ ಹಲವಾರು ಕೃತಿಗಳನ್ನು ಹಾಗೂ ಲೇಖನಗಳನ್ನು ಪರಿಶೀಲಿಸಿ ತಮ್ಮ ನಿಲುವನ್ನು ತಿಳಿಸಿದ್ದಾರೆ. ಆ ಕೃತಿ ಮತ್ತು ಲೇಖನಗಳೆಲ್ಲಾ ಉಜ್ಜಯಿನಿ ಪೀಠದ ಸಮಗ್ರ ಸಾಂಸ್ಕೃತಿಕ ಚರಿತ್ರೆಯ ಕೆಲವು ಮಗ್ಗಲುಗಳನ್ನು ಮಾತ್ರ ಪರಿಚಯಿಸುತ್ತವೆಂಬ ಅಭಿಪ್ರಾಯ ಅವರದು. ಆದುದರಿಂದ ಶ್ರೀಪೀಠದಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ನಡೆಯುವ ವಿವಿಧ ಬಗೆಯ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳನ್ನು ಸವಿವರ ಎತ್ತಿ ತೋರಿಸಿರುವುದು ಗಮನಿಸಬೇಕಾದ ಅಂಶ.

ಡಾ. ಷಡಕ್ಷರಯ್ಯ ಅವರು ಪ್ರಸ್ತುತ ಕೃತಿಯಲ್ಲಿ ಶ್ರೀಪೀಠದ ಶಿಲಾಶಾಸನಗಳು, ಸ್ಮಾರಕಗಳು, ವಾಸ್ತುಶಿಲ್ಪ, ಜಗದ್ಗುರುಗಳ ಪಟ್ಟವಲ್ಲರಿ, ಮರುಳಸಿದ್ಧಸ್ವಾಮಿಗೆ ಸಂಬಂಧಿಸಿದಂತೆ ನಡೆಯುವ ಹಬ್ಬ, ಉತ್ಸವ, ಒಂಬತ್ತು ಪಾದಗಟ್ಟೆಗಳು, ದೇವಸ್ಥಾನದ ಶಿಖರದ ತೈಲಾಭಿಷೇಕ, ಜರ್ಮಲೆ ಪಾಳೆಯಗಾರರ ಚರಿತ್ರೆ, ಶ್ರೀಪೀಠದ

ಶಾಖಾಮಠಗಳು, ನ್ಯಾಯಾಲಯ, ಶೈಕ್ಷಣಿಕ ಕಾರ್ಯಗಳು, ಪೀಠದ ಸಿಬ್ಬಂದಿ ಮತ್ತು ಆಯಗಾರರು ಮುಂತಾದವುಗಳನ್ನು ಆಕರಗಳಾಗಿ ತಮ್ಮ ಅಧ್ಯಯನಕ್ಕೆ ಬಳಸಿರುವ ಬಗ್ಗೆ ತಿಳಿಸಿದ್ದಾರೆ. ಇದು ಅವರ ಅಭ್ಯಾಸ ಮತ್ತು ಕ್ಷೇತ್ರ ಕಾರ್ಯದ ವಿಶಾಲ ವ್ಯಾಪ್ತಿಯನ್ನು ಸೂಚಿಸುತ್ತದೆ. ಇತರ ಮಠ, ಪೀಠಗಳ ಬಗ್ಗೆಯೂ ಇಂತಹ ಸಂಶೋಧನ ಕೃತಿಗಳು ಬರುವುದು ಇಂದಿನ ವೈಜ್ಞಾನಿಕ ಯುಗದಲ್ಲಿ ತುಂಬಾ ಅವಶ್ಯವೆಂಬ ನಂಬಿಕೆ ನನ್ನದು.

ಡಾ. ಷಡಕ್ಷರಯ್ಯ ಅವರಿಂದ ಇಂತಹ ಇನ್ನೂ ಹಲವಾರು ಸಂಶೋಧನಾಧಾರಿತ ಚರಿತ್ರ ಗ್ರಂಥಗಳು ಬರಲೆಂದು ಮನಃಪೂರ್ವಕ ಹಾರೈಸುತ್ತೇನೆ.

ಡಾ. ಬಿ. ವಿ. ಮಲ್ಲಾಪುರ
ನಿವೃತ್ತ ಪ್ರಾಧ್ಯಾಪಕ, ಕನ್ನಡ ಅಧ್ಯಯನ ಪೀಠ
ಕರ್ನಾಟ ವಿಶ್ವವಿದ್ಯಾಲಯ, ಧಾರವಾಡ

ಅನಿಸಿಕೆ...

ಧರ್ಮವಿಲ್ಲದ ಸಂಸ್ಕೃತಿಯಿಲ್ಲ. 'ಧರ್ಮ' ಎಂಬ ಪದಕ್ಕೆ ಭಾರತದಲ್ಲಿ ರೂಢವಾಗಿರುವ ಅರ್ಥ ವಿಶಾಲವಾದುದು. ಅರ್ಥವ್ಯಾಪ್ತಿಯ ದೃಷ್ಟಿಯಿಂದ ಬಹುಶಃ ನಮ್ಮ 'ಧರ್ಮ'ಕ್ಕೆ ಸಂವಾದಿಯಾಗಿರುವ ಇನ್ನೊಂದು ಪದ ಜಗತ್ತಿನ ಇನ್ನಾವುದೇ ಭಾಷೆಯಲ್ಲಿಲ್ಲವೇನೋ! ಜನತೆಯ ಪಾರಲೌಕಿಕ ವಿಚಾರಗಳಿಗೆ ದಿಶೆವೊದಗಿಸುವದಷ್ಟೇ ಅಲ್ಲದೆ ಲೌಕಿಕ - ವೈಯಕ್ತಿಕ, ಸಾಮಾಜಿಕ, ಆರ್ಥಿಕ ಇತ್ಯಾದಿ - ನಡಾವಳಿಗಳಿಗೂ ಅದು ಚೌಕಟ್ಟು ಒದಗಿಸುತ್ತದೆ. ಕೇವಲ ನಿರ್ದಿಷ್ಟ ದೇವತೆಯ ಉಪಾಸಕರ ಪಂಥವೆಂಬುದಕ್ಕೆ ಅದರ ಅರ್ಥ ಸೀಮಿತವಾಗಿಲ್ಲ. 'ಸದ್ಧರ್ಮ' ಎಂಬುದು ಒಂದು ಜನಸಮುದಾಯ ಒಪ್ಪಿಕೊಂಡಿರುವ, ನಂಬಿಕೊಂಡಿರುವ, ಆ ಸಮುದಾಯದ ಲೌಕಿಕ, ಲೋಕೋತ್ತರ ಶ್ರೇಯಾಶಯಗಳಿಗೆ ವಿಶಿಷ್ಟ ತಾತ್ವಿಕ-ಮತೀಯ ನೆಲಗಟ್ಟಾಗಿ ವರ್ತಿಸುವ, ಅದರ ಆಶೋತ್ತರಗಳಿಗೆ ಸಕಾಲಿಕವಾಗಿ ಸಮಂಜಸವಾಗಿ ಸ್ಪಂದಿಸುವ ಆಚಾರ-ವಿಚಾರ-ರೂಢಿಗಳ ಸಮುಚ್ಚಯ. ಸದ್ಧರ್ಮ ಪೀಠಗಳು ಅಂತಹ ನೆಲಗಟ್ಟನ್ನು ಬಳಸಿ ನಿಂತಿರುವ ಅನೇಕ ಅನುಯಾಯಿಗಳನ್ನು ಹೊಂದಿರುವ, ಬಲವಾದ ಇತಿಹಾಸವುಳ್ಳ ಆಕರ್ಷಣ, ವಿಕಿರಣ ಕೇಂದ್ರಗಳು. ಅವುಗಳ ಗಟ್ಟಿತನ, ಉಳಿವು, ಅಳಿವು, ಜನಪ್ರಿಯತೆಗಳು ಎಷ್ಟರ ಮಟ್ಟಿಗೆ ಅವು ಕಾಲದಿಂದ ಕಾಲಕ್ಕೆ ಅನುಯಾಯಿಗಳ ಆಶೋತ್ತರಗಳಿಗೆ ತಕ್ಕುದಾಗಿ ಸ್ಪಂದಿಸಿ ಸಾಮಾಜಿಕ ಶ್ರೇಯಸ್ಸಿಗೆ ಕಾರಣೀಭೂತವಾಗಿವೆ ಎಂಬುದನ್ನು ಅವಲಂಬಿಸಿವೆ. ಅರ್ಥಾತ್ ಗತ-ವರ್ತಮಾನಗಳಲ್ಲಿ ಅವುಗಳ ಅನ್ವಯಿಕತೆಯ ಪ್ರಮಾಣವನ್ನವಲಂಬಿಸಿವೆ. ಈ ಮಾತು 'ಸದ್ಧರ್ಮಪೀಠ'ಗಳ ಐತಿಹಾಸಿಕ ಅಧ್ಯಯನದ ಅವಶ್ಯಕತೆಯೆಡೆಗೆ ಬೊಟ್ಟು ಮಾಡುತ್ತದೆ.

ಭಾರತದಲ್ಲಿ ಸದ್ಧರ್ಮ ಪೀಠಗಳಿಗೆ ಕೊರತೆಯಿಲ್ಲ. ಇದು ಜನ ಅವುಗಳಲ್ಲಿರಿಸಿರುವ ವಿಶ್ವಾಸದ ಸಂಕೇತವಾಗಿದೆ. ಪ್ರತಿಯೊಂದು ಪೀಠ ತನ್ನ ಅಸ್ತಿತ್ವದ ಬಗ್ಗೆ ಜಾಗೃತಿ ಹೊಂದುತ್ತಿದ್ದು ಪರಂಪರೆ, ಐತಿಹ್ಯ-ಇತಿಹಾಸಗಳಲ್ಲಿ ಆಧಾರ ಹುಡುಕುತ್ತಲಿದೆ. ಈ ಹುಡುಕು ಅದು ರೂಪಿಸಿಕೊಳ್ಳಬೇಕಾಗಿರುವ ಭವಿಷ್ಯತ್ತಿನೆಡೆಗೆ, ಅದು ಸಮಾಜದಲ್ಲಿ ವಹಿಸಬೇಕಾದ ಪಾತ್ರಗಳೆಡೆಗೆ ಸೂಚನೆಗಳನ್ನು ನೀಡಬಲ್ಲದು.

ಸನ್ಮಿತ್ರರಾದ ಡಾ||ರು.ಮ.ಷಡಕ್ಷರಯ್ಯ ಅವರು ವರ್ಷಗಟ್ಟಲೆ ಶ್ರಮಪಟ್ಟು ರಚಿಸಿರುವ ''ಉಜ್ಜಯಿನಿ ಸದ್ಧರ್ಮಪೀಠದ ಸಾಂಸ್ಕೃತಿಕ ಅಧ್ಯಯನ'' ಎಂಬ ಸಂಶೋಧನಾತ್ಮಕ ಕೃತಿ ಈ ದಿಶೆಯಲ್ಲಿ ಒಂದು ಔಚಿತ್ಯಪೂರ್ಣ ಹೆಜ್ಜೆ. ಮುಂದಾಗಬೇಕಿರುವ ಇಂತಹ ಅಧ್ಯಯನಗಳಿಗೆ ಒಂದು ಮಾದರಿ, ದಿಕ್ಸೂಚಿ.

ಸಂಶೋಧಕ ಇಲ್ಲಿ ಉಜ್ಜಯಿನಿಯ ಸದ್ಧರ್ಮ ಪೀಠವನ್ನು ತನ್ನ ಅಧ್ಯಯನ ಕೇಂದ್ರವನ್ನಾಗಿರಿಸಿಕೊಂಡು, ಐತಿಹಾಸಿಕ ಚೌಕಟ್ಟಿನಲ್ಲಿಟ್ಟು, ಪರಂಪರೆಯನ್ನು ಉಪೇಕ್ಷಿಸದೇ, ಬಹುಮುಖ ಸಂಶೋಧನೆ ನಡೆಸಿ ವಸ್ತುನಿಷ್ಠ ಕೃತಿ ರಚಿಸುವಲ್ಲಿ ಯಶಸ್ವಿಯಾಗಿದ್ದಾರೆ. ಪಾರಂಪರಿಕ ವಿಚಾರಗಳನ್ನಷ್ಟೇ ಅಲ್ಲದೆ ಐತಿಹ್ಯಗಳ ಪರಾಮರ್ಶನ ಮಾಡಿದ್ದಾರೆ. ಶ್ರೀಪೀಠವು ನ್ಯಾಯಪೀಠವಾಗಿ, ಶಿಕ್ಷಣ ಪ್ರಸಾರದ ಕೇಂದ್ರವಾಗಿ ಮಾಡಿರುವ, ಮಾಡುತ್ತಲಿರುವ ಸ್ತುತ್ಯರ್ಹ ಕಾರ್ಯಗಳೆಡೆಗೆ ಗಮನ ಸೆಳೆದಿದ್ದಾರೆ. ಅವರ ಪ್ರಿಯ ಕ್ಷೇತ್ರವಾದ ಶಾಸನಾಧ್ಯಯನ, ವಾಸ್ತು-ಶಿಲ್ಪ ವಿವರ ಸಂಗ್ರಹ ಮತ್ತು ಪರಿಶೀಲನೆ ಇವೆಲ್ಲ ಇಲ್ಲಿ ಉತ್ತಮವಾಗಿ ಮೂಡಿಬಂದಿವೆ. ಚಿತ್ರಗಳೂ ಸೇರಿವೆ.

ಒಟ್ಟಾರೆ ಹೇಳಬೇಕೆಂದರೆ ಡಾ||ರು.ಮ.ಷಡಕ್ಷರಯ್ಯ ಅವರ ಈ ಕೃತಿ ವಿವಿಧ ಮತಗಳ, ಧರ್ಮಪೀಠಗಳ ಐತಿಹಾಸಿಕ-ಸಾಂಸ್ಕೃತಿಕ- ವಸ್ತುನಿಷ್ಠ ಅಧ್ಯಯನಕ್ಕೆ ನಾಂದಿಯಂತಿದ್ದು ಅನುಕರಣೀಯವಾಗಿದೆ. ಶ್ರೀಪೀಠವು ಈ ಕೃತಿಯನ್ನು ಪ್ರಕಟಣೆಗೆ ಎತ್ತಿಕೊಂಡಿರುವುದು ಸಮಂಜಸವೂ, ಶ್ಲಾಘನೀಯವೂ ಆಗಿದೆ. ಅಂತಾಗಿ ಡಾ||ರು.ಮ.ಷಡಕ್ಷರಯ್ಯನವರು ಅಭಿನಂದನೀಯರು. ಹಾಗೆಯೇ ಶ್ರೀಪೀಠಕ್ಕೆ ನಮನಗಳು.

ಡಾ.ಶ್ರೀನಿವಾಸ ವಿ.ಪಾಡಿಗಾರ.
ಅಧ್ಯಕ್ಷರು
ಪ್ರಾಚೀನ ಭಾರತೀಯ ಇತಿಹಾಸ ಮತ್ತು
ಶಾಸನವಿಜ್ಞಾನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ
೨-೫-೨೦೦೩

ಅರಿಕೆ

ಉಜ್ಜಯನಿ ಸದ್ಧರ್ಮ ಪೀಠದ ಸಾಂಸ್ಕೃತಿಕ ಅಧ್ಯಯನ ಎಂಬ ಕಿರು ಪ್ರಯತ್ನದ ಕೃತಿಯನ್ನು ಹೊರತರುವ ಪೂರ್ವದಲ್ಲಿ ಪೂರಕ ಆಕರ ಸಾಮಗ್ರಿಗಳನ್ನು ಕ್ಷೇತ್ರಕಾರ್ಯದಿಂದಲೂ ಸಂಗ್ರಹಿಸಿ ಅಧ್ಯಯನ ಮಾಡಿರುವೆನು. ಕಾರಣಾಂತರದಿಂದ ಈ ಕೃತಿಯಲ್ಲಿ ಲೋಪದೋಷಗಳು ಉಳಿದಿರಬಹುದು ಅಥವಾ ಇನ್ನೂ ಹೆಚ್ಚಿನ ವಿಷಯಗಳು ಬಿಟ್ಟು ಹೋಗಿರಬಹುದು. ಅಂತವುಗಳು ನನಗೆ ತಿಳಿದು ಬಂದರೆ ಮುಂದೆ ಅವುಗಳನ್ನು ಈ ಕೃತಿಯ ಪುನರ್‌ಮುದ್ರಣದಲ್ಲಿ ತಿದ್ದುಪಡಿ ಮಾಡಲಾಗುವುದು. ಈ ಕೃತಿಯನ್ನು ತಯಾರಿಸುವ ಮೊದಲು ಅನೇಕರು ಸಲಹೆಯನ್ನು, ಸ್ಫೂರ್ತಿಯನ್ನು, ಸಹಾಯ-ಸಹಕಾರವನ್ನು ನೀಡಿ ಹರಸಿ ಆಶೀರ್ವದಿಸಿದ್ದಾರೆ. ಅದನ್ನು ಇಲ್ಲಿ ನೆನೆಯಲಾಗಿದೆ.

ಉಜ್ಜಯನೀ ಸದ್ಧರ್ಮ ಪೀಠದ ಲಿಂ|| ಶ್ರೀ ೧೦೦೮ ಜಗದ್ಗುರು ಸಿದ್ದೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ೧೯೮೪ರಲ್ಲಿ ನನಗೆ 'ಅಯ್ಯಾಚಾರ' ದೀಕ್ಷೆಯನ್ನು ಕೊಟ್ಟು ಮಂತ್ರೋಪದೇಶ ಮಾಡಿದರು. ಅಂದಿನಿಂದ ಶ್ರೀಪೀಠದ ಶ್ರೀಗಳವರ ಬಗ್ಗೆ ಹಾಗೂ ಇಷ್ಟಲಿಂಗದ ಪೂಜೆ-ಉಪಾಸನೆ ಬಗ್ಗೆ ನನಗೆ ಆಸಕ್ತಿ ಮೂಡಿತು.

ಡಾ. ಎ.ಹೆಚ್.ಎಂ. ಸಿದ್ದಲಿಂಗಯ್ಯನವರು ಮತ್ತು ಅವರ ಮನೆತನದವರ ಸ್ನೇಹ ಸಂಪರ್ಕ ಶ್ರೀಪೀಠದ ಮೇಲೆ ಒಲವು ಬೀರಲು ಕಾರಣವಾಯಿತು. ಹಂಪಿಯ ಉತ್ಖನನದಲ್ಲಿ ತಾತ್ಕಾಲಿಕವಾಗಿ ಸೇವೆಸಲ್ಲಿಸುವಾಗ ಶ್ರೀಪೀಠದ ಶಿಲಾಶಾಸನಗಳನ್ನು ಪ್ರತಿಮಾಡಿಕೊಳ್ಳುವ ಕಡೆ ನನ್ನ ಗಮನ ಹರಿಯಿತು. ಶ್ರೀ ಮರುಳಸಿದ್ಧ ದೇವಾಲಯದ ಪ್ರಕಟಿತ ಸ್ತಂಭ ಶಾಸನವನ್ನು ಅಚ್ಚು ಮಾಡಿಕೊಂಡ ಬಳಿಕ ಅಳಿಸಿವೆ ಎಂದು ಹೇಳಲಾದ ಅಕ್ಷರಗಳು ಸ್ಪಷ್ಟವಾಗಿ ಕಂಡು ಬಂದವು. ಹೀಗಾಗಿ ಈ ಶಾಸನದ ಪೂರ್ಣಪಾಠವನ್ನು ಓದಿ ತಿಳಿದುಕೊಳ್ಳಲು ನನಗೆ ಸಾಧ್ಯವಾಯಿತು. ಈ ಕಿರು ಸಾಧನೆಯೇ ನನ್ನ ಭವಿಷ್ಯ ರೂಪಣೆಗೆ ಸ್ಫೂರ್ತಿಯನ್ನು ನೀಡಿತೆಂದು ಹೇಳಿದರೆ ತಪ್ಪಾಗದು. ಏಕೆಂದರೆ ಆ ಶಾಸನದ ಪ್ರತಿಯ ಬಗೆಗೆ ಕರ್ನಾಟಕ ವಿಶ್ವವಿದ್ಯಾಲಯದ ಆಗಿನ ಪ್ರಾಧ್ಯಾಪಕರು, ಮುಖ್ಯಸ್ಥರು ಮತ್ತು ನನ್ನ ವಿದ್ಯಾಗುರುಗಳಾದ ಡಾ. ಶ್ರೀನಿವಾಸ ರಿತ್ತಿ ಅವರ ಗಮನವನ್ನು ಸೆಳೆದೆನು. ಆ ಪ್ರತಿಯನ್ನು ನೋಡಿ ಅವರು ಸಂತೋಷಪಟ್ಟರು ಮತ್ತು ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ನಾನು ಕೆಲಸಕ್ಕಾಗಿ ಅಲೆದಾಡುವುದನ್ನು ಅರಿತು ಅವರು ತಮ್ಮ ವಿಭಾಗದಲ್ಲಿ ಶಾಸನದ ಒಂದು ಯೋಜನೆಯಲ್ಲಿ ತಾತ್ಕಾಲಿಕವಾಗಿ ನನ್ನನ್ನು ಸೇರಿಸಿಕೊಂಡರು. ನನ್ನ ಯೋಜನೆಯ ಕಾರ್ಯವು ಅವರಿಗೆ

ತೃಪ್ತಿಯನ್ನುಂಟು ಮಾಡಿತು. ಆದರಿಂದ ಇನ್ನೊಬ್ಬ ನನ್ನ ವಿದ್ಯಾಗುರುಗಳಾದ ಡಾ. ಸುಂದರ ಅವರ ಮಾರ್ಗದರ್ಶನದಲ್ಲಿ ನಾನು ಪಿಎಚ್.ಡಿ. ಮಾಡುವ ಅವಕಾಶ ದೊರೆಯಿತು. ಉಜ್ಜಯಿನಿಯ ಸ್ತಂಭ ಶಾಸನವನ್ನು ೧೯೮೦ರಲ್ಲೇ ಮೈಸೂರು ವಿಶ್ವವಿದ್ಯಾಲಯದ ಮಾನವಿಕ ಭಾರತಿಯಲ್ಲಿ ಪ್ರಕಟಿಸಲು ಡಾ. ಬಿ.ಆರ್. ಗೋಪಾಲ ಅವರು ನೆರವಾದರು. ಅದಕ್ಕಾಗಿ ಈ ಎಲ್ಲ ಗುರುವೃಂದಕ್ಕೆ ನನ್ನ ಕೃತಜ್ಞತೆಗಳು.

ನಾನು ಪಿಎಚ್.ಡಿ. ಸಂಶೋಧನೆಯನ್ನು ಕೈಕೊಂಡಾಗ ಅನಿರೀಕ್ಷಿತವಾಗಿ ಶ್ರೀಶೈಲ ಪೀಠದ ಲಿಂ॥ ಶ್ರೀ ೧೦೦೮ ಜಗದ್ಗುರು ವಾಗೀಶಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳ ದರ್ಶನ, ಕರೂರಿನ ಡಾ. ಬಸವರಾಜ ಹಿರೇಮಠ ಮತ್ತು ಶ್ರೀಮತಿ ಪ್ರೇಮಕ್ಕ ಅವರ ನೆರವಿನಿಂದಾಯಿತು. ಆ ಸಂದರ್ಭದಲ್ಲಿ ಪೂಜ್ಯ ಶ್ರೀಗಳು ಉಜ್ಜಯಿನಿ ಪೀಠದ ಇತಿಹಾಸವನ್ನು ತಿಳಿಯಲು ಅಪ್ಪಣೆ ಮಾಡಿದರು. ಶ್ರೀ ಗುರುಸಿದ್ಧಸ್ವಾಮಿಗಳು (ಹರಿಹರ) ಅವರ ಅಳಿಯಂದಿರು ಮತ್ತು ದಾವಣಗೇರಿಯ ಪ್ರೊ. ಆರ್.ಎಸ್. ಹಿರೇಮಠ ದಂಪತಿಗಳು ಶ್ರೀಪೀಠದ ಇತಿಹಾಸವನ್ನು ಶೋಧಿಸಲು ಅನೇಕ ಸಲ ಉತ್ಸಾಹವನ್ನು ನನಗೆ ತುಂಬಿದರು. ಅವರಿಗೂ ನನ್ನ ಧನ್ಯವಾದಗಳು.

ಮುಂದೆ ಡಾ. ಎಂ. ಶಿವಮೂರ್ತಿ ಅವರ ಸ್ನೇಹ ಸಂಪರ್ಕದಿಂದ ಉಜ್ಜಯಿನಿ ಸದ್ಧರ್ಮ ಪೀಠದ ಚರಿತ್ರೆಯ ಪುನಾರಚನೆಯ ಬಗ್ಗೆ ಸಂಶೋಧನೆ ಮಾಡಲು ಹೆಚ್ಚು ಸ್ಫೂರ್ತಿ ದೊರೆಯಿತು. ಈ ಕುರಿತು ನನ್ನ ಸಂಪಾದನೆಯಲ್ಲಿ ಶ್ರೀಪೀಠದ ಛಾಯಾ ಚಿತ್ರಗಳುಳ್ಳ ಒಂದು ಕಿರು ಕೃತಿಯನ್ನು ಅವರು ಹೊರತರಲು ಕಾರಣರಾದರು. ಸದಾ ವಿಚಾರ ಸಂಕಿರಣಗಳು ಜರುಗಿಸಬೇಕೆಂಬ ಅವರ ಒತ್ತಾಸೆಯಿಂದ ಶ್ರೀಪೀಠದಲ್ಲಿ ಅವರ ನಿರ್ದೇಶನದಲ್ಲಿ ನನ್ನನ್ನು ಕಾರ್ಯದರ್ಶಿಯನ್ನಾಗಿ ಮಾಡಿ ಎರಡು ವರ್ಷ ಎರಡು ವಿಚಾರ ಸಂಕಿರಣಗಳನ್ನು ಶ್ರೀಪೀಠದಲ್ಲಿ ಯಶಸ್ವಿಯಾಗಿ ನಡೆಸಲಾಯಿತು. ಶ್ರೀಪೀಠದ ಆಗಿನ ಜಗದ್ಗುರುಗಳ ಸರ್ವಾಧ್ಯಕ್ಷತೆಯಲ್ಲಿ ಈ ವಿಚಾರ ಸಂಕಿರಣಗಳು ಯಶಸ್ವಿಯಾಗಿ ಜರುಗಿದವು.

ಈ ಕಿರು ಕಾರ್ಯದಿಂದ ಮುಂದೆ ಶ್ರೀಪೀಠದ ಚರಿತ್ರೆಯ ರಚನೆಯ ಬಗ್ಗೆ ಹೆಚ್ಚಿನ ಸಂಶೋಧನೆಯನ್ನು ಕೈಕೊಳ್ಳಬೇಕೆಂಬ ಬಯಕೆ ಕ್ರಮೇಣ ಹೆಚ್ಚಾಯಿತು. ಈ ಬಯಕೆ ಸುಮಾರು ೧೫ ವರ್ಷಗಳ ತರುವಾಯ ಚಿಗುರೊಡೆಯಿತು. ಶ್ರೀಪೀಠದ ಸಾಂಸ್ಕೃತಿಕ ಅಧ್ಯಯನದ ಬಗ್ಗೆ ಒಂದು ಯೋಜನೆಯನ್ನು ಸಿದ್ಧಪಡಿಸಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಆರ್ಥಿಕ ನೆರವನ್ನು ಕೋರಿ ಸಲ್ಲಿಸಿದೆನು. ಈ ಯೋಜನೆಯನ್ನು ಮನ್ನಿಸಿ ವಿಶ್ವವಿದ್ಯಾಲಯವು ಯು.ಜಿ.ಸಿ. ಅನುದಾನದಡಿಯಲ್ಲಿ ಅಲ್ಪ ಆರ್ಥಿಕ ನೆರವನ್ನು ಕೊಡಮಾಡಿತು. ಆ ನೆರವಿನಿಂದ ಕೊನೆಗೆ ಒಂದು ವರದಿಯನ್ನು ಸಂಪೂರ್ಣ

ತಯಾರಿಸಲು ಸಾಧ್ಯವಾಯಿತು. ಈ ಕಾರಣಕ್ಕಾಗಿ ಕರ್ನಾಟಕ ವಿಶ್ವವಿದ್ಯಾಲಯದ ಆಗಿನ ಕುಲಪತಿಗಳಿಗೆ ನನ್ನ ಕೃತಜ್ಞತೆಗಳು.

ಈ ಯೋಜನೆಯ ಕೆಲಸವನ್ನು ಆರಂಭಿಸಿದಾಗಿನಿಂದ ಅದಕ್ಕೆ ಚೈತನ್ಯವನ್ನು ನೀಡಿ ಆಶೀರ್ವದಿಸಿದವರು ಶ್ರೀಪೀಠದ ಈಗಿನ ಶ್ರೀ೧೦೦೮ ಜಗದ್ಗುರು ಮರುಳಸಿದ್ಧ ರಾಜದೇಶೀಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು. ಮುಂದೆ ಶ್ರೀಪೀಠದ ವರದಿಯನ್ನು ಗಮನಿಸಿದ ಶ್ರೀಮಹಾಸ್ವಾಮಿಗಳು ಅದನ್ನು ಶ್ರೀಪೀಠದಿಂದಲೇ ಪ್ರಕಟಿಸುವುದಾಗಿ ಅಪ್ಪಣೆ ನೀಡಿದರು. ಈ ವರದಿಯನ್ನು ಪ್ರಕಟಿಸುವ ಕೆಲಸಕ್ಕೆ ಕೈಹಾಕಿದ ಬಳಿಕ ಅನೇಕ ಸಲ ಶ್ರೀಸನ್ನಿಧಿ ಅವರ ದರ್ಶನವನ್ನು ಪಡೆದುಕೊಳ್ಳುವ ಭಾಗ್ಯ ನನ್ನದಾಯಿತು. ಈ ಅವಕಾಶದಿಂದ ಅನೇಕ ಉಪಯುಕ್ತ ವಿಷಯಗಳನ್ನು ಮತ್ತು ಛಾಯಾಚಿತ್ರಗಳನ್ನು ಪ್ರಸ್ತುತ ಕೃತಿಗೆ ಒದಗಿಸಲು ನೆರವಾಗಿರುವುದನ್ನು ಭಕ್ತಿಪೂರ್ವಕವಾಗಿ ಸ್ಮರಿಸಿ ಇಲ್ಲಿ ದಾಖಲಿಸಿರುವೆನು.

ಈ ಕೆಲಸದಲ್ಲಿ ಅನೇಕ ಉಪಯುಕ್ತ ಮಾಹಿತಿಗಳನ್ನು ಸಂಗ್ರಹಿಸಲು ಸಹಕಾರ ನೀಡಿದ ಸ್ಥಳೀಯ ಗೊಂಗಡಿ ಶ್ರೀ ಯು.ಎಂ. ವೀರಯ್ಯನವರಿಗೆ ನನ್ನ ಅನಂತ ಕೃತಜ್ಞತೆಗಳು.

ಪ್ರಕಟಿಸುವ ಮೊದಲು ಈ ವರದಿಯನ್ನು ಸಮಗ್ರವಾಗಿ ಪರಿಷ್ಕರಿಸಿದೆನು. ಅದಕ್ಕಾಗಿ ಪ್ರಕಟಣೆಯ ಕೆಲಸವು ವಿಳಂಬವಾಯಿತು.

ಈ ಕಾರ್ಯದಲ್ಲಿ ತೊಡಗಿದಾಗ ಅನೇಕರು ಪ್ರತ್ಯಕ್ಷವಾಗಿ ಮತ್ತು ಅಪ್ರತ್ಯಕ್ಷವಾಗಿ ವಿವಿಧ ರೀತಿಯಿಂದ ಸಹಾಯ ಮಾಡಿದ್ದಾರೆ. ಅಂಥವರಲ್ಲಿ ಪ್ರೊ. ಎ.ಎಸ್. ಹಿರೇಮಠ, ಶ್ರೀ ಚನ್ನವೀರಸ್ವಾಮಿ, ಡಾ. ಶಿವಣ್ಣ, ಪಂಡಿತ ಶ್ರೀರುದ್ರಮುನಿಸ್ವಾಮಿ, ಶ್ರೀ ತೂಲಹಳ್ಳಿ ಹಿರೇಮಠದ ಸಿದ್ಧಲಿಂಗಯ್ಯ, ಶ್ರೀ ಕೆ. ಸಿದ್ಧಲಿಂಗನಗೌಡ, ಶ್ರೀ ದೊಡ್ಡ ವೀರಪ್ಪ, ಜರಿಮಲೆ ಪಾಳೆಯಗಾರ ದೊರೆ ಶ್ರೀ ಚಂದ್ರಶೇಖರ ಒಡೆಯರ, ಶ್ರೀ ಎಂ.ಎಂ.ಜೆ.ಸತ್ಯಪ್ರಕಾಶ, ಶ್ರೀ ಮುನೀರ ಅ. ಜವಳಿ, ಶ್ರೀ ರಾಜಶೇಖರ, ಮರುಳಸಿದ್ಧಪ್ಪ, ಶ್ರೀ ವಿಶ್ವಾರಾಧ್ಯ ಮುಂತಾದವರು ಮುಖ್ಯರೆನಿಸಿದ್ದಾರೆ. ಇವರೆಲ್ಲರಿಗೂ ನನ್ನ ಧನ್ಯವಾದಗಳು. ಅನೇಕ ಸಲ ಈ ಕೃತಿಯ ಕರಡು ಪ್ರತಿಯನ್ನು ಅಂದವಾಗಿ ಬರೆದುಕೊಟ್ಟ ನನ್ನ ಸಂಶೋಧನ ವಿದ್ಯಾರ್ಥಿಗಳಾದ ಶ್ರೀ ಉಮೇಶ ಕುರಿ, ಶ್ರೀ ಕೆ.ಸಿ. ಜಾಧವ, ಕು॥ ಜಯಮ್ಮ, ಕು॥ ವನಜಾ ಭರಮಗೌಡರ ಮತ್ತು ಹಿರೇಶಿಂದೋಗಿಯ ಶ್ರೀ ಮರುಳಸಿದ್ಧ ದೇವಾಲಯದ ಛಾಯಾ ಚಿತ್ರಗಳನ್ನು ಒದಗಿಸಿದ ನನ್ನ ವಿದ್ಯಾರ್ಥಿನಿ ಕು॥ ಸವಿತಾ ವೀರನಗೌಡ ಇವರೆಲ್ಲರಿಗೆ ನನ್ನ ಧನ್ಯವಾದಗಳು.

ಈ ಕೃತಿಗೆ ಅನೇಕ ಸೂಚನೆಗಳನ್ನು ನೀಡಿ ಮತ್ತು ಈ ಕೃತಿಯ ಬಗ್ಗೆ ಅನಿಸಿಕೆಯನ್ನು ಬರೆದು ಕೊಡಮಾಡಿದ ಸಹೋದ್ಯೋಗಿ ಮಿತ್ರ ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚೀನ ಭಾರತ ಇತಿಹಾಸ ಮತ್ತು ಶಾಸನವಿಜ್ಞಾನ ವಿಭಾಗದ ಮುಖ್ಯಸ್ಥ ಡಾ. ಶ್ರೀನಿವಾಸ ಪಾಡಿಗಾರ ಅವರಿಗೂ ನನ್ನ ಕೃತಜ್ಞತೆಗಳು.

ಈ ಕೃತಿಯ ಕೆಲಸವನ್ನು ಬೇಗನೆ ಮುಗಿಸಿ ಕೊಡಲು ನನ್ನನ್ನು ಸದಾ ಒತ್ತಾಯಿಸಿದ ನನ್ನ ತಂದೆ ಶ್ರೀ ಆರ್.ಎಂ. ನೀಲಕಂಠಯ್ಯ ಮತ್ತು ಪತ್ನಿ ಡಾ.ಸೌಭಾಗ್ಯ ಇವರಿಗೂ ನನ್ನ ಧನ್ಯವಾದಗಳು.

ಈ ಕೃತಿಯನ್ನು ಪ್ರಕಟಿಸುವ ಕೆಲಸವನ್ನು ಶ್ರೀ ಪೀಠವು ಕೈಕೊಳ್ಳದಿದ್ದರೆ ಅದೊಂದು ಕನಸಾಗಿ ಉಳಿಯುತ್ತಿತ್ತು. ಅದನ್ನು ನನಸು ಮಾಡಲು ಮೂಲ ಕಾರಣರಾದವರು ಈಗಿನ ಶ್ರೀಪೀಠದ ಶ್ರೀ ೧೦೦೮ ಜಗದ್ಗುರು ಮರುಳಸಿದ್ಧ ರಾಜದೇಶೀಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು. ಅದಕ್ಕಾಗಿ ಪೂಜ್ಯ ಜಗದ್ಗುರುಗಳವರಿಗೆ ಚಿರಋಣಿಯಾಗಿದ್ದೇನೆ ಹಾಗೂ ಶ್ರೀಮಹಾಸ್ವಾಮಿಗಳವರ ಪಾದಕಮಲಗಳಿಗೆ ನನ್ನ ಭಕ್ತಿ ಪೂರ್ವಕ ಪ್ರಣಾಮಗಳು.

ಶ್ರೀಪೀಠದ ಇತಿಹಾಸ ಸಂಶೋಧನೆಯನ್ನು ಆರಂಭಿಸಲು ಉತ್ಸಾಹವನ್ನು ನೀಡಿ ಆಶೀರ್ವದಿಸಿದ ಶ್ರೀಪೀಠದ ಲಿಂ॥ ಶ್ರೀ ೧೦೦೮ ಜಗದ್ಗುರು ಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳಿಗೆ ಮತ್ತು ಶ್ರೀಶೈಲ ಪೀಠದ ಲಿಂ॥ ಶ್ರೀ ೧೦೦೮ ಜಗದ್ಗುರು ಶ್ರೀವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳಿಗೆ ನನ್ನ ಭಕ್ತಿ ಪೂರ್ವಕ ನಮನಗಳು. ಡಾ. ಎಂ.ಶಿವಮೂರ್ತಿ, ಶ್ರೀ ರುದ್ರಮುನಿ, ಪ್ರೊ. ಹೇಮಗಿರಿಮಠ ಅವರಿಗೂ ನನ್ನ ಕೃತಜ್ಞತೆಗಳು.

ಈ ಕೃತಿಯ ಕರಡು ಪ್ರತಿಯನ್ನು ಸಮಗ್ರವಾಗಿ ಪರಿಷ್ಕರಿಸಿ ತಮ್ಮ ಅನಿಸಿಕೆಯನ್ನು ಬರೆದು ಕೊಡಮಾಡಲು ನೆರವಾದ ಹಿರಿಯ ವಿದ್ವಾಂಸರೂ ಮತ್ತು ನನ್ನ ಆತ್ಮೀಯ ಹಿತೈಷಿಗಳೂ ಆದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ನಿವೃತ್ತ ಪ್ರಾಧ್ಯಾಪಕ ಡಾ. ಬಿ.ವ್ಹಿ. ಮಲ್ಲಾಪುರ ಅವರಿಗೂ ಹಾಗೂ ನೆಚ್ಚಿನ ಮಿತ್ರ ಡಾ. ಕೃ. ಅನ್ಬನ್ ಅವರಿಗೂ ನನ್ನ ಅನಂತ ಕೃತಜ್ಞತೆಗಳು. ಈ ಕೃತಿಯ ಬಗ್ಗೆ ಅನಿಸಿಕೆಯನ್ನು ಬರೆದು ಕೊಟ್ಟ ಹಿರಿಯ ವಿದ್ವಾಂಸರಾದ ಕ.ವಿ.ವಿ.ಯ ಕನ್ನಡ ಅಧ್ಯಯನ ಪೀಠದ ನಿವೃತ್ತ ಪ್ರಾಧ್ಯಾಪಕ ಡಾ.ಎಸ್.ಎಮ್.ವೃಷಭೇಂದ್ರಸ್ವಾಮಿ ಅವರಿಗೆ ಅನಂತ ಕೃತಜ್ಞತೆಗಳು.

ಪ್ರಸ್ತುತ ಕೃತಿಗೆ ಮುನ್ನುಡಿಯನ್ನು ಬರೆದಿರುವ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಖಾಜಾಪೀರ್ ಅವರಿಗೆ ನನ್ನ ಅನಂತ ಕೃತಜ್ಞತೆಗಳು.

ಈ ಕೃತಿಯ ಮೂಲಪ್ರತಿಯನ್ನು ಕಂಪ್ಯೂಟರ್ ಮೂಲಕ ಅಂದವಾಗಿ ಡಿ.ಟಿ.ಪಿ. ಮಾಡಿಕೊಟ್ಟ ನನ್ನ ಪ್ರೀತಿಯ ವಿದ್ಯಾರ್ಥಿ ಶ್ರೀ ವಿನು ಮತ್ತು ಆತನ ಸಹೋದರ ಶ್ರೀ ನಾಗರಾಜ ಇವರಿಗೆ ನನ್ನ ಧನ್ಯವಾದಗಳು. ಈ ಕೃತಿಯನ್ನು ಅಂದವಾಗಿ ಮುದ್ರಿಸಿಕೊಡಲು ಕಾರಣರಾದ ಶ್ರೀ ಪ್ರಕಾಶರಾವ್, ಆಶಾಗ್ರಾಫಿಕ್ಸ್, ಪ್ರೈ. ಲಿ., ಕುಮಾರಪಟ್ಟಣಂ (ಹರಿಹರ) ಇವರಿಗೂ ನನ್ನ ಧನ್ಯವಾದಗಳು.

ಧಾರವಾಡ

ದಿನಾಂಕ: ೪-೫-೨೦೦೩ -ಡಾ. ರು.ಮ. ಷಡಕ್ಷರಯ್ಯ

ಛಾಯಾಚಿತ್ರ ಮತ್ತು ನಕಾಶೆಗಳ ಪಟ್ಟಿ

೧. ಪಂಚಪೀಠಾಧೀಶ್ವರರು : ರಂಭಾಪುರಿ, ಉಜ್ಜಯನಿ, ಕೇದಾರ, ಶ್ರೀಶೈಲ ಮತ್ತು ಕಾಶಿ.

೨. ಶ್ರೀ ಜಗದ್ಗುರು ದಾರುಕಾಚಾರ್ಯರು.

೩. ಮೂಲ ಸಿದ್ಧವಟಕ್ಷೇತ್ರದಲ್ಲಿ ಸಿದ್ಧೇಶ್ವರ ಲಿಂಗ.(ಮಧ್ಯಪ್ರದೇಶ ಉಜ್ಜಯಿನಿ, ಭಕ್ತಿ: ಶ್ರೀ ಅಳವಂಡಿ ಶಿವಮೂರ್ತಿ ಸ್ವಾಮಿಗಳು)

೪. ಮೂಲ ಸಿದ್ಧೇಶ್ವರ ದೇವಸ್ಥಾನದ ಪ್ರವೇಶದ್ವಾರ (ಮಧ್ಯಪ್ರದೇಶ)ದಲ್ಲಿ ಈಗಿನ ಶ್ರೀ ಸನ್ನಿಧಿಗಳು ಭಕ್ತವೃಂದದ ಸಂಗಡ. (ಭಕ್ತಿ: ಶ್ರೀ ಅಳವಂಡಿ ಶಿವಮೂರ್ತಿ ಸ್ವಾಮಿಗಳು)

೫. ಮೂಲ ಸಿದ್ಧೇಶ್ವರ ದೇವಸ್ಥಾನದ ಪರಿಸರದಲ್ಲಿ ಈಗಿನ ಶ್ರೀ ಸನ್ನಿಧಿಗಳು ಭಕ್ತವೃಂದದಲ್ಲಿ. (ಭಕ್ತಿ: ಶ್ರೀ ಅಳವಂಡಿ ಶಿವಮೂರ್ತಿ ಸ್ವಾಮಿಗಳು)

೬. ಶ್ರೀ ಜಗದ್ಗುರು ಚನ್ನಬಸವಶಿವಾಚಾರ್ಯಮಹಾಸ್ವಾಮಿಗಳು.

೭. ಉಜ್ಜಯನಿ ಜಗದ್ಗುರು ಶ್ರೀ ಸಿದ್ಧಲಿಂಗ ಸ್ವಾಮಿಗಳು.

೮. ಶ್ರೀ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗ ಮಹಾಸ್ವಾಮಿಗಳು.

೯. ಉಜ್ಜಯಿನಿ ಪೀಠದ ಜಗದ್ಗುರು ಶ್ರೀ ಸಿದ್ಧಲಿಂಗ ಸ್ವಾಮಿಗಳು.

೧೦. ಉಜ್ಜಯಿನಿ ಶ್ರೀ ಸಿದ್ಧಲಿಂಗ ಜಗದ್ಗುರುಗಳು (ಮೊದಲಿಗೆ ಕುಳಿತಿರುವರು)

೧೧. ಸೊಲ್ಲಾಪುರದ ಹುಟಗಿ ಬ್ರ॥ಮ॥ಚನ್ನವೀರ ಸ್ವಾಮಿಗಳು ಉಜ್ಜಯಿನಿ ಶ್ರೀ ಜಗದ್ಗುರು ಸಿದ್ಧಲಿಂಗ ಮಹಾಸ್ವಾಮಿಗಳ ಸನ್ನಿಧಾನದಲ್ಲಿ.

೧೨. ಸೊಲ್ಲಾಪುರದ ಶ್ರೀ ಮಲ್ಲಿಕಾರ್ಜುನ ದೇವಾಲಯದಲ್ಲಿ ಉ।ಜ।ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು.

೧೩. ಬಳ್ಳಾರಿಯಲ್ಲಿ ೭೨ ಬಿರುದಾವಳಿಗಳಿಂದ ಉ॥ಜ॥ಸಿದ್ಧಲಿಂಗ ಮಹಾಸ್ವಾಮಿಗಳ ಅಡ್ಡಪಲ್ಲಕ್ಕಿ ಮಹೋತ್ಸವ.

೧೪. ಉ॥ಜ॥ ಶ್ರೀ ಸಿದ್ಧಲಿಂಗ ಜಗದ್ಗುರುಗಳ ಸನ್ನಿಧಿಯಲ್ಲಿ ಶ್ರೀ ಕಾಶೀನಾಥ ಶಾಸ್ತ್ರಿಗಳು.

೧೫. ಉ॥ ಜ॥ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳ ಜತೆ ವಿರೂಪಾಕ್ಷ ಶಾಸ್ತ್ರಿಗಳು.

೧೬. ಶ್ರೀ ಸಿದ್ಧಲಿಂಗ ಜಗದ್ಗುರುಗಳು ಬುಕ್ಕಾಂಬುದಿ ಗಿರಿಯಲ್ಲಿ ತಪಸ್ಸನ್ನಾಚರಿಸುತ್ತಿರುವ ದೃಶ್ಯ.

೧೭. ಉಜ್ಜಯಿನಿ ಶ್ರೀ ಸಿದ್ಧಲಿಂಗ ಜಗದ್ಗುರುಗಳು ರಂಭಾಪುರಿ ಜಗದ್ಗುರುಗಳಿಗೆ ಪಟ್ಟಾಧಿಕಾರ ಅನುಗ್ರಹಿಸುತ್ತಿರುವುದು.

೧೮. ಉಜ್ಜಯಿನಿ ಸದ್ಧರ್ಮ ಪೀಠದ ಶ್ರೀ ೧೦೦೮ ಜಗದ್ಗುರು ಶ್ರೀ ಸಿದ್ಧೇಶ್ವರ ಜಗದ್ಗುರುಗಳು (೧೯೫೩)

೧೯. ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು ಸಿದ್ಧೇಶ್ವರ ಮಹಾಸ್ವಾಮಿಗಳು.

೨೦. ಉ॥ಸ॥ಜ॥ ಮರುಳಾರಾಧ್ಯ ರಾಜದೇಶೀಕೇಂದ್ರ ಮಹಾಸ್ವಾಮಿಗಳು.

೨೧. ಉತ್ಸವದ ಪಾಲಕಿಯಲ್ಲಿ ಆಸೀನರಾಗಿರುವ ಉಜ್ಜಯಿನಿ ಜಗದ್ಗುರು ಶ್ರೀ ೧೦೦೮ ಸಿದ್ಧೇಶ್ವರ ಮಹಾಸ್ವಾಮಿಗಳು ಮತ್ತು ಶ್ರೀ ಮರುಳಾರಾಧ್ಯ ಮಹಾಸ್ವಾಮಿಗಳು.

೨೨. ಉ॥ಸ॥ಪೀ॥ ಜರುಗಿದ ವಿಚಾರ ಸಂಕೀರ್ಣವನ್ನು ೧೯೮೩ರಲ್ಲಿ ಉದ್ಘಾಟಿಸಿದ ಶ್ರೀ ಜಗದ್ಗುರು ಸಿದ್ಧೇಶ್ವರ ಮಹಾಸ್ವಾಮಿಗಳು ಮತ್ತು ಉ॥ಸ॥ ಜಗದ್ಗುರುಗಳು ಶ್ರೀ ಮರುಳಾರಾಧ್ಯ ಮಹಾಸ್ವಾಮಿಗಳು.

೨೩. ಚತುರಾಚಾರ್ಯರಿಂದ ಉಜ್ಜಯಿನಿ ಸದ್ಧರ್ಮ ಪೀಠದ ನೂತನ ಜಗದ್ಗುರು ಶ್ರೀ ಮರುಳಸಿದ್ಧ ಮಹಾಸ್ವಾಮಿಗಳ ಪಟ್ಟಾಧಿಕಾರ ಮಹೋತ್ಸವ.

೨೪. ಶ್ರೀ೧೦೦೮ ಜಗದ್ಗುರು ಶ್ರೀ ಮರುಳಸಿದ್ಧ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳ ಪಟ್ಟಾಧಿಕಾರ ಸಂದರ್ಭದಲ್ಲಿ ಮಾಜಿ ಪ್ರಧಾನಿ ದೇವೇಗೌಡರು ಮತ್ತು ಇನ್ನಿತರರು.

೨೫. ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು ಮರುಳಸಿದ್ಧ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು.

೨೬. ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು ಮರುಳಸಿದ್ಧ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳ ಪಟ್ಟಮಹೋತ್ಸವ.

೨೭. ಪಂಚಾಚಾರ್ಯರಿಂದ ದೀಕ್ಷೆ ಪಡೆದ ಗುಂಡಬ್ರಹ್ಮಯ್ಯರ ದಾಖಲೆ.

೨೮. ಶ್ರೀ ಮರುಳಸಿದ್ಧ ದೇವಾಲಯದ ಗಂಟೆ ಶಾಸನ.

೨೯. ಶಾಂತನಹಳ್ಳಿ ಶ್ರೀ ಕೋಡದಪ್ಪರ ಮನೆ ಎದುರಿನ ಶಾಸನ ಫಲಕ ಮತ್ತು ನಂದಿ ಸ್ತಂಭ.

೩೦. ಉ॥ಸ॥ಪೀ॥ ಮಠದ ಮುಂದಿನ ಶಾಸನ.

೩೧. ಶ್ರೀಮಠದ ಕಣದಲ್ಲಿರುವ ಶ್ರೀಚನ್ನಬಸವ ಸ್ವಾಮಿಗಳ ಗದ್ದುಗೆ.

೩೨. ಶ್ರೀಮಠದ ಕಣದಲ್ಲಿರುವ ಗದ್ದುಗೆಗಳು.

೩೩. ಶ್ರೀಮಠದ ಕಣದಲ್ಲಿರುವ ಶ್ರೀಮಳಿಸ್ವಾಮಿ ಜಗದ್ಗುರುಗಳ ಗದ್ದುಗೆ.

೩೪. ಉ॥ಸ॥ಜ॥ ಶ್ರೀಸಿದ್ಧಲಿಂಗ ಮಹಾಸ್ವಾಮಿಗಳ ಗದ್ದುಗೆ.

೩೫. ಸಿದ್ಧನವರ್ತಿಯ ಆಲದ ಮರದ ಬುಡದಲ್ಲಿ ಲಿಂ॥ ಶ್ರೀ ಉ॥ಜ॥ ಸಿದ್ಧೇಶ್ವರ ಮಹಾಸ್ವಾಮಿಗಳ ಗದ್ದುಗೆ.

೩೬. ಉ॥ಸ॥ಜ॥ ಶ್ರೀಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳ ಗದ್ದುಗೆ ಮುಂದೆ ಭಕ್ತರಿಂದ ಭಜನೆ.

೩೭. ಮಂಗಾಪುರದಲ್ಲಿ ಶ್ರೀಗುರುಸಿದ್ಧಸ್ವಾಮಿಗಳ ಗದ್ದುಗೆ.

೩೮. ಮಂಗಾಪುರದಲ್ಲಿ ಶ್ರೀಗುರುಸಿದ್ಧಸ್ವಾಮಿಗಳ ಗದ್ದುಗೆ ಹಿಂದಿನ ಕಟ್ಟಡ.

೩೯. ಬಸವಣ್ಣನವರಿಗೆ ಜಾತವೇದ ಮುನಿಗಳು ಭಸ್ಮಧಾರಣೆ ಮಾಡಿ ಪಂಚಾಕ್ಷರಿ ಮಂತ್ರ ಉಪದೇಶ, ಲಿಂಗಧಾರಣೆ ಮಾಡುತ್ತಿರುವುದು ಜೊತೆಯಲ್ಲಿ ತಂದೆ ಮಾದರಸ, ತಾಯಿ ಮಾದಲಾಂಬಿಕೆ, ಅಕ್ಕ ಅಕ್ಕನಾಗಮ್ಮ (ಭಕ್ತಿ : ಶ್ರೀ ಕೆ. ಗಂಗಾಧರ, ಬಸವನಬಾಗೇವಾಡಿ)

೪೦. ಬಸವಣ್ಣನವರು ಜಾತವೇದ ಮುನಿಗಳಲ್ಲಿ ವಿದ್ಯೆಗಾಗಿ ಬಂದು ದರ್ಶನ ಪಡೆಯುತ್ತಿರುವುದು (ಭಕ್ತಿ :ಶ್ರೀ ಕೆ. ಗಂಗಾಧರ, ಬಸವನಬಾಗೇವಾಡಿ).

೪೧. ಜಾತವೇದ ಮುನಿಗಳು ಬಸವಣ್ಣನವರಿಗೆ ವಿದ್ಯಾದಾನ ಮಾಡುತ್ತಿರುವುದು, ಜೊತೆಯಲ್ಲಿ ಅಕ್ಕ ಅಕ್ಕನಾಗಮ್ಮ, ಪತಿ ಶಿವದೇವ (ಭಕ್ತಿ - ಶ್ರೀ ಕೆ. ಗಂಗಾಧರ, ಬಸವನಬಾಗೇವಾಡಿ)

೪೨. ಜಾತವೇದ ಮುನಿಗಳು (ಈಶಾನ್ಯಮುನಿ) ಮಂಗಳವೇಡೆಗೆ ಹೊರಟ ಬಸವಣ್ಣನನ್ನು ಆಶೀರ್ವದಿಸುತ್ತಿರುವುದು. ಜೊತೆಯಲ್ಲಿ ಅಕ್ಕನಾಗಮ್ಮ, ಚನ್ನಬಸವಣ್ಣ, ಶಿವದೇವ ಮತ್ತು ಮಂತ್ರಿ ಬಲದೇವ.

೪೩. ಶ್ರೀಮರುಳಸಿದ್ಧಸ್ವಾಮಿಯ ಹೊಸ ರಥದಲ್ಲಿರುವ ಆನೆಗಳು ಮತ್ತು ಸರಸ್ವತಿ ವಿಗ್ರಹಗಳು.

೪೪. ಶ್ರೀಮರುಳಸಿದ್ಧಸ್ವಾಮಿಯ ರಥಕ್ಕೆ ಕಟ್ಟಿದ ಒಂದು ಅಂಕಣಭಾಗ.

೪೫. ಶ್ರೀಮರುಳಸಿದ್ಧಸ್ವಾಮಿಯ ರಥೋತ್ಸವ.

೪೬. ಶ್ರೀಮರುಳಸಿದ್ಧಸ್ವಾಮಿಯ ಶ್ವೇತಛತ್ರಿ.

೪೭. ಶ್ರೀಮರುಳಸಿದ್ಧಸ್ವಾಮಿಯ ಪಾಲಕಿ.

೪೮. ಶ್ರೀಮರುಳಸಿದ್ಧಸ್ವಾಮಿಯ ಶಿಖರಕ್ಕೆ ತೈಲಾಭಿಷೇಕಕ್ಕೆ ಅಣಿಯಾಗಿರುವುದು.

೪೯. ಜರ್ಮಲೆಯ ದೊರೆಗಳಿಂದ ಬಂದ ಎಣ್ಣೆಯ ಕೊಡವನ್ನು ಮೊದಲು ಶ್ರೀಮರಳುಸಿದ್ಧಸ್ವಾಮಿಯ ಶಿಖರಕ್ಕೆ ಎರೆಯಲು ಮೇಲೇರಿಸುತ್ತಿರುವುದು.

೫೦. ಜರ್ಮಲೆಯ ಪಾಳೆಗಾರರ ಎಣ್ಣೆಯನ್ನು ಶ್ರೀಮರಳುಸಿದ್ಧಸ್ವಾಮಿಯ ಶಿಖರಕ್ಕೆ ಮೊದಲು ಎರೆಯುತ್ತಿರುವುದು.

೫೧. ಇನ್ನಿತರ ಭಕ್ತರು ಅರ್ಪಿಸಿದ ಎಣ್ಣೆಯ ಡಬ್ಬಿಯನ್ನು ಶಿಖರದ ಮೇಲಕ್ಕೆ ಎತ್ತುತ್ತಿರುವುದು.

೫೨. ಭಕ್ತರಿಂದ ಶ್ರೀಮರುಳಸಿದ್ಧಸ್ವಾಮಿಯ ಶಿಖರಕ್ಕೆ ಇನ್ನಿತರರು ಅರ್ಪಿಸಿದ ತೈಲದ ಅಭಿಷೇಕ.

೫೩. ಭಕ್ತಿರಿಂದ ಶ್ರೀಮರುಳಸಿದ್ಧಸ್ವಾಮಿಯ ತೈಲಾಭಿಷೇಕದ ವೀಕ್ಷಣೆ.

೫೪. ಕುರುವಿನ ಕಲ್ಲುಗುಡ್ಡ.

೫೫. ಶ್ರೀಮರುಳಸಿದ್ಧ ದೇವಾಲಯದ ಮುಂದಿನ ಮೊದಲನೆಯ ಪಾದಗಟ್ಟಿ (ಮಕರ ತೋರಣದ ಕೆಳಗಡೆ).

೫೬. ಮಾಚೇನಹಳ್ಳಿಯ ಶ್ರೀ ಮರುಳಸಿದ್ಧಸ್ವಾಮಿಯ ಪಾದಗಟ್ಟಿ.

೫೭. ಬೆಳದೇರಿಯ ಶ್ರೀ ಮರುಳಸಿದ್ಧಸ್ವಾಮಿಯ ಪಾದಗಟ್ಟಿ.

೫೮. ಬೆನಕನಳ್ಳಿಯ ಶ್ರೀ ಮರುಳಸಿದ್ಧಸ್ವಾಮಿಯ ಪಾದಗಟ್ಟಿ.

೫೯ ಸೊಕ್ಕಿಯ ಶ್ರೀ ಮರುಳಸಿದ್ಧಸ್ವಾಮಿಯ ಪಾದಗಟ್ಟಿ.

೬೦. ಸಾಸ್ವಿ ಹಳ್ಳಿಯ ಶ್ರೀ ಮರುಳಸಿದ್ಧಸ್ವಾಮಿಯ ಪಾದಗಟ್ಟಿ.

೬೧. ಹಾರಕನಾಳಿನಲ್ಲಿರುವ ಶ್ರೀ ಮರುಳಸಿದ್ಧ ಸ್ವಾಮಿಯ ಪಾದಗಟ್ಟಿ.

೬೨. ನಡುಮಾನಳ್ಳಿಯ ಶ್ರೀ ಮರುಳಸಿದ್ಧ ಸ್ವಾಮಿಯ ಪಾದಗಟ್ಟಿ.

೬೩. ಕಾಶಿ ಬಸವಣ್ಣನ ಗುಡಿ (ನಡುವಾನಳ್ಳಿ-ಉಜ್ಜಯನಿ ಮಧ್ಯ).

೬೪. ಉಜ್ಜಯಿನಿ ಗ್ರಾಮದ ಪಾದಗಟ್ಟಿ.

೬೫. ನಾಗೇನಹಳ್ಳಿಯಲ್ಲಿ ಖಂಡುಗ ಬಳೆಗಳು ಹುಗಿದ ನೆಲೆ.

೬೬. ನಾಗೇನಹಳ್ಳಿಯಲ್ಲಿ ಖಂಡುಗ ಬಳೆಗಳು ಹುಗಿದ ನೆಲೆ.

೬೭. ಲಿಂ॥ ಶ್ರೀ ಐ.ಎಸ್.ಎಂ. ಬಸಯ್ಯನವರು.

೬೮. ಲಿಂ॥ ಶ್ರೀ ಪ್ಯಾಟಿ ಜೆ. ಎಚ್. ಎಂ. ತಿಪ್ಪೇಸ್ವಾಮಿ.

೬೯. ಲಿಂ॥ ಶ್ರೀ ಗುರುಸಿದ್ಧ ಶಾಸ್ತ್ರಿಗಳು.

೭೦. ಶ್ರೀಪೀಠದ ನ್ಯಾಯಾಲಯ.

೭೧. ಶ್ರೀಪೀಠದ ನ್ಯಾಯಾಧೀಶರ ಕಟ್ಟೆ.

೭೨. ಪಾದರಕ್ಷೆಗಳಿಂದ ಜಗಳಮಾಡಿ ಅಶುದ್ಧರೆನಿಸಿದ ಭಕ್ತರು ಶ್ರೀಪೀಠದಲ್ಲಿ ಶುದ್ಧೀಕರಿಸಿಕೊಳ್ಳುತ್ತಿರುವುದು.

೭೩. ಉ॥ಸ॥ಪೀ॥ ಜೀರ್ಣೋದ್ಧಾರಗೊಂಡ ದಕ್ಷಿಣದ ಕೈಲಾಸ ಮಹಾದ್ವಾರ.

೭೪. ಉ॥ಸ॥ಪೀ॥ ಹಳೆಯ ದಕ್ಷಿಣ ದಿಕ್ಕಿನ ಮಹಾದ್ವಾರ.

೭೫. ಉ॥ಸ॥ಪೀ॥ ಉತ್ತರ ದಿಕ್ಕಿನ ಉಯ್ಯಾಲೆ ಕಂಬಗಳು.

೭೬. ಉ॥ಸ॥ಪೀ॥ ಉತ್ತರ ದಿಕ್ಕಿನ ಮಹಾದ್ವಾರ-ತಂಗಾಳಿ ಗೋಪುರ.

೭೭. ಉ॥ಸ॥ಪೀ॥ ಉತ್ತರ ದಿಕ್ಕಿನ ಮಹಾದ್ವಾರದ ಹೊರ ಬಾಗಿಲ ಚೌಕಟ್ಟು.

೭೮. ನವೀಕರಿಸಿದ ತಂಗಾಳಿ ಗೋಪುರ.

೭೯. ಉಜ್ಜಯನಿ ಸದ್ಧರ್ಮ ಪೀಠದ ನಕ್ಷೆ.

೮೦. ಉ॥ಸ॥ಪೀ॥ ಮುಂಭಾಗದ ಸಮುಚ್ಚಯ ದೃಶ್ಯ.

೮೧. ಉ॥ಸ॥ಪೀ॥ ಹಿಂಭಾಗದ ಸಮುಚ್ಚಯ ದೃಶ್ಯ.

೮೨. ಉ॥ಸ॥ಪೀ॥ ಶ್ರೀಮರುಳಸಿದ್ಧ ದೇವಾಲಯದ ತಳಪಾಯ ನಕ್ಷೆ.

೮೩. ಶ್ರೀಮರುಳಸಿದ್ಧ ದೇವಾಲಯದಲ್ಲಿರುವ ಶಿವಲಿಂಗ.

೮೪. ಶ್ರೀಮರುಳಸಿದ್ಧ ಸ್ವಾಮಿಯ ಮುಖವಾಡ ಪೂಜೆ.

೮೫. ಶ್ರೀ ಮರುಳಸಿದ್ಧಸ್ವಾಮಿಯ ಕವಚ ಪೂಜೆ.

೮೬. ಶ್ರೀಮರುಳಸಿದ್ಧ ದೇವಾಲಯದ ಗರ್ಭಗೃಹದ ಬಾಗಿಲ ಚೌಕಟ್ಟು.

೮೭. ಶ್ರೀಮರುಳಸಿದ್ಧ ದೇವಾಲಯದ ಅಂತರಾಳದ ಬಾಗಿಲ ಚೌಕಟ್ಟು.

೮೮. ಶ್ರೀಮರುಳಸಿದ್ಧ ದೇವಾಲಯದ ಸಭಾಮಂಟಪದ ಛತ್ತಿನಲ್ಲಿ ಕಮಲದ ಅಲಂಕರಣವುಳ್ಳ ವಿತಾನ.

೮೯. ಶ್ರೀಮರುಳಸಿದ್ಧ ದೇವಾಲಯದ ಸಭಾಮಂಟಪದಲ್ಲಿರುವ ಕಂಬಗಳು.

೯೦. ದೇವಕೋಷ್ಠದಲ್ಲಿ ಗಣೇಶ.

೯೧. ಉತ್ತರಾಂಗದಲ್ಲಿ ನೃತ್ಯ ಗಣೇಶ ಇತ್ಯಾದಿ.

೯೨. ದೇವಕೋಷ್ಠದಲ್ಲಿ ಯತಿ(ಪಂಡಿತಾರಾಧ್ಯ).

೯೩. ಉತ್ತರಾಂಗದಲ್ಲಿ ಯತಿ.

೯೪. ಗರ್ಭಗೃಹದಲ್ಲಿ ಚತುರ್ಭುಜ ಯತಿ (ಮರುಳಸಿದ್ಧ)

೯೫. ಉತ್ತರಾಂಗದಲ್ಲಿ ಯತಿ ಇತ್ಯಾದಿ.

೯೬. ದೇವಕೋಷ್ಠದಲ್ಲಿ ಯತಿ (ಏಕೋರಾಮರಾಧ್ಯ).

೯೭. ಉತ್ತರಾಂಗದಲ್ಲಿ ಯತಿ ಇತ್ಯಾದಿ.

೯೮. ಗರ್ಭಗೃಹದಲ್ಲಿ ಗೋಪಾಲಕೃಷ್ಣ.

೯೯. ಉತ್ತರಾಂಗದಲ್ಲಿ ಗೋಪಾಲಕೃಷ್ಣ, ನರಸಿಂಹ ಮತ್ತು ವರಾಹ ಇತ್ಯಾದಿ.

೧೦೦. ದೇವಕೋಷ್ಠದಲ್ಲಿ ಯತಿ (ಭಕ್ತಿ ವಿಭೂಷಣ)

೧೦೧. ಉತ್ತರಾಂಗದಲ್ಲಿ ಯತಿ ಇತ್ಯಾದಿ.

೧೦೨. ದೇವಕೋಷ್ಠದಲ್ಲಿ ಯತಿ.

೧೦೩. ಗರ್ಭಗೃಹದಲ್ಲಿ ಯತಿ.

೧೦೪. ಉತ್ತರಾಂಗದಲ್ಲಿ ತ್ರಿಮೂರ್ತಿಗಳು ಇತ್ಯಾದಿ.

೧೦೫. ದೇವಕೋಷ್ಠದಲ್ಲಿ ಯತಿ.

೧೦೬. ಉತ್ತರಾಂಗದಲ್ಲಿ ಸೂರ್ಯ ಇತ್ಯಾದಿ.

೧೦೭. ದೇವಕೋಷ್ಠದಲ್ಲಿ ಯತಿ.

೧೦೮. ಉತ್ತರಾಂಗದಲ್ಲಿ ಯತಿ ಇತ್ಯಾದಿ.

೧೦೯. ಗರ್ಭಗೃಹದಲ್ಲಿ ವೀರಭದ್ರ.

೧೧೦. ಉತ್ತರಾಂಗದಲ್ಲಿ ವೀರಭದ್ರನ ಬದಿಗಳಲ್ಲಿ ನರಸಿಂಹ ಮತ್ತು ಯತಿ ಇತ್ಯಾದಿ.

೧೧೧. ದೇವಕೋಷ್ಠದಲ್ಲಿ ಯತಿ.

೧೧೨. ಉತ್ತರಾಂಗದಲ್ಲಿ ಯತಿ ಇತ್ಯಾದಿ.

೧೧೩. ದೇವಕೋಷ್ಠದಲ್ಲಿ ಯತಿ.

೧೧೪. ಶ್ರೀಮರುಳಸಿದ್ಧಸ್ವಾಮಿ ಗೌರಮ್ಮರ ಉತ್ಸವ ಮೂರ್ತಿ.

೧೧೫. ಶ್ರೀಮರುಳಸಿದ್ಧಸ್ವಾಮಿ ಗೌರಮ್ಮರ ಉತ್ಸವ ಮೂರ್ತಿಯ ಅಲಂಕರಣ.

೧೧೬. ಪಶ್ಚಿಮ ಮುಖಮಂಟಪದ ಭಕ್ತನ ಶಿಲ್ಪ.

೧೧೭. ಸಭಾಮಂಟಪದ ಉತ್ತರ ದ್ವಾರದ ಬದಿಗಿನ ಭಕ್ತನ ಶಿಲ್ಪ.

೧೧೮. ಮಹಾಮಂಟಪದಲ್ಲಿ ವೀರಭದ್ರ.

೧೧೯. ಶ್ರೀಮರುಳಸಿದ್ಧ ದೇವಾಲಯದ ಶಿಖರದ ಮುಂದೆ ನಂದಿ ವಿಗ್ರಹ.

೧೨೦. ಶ್ರೀಮರುಳಸಿದ್ಧ ದೇವಾಲಯದ ಶಿಖರ.

೧೨೧. ಶ್ರೀಮರುಳಸಿದ್ಧ ದೇವಾಲಯದ ಭಿತ್ತಿಯಲ್ಲಿ ದೇವಕೋಷ್ಠಗಳು.

೧೨೨. ಶ್ರೀಮರುಳಸಿದ್ಧ ದೇವಾಲಯದ ಇನ್ನಿತರ ಭಾಗಗಳು.

೧೨೩. ನಂದಿ ವಿಗ್ರಹ.

೧೨೪. ಶ್ರೀಮರುಳಸಿದ್ಧ ದೇವಾಲಯದ ಉತ್ತರ ದ್ವಾರ.

೧೨೫. ಶ್ರೀಮರುಳಸಿದ್ಧ ದೇವಾಲಯದ ಉತ್ತರ ದ್ವಾರ ಚೌಕಟ್ಟಿನ ಲಲಾಟ ಪಟ್ಟಿಕೆ.

೧೨೬. ಶ್ರೀಮರುಳಸಿದ್ಧ ದೇವಾಲಯದ ಎದುರಿನಲ್ಲಿ ಯತಿಗಳುಳ್ಳ ಸ್ತಂಭ, ಮಕರ ತೋರಣ

೧೨೭. ಮಕರ ತೋರಣದ ಯತಿಗಳ ಮುಂಭಾಗದ ದೃಶ್ಯ.

೧೨೮. ಮಕರ ತೋರಣದ ಯತಿಗಳ ಹಿಂಭಾಗದ ದೃಶ್ಯ.

೧೨೯. ಗೌರಮ್ಮನ ದೇವಾಲಯ ಮತ್ತು ಗೌರಮ್ಮನ ವಿಗ್ರಹ.

೧೩೦. ಬಂಗಾರದ ಬಸವಣ್ಣನ ದೇವಾಲಯ.

೧೩೧. ಬಂಗಾರದ ಬಸವಣ್ಣನ ದೇವಾಲಯ ಪಾರ್ಶ್ವಭಾಗ.

೧೩೨. ನವಗ್ರಹ ಪಟ್ಟಿಕೆಯಲ್ಲಿ ಶ್ರೀಮರುಳಸಿದ್ಧ ಇತ್ಯಾದಿ.

೧೩೩. ನಂದಿ ದೇವಾಲಯ.

೧೩೪. ನಂದಿ ದೇವಾಲಯದಲ್ಲಿ ಶ್ರವಣಕುಮಾರ.

೧೩೫. ನಂದಿ ದೇವಾಲಯದಲ್ಲಿ ಗಂಡುಬ್ರಹ್ಮಯ್ಯರ ವಿಗ್ರಹ.

೧೩೬. ಶ್ರೀಪೀಠ ನವೀಕರಿಸಿದ ಮಠದ ಪ್ರವೇಶದ್ವಾರ.

೧೩೭. ಶ್ರೀಪೀಠದ ಮಠದ ಹಳೆಯ ಪ್ರವೇಶದ್ವಾರ.

೧೩೮. ಶ್ರೀಮಠದ ಮುಖಮಂಟಪದ ಕಟ್ಟೆಯ ಮೇಲಿನ ಕಟ್ಟಿಗೆಯ ಕಂಬ.

೧೩೯. ಶ್ರೀಮಠದ ಮುಖಮಂಟಪದ ಕಟ್ಟೆಯ ಮೇಲಿನ ಕಟ್ಟಿಗೆಯ ಕಂಬ.

೧೪೦. ಶ್ರೀಮಠದ ಮುಖಮಂಟಪದ ಕಟ್ಟೆಯ ಮೇಲಿನ ಕಟ್ಟಿಗೆಯ ಕಂಬ.

೧೪೧. ಶ್ರೀಮಠದ ಮುಖಮಂಟಪದ ಕಟ್ಟೆಯ ಮೇಲಿನ ಕಟ್ಟಿಗೆಯ ಕಂಬ.

೧೪೨. ಶ್ರೀಮಠದ ಮುಖಮಂಟಪದ ಕಟ್ಟೆಯ ಮೇಲಿನ ಕಟ್ಟಿಗೆಯ ಕಂಬ.

೧೪೩. ಶ್ರೀಮಠದ ಮುಖಮಂಟಪದ ಕಟ್ಟೆಯ ಮೇಲಿನ ಕಟ್ಟಿಗೆಯ ಕಂಬ.

೧೪೪. ಶ್ರೀಮಠದ ಕಟ್ಟಿಗೆಯ ದ್ವಾರ ಚೌಕಟ್ಟು.

೧೪೫. ಶ್ರೀ ಮಠದಲ್ಲಿ ದಾರುಕಾಚಾರ್ಯರ ಕಂಚಿನ ವಿಗ್ರಹ ಮತ್ತು ತೋರಣದ ಮುಂದೆ ಗಣೇಶನ ಶಿಲಾ ವಿಗ್ರಹ.

೧೪೬. ಶ್ರೀಮಠದಲ್ಲಿ ದಾರುಕಾಚಾರ್ಯರು ಶಿವಲಿಂಗದಲ್ಲಿ ಅವತರಿಸಿದ ವಿಗ್ರಹ.

೧೪೭. ಶ್ರೀಮಠದ ಒಳಗಡೆಯ ಶಿವಪೂಜಾ ಮಂದಿರದ ಬಾಗಿಲು.

೧೪೮. ಶ್ರೀಪೀಠದ ನ್ಯಾಯಾಲಯದಲ್ಲಿರುವ ಕಂಬದಲ್ಲಿ ಕಿರು ವಿಗ್ರಹ (ಮಲೆನಾಡಿನ ದುರ್ಗವ್ವ)

೧೪೯. ನ್ಯಾಯಾಲಯದ ಬದಿಗಿರುವ ಕೋಣೆಯ ಬಾಗಿಲ ಚೌಕಟ್ಟು.

೧೫೦. ಶ್ರೀಪೀಠದ ಪಂಚಾಚಾರ್ಯರ ಮಂಟಪ ಹಾಗೂ ಶ್ರೀಸಿದ್ಧೇಶ್ವರ ಭವನ.

೧೫೧. ಶ್ರೀಸಿದ್ಧಲಿಂಗ ಮಹಾಸ್ವಾಮಿಗಳ ಗದ್ದುಗೆಯ ಮುಂಭಾಗ.

೧೫೨. ವಿದ್ಯಾರ್ಥಿಗಳು ಶ್ರೀ ಸನ್ನಿಧಿಗಳ ಸಾನ್ನಿಧ್ಯದಲ್ಲಿ ಪ್ರಾರ್ಥನೆ ಸಲ್ಲಿಸುತ್ತಿರುವುದು.

೧೫೩. ಉಜ್ಜಯಿನಿ ತಲೆಬೋಳು ಸಿದ್ಧಪ್ಪನ ದೇವಾಲಯ.

೧೫೪. ಉಜ್ಜಯಿನಿ ಗ್ರಾಮದ ಹರಿಜನಕೇರಿಯಲ್ಲಿರುವ ಶ್ರೀಮರುಳಸಿದ್ಧ ದೇವಾಲಯ.

೧೫೫. ಉಜ್ಜಯಿನಿ ಗ್ರಾಮದ ಶ್ರೀಸಿದ್ಧಲಿಂಗಯ್ಯನವರ ಮನೆ ಮುಂದಿನ ನಂದಿ ಸ್ತಂಭ.

೧೫೬. ಉಜ್ಜಯಿನಿ ಗ್ರಾಮದ ಶ್ರೀ ಜಟ್ಟೆಪ್ಪನ ದೇವಾಲಯ.

೧೫೭. ಜಟ್ಟೆಪ್ಪನ ಗುಡಿ ಮುಂದಿನ ವೀರಗಲ್ಲು.

೧೫೮. ಜಟ್ಟೆಪ್ಪನ ಗುಡಿ ಮುಂದಿನ ವೀರಗಲ್ಲು.

೧೫೯. ಜಟ್ಟೆಪ್ಪನ ಗುಡಿ ಮುಂದಿನ ಪಾದಪೀಠ.

೧೬೦. ಭೈರವನ ವಿಗ್ರಹ.

೧೬೧. ಅರಸಿಬಾವಿ.

೧೬೨. ಹಿರೇಸಿಂದೋಗಿಯ ಶ್ರೀಮರುಳಸಿದ್ಧ ದೇವಾಲಯದ ದ್ವಾರ.

೧೬೩. ಹಿರೇಸಿಂದೋಗಿಯ ಶ್ರೀಮರುಳಸಿದ್ಧ ದೇವಾಲಯದ ಮುಖಮಂಟಪ.

೧೬೪. ಹಿರೇಸಿಂದೋಗಿಯ ಶ್ರೀಮರುಳಸಿದ್ಧನ ಗರ್ಭಗೃಹದ ಬಾಗಿಲ ಚೌಕಟ್ಟು.

೧೬೫. ಶ್ರೀಮರುಳಸಿದ್ಧ ದೇವಾಲಯದ ಬದಿಗಿರುವ ಅನೇಕ ಸಮಾಧಿಗಳು.

೧೬೬. ಶ್ರೀಮರುಳಸಿದ್ಧ ದೇವಾಲಯದಲ್ಲಿರುವ ಮಂಚ ಮತ್ತು ಅದರ ಮೇಲೆ ದಂಡ ಇತ್ಯಾದಿ.

೧೬೭. ಶ್ರೀಮರುಳಸಿದ್ಧ ದೇವಾಲಯದಲ್ಲಿರುವ ಮಂಚದ ಮುಂದೆ ಮುಳ್ಳಿನ ಆವಿಗೆಗಳು.

೧೬೮. ಜರ್ಮಲೆಯ ಗುಡ್ಡಪ್ರದೇಶದಲ್ಲಿ ಕೋಟೆ ಇತ್ಯಾದಿ.

೧೬೯. ಜರ್ಮಲೆಯ ಗುಡ್ಡಪ್ರದೇಶದಲ್ಲಿ ಕೋಟೆ-ಕೊತ್ತಳ ಇತ್ಯಾದಿ.

೧೭೦. ಜರ್ಮಲೆಯ ಗುಡ್ಡಪ್ರದೇಶದ ನೆಲೆ.

೧೭೧. ಹಳೆ ಜರ್ಮಲೆಯಲ್ಲಿ ಹಾಳು ನೆಲೆಯಲ್ಲಿ ಬಾವಿ, ಗೋರಿ ಇತ್ಯಾದಿ.

೧೭೨. ಹಳೆ ಜರ್ಮಲೆಯಲ್ಲಿ ಬಾಗೇಶ್ವರ ದೇವಾಲಯ.

೧೭೩. ಜರ್ಮಲೆಯ ಗ್ರಾಮದ ಶಿಲ್ಪಗಳು.

೧೭೪. ಹಳೆಯ ಜರ್ಮಲೆಯ ಗುಡ್ಡಪ್ರದೇಶದಲ್ಲಿ ಹಾಳಾದ ರಸ್ತೆಗಳು, ಅರಮನೆ ಇತ್ಯಾದಿ.

೧೭೫. ಹಳೆಯ ಜರ್ಮಲೆಯಲ್ಲಿ ಬೃಹನ್ಮಠ, ಬಾವಿ ಇತ್ಯಾದಿ.

೧೭೬. ಜರ್ಮಲೆಯ ದೊರೆ ಶ್ರೀ ಚಂದ್ರಶೇಖರ ರಾಜರೊಂದಿಗೆ ಮಿತ್ರರು.

೧೭೭. ಜರ್ಮಲೆಯ ಪಾಳೆಗಾರರ ಮನೆಯಲ್ಲಿ ಶ್ರೀ ಮರುಳಸಿದ್ಧಸ್ವಾಮಿಯ ಕೊರಳಲ್ಲಿ ಚಿನ್ನದ ಕವಚದಲ್ಲಿ ಮಾವಿನ ಗೊಟ್ಟ.

೧೭೮. ಜರ್ಮಲೆಯ ಪಾಳೆಗಾರರ ದೊರೆ ಚಂದ್ರಶೇಖರ ದೊರೆ ಅವರು ತಮ್ಮ ಮನೆಯ ದೇವರ ಮನೆಯಲ್ಲಿ.


೧೭೯. ಉಜ್ಜಯಿನಿ ಪ್ರದೇಶದ ಭೌಗೋಲಿಕ ಪರಿಸರ ನಕಾಶೆ.

೧೮೦. ಭಾರತ-ಕರ್ನಾಟಕ ನಕಾಶೆಯಲ್ಲಿ ಬಳ್ಳಾರಿ ಜಿಲ್ಲೆ.


೧೮೧. ಕೊಟ್ಟೂರಿನ ಚಾನುಕೋಟಿ ಮಠದ ಶ್ರೀಮತಿ ಕಸ್ತೂರಮ್ಮ ಅವರು ಗಣ್ಯರ ಸಮ್ಮುಖದಲ್ಲಿ ಶ್ರೀಪೀಠದ ಟ್ರಜರಿಯನ್ನು ಈಗಿನ ಉ॥ಸ॥ಪೀ॥ ಜಗದ್ಗುರುಗಳಿಗೆ ಅರ್ಪಿಸುತ್ತಿರುವುದು.

೧೮೨. ಲಿಂ॥ಜ॥ ಶ್ರೀಸಿದ್ಧೇಶ್ವರ ಮಹಾಸ್ವಾಮಿಗಳ ಸಂಸ್ಮರಣೋತ್ಸವದಲ್ಲಿ ಪಂಚಾಚಾರ್ಯರು.

೧೮೩. ಬಳ್ಳಾರಿ ಜಿಲ್ಲೆಯ ನಕಾಶೆಯಲ್ಲಿ ಉಜ್ಜಯಿನಿ.



೧೮೦. ಭಾರತ-ಕರ್ನಾಟಕ ನಕಾಶೆಯಲ್ಲಿ ಬಳ್ಳಾರಿ ಜಿಲ್ಲೆ.



೧೮೩. ಬಳ್ಳಾರಿ ಜಿಲ್ಲೆಯ ನಕಾಶೆಯಲ್ಲಿ ಉಜ್ಜಯಿನಿ.

ಪರಿವಿಡಿ

ಪೀಠಿಕೆ

ಭಾರತ ದೇಶದಲ್ಲಿ ಹಿಂದೂ, ಜೈನ, ಬೌದ್ಧ, ಸಿಖ್, ಕ್ರಿಶ್ಚಿಯನ್, ಮಹಮದೀಯ ಮುಂತಾದ ಮತ ಧರ್ಮಗಳಿದ್ದು ಅವುಗಳಲ್ಲಿ ಪ್ರತಿಯೊಂದಕ್ಕೆ ತನ್ನದೇ ಆದ ಗುರು/ದೇವರು, ಆಚಾರ, ವಿಚಾರ, ತತ್ವ, ಗ್ರಂಥ ಇತ್ಯಾದಿಗಳಿವೆ. ಈ ಎಲ್ಲ ಮತ ಧರ್ಮಗಳ ಸಾಂಸ್ಕೃತಿಕ ಪರಂಪರೆಯಲ್ಲಿ ಸಂಸ್ಕಾರಗಳ, ದೇವ-ದೇವತೆಗಳ ಅಥವಾ ಆಚಾರ್ಯ/ಮುನಿ-ಭಕ್ತರ ಹೆಸರಿನಲ್ಲಿ ಹಬ್ಬ, ಉತ್ಸವ, ಜಾತ್ರೆಗಳು ಸಾಮೂಹಿಕವಾಗಿ ತುಂಬಾ ಶ್ರದ್ಧೆ, ಭಕ್ತಿಗಳಿಂದ ಜರುಗುತ್ತವೆ. ಈ ಎಲ್ಲಾ ಮತ-ಧರ್ಮಗಳ ದೇವರು ಒಂದೇ, ಸಾರ ಒಂದೇ. ಆಚಾರ-ವಿಚಾರಗಳು ಮಾತ್ರ ಭಿನ್ನ. ಒಂದೊಂದು ಧಾರ್ಮಿಕ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಗುರು-ಪುರೋಹಿತ ಮತ್ತು ಶಿಷ್ಯ-ಭಕ್ತ ವರ್ಗಗಳು ಬೆಸೆದು ಕೊಂಡಿವೆ. ಈ ದೇಶದ ಪ್ರತಿಯೊಂದು ಹಳ್ಳಿ, ಗ್ರಾಮ, ಪಟ್ಟಣಗಳಲ್ಲಿ ವಾಸಿಸುವ ಜನರು ಈ ಆಚರಣೆಗಳಲ್ಲಿ ಭಿನ್ನತೆಯಿದ್ದರೂ ಏಕತೆಯನ್ನು ರೂಪಿಸಿಕೊಂಡಿರುವರು. ಮತ ಸಹಿಷ್ಣುತೆಯನ್ನು ರಕ್ಷಿಸಿಕೊಂಡು ಅವರು ಶಾಂತಿ ಸಮಾಧಾನದಿಂದ ಬಾಳುವುದನ್ನು ಕಲಿತಿದ್ದಾರೆ.

ಹೀಗಾಗಿ ಭಾರತದ ಪ್ರತಿಯೊಂದು ಮತ-ಧರ್ಮದವರು ತಾವು ವಾಸಿಸುವ ತಾಣಗಳಲ್ಲಿ ತಮ್ಮವೇ ಆದ ದೇವ-ದೇವತೆಗಳ ದೇಗುಲಗಳನ್ನು, ಜಿನಮಂದಿರ, ಬೌದ್ಧಾಲಯಗಳನ್ನು, ಮಠ, ಚರ್ಚ್, ಮಸೀದಿಗಳನ್ನು ಧಾರ್ಮಿಕ ಸ್ಮಾರಕಗಳಾಗಿ ಕಟ್ಟಿಸಿಕೊಂಡಿರುವರು ಮತ್ತು ಕಟ್ಟುತ್ತಿರುವರು.

ಭಾರತದೇಶದಲ್ಲಿರುವ ಅನೇಕ ಮತ-ಧರ್ಮಗಳು ನಿರ್ದಿಷ್ಟ ಕಾಲದಲ್ಲಿ ಮಹಾತ್ಮನೊಬ್ಬನಿಂದ ಆರಂಭಿಸಲ್ಪಟ್ಟಿವೆ. ಅಂಥವುಗಳಲ್ಲಿ ಬೌದ್ಧ ಧರ್ಮವು ಬುದ್ಧನಿಂದ, ಜೈನಧರ್ಮವು ಮಹಾವೀರನಿಂದ, ಮುಸ್ಲಿಂ ಧರ್ಮವು ಪ್ರವಾದಿ ಮಹಮದ್ ಪೈಗಂಬರರಿಂದ, ಕೈಸ್ತ ಧರ್ಮವು ಏಸು ಕ್ರಿಸ್ತರಿಂದ, ಸಿಕ್ ಧರ್ಮವು ಗುರುನಾನಕರಿಂದ ಸ್ಥಾಪಿಸಲ್ಪಟ್ಟಿವೆ. ಆದರೆ ಹಿಂದೂ ಧರ್ಮ ಮತ್ತು ಅದರ ಅನೇಕ ಶಾಖೆಗಳು ನಿರ್ದಿಷ್ಟ ಕಾಲದಲ್ಲಾಗಲಿ, ನಿರ್ದಿಷ್ಟ ಮಹಾತ್ಮರಿಂದಾಗಲಿ ಸ್ಥಾಪಿಸಲ್ಪಟ್ಟವಲ್ಲ. ವೀರಶೈವ ಶಿವಾದ್ವೈತ ಮತವಾಗಲಿ, ಶೈವ ಮತವಾಗಲಿ, ವೈಷ್ಣವ ಮತವಾಗಲೀ, ನಿರ್ದಿಷ್ಟ ಕಾಲದಲ್ಲಿ, ನಿರ್ದಿಷ್ಟ ವ್ಯಕ್ತಿಗಳಿಂದ ಸ್ಥಾಪಿಸಲ್ಪಟ್ಟಿದೆ ಎಂದು ನಿಖರವಾಗಿ

ಹೇಳುವುದು ಸಾಧ್ಯವಿಲ್ಲ. ತಮ್ಮಿಂದಲೇ ತಮ್ಮ ಮತವು ಪ್ರಾರಂಭವಾಯಿತು ಎಂದು ಯಾವ ಗ್ರಂಥಗಳಲ್ಲಿಯೂ ಅವರು ಹೇಳಿಕೊಂಡಿಲ್ಲ. ತಮ್ಮ ತಮ್ಮ ಮತಗಳು ವೇದಾಗಮಗಳಿಗೆ, ಉಪನಿಷತ್ತುಗಳಿಗೆ, ಬ್ರಹ್ಮಸೂತ್ರ, ಭಗವದ್ಗೀತೆಗಳಿಗನುಸಾರವಾಗಿ ಹೇಳಲ್ಪಟ್ಟಿರುವುವೇ ಹೊರತು ತಮ್ಮಿಂದಲೇ ಪ್ರಾರಂಭಿಸಲ್ಪಟ್ಟವುಗಳಲ್ಲ ಎಂದಿದ್ದಾರೆ. ವೀರಶೈವರ ಶ್ರೀಕರ ಭಾಷ್ಯವು ಕೂಡ ಅಗಸ್ತ್ಯ ಮುನಿಯ ವೃತ್ತಿಯ ಆಧಾರದ ಮೇಲೆ ಬರೆಯಲ್ಪಟ್ಟಿರುವುದಾಗಿ ಆ ಕೃತಿಯ ಆರಂಭದಲ್ಲಿ ಹೇಳಲಾಗಿದೆ. ಅದರ ರಚನೆಗೆ ಸಿದ್ಧಾಂತ ಶಿಖಾಮಣಿಯು ಮೂಲ ಆಧಾರಗ್ರಂಥ. ಪ್ರಾಚೀನ ವೀರಶೈವ ಧರ್ಮವು ತನ್ನ ಆಚಾರ, ವಿಚಾರ, ಸಿದ್ಧಾಂತಗಳನ್ನು ಪ್ರತಿಪಾದಿಸಲು ತನ್ನದೇ ಆದ ಪ್ರಮಾಣ ಗ್ರಂಥಗಳನ್ನು ಬಳಸುತ್ತದೆ. ಇವೇ ಆಗಮಗಳು.

ಭಾರತದಲ್ಲಿ ವೇದೋಪನಿಷತ್ತುಗಳ ನಂತರ ಷಡ್ದರ್ಶನಗಳು ಆರಂಭವಾದವು. ಕಪಿಲ ಮುನಿಯಿಂದ ಸಾಂಖ್ಯ, ಪತಂಜಲಿಯಿಂದ ಯೋಗ, ಗೌತಮನಿಂದ ನ್ಯಾಯ, ಕಣಾದ ಮುನಿಯಿಂದ ವೈಶೇಷಿಕ, ಜೈಮಿನಿಯಿಂದ ಪೂರ್ವಮಿಮಾಂಸೆ, ವ್ಯಾಸನಿಂದ ಉತ್ತರಮೀಮಾಂಸೆ ನಿರ್ಮಾಣಗೊಂಡವು. ಅನೇಕ ಆಚಾರ್ಯರು ಉತ್ತರ ವಿಮಾಂಸವನ್ನು ಮುಂದಿಟ್ಟುಕೊಂಡು ತಮ್ಮ ತಮ್ಮ ಸಿದ್ಧಾಂತಗಳನ್ನು ಪ್ರತಿಪಾದಿಸಿದರು. ಶಂಕರಾಚಾರ್ಯರು ಅದ್ವೈತ ಸಿದ್ಧಾಂತವನ್ನು, ರಾಮಾನುಜರು ವಿಶಿಷ್ಟಾದ್ವೈತ ಸಿದ್ಧಾಂತವನ್ನು, ಮಧ್ವಾಚಾರ್ಯರು ದ್ವೈತ ಸಿದ್ಧಾಂತವನ್ನು ಬೆಳಕಿಗೆ ತಂದರು. ವೀರಶೈವ ಧರ್ಮದ ಮೂಲ ಆಚಾರ್ಯರಾದ ಪಂಚಾಚಾರ್ಯರು ***(ಚಿತ್ರ ನಂ. ೧)*** ಶಿವಾದ್ವೈತ ಸಿದ್ಧಾಂತವನ್ನು ಸ್ಥಾಪಿಸಿದರು. ಬೇರೆ ಬೇರೆ ಯುಗಗಳಲ್ಲಿ ವಿವಿಧ ನಾಮಾಂಕಿತಗಳಿಂದ ಅವತರಿಸಿದ ಈ ಪಂಚಾಚಾರ್ಯರು ತಮ್ಮ ತತ್ವಗಳನ್ನು ಪ್ರಚಾರ ಮಾಡಲು ಭಾರತದ ನಾನಾ ಭಾಗಗಳಲ್ಲಿ ತಮ್ಮ ಪೀಠಗಳನ್ನು ಸ್ಥಾಪಿಸಿದ್ದು ಅವು ಉಜ್ಜಯಿನಿ, ಬಾಳೆಹೊನ್ನೂರು, ಶ್ರೀಶೈಲ, ಕಾಶಿ ಮತ್ತು ಕೇದಾರಗಳಲ್ಲಿವೆ. ಅವರು ನಾಸ್ತಿಕ ಮತವನ್ನು ಖಂಡಿಸಿ, ಆಸ್ತಿಕ ಮತವನ್ನು ನೆಲೆಗೊಳಿಸಿ ಉದ್ಧರಿಸಿದರು. ಈ ಆಚಾರ್ಯರ ಉತ್ಪತ್ತಿಯ ವಿಷಯ ಸುಪ್ರಭೇದಾಗಮ ಮತ್ತು ಸ್ವಯಂಭುವಾಗಮಗಳಲ್ಲಿ ಪ್ರಸ್ತಾಪಗೊಂಡಿದೆ. ಅವುಗಳ ಪ್ರಕಾರ ರೇಣುಕರು ಕೊಲ್ಲಿಪಾಕಿಯ ಸೋಮೇಶ್ವರ ಲಿಂಗದಲ್ಲಿ ಜನಿಸಿ ಬಾಳೆಹೊನ್ನೂರಿನಲ್ಲಿ ನೆಲಸಿದರು. ಮರುಳಸಿದ್ಧರು ಮಧ್ಯಪ್ರದೇಶದ ಉಜ್ಜಯಿನಿ ಸಿದ್ಧೇಶ್ವರ ಲಿಂಗದಲ್ಲಿ ಜನಿಸಿ ಕರ್ನಾಟಕದ ಉಜ್ಜಯಿನಿಯಲ್ಲಿ ನೆಲೆನಿಂತರು. ಪಂಡಿತಾರಾಧ್ಯರು ಶ್ರೀಶೈಲದ ಸುಧಾಕುಂಡ ಕ್ಷೇತ್ರದ ಮಲ್ಲಿಕಾರ್ಜುನ ಲಿಂಗದಲ್ಲಿ ಜನಿಸಿ ಶ್ರೀಗಿರಿ ಅಂದರೆ ಶ್ರೀಶೈಲದಲ್ಲಿ ವಾಸಿಸಿದರು. ಏಕೋರಾಮಾರಾಧ್ಯರು

ಹಿಮವತ್‌ಕೇದಾರ ದ್ರಾಕ್ಷಾರಾಮ ಕ್ಷೇತ್ರದ ರಾಮನಾಥ (ಭೀಮನಾಥ) ಲಿಂಗದಲ್ಲಿ ಜನಿಸಿ ಹಿಮಾಲಯದಲ್ಲಿ ನಿಂತರು. ವಿಶ್ವಾರಾಧ್ಯರು ಕಾಶಿಯ ವಿಶ್ವೇಶ್ವರ ಲಿಂಗದಲ್ಲಿ ಜನಿಸಿ ಕಾಶಿಯಲ್ಲಿ ವಾಸಿಸಿದರು. ಅವರವರ ವಾಸಸ್ಥಾನಗಳಲ್ಲಿ ಈ ಆಚಾರ್ಯರು ಮಠಗಳನ್ನು ಸ್ಥಾಪಿಸಿದರು. ಇವೇ ಪಂಚಪೀಠಗಳೆನಿಸಿವೆ. ಈ ಪೀಠಾಧಿಪತಿಗಳನ್ನು ಜಗದ್ಗುರುಗಳೆಂದು ಕರೆಯಲಾಗುತ್ತದೆ. ವೀರಶೈವರು ಈ ಪೀಠಗಳಲ್ಲಿ ಯಾವುದಾದರೂ ಒಂದು ಪೀಠದ ಶಿಷ್ಯರಾಗಿರುವರು. ಅವರಿಗೆ ಆಯಾ ಪೀಠದ ಸೂತ್ರಗೋತ್ರಗಳು ಅನ್ವಯಿಸುತ್ತವೆ. ತಲಾ ಒಂದು ಪೀಠಕ್ಕೆ ತಮ್ಮದೇ ಆದ ಶಾಖಾಮಠಗಳಿದ್ದು ಅವುಗಳ ಗುರುಗಳು ತಮ್ಮ ಶಿಷ್ಯರ ಸಂಸ್ಕಾರಗಳನ್ನು ನೆರವೇರಿಸುವರು.

ವೀರಶೈವರು ಪಂಚಾಚಾರ್ಯರ ಸಂತತಿಯವರನ್ನು ಭಕ್ತಿ ಗೌರವಗಳಿಂದ ಆರಾಧಿಸುವರು. ಅವರಿಗೆ ದೇವರ ಸರಿಸಮಾನ ಸ್ಥಾನಮಾನವಿದೆ. ಅವರು ವೀರಶೈವ ಧರ್ಮದ ಮೂಲಪುರುಷರೆನಿಸಿಕೊಂಡಿರುವರು. ಶೈವಧರ್ಮದಲ್ಲಿ ಶಿವನ ಆರಾಧನೆಗೆ ಮತ್ತು ವೈದಿಕ ಪರಂಪರೆಗಳ ಆಚರಣೆಗೆ ಹೆಚ್ಚು ಪ್ರಾಶಸ್ತ್ಯ. ಅಲ್ಲಿ ಸ್ಥಾವರ ಲಿಂಗದ ಆರಾಧನೆಯನ್ನು ಕಾಣುತ್ತೇವೆ. ವೀರಶೈವದಲ್ಲಿ ಶಿವನ ಆರಾಧನೆಯನ್ನು ಧಾರ್ಯ ಇಷ್ಟಲಿಂಗದ ಮೂಲಕ ಮಾಡಲಾಗುತ್ತದೆ.

ಪಂಚಪೀಠಗಳಲ್ಲಿ ಕಾಶಿ ಮತ್ತು ಕೇದಾರ ಪೀಠಗಳು ಉತ್ತರ ಭಾರತದಲ್ಲಿದ್ದರೆ ಉಜ್ಜಯಿನಿ, ಶ್ರೀಶೈಲ ಮತ್ತು ರಂಭಾಪುರಿ ಪೀಠಗಳು ದಕ್ಷಿಣ ಭಾರತದಲ್ಲಿವೆ. ಉಜ್ಜಯಿನಿ ಪೀಠವು ಮೂಲತಃ ಮಧ್ಯಭಾರತದಲ್ಲಿ ಮತ್ತು ರಂಭಾಪುರಿ ಪೀಠವು ಮೂಲತಃ ಆಂಧ್ರಪ್ರದೇಶದ ಕೊಲನುಪಾಕೆಯಲ್ಲಿ ನೆಲೆಸಿದ್ದವೆಂದು ನಂಬಲಾಗಿದೆ. ಈ ದ್ವಿಪೀಠಗಳು ಕಾರಣಾಂತರಗಳಿಂದ ತಮ್ಮ ಮೂಲ ಸ್ಥಳಗಳನ್ನು ವರ್ಗಾಯಿಸಿವೆ.

ಸಾಹಿತ್ಯದಲ್ಲಿ ಪಂಚಪೀಠಗಳು

ಸುಪ್ರಭೇಧಾಗಮ[a]ದಲ್ಲಿ ಪಂಚಾಚಾರ್ಯರು ಶಿವನ ಪಂಚಮುಖಗಳಿಂದ ನಂದಿ, ಭೃಂಗಿ, ವೀರ, ವೃಷಭ, ಸ್ಕಂದ ಎಂಬ ಐವರು ಗಣಾಧೀಶ್ವರರು ಐದುಗೋತ್ರ ಪುರುಷರಾಗಿ ಅವತರಿಸಿದರು. ಈ ಪಂಚಾಚಾರ್ಯರು ದಾರುಕ, ರೇಣುಕ, ಶಂಕುಕರ್ಣ, ಧೇನುಕರ್ಣ ಮತ್ತು ವಿಶ್ವಕರ್ಣ ಎಂಬ ಹೆಸರುಗಳಿಂದ ಅವತರಿಸಿದರೆಂದಿದೆ.

ಜೆ. ಥರ್‌ಸ್ಟನ್ ತನ್ನ **ದಕ್ಷಿಣ ಭಾರತದ ಜಾತಿ ಮತ್ತು ಬಣಗಳು**[b] ಎಂಬ ಇಂಗ್ಲೀಷ್ ಕೃತಿಯ ನಾಲ್ಕನೇ ಭಾಗದಲ್ಲಿ ಐವರು ಗೋತ್ರಕಾರರು ಭಾರತದ

ವಿವಿಧೆಡೆಗಳಲ್ಲಿ ಐದು ದೊಡ್ಡ ಧಾರ್ಮಿಕ ಕೇಂದ್ರಗಳನ್ನು ಸ್ಥಾಪಿಸಿದ್ದಾರೆ. ಏಕೋರಾಮ ಪೀಠ ಹಿಮಾಲಯದ ಕೇದಾರದಲ್ಲಿ, ವಿಶ್ವಾರಾಧ್ಯರ ಪೀಠ ಕಾಶಿಯಲ್ಲಿ, ಮರುಳಾಚಾರ್ಯರ ಪೀಠ ಉಜ್ಜಯಿನಿಯಲ್ಲಿ, ಪಂಡಿತಾಚಾರ್ಯರ ಪೀಠ ಶ್ರೀಶೈಲದಲ್ಲಿ, ರೇಣುಕಾಚಾರ್ಯರ ಪೀಠ ಬಾಳೆಹೊನ್ನೂರಲ್ಲಿದ್ದು ಅವುಗಳು ಇಂದಿಗೂ ಅಸ್ತಿತ್ವದಲ್ಲಿವೆ. ಈ ಪೀಠಾಧಿಪತಿಗಳು ಭೌಗೋಳಿಕವಾಗಿ ಲಿಂಗಾಯತರನ್ನು ಐದು ದೊಡ್ಡ ಭಾಗಗಳಲ್ಲಿ ವಿಂಗಡಿಸಿ ಪ್ರತಿಯೊಬ್ಬ ಪೀಠಾಧಿಪತಿಗಳು ತಮ್ಮ ಪರಿಧಿಯಲ್ಲಿ ಧಾರ್ಮಿಕ ಅಧಿಕಾರವನ್ನು ನಡೆಸುತ್ತಿರುವರು. ಆದರೂ ಇವರೆಲ್ಲರೂ ಸಾಮಾನ್ಯವಾಗಿ ಎಲ್ಲಾ ಲಿಂಗಾಯತರ ಮೇಲೆ ಅಧಿಕಾರವುಳ್ಳವರಾಗಿರುವರು. ಪ್ರತಿಯೊಂದು ಪೀಠವನ್ನು ಸಿಂಹಾಸನವೆಂದು ಕರೆಯುವರು. ಮಹತ್ವದ ಪ್ರಸಿದ್ಧ ಕೇಂದ್ರಗಳಲ್ಲಿ ಈ ಸಿಂಹಾಸನಗಳ ಉಪಮಠಗಳಿವೆ. ಅವುಗಳ ಆಡಳಿತವನ್ನು ಪಟ್ಟದ ಸ್ವಾಮಿಗಳು ನೋಡಿಕೊಳ್ಳುವರು. ಪ್ರತಿಯೊಂದು ಉಪಮಠಕ್ಕೆ ಅನೇಕ ಶಾಖಾ ಮಠಗಳಿವೆ. ಅವುಗಳನ್ನು ಗುರುಸ್ಥಳ ಮಠಗಳೆಂದು ಕರೆಯುವರು. ಈ ಶಾಖಾ ಮಠಗಳನ್ನು ಲಿಂಗಾಯತ ಜನಾಂಗವಿರುವ ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ ಎಂದಿರುವನು.

ಡಾ. ಜೆ. ಎನ್. ಪಾರ್ಕ್‌ಹಾರ್ ತನ್ನ **ಧಿ ರಿಲಿಜಿಯಸ್ ಕ್ವೆಸ್ಟ್ ಆಫ್ ಇಂಡಿಯಾ** ಎಂಬ ಇಂಗ್ಲೀಷ್ ಕೃತಿಯಲ್ಲಿ[೫] ವೀರಶೈವರ ಕಿರು ಪರಿಚಯ ಹೀಗೆ ನೀಡಿದ್ದಾನೆ. ಈ ಪರಂಪರೆಯನ್ನು ಸ್ಥಾಪಿಸಿದವರು ಐದು ಯತಿಗಳು : ಏಕೋರಾಮಾರಾಧ್ಯ, ಪಂಡಿತಾರಾಧ್ಯ, ರೇವಣರಾಧ್ಯ, ಮರುಳಾರಾಧ್ಯ ಮತ್ತು ವಿಶ್ವಾರಾಧ್ಯ. ಅವರು ಶಿವನ ಐದು ಮುಖಗಳಿಂದ ಕಾಲಕಾಲಕ್ಕೆ ಅವತರಿಸಿದರು. ಅವರು ಸ್ಥಾಪಿಸಿದ ಪೀಠಗಳೇ ಅತಿ ಪ್ರಾಚೀನ ಗುರು ಪೀಠಗಳು.

ಸಿ. ಪಿ. ಬ್ರೌನ್ ತನ್ನ ಮದ್ರಾಸ್ ಸಾಹಿತ್ಯ ಮತ್ತು ವಿಜ್ಞಾನ ಎಂಬ ಇಂಗ್ಲೀಷ್ ಪತ್ರಿಕೆಯಲ್ಲಿ[೬] ಈ ಪಂಚಪೀಠಗಳಲ್ಲಿ ನಾಲ್ಕು ಜನ ಆಚಾರ್ಯರ ಹೆಸರುಗಳು ರೇವಣಾರಾಧ್ಯ, ಮರುಳಾರಾಧ್ಯ, ಏಕೋರಾಮಾರಾಧ್ಯ ಮತ್ತು ಪಂಡಿತಾರಾಧ್ಯ ಎಂದಿವೆ. ಇವರು ನಾಲ್ಕು ಯುಗಗಳಲ್ಲಿ ಅನುಕ್ರಮವಾಗಿ ಅವತರಿಸಿದರೆಂದು ಹೇಳಿರುವರು. ಹೀಗೆ ವೀರಶೈವ ಧರ್ಮದ ಎಲ್ಲ ಜಗದ್ಗುರುಗಳ ವಿವರಗಳು ಇನ್ನಿತರ ಕೃತಿ ಮತ್ತು ಲೇಖನಗಳಲ್ಲಿ ಉಲ್ಲೇಖವಾಗಿರುವುದನ್ನು ಕಾಣಬಹುದು. ಈ ಎಲ್ಲಾ ಕೃತಿಗಳು ಮತ್ತು ವರದಿಗಳು ಪಂಚಪೀಠಗಳ ಬಗ್ಗೆ ಕೆಲವು ವಿಷಯಗಳನ್ನು ತಿಳಿಸುತ್ತವೆ.

ಉಜ್ಜಯಿನಿ ಪೀಠದ ನೆಲೆ-ಹಿನ್ನೆಲೆ

ಉಜ್ಜಯಿನಿ ಸದ್ಧರ್ಮ ಪೀಠದ ಆಚಾರ್ಯಪರಂಪರೆಯಲ್ಲಿ ಕಾಣುವ ದಾರುಕ ಮತ್ತು ಮರುಳಸಿದ್ಧರ ಹೆಸರುಗಳು ಅನೇಕ ಸಾಹಿತ್ಯ ಕೃತಿಗಳಲ್ಲಿ ಮತ್ತು

ಶಿಲಾಶಾಸನಗಳಲ್ಲಿ ಉಲ್ಲೇಖವಾಗಿವೆ. ಈ ಕೃತಿಯ **ಶಿಲಾಶಾಸನಗಳು** ಅಧ್ಯಾಯದಲ್ಲಿ ಈ ಬಗ್ಗೆ ಹೆಚ್ಚಿನ ವಿವರಗಳನ್ನು ನೀಡಲಾಗಿದೆ.

ಕ್ರಿ.ಶ. ೧೨೮೦ರ ಮರಡೀಪುರ ಶಾಸನ[೬]ದಲ್ಲಿ ರೇಣುಕ, ದಾರುಕ ಮುಂತಾದವರ ಹೆಸರುಗಳು ಉಕ್ತವಾಗಿವೆ. ಕ್ರಿ.ಶ. ೧೫೧೩ರ ಲಕ್ಷ್ಮೇಶ್ವರ ಶಾಸನ[೭]ದಲ್ಲಿ ದಾರುಕರ ಕಥೆ, ರೇವಣಸಿದ್ಧರ ಅವತಾರ, ೧೪೦೦ ವರ್ಷಗಳ ಅವರ ಜೀವನಾವಧಿ ಹಾಗೂ ಮರುಳಸಿದ್ಧರು ಲಿಂಗದಲ್ಲಿ ಉದ್ಭವವಾದ ಮತ್ತು ಇನ್ನಿತರ ವಿಷಯಗಳಿವೆ. **ದಾರುಕ ದಿಗ್ವಿಜಯ** ಗ್ರಂಥ ಮತ್ತು **ರೇಣುಕ ಭಾಷ್ಯ**ಗಳು ಸಿಕಂದರಾಬಾದಿನ ಮಾರ್ಕಂಡೇಯ ಶಾಸ್ತ್ರಿಗಳ ಗ್ರಂಥಾಲಯದಲ್ಲಿರುವುದಾಗಿ ತಿಳಿದು ಬರುತ್ತದೆ.


ಉಜ್ಜಯಿನಿ ಪೀಠವು ಮೂಲತಃ ಮಧ್ಯಪ್ರದೇಶದ ಮಾಳವದ ಮಹಾಕಾಲ ಉಜ್ಜಯಿನಿಯಲ್ಲಿ ನೆಲೆಸಿತ್ತು. ಅಲ್ಲಿಯ ನಾಗಡಾ ನಗರದಿಂದ ಸುಮಾರು ೬೦ಕಿ.ಮೀ. ಅಂತರದಲ್ಲಿ ಮತ್ತು ಉಜ್ಜಯಿನಿಯಿಂದ ಸುಮಾರು ೨ ಕಿ.ಮೀ. ದೂರದಲ್ಲಿ ಹರಿಯುವ ಕ್ಷಿಪ್ರಾನದಿ ದಂಡೆಯ ಮೇಲಿರುವ ಈಗಿನ ಸಿದ್ಧವಟ ಕ್ಷೇತ್ರವೇ ಮೂಲ ಉಜ್ಜಯಿನಿ ಪೀಠ. ಅಲ್ಲಿಯ ಆಲದ ಮರದ ಪಕ್ಕದಲ್ಲಿರುವ ಈ ಸಿದ್ಧವಟದ ಸಿದ್ಧೇಶ್ವರ ಲಿಂಗದಿಂದಲೇ ಕಲಿಯುಗದಲ್ಲಿ ಶ್ರೀಮರುಳಸಿದ್ದರು ಉದ್ಭವಗೊಂಡರು.[೮] ಈ ವೃಕ್ಷದ ಒಂದು ಕೊಂಬೆಯನ್ನು ಬೌದ್ಧ ಗಯಾದಲ್ಲಿ (ಬಿಹಾರ) ನೆಡಲಾಯಿತೆಂದು ಡಾ.ಎ.ಎಚ್.ಎಂ.ಸಿದ್ಧಲಿಂಗಯ್ಯನವರು ತಿಳಿಸಿದರು. ಹಾಗೂ ಈ ವೃಕ್ಷದ ಕೆಳಗೆ ಸಿದ್ಧಾರ್ಥನಿಗೆ ಜ್ಞಾನೋದಯವಾಗಿ ಗೌತಮ ಬುದ್ಧನಾದನೆಂದು ಹೇಳುವರು. ಶ್ರೀ ಮರುಳಸಿದ್ಧರು ದೇಶ ಸಂಚಾರ ಮಾಡುತ್ತ ವೀರಶೈವ ಮತವನ್ನು ಪ್ರಚಾರ ಮಾಡಿದರು. ಕೊನೆಗೆ ಶ್ರೀಮುಕ್ತಿಮುನಿಗಳಿಗೆ ಪಟ್ಟವನ್ನು ಕಟ್ಟಿ ವಟಸಿದ್ದೇಶ್ವರ[೯] ಲಿಂಗದಲ್ಲಿಯೇ ಅವರು ಲೀನರಾದರು.

ಒಟ್ಟಾರೆ ೧೧೧ ಜಗದ್ಗುರುಗಳು ಶ್ರೀ ಉಜ್ಜಯಿನಿ ಸದ್ಧರ್ಮ ಪೀಠವನ್ನು ಅಲಂಕರಿಸಿ ವೀರಶೈವ ಮತದ ಉದ್ಧಾರಕ್ಕೆ ಕಾರಣರಾಗಿರುವರು. ಶ್ರೀಪೀಠದ ಸಾಂಸ್ಕೃತಿಕ ಚಟುವಟಿಕೆಗಳು ವೈವಿಧ್ಯಮಯವಾಗಿವೆ.

ಉಜ್ಜಯಿನಿಗೆ ಮಾರ್ಗಗಳು


ಉಜ್ಜಯಿನಿ ಸದ್ಧರ್ಮ ಪೀಠವು ಇಂದು ಕರ್ನಾಟಕದ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಉಜ್ಜಯಿನಿ ಪಟ್ಟಣದಲ್ಲಿ ಶೋಭಿಸುತ್ತಿದೆ. ಈ ಉಜ್ಜಯಿನಿ ಪಟ್ಟಣವು ದಾವಣಗೇರಿಯಿಂದ ೭೪ಕಿ.ಮೀ, ಕೊಟ್ಟೂರಿನಿಂದ ೧೮ಕಿ.ಮೀ, ಹೊಸಪೇಟೆಯಿಂದ ೬೪ಕಿ.ಮೀ., ಕೂಡ್ಲಿಗಿಯಿಂದ ೨೨ ಕಿ.ಮೀ. ಮತ್ತು ಹರಪನಹಳ್ಳಿಯಿಂದ ೪೧ ಕಿ.ಮೀ. ಅಂತರದಲ್ಲಿದೆ. ಈ ಎಲ್ಲಾ ನಗರ-ಪಟ್ಟಣದ

ಕಡೆಗಳಿಂದ ಉಜ್ಜಯಿನಿಗೆ ಮಾರ್ಗಗಳಿವೆ. ಕೊಟ್ಟೂರಿನಲ್ಲಿ ರೇಲ್ವೆ ನಿಲ್ದಾಣವಿದ್ದು ಅಲ್ಲಿಂದ ಉಜ್ಜಯಿನಿಗೆ ಬಸ್ ಮಾರ್ಗವಿದೆ.



ಉಜ್ಜಯಿನಿ ಭೌಗೋಲಿಕ ಪರಿಸರ

ಉಜ್ಜಯಿನಿಯ ದಕ್ಷಿಣಕ್ಕೆ ವಿಶಾಲ ಕೆರೆಯಿದ್ದು ಅಲ್ಲಿಂದ ಸ್ವಲ್ಪ ದೂರದಲ್ಲಿ ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ಎರಡು ಗುಡ್ಡಗಳಿವೆ. ಪಶ್ಚಿಮ ದಿಕ್ಕಿನ ಗುಡ್ಡವನ್ನು ಕರುವಿನ ಕಲ್ಲುಗುಡ್ಡವೆಂತಲೂ ಮತು ಪೂರ್ವ ದಿಕ್ಕಿನ ಗುಡ್ಡವನ್ನು ಭೈರವನ ಗುಡ್ಡ ಎಂದು ಕರೆಯುವರು. ಸುತ್ತಲಿನ ಭೂಪ್ರದೇಶವು ಸ್ವಲ್ಪ ಏರು ತಗ್ಗುಗಳಿಂದ ಕೂಡಿದ್ದರೂ ಸಮತಟ್ಟಾಗಿದ್ದು ಪೂರ್ವಕ್ಕೆ ಸ್ಥಳೀಯ ಮಾಗಾಣಿಯಿದೆ. ಅಲ್ಲಿಯ ಭೂಮಿ ಕಪ್ಪು, ಕಪ್ಪು ಮಿಶ್ರಿತ ಕೆಂಪು ಮತ್ತು ಕೆಂಪು ವರ್ಣದ ಮಣ್ಣಿನಿಂದ ಕೂಡಿದೆ. ಈ ಊರ ಆಗ್ನೇಯಕ್ಕೆ ನಾಗೇನಹಳ್ಳಿ-ಮಂಗಳಾಪುರ, ಪಶ್ಚಿಮಕ್ಕೆ ತೂಲಹಳ್ಳಿ-ಕಾಳಾಪುರ,



ದಕ್ಷಿಣಕ್ಕೆ ಗಡಿಮಾಕುಂಟೆ ಮತ್ತು ಉತ್ತರಕ್ಕೆ ಹಾರಕನಾಳ-ಮಾಚೇನಹಳ್ಳಿಗಳಿವೆ. ಈ ಊರಿನಲ್ಲಿ ಅನೇಕ ಬಾವಿಗಳಿವೆ. ತಂಗಲು ಶ್ರೀಪೀಠದಲ್ಲಿ ವಸತಿ ವ್ಯವಸ್ಥೆಯಿದೆ ಮತ್ತು ಜಿಲ್ಲಾ ಪಂಚಾಯತಿಯ ಒಂದು ಚಿಕ್ಕ ವಿಶ್ರಾಂತಿ ಗೃಹವೂ ಇದೆ.

ಶ್ರೀ ಪೀಠದ ಸ್ಥೂಲ ದರ್ಶನ

ಉಜ್ಜಯಿನಿ ಸದ್ಧರ್ಮ ಪೀಠ ತುಂಬಾ ಶೋಭಾಯಮಾನವಾಗಿದೆ. ಶ್ರೀಪೀಠಕ್ಕೆ ವಿಶಾಲ ಸಮುಚ್ಚಯವಿದ್ದು ಅದರಲ್ಲಿ ಶ್ರೀ ಮರುಳಸಿದ್ಧ ದೇವಾಲಯ ಮತ್ತು ಶ್ರೀಪೀಠದ ಭವ್ಯ ಮಠಗಳಿವೆ. ಶ್ರೀ ಮರುಳಸಿದ್ಧರು ಶ್ರೀ ಪೀಠದ ಸ್ಥಾಪನಾಚಾರ್ಯರು. ಇವುಗಳಲ್ಲದೆ ಅಲ್ಲಿ ಗೌರಮ್ಮ, ಬಂಗಾರದ ಬಸವಣ್ಣ, ನಂದಿ ದೇವಾಲಯಗಳು ಮತ್ತು ಶ್ರೀ ಸಿದ್ಧಲಿಂಗ ಜಗದ್ಗುರುಗಳ ಸಮಾಧಿ ಇತ್ಯಾದಿ ಸ್ಮಾರಕ ಕಟ್ಟಡಗಳು ರಾರಾಜಿಸುತ್ತಿವೆ. ಶ್ರೀಪೀಠದ ಮಠವು ಪೂಜ್ಯ ಜಗದ್ಗುರುಗಳ ವಾಸಸ್ಥಳ ಮತ್ತು ಅದೊಂದು ಸಾಂಸ್ಕೃತಿಕ ಕೇಂದ್ರ. ಶ್ರೀಮಠದ ಒಳಗಡೆ ಜಗದ್ಗುರುಗಳ ಶಿವಪೂಜಾ ಮಂದಿರ, ಅವರ ವಸತಿ ನಿಲಯ, ದಾರುಕ ಮಂದಿರ, ಗೋಶಾಲೆ, ಪಂಚಾಚಾರ್ಯರ ಸಭಾಭವನ ಮತ್ತು ನ್ಯಾಯಾಲಯಗಳಿವೆ. ಶ್ರೀ ಮರುಳಸಿದ್ಧ ದೇವಾಲಯದಲ್ಲಿರುವ ಯತಿವರ್ಯರ ಮತ್ತು ನಿಂತ ನಂದಿಯ ಶಿಲ್ಪಗಳು, ಭುವನೇಶ್ವರಿ, ಶ್ರೀಮಠದ ಮರದ ಮಹಾದ್ವಾರ ಮತ್ತು ಕಂಬಗಳು ಕುಸುರಿ ಗೆಲಸದ ಕೆತ್ತನೆಯಿಂದ ಕೂಡಿವೆ. ಇಲ್ಲಿಯ ಕಲಾ ವೈಭವವು ಕರ್ನಾಟಕದ ವಾಸ್ತು ಶಿಲ್ಪಕಲೆಯ ಚರಿತ್ರೆಯಲ್ಲಿ ವೈಶಿಷ್ಟ್ಯಪೂರ್ಣವೆನಿಸಿದೆ.

ಹಬ್ಬ-ಉತ್ಸವಗಳು : ಶ್ರೀ ಪೀಠದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಶ್ರೀ ಮರುಳಸಿದ್ಧ ಸ್ವಾಮಿಯ ರಥೋತ್ಸವ, ಶಿಖರದ ತೈಲಾಭಿಷೇಕ, ಭಾರತ ಹುಣ್ಣಿಮೆಯ ಸಂದರ್ಭದಲ್ಲಿ ನಡೆವ ಶ್ರೀಮರುಳಸಿದ್ಧ ಸ್ವಾಮಿಯ ಒಂಬತ್ತು ಪಾದಗಟ್ಟೆಗಳ ಪ್ರವಾಸ, ಶ್ರೀ ಮರುಳಸಿದ್ಧ-ಗೌರಮ್ಮರ ವಿವಾಹ, ಶ್ರೀಮರುಳಸಿದ್ಧಸ್ವಾಮಿಯ ನಿತ್ಯ ಪೂಜೆ-ಪುರಸ್ಕಾರ, ಕಾರ್ತಿಕೋತ್ಸವ, ನೂಲ ಹುಣ್ಣಿಮೆ, ಶ್ರೀ ದಾರುಕ-ಶ್ರೀಸಿದ್ಧಲಿಂಗ ಜಗದ್ಗುರುಗಳವರ ಜಯಂತಿ, ಇತ್ಯಾದಿ ಹಬ್ಬ-ಉತ್ಸವಗಳ ಆಚರಣೆಗಳು ವಿಶಿಷ್ಠ ಸ್ಥಾನವನ್ನು ಗಳಿಸಿವೆ.

ಜಗದ್ಗುರುಗಳು

ಶ್ರೀಪೀಠದ ಜಗದ್ಗುರುಗಳು ಜಗದಗುರುಗಳಾಗಿದ್ದಾರೆ. ಅವರು ಧರಿಸುವ ವೇಷಭೂಷಣದಲ್ಲಿ ಕಿರೀಟಧಾರಣೆಯು ವಿಶೇಷ ಗಮನವನ್ನು ಸೆಳೆಯುತ್ತದೆ. ಈ ಕಿರೀಟಧಾರಣೆ ಪೂಜ್ಯ ಜಗದ್ಗುರುಗಳು ರಾಜಗುರುಗಳೆಂಬುದರ ಸಂಕೇತವಾಗಿದೆ. ಶ್ರೀಪೀಠದ ಜಗದ್ಗುರುಗಳ ವಂಶಾನುಚರಿತ್ರೆ ವಿಸ್ತೃತವಾಗಿದ್ದು ಅವರ ಅಡ್ಡಪಲ್ಲಕ್ಕಿ

ಉತ್ಸವಗಳು ನಿರಂತರವಾಗಿ ನಾಡಿನಾದ್ಯಂತದಲ್ಲಿ ಅದ್ದೂರಿಯಿಂದ ಭಕ್ತಿಪೂರ್ವಕವಾಗಿ ಜರುಗುತ್ತವೆ. ಶ್ರೀ ಪೀಠದ ಭಕ್ತರನ್ನು ಸದಾ ಜಾಗ್ರತಗೊಳಿಸಲು ಶ್ರೀ ಪೀಠವು ೨೮೦೦೦ ಶಾಖಾ ಮಠಗಳನ್ನು ಸ್ಥಾಪಿಸಿದೆ.

ಶೈಕ್ಷಣಿಕ ಕ್ಷೇತ್ರದಲ್ಲಿ ಶ್ರೀ ಪೀಠವು ತನ್ನದೇ ಆದ ಕೊಡುಗೆಯನ್ನು ನೀಡುತ್ತಿದೆ. ಶ್ರೀಸಾಮಾನ್ಯರಲ್ಲದೆ ಹಿಂದುಳಿದ ಬಡ ವಿದ್ಯಾರ್ಥಿಗಳ ಕಲ್ಯಾಣಾಭ್ಯುದಯಕ್ಕಾಗಿ ಶ್ರೀಪೀಠವು ಅನೇಕ ವಿದ್ಯಾಕೇಂದ್ರಗಳನ್ನು ವಿವಿಧೆಡೆಗಳಲ್ಲಿ ತೆರೆದು ಅಮೋಘ ಸೇವೆಯನ್ನು ಸಲ್ಲಿಸುತ್ತಿದೆ.

ಉಜ್ಜಯಿನಿಯಲ್ಲಿರುವ ದೇವಾಲಯಗಳು ಇತ್ಯಾದಿ

ಉಜ್ಜಯಿನಿ ಪಟ್ಟಣದಲ್ಲಿ ಅನೇಕ ವೀರಶೈವ ಮಠಗಳಿವೆ, ದೇವಾಲಯಗಳಿವೆ, ಬಾವಿಗಳಿವೆ ಹಾಗೂ ಶ್ರೀ ಪೀಠದ ಮತ್ತು ಇನ್ನಿತರ ಪೀಠಗಳ ಜಗದ್ಗುರುಗಳ ಗದ್ದುಗೆಗಳಿವೆ. ಈ ಊರಿಗೆ ಬರಗಾಲ ಬಂದರೆ ಅದನ್ನು ನಿಭಾಯಿಸಲು ಸ್ಥಳೀಯ ಮಸ್ಲೆತ್ತಿ ಬಸಪ್ಪನ ಮಳೆ ತರಿಸುವ ಸ್ಥಳೀಯ ಸಂಪ್ರದಾಯ ವೈಶಿಷ್ಟ್ಯಪೂರ್ಣವೆನಿಸಿದೆ.

ಶ್ರೀಪೀಠದ ವಾಸ್ತುಶಿಲ್ಪದ ವೈವಿಧ್ಯವನ್ನು ಮತ್ತು ಅದರ ವಿಶಿಷ್ಟ ಸಾಂಸ್ಕೃತಿಕ ಚಟುವಟಿಕೆಗಳನ್ನು ಗಮನಿಸಿ **ಉಜ್ಜಯಿನಿ ಪೀಠವನ್ನು ಒಳಗೆನೋಡು ಹಂಪಿಯನ್ನು ಹೊರಗೆನೋಡು** ಎಂಬ ನಾಣ್ಣುಡಿ ಹುಟ್ಟಿಕೊಂಡಿದೆ. ಶ್ರೀ ಪೀಠದ ಸಿರಿತನವನ್ನು ಗಮನಿಸಿ ಉಜ್ಜಯಿನಿ ಪೀಠದ ಸಂಪತ್ತನ್ನು ನೋಡೆಂದು ಉದ್ಧರಿಸಲಾಗುತ್ತದೆ.

ಈ ಮುಂಚಿನ ಸಂಶೋಧನಾ ಕಾರ್ಯಗಳು

ಇಷ್ಟೆಲ್ಲ ಹಿನ್ನೆಲೆಯುಳ್ಳ ಶ್ರೀಪೀಠದ ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ವಾಸ್ತು ವೈವಿಧ್ಯ ಕುರಿತು ಈ ಮುಂಚೆ ಕೆಲವು ಸಂಶೋಧನಾ ಕಾರ್ಯಗಳು ನಡೆದಿವೆ. ಅವುಗಳಲ್ಲಿ ಕೆಲವು ಮಹತ್ವದ ಕೆಲಸ-ಕಾರ್ಯಗಳನ್ನು ಇಲ್ಲಿ ಪರಿಚಯಿಸಲಾಗಿದೆ. ಶ್ರೀ ಪೀಠದ ಮರುಳಸಿದ್ಧ ದೇವಾಲಯ ಕುರಿತು ಅನೇಕ ಬಿಡಿ ಲೇಖನಗಳು ಹೊರಬಂದಿವೆ. ಆದರೆ ಅವುಗಳಲ್ಲಿ ಶ್ರೀಪೀಠದ ಸಮಗ್ರ ವಾಸ್ತುಶಿಲ್ಪದ ಮಾಹಿತಿಯಿಲ್ಲ.

ಹಿರೇಹಡಗಲಿ ಪುರಾಣಿಕ ಮಠದ ವಿರೂಪಾಕ್ಷಶಾಸ್ತ್ರಿಯವರು ೧೯೪೪ರಲ್ಲಿ **ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗೇಶ್ವರ ವಿಜಯ** ಎಂಬ ಕೃತಿಯನ್ನು ಮತ್ತು ೧೯೫೩ರಲ್ಲಿ **ಶ್ರೀ ಜಗದ್ಗುರು ಪಂಚಪೀಠಗಳ ಪರಿಚಯ** ಎಂಬ ಕೃತಿಯನ್ನು ಬರೆದಿದ್ದಾರೆ. ಈ ಮೇಲಿನ ಎರಡನೆಯ ಕೃತಿ ಮತ್ತು ಉಜ್ಜಯನಿ ಸದ್ಧರ್ಮ ಪೀಠದ **ಸದ್ಧರ್ಮಪ್ರಭಾ** ಪತ್ರಿಕೆಯಲ್ಲಿ ಉಜ್ಜಯನಿ ಪೀಠದ

ಜಗದ್ಗುರುಗಳ ವಂಶಾನುಚರಿತ್ರೆಯು ಪ್ರಕಟಗೊಂಡಿದೆ. ಕಾಶಿ ಜಗದ್ಗುರುಗಳಾದ ಡಾ.ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು **ವೀರಶೈವ ಪಂಚಪೀಠ ಪರಂಪರೆ** ಎಂಬ ಕೃತಿಯನ್ನು ರಚಿಸಿದ್ದು, ಈ ಕೃತಿಯಲ್ಲಿ ಕ್ರಿ.ಶ.೨೦೦೧ರವರೆಗಿನ ಪಂಚಪೀಠಾಚಾರ್ಯರ ಸ್ಥೂಲ ವಿವರಗಳಿವೆ.

ವಿಶ್ವಬಂಧು ಮರುಳಸಿದ್ಧ ಕೃತಿಯಲ್ಲಿ ಶ್ರೀ ಮರುಳಸಿದ್ಧಸ್ವಾಮಿಯ ಪವಾಡ ಮತ್ತು ಇತರ ವಿಷಯಗಳ ಬಗ್ಗೆ ಮಾಹಿತಿಗಳಿವೆ. ದೇವಕವಿ ರಚಿಸಿದ ಮರುಳಸಿದ್ಧ ಕಾವ್ಯಗ್ರಂಥವನ್ನು ಅ.ನ.ಕೃ. ಅವರು ಸಂಪಾದನೆ ಮಾಡಿ ಪ್ರಕಟಿಸಿದ್ದಾರೆ. ಬಳಿಕ ಲಿಂ॥ ಶ್ರೀಶೈಲ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು **ಮರುಳಸಿದ್ಧಾಂಕದ ವಿಮರ್ಶೆ**ಯನ್ನು ಬರೆದರು. ಈ ಕೃತಿಯಲ್ಲಿ ಅ.ನ.ಕೃ. ಅವರು ಮರುಳಸಿದ್ಧರ ಬಗ್ಗೆ ಹೇಳಿದ ಅನೇಕ ವಿಷಯಗಳನ್ನು ಪೂಜ್ಯರು ಪರಾಮರ್ಶೆಗೆ ಒಳಪಡಿಸಿದ್ದಾರೆ.

ಶ್ರೀಮರುಳಸಿದ್ಧರ ಕುರಿತು ಕೆಲವು ಲೇಖನ ಮತ್ತು ಕಾವ್ಯಗಳು ಪ್ರಕಟವಾಗಿವೆ. ಅವುಗಳಲ್ಲಿ ಹೂಲಿ ನಂದೀಶ ಕವಿ ವಿರಚಿತ **ಮರುಳಸಿದ್ಧ ವಿಜಯ**, ದೇವ ಕವಿಯ **ಮರುಳ ಸಿದ್ಧಕಾವ್ಯ** , ನಿಜಗುಣಾರಾಧ್ಯರ **ವಿವೇಕಚಿಂತಾಮಣಿ**ಯ **ಶಿವಯೋಗ ಪ್ರಕರಣ**, ನಾಗಭೂಷಣ ಅವರ **ಸಿದ್ಧೇಶ್ವರಸಾಂಗತ್ಯ**, ತಿರುಕೂರ ಸೋಮನ **ಚತುರಾಚಾರ್ಯ ಪ್ರಬಂಧ** ಅಥವಾ **ಪುರಾಣ**ಗಳು ಮುಖ್ಯವೆನಿಸಿವೆ. ಈ ಕೃತಿಗಳಲ್ಲಿ ಶ್ರೀ ಮರುಳಸಿದ್ಧರ ಕುರಿತು ವಿಭಿನ್ನ ಅಂಶಗಳಿವೆ. ಅವರ ಮೂಲ, ಅವರು ಮಾಡಿದ ಪ್ರವಾಸ, ಅವರು ಮೆರೆದ ಪವಾಡ, ಅವರ ಕಾಲಮಾನ ಮತ್ತು ಇನ್ನಿತರ ವಿಷಯಗಳ ಬಗ್ಗೆ ವಿಭಿನ್ನ ಸಂಗತಿಗಳಿವೆ.

ಉಜ್ಜಯಿನಿ ಪೀಠದ ಕೆಲವು ಶಿಲಾಶಾಸನಗಳು ಮೊದಲು **ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್** ಸಂಪುಟ-ಒಂಬತ್ತು ಭಾಗ-೧ ಮತ್ತು ೨ ರಲ್ಲಿ ಪ್ರಕಟವಾಗಿವೆ. ಆ ಸಂಪುಟದ ಮೊದಲ ಭಾಗದಲ್ಲಿ ಶ್ರೀಪೀಠದ ಮರುಳಸಿದ್ಧ ದೇವಾಲಯದ ಸಭಾಮಂಟಪದ ಒಂದು ಸ್ತಂಭಶಾಸನದ ಪಾಠವು ಹೆಚ್ಚು ತ್ರುಟಿತವಾಗಿದೆ ಎಂದು ಪ್ರಕಟಿಸಲಾಗಿದೆ. ಈ ಗ್ರಂಥದ ಲೇಖಕರು ೧೯೭೭ರಲ್ಲಿ ಈ ಶಾಸನ ಹಾಗೂ ಅಪ್ರಕಟಿತ ಇನ್ನೆರಡು ಶಿಲಾಶಾಸನಗಳ ಪ್ರತಿಗಳನ್ನು ತೆಗೆದು ಓದಿದರು. ಪ್ರಕಟಿತ ಕಂಬ ಶಾಸನದ ಪಾಠ ಪೂರ್ಣವಾಗಿ ತಿಳಿದು ಬಂದಿತು. ಅದರ ಬಗ್ಗೆ ಒಂದು ಲೇಖನವನ್ನು ಬರೆದು ಮೈಸೂರು ವಿಶ್ವವಿದ್ಯಾಲಯದ **ಮಾನವಿಕ ಕರ್ನಾಟಕ**ದಲ್ಲಿ ಪ್ರಕಟಿಸಿದರು. ಇನ್ನುಳಿದ ಅಲ್ಲಿಯ ಶಿಲಾಶಾಸನಗಳನ್ನು ಮತ್ತು ಶ್ರೀಪೀಠದ ಮರುಳಸಿದ್ಧ ದೇವಾಲಯದ ವಾಸ್ತುಶಿಲ್ಪವನ್ನು ಅಧ್ಯಯನ ಮಾಡಿ ಈ ಕುರಿತು ಪ್ರಬಂಧಗಳನ್ನು ಲೇಖಕರು ತಯಾರಿಸಿ, ೧೯೮೩ ಮತ್ತು ೧೯೮೪ರಲ್ಲಿ ಶ್ರೀ ಪೀಠದ ಜ್ಞಾನಗುರು

ವಿದ್ಯಾಪೀಠದ ವತಿಯಿಂದ ಎರಡು ಸಲ ಏರ್ಪಡಿಸಿದ ವಿಚಾರ ಸಂಕಿರಣಗಳಲ್ಲಿ ಅವುಗಳನ್ನು ಮಂಡಿಸಿದರು. ಲೇಖಕರು ಶ್ರೀ ಪೀಠದ ದೇವಾಲಯ, ಮಠ ಮತ್ತು ಶಿಲ್ಪ ವೈಭವದ ಹಿರಿಮೆಯನ್ನು ಪರಿಚಯಿಸುವ ಛಾಯಾ ಚಿತ್ರಗಳುಳ್ಳ' ಕಿರು ಕೃತಿಯೊಂದನ್ನು ಸಂಪಾದಿಸಿದ್ದು ಅದು ಡಾ.ಎಂ.ಶಿವಮೂರ್ತಿ ಅವರ ಆರ್ಥಿಕ ನೆರವಿನಿಂದ[೧೯] ಪ್ರಕಟಗೊಂಡಿದೆ. ಅದರ ಶೀರ್ಷಿಕೆ **ಉಜ್ಜಯನಿ ಒಳನೋಡು ಹಂಪಿ ಹೊರನೋಡು** ಎಂದಿದೆ. ಶ್ರೀ ಪೀಠದ ಮರುಳಸಿದ್ಧ ದೇವಾಲಯದಲ್ಲಿರುವ ಚತುರ್ಭುಜಧಾರಿ ಯತಿಯ ಶಿಲ್ಪ ಒಂದನ್ನು ಬಸವಣ್ಣನ ಶಿಲ್ಪವೆಂದು ಅರ್ಥೈಸಿ ಬಸವ ಜಯಂತಿಯ ದಿವಸ ಪ್ರಜಾವಾಣಿ ದಿನ ಪತ್ರಿಕೆ(೨೫-೪-೧೯೮೨) ಯಲ್ಲಿ ಪ್ರಕಟಿಸಲಾಗಿತ್ತು.[೨೦] ಈ ಶಿಲ್ಪವು ಬಸವಣ್ಣನವರದು ಎಂದು ಸಮರ್ಥಿಸಲು ಯಾವ ಪುರಾವೆಗಳು ಅದರಲ್ಲಿ ಇರಲಿಲ್ಲ. ಆದ್ದರಿಂದ ಅಲ್ಲಿರುವ ಇನ್ನಿತರ ಯತಿಗಳ ಶಿಲ್ಪಗಳನ್ನೆಲ್ಲ ಕೂಲಂಕಷವಾಗಿ ಈ ಕೃತಿಯ ಲೇಖಕರು ಪರಾಮರ್ಶಿಸಿ ಒಂದು ಲೇಖನವನ್ನು ಗದುಗಿನ 'ಲಿಂಗನುಡಿ' ಪತ್ರಿಕೆಯಲ್ಲಿ[೨೧] ಪ್ರಕಟಿಸಿದರು.

ಪ್ರಸ್ತುತ ಕೃತಿಯಲ್ಲಿ ಶಿಲಾಶಾಸನಗಳ ಕುರಿತು ಒಂದು ಅಧ್ಯಾಯವಿದೆ. ಅಲ್ಲಿ ಉಜ್ಜಯಿನಿ ಗ್ರಾಮದ ಮತ್ತು ಶ್ರೀಪೀಠದ ಹಾಗೂ ಶ್ರೀಪೀಠಕ್ಕೆ ಸಂಬಂಧಿಸಿದ ಜಗದ್ಗುರುಗಳ ಉಲ್ಲೇಖವುಳ್ಳ ಇನ್ನಿತರ ಕಡೆಯ ಶಿಲಾಶಾಸನಗಳು ಸಮಾವೇಶಗೊಂಡಿವೆ. ಶ್ರೀ ಪೀಠದ ಶಿಲಾಶಾಸನಗಳಲ್ಲಿ ಶ್ರೀಮರುಳಸಿದ್ಧೇಶ್ವರ ಸ್ವಾಮಿಯ ಉಲ್ಲೇಖವು ಸು.ಕ್ರಿ.ಶ.೧೬ನೇ ಶತಮಾನದಿಂದ ಗೋಚರಿಸುವುದು. ಬೇರೆ ಕಡೆಗಳ ಈ ಕಾಲ ಪೂರ್ವದ ಅಂದರೆ ಕ್ರಿ.ಶ.೧೨೮೦ ಮತ್ತು ಕ್ರಿ.ಶ.೧೫೧೩ರ ಶಾಸನಗಳಲ್ಲಿ ದಾರುಕ, ಮರುಳಸಿದ್ಧರ ಉಲ್ಲೇಖಗಳಿವೆ. ಸ್ಥಳೀಯ ಶಾಸನಗಳಲ್ಲಿ ಈ ಗ್ರಾಮದ ಹೆಸರು 'ವುಜ್ಜೈನಿ', ಉಜ್ಜೈನಿ (ಕ್ರಿ.ಶ. ೧೨೬೮) ಮತ್ತು ಕೈಫಿಯತ್ತಿನಲ್ಲಿ ಉಜಯನಿ ಸೀಮೆ ಎಂದು ಬಂದಿದೆ.

ಶ್ರೀಪೀಠದ ಮರುಳಸಿದ್ಧ ದೇವಾಲಯದ ವಾಸ್ತುಶಿಲ್ಪ ಕುರಿತು ಕೆಲವು ವಿವರಗಳು ಅನೇಕ ಬಿಡಿ ಲೇಖನಗಳು ಬೇರೆ ಬೇರೆಯವರಿಂದ ಬಂದಿವೆ. ಸಿ.ಎಸ್. ಪಾಟೀಲ ಅವರು ಶ್ರೀ ಮರುಳಸಿದ್ಧ ದೇವಾಲಯದ ಸ್ಥೂಲ ವಿವರಗಳನ್ನು ತಮ್ಮ ಕೃತಿಯಲ್ಲಿ[೨೨] ನೀಡಿರುವರು. **ಮುನ್ನಡೆವ ಕೂಡ್ಲಿಗಿ ತಾಲೂಕ** ಎಂಬ ಕೃತಿಯಲ್ಲಿ[೨೩] ಉಜ್ಜಯಿನಿ ಕುರಿತು ಒಂದು ಲೇಖನವಿದೆ. ಅದರಲ್ಲಿ ಉಜ್ಜಯಿನಿಯ ಹೆಸರನ್ನಾಗಲೀ ಅಥವಾ ಮರುಳಸಿದ್ಧರ ಹೆಸರನ್ನಾಗಲಿ ಹೇಳುವ ಪ್ರಾಚೀನ ದಾಖಲೆಗಳು ಅಲ್ಲಿಲ್ಲವೆಂದು ಪ್ರತಿಪಾದಿಸಲಾಗಿದೆ. ಈ ವಿಷಯಗಳು ಅಲ್ಲಿಯ ಶಾಸನಗಳಲ್ಲಿ ಉಲ್ಲೇಖವಾಗಿರುವುದನ್ನು ಈ ಕೃತಿಯ ಶಾಸನಗಳ ಅಧ್ಯಾಯದಲ್ಲಿ ಕಾಣಬಹುದು. **ಶಿವತತ್ವ ರತ್ನಾಕರ**[೨೪] ಕೃತಿಯಲ್ಲಿ ಕೆಳದಿ ವೀರಮ್ಮಾಜಿಯ ಸಮಾಧಿಯು ಉಜ್ಜಯಿನಿ

ಪೀಠದಲ್ಲಿದೆ ಎಂದು ಸೂಚಿಸಿದೆ. ಈ ಸೂಚನೆಯನ್ನು ಹಿಡಿದು ಉಜ್ಜಯಿನಿಯ ಗ್ರಾಮದಲ್ಲಿರುವ ನಂದಿಸ್ತಂಭದ ಮುಂದಿನ ಶಾಸನವನ್ನು ಆಧರಿಸಿ ಅದು ಆ ರಾಣಿಯ ಸಮಾಧಿಯೆಂದು ಪ್ರಸಿದ್ಧಗೊಳಿಸಲಾಗಿತ್ತು.[೨೫] ಆದರೆ ಈ ಶಾಸನವು ನಂದಿ ಸ್ತಂಭದಿಂದ ಪ್ರತ್ಯೇಕವಾಗಿದೆ. ಹಾಗೂ ಈ ಶಾಸನದಲ್ಲಿ ಉಜ್ಜಯಿನಿಯ ಪೂಜಾರಿಯೊಬ್ಬನ ಪತ್ನಿಯು ಜೀವಂತ ಸಮಾಧಿ ಹೋದಳೆಂಬ ಮಾಹಿತಿಯಿದೆ. ಅದನ್ನು ಈ ಕೃತಿಯ **ಶಾಸನಗಳ** ಅಧ್ಯಾಯ ಭಾಗದಲ್ಲಿ ನೋಡಬಹುದು. ಹೀಗಾಗಿ ಕೆಳದಿ ವೀರವಮ್ಮಾಜಿಯ ಸಮಾಧಿಯನ್ನು ಉಜ್ಜಯಿನಿಯಲ್ಲಿ ಇನ್ನೂ ಹುಡುಕಬೇಕಾಗಿದೆ.

ಶ್ರೀಪೀಠದ ಮರುಳಸಿದ್ಧ ದೇವಾಲಯದ ಶಿಖರದ ತೈಲಾಭಿಷೇಕವು ಜರ್ಮಲಿ ಪಾಳೆಯಗಾರರ ತೈಲದಿಂದ ಆರಂಭವಾಗುತ್ತದೆ. ಈ ಪಾಳೆಯಗಾರರಿಗೂ - ಶ್ರೀ ಉಜ್ಜಯಿನಿ ಸದ್ಧರ್ಮಪೀಠಕ್ಕೂ[೨೬] ಇರುವ ಸಾಂಸ್ಕೃತಿಕ ಸಂಬಂಧದ ಕೆಲವು ವಿಷಯಗಳು ಪ್ರಸ್ತುತ ಅಧ್ಯಯನದಲ್ಲಿ ಬರುತ್ತವೆ.

ಉದ್ದೇಶ

ಮೇಲೆ ತಿಳಿಸಿದ ಈ ಎಲ್ಲಾ ಸಂಶೋಧನಾತ್ಮಕ ಲೇಖನ-ಕೃತಿಗಳನ್ನು ಗಮನಿಸಿದಾಗ ಶ್ರೀ ಉಜ್ಜಯಿನಿ ಸದ್ಧರ್ಮ ಪೀಠದ ಸಮಗ್ರ ಸಾಂಸ್ಕೃತಿಕ ಚರಿತ್ರೆಯಲ್ಲಿ ಕೆಲವೇ ಮುಖಗಳು ಸ್ಥೂಲವಾಗಿ ಪ್ರಕಟಗೊಂಡಿರುವುದು ತಿಳಿದು ಬರುತ್ತದೆ. ಆದರೆ ಶ್ರೀಪೀಠದ ಸಮಗ್ರ ಸಾಂಸ್ಕೃತಿಕ ಇತಿಹಾಸವು ಒಂದೆಡೆ ಕಾಣುವುದಿಲ್ಲ. ಈ ಕೊರತೆಯನ್ನು ತುಂಬಲು ಪ್ರಸ್ತುತ ಅಧ್ಯಯನವನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಏಕೆಂದರೆ ಇದರಲ್ಲಿ ಶ್ರೀಪೀಠದ ಸಮಗ್ರ ಸಾಂಸ್ಕೃತಿಕ ಇತಿಹಾಸವನ್ನು ಒಂದು ಕಡೆ ಪರಿಚಯಿಸುವ ಪ್ರಯತ್ನ ಮಾಡಲಾಗಿದೆ. ಈ ಕುರಿತು ಶ್ರೀ ಪೀಠದಲ್ಲಿ ಕ್ಷೇತ್ರಕಾರ್ಯವನ್ನೂ ನಡೆಸಿ ಉಪಯುಕ್ತ ಆಕರಗಳನ್ನು ಮತ್ತು ಮಾಹಿತಿಗಳನ್ನು ಅಧ್ಯಯನಕ್ಕಾಗಿ ಸಂಗ್ರಹಿಸಲಾಗಿದೆ.

ಪ್ರಸ್ತುತ ಕೃತಿಯಲ್ಲಿ ಮೇಲೆ ವಿವರಿಸಿದ ಶ್ರೀ ಪೀಠದ ಸಾಂಸ್ಕೃತಿಕ ಪರಂಪರೆಯಲ್ಲಿ ಶ್ರೀಪೀಠದ ಶಿಲಾಶಾಸನಗಳು, ಸ್ಮಾರಕಗಳು ವಾಸ್ತು-ಶಿಲ್ಪ, ಶ್ರೀ ಪೀಠದ ಜಗದ್ಗುರುಗಳ ಪಟ್ಟವಲ್ಲರಿ, ಶ್ರೀಮರುಳಸಿದ್ಧ ಸ್ವಾಮಿಯ ಹಬ್ಬ-ಉತ್ಸವಗಳು, ಶ್ರೀಮರುಳಸಿದ್ಧ ಸ್ವಾಮಿಯ ಒಂಬತ್ತು ಪಾದಗಟ್ಟೆಗಳು, ಶ್ರೀ ಮರುಳಸಿದ್ಧಸ್ವಾಮಿಯ ಶಿಖರದ ತೈಲಾಭಿಷೇಕ, ಜರ್ಮಲೆ ಪಾಳೆಯಗಾರರ ಚರಿತ್ರೆ, ಶ್ರೀ ಪೀಠದ ಶಾಖಾ ಮಠಗಳು, ಶ್ರೀ ಪೀಠದ ನ್ಯಾಯಾಲಯ, ಶೈಕ್ಷಣಿಕ ಕಾರ್ಯಗಳು, ಶ್ರೀ ಪೀಠದ ಸಿಬ್ಬಂದಿ-ಆಯಗಾರರು ಮುಂತಾದ ವಿಷಯಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಅಡಿಟಿಪ್ಪಣಿ

೧. ಶ್ರೀಪತಿಪಂಡಿತರಾಧ್ಯ ; **ಶ್ರೀಕರ ಭಾಷ್ಯ**

೨. ಶ್ರೀ೧೦೦೮ ಕಾಶೀ ಜಗದ್ಗುರುಗಳು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು : ೨೦೦೦, **ಸಿದ್ಧಾಂತ ಶಿಖಾಮಣಿ.**

೩. **ಸುಪ್ರಭೇದಾಗಮ ಮತ್ತು ಸ್ವಯಂಭುವಾಗಮ** ಹಾಗೂ ಆರ್. ಸಿ. ಹಿರೇಮಠ; ೧೯೯೮: ''ವೀರಶೈವರ ಪ್ರಾಚೀನತೆ,'' ವೀರಶೈವ ದರ್ಶನ, ಪು. ೧೯, ಹೊನ್ನಾಳಿ.

೪. ಈ.ಥರ್‌ಸ್ಟನ್ : **ಕ್ಯಾಸ್ಟ್ ಅ್ಯಂಡ್ ಟ್ರಯಿಬ್ಸ್ ಆಫ್ ಸೌತ್ ಇಂಡಿಯಾ**, ಭಾಗ-೪, ಪು.೨೬೪-೬೫

೫. ಜೆ. ಎ. ಪಾರ್ಕ್ಯುಹಾರ್ : **ದಿ ರಿಲಿಜಯಸ್ ಕ್ವೆಸ್ಟ್ ಆಫ್ ಇಂಡಿಯಾ**, ಪು.೨೫೯

೬. ಸಿ.ಪಿ.ಬ್ರೌನ್ : ೧೮೪೦; **ಮದ್ರಾಸ್ ಜರ್ನಲ್ ಆಫ್ ಲಾಂಗ್‌ವೇಜ್ ಅ್ಯಂಡ್ ಸೈನ್ಸ್ ಪೇಪರ್**, ಭಾಗ-೧೦, ಪು. ೧೫೨

೭. **ಎಪಿಗ್ರಾಫಿಯಾ ಕರ್ನಾಟಕಾ** III-i 83

೮. **ಸೌತ್‌ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್** ೨೦, ನಂ. ೩೯೦.

೯. **ಸದ್ಧರ್ಮಪ್ರಭಾ**, ೧೯೮೬.

೧೦. ಪುರಾಣಿಕಮಠ ವಿರೂಪಾಕ್ಷಶಾಸ್ತ್ರಿ ; ೧೯೪೪: **ಜಗದ್ಗುರು ಶ್ರೀ ಸಿದ್ಧಲಿಂಗೇಶ್ವರ ವಿಜಯ**

೧೧. ಪುರಾಣಿಕಮಠ ವಿರೂಪಾಕ್ಷಶಾಸ್ತ್ರಿ ; ೧೯೫೩: **ಶ್ರೀ ಜಗದ್ಗುರು ಪಂಚಪೀಠಗಳ ಪರಿಚಯ** ಪು-೧೭-೨೬, ಮೈಸೂರು.

೧೨. **ಸದ್ಧರ್ಮಪ್ರಭಾ**; ೧೯೮೬ ಮತ್ತು ೧೯೯೨.

೧೩. ಡಾ. ಚಂದ್ರಶೇಖರಶಿವಾಚಾರ್ಯ ಮಹಾಸ್ವಾಮಿಗಳು;೨೦೦೧: **ವೀರಶೈವ ಪಂಚಪೀಠ ಪರಂಪರೆ**, ಉಜ್ಜಯಿನಿ.

೧೪. **ವಿಶ್ವಬಂಧು ಮರುಳಸಿದ್ಧ.**

೧೫. ಆ.ನ.ಕೃ. **ಮರುಳಾರಾಧ್ಯಕಾವ್ಯ (ಸಂ.)**

೧೬. ಶ್ರೀಶೈಲ ವಾಗೀಶ ಪಂಡಿತಾರಾಧ್ಯ ಜಗದ್ಗುರುಗಳು ; **'ಮರುಳಾರಾಧ್ಯಕಾವ್ಯ ವಿಮರ್ಶೆ'**

೧೭. **ಸೌತ್‌ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್**, ಸಂಪುಟ೯, ಭಾಗ-೧ ಮತ್ತು ೨.

೧೮. ರು.ಮ.ಷಡಕ್ಷರಯ್ಯ; ೧೯೭೭: ''ಉಜ್ಜಯಿನಿಯ ಮರುಳಸಿದ್ಧ ದೇವಾಲಯದಲ್ಲಿರುವ ಶಾಸನ'', **ಮಾನವಿಕ ಕರ್ನಾಟಕ**, ಸಂ.೮, ಸಂ.೧ ಪು.೪೧-೪೨; ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೯. ರು.ಮ.ಷಡಕ್ಷರಯ್ಯ, **ಉಜ್ಜಯಿನಿ ಒಳನೋಡು ಹಂಪಿ ಹೊರನೋಡು**, ಮಂಗಾಪುರ.

೨೦. ಹೆಚ್.ದೇವೀರಪ್ಪ, ಬಸವಣ್ಣನವರ ವಿಗ್ರಹ, **ಪ್ರಜಾವಾಣಿ**, (೨೫-೪-೧೯೮೨).

೨೧. ರು. ಮ. ಷಡಕ್ಷರಯ್ಯ, 'ಉಳ್ಳವರು ಶಿವಾಲಯ....'**ಲಿಂಗನುಡಿ**, ಗದಗ(೧೯೮೨).

೨೨. ಸಿ.ಎಸ್.ಪಾಟೀಲ್, **ಟೆಂಪಲ್ಸ್ ಆರ್ಕಿಟೆಕ್ಚರ್ ಆಫ್ ಬಳ್ಳಾರಿ ಅ್ಯಂಡ್ ರಾಯಚೂರು ಡಿಸ್ಟ್ರಿಕ್ಟ್**, ಮೈಸೂರು.

೨೩. ರುದ್ರಪ್ಪ:೧೯೯೮: **ಉಜ್ಜಯನಿ ಮುನ್ನಡೆವ ಕೂಡ್ಲಿಗಿ ತಾಲೂಕ**, ಪು-೪೯-೫೩, ಅಯ್ಯನಹಳ್ಳಿ.

೨೪. ಕೆಳದಿ ಬಸವರಾಜ ವಿರಚಿತ ; **ಶಿವತತ್ವ ರತ್ನಾಕರ.**

೨೫. ನಾಗಭೂಷಣ, ಎಸ್.ಎಂ. ''ಉಜ್ಜಯನಿಯಲ್ಲಿ ಕೆಳದಿ ವೀರಮ್ಮಾಜಿ ಸಮಾಧಿ'', **ಇತಿಹಾಸ ದರ್ಶನ**, ಸಂ.೯, ಪು-೧೫೨-೧೫೩, ಬೆಂಗಳೂರು.

೨೬. ಲಕ್ಷ್ಮಣ ತೆಲಗಾವಿ: ಜರ್ಮಲೆ ಪಾಳೆಗಾರರ ವಂಶಾವಳಿ (ಹಸ್ತಪ್ರತಿ ಸಂಪಾದನೆ).

ವೀರಶೈವ ಪರಂಪರೆ ಮತ್ತು ಆಚರಣೆ

ಶಿವಾಗಮಗಳು

ವೀರಶೈವ ಧರ್ಮವು ತನ್ನದೇ ಆದ ಪ್ರಮಾಣ ಗ್ರಂಥಗಳನ್ನು ನಿರ್ಮಿಸಿಕೊಂಡು ಅವುಗಳಲ್ಲಿರುವ ನಿಯಮಗಳನ್ನು ಪಾಲಿಸುತ್ತಾ ಬಂದಿದೆ. ಆ ಪ್ರಮಾಣಗ್ರಂಥಗಳೆಂದರೆ ಶಿವಾಗಮಗಳು. ಅವು ಶೈವಧರ್ಮದ ಆಚಾರಗಳನ್ನು ಹೇಳುವುದರಿಂದ ಅವುಗಳನ್ನು ಶಿವಾಗಮಗಳೆನ್ನುವರು. ಈ ಶಿವಾಗಮಗಳು ವೀರಶೈವ ಧರ್ಮದ ವಿಶ್ವಕೋಶ. ಶೈವಧರ್ಮದಲ್ಲಿ ಸಪ್ತ ಪ್ರಭೇದಗಳಿವೆ. ಅವುಗಳು ಅನಾದಿಶೈವ, ಆದಿಶೈವ, ಮಹಾಶೈವ, ಜ್ಞಾನಶೈವ ಮತ್ತು ವೀರಶೈವ. ಪ್ರಾಚೀನಕಾಲದಲ್ಲಿ ಶೈವಧರ್ಮದ ಪ್ರಭೇದಗಳಾಗಿದ್ದ ಪಾಶುಪತ, ಲಕುಲೀಶ, ಕಾಳಾಮುಖ, ಮೊದಲಾದವುಗಳು ಕಾಲಕ್ರಮದಲ್ಲಿ ವೀರಶೈವಧರ್ಮದಲ್ಲಿಯೇ ವಿಲೀನವಾಗಿವೆ ಎನ್ನುವರು. ಶೈವಮತದಲ್ಲಿ ಶುದ್ಧಶೈವ, ಮಿಶ್ರಶೈವ, ಮಹಾಶೈವ ಮತ್ತು ವೀರಶೈವ ಪ್ರಭೇದಗಳಿರುವುದಾಗಿ ಹೇಳುತ್ತಾರೆ.[1] ಶ್ರೀವೈಷ್ಣವ ಅಥವಾ ವೀರ ವೈಷ್ಣವವು ವೈಷ್ಣವ ಮತದ ಪ್ರಭೇದವಾಗಿದ್ದರೂ ಹೇಗೆ ಸ್ವತಂತ್ರವೆಂದು ರಾಮಾನುಜಾಚಾರ್ಯರಿಂದ ಪ್ರತಿಪಾದಿತವಾಗಿದೆಯೋ ಹಾಗೆಯೇ ವೀರಶೈವವು ಶ್ರೀಜಗದ್ಗುರು ರೇಣುಕಾಚಾರ್ಯರಿಂದ ಸ್ವತಂತ್ರವೆಂದು ಪ್ರತಿಪಾದಿತವಾಗಿರುವುದಾಗಿ ಪಂ. ಪುಟ್ಟರಾಜಗವಾಯಿಗಳು ಅಭಿಪ್ರಾಯ ಪಟ್ಟಿದ್ದಾರೆ.[2]

ಶೈವಾಗಮಗಳೆಂದರೆ ವೀರಶೈವರ ಆಗಮಗಳೆಂದೇ ಅರ್ಥೈಸಿಕೊಳ್ಳಲಾಗಿದೆ. ಧರ್ಮಶಾಸ್ತ್ರಗಳು ಎರಡು ವಿಧ. ಒಂದು ಆಗಮಶಾಸ್ತ್ರ ಇನ್ನೊಂದು ನಿಗಮಶಾಸ್ತ್ರ. ಶಿವನ ವಾಗ್ವ್ಯವಹಾರ ರೂಪಗಳಾದ ಶಾಸ್ತ್ರಗಳನ್ನು ಆಗಮಗಳೆಂತಲೂ ಕರೆಯುವರು. ಶಿವನ ನಿಶ್ವಾಸದಿಂದ ನಿಃಶೃತ ಶಾಸ್ತ್ರವನ್ನು ನಿಗಮಶಾಸ್ತ್ರಗಳೆಂತಲೂ ಕರೆಯುವರು. ಆಗಮಗಳು ವೀರಶೈವ ಸಿದ್ಧಾಂತದ ಅಡಿಗಲ್ಲುಗಳು. ಈ ಶಿವಾಗಮಗಳ ಸಂಖ್ಯೆ ೨೮. ಮೊದಲ ಹತ್ತು ಆಗಮಗಳಿಗೆ ಶಿವಬೇಧವೆಂತಲೂ ಉಳಿದ ೧೮ ಆಗಮಗಳಿಗೆ ರುದ್ರಬೇಧವೆಂತಲೂ ಪ್ರತೀತಿ. ಕಾಮಿಕ, ಯೋಗಜ, ಚಿಂತ್ಯ, ಕಾರಣ, ಅಜಿತ, ದೀಪ್ತ, ಸೂಕ್ಷ್ಮ, ಸಹಸ್ರ, ಅಂಶುಮನ್, ಸುಪ್ರಭೇದ, ವಿಜಯ, ನಿಃಶ್ವಾಸ, ಸ್ವಯಂಭು, ಅನಲ, ವೀರ, ರೌರವ, ಮಕುಟ, ವಿಮಲ, ಚಂದ್ರಜ್ಞಾನ, ಬಿಂಬ ಪ್ರೋದ್ಗೀತ, ಲಲಿತ, ಸಿದ್ಧ, ಸಂತಾನ, ಸರ್ವೋಕ್ತ, ಪಾರಮೇಶ್ವರ, ಕಿರಣ ಮತ್ತು ವಾತುಲ[3] ಇವು ೨೮ ಶಿವಾಗಮಗಳು.

ಈ ಆಗಮಗಳು ಅಷ್ಟಾದಶ ಮಹಾವಿದ್ಯೆಗಳನ್ನು ಅಷ್ಟಾದಶ ಉಪವಿದ್ಯೆಗಳನ್ನು, ೨೮ ತಂತ್ರ, ೨೮ ಉಪತಂತ್ರಗಳನ್ನು ಧರ್ಮ, ಶಿಲ್ಪ, ವ್ಯಾಪಾರ, ರಹಸ್ಯವನ್ನು ಒಳಗೊಂಡಿವೆ. ಅವುಗಳನ್ನು ಎರಡು ಭಾಗಗಳನ್ನಾಗಿ ವಿಂಗಡಿಸಲಾಗಿದೆ. ಒಂದು ಪೂರ್ವಭಾಗ ಇನ್ನೊಂದು ಉತ್ತರಭಾಗ. ಪೂರ್ವಭಾಗದಲ್ಲಿ ಶೈವದರ್ಶನವನ್ನು ಉತ್ತರ ಭಾಗದಲ್ಲಿ ವೀರಶೈವ ದರ್ಶನವನ್ನು ವಿವರಿಸುತ್ತವೆ.

ವೀರಶೈವ ಸಿದ್ಧಾಂತಕ್ಕೆ ಶಿವಾದ್ವೈತ, ಶಾಂಭವ ಮತ, ಶಕ್ತಿವಿಶಿಷ್ಟಾದ್ವೈತ, ಭೇದಾಭೇದ ಮತ್ತು ಸಮನ್ವಯ ದರ್ಶನ ಮುಂತಾದ ಹೆಸರುಗಳನ್ನು ಬಳಸಲಾಗಿದೆ. ಈ ವೀರಶೈವ ಮತವನ್ನು ಪಂಚಾಚಾರ್ಯರು ಸ್ಥಾಪಿಸಿದರು.

ಪಂಚಾಚಾರ್ಯರ ಪ್ರಕಾಶ

ಸುಪ್ರಭೇದಾಗಮ್-''ಪೂರ್ವಂ ಮಮ ಮುಖಾಜ್ಜಾತೊ । ವಾಮದೇವಚ್ಚದಾರುಕಂ ॥
ಲೀಲಯಾನ್ಯ ಸೃಜತ್ಸೂತ್ರಂ । ವೃಷ್ಟಿನಾಮಮಹತ್ತರಂ ॥೧॥
ಸಯೇವ ಮರುಳಾರಾಧ್ಯೊ । ಭೂತ್ವಾಲೀಲಾಮಥಾಕರೋತ್॥
ನಂದಿಗೋತ್ರಾಧಿನಾಥಶ್ಚ । ಸಿಂಹಾಸನಪತಿಶ್ಚಯಃ ॥೨॥
ಮರುಳಾರಾಧ್ಯಸನ್ನಾಮ । ಜಗದ್ಗುರು ತಮಶ್ಚಸಃ ॥

ಸ್ವಯಂಭುವಾಗಮ್- ತದ್ವಸ್ಮರುಳಸಿದ್ಧಸ್ಯ । ವಟಕ್ಷೇತ್ರೇ ಮಹತ್ತರೆ ॥
ಸಿದ್ಧೇಶಲಿಂಗಾಜ್ಜನನಂ । ಸ್ಥಾನಮುಜ್ಜಯನೀಪುರೇ ॥೧॥

ರಂಭಾಪುರಿ

ಶಿವನ ಸದ್ಯೋಜಾತ್ ಮುಖದಿಂದ ಶ್ರೀರೇಣುಕ ಶಿವಾಚಾರ್ಯರು ದ್ವಾಪರಯುಗದಲ್ಲಿ ಅವತರಿಸಿದರು. ಆ ಮೊದಲು ಅವರು ಕೃತಯುಗದಲ್ಲಿ ಶ್ರೀಏಕಾಕ್ಷರ ಶಿವಾಚಾರ್ಯ, ತ್ರೇತಾಯುಗದಲ್ಲಿ ಶ್ರೀಏಕವಕ್ತ್ರ ಶಿವಾಚಾರ್ಯರೆನಿಸಿಕೊಂಡಿದ್ದರು. ಕಲಿಯುಗದಲ್ಲಿ ಇವರು ರೇವಣಾರಾಧ್ಯ(ರೇವಣಸಿದ್ಧ)ರೆನಿಸಿದರು. ಶ್ರೀ ಜ॥ ರೇವಣಸಿದ್ಧರು ಭೂಲೋಕದಲ್ಲಿ ೧೫೦೦ ವರ್ಷ ಲೀಲೆಗಳನ್ನು ಮುಗಿಸಿ ಲಿಂಗದಲ್ಲಿ ಅಡಗಿದರು. ಶ್ರೀರೇವಣಾರಾಧ್ಯರು, ಆಂಧ್ರಪ್ರದೇಶದ ಕುಲ್ಯಪಾಕದ (ಕೊಲನುಪಾಕ) ಸ್ರೀಸೋಮೇಶ್ವರ ಲಿಂಗದಿಂದ ಅವತರಿಸಿದರು. ವೀರಶೈವ ಮತದ ಪಾಲನೆಗಾಗಿ ಕರ್ನಾಟಕದ ರಂಭಾಪುರಿ ಕ್ಷೇತ್ರದಲ್ಲಿ ವೀರ ಸಿಂಹಾಸನವನ್ನು ಸ್ಥಾಪಿಸಿದರು.

ಉಜ್ಜಯಿನಿ

ಶಿವನ ವಾಮದೇವ್ ಮುಖದಿಂದ ದಾರುಕ ಶಿವಾಚಾರ್ಯರು ದ್ವಾಪರಯುಗದಲ್ಲಿ ಅವತರಿಸಿದರು. ಇವರು ಕೃತಯುಗದಲ್ಲಿ ದ್ವ್ಯಕ್ಷರ

ಶಿವಾಚಾರ್ಯ, ತ್ರೇತಾಯುಗದಲ್ಲಿ ದ್ವಿವಕ್ತ್ರ ಶಿವಾಚಾರ್ಯ ಮತ್ತು ಕಲಿಯುಗದಲ್ಲಿ ಶ್ರೀ ಮರುಳಾರಾಧ್ಯಶಿವಾಚಾರ್ಯ ಎಂಬ ಹೆಸರುಗಳಿಂದ ಅವತರಿಸಿದರು. ಶ್ರೀಮರುಳಾರಾಧ್ಯರು ಕ್ಷಿಪ್ರಾನದಿಯ ತಟದಲ್ಲಿರುವ ವಟಕ್ಷೇತ್ರದ ಶ್ರೀಸಿದ್ಧೇಶ್ವರ ಲಿಂಗದಿಂದ ಅವತರಿಸಿದರು. ಕಾರಣಾಂತರದಿಂದ ಮಧ್ಯ ಭಾರತದ ಉಜ್ಜಯಿನಿಯಲ್ಲಿದ್ದ ಶ್ರೀ ಸದ್ಧರ್ಮಪೀಠವು ಕರ್ನಾಟಕದ ಬಳ್ಳಾರಿ ಜಿಲ್ಲೆಯ ಉಜ್ಜಯಿನಿ ಪಟ್ಟಣಕ್ಕೆ ಸ್ಥಳಾಂತರವಾಯಿತು.

ಕೇದಾರ

ಶಿವನ ಅಘೋರ ಮುಖದಿಂದ ಶ್ರೀಘಂಟಾಕರ್ಣ ಶಿವಾಚಾರ್ಯರು ದ್ವಾಪರಯುಗದಲ್ಲಿ ಅವತರಿಸಿದರು.[೧೦] ಅವರು ಕೃತಯುಗದಲ್ಲಿ ತ್ರ್ಯಕ್ಷರ ಶಿವಾಚಾರ್ಯ, ತ್ರೇತಾಯುಗದಲ್ಲಿ ತ್ರಿವಕ್ತ್ರ ಶಿವಾಚಾರ್ಯ ಮತ್ತು ಕಲಿಯುಗದಲ್ಲಿ ಏಕೋರಾಮಾರಾಧ್ಯರೆಂಬ ಹೆಸರುಗಳಿಂದ ಅವತರಿಸಿದರು.

ದ್ರಾಕ್ಷಾರಾಮ ಕ್ಷೇತ್ರದ ಶ್ರೀ ರಾಮನಾಥ (ಭೀಮನಾಥ) ಶಿವಲಿಂಗದಿಂದ ಏಕೋರಾಮಾರಾಧ್ಯರು ಉದ್ಭವಿಸಿ ಉತ್ತರ ಭಾರತದ ಕೇದಾರದಲ್ಲಿ ವೈರಾಗ್ಯ ಸಿಂಹಾಸನವನ್ನು ಸ್ಥಾಪಿಸಿದರು.

ಶ್ರೀಶೈಲ

ಶಿವನ ತತ್ಪುರುಷ[೧೧] ಮುಖದಿಂದ ದ್ವಾಪರಯುಗದಲ್ಲಿ ಶ್ರೀಧೇನುಕರ್ಣ ಶಿವಾಚಾರ್ಯರು ಅವತರಿಸಿದರು. ಇವರು ಕೃತಯುಗದಲ್ಲಿ ಚತುರಕ್ಷರ ಶಿವಾಚಾರ್ಯ, ತ್ರೇತಾಯುಗದಲ್ಲಿ ಚತುರ್ವಕ್ತ್ರ ಶಿವಾಚಾರ್ಯ ಮತ್ತು ಕಲಿಯುಗದಲ್ಲಿ ಪಂಡಿತಾರಾಧ್ಯ ಶಿವಾಚಾರ್ಯರೆಂಬ ಹೆಸರುಗಳಿಂದ ಅವತರಿಸಿದರು. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಆಂಧ್ರಪ್ರದೇಶದ ಸುಧಾಕುಂಡದ ಶ್ರೀಶೈಲ ಮಲ್ಲಿಕಾರ್ಜುನ ಲಿಂಗದಿಂದ ಅವತರಿಸಿ ಶ್ರೀ ಸೂರ್ಯ ಸಿಂಹಾಸನ ಪೀಠವನ್ನು ಸ್ಥಾಪಿಸಿದರು.

ಕಾಶಿ

ಶಿವನ ಐದನೇ ಈಶಾನ್ಯ ಮುಖ[೧೨]ದಿಂದ ದ್ವಾಪರಯುಗದಲ್ಲಿ ವಿಶ್ವಕರ್ಣರೆಂಬ ಗಣಾಧೀಶ್ವರರು ಅವತರಿಸಿದರು. ಕೃತಯುಗದಲ್ಲಿ ಪಂಚಾಕ್ಷಾರ ಶಿವಾಚಾರ್ಯ, ತ್ರೇತಾಯುಗದಲ್ಲಿ ಪಂಚವಕ್ತ್ರಶಿವಾಚಾರ್ಯ ಮತ್ತು ಕಲಿಯುಗದಲ್ಲಿ ವಿಶ್ವಾರಾಧ್ಯಶಿವಾಚಾರ್ಯರೆಂಬ ಹೆಸರುಗಳಿಂದ ಅವತರಿಸಿದರು. ಶ್ರೀ ವಿಶ್ವಾರಾಧ್ಯ ಶಿವಾಚಾರ್ಯರು ಉತ್ತರಭಾರತದ ಶ್ರೀಕಾಶಿ ವಿಶ್ವೇಶ್ವರಲಿಂಗದಿಂದ ಅವತರಿಸಿದರು. ವೀರಶೈವ ಮತ ಪಾಲನೆಗೋಸ್ಕರ ಕಾಶೀಕ್ಷೇತ್ರದಲ್ಲಿ ಜ್ಞಾನಸಿಂಹಾಸನವನ್ನು ಸ್ಥಾಪಿಸಿದರು.

ಜಗದ್ಗುರುಗಳು

ಈ ಪಂಚಾಚಾರ್ಯರು ಮೇಲೆ ಹೇಳಿದ ಲಿಂಗಗಳಿಂದ ಉದ್ಭವಿಸಿದರಲ್ಲದೇ ಆಯಾಯ ಲಿಂಗಗಳಲ್ಲಿಯೇ ಕೊನೆಗೆ ಅಡಗಿದರು. ಶ್ರೀ ಪೂಜ್ಯಪಾದರು ಅವತರಿಸಿ ವೀರಶೈವ ತತ್ವವನ್ನು ಬೋಧಿಸಿ ಮತ ಸ್ಥಾಪಕರೆನಿಸಿದರು. ಶಿವಾಗಮಗಳು, ಪುರಾಣಗಳು, ಉಪನಿಷತ್ತುಗಳು ಇದನ್ನು ಸಾರುತ್ತವೆಂಬ ಅಭಿಪ್ರಾಯವಿದ್ದುದರಿಂದಲೇ ಈ ಪೀಠಾಧಿಪತಿಗಳಿಗೆ ಮತ 'ಜಗದ್ಗುರು' ಬಿರುದು ಬಂದಿದೆ.

ಈ ಪಂಚಪೀಠಾಧಿಪತಿಗಳು ತಮ್ಮ ಪೀಠಗಳನ್ನು ಸ್ಥಾಪಿಸಿ ನಾಸ್ತಿಕ ಮತವನ್ನು ಖಂಡಿಸಿದ್ದಾರೆ. ಆಸ್ತಿಕ ಭಾವನೆಯನ್ನು ನೆಲೆಗೊಳಿಸಿದ್ದಾರೆ ಎಂದು ಅಕ್ಕೂರಮಠ ಅವರು ವ್ಯಾಖ್ಯಾನಿಸಿದ್ದಾರೆ.

ಗೋತ್ರ-ಸೂತ್ರ

ವೀರ, ನಂದಿ, ಭೃಂಗಿ, ವೃಷಭ ಮತ್ತು ಸ್ಕಂದರೆಂಬ ಐದು ಗೋತ್ರಪುರುಷರು ಶಿವನ ಸ್ವರೂಪಗಳಾಗಿ ಅವತರಿಸಿದರು. ಅವರಿಂದ ವೃಷ್ಟಿ, ಲಂಬನ, ಪಂಚವರ್ಣ, ಮುಕ್ತಾಗುಚ್ಛ, ಪಡ್ವಿಡಿ ಸೂತ್ರಗಳು ಜಾರಿಗೆ ಬಂದವು. ರಂಭಾಪುರಿ ಪೀಠದವರಿಗೆ ವೀರಗೋತ್ರ-ಸೂತ್ರರೂಪ, ಉಜ್ಜಯನಿ ಪೀಠಕ್ಕೆ ನಂದಿಗೋತ್ರ-ಸೂತ್ರರೂಪ, ಕೇದಾರ ಪೀಠಕ್ಕೆ ಭೃಂಗಿಗೋತ್ರ, ಶ್ರೀಶೈಲಪೀಠಕ್ಕೆ ಋಷಭ ಗೋತ್ರ-ಸೂತ್ರರೂಪ, ಕಾಶೀಪೀಠಕ್ಕೆ ಸ್ಕಂದಗೋತ್ರ- ಸೂತ್ರರೂಪಗಳಿವೆ.

ರೇವಣಾರಾಧ್ಯರಿಗೆ ಉಪವೇದ ಸೂತ್ರರೂಪ ಕಾಮಿಕಾಗಮ
ದಾರುಕಾರಾಧ್ಯರಿಗೆ ಉಪವೇದ ಸೂತ್ರರೂಪ ದೀಪ್ತಾಗಮ
ಏಕೋರಾಮಾರಾಧ್ಯರಿಗೆ ಉಪವೇದ ಸೂತ್ರರೂಪ ವಿಜಯಾಗಮ
ಪಂಡಿತಾರಾಧ್ಯರಿಗೆ ಉಪವೇದ ಸೂತ್ರರೂಪ ವಾತುಲಾಗಮ
ಮತ್ತು ವಿಶ್ವಾರಾಧ್ಯರಿಗೆ ಉಪವೇದ ಸೂತ್ರರೂಪ ಪ್ರೋದ್ಗಿತಾಗಮ

ಪಂಚತತ್ವ - ಪಂಚಾಚಾರ್ಯರು

ತೈತ್ತರೀಯೋಪನಿಷತ್ತಿನಲ್ಲಿ (ಬ್ರಹ್ಮಾನಂದವಲ್ಲೀ) ಪರಮಾತ್ಮನಿಂದ ಆಕಾಶ; ಪರಮಾತ್ಮ ಆಕಾಶದಿಂದ ವಾಯು; ಪರಮಾತ್ಮ-ಆಕಾಶ ಮತ್ತು ವಾಯುವಿನಿಂದ ಅಗ್ನಿ; ಪರಮಾತ್ಮ-ಆಕಾಶ-ವಾಯು-ಅಗ್ನಿ ಇವುಗಳಿಂದ ಜಲವು ಹುಟ್ಟಿತು. ಪರಮಾತ್ಮ ಆಕಾಶ-ವಾಯು-ಅಗ್ನಿ-ಜಲದಿಂದ ಪೃಥ್ವಿ ಉತ್ಪನ್ನವಾಯಿತು ಎಂದು ಬರುತ್ತದೆ. ಮುಂದೆ ಪೃಥ್ವಿಯಿಂದ ವನಸ್ಪತಿಗಳು ಹುಟ್ಟಿದರೆ, ವನಸ್ಪತಿಗಳಿಂದ ಅನ್ನ ಉತ್ಪನ್ನವಾಯಿತು. ಅನ್ನದಿಂದ ಪುರುಷ ಉತ್ಪನ್ನವಾದನು. ಈ ಪಂಚತತ್ವಗಳು ಈ

ಪಂಚಪೀಠಗಳಿಗೆ ಹೆಣೆದುಕೊಂಡಿವೆ. ಭೂಮಿ, ಜಲ, ಅಗ್ನಿ, ವಾಯು, ಆಕಾಶ ಈ ಪಂಚತತ್ವಗಳಿಂದಲೇ ಪರಮೇಶ್ವರ ಮಾನವನನ್ನು ನಿರ್ಮಿಸಿದನು. ಮಾನವನ ಉದ್ಧಾರಕ್ಕಾಗಿ ಪಂಚಪೀಠಗಳು ಸೃಜಿತವಾಗಿವೆ. ಪೃಥ್ವಿತತ್ವವೇ ರಂಭಾಪುರಿ-ವೀರಪೀಠಕ್ಕೆ, ಜಲತತ್ವವೇ ಉಜ್ಜಯಿನಿ-ಸದ್ಧರ್ಮಪೀಠಕ್ಕೆ, ಅಗ್ನಿತತ್ವವೇ ಕೇದಾರ-ವೈರಾಗ್ಯ ಪೀಠಕ್ಕೆ, ವಾಯುತತ್ವವೇ ಶ್ರೀಶೈಲ- ಸೂರ್ಯಪೀಠಕ್ಕೆ ಮತ್ತು ಆಕಾಶತತ್ವವೇ ಕಾಶಿ-ಜ್ಞಾನಪೀಠಕ್ಕೆ ಅನ್ವಯವಾಗುತ್ತವೆ.[೧೮]

ಭಾಷ್ಯಗಳು

ಶಿವಾದ್ವೈತ ಸಿದ್ಧಾಂತದ ಪ್ರತಿಪಾದನೆಗಾಗಿ ಪಂಚಪೀಠಾಚಾರ್ಯರು ಭಾಷ್ಯಗಳನ್ನು ಬರೆದಿರುವರು ಎನ್ನಲಾಗಿದೆ. ಅವು ರೇಣುಕ ಭಾಷ್ಯ, ಧಾರುಕಭಾಷ್ಯ, ಪಂಡಿತಾರಾಧ್ಯಭಾಷ್ಯ, ವಿಶ್ವಾರಾಧ್ಯಭಾಷ್ಯ, ವೇದಭಾಷ್ಯ, ಶ್ರೀಕರಭಾಷ್ಯ ಇತ್ಯಾದಿ ಹೆಸರುಗಳಿಂದ ಪ್ರಸಿದ್ಧವಾಗಿವೆ.[೧೯]

ವರ್ತನೆ

ಮನುಷ್ಯನಿಗೆ ಸುಖ-ಶಾಂತಿಯನ್ನು ಕೊಡುವ ಐದು ಬಗೆಯ ವರ್ತನೆಗಳನ್ನೂ ಪಂಚಾಚಾರ್ಯರು ಅನುಗ್ರಹಿಸಿರುವರೆಂದು ನಂಬಲಾಗಿದೆ. ವೀರ, ಧಾರ್ಮಿಕ, ವೈರಾಗ್ಯ, ಸಮದೃಷ್ಟಿ (ವಿವೇಕ) ಮತ್ತು ಜ್ಞಾನ ಇವೇ ಆ ವರ್ತನೆಗಳು. ಸದ್ವರ್ತನೆಗೆ ವೀರವೃತ್ತಿ ಬೇಕು. ಅದು ರಂಭಾಪುರಿ ಪೀಠಕ್ಕಿದೆ. ಆ ಸದ್ವರ್ತನೆ ನೆಲೆಗೊಳ್ಳಬೇಕಾದರೆ ಧರ್ಮ ವೃತ್ತಿ ಬೇಕು. ಆ ಧಾರ್ಮಿಕ ವರ್ತನೆ ಶ್ರೀ ಉಜ್ಜಯಿನಿ ಪೀಠಕ್ಕಿದೆ.

ಪರಮ-ವಸ್ತುವಿನ ಕಡೆಗೆ ಏಕಾಗ್ರತೆಯಿಂದ ಮನಸ್ಸನ್ನು ಹರಿಸಲು ವೈರಾಗ್ಯವೃತ್ತಿ ಬೇಕು, ಅದು ಶ್ರೀಕೇದಾರ ಪೀಠಕ್ಕಿದೆ. ವೀರ, ಧಾರ್ಮಿಕ ಮತ್ತು ವೈರಾಗ್ಯಗಳ ಪ್ರಭಾವದಿಂದ ವಿವೇಕ ಉಂಟಾಗಿ ಸೂರ್ಯನಂಥ ಸಮದೃಷ್ಟಿ ಬರುತ್ತದೆ. ಅದು ಶ್ರೀಶೈಲಪೀಠಕ್ಕಿದೆ. ಈ ನಾಲ್ಕರ ಪ್ರಭಾವದಿಂದಲೇ ಅರಿವು, ದಿವ್ಯಜ್ಞಾನ ಬರುವುದು. ಈ ಜ್ಞಾನವು ಕಾಶಿಪೀಠಕ್ಕಿದೆ. ಈ ಐದುವರ್ತನೆಗಳು ನೆಲಸಲೆಂಬ ಆಶಯದಿಂದ ಈ ಪೀಠಾಧಿಪತಿಗಳನ್ನು ಜಗದ್ಗುರುಗಳೆಂದು ಆರಾಧಿಸುವ ಪರಂಪರೆ ಬೆಳೆದು ಬಂದಿದೆ ಎಂದು ಹೇಳುವರು.[೨೦]

ಲಿಂಗಧಾರಣ

ಶ್ರೀಪಂಚಪೀಠಾಚಾರ್ಯರು ಒಂದೊಂದು ಯುಗದಲ್ಲಿ ಒಂದೊಂದು ರೀತಿಯ ಲಿಂಗಧಾರಣ ಮಾಡಿದರು. ತ್ರೇತಾಯುಗದಲ್ಲಿ ರತ್ನಮಯಲಿಂಗ, ದ್ವಾಪರಯುಗದಲ್ಲಿ ವಜ್ರಮಯಲಿಂಗ ಮತ್ತು ಕಲಿಯುಗದಲ್ಲಿ ಶಿಲಾಮಯ ಲಿಂಗಧಾರಣ ಮಾಡಿದರೆಂದು ಹೇಳುವರು.[೨೧]

ಪಂಚಪೀಠಾಧಿಪತಿಗಳು - ಉಪವೇದಗಳು

ರೇವಣಾರಾಧ್ಯರಿಗೆ ಉಪವೇದ ಋಗ್‌ವೇದ, ದಾರುಕಾರಾಧ್ಯರಿಗೆ ಉಪವೇದ ಯಜುರ್ವೇದ, ಏಕೋರಾಮಾರಾಧ್ಯರಿಗೆ ಉಪವೇದ ಸಾಮವೇದ, ಪಂಡಿತಾರಾಧ್ಯರಿಗೆ ಉಪವೇದ ಅಥರ್ವಣವೇದ ಮತ್ತು ವಿಶ್ವಾರಾಧ್ಯರಿಗೆ ಉಪವೇದ ಅಜಪವೇದ ಉಕ್ತವಾಗಿವೆ ಎಂದು ಹೇಳಲಾಗುತ್ತದೆ.[೨೨]

ಮಂತ್ರಗಳು

ಪಂಚಪೀಠಾಧಿಪತಿಗಳು ಉಪದೇಶಿಸುವ ಮಂತ್ರಗಳಲ್ಲಿ ಶ್ರೀರೇವಣಾರಾಧ್ಯರಿಗೆ ಪ್ರಸಾದಪಂಚಾಕ್ಷರ, ಶ್ರೀಮರುಳಾರಾಧ್ಯರಿಗೆ ಮಾಯಾಪಂಚಾಕ್ಷರ, ಶ್ರೀ ಏಕೋರಾಮಾರಾಧ್ಯರಿಗೆ ಸೂಕ್ಷ್ಮಪಂಚಾಕ್ಷರ, ಶ್ರೀಪಂಡಿತಾರಾಧ್ಯರಿಗೆ ಸ್ಥೂಲಪಂಚಾಕ್ಷರ ಮತ್ತು ಶ್ರೀವಿಶ್ವಾರಾಧ್ಯರಿಗೆ ಮೂಲಪಂಚಾಕ್ಷರ ಮಂತ್ರ ಅನ್ವಯವಾಗುತ್ತವೆಂದು ಹೇಳಲಾಗಿದೆ.[೨೩]

ದಂಡಗಳು

ಪಂಚಪೀಠಾಧಿಪತಿಗಳಲ್ಲಿ ಶ್ರೀರೇವಣಾರಾಧ್ಯರಿಗೆ ಅರಳಿಯ ದಂಡ, ಶ್ರೀಮರುಳಾರಾಧ್ಯರಿಗೆ ಮುತ್ತಗದ ದಂಡ, ಶ್ರೀ ಏಕೋರಾಮಾರಾಧ್ಯರಿಗೆ ಬಿದಿರುದಂಡ, ಶ್ರೀ ಪಂಡಿತಾರಾಧ್ಯರಿಗೆ ಆಲದದಂಡ ಮತ್ತು ಶ್ರೀ ವಿಶ್ವಾರಾಧ್ಯರಿಗೆ ಬಿಲ್ವದಂಡ ಇರುವಂತೆ ತಿಳಿಸಲಾಗಿದೆ.[೨೪]

ಕಮಂಡಲಗಳು

ಪಂಚಪೀಠಾಧಿಪತಿಗಳಲ್ಲಿ ಶ್ರೀ ರೇವಣಾರಾಧ್ಯರಿಗೆ ಹರಿದ್ವರ್ಣದ ಕಮಂಡಲ, ಶ್ರೀ ಮರುಳಾರಾಧ್ಯರಿಗೆ ಲೋಹದ (ಬೆಳ್ಳಿಯ) ಕಮಂಡಲ, ಶ್ರೀ ಪಂಡಿತಾರಾಧ್ಯರಿಗೆ ಕಂಚಿನ ಕಮಂಡಲ ಮತ್ತು ಶ್ರೀ ವಿಶ್ವಾರಾಧ್ಯರಿಗೆ ಬಂಗಾರ ಕಮಂಡಲ ಅನ್ವಯಿಸುವುದಾಗಿ ತಿಳಿಸಲಾಗಿದೆ.[೨೫]

ನಿಶಾನೆಗಳು

ಪಂಚಾಚಾರ್ಯರಲ್ಲಿ ಶ್ರೀ ರೇವಣಾರಾಧ್ಯರಿಗೆ ಹಸಿರು ಬಟ್ಟೆಯ ನಿಶಾನೆ, ಶ್ರೀಮರುಳಾರಾಧ್ಯರಿಗೆ ಕೆಂಪು ಬಟ್ಟೆಯ ನಿಶಾನೆ, ಶ್ರೀಪಂಡಿತಾರಾಧ್ಯರಿಗೆ ಬಿಳಿ ಬಟ್ಟೆಯ ನಿಶಾನೆ, ಶ್ರೀ ಏಕೋರಾಮಾರಾಧ್ಯರಿಗೆ ನೀಲಿ ಬಟ್ಟೆಯ ನಿಶಾನೆ ಮತ್ತು ಶ್ರೀ ವಿಶ್ವಾರಾಧ್ಯರಿಗೆ ಹಳದೀ ಬಟ್ಟೆಯ ನಿಶಾನೆಗಳಿವೆ.[೨೬]

ಸಾಮಾಜಿಕ ರಚನೆ

ವೀರಶೈವದ ಸಾಮಾಜಿಕ ರಚನೆಯು ಶಾಸನಬದ್ಧ ಸಂವಿಧಾನಕ್ಕಿಂತಲೂ ವ್ಯವಸ್ಥಿತವಾಗಿರುವುದು! ಅದು ಗುರು-ಶಿಷ್ಯ ಪ್ರಬೇಧಗಳನ್ನು ಒಳಗೊಂಡಿದೆ. ಗುರು

ಪರಂಪರೆಯಲ್ಲಿ ಜಂಗಮರು ಶಿಷ್ಯ ಪರಂಪರೆಯಲ್ಲಿ ಭಕ್ತರು ಇದ್ದಾರೆ. ಈ ಜಂಗಮರಲ್ಲಿ ಮಹಾಚಾರ್ಯ, ಉಪಾಚಾರ್ಯ, ಚರಮೂರ್ತಿ, ದೇಶಿಕ, ಗೃಹಸ್ಥ, ಗಣಾಚಾರಿ, ಮಠಪತಿ, ವಿರಕ್ತ, ನಿರಾಭಾರಿ ಮುಂತಾದವರು ಬರುತ್ತಾರೆ.

ವೀರಶೈವ ಮತಪುರುಷನು ಕರ್ಮಕಾಂಡ, ಜ್ಞಾನಕಾಂಡ ಮತ್ತು ಉಪಾಕಾಂಡಗಳನ್ನು ಒಳಗೊಂಡಿರುವನು. ದೇಹ, ಧರ್ಮ ಸಂಸ್ಕಾರ ಮತ್ತು ಆಚರಣೆಗಳನ್ನು ಒಳಗೊಂಡು ಇಷ್ಟಲಿಂಗದಲ್ಲಿ ಬೆರೆಯುವವರೆಗೆ ವೀರಶೈವದಲ್ಲಿ ಕ್ರಮಬದ್ಧ ಸಂಪ್ರದಾಯ ಮತ್ತು ಆಚರಣೆಗಳಿವೆ. ಅವುಗಳಲ್ಲಿ **ಅಷ್ಟಾವರಣ, ಷಟ್‌ಸ್ಥಲ, ಪಂಚಾಚಾರ**ಗಳು ಸಮಾವೇಶವಾಗುತ್ತವೆ. **ಅಷ್ಟಾವರಣ**ಗಳಾದ **ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ಭಸ್ಮ, ರುದ್ರಾಕ್ಷಿ** ಮತ್ತು **ಮಂತ್ರ** ಇವು ಮನುಷ್ಯನ ಅಂತಃಕರಣದಲ್ಲಿದ್ದು, ತನ್ನ ಶರೀರದ ಹೊರಗೂ ಭಾವದಿಂದಲೂ ಮತ್ತು ಕ್ರಿಯೆಯಿಂದಲೂ ರಕ್ಷಿಸುತ್ತವೆಂಬ ನಂಬಿಕೆಯಿದೆ. ದೀಕ್ಷಾಕಾಲದಲ್ಲಿ ಗುರುವಿನಿಂದ ಪಡೆದ ಇಷ್ಟಲಿಂಗದಲ್ಲಿಯೇ ಈಶ್ವರನನ್ನು ಆರಾಧಿಸಬೇಕು. **ಷಟ್‌ಸ್ಥಲ**ಗಳಾದ **ಭಕ್ತ, ಮಹೇಶ, ಪ್ರಸಾದ, ಪ್ರಾಣಲಿಂಗ, ಶರಣ** ಮತ್ತು **ಐಕ್ಯ**ವೆಂಬ ಸ್ಥಲಗಳಿಂದ ಮನುಷ್ಯನು ಅಂಗಲಿಂಗಾನುಸ್ಥಲದಲ್ಲಿ ತೊಡಗುವನು. ಪರಂಪರಾಗತ **ಲಿಂಗಾಚರಣೆ**ಯಲ್ಲಿ-ಇಷ್ಟಲಿಂಗಧಾರಣೆ, **ಸದಾಚಾರ**ದಲ್ಲಿ-ಗುರು, ಲಿಂಗ, ಜಂಗಮ ಸಂತರ್ಪಣೆ; **ಶಿವಾಚಾರ**ದಲ್ಲಿ ಶಿವನೇ ಪರಬ್ರಹ್ಮ, ಶಿವನಿಗಿಂತ ಪರಮವು ಬೇರೊಂದಿಲ್ಲ. ಗಣಾಚಾರದಲ್ಲಿ ಶಿವನ ಬಗ್ಗೆ, ಶಿವನಭಕ್ತರ ಬಗ್ಗೆ ನಿಂದೆಯಾದಾಗ ಪ್ರತೀಕಾರವನ್ನು ಮಾಡುವುದು ಬಂದರೆ **ಭೃತ್ಯಾಚಾರ**ದಲ್ಲಿ ಜಗತ್ತನ್ನು ಪಾವನಗೊಳಿಸಿ, ಶಿವಭಕ್ತರನ್ನು ಶ್ರೇಷ್ಠರೆಂದು ತಿಳಿದು ಸಾಮಾಜಿಕ, ನೈತಿಕ ಕಾರ್ಯಗಳಲ್ಲಿ ಭೃತ್ಯನಂತೆ ಸೇವಿಸುವುದನ್ನು ಹೇಳಲಾಗಿದೆ.

ವೀರಶೈವನು ತನಗೆ ಅನುಕೂಲವಾದ ವೇಳೆಯಲ್ಲಿ ಇಷ್ಟಲಿಂಗದ ಅರ್ಚನೆಯನ್ನು ಮಾಡಿಕೊಳ್ಳುವನು. ತನ್ನ ಸ್ಥೂಲದೇಹದಲ್ಲಿ ಇಷ್ಟಲಿಂಗವನ್ನು ಧರಿಸಿ ಭಾವವನ್ನು ಮತ್ತು ಪ್ರಾಣವನ್ನು ಅದರೊಡನೆ ಸಮನ್ವಯಗೊಳಿಸಿ ಭಗವಂತ ಸ್ವರೂಪ ವ್ಯಾಪ್ತಿಗೆ ಆಸ್ಪದ ಮಾಡಿಕೊಡುವನೆಂದು ನಂಬಲಾಗಿದೆ. ಶಿವನ ಆರಾಧನೆಯು ವೀರಶೈವರ ಏಕದೇವೋಪಾಸನೆಯನ್ನು ಎತ್ತಿ ತೋರಿಸುತ್ತದೆ.

ಗಣಂಗಳು, ಜಂಗಮರು-ಪಂಚಮಸಾಲಿ ಇತ್ಯಾದಿ

ಶಿವಗಣರ ಸಂತಾನವೇ ವೀರಮಹೇಶ್ವರರು ಅಥವಾ ಜಂಗಮರು ಎನ್ನುವರು. ಶಿವಗಣರ ಸಂತಾನವಾದ ಕಾರಣ ಇವರಿಗೆ ಮತ್ತು ಹೆಚ್ಚಾಗಿ ಅಯ್ಯಾಚಾರ ಆಗದ ಜಂಗಮರ ಮಕ್ಕಳಿಗೆ *ಗಣಂಗಳು* ಎನ್ನುವರು.

ಪರಮಾತ್ಮನ ಈಶಾನ್ಯ ಮುಖದಿಂದ ಪಂಚವಕ್ತ್ರ ಗಣೇಶ್ವರನು ಜನಿಸಿದ. ಆ ಗಣೇಶನ ಐದು ಮುಖಗಳಿಂದ ಮಖಾರಿ, ಕಾಲಾರಿ, ಪಾರೇರಿ, ಸ್ಮರಾರಿ ಮತ್ತು ವೇದಾಲಿ ಜನಿಸಿದರು. ಈ ಪಂಚ ಸಂತಾನವನ್ನು ಪಂಚಮಸಾಲಿ ಎಂದು ಕರೆಯುವರು.[೨೨] ಪಂಚಾಚಾರ್ಯ ಪರಂಪರೆಯಲ್ಲಿ ಸುಮಾರು ೭೫೦ ಜಾತಿಗಳು ಒಳಗೊಂಡಿವೆ ಎನ್ನುವರು. ಪಂಚಮಸಾಲಿ, ಬಣಜಿಗರು, ಶಿವಸಾಲಿ, ಪದ್ಮಸಾಲಿ, ಸಾದರುಲಿಂಗಾಯತರು, ಕುರುಹಿನಶೆಟ್ಟರು, ದೇವಾಂಗ ಸಮಾಜದವರು ಇತ್ಯಾದಿ ಅಲ್ಲದೆ ಕುರುಬರು ಮತ್ತು ವಾಲ್ಮೀಕಿ ಜನಾಂಗದವರು ಮುಂತಾದವರು ಶ್ರೀಪೀಠದ ಭಕ್ತರಾಗಿದ್ದಾರೆ. ವೀರಶೈವರಲ್ಲಿ ಜಂಗಮ (ಗಣ) ಮತ್ತು ಪಂಚಮ (ಭಕ್ತ) ವಂಶಗಳಿವೆ. ಈ ಪಂಚಮರಲ್ಲಿ ಅನೇಕ ಜಾತಿ, ಉಪಜಾತಿಗಳಿದ್ದವು. ಜಂಗಮರೇ ಭಕ್ತ ಜನರ ಧಾರ್ಮಿಕ ಸಂಸ್ಕಾರದ ವಿಧಿ ವಿಧಾನಗಳನ್ನು ನಿರ್ವಹಿಸುವರು. ವೀರಶೈವರಿಗೆ ಸೂತ್ರ-ಗೋತ್ರಗಳಿದ್ದು ಒಂದೊಂದು ಸೂತ್ರಕ್ಕೆ ಹನ್ನೆರಡರಂತೆ ಉಪಸೂತ್ರಗಳಿವೆ.[೨೩]

ಕಲಶಾಧಿಪತಿಗಳು[೨೪]

ಕುಂಭಪೂಜಾ ಸಂದರ್ಭದಲ್ಲಿ ಪಂಚಕಳಸ ಹೂಡಿದಾಗ ಪ್ರತಿಯೊಂದು ಕುಂಭದಲ್ಲಿ ಗಂಗಾನದಿ ಸರ್ವತೀರ್ಥಗಳನ್ನು ತರಿಸಬೇಕು. ಆ ಕುಂಭದಲ್ಲಿರುವ ಮಂತ್ರೋದಕವನ್ನೇ ಪಂಚ ಕಲಶಗಳಲ್ಲಿ ತುಂಬುವುದಕ್ಕೂ, ಹಸ್ತ-ಮಸ್ತಕಾದಿ ಪೂಜಾಕಾರ್ಯಗಳಿಗೂ ಉಪಯೋಗಿಸಬೇಕೆಂದು ಇದು ಶಾಸ್ತ್ರ ಮತ್ತು ಪರಂಪರೆ ಎನ್ನಲಾಗಿದೆ.

ಪರಶಿವನ ಪಂಚಮುಖಗಳೇ ಪಂಚಕಲಶಗಳು. ಪಂಚಭೂತಗಳಿರುತ್ತವೆ. ಪಂಚಗೋತ್ರ-ಸೂತ್ರಗಳು, ಪಂಚವಾಯುಗಳಿವೆ. ಮಾನವ ಶರೀರವು ಪೃಥ್ವೀಯಾದಿ ಪಂಚತತ್ವಗಳಿಂದುತ್ಪನ್ನವಾಗಿದೆ. ಪಂಚಾಚಾರ್ಯರು ಒಂದೊಂದು ತತ್ವಕ್ಕೆ ಅಧಿಪತಿಗಳು. ಆದುದರಿಂದ ವೀರಶೈವರು ದೀಕ್ಷಾ, ವಿವಾಹಾದಿ ಕಾರ್ಯಗಳಲ್ಲಿ ಪಂಚಕಲಶಗಳನ್ನು ಸ್ಥಾಪಿಸುವರು ಎಂದು ಸಿದ್ಧಾಂತ ಶಿಖಾಮಣಿ, ೬ನೇ ಪರಿಚ್ಛೇದದ ಗುರುಕಾರ್ಯಸ್ಥಲದಲ್ಲಿ ಉಲ್ಲೇಖಗೊಂಡಿದೆ.

ರೇವಣಾರಾಧ್ಯರು ೧೨೦೦೦ ಜಂಗಮರಿಗೆ ಅಧಿಪತಿಗಳು. ಶ್ರೀ ಮರುಳಾರಾಧ್ಯರು ೬೦೦೦ ಜಂಗಮರಿಗೆ ಅಧಿಪತಿಗಳು. ಏಕೋರಾಮಾರಾಧ್ಯರು ೩೦೦೦ ಜಂಗಮರಿಗೆ ಅಧಿಪತಿಗಳು. ಪಂಡಿತಾರಾಧ್ಯರು ಅಸಂಖ್ಯಾತ ಜಂಗಮರಿಗೆ ಅಧಿಪತಿಗಳು. ವಿಶ್ವಾರಾಧ್ಯರು ಭೂಮಂಡಲದಲ್ಲಿರುವ ಸಮಸ್ತ ಜಂಗಮರಿಗೆ ಅಧಿಪತಿಗಳು ಎಂಬುದನ್ನು ಸುಪ್ರಬೇಧಾಗಮ ತಿಳಿಸುತ್ತದೆ. ವೀರಶೈವ ವಿವಾಹಾದಿ ಶುಭ ಸಂದರ್ಭಗಳಲ್ಲಿ ಪಂಚ ಕಳಸಗಳನ್ನು ಹೂಡುವರು. ಪೂರ್ವ ದಿಕ್ಕಿನ ಕಳಸವು ಶ್ರೀ ರೇವಣಾರಾಧ್ಯರನ್ನು, ದಕ್ಷಿಣ ದಿಕ್ಕಿನ ಕಳಸವು ಶ್ರೀ ಮರುಳಾರಾಧ್ಯರನ್ನು, ಪಶ್ಚಿಮ

ದಿಕ್ಕಿನ ಕಳಸವು ಶ್ರೀ ಏಕೋರಾಮಾರಾಧ್ಯರನ್ನು, ಉತ್ತರ ದಿಕ್ಕಿನ ಕಳಸವು ಶ್ರೀ ಪಂಡಿತಾರಾಧ್ಯರನ್ನು ಮತ್ತು ಮಧ್ಯದ ಕಳಶವು ಶ್ರೀ ವಿಶ್ವಾರಾಧ್ಯರನ್ನು ಪ್ರತಿನಿಧಿಸುತ್ತವೆ. ಜತೆಯಲ್ಲಿ ಪಂಚಾಚಾರ್ಯರ ಪಂಚನಿಶಾನೆಗಳನ್ನು ನಿಲ್ಲಿಸುತ್ತಾರೆ. ಈ ಶುಭಕಾರ್ಯಗಳಲ್ಲಿ ಗುಗ್ಗುಳವನ್ನು ಏರ್ಪಡಿಸುವರು. ಅದರಲ್ಲಿ ವೀರಶೈವ ಸಂಪ್ರದಾಯದ ವೀರಭದ್ರನ ಒಡಪುಗಳನ್ನು ಹೇಳುವರು. ದೀಕ್ಷಾಕಾರ್ಯ, ಮಂತ್ರೋಪದೇಶ, ವಿವಾಹ, ಗುರು-ಚರಪಟ್ಟಾಭಿಷೇಕ, ಅನುಗ್ರಹ ನಿಗ್ರಹದಲ್ಲಿ ಆಹ್ವಾನ-ವಿಸರ್ಜನ ಮತ್ತು ಲಿಂಗಧಾರಣದಲ್ಲಿ ಶ್ರೀಪಂಚಾಚಾರ್ಯರೇ ಸ್ವತಂತ್ರರು.

ಗುಂಡಬ್ರಹ್ಮಯ್ಯರು

ಪಂಚಾಚಾರ್ಯರಿಂದ ಗುಂಡಬ್ರಹ್ಮಯ್ಯಗಳು ದೀಕ್ಷೆ ಪಡೆದ ಒಂದು ದಾಖಲೆ ಇತ್ತೀಚೆಗೆ ಪತ್ತೆಯಾಗಿದೆ.[೨೦] ಈ ದಾಖಲೆಯನ್ನು ಕೋರಿ ಕಾಗದದಲ್ಲಿ ಬರೆದಿದ್ದು ಹಿಂಬದಿಯಲ್ಲಿ ಅದಕ್ಕೆ ತೆಳ್ಳನೆಯ ಅರಿವೆಯನ್ನು ಅಂಟಿಸಲಾಗಿದೆ. ***(ಚಿತ್ರ.ಸಂ.೨೭)*** ಅದು ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿಯ ಚಕ್ರಸಾಲಿ ವೀರಪ್ಪನವರಿಂದ ದೊರೆತಿದ್ದು ಈಗ ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದಲ್ಲಿದೆ. ***(ಕ್ರ.ಸಂ.೨೬೩)***. ಈ ಹಸ್ತಪ್ರತಿಯು ಗುಂಡಬ್ರಹ್ಮಯ್ಯರ ಕಥಾನಕದಲ್ಲಿ ಹನ್ನೆರಡು ಗುಂಡರ ವಿವರವಿದೆ. ಅವರು ಆದಿಗುಂಡ, ಚಕ್ರಿಯಗುಂಡ, ತ್ರಿಭುವನ ಮೂಲ ಚಕ್ರಗುಂಡ, ಭೂಗುಂಡ, ಬ್ರಹ್ಮಾಂಡ ಬಾಂಡರ, ಜೀವಮೇರು ಅಜಂಡಾ, ಬಾಂಡೋಧರ, ಬಾದರಾಯಿಣಿ, ಬಾದಮೈಯ್ಯ, ಬಾರಿಗುಂಡ(ಭೂಮಿಗುಂಡ), ಪಂಚಕಲಶ ಪ್ರತಿಷ್ಠಾಪನಾ ಗುಂಡ ಮತ್ತು ಪಂಚಕಲಶಕ್ಕೆ ಆಜ್ಞಾಧಾರಕ ಗುಂಡ. ಇವರಲ್ಲಿ ೧೦ ಗುಂಡಯ್ಯರಿಗೆ ಪಂಚಾಚಾರ್ಯರಿಂದ ವೀರಶೈವ ದೀಕ್ಷೆ ಪ್ರಾಪ್ತವಾಯಿತೆಂದು ಹೇಳಲಾಗುತ್ತಿದೆ. ಅವರ ದಿಕ್ಕುಗಳನ್ನು ಹೀಗೆ ಹೇಳಿದೆ.

೧. ಜೀವಮೇರು ಅಜಂಡಾ ಮತ್ತು ಬಾಂಡೋಧರ ಗುಂಡರು ರೇವಣಾರಾಧ್ಯರಿಂದ - ಇವರ ದಿಕ್ಕು ವರುಣ

೨. ಆದಿಗುಂಡ ಮತ್ತು ಬಾರಿಗುಂಡರು ವಿಶ್ವಾರಾಧ್ಯರಿಂದ - ಇವರ ದಿಕ್ಕು ಈಶಾನ್ಯ

೩. ಚಕ್ರಿಯಗುಂಡ ಮತ್ತು ತ್ರಿಭುವನಮೂಲ ಚಕ್ರಗುಂಡರು ಪಂಡಿತಾರಾಧ್ಯರಿಂದ - ಇವರ ದಿಕ್ಕು ಯಮ

೪. ಪಂಚಕಲಶ ಪ್ರತಿಷ್ಠಾಪನಾ ಮತ್ತು ಪಂಚಕಲಶಕ್ಕೆ ಆಜ್ಞಾಧಾರಕ ಗುಂಡರು ಶ್ರೀ ಮರುಳಾರಾಧ್ಯರಿಂದ - ಇವರ ದಿಕ್ಕು ಕುಬೇರ

೫. ಬ್ರಹ್ಮದಂಡ ಭೂರ್ಲಂಡ ಮತ್ತು ಬ್ರಹ್ಮಾಂಡ ಭಾಂಥಕ ಗುಂಡರು ಏಕೋರಾಮಾರಾಧ್ಯರಿಂದ - ಇವರ ದಿಕ್ಕು ವಾಯುವ್ಯ

ಹೀಗೆ ವೀರಶೈವ ದೀಕ್ಷೆಯನ್ನು ಹತ್ತು ಗುಂಡರು ಪಡೆದರು. ಉಳಿದಿಬ್ಬರು ಬಾದರಾಯಣಿ ಮತ್ತು ಬಾದುಮೈಯ ಗುಂಡರು ವೀರಶೈವ ದೀಕ್ಷೆಯನ್ನು ಹೊಂದಲಿಲ್ಲವೆಂದು ಹೇಳಿದೆ.

ಗುರುವರ್ಗ ಮಠಗಳು

ಗುರುವರ್ಗದ ಮಠಗಳು ಪಂಚಾಚಾರ್ಯರ ಸಂಪ್ರದಾಯದಲ್ಲಿವೆ. ಅವುಗಳ ಕೇಂದ್ರಸ್ಥಳಗಳು ಉಜ್ಜಯಿನಿ, ರಂಭಾಪುರಿ, ಹಿಮವತ್‌ಕೇದಾರ, ಕಾಶಿ ಮತ್ತು ಶ್ರೀಶೈಲ. ಈ ಪೀಠಗಳಿಗೆ ಹೊಂದಿದ ಮಠಗಳನ್ನು ಗುರು ವರ್ಗದ ಮಠಗಳೆನ್ನುವರು. ಗುರುವರ್ಗದ ಮಠಗಳಲ್ಲಿ ಎರಡು ಪ್ರಕಾರಗಳಿವೆ.

ಹಿರೇಮಠ, ಪುತ್ರವರ್ಗದ ಮಠ ಮತ್ತು ಶಿಷ್ಯವರ್ಗದ ಮಠ

ಹಿರೇಮಠ, ಪುತ್ರವರ್ಗದ ಮಠ

ಹಿರೇಮಠದವರಿಗೆ ಶ್ರೀಮದ್, ಘನಲಿಂಗ ಚಕ್ರವರ್ತಿ ಎಂತಲೂ ಮತ್ತು ಷಟ್‌ಸ್ಥಲ, ಬ್ರಹ್ಮಿ ಎಂತಲೂ ಕರೆಯುವರು. ಜತೆಯಲ್ಲಿ ಪಟ್ಟದ ದೇವರೆಂಬ ನಾಮಾಂಕಿತದಿಂದಲೂ ಧಾರ್ಮಿಕ ಕ್ರಿಯೆಗಳಲ್ಲಿ ಅವರು ಪಾಲ್ಗೊಳ್ಳುವರು. ಮಠಗಳಿಗೆ ಯೋಗ್ಯ ವಟುಗಳನ್ನು ಆರಿಸಿ ನೇಮಿಸುವುದು ನಂತರ ಅಧಿಕಾರ ಕೊಡುವುದು ಪಟ್ಟಾಭಿಷೇಕವನ್ನು ಮಾಡುವದು ಇವರ ಕರ್ತವ್ಯ.

ವಿರಕ್ತ ಮಠಗಳು

ವಿರಕ್ತವರ್ಗದ ಮಠಗಳಲ್ಲಿ ಚರಜಂಗಮರು, ಸ್ಥಿರಜಂಗಮರು ಕಾಣುವರು. ಈ ಮಠಗಳಲ್ಲಿ ಮುರುಘಾ ಸಮಯ, ಕುಮಾರ ಸಮಯ, ಚಿಲ್ಲಾಳ ಸಮಯ, ಕೆಂಪಿನ ಸಮಯ ಮತ್ತು ಸಂಪಾದನೆ ಸಮಯಗಳಿವೆ.

ಮಠಗಳ ಕಟ್ಟಡಗಳು

ಮಠಗಳ ಕಟ್ಟಡಗಳು ಭವ್ಯ ಪ್ರಮಾಣದಲ್ಲೂ ಇರುತ್ತವೆ. ಮುಖ್ಯದ್ವಾರಗಳು ದೊಡ್ಡದಾಗಿರುತ್ತವೆ. ಒಳಗಡೆ ಪಡಸಾಲೆಗಳಿರುತ್ತವೆ. ಅದಕ್ಕೆ ಹೊಂದಿ ಕೊಠಡಿಗಳಿರುತ್ತವೆ. ಮಠದಸ್ವಾಮಿ ಲಿಂಗೈಕ್ಯರಾದರೆ ಅವರ ಸಮಾಧಿಗಳನ್ನು ಮಠದಲ್ಲೇ ಕಟ್ಟುವರು. ಈ ಸಮಾಧಿಗೆ ಕೋಣೆ ಅಥವಾ ಮಂಟಪ ಕಟ್ಟುತ್ತಾರೆ. ಅದು ಕೆಲವೊಮ್ಮೆ ಆರಾಧಿಸುವ ದೇವಾಲಯದ ಗರ್ಭಗೃಹದಂತಿರುತ್ತದೆ. ಮಠದ ಸ್ವಾಮಿಗಳ ನಿತ್ಯ ಪೂಜಾ, ಜಪ, ತಪ, ಮೌನ, ಅನುಷ್ಠಾನ ನಿಯಮಗಳನ್ನು ನಿರ್ವಹಿಸಲು ಶಿವಪೂಜಾ ಮಂದಿರಗಳಿರುತ್ತವೆ.

ವೀರಶೈವರಿಗೆ ಪ್ರಧಾನ ಮಠಗಳು/ಪೀಠಗಳು ಶ್ರೀ ಪಂಚಾಚಾರ್ಯರ ಸಿಂಹಾಸನಗಳಾಗಿವೆ. ಪ್ರತಿಯೊಂದು ಪೀಠಕ್ಕೆ ಈ ಮೇಲೆ ಹೇಳಿದ ರೀತಿಯಲ್ಲಿ ಶಾಖಾ

ಮಠಗಳಿವೆ. ಅವು ವೀರಶೈವ ಧರ್ಮದ ಸಂಸ್ಕಾರ ಕಾರ್ಯಗಳನ್ನು ತಾವಿರುವ ಸ್ಥಳಗಳಲ್ಲಿ ನಿರ್ವಹಿಸುತ್ತವೆ. ಈ ಸಂಸ್ಕಾರಗಳನ್ನು ಮಠದ ಗುರುಗಳು ನಡೆಸಿಕೊಂಡು ಹೋಗಲು ನಿರಾಕರಿಸಿದರೆ ಅಥವಾ ಪಾಲಿಸದಿದ್ದರೆ ಅಥವಾ ಅಹಿತಕರ ವಿರೋಧಗಳುಂಟಾದರೆ ಆ ಸಮಸ್ಯೆಗಳನ್ನು ಸಂಬಂಧಿಸಿದ ಪೀಠಾಚಾರ್ಯರ ಮೂಲಕ ಬಗೆಹರಿಸುವ ಪರಂಪರೆಯಿದೆ.

ಅಡಿ ಟಿಪ್ಪಣಿ

೧. ಆರ್. ಸಿ. ಹಿರೇಮಠ; ೧೯೮೮ : ''ವೀರಶೈವ ಪ್ರಾಚೀನತೆ'', ಚಂದ್ರಕಿರಣ ಮತ್ತು **ವೀರಶೈವ ದರ್ಶನ,** ಪು. ೧೯ ಹೊನ್ನಾಳಿ.

೨. ಡಾ. ಪಂ|| ಪುಟ್ಟರಾಜ ಕವಿ ಗವಾಯಿಗಳು; ೧೯೭೬: ''ಜಗದ್ಗುರು ಪಂಚಾಚಾರ್ಯರ ಅವತಾರ'' **ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಕಾಶ**, ಪು. ೧೦೬.

೩. ಶ್ರೀ ನೀಲಕಂಠ ಶಿವಾಚಾರ್ಯರ **''ಕ್ರಿಯಾಸಾರದ ಉಪೋದ್ಘಾತ ಪ್ರಕರಣ''.**

೪. ಪಂ|| ವೇ|| ಷಣ್ಮುಖಯ್ಯ ಅಕ್ಕೂರ ಮಠ; ೧೯೭೬: ''ವೀರಶೈವ ಸಿದ್ಧಾಂತದ ನೆಲೆ ಹಾಗೂ ಹಿನ್ನೆಲೆ,'' **ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಕಾಶ,** ಪು. ೯, ಗದಗ-ಬೆಟಗೇರಿ.

೫. ವೇ||ಪಂ|| ವಿರೂಪಾಕ್ಷ ಶಾಸ್ತ್ರಿಗಳು; ೧೯೭೬, ''ವೀರಶೈವ ಮತಧರ್ಮಸಾರ'' **ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಕಾಶ**, ಪು. ೧೬, ಗದಗ-ಬೆಟಗೇರಿ.

೬. ಸುಪ್ರಭೇದಾಗಮಾಂತರ್ಗತ ಪಂಚಾಚಾರ್ಯ ಪಂಚವೋತ್ಪತ್ತಿ ಪ್ರಕರಣ, ಪು.೩, **'ವೀರಶೈವ ಸದಾಚಾರ ಸಂಗ್ರಹ - ೧'**, ಪು. ೩೨-೩೯.

೭. ಷ||ಬ್ರ||ಡಾ||ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು; ೨೦೦೧; **ವೀರಶೈವ ಪಂಚಪೀಠ ಪರಂಪರೆ**, ಪು.೧೩, ಉಜ್ಜಯಿನಿ.

೮. ಶ್ರೀ ಷ||ಬ್ರ|| ಸಂಗಮೇಶ್ವರ ಶಿವಾಚಾರ್ಯರು; ೧೯೭೪, ''ವೀರಶೈವ ಮತಸ್ಥಾಪಕರು ಶ್ರೀ ಜಗದ್ಗುರು ಪಂಚಾಚಾರ್ಯರು'', **ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಕಾಶ,** ಪು. ೬೮,೬೯, ಗದಗ-ಬೆಟಗೇರಿ.

೯. ಅದೇ.

೧೦. ಅದೇ.

೧೧. ಅದೇ.

೧೨. ಅದೇ.

೧೩. ವೇ||ಪಂ||ವಿರೂಪಾಕ್ಷ ಶಾಸ್ತ್ರಿಗಳು ; ೧೯೭೬: ''ವೀರಶೈವ ಮತ್ತು ಧರ್ಮಸಾರ'' **ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಕಾಶ**, ಪುಟ೧೫-೨೦, ಗದಗ-ಬೆಟಗೇರಿ.

೧೪. ಅದೇ.

೧೫. ಪಂ||ವೇ|| ಷಣ್ಮುಖಯ್ಯ ಅಕ್ಕೂರಮಠ; ೧೯೭೬, ''ವೀರಶೈವ ಸಿದ್ಧಾಂತದ ನೆಲೆ ಹಾಗೂ ಹಿನ್ನೆಲೆ'', **ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಕಾಶ**, ಪು.೯, ಗದಗ-ಬೆಟಗೇರಿ.

೧೬. ನಾಗನೂರು ಬ್ರ||ವೇ||ಮಹಾದೇವಯ್ಯ; ೧೯೭೬, ''ಪಂಚಾಚಾರ್ಯ ಪ್ರಕಾಶ'' **ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಕಾಶ**, ಪು.೨೪, ಗದಗ-ಬೇಟಗೇರಿ.

೧೭. ಅದೇ, ಪು. ೨೬-೩೧.

೧೮. ವೇ||ಪಂ||ವಿರೂಪಾಕ್ಷ ಶಾಸ್ತ್ರಿಗಳು ; ೧೯೭೬: ''ವೀರಶೈವ ಮತ್ತು ಧರ್ಮಸಾರ'', **ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಕಾಶ**, ಪುಟ೧೮-೧೯, ಗದಗ-ಬೆಟಗೇರಿ.

೧೯. ಪಂ॥ವೇ॥ ಷಣ್ಮುಖಯ್ಯ ಅಕ್ಕೂರಮಠ; ೧೯೭೬, ''ವೀರಶೈವ ಸಿದ್ಧಾಂತದ [illegible] ಹಾಗೂ ಓಸ್ಕೆಲೆ'', **ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಕಾಶ**, ಪು. ೧೧, ಗದಗ-ಬೆಟಗೇರಿ.

೨೦. ವೇ॥ಪಂ॥ವಿರೂಪಾಕ್ಷಶಾಸ್ತ್ರಿಗಳು; ೧೯೭೬ ''ವೀರಶೈವ ಮತ್ತು ಧರ್ಮಸಾರ'', **ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಕಾಶ**, ಪು. ೧೯, ಗದಗ-ಬೆಟಗೇರಿ.

೨೧. ನಾಗನೂರು ಬ್ರ॥ವೇ॥ಮಹಾದೇವಯ್ಯ; ೧೯೭೪, ''ಪಂಚಾಚಾರ್ಯ ಪ್ರಕಾಶ'' **ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಕಾಶ**, ಪು.೨೪, ಗದಗ-ಬೇಟಗೇರಿ.

೨೨. ಅದೇ, ಪುಟ. ೨೬.

೨೩. ಅದೇ, ಪುಟ. ೨೭.

೨೪. ಅದೇ.

೨೫. ಅದೇ.

೨೬. ಅದೇ, ಪು. ೨೬-೨೭.

೨೭. ಶ್ರೀ ಚಂದ್ರಶೇಖರಸ್ವಾಮಿ ಹಿರೇಮಠ; ೧೯೭೬: ''ಶ್ರೀ ಜಗದ್ಗುರು ಪಂಚಾಚಾರ್ಯ ವೀರಶೈವ ಮತಸ್ಥಾಪಕರು'', **ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಕಾಶ,** ಪು.೯೬-೯೯, ಗದಗ-ಬೆಟಗೇರಿ.

೨೮. ಅದೇ.

೨೯. ನಾಗನೂರು ಬೃಹನ್ಮಠದ ವೇ॥ಪಂ॥ ಮಹಾದೇವಯ್ಯನವರು; ೧೯೭೬, 'ಪಂಚಾಚಾರ್ಯ ಪ್ರಕಾಶನ', **ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಕಾಶ,** ಪು.೨೪, ಗದಗ-ಬೆಟಗೇರಿ.

೩೦. ಕೆ.ರವೀಂದ್ರನಾಥ; ೨೦೦೦, ''ಗುಂಡಬ್ರಹ್ಮಯ್ಯಗಳು: ಒಂದು ದಾಖಲೆ'', **ಇತಿಹಾಸದರ್ಶನ**, ಸಂ.೧೫, ಪು.೭೫-೭೯, ಬೆಂಗಳೂರು.

ಶಿಲಾ ಶಾಸನಗಳು

ಪ್ರಸ್ತುತ ಅಧ್ಯಯನದಲ್ಲಿ ಒಟ್ಟು ೧೯ ಶಿಲಾಶಾಸನಗಳ ಪಾಠ ಮತ್ತು ಸ್ಥೂಲ ಸಾರಾಂಶವಿದೆ. ಅದರಲ್ಲಿ ಬಳ್ಳಾರಿ ಜಿಲ್ಲಾ ಕೂಡ್ಲಿಗಿ ತಾಲೂಕಿನ ಉಜ್ಜಯಿನಿ ಗ್ರಾಮದಲ್ಲಿ ಒಟ್ಟು ಹದಿನೈದು ಶಿಲಾಶಾಸನಗಳಿವೆ. ಉಳಿದ ಶಾಸನಗಳು ಬೇರೆ ಸ್ಥಳಗಳಿಗೆ ಸೇರಿದವುಗಳಾಗಿವೆ. ಈ ಶಾಸನಗಳು ಪಾಂಡ್ಯ, ಯಾದವ, ವಿಜಯನಗರ, ಬಾಗಳಿಯ ಪಾಳೆಗಾರ ಮತ್ತು ಆಧುನಿಕ ಕಾಲಾವಧಿಗೆ ಸೇರಿವೆ. ಈ ಶಾಸನಗಳ ಕಾಲ ಸು. ಕ್ರಿ.ಶ. ೧೩ನೇ ಶತಮಾನದಿಂದ ಕ್ರಿ.ಶ. ೨೦ನೇ ಶತಮಾನ. ಶಾಸನಗಳ ಲಿಪಿ ಮತ್ತು ಭಾಷೆ ಕನ್ನಡ. ಕೆಲವು ಕನ್ನಡ ಶಾಸನಗಳಲ್ಲಿ ಸಂಸ್ಕೃತ ಶ್ಲೋಕಗಳಿವೆ.

ನಂ. ೧

ಉಜ್ಜಯಿನಿಯ ಮರುಳಸಿದ್ಧ ದೇವಾಲಯದ ಸ್ತಂಭ ಶಾಸನ

(ಎಸ್. ಐ. ಐ. ೯: ಭಾಗ-೧, ನಂ. ೩೭೫)★

(ರು.ಮ. ಷಡಕ್ಷರಯ್ಯ, ೧೯೭೭, ''ಉಜ್ಜಯಿನಿ ಮರುಳಸಿದ್ಧ ದೇವಾಲಯದಲ್ಲಿರುವ ಶಾಸನ'' **ಮಾನವಿಕ ಕರ್ನಾಟಕ**, ಸಂ-೮, ಸಂ-೧, ಪು. ೪೧-೪೨, ಮೈಸೂರು ವಿಶ್ವವಿದ್ಯಾಲಯ, ಮೈಸೂರು.)●

ಪಾಠ

೧. ಶ್ರೀಮತು **ಯಾದವನಾರಾಯಣಂ** ಭುಜಬಳ ಪ್ರತಾಪ ಚಕ್ರವರ್ತ್ತಿ

೨. ಶ್ರೀ ವೀರ **ಮಹಾದೇವರಾಯ** ವಿಜಯರಾಜ್ಯೋದಯದ

೩. **[ಒ]ಂಭತ್ತನೆಯ ವಿಭ ಸಂವಛರದ ಕಾರ್ತ್ತಿಕ ಬಹು** [ಳ

೪. ದ]ಮವಾಸೆ **ಸೋಮವಾರ ಸೂರಿಯಗ್ರಹಣದಲು** ಸ್ವಸ್ತಿ ಶ್ರೀ

★ ಈ ಸಂಪುಟದಲ್ಲಿ ಈ ಶಾಸನದ ಹೆಚ್ಚು ಅಕ್ಷರಗಳು ಸವೆದು ಹೋಗಿರುವುದಾಗಿ ವರದಿಯಾಗಿದೆ.

● ಲೇಖಕರು ಈ ಶಾಸನದ ಪ್ರತಿಯನ್ನು ತೆಗೆದು ಅದರ ಸಂಪೂರ್ಣ ಪಾಠವನ್ನು ಪಡೆದ ನಂತರ ಈ ಲೇಖನವನ್ನು ಪ್ರಕಟಿಸಿದರು.

೫. [ಮ]ಸು ಮಹಾಪ್ರಧಾನಂ ಸರ್ವ್ವಾಧಿಕಾರಿ **ತಿಪ್ಪರಸರ** ಅಳಿ

೬. [ಯ] **ಚವುಂಡರಸರು** ಪಾಂಡ್ಯನಾಡಾ ಸರ್ವ್ವಾಧಿಕಾರಮಂ

೭. ಮಾಡುತ್ತಿರ್ದ್ದಲ್ಲಿ ಅವರ ಕೆಯಲು ಪಡಿಕೇಣಿಯಾಗಿ ಸುಂಕಾಧಿಕಾ-

೮. ರಮಂ ಮಾಡುತಿರ್ದ್ದ **ಚಿಗುಟೇಜಿ** ಸುಂಕದ **ಚವುಡರ್ಸ**ವು-

೯. **ಜ್ಜ**ನಿಯ **ಸೇನಬೋವ ಗೋವಿಂದರ್ಸ**ನ ಮಗ ಸುಂಕದ **ಬೋಗಯನೂ**

೧೦. ಅಳಿಯ **ಚಉಡರ್ಸ**ರ ನಿರೂಪದಿಂ **ಉಜ್ಜ**ನಿಯ **ಶ್ರೀ ಮಲ್ಲಿಕಾರ್ಜು**ನ

೧೧. ದೇವರ ಶ್ರೀ ಕಾರ್ಯ್ಯಕ್ಕೆ ಬಿಟ್ಟ ಧರ್ಮ್ಮ ಪುರದ ಗುಡುಗಳು **ಕಗರ ಗೋಪಯ್ಯ**

೧೨. ಎನ ಬೈವಹಾರವಂ ತಂದಡೆ ಸುಂಕ ಶ್ರೀ ಮಾಂನ್ಯ ದೇವಂಗೆ

೧೩. ಧಾರಾಪೂರ್ವ್ವಕವಾಗಿ ಕೊಟ್ಟರು [।*] ಯೀ ಧರ್ಮ್ಮವನು ಆರು ಮೀಱಿಂ

೧೪. ದಡಂ ಮಹಾಗಣಂಗಳು ನಡಸುವರು ॥ ಸ್ವದತ್ತಂ ಪರದತ್ತ ವ್ವಾ-

೧೫. ಯ್ಯೋ ಹರೇತಿ ವಸುಂಧರ ಸಷ್ಟಿರ್ವ್ವರುಶ ಸಹಸ್ರಾಣಿ ಯಿಷ್ಟಾಯಾಂ

೧೬. ಜಾಯತೇ ಕ್ರಿಮಿ ॥

ಸಾರಾಂಶ

ಈ ಕಂಬ ಶಾಸನದ ಬಲಬದಿಯ ಮೇಲ್ಭಾಗ ಸ್ವಲ್ಪ ಒಡೆದಿದೆ. ಅದರಲ್ಲಿ **ಯಾದವ ಮಹಾದೇವರಾಯನು** ಆಳುತ್ತಿರುವಾಗ **ಮಹಾಪ್ರಧಾನಿ ತಿಪ್ಪರಸರ**ನ ಅಳಿಯ **ಚವುಂಡರಸರು ಪಾಂಡ್ಯನಾಡಿನ** ಸರ್ವ್ವಾಧಿಕಾರಿಯಾಗಿದ್ದನೆಂದು ಮತ್ತು ಅವರ **ಪಡಿಕೇಣಿ ಚಿಗುಟೇಜಿ ಚವುಡರಸ** ಸುಂಕಾಧಿಕಾರಿಯಾಗಿದ್ದನೆಂದು ಹೇಳಲಾಗಿದೆ. ಚಿಗುಟೇಜಿ **ಸುಂಕದ ಚವುಡ**ರಸ, ಉಜ್ಜನಿಯ **ಸೇನ ಭೋವ ಗೋವಿಂದರಸನ** ಮಗ ಸುಂಕದ **ಭೋಗಯ್ಯ**, ಅಳಿಯ **ಚಿವುಂಡರಸರ** ನಿರೂಪದಿಂದ ಪುರದ ಗುಡುಗಳು, ಕರಗ **ಗೋಪಯ್ಯ**ರು ಯಾವುದೇ ವ್ಯವಹಾರದಿಂದ ಬರುವ ಸುಂಕವನ್ನು ಉಜ್ಜನಿಯ ಶ್ರೀಮಲ್ಲಿಕಾರ್ಜುನ ದೇವರ ಶ್ರೀಕಾರ್ಯಕ್ಕೆ ನೀಡಿದರೆಂದು ಹೇಳಲಾಗಿದೆ. ಈ ಧರ್ಮವನ್ನು ಯಾರಾದರೂ ಮೀರಿ ನಡೆದುಕೊಂಡರೆ ಮಹಾಗಣಂಗಳ ಕಾರ್ಯ ನಡೆಸುವರೆಂದು ವಿಧಿಸಲಾಗಿದೆ.

ಈ ಶಾಸನದ ಕಾಲ **ಯಾದವ ಮಹಾದೇವರಾಯನ** ಆಳ್ವಿಕೆಯ **ಒಂಬತ್ತನೇ ವರ್ಷ, ವಿಭವ ಸಂವತ್ಸರ, ಕಾರ್ತಿಕ ಬಹುಳ, ಅಮಾವಾಸ್ಯೆ, ಸೋಮವಾರ, ಸೂರ್ಯಗ್ರಹಣ** ಅಂದರೆ **ಕ್ರಿ.ಶ. ೧೨೬೮ನೆಯ ನವಂಬರ್ ೬, ಮಂಗಳವಾರ**. ಆ ದಿವಸ ಸೋಮವಾರದ ಬದಲು ಮಂಗಳವಾರ ಬಂದಿದೆ.

ನಂ. ೨

ಉಜ್ಜಯನಿ ಶ್ರೀಸದ್ಧರ್ಮ ಸಿಂಹಾಸನದ ಜಗದ್ಗುರು ಸಿದ್ಧಲಿಂಗೇಶ್ವರ ಶಿವಾಚಾರ್ಯರ ಗದ್ದುಗೆಯ ಎದುರಿಗಿನ ಸಭಾಂಗಣದಲ್ಲಿದ್ದ ಶಾಸನ: (ಈಗ ಈ ಶಾಸನ ಕಾಣೆಯಾಗಿದೆ)

(ಎ. ಆರ್. ಐ.೨೦೭-೧೯೨೫)

ಪಾಠ

೧. ...ಸ್ತುಂಗ ಶಿರಶ್ಚುಂಬಿ ಚಂದ್ರಾಚಾಮರ ಚಾರವೇ...

೨. ...ರಾರಂಭಃ ಮೂಲಸ್ತಂಭಾಯ ಸಂಭವೇ|| ಸ್ವಸ್ತಿ

೩. ...ತುಯಾದವನಾರಾಯಣಂ ಭಜಬಳಪ್ರವುಡ ಪ್ರ

೪. ...ವರ್ತ್ತಿ ಶ್ರೀ. **ಮಹಾದೇವ** ವಿಜಯರಾಜ್ಯೋದಯದ ೧೦ನೆಯ

೫. ...**ದರ ಜ್ಯೇಷ್ಟ ಬ ೧೦ ಸೋಮವಾರದಂದು ಶ್ರೀ**ಮನು

೬. ...ಪ.. ಸರ್ವ್ವಾಧಿಕಾರಿ **ತಿಪ್ಪರ್ಸರಳಿಯ ಚವುಡರ್ಸ**ರ ನಿರೂಪದಿಂದ ಸಿಂ

೭. ...ಸಂ. ರ್ಸರರಮಗ **ಬಂಮರ್ಸರಾ ಪಾಂಡ್ಯನಾಡ ಸುಂ..ನೋಡು**

೮. ...**ಶ್ರೀಮಲ್ಲಿನಾಥದೇವ**ರ ನಂದಾದೀವಿಗೆಗೆ ಬಿಟ್ಟ ಧರ್ಮ್ಮ..ಮ್ಮ

೯. ...ಲ್ಯಯ ಹೇಜುಂಗೆ ತೆರ ಒಂದು ವತ ಎಮೆಗೆಂದು...

೧೦. ...ಯಿದ.. ವಾನುಸ್ತಳದ ಗೌಡುಗಳು ಮಹಗ

೧೧. ....

ಸಾರಾಂಶ

ಈ ಶಾಸನದ ಬಲಭಾಗ ಒಡೆದಿದೆ. ಈ ಶಾಸನದಲ್ಲಿ ಯಾದವ **ಮಹಾದೇವರಾಯನ** ಆಳ್ವಿಕೆಯ ಕಾಲದಲ್ಲಿ ಸರ್ವಾಧಿಕಾರಿ **ತಿಪ್ಪ**ರಸನ **ಅಳಿಯ ಚವುಡ**ರಸನ ನಿರೂಪದಿಂದ ಪ್ರಾಯಶಃ **ಬರ್ಮ**ರಸನು ಶ್ರೀ **ಮಲ್ಲಿನಾಥದೇವ**ರ ನಂದಾದೀವಿಗೆಗೆ ಸುಂಕವನ್ನು ದಾನಬಿಟ್ಟನೆಂದು ಹೇಳಿದೆ.

ಈ ಶಾಸನದ ಕಾಲ **ಯಾದವ ಮಹಾದೇವನ** ೧೦ನೆಯ ವರ್ಷ, **ಜ್ಯೇಷ್ಠ, ಬಹುಳ, ೧೦, ಸೋಮವಾರ** ಅಂದರೆ ಕ್ರಿ.ಶ. ೧೨೬೭ ಎಂದು ತಿಳಿದು ಬರುತ್ತದೆ.

ನಂ. ೩

ಉಜ್ಜಯಿನಿ ಶ್ರೀ ಸದ್ಧರ್ಮ ಸಿಂಹಾಸನದ ಮುಂದಿನ ತುಂಡುಶಾಸನ

ಪಾಠ

೧. ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ ತ್ರೈಲೋಕ್ಯನಗರಾರಂಭ-ಮೂಲಸ್ತಂಭಾಯ ಶಂಭವೇ ||

೨. ತೊಳಪೆಳವೆಜೆ ಕೆಂಜಡೆಯೊಳ್ಪಳಚ್ಚನರಲಲ್ಲಿ ಬೀಳಿಸೆ ಗಂಗಾನದಿ ಕಣಗೊರ್ಳಿಸುವ ಕಲಿದೇವೇಶಂಸಲೆ ಜಗ-

೩. **ದಳಪಾಂಡ್ಯ** ನೃಪಗೀಗಭಿಮತಮಂ॥ ಆ ಅಂಬುಜಸಂಭವಂ ಪಡೆದು ಪುಟ್ಟಿದ ಕೃಷ್ಣನಾ ನಾಚಿಪ ಪನ್ತ್ತೆಂಬುದು ಚಂದ್ರ ...ಭ

೪. ವೋಜ್ವಳ. ಪಯೋನಿಧಾನದಂತೆಂಬುದು ಮೆಚ್ಚಿ ಮೆಚ್ಚಿ ಪ [ರಿ]ಬಾವಿಸಿರಿ, ಭಾವಿಸಿ ಕೂರ್ತು್ತದಾ ತ್ರಿ. ಕಾದಂಬ ಕುಲೋದ್ಭವಾಗ್ರಣಿ ಜಗ

೫. ದ್ದಳ ಪಾಂಡ್ಯ ನೃಪಾಳವೇಷವಂ ॥ ಆ ಭುವನವಿನುತ ಕುಲದೊಳು ಭೂಭುವನವನೊಂದೆ ತೋಳೊಳೊರ್ಬನೆ ಬಕಿಯೂ..

೬. ರನಾದಂತೆ ತಳೆದಂ ಭೂಬೃತ್ಕುಳತಿಳಕನೆನಿಪ **ಜಗದಳಪಾಂಡ್ಯ**॥ ಎಳೆಯೊಳ್ವಿಖ್ಯಾತಿವೆತ್ತಂ ಪೊಳೆಯೊಳಕ್ಕರಿಧಾಬ್ಯಬದಾಶ್ಚ್ರ. ಜ ದೊ-

೭. ಳೆ ಶ್ರೀ**ಕಲಿದೇವ** ಗೀತನಾನಂದದೆ ಜಗದಳ ಪಾಂಡ್ಯೋರ್ವ್ವಿಪಂ **ಗಟ್ಟಿ**ಯರ **ಕೋಗಳಿ**ಯಾಳ್ನಾಲು ನೂಱುಂ ಕಂಬ ಸ್ಥಳವನ....ಕಾಡಂ ಚೋವಂ ವಂಶಾಗ್ರಾ

೮. ಗಣ್ಯನೋನು॥ ಚಂದ್ರಾರ್ಕ್ಯರುಳ್ಳಂನ್ನೆವ್ ವಲೆಬಳ್ಳಿಂ ಭಾಗ್ಯವರಂ ಮಹತ್ತಂ॥ ನಳನಹುಪ ಸಗರ ಖೇಚರ ದಿಳೀಪವ ಪುರ...

೯. ಕಾರ್ತ್ಯವೀರ್ಯ್ಯಾರ್ಜ್ಜುನರೊಂದಳವುಳ್ಳಾ. ಪ್ಪಾರ್ **ಜಗದಳಪಾಂಡ್ಯ** ನೃಪಾಳನೆಂಬುದವನಿಚಕ್ರಂ॥

ಸಾರಾಂಶ

ಈ ತುಂಡು ಶಾಸನದಲ್ಲಿ ಜಗದ್ದಳ ಪಾಂಡ್ಯದೇವನ ಪ್ರಶಸ್ತಿಯಿದೆ. ಕೋಗಳಿ ನಾಡನ್ನು ಆಳುತ್ತಿದ್ದ ಕದಂಬ ಕುಲದ ಜಗದ್ದಳ ಪಾಂಡ್ಯ**ಗಟ್ಟಿ ಅರಸ**ನು **ಕಲಿದೇವರಿಗೆ ಕೋಗಳಿ**ಯಲ್ಲಿ ೪೦೦ ಕಮ್ಮ ಭೂಮಿಯನ್ನು ದಾನ ನೀಡಿದನೆಂದು ಹೇಳಲಾಗಿದೆ. ಈ ಶಾಸನದ ಕಾಲ ಸು. ಕ್ರಿ.ಶ. ೧೨ನೇ ಶತಮಾನ. (ಈ ಶಾಸನ ಉಜ್ಜಯಿನಿಗೆ ಸಂಬಂಧಿಸಿದ್ದಲ್ಲವೆಂದು ಕಾಣುತ್ತದೆ).

ನಂ. ೪

ಹೂವಿನ ಹಡಗಲಿ ತಾಲೂಕಿನ ಕುರುವತ್ತಿ ಮಲ್ಲಿಕಾರ್ಜುನ ದೇವಾಲಯದ ತೊಲೆಯ ಶಾಸನ

(ಎಸ್.ಐ.ಐ. ೯, ಭಾಗ-೧, ನಂ. ೩೪೯, ಪು.೪೦೧-೪೦೨)

ಪಾಠ

೧. ಸ್ವಸ್ತಿ[।।*] ಸಮಧಿಗತಪಂಚಮಹಾಶಬ್ದ ಮಹಾಮಂಡಳೇಶ್ವರಂ **ಉಜ್ಜನೀಪುರವರಾಧೀಶ್ವರ ಗುತ್ತ**ವಂಶಾನ್ಯ-ಯ-

೨. ದ್ಯುಮಣಿ ಸುಭಟಚೂಡಾಮಣಿ । ವಟಕಲ್ಪವೃಕ್ಷಾಲಾಂಛನವಿಜಯಸ್ತಂಭಂ ವೀರಾವಷ್ಟಂಭಂ

೩. ಪನ್ನಿರ್ವ್ವರಗಂಡಂ ಪ್ರಜೆಮೆಚ್ಚೆಗಂಡಂ ಮಂಡಿಳಕಭೈರವಂ **ಶ್ರೀಮದ್ವಿಕ್ರಮಾದಿತ್ಯದೇವರ್**

೪. **ಬೆಳುಹುಗೆ** ೭೦ ಮಂ [ಬೆಂ]**ಬೆಣ್ಣೆವೂರು** ೧೨ ಮನಾಳುತ್ತಮಿರಲು ತತ್ಪ ಧಾನಂ ಸುಸಂಗಡಣ್ಣಾಯಕ -

೫. ಶ್ರೀಮನ್ಮಹಾಮಂಡಳೇಶ್ವರಂ ವಿಜಯಪಾಂಡ್ಯರಸರನುಜ್ಞೆಯಿಂ ಬೆ[ಂ]ಣ್ಣೆಯೂರ **ಬಾಚರಸ**ಮುಖ್ಯ-

೬. **ಕುಱುವತ್ತಿ**ಯೂರೊಡೆಯಪ್ರಮುಖ ವಶೇಷಮಹಾಜನಂಗಳ ಸಂನಿಧಿಯಲು ಪೂರ್ವ್ವ

೭. ದೆಲು **ಹಿರಿಯ ವಿಕ್ರಮಾದಿತ್ಯ** ಕೊಟ್ಟ ಸ್ಥಳವೃತ್ತಿ ಸಹಿತ ೭೦ ಮತ್ತರು ಭೂಮಿಯಂ **ಶ್ರೀಮದಾಹವ**

೮. **ಮಲ್ಲೇಶ್ವರದೇವ**ಗ್ಗೆ ಸರ್ವ್ವನಮಶ್ಯವಾಗಿ **ಶಕ ೧೧೦೪ನೆಯ ಪ್ಲವಸಂಭರದ ಪುಶ್ಯ** ಬ ೩ ಶು

೯. ಸಂಕ್ರಮಾಣದಲು ॥ ಉರ್ವ್ವೀಶವಿಜಯಪಾಂಡ್ಯತದುರ್ವ್ವಿಯ **ಬಾಚರಸ**ನಿಲ್ಲಿಯೂರೊಡೆಯ ಮುಖಂ ಬೆ-

೧೦. ಪ್ಪಾರುವರ(ಂ)ನುಮತಿಯಿಂ ಸರ್ವ್ವನಮಶ್ಯೆಮೆನೆ ಪಡೆದ ಲೋಕಾಭರಣಂ [॥*] ಪ್ರತಿಪಾಳಕಂಗೀ ಧರ್ಮ್ಮ-ವಕ್ಕು॥

ಸಾರಾಂಶ

ಕ್ರಿ.ಶ. ೧೧೦೪ರ ಗುತ್ತ ಅರಸನ ಪ್ರಶಸ್ತಿಯಿದ್ದು, ಅದರಲ್ಲಿ ಅವರು **ಉಜ್ಜನೀಪುರವರಾಧೀಶ್ವರ....** ಎಂದು ಕರೆದುಕೊಂಡಿದ್ದನ್ನು ಇಲ್ಲಿ ಗಮನಿಸಬಹುದು.

ನಂ. ೫

ಮಂಡ್ಯ ಜಿಲ್ಲೆಯ ಮರಡೀಪುರದ ಹಳೆಯೂರು ಪ್ರದೇಶದ ಗದ್ದೆಯಲ್ಲಿರುವ ಶಾಸನ

[ಇ.ಸಿ.೮೩, ಮತ್ತು ಇ.ಸಿ.೭, ಪು.೧೯೭-೯೮]

ಪಾಠ

೧. ಶ್ರೀ ನಮಸ್ತುಂಗಸಿರಶ್ಚುಂಬಿಚಂದ್ರಚಾಮರಚಾರವೇ ತ್ರೈಲೋಕ್ಯನಗರಾರಂಭ..

೨. ಸ್ತಂಭಾಯ ಶಂಭವೇ॥* ಸ್ವಸ್ತಿ ಶ್ರೀಮನ್ಮಹಾಮಹಿಮನಪ್ಪ ಶ್ರೀ ಕವಿಳಾಸದುತ್ತರ.

೩. ರಾಧೀಶ್ವರಂ ಶ್ರೀ ಪಾರ್ವ್ವತೀವಲ್ಲಭಂ ಪಾರ್ವ್ವತೀಮನೋನಯನಪ್ರಾಣೇಶ್ವರ.

೪. ಚ ಕಳಸಕುಂಕುಮಪಂಕಾಂಗಿತಸರೀರವಕ್ಷಶ್ತಳ ಪಾರ್ವ್ವತೀಮನಸ್ಸರೋವರರಾಜ.

★ ಶ್ಲೋಕ

೫. ಶ ಪಾರ್ವ್ವತೀಪ್ರಾಣನಾಥ ಭಸ್ಮೋದ್ಧೂಳಿತಶುದ್ಧಗಾತ್ರ ಕಟ್ವಾಂಗಧಾರಿ ತ್ರಿಸೂಳಧರ ಗಂಗಾ.

೬. ಧರ ಜಾಹ್ನವೀಜಟಾಜೂಟಕೋಟೀರಭಾರ ಪಂಚವಕ್ತ್ರಪರಮೇಸ್ವರ ತ್ರಿಯಂಬಕ ತ್ರಿಲೋಚನ ಶ್ರೀ-

೭. ಸೂಳಧರ ಕಟ್ವಾಂಗಧಾರಿ ಕಪಾಳಧ**ರ ಕರಿಗೊರಳ ಹೆರೆನೊಸಲ ತುರಿಗಿದ ಕೆಂಜೆಡೆಯ

೮. **ನವಿಲೆಯ ಜೆಡೆಯಶಂಕರದೇವರ ಪಡಿಹಾಱ ದಾಸಯ್ಯ ಸದ್ಯೋಜಾತನ ಮನಮೂರ್ತಿ ಭಕ್ತಜ-**

೯. ನವಸವರ್ತಿ ಹರಿವಿರಿಂಚಿಗಳ ಕುಲಸ್ವಾಮಿ ತೇತ್ರಿಂಸಾದಿಕೋಟದೇವರ್ಕ್ಕಳ ಪೂಜಿತ ಸಕಳ [ಧಾ].

೧೦. ನಿಸ್ತಾರಕ ಅಂಧಕಾಸುರವುದಭಂಜನ ಲಾಳಾಸುರಕೋಳಾಹಳ ತ್ರಿಪುರ ಸಂಹಾರಿ[ಶಿವ]ಮೂರ್ತ್ತಿ

೧೧. ಸು. ಪ್ರಾಣಪ್ರಧ ವಿರಂಚಿಪಂಚಮುಸಿರಚ್ಛೇದನ ನಾರಾಯಣ ನೇತ್ರಾಂ [ಭೋ] ಜಪೂಜಿತಪದದ್ವ

೧೨. ಯ ಬಾಣಬಾಣಾಸುರಬಾಹುಪ್ರ.ಮದನಸಂಹಾರಿ ನಾರದಾದಿಮುನಿ ಗಣಮನೋನಾಯಕ ಉಚ್ಚ.

೧೩. ಶಿತೇ ಮಂತ್ರ ಉದ್ಧರಿಸಿತೇ ತಂತ್ರ ಸಿವಾಚಾರವೇ ಪಥವಾಗಿ ನಡಪ ರಿಷಿಗಣಂಗಳು ಪ್ರಿಯದಕ್ಷಯಜ್ಞ..

೧೪. ನಾಸನ ಭ..ಕ್ಷಹರ **ಅಕ್ಷೇಶ್ವರ ನಂದಿನಾಥ ನಂದಿಮಹಾಕಾಳ ವೀರಭದ್ರ** ಬ್ರಂಗಿನಾಥ **ಅಂಗಜ ಅ....**

೧೫. ತಗ್ರೀವಮಯಗ್ರೀವ ಘಂಟಾಕರ್ಣ್ನ[ಅ]ಗ್ಗಳಗಣ್ನ ದಾರುಕ **ರೇಣುಕ** ಸಾರೂಪ್ಯ ಶಾಯುಜ್ಯ ಸಾ

೧೬. ಮ್ನಾಜ್ಯಪದವಿಯಂ ಹಡದ **ಗಂಗಾವಾಳುಕ. ಕಸಮಾರುದ್ರ**ರು ಸಕಳಗಣಪರಿವೇ

೧೭. ಷ್ಟಿತ **ಯೆಕ್ಕೋಟಿಗಳು** ಪೂಜಿತ ಮತ್ತಂ ಮಾರ್ತ್ಯಲೋಕದ ಗಣಂಗಳ **ಸಿರಿಯಾಳುವ ದಾಸ ದಸವ**

೧೮. **ವರ್ಮ್ಮ ಓಹಿಲ ಉದ್ಭಟ ನಂಬಿ ಕುಂಬಾಱಗುಂಡ ಆಂಡವಲ ಕರಿಕಾಲಚೋಳ ಭೋಗದೇವ ಬಾಣ ಮ**

೧೯. ಯೂರ ಕಾಳಿದಾಸ ಕೇಶಿರಾಜದಣ್ನಾಯಕ ಸುರಿಗೆಯ ಚಲ್ವಡರಾಯ ಸಂಗನಬಸವಯ್ಯ ಅನಿಮಿತಿ

★★ ಈ ಅಕ್ಷರವನ್ನು ಪಂಕ್ತಿಯ ಮೇಲೆ ಬರೆದಿದೆ.

೨೦. **ಕೇಸವರಾಜ ಜಗದೇವದಣ್ಣಾಯಕ ಏಕಾನ್ತದ ರಾಮಯ್ಯ ಸೊಂನಲಿಗೆಯ ರಾಮಯ್ಯ ಹುಲಿಗೆಜೆಯ ಪೋ**
೨೧. ನ್ನಯ ನೆಲುವಿಗೆಯ ಸಾಂತಯ್ಯ ಸಕಳಗಣಪರಿವೇಷ್ಟಿತ ಶ್ರೀ ಕಲಿದೇವರ ಪ್ರಶಸ್ತಿ ಮಂಗಳಂ
೨೨. ಸ್ವಸ್ತಿ ಶ್ರೀಮನ್ಮ[ಮ]ಹಾಮಂಣ್ಡಳೇಶ್ವರಂ **ತಳಕಾಡ**ಗಂಗವಾಡಿ ನೊಣಂಬ**ವಾಡಿ ಬನವಸೆಹಾನುಂ**ಗಲ್ಲು
೨೩. **ವುಚ್ಚಂಗಿಕೊಂಗಲಿಗೊಂಡ** ಭುಜಬಲವೀರಗಂಗನ ಸಹಾಯಸೂರ ಸನಿವಾರಸಿದ್ಧಿ ಗಿರಿದು
೨೪. ರ್ಗ್ಗಮಲ್ಲ ಚಲದಂಕರಾಮ ನಿಶ್ಸಂಕಪ್ರತಾಪ **ಹೊಯಿಸಣವೀರಬಲ್ಲಾಳದೇವ ಧೋರಸಮುದ್ರ**
೨೫. ದ ನೆಲೆವೀಡಿನಲು ಸುಖಸಂಖಥಾವಿನೋದದಿಂ [ಠಾವಿನೊಳು] ರಾಜ್ಯಂಗೆಯ್ಯುತ್ತಮಿರೆ ತತ್ಪಾದಪದ್ಮೋ-
೨೬. ಪಜೀವಿತನುಮಪ್ಪ ಶ್ರೀಮನುಮಹಾಶಾಮಂನ್ತ ಭಾಸೆಗೆತಪ್ಪುವಲೆಂಕರಗಂಡ ಹುಲಿಯಜ್ಯ
೨೭. ಗುಡಿಯ ಮೊತ್ತದ ಸೇನಾನಾಯಕಂ ಶ್ರೀ **ಕಲಿದೇವರ** ದಿವ್ಯ ಶ್ರೀಪಾದಪದ್ಮಂಗಳಂ ಕಮಳನಾಳ
೨೮. ಶೂತ್ರದಂನ್ತೆಡೆವಱಿಯದೆ ಅನುದಿನಂ ಬೆಸಕೆಯ್ಯುತ್ತವಿ [ರ್ದ್ದ] **ನಾಗಯ್ಯ ವೀರಬಮ್ಮಯ್ಯ**ನ ಮಗ ಭಕ್ತರ
೨೯. ಕರುಣ[ದ]ಕಾರುಣ್ಯದ ಮಗ ಶರಣರ ದಾಸ ಶೋವನ ಶಿಂಗನ ಮಾರೆಯನಾಯಕ ತಂಮ್ಮ ಬಲ್ಲ
೩೦. ಯ್ಯ ಮಗ ಶಾತಯ್ಯ ಕೆಱಗೋಡಿನಾಡ ಹಾಡಿಮಂಡಲವಿತ್ತಿಯ ಮಾಡಲ ಹೊಯಿಸಣಗವುಡ ಕೆಬ್ಬೆಹಳ್ಳಿ
೩೧. ಯ ಗಂಗಗವುಡ ಬೇವುಕಲ್ಲ ಚವುಡಗವುಡ ಕನ್ನೆಯನಹಟ್ಟಿಯನ ಚಾಕೆಯನಾಯಕನೊ
೩೨. ಳಗಾದ ಸಮಶ್ತಗಾವುಂಡುಗಳುವಿದ್ದು **ಸಕವರಿಶ್ಯದ ೧೨೦೨ನೆಯ ವಿಶ್ವಾವಸುಸಂವತ್ಸರದ ಪುಶ್ಯಸು ೨ ಸೋಯೆಮ್ಮ**ಯ **ಕೇತನಹಟ್ಟಿ**ಯ
೩೩. **ಶ್ರೀ ಕಲಿದೇವರಿಗೆ ಶಿವಪುರ**ವಾಗಿ ಭಕ್ತರಿಗೆ ಕೊಟ್ಟ ಧರ್ಮ್ಮ **ಆಟಕೇಶ್ವರ**ದೇವರ ತೊತ್ತು **ವೀರಬಮ್ಮಯ್ಯ.**
೩೪. **ಚೂಡಮದೇವರ ಅಂಕಯ್ಯ ಮಲ್ಲಿನಾಥದೇವರ** ಜಕ್ಕಯ್ಯ **ಸೋಮನಾಥದೇವರ ಕೇತಯ್ಯ ಅಪ್ಪ**
೩೫. **ಯ್ಯ ಮಲ್ಲಿನಾಥದೇವರ ಯೇಚಯ್ಯ ರಾಮನಾಥದೇವರ** ಹೊಯಶಣದಾಶಿ **ಚೂಡಮದೇವರ ಮಾ**
೩೬. **ಚಯ್ಯ ಅಂಕನಾಥದೇವರ ಹೊಂನಯ್ಯ ಚೂಡಮದೇವರ** ಲೆಂಕ ಭೂವಣ್ಣ ಯಿನ್ತಿನಿಬರಿಗೂ ದಾರಾಪೂರ್ವ್ವ-

೩೭. ಕಂ ಮಾಡಿಕೊಟ್ಟ ಧರ್ಮ್ಮವಂ ಚಂದ್ರಾರ್ಕತಾರಂಬರಂ ಸಲುವುದು ಯೀ ಧರ್ಮ್ಮಕೆ ಅನುಕೂಲನಾದ-

೩೮. ವನು ಸಿವಲೋಕಪ್ರಾಪ್ತನಪ್ಪನು ಯಿ ಧರ್ಮ್ಮಕೆಯನ್ಯಾಯವ ಚಿನ್ತಿಸಿದವಸು ಗಂಗೆಯ ತಡಿಯಲು ಸಾವಿರ ಬ್ರಾಹ್ಮಣ

೩೯. ರು ಸಾವಿರ ಕವಿಲೆಯ ಕೊಂದ ಬ್ರಂಹ್ಮತಿಯಲಿ ಹೋಹ॥ ಶ್ವದತ್ತಂ ಪರದತ್ತಂ ವಾ ಯ [ವೆ]ತಿ ವಸುಂಧ[ರಾಂ] ಶಷ್ಟಿರ್ವರಿಶಸ[ಹ]ಸ್ರಾ-

೪೦. ಣಿ ವಿಷ್ಟಾಯಾಂ ಜಾಯತೇ ಕ್ರಿಮಿ॥ ಶ್ರೀ ಜಡೆಯಸಂಕರದೇವರ ಮಲ್ಲಯ್ಯ ಬರದ ಶಿವದೇವ॥

೪೧. ಮಂಗಳಮಹಾ ಶ್ರೀ ಶ್ರೀ

ಸಾರಾಂಶ

ಮಂಡ್ಯ ಜಿಲ್ಲೆಯ ಮರಡೀಪುರದ ಶಾಸನದಲ್ಲಿ ಅನೇಕ ವೀರಶೈವ ಶಿವ-ಶರಣರ ಹೆಸರುಗಳಿದ್ದು ಅವು **ಬೊಮ್ಮಯ್ಯ, ಅಂಕಯ್ಯ, ಜಕ್ಕಯ್ಯ,** ಸಕಳ ಗಣ ಪರಿವೇಷ್ಟಿತ **ಯೆಕ್ಕೋಟಿಗಳು,** ನವಿಲೆಯ ಜೆಡೆಯ **ಶಂಕರ ದೇವರ** ಪಡಿಹಾಜಿ **ದಾಸಯ್ಯ,** ಸಿರಿಯಾಳುವ ದಾಸ, **ದಸವವರ್ಮ್ಮ,** ಓಹಿಲ, **ಉದ್ಬಟ, ನಂಬಿ, ಕುಂಬಾರಗುಂಡ,** ಅಂಡವಲ, **ಕರಿಕಾಲ ಚೋಳ, ಭೋಗದೇವ, ಬಾಣ, ಮಯೂರ, ಕಾಳಿದಾಸ, ಕೇಶಿರಾಜ** ದಣ್ನಾಯಕ, **ಸುರಿಗೆಯ ಚಲ್ವಡರಾಯ, ಸಂಗನಬಸವಯ್ಯ, ಅನಿಮಿತ ಕೇಸವರಾಜ, ಜಗದೇವ** ದಣ್ನಾಯಕ, **ಏಕಾನ್ತದ ರಾಮಯ್ಯ, ಸೊನ್ನಲಿಗೆಯ ರಾಮಯ್ಯ, ಹುಲಿಗೆಜೆಯ ಪೊನ್ನಯ್ಯ, ನೆಲುವಿಗೆಯ ಸಾಂತಯ್ಯ** ಇವರ ಜತೆ **ದಾರುಕ** ಮತ್ತು **ರೇಣುಕರ** ಹೆಸರುಗಳು ಉಕ್ತವಾಗಿವೆ. ಈ ಶಾಸನದಲ್ಲಿ ಹೇಳಿದ ದತ್ತಿಗೆ ಅನುಕೂಲವಾದವರು ಶಿವಲೋಕ ಪ್ರಾಪ್ತರಾಗುವರೆಂದು ಅನ್ಯಾಯ ಮಾಡಿದವರು ಗಂಗೆಯಲ್ಲಿ ಸಾವಿರ ಬ್ರಾಹ್ಮಣ ಮತ್ತು ಸಾವಿರ ಕವಿಲೆಗಳನ್ನು ಕೊಂದ ಪಾಪಕ್ಕೆ ಹೋಗುವರೆಂದು ಹೇಳಲಾಗಿದೆ.

ಹೊಯ್ಸಳ ವೀರಬಲ್ಲಾಳನ ಆಳ್ವಿಕೆಯ ಈ ಶಾಸನದ ಕಾಲ **ಶಕವರಿಷ ೧೨೦೨, ವಿಶ್ವಾವಸು ಸಂವತ್ಸರ, ಪುಶ್ಯ ಸು. ೨,** ಅದು ಕ್ರಿ.ಶ. ೧೩೦೫ ಡಿಸೆಂಬರ್ ೧೮, ಶನಿವಾರವಾಗಿದೆ.

ನಂ. ೬

ಗದಗ ಜಿಲ್ಲೆ, ಶಿರಹಟ್ಟಿ ತಾಲೂಕಿನ ಲಕ್ಷ್ಮೇಶ್ವರದ ವೀರಭದ್ರ ದೇವಾಲಯದ ಗೋಡೆ ಶಾಸನ

(ಎಸ್.ಐ.ಐ.೨೦, ೩೯೦, ಪು.೩೮೧)

ಪಾಠ

೧. ಶ್ರೀ ಗುರುಭ್ಯೋನಮಃ ॥ ಶುಭಮಸ್ತು ॥ ನಮ(ಃ) ಸ್ತುಂಗಸಿರಶ್ಚುಂಬಿ ಚಂದ್ರಜಾ-

೨. ಮರ ಚಾರವೇ ತ್ರೈಲೋಕ್ಯ ನಗರಾರಂಭಮೂಲಸ್ತಂಭಾಯ ಶಂಭವೇ ॥ **ಶ್ರೀ ಮರುಳಸಿ-**

೩. **ದ್ಧೇಶ್ವರಾಯಃ** ॥ ಶ್ರೀ ಶ್ರೀ ಶ್ರೀ

೪. ಶ್ರೀಮದುಮಾಮನೋಹರನೆನಿಪ್ಪ ಸದಾಶಿವನಾ ಮಹಾಗಣಸ್ತೋಮದ ಮಧ್ಯದಲ್ಲಿ ರಜತಾದ್ರಿಯೊಳೋಲಗವಿತ್ತು ದಿವ್ಯ

೫. **ತೇಜೋಮಯಮೂರ್ತಿ** ದಾರುಕಸಮಿತದ ಸೋಕಿನೊಳಂದಾ **ರೇಣುಕಂಗೀ** ಮಹಿಯಲ್ಲಿ ಲಿಂಗದುದರೋದ್ಭವನೇ

೬. ಮವನಿತ್ತನಕ್ಕಱಿಂ॥ಉ॥ ಶಿವಭಕ್ತರ್ನಲಿದಾಡೆ ಸಜ್ಜನಜನಂ ಕೊಂಡಾಡೆ ದೇವರ್ಕಳುತ್ಸವದಿಂ-

೭. ದಂಬರಭಾಗದೊಳ್ಜಯ ಜಯದ್ವಾನಂಗಳಂ ಮಾಡೆ ತಳ್ಪಿವಲಿಂಗೋದ್ಭವನಾಗಿ ಸಂಚರಿಸುತಿರ್ದಂ **ರೇವ-**

೮. **ಣಾಚಾರ್ಯ**ಪುಂಗವನೀ ಧಾರುಣಿಯಲ್ಲಿ ಸಾಸಿರದ ನಾನೂರ್ವತ್ಸರಂ ಲೀಲೆ ಇಂದ ॥ಉ॥ ಮಗುಳಾನಾಮೇಶನಾ

೯. ಳ್ದೊಕ್ಕಗಣಿತಮಹಿಮಂ **ಸಿದ್ಧರೇವಣನೋಲ್ದಾ** ಜಗದೀಶಂ ತಂನ್ನ ಮು(ಂ)ನ್ನಂ ಕಳುಪಿದ ಕದನಂ ತೀರದೆಂದು

೧೦. [ರ್ಪಿ]ಯೊಳ್ಬಂದೊಗೆವಂ ಘಾನ[ರೀ] ಸಿದ್ಧೇಶ್ವರನೆನೆ ಪಸ[ರಿಂ] ಜಂಗಮಾಕಾರದಿಂ ಭಕ್ತಗಣಕ್ಕಾನಂದಮಂ ಪುಟ್ಟಿಸುತೆ

೧೧. ಸುತೆನುಳಿದ ಲೀಲಾವಿನೋದರಿಗಳಿಂದ ॥ಕಂ॥ ಇಂತಾಯತಿಕುಲತಿಲಕನ ನಂತಮಹಾತ್ಮೆಯೊಳೆಚರಿಸಿ

೧೨. ಪುಲಿಗೆಱುಗೆಯ್ದಂ ತಂನ್ನಸು... ದಂತದನುಳಿದ ಮೂಲಲಿಂಗಮಪ್ಪ ನಿಮಿತ್ತಂ ॥ಉ॥ ಶಕಮಾ ಬಾಣಾ (ಂ)

೧೩. ಬುದಾಂಬುರಾಸಿಸಸಿಸಂಖ್ಯಾ ಶ್ರೀಮುಖವತ್ಸರಂ ಪ್ರಕಟಂ ಬೆತ್ತ ಸಮಾಸ ಭಾದ್ರಪದ ಶುದ್ಧಂ ಪಂಚಮೀ

೧೪. ವಾರದ ಚಂಡಕಠೋಧ್ಯಾಯ.... ಕ ಲಿಂಗಾಕಾರದಿಂ ನಿಂದ ನೊಲಕಲಂಕನ ಮಾದ ವ್ಯಾಘ್ರಪುರ

೧೫. ದೊಳ್ಪೂವಲ್ಲಿ **ಸಿದ್ಧೇಶ್ವರಂ** ॥ಕಂ॥ ಇನ್ತು ದ.... ಬಳಿಕ್ಕಿದ ಸುರಿಂ ಸಹಿತಂದು ರಜತಗಿರಿಗೆ ಇದೀಗ ಪು(೦)

೧೬. ಣ್ಯದ ತಾಣಮೆಂದು ತಾನ್ನೆಲಸಿದನೀ ಪುಲಿಗೆಱುಯೊಳ... ಲಿಯ ಸಿದ್ಧಲಿಂಗ ಇಂತು ನೆಲಸಿದ **ಮರುಳ**

೧೭. **ಸಿದ್ದೇಶ್ವರನ** ನಿಜ ಶಿಷ್ಯನ ಭಕ್ತಿಭಾವ ವೆಂತೆಂದೊಡ ॥ ಉ ॥ ಶರಣಜನಾಂಗ ಸಂಜನಿತ ಭಕ್ತಿ ಪರಂಸಿವತ

೧೮. ತ್ವಕೋವಿದಂ ಪರಿಣತಸಂಗಿ ಸಿದ್ದಿಯುಗ... ಸುಧೀ... ಧಾರ್ಮ್ಮಿಕಂ ಪರು... ಸದ್ಗು

೧೯. ರು **ಪೂಲಿಯ ಸಿದ್ಧಲಿಂಗ** ನೀ ಧರೆಯ[ಲು].... ತೆ ಕಟ್ಟಿಸಿ.... ರುಂ ರಕಾಲಮಿರ್ಪ್ಪಿನಂ ॥ ಆತನ

೨೦. .... ಭಕ್ತಿಬ್ರತೆ ಸದಾಲಿಂಗಜಂಗ [ಮೂರ್ಜ್ಜಿ] ತಭಾವ..... ಗ[೦] ಮನೊಪ್ಪಿದ [ಳೀ] ತೆಱದಿ.... ತಾಮಣಿ

೨೧. ಯೆಂಬೊಲ್॥ ಪರಮೋತ್ಸಾಹವನಾಯುವಂ ಸಿರಿಯನುದ್ಯತ್ಕೀರ್ತ್ತಿಯಂ ಭಕ್ತಿಯಂ

೨೨. ರಾದ್ಯಖಿಲಸುತ್ರಾನೂನ[ಸಮ್ರುಧಿಯಿಂ] ಕರುಣಂ.... ನೊಲವಿಂದೆ ಭಕ್ತಿಲ....

೨೩. ರಿಕ.... ಳಿತ ದಿವಾಕರಂ ಶಭಕರಂ ಚಂದ್ರಾರ್ಕ ತಾರಂಬರಂ ॥ ವ ॥ ಸ್ವಸ್ತಿ ಶ್ರೀ [ಮ]... ಲಾಸನ....

೨೪. ದ ಶ್ರೀಮತ್ಪರಮೇಶ್ವರಾವತಾರಮಪ್ಪ **ರೇವಣಾಚಾರ್ಯ** [ತೇ]ಜನಹಿತಾ... ಕ್ಕೆ ಪೂಲಿಯ ಮ-

೨೫. **ರುಳಸಿದ್ದೇಶ್ವರ**ನಾಮುವಂ ಧರಿಸಿ.... ಸಂ ನಿಜಮು [ಹಿಮೆ] ಯಂ ಮೆಱದು... ನ **ಪುಲಿಕರಪುರ**.

೨೬. ... ಬಂದು ಸಕಲಭಕ್ತರಿಷ್ಟಾತ್ಥಾರ್ಥಸಿದ್ಧಿಯಂ... ಶ್ರೀ**ದಕ್ಷಿಣ ಸೋಮೇಶ್ವರ**ನ ಸಾನಿಧ್ಯದಲ್ಲಿ **ಶಾಲಿವಾಹನ ಶಕ**

೨೭. **ದ ಸಾವಿರದ ನಾನೂಱಿಂ ಮೂವತ್ತಯ್ದನೆಯ ಶ್ರೀಮುಖ ಸಂವತ್ಸರದ ಭಾದ್ರಪದ ಶುದ್ಧ ಪಂಚಮೀ [ಭಾನು]ವಾ-**

೨೮. ರ(ಪುಂಣ್ಯೋ)ದಯ ಕಾಲದ... ಲಿಂಗಮೂರ್ತಿ... **ಮರುಳಸಿದ್ಧೇಶ್ವರದೇವರಿಗೆ ನಿಜಶಿಷ್ಯನಪ್ಪ ಕೂ**

೨೯. **ಡಲಿಗೆಯ ಸಿಂಗಿಸೆಟ್ಟಿಯರಸರು** ಶ್ರೀದೇವರ... ಪೂದೋಂಟವಂ ಬಾವಿಯ

೩೦. ಯಮಂ ಲೋಕತ್ರಸಿದ್ಧಮಾಗೆ... ಕಟಿಸಿದ ॥ ... [ಲಿಂಗಮೂ]ರ್ತ್ತಿ **ಮರುಳಸಿದ್ಧೇಶ್ವರಂ** ಭುವನ

೩೧. .... ಯೊಡೆಯಂ ಶಾಸನಮಂ.... ಸಿದಂ ಮಾದೋಜಂ.........

೩೨. ಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ

ಸಾರಾಂಶ

ಈ ಶಾಸನದಲ್ಲಿ ದಾರುಕರ ಕಥೆ, ರೇವಣಸಿದ್ಧರ ಅವತಾರ, ರೇವಣಸಿದ್ಧರು ೧೪೦೦ ವರ್ಷ ಮರ್ತ್ಯದಲ್ಲಿದ್ದು ಸೋಮೇಶನಲ್ಲಿ ಐಕ್ಯನಾಗಿ, ಮತ್ತೆ ಪೂಲಿ ಮರುಳಸಿದ್ಧೇಶ್ವರನಾಗಿ ಜನಿಸಿ, ಕೊನೆಗೆ ಸಗುಣ ಲೀಲೆ ಸಾಕೆಂದು ಪುಲಿಗೆರೆಯಲ್ಲಿ ಲಿಂಗರೂಪ ತಾಳಿದರೆಂದು ಹೇಳಲಾಗಿದೆ. ಈ ಶಾಸನದ ಕಾಲ ಕ್ರಿ.ಶ. ೧೫[illegible].

ನಂ. ೭

ಕೋಗಳಿ, ಹಗರಿಬೊಮ್ಮನಹಳ್ಳಿ ತಾ, ಬಳ್ಳಾರಿ ಜಿಲ್ಲೆ.

ವೀರಭದ್ರ ದೇವರ ಗುಡಿ ಮುಂದಿನ ಶಾಸನ

(ಎ.ಆರ್.ಐ. ನಂ. ೩೯: ೧೯೦೪)

ಪಾಠ

೧ ವೀರಭದ್ರದೇವರನು ಉಜ್ಜಯನಿಯ
ವಿರುಪಯ [।*]
೨. ಶ್ರೀಗಣಾಧಿಪತಯೆ ನಮ ॥ ನಮ-
೩. ಸ್ತುಂಭಿ ಷಿರಸ್ತುಂಭಿ ಚಂದ್ರಚಾ-
೪. ಮರ ಚಾರವೇ ತ್ರೈಯಿಲೋಕ್ಯನಗರಾ-
೫. ರಂಭಂ ಮೂಲಸ್ತಂಭಾಯ ಶಂಭವೇ ॥
೬. ಸ್ವಸ್ತಿ [।*]ಶ್ರೀಜಯಾಭ್ಯುದಯ ಶಾಲಿ-
೭. ವಾಹನ ಶಕವರುಷ ೧೪೫೪ನೆಯ ಖ-
೮. ರ ಸಂವತ್ಸರದ ಜೇಷ್ಟ ಬ ೧೦ ಲು ಶ್ರೀ
೯. ಮತು ಕೋಗಳಿಯ ವೀರಭದ್ರ ದೇವ
೧೦. ರಿಗೆ ಕೊಟ್ಟೂರ ತಿಪ್ಪಿಸೆಟ್ಟಿಯ-
೧೧. ರ ಮಕ್ಕಳು ಬಸೆಟ್ಟಿಯರು ಪ್ರತಿಷ್ಟೆ
೧೨. ಮಾಡಿದ ವೀರಭದ್ರದೇವರಿಗೆ ಬಳಾ-
೧೩. ರಿಯ ಮೊಕೆಯ ತಿಪ್ಪಿಸೆಟ್ಟಿ ಬಸೆಟ್ಟಿ
೧೪. ಮಾಸಗೆಯ ಗುರುವಾಪ್ಪ ವೋದಿನ ಲಿಂಗ-
೧೫. ದಸೆಟ್ಟಿ ಜಂದಿಯ ಲಿಂಗಿಸೆಟ್ಟಿ ಮುಂತಾ-
೧೬. ದ ಸಮಸ್ತ ಹಲರು ಉಭಯ ನಾನಾ-
೧೭. ದೇಶದ ಸೆಟಿ ಪಟ್ಟಣಸ್ವಾಮಿಗ-
೧೮. ಳು ಬಿಟ್ಟುಕೊಟ ಮೂಲೆ ವೀಸ
೧೯. ಹೇಜು ೧೩೦ ಕಾಸು ೧ನು ದೇ-
೨೦. ವರ ನಂದಾದೀಪಕೆ ಸಲು-

೨೧. ವದು ॥ ಮಂಗಳಮಹಾಶ್ರೀ
೨೨. ಶ್ರೀಶ್ರೀಶ್ರೀ

ಸಾರಾಂಶ

ಕ್ರಿ.ಶ. ೧೫೩೧ ರ ಈ ಶಾಸನದಲ್ಲಿ **ಉಜ್ಜಯಿನಿಯ ವಿರುಪಯ್ಯನ** ಉಲ್ಲೇಖವನ್ನು ಕಾಣಬಹುದು.

ನಂ. ೮

ಶ್ರೀ ಮರುಳಸಿದ್ಧ ದೇವಾಲಯದ ಪೂರ್ವ ಮುಖಮಂಟಪದ ಗೋಡೆಯಲ್ಲಿರುವ ಶಾಸನ:

(ಎಸ್.ಐ.ಐ. ೯, ಭಾಗ-೧, ಶಾ.ಸಂ. ೫೯೪)

ಪಾಠ

೧. ನಮಸ್ತುಂಗಶಿರಶ್ಚುಂಬಿಚಂ[ದ್ರಚಾ]ಮರಚಾರವೇ ತ್ರೈ-
೨. ಲೋಕ್ಯನಗರಾರಂಭ [ಮೂಲ] ಸ್ತಂಭಾಯ
೩. ಶಾಂಭವೇ [।।*] ಸ್ವಸ್ತಿ ಶ್ರೀಜಯಾಭ್ಯು(ದಯ) **ಶಾಲಿವಾಹನ ಶ-**
೪. **ಕವರುಶ ೧೪೬೧ನೆಯ ವಿಕೃ**.....ರದ **ಭಾದ್ರಪದ ಶು-**
೫. **ದ್ಧ ೧೨ ಮಂಗಳವಾರ**ದಲು ಶ್ರೀಮ....ರಾಜಾಧಿರಾಜ ರಾ[ಜ]-
೬. ಪರಮೇಶ್ವರ **ಶ್ರೀಅಚುತರಾಯ**ಮಹಾ[ರಾಯ]ರು ಮಾಡಿದ ದಾನದ ಸ್ಲೋಕ
೭. ಶಾಕೇ ಚಂದ್ರರಸಾಮರೇಂದ್ರಗಣತೇ........ಪಕ್ಷೇ ಭಾದ್ರಪದಸ್ಯ ಪ್ರೋಷಿಚವಿಧೌ
೮. ದ್ವಾದಶ್ಯಭಿಖ್ಯೇ ತಿಥೌ। ವಾರೇ ಭೂಮಿಸುತಸ್ಯ [ವಿಷ್ಣುಧಿಪತೌ] ತಾರೇಚ್ಯುತಕ್ಷ್ಮಾಪತಿಃ ಕೃತ್ಯಾನಂದ
೯. ನಿಧಿಂ ದ್ವಿಜಾ(ಂ)ಸ್ಥ ನದಯಂಟಿಫಿಮೋದ [ಯನ್ಮಾ] ಧವಂ ॥೧॥ ಪುಣ್ಯೈರ್ಫೈಃಪರಿ-
೧೦. ಪಾಲಿತಸ್ಯೆ ಪರಿತೋ ಭೂತಾಳಿಸಂವೇಷ್ಟಿತಾಃ [ಸರ್ವ್ವಜ್ಞೈಸ್ಸ್ವವಶೀಕೃತ]ಸ್ಯ ಸತತಾಕ್ರಾಂತಾ ಭು-
೧೧. ಜಂಗಾವ್ರಜೈಃ । ಪ್ರಾಪ್ತಸ್ಯಾಭಿನವ ಪ್ರಶಸ್ತಿ ಮಧಿಕಪ್ರಖ್ಯಾತ ಶಲುರ್ಯಾಚ್ಯು-
೧೨. [ತಕ್ಷ್ಮಾ] ಪಾನಂದನಿಧೇರ್ನವಾಪಿ ನಿಧಯಃ ಕಿಂ ತೇ ಲಭಂತೇ ತುಲಾಂ [।।*]

ಸಾರಾಂಶ

ಈ ಶಾಸನದಲ್ಲಿ ವಿಜಯನಗರ ಅರಸ **ಅಚ್ಯುತರಾಯ** ಮಹಾರಾಯರು ದಾನವನ್ನು ನೀಡಿದ ವಿವರವಿದೆ. ಈ ಶಾಸನದ ಕಾಲ **ಶಕ ೧೪೬೧, ವಿಕೃತಿ ಸಂ., ಭಾದ್ರಪದ ಶು.೧೨, ಮಂಗಳವಾರ** ಅಂದರೆ ೨೬ ಆಗಸ್ಟ ೧೫೩೯ **ಮಂಗಳವಾರ** ಆಗುವುದು.

ನಂ. ೯

ಶ್ರೀ ಮರುಳಸಿದ್ಧ ದೇವಾಲಯದ ಪಶ್ಚಿಮ ಮುಖಮಂಟಪದ ಕಟ್ಟೆಯ ಮೇಲಿರುವ ಶಾಸನ

ಪಾಠ

೧. ಶ್ರೀ ಶುಭಮಸ್ತು ನಮಸ್ತುಂಗ ಶಿರಶ್ಚುಂಭಿ ಚಂದ್ರಚಾಮ-

೨. ರ ಚಾರವೇ ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ ।

೩. ಸ್ವಸ್ತಿ ಶ್ರೀ ವಿಜಯಾಭ್ಯುದಯ **ಶಾಲಿವಾಹನ ಶಕ ವರುಶ ೧೪೮೫ನೇ**

೪. **ಯ ದುಂದುಭಿ ಸಂವತ್ಸರದ ಮಾಘ ಶುದ್ಧ ೧೦ಯ ಸೋಮವಾರ ಪುಂಣ್ಯ**

೫. **ಕಾಲದಲು** ಶ್ರೀ ಮನ್ಮಹಾ ರಾಜಾಧಿರಾಜ ರಾಜ ಪರಮೇಶ್ವರ **ಶ್ರೀ ವೀರಪ್ರತಾಪ**

೬. **ವೀರ ಸದಾಶಿವ ಮಹಾದೇವರಾಯ**ರು ವಿದ್ಯಾರಂಣ್ಯಗಳ ಪ್ರತಿನಾಮವಾದ ವಿದ್ಯಾ-

೭. ನಗರಿಯ ರತ್ನ ಸಿಂಹಾಸನದಲ್ಲಿ ಸುಖಸತ್ಕಥಾ ವಿನೋದದಿಂ ಪೃಥ್ವೀರಾಜ್ಯಂಗೆ ಇರುತ್ತ-

೮. ಮಿರ್ದ್ದು **ಹಡಪದ ಬಯಪ್ಪ ನಾಯಕ** ಅಯನ ಕೊವರ **ಕೃಷ್ಣಪ್ಪ ನಾಯಕ** ಅ-

೯. ಯನವರಿಗೆ ಪಾಲಿಸಿದ ರಾಯ ರಾಜಧಾನಿಯಾದ **ಕೋಗಳೆ**ಯ ಸೀಮೆಯಕೆಸಲು-

೧೦. ವ **ಕೊಟ್ಟೂರ** ಸೀಮೆಯೊಳಗಣ **ಉಜ್ಜಯಿನಿ ಮಲ್ಲಿಕಾರ್ಜುನ** ಲಿಂಗಸ ಪೂರ್ವತಾಂ-

೧೧. ಬ್ರಶಾಸನಸ್ಥವಾದ ಭೂಮಿ ವೊಳಗೆ ಮಹಾರಾಜರು ಹಾಕಿದ **ನಾಗೇನಹಳ್ಳಿ**ಯ - ನೂಪೂ

೧೨. ರ್ವದ ಸಾ ವಿಚಾರಿಸಿ ಜೆರ್ಣ್ಣೋದ್ಧಾರವ ಮಾಡಿ ಆ **ನಾಗನಹಳ್ಳಿ**ಯೆಂಬ ಗ್ರಾಮಕ್ಕೆ ಪ್ರ-

೧೩. ತಿ ನಾಮಧೇಯವಾದ ಮಾರ್ಗ ಸಹಾಯ ಊರವನು ಕಟ್ಟಿಸಿ ಪ್ರತಿಷ್ಟೆಯಂ-

೧೪. ಮಾಡಿ ನಂಮ **ಕೃಷ್ಣಪ್ಪನಾಯಕ** ಅಯನವರಿಗೆ ಆಯುರಾರೋ

೧೫. ಗ್ಯ ಧರ್ಮಸಹಿತ ಧರ್ಮಕೀರ್ತ್ತಿ ಪುಂಣ್ಯವಾಗಬೇಕೆಂದು ಗಂಡರಗಂಡ ಪ್ರಜೆ-

೧೬. ಮೆಚ್ಚುಗಂಡ ಪಂಡಿತ ಪುಂಡರೀಕ ಚಂಡಮಾರ್ತಾಂಡ ಗವೆ-

೧೭. **ಲೂರ ಕಾಳಯ ನಾಯ್ಕ**ನರ ಕುಮಾರ ಮಾರ್ಗ ಸಹಾಯ ನಾಯಕ-

೧೮. ರೂ ಶ್ರೀ ಮನ್ಮಹಾದೇವರ ದೇವ ದೇವ ಶಿಖಾಮಣಿ ಶ್ರೀ **ಉಜಿನಿ-**

೧೯. **ಮಲ್ಲಿಕಾರ್ಜುನ ದೇವರ** ಮೂಜಿನೆಯ ಜಾವದ ಅವಸರದ

೨೦. ಅಮೃತಪಡಿ-ನಯವೇಧ್ಯಕ್ಕೆ ತ್ರಿವಾಚಲೂ ಸಮರ್ಪಿಸಿದ

೨೧. ರು [।*] ಮಾರ್ಗ ಸಹಾಯ ಪುರುದ ಚತು ಸೀಮೆವೊಳಗಾದ ನಿಧಿ ನಿ-

೨೨. ಕ್ಷೇಪ ಜಲಪಾಷಾಣ ಯಕ್ಷಿಣಿ ಆಗಮಿಸಿದ ಸಾಂಧುಂಗಳ ಉ

೨೩. ಅಷ್ಟಭೋಗ ತೇಜಸಾಂಯಂಗಳನು ಆಗು ಮಾಡಿಕೊಂಡು ಅನುಭವಿ-

೨೪. ಸುವ ಮಾಯೆಂಗು ಕೊಟ್ಟ ಧರ್ಮ ಶಿಲಾಶಾಸನ ॥ ದಾನಪಾಲ ನಯೊ-

೨೫. ರ್ಮಧ್ಯ ದಾನಾಶ್ರೆಯೊನುಪಾಲನಂ ದಾನಾಷ್ಟರ್ಗವಪ್ನೋತಿ ಪಾಲನಾ-

೨೬. ಅಚ್ಯುತಂ ಪದಂ ಸ್ವದತಾಂ ದ್ವಿಗುಣಂ ಪುಂಣ್ಯ ಪರದತ್ತಾ ನ ತಾ

೨೭. ಲನಂ ಪರದತ್ತಾಪಹಾರೇಣ ಸ್ವದತ್ತಂ ನಿಷ್ಫಲಂ ಭವೇ ಸ್ವದತ್ತಂಪರ

೨೮. ದತ್ತಂಪಾಯೋಪಹರೇತಿ ವಸುಂಧರಾ ಷಷ್ಟಿರ್ವರ್ಷ ಸಹ ಪ್ರಾಣಿ ವಿಷ್ಠಾ

೨೯. ಯಾಂ ಜಾಯತೆ ಕ್ರಿಮಿಃ ಮಂಗಳಮಹಾ ಶ್ರೀ ಶ್ರೀ ಶ್ರೀ ॥

೩೦. ಯೀಧರ್ಮಕ್ಕೆವದೊದಲಿರುವ...ತಾಯನು ವಾರಣಾಸಿಯ

೩೧. ಲ್ಲಿ ಕೊಂದಪಾತಕ್ಕೆ ಹೋಹರು

ಸಾರಾಂಶ

ಈ ಶಾಸನದಲ್ಲಿ ವಿಜಯನಗರದ ಅರಸ **ವೀರ ಸದಾಶಿವರಾಯ** ಆಳುತ್ತಿರುವಾಗ **ಹಡಪದ ಬಯಪ್ಪನಾಯಕನ** ಮಗ **ಕೃಷ್ಣಪ್ಪ ನಾಯಕನು ಕೋಗಳಿ ನಾಡನ್ನು** ಆಳುತ್ತಿದ್ದನೆಂದು ಹೇಳಲಾಗಿದೆ. ಈ ಕೋಗಳಿ ನಾಡಿನಲ್ಲಿದ್ದ **ಕೊಟ್ಟೂರು** ಸೀಮೆ ಒಳಗಿನ **ಉಜಿನಿಯ ಮಲ್ಲಿಕಾರ್ಜುನ ದೇವರಿಗೆ** ನೀಡಿದ ಭೂ ದತ್ತಿಯ ತಾಂಬ್ರ ಶಾಸನ ಒಂದಿದ್ದಿತು. ಆ ದತ್ತಿ ಭೂಮಿ ಒಳಗೆ ಮಹಾರಾಜ ಬಹುಶಃ ಹಾಳಾದ ನಾಗೇನಹಳ್ಳಿಯನ್ನು ಜೀರ್ಣೋದ್ಧಾರ ಮಾಡಿಸಿ ಆ ನಾಗೇನಹಳ್ಳಿಗೆ ಮಾರ್ಗವನ್ನು ಕಟ್ಟಿಸಿದನು. ಈ ಕಾರ್ಯದಿಂದ **ಕೃಷ್ಣಪ್ಪನಾಯಕ**ನಿಗೆ ಆಯುರಾರೋಗ್ಯ, ಧರ್ಮ, ಕೀರ್ತಿ, ಪುಣ್ಯ ಲಭಿಸಲೆಂದು **ಗವೆಲೂರ ಕಾಳಯ ನಾಯಕ**ರ ಕುಮಾರರು ಸಹಾಯ ಮಾಡಿದನು. ಆ ನಾಯಕನು **ಉಜಿನಿ ಮಲ್ಲಿಕಾರ್ಜುನ ದೇವರ** ಮೂರನೆಯ ಜಾವದ ಅವಸರದ ಅಮೃತಪಡಿ ನೈವೇದ್ಯಕ್ಕೆ ತ್ರಿವಾಚವೂ ಸಮರ್ಪಿಸಿದರು. ನಾಗೇನಹಳ್ಳಿಯ ಮಾರ್ಗ ನಿರ್ಮಾಣದ ಸಹಾಯಕ್ಕಾಗಿ ಉಜಿನಿಪುರದ ಚತುಸ್ಸೀಮೆ ಒಳಗಡೆ ಬರುವ ನಿಧಿ, ನಿಕ್ಷೇಪ, ಜಲ, ಪಾಷಾಣ ಇತ್ಯಾದಿಗಳನ್ನು ಅಲ್ಲಿರುವ ಸಾಧುಗಳ ಅಷ್ಟಭೋಗ ತೇಜ ಸಾಯಂಗಳನು ಆಗು ಮಾಡಿಕೊಂಡು ಅನುಭವಿಸಲು ಕೊಟ್ಟರೆಂದು ಹೇಳಲಾಗಿದೆ. ಕೊನೆಯಲ್ಲಿ ಪ್ರಾರ್ಥನಾ ಶ್ಲೋಕ ಮತ್ತು ಶಾಪಾಶಯ ಉಕ್ತವಾಗಿದೆ. ಶಾಪಾಶಯದಲ್ಲಿ ಈ ಧರ್ಮವನ್ನು ಪಾಲಿಸದಿಪ್ಪರೆ ಅವರ ತಾಯಿಯನ್ನು ವಾರಣಾಸಿಯಲ್ಲಿ ಕೊಂದ ಪಾಪಕ್ಕೆ ಹೋಗುವರೆಂದು ಹೇಳಲಾಗಿದೆ.

ಈ ಶಾಸನದ ಕಾಲ **ಶಕ ೧೪೮೫, ದುಂದುಭಿ ಸಂವತ್ಸರ, ಮಾಘ, ಶು. ೧೦, ಸೋಮವಾರ**, ಅಂದರೆ **ಕ್ರಿ.ಶ. ೧೫೬೩, ಫೆಬ್ರುವರಿ ೨, ಮಂಗಳವಾರ** ಆಗುತ್ತದೆ.

ನಂ. ೧೦

ಶ್ರೀ ಮರುಳಸಿದ್ಧ ದೇವಾಲಯದ ಹೊರಗಡೆ ಇರುವ ಶಾಸನ ತುಂಡು

ಪಾಠ

೧. ....

೨. ಸ್ವಸ್ತಿ...........

೩. ೧೪೯೨ನೆಯವ ರುಕ್ತಾ-

೪. ಕ್ಷಿಸಂವತ್ಸರದ ಭೌಯ

೫. ಲ ಉಜನಿಯ

೬. ಳಿ ನರಯನಿ-

೭. [ಲಿ]ಸಿದ

ಸಾರಾಂಶ

ಈ ಶಾಸನವನ್ನು ಶಕ ೧೪೯೨ ಅಂದರೆ ಕ್ರಿ.ಶ. ೧೫೭೦ರಲ್ಲಿ ಉಜನಿಯಲ್ಲಿ ಪ್ರಾಯಶಃ ರಕ್ತಾಕ್ಷಿ ಸಂವತ್ಸರದಲ್ಲಿ ನಿಲ್ಲಿಸಿದರೆಂದು ಕಾಣುತ್ತದೆ.

ನಂ. ೧೧

ಕಸವನಹಳ್ಳಿ, ಹರಪನಹಳ್ಳಿ ತಾಲೂಕ (ದಾವಣಗೇರಿ ಜಿಲ್ಲೆ)

ಗ್ರಾಮದ ಉತ್ತರಕ್ಕೆ ಹೊಲವೊಂದರಲ್ಲಿರುವ ಶಾಸನ

(ಎ.ಆರ್.ಐ. ನಂ. ೨೭೩ -೧೯೧೮: ಎಸ್.ಐ.ಐ.೯ ಭಾಗ ೨, ನಂ. ೬೯೬)

೧. ಶ್ರೀ [॥*] ನಮಸ್ತುಂಗ ಸಿರಸ್ಚುಂ-

೨. ಭಿ ಚಂದ್ರಚಾಮರಚಾರವೇ ।

೩. ತ್ರೈಲೋಕ್ಯನಗರಾರಂಭ

೪. ಮೂಲಸ್ತಂಭಾಯ ಶಾಭಂ

೫. ವೇ ॥ ಸ್ವಸ್ತಿ ಶ್ರೀಜಯಾದ್ಬುದಯ

೬. ಶಾಲಿವಾಹನಶಕವರುಷ ೧೫೮

೭. ೧ನೇಯ ॥ ವಿಕಾ[ರಿ] ಸಂವತ್ಸರದ ಫಾಲ್ಗು-

೮. ಣ ಶು ೩ ಸುಕ್ರವಾರದಲು ಶ್ರೀಮ(೦)ನ್ಮ

೯. ಹಾರಾಜಾಧಿರಾಜ ರಾಜಪರಮೇಶ್ವ-

೧೦. ರ ಶ್ರೀವೀರಪ್ರತಾಪ ಶ್ರೀವೀರವೆಂಕಟ-

೧೧. ಪತಿಮಹಾದೇವರಾಯರ ಕೊಮರ ಬಾಗು-

೧೨. ಳಿ ಬಸವಪನಾಯಕರೂ ಕಸವನಹ

೧೩. ಳಿಯ ಪುರವರ್ಗ್ಗನು ಶ್ರೀರೇ.......

೧೪. ದೇವರಿಗೆ ಕೊಟ್ಟು ಯಿತ್ತು ಅ....

೧೫. ದಿಂದಲು ಆ ಪುರವರ್ಗ್ಗ ಅರಮನೆಗೆ ಬಿದು

೧೬. [ಹೊ]ೀಗಿ ಯಿರಲಾಗಿ ಗಿರಮಲಪಣನ ಮಗ ಬಸ-

೧೭. ವಯನು ಉಜನಿ ಸಿಂಹಾಸನದ ಸಿಸ್ಯ

೧೮. ನ[ಂ]ಮ್ಮ ಬಿರುದು ನಂಮ ಯೆಳೆಯ ಬ-

೧೯. ಯ್ಯಗ್ರಾಮ ಜೀರ್ಣೋದ್ಧಾರವಂನೂ

೨೦. ಮಾಡಿ ತಂದ ಕಾರಣ ಗುರುಸ್ವಾಮಿ

೨೧. ಮಳೆಸ್ವಾಮಿ ಪಟದೈಯಗಳು ವ

೨೨. ಕುಳದ ಯರೆ ಭೂಮಿನು ನಂಮ ಮೊಂಮ

೨೩. ಗ ಸಾಂತರಾಉತ್ತನ ಮಗ ಗಿರಿಮಲ್ಲಪ್ಪ ಅ

೨೪. ತನ ಮಗ ಬಸವಯ್ಯನ ಮಗ [ತಿರುಕಪಗೆ]-

೨೫. ಪುತ್ರ ಪಉತ್ರ ಪಾರಂಪರಿಯಾಗಿ ಅಚೆಂ-

೨೬. ದ್ರಾರ್ಕ್ಯವಾಗಿ ಕೊಟ್ಟಂತ ದಾನಶಾಸನ ॥

೨೭. ಯೀದನಕೆ ಅರಮನೆಯವರಾಗ-

೨೮. ಲ್ಲಿ ಕೊಟ್ಟ ಕ್ರಿರ್ತ್ತುವಿನ ಬಗೆಯವರಾ

೨೯. ಗಲ್ಲಿ ಯಿವರೊಳಗೆ ಆರು

೩೦. ದರ ಆ ತಪ್ಪಿದವರ ಬಾಯೊಳ

೩೧. ಗೆ ಕತ್ತೆತುಂಣೆ ಕಲ್ಲುಪ್ಪು ॥ ಸ್ವ-

೩೨. ದತ್ತ ದ್ವಿಗುಣಂ ಪು[ಂ]ಣ್ಯಂ ಪರದ-

೩೩. ತನುಪಾಲನಂ ಪರದತಪಹಾ-

೩೪. ರಿಣಾಂ ಸ್ವದತ್ತಂ ನಿಷ್ಫಲಂ ಬ

೩೫. ವೇತ್ತು ॥ ಶ್ರೀ ಶ್ರೀ ಶ್ರೀ

ಸಾರಾಂಶ

ಕ್ರಿ.ಶ. ೧೬೬೦ ಫೆಬ್ರುವರಿ, ೩೦ರ ಈ ಶಾಸನದಲ್ಲಿ **ವೆಂಕಟಪತಿ ಮಹಾದೇವರಾಯನ** ಮಗ **ಬಾಗುಳಿ ಬಸವಪ ನಾಯಕರು ಕಸವನಹಳಿಯ** ದೇವರಿಗೆ ದತ್ತಿ ನೀಡಿದನೆಂದು ಆ ಪುರದ ಅರಮನೆ ಬಿದ್ದು ಹೋಗಿದ್ದನ್ನು ಗಿರಿಮಲ ಪಣನ ಮಗ **ಬಸವಯನು ಉಜನಿ ಸಿಂಹಾಸನದ** ಸಿಸ್ಯ **ಯೆಳೆಯ ಬಯ್ಯಗ್ರಾಮವ**ವನ್ನೂ ಜೀರ್ಣೋದ್ಧಾರ ಮಾಡಿದನೆನ್ನಲಾಗಿದೆ. ಇದಕ್ಕಾಗಿ ಗುರುಸ್ವಾಮಿ, ಮಳೆಸ್ವಾಮಿ, ಪಟ್ಟದೈಯಗಳು ವಕುಳದ ಎರೆ ಭೂಮಿಯನ್ನು ಅವರ ಮೊಮ್ಮಗ **ಸಾಂತರಾವುತನ** ಮಗ **ಗಿರಿಮಲ್ಲಪ್ಪ** ಅವರ ಮಗ ಬಸವಯ್ಯ, ಅವನ ಮಗ **ತಿರುಕಪ್ಪ**ಗೆ ದತ್ತಿ ನೀಡಿದರೆಂದು ಹೇಳಿದೆ. ಶಾಸನದ ಕೊನೆಯಲ್ಲಿ ಶಾಪಾಶಯವಿದೆ.

ನಂ. ೧೨

ಶ್ರೀ ಮರುಳಸಿದ್ಧ ದೇವಾಲಯದ ಗಂಟೆ ಶಾಸನ : *(ಚಿತ್ರ ಸಂ. ೨೮)*

ಪಾಠ

೧. ಸ್ವಸ್ತಿ ಶ್ರೀಜಯಾಭ್ಯುದಯ **ಶಾಲಿವಾಹನಶಕೆ ವರುಷಂಗಳು ೧೬೩೪ನೆಯ ನಂದನ** ಸಂವತ್ಸರದ ಶ್ರಾವಣ ಶು ೫ ಲೂ ಶ್ರೀ ಸ್ವಾಮಿವು [ಜ್ಜನಿ] ಸಿದ್ಧೇಶ್ವರ ದೇವರ ಪಾದಕ್ಕೆ ದೇವರ ಭಕ್ತರು **ಬಾಗುಳಿ ಯಿಂಮಡಿ ಬಸವಂತರಾಯ**ರಂಕೊ ಮಾರಮು.

೨. **ಂಮಡಿ ಬಸವಂತರಾಯ**ರ ಕೊಮಾರ **ಮುಂಮಡಿ ಯಿಸರಪ್ಪ ನಾಯಕ**ರವರು ಮಾಡಿಸಿ ದೇವರ ವರ ಸಂನಿಧಾನದಲ್ಲಿ ಸಮರ್ಪಿ[ಸಿದ*] ಗಂಟ್ಟೆ ।

ಸಾರಾಂಶ

ಈ ಗಂಟೆಯು ೨೦"ವ್ಯಾಸ ೧' ಎತ್ತರ ಸುಮಾರು ೧೫ ಕಿ.ಗ್ರಾಂ. ತೂಕದ್ದಾಗಿದೆ. ಈ ಶಾಸನದಲ್ಲಿ **ಬಾಗುಳಿ ಇಮ್ಮಡಿ ಬಸವಂತರಾಯ**ರ ಮಗ ಮುಮ್ಮಡಿ ಬಸವಂತರಾಯರ ಮಗ ಮುಮ್ಮುಡಿ **ಈಶ್ವರಪ್ಪ** ನಾಯಕನು **ವುಜ್ಜನಿ ಸಿದ್ಧೇಶ್ವರ ದೇವ**ರಿಗೆ ಗಂಟೆಯನ್ನು ಮಾಡಿಸಿ ಸಮರ್ಪಿಸಿದರೆಂದು ಹೇಳಲಾಗಿದೆ. ಆದರ ಕಾಲ **ಶಾಲಿವಾಹನ ಶಕೆ ೧೬೩೪, ನಂದನ ಸಂವತ್ಸರ, ಶ್ರಾವಣ ಶುದ್ಧ ೫** ಅಂದರೆ ಕ್ರಿ.ಶ. ೧೭೧೨, ಜೂಲೈ, ೨೭, ಆದಿತ್ಯವಾರ ಆಗುತ್ತದೆ.

ನಂ. ೧೩

ಶ್ರೀ ಸಾಂತನಳ್ಳಿ ಕೊಡದಪ್ಪನ ಮನೆ ಎದುರಿಗಿನ ಫಲಕದ ಮೇಲಿನ ಶಾಸನ :

(ಚಿತ್ರ ನಂ. ೨೯)

ಪಾಠ

೧. [ಸಿದ್ಧೇಶ್ವರ★] ದೇವರ ಪೂಜಾರಿ ಸಿ-

೨. [ವ]ಪನ ಮಗ ಬಸ-

೩. ಯಕಮರನು । ಬಸಪನ ಹೆಂ-

೪. ತಿಳಿದೇವನೆ ಸ್ವಂತು । ಸಮಾಧಿರೆ

೫. ಕೂತರು ಶ್ರೀ

ಸಾರಾಂಶ

ಈ ಶಾಸನದಲ್ಲಿ **ಸಿದ್ಧೇಶ್ವರ ದೇವರ ಪೂಜಾರಿ ಸಿವಪ್ಪನ** ಮಗ **ಬಸಯ್ಯ**ಕುಮಾರನ ಉಲ್ಲೇಖವಿದ್ದು **ಬಸಪ್ಪ**ನ ಹೆಂಡತಿ **ಇಳಾದೇವಿ** ಎಂಬವಳು ಸ್ವತಃ ಸಮಾಧಿ ಕುಳಿತಳೆಂದು ಹೇಳಲಾಗಿದೆ. ಅಕ್ಷರಗಳ ಶೈಲಿಯಿಂದ ಈ ಶಾಸನದ ಕಾಲ ಸು. ಕ್ರಿ.ಶ. ೧೭ನೇ ಶತಮಾನ. ಕುತೂಹಲದ ಸಂಗತಿಯೆಂದರೆ ಈ ಶಾಸನದ ಮುಂದೆ ಒಂದು ನಂದಿ ಕಂಬವಿದೆ. ಬಹುಶಃ ಈ ಕಂಬವನ್ನು ಈಕೆಯ ಜೀವಂತ ಸಮಾಧಿ ಮೇಲೆ ನಿಲ್ಲಿಸಿರಬೇಕು.

ಈ ಶಾಸನ ಕುರಿತು ಒಂದು ಐತಿಹ್ಯ ಹೀಗಿದೆ :

ನಾಗೇನಹಳ್ಳಿಯ ಪಾಳೆಗಾರನೊಬ್ಬ ನಿತ್ಯ ಉಜ್ಜಯಿನಿ ಸಿಂಹಾಸನದ ಶ್ರೀ ಮರುಳಸಿದ್ಧೇಶ್ವರ ಸ್ವಾಮಿಯ ದರ್ಶನ ಪಡೆಯುತ್ತಿದ್ದನು. ಒಮ್ಮೆ ಈ ದೇವರ ಪೂಜಾರಿಯ ಹೆಂಡತಿಯನ್ನು ನೋಡಿ ಮೋಹಗೊಂಡನು. ಆಕೆಯನ್ನು ಹೇಗಾದರೂ ವಶಪಡಿಸಿಕೊಳ್ಳಲು ಹವಣಿಸಿದನು. ಈ ವಿಚಾರ ತಿಳಿದ ಪೂಜಾರಿಯ ಹೆಂಡತಿ ಪಾಳೆಗಾರನ ಆಜ್ಞೆ ಬರುವ ಮೊದಲೇ ಜೀವಂತ ಸಮಾಧಿ ಹೋದಳೆಂದು ಸ್ಥಳಿಕ ಶ್ರೀ ಮರುಳ ಸಿದ್ಧಪ್ಪನವರು ತಿಳಿಸಿದ್ದಾರೆ. ಈ ನಾಗೇನಹಳ್ಳಿ ಗ್ರಾಮವು ಉಜ್ಜಯಿನಿಯಿಂದ ಸುಮಾರು ಎರಡು ಕಿ.ಮೀ. ಅಂತರದಲ್ಲಿದೆ.

ವಿಜಯನಗರ ಕಾಲದಲ್ಲಿ ಈ ಗ್ರಾಮವನ್ನು ಜೀರ್ಣೋದ್ಧಾರ ಮಾಡಿದ ವಿವರಗಳು ಈ ಮೇಲೆ ತಿಳಿಸಿದ ಉಜ್ಜಯಿನಿಯ ಶಾಸನ ಒಂದರಲ್ಲಿ ಉಲ್ಲೇಖವಾಗಿವೆ. ಆ ಸ್ಥಳದಲ್ಲಿ ಹಾಳಾದ ಒಂದು ವಿಶಾಲ ನೆಲೆಯಿದೆ. ಪಾಳೆಗಾರರ ಕಾಲದಲ್ಲಿ ಯುದ್ಧ ಜರುಗಿ ಅಲ್ಲಿಯ ಸೇವಕರು ಮೃತಪಟ್ಟರೆಂದು ಅವರ ಹೆಂಡಂದಿರು

ಬಳೆಯನ್ನು ಒಡೆದುಕೊಂಡು ಸತಿ ಹೋದರೆಂದು ಸ್ಥಳಿಕರು ಹೇಳುವರು. ಅವರು ಒಡೆದುಕೊಂಡ ಬಳೆಗಳು ಆ ನೆಲೆಯಲ್ಲಿ ಸುಮಾರು ಹದಿನಾರು ಖಂಡುಗದಷ್ಟಿವೆ ಎನ್ನುವರು. ಈ ಐತಿಹ್ಯ ಅಲ್ಲಿದ್ದ ಪಾಳೆಗಾರರ ಸ್ಥೂಲ ಮಾಹಿತಿಯನ್ನು ಒದಗಿಸಿಕೊಡುತ್ತದೆ.

ಈ ಐತಿಹ್ಯ ಮತ್ತು ಶಾಸನದಲ್ಲಿ ಬರುವ ಉಲ್ಲೇಖಗಳು ಒಂದೇ ಆಗಿವೆ. ಈ ಶಾಸನವು ಕೆಳದಿ ನಾಯಕರ ರಾಣಿಯಾದ ವೀರಮ್ಮನ ಸಮಾಧಿಯೆಂದು ಈ ಹಿಂದೆ ಗುರುತಿಸಿದ್ದು ತಪ್ಪಾಗಿ ಕಾಣುವುದು.

ನಂ. ೧೪

ಉಜ್ಜಯಿನಿ ಸದ್ಧರ್ಮ ಪೀಠದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಯ ಎದುರಿನ ಬಾವಿ ಶಾಸನ

ಪಾಠ

೧. **ವುಂತಕಲ್ಲು ಮಠದ ಶರಭಯ್ಯನವರ**

೨. ಮಗ

೩. **ಶಾಂತವೀರಯ್ಯನವರ** ಭಕ್ತಿ

ಸಾರಾಂಶ

ಈ ಶಾಸನದಲ್ಲಿ **ವುಂತಕಲ್ಲು ಮಠದ ಶರಭಯ್ಯನವರ** ಮಗ **ಶಾಂತವೀರಯ್ಯನು** ಈ ಬಾವಿಯನ್ನು ಕಟ್ಟಿಸಿದ ಭಕ್ತಿಯಿದೆ. ಈ ಶಾಸನದ ಕಾಲ ಸುಮಾರು ಒಂದು ಶತಮಾನ ಪ್ರಾಚೀನದ್ದಾಗಿದೆ.

ನಂ. ೧೫

ಶ್ರೀ ಮರುಳಸಿದ್ಧ ಸ್ವಾಮಿಯ ದೇವಾಲಯದ ಗಂಟೆ ಶಾಸನ

ಪಾಠ

೧. ಉ ॥ ಸಿ ॥ ದೇ ॥

೨. ಹರಿಹರದ ಭಿಕ್ಷಾವರ್ತಿ ಮಠದ ನಂಜುಂಡೇಯನವರ ಭಕ್ತಿ॥೦

ಸಾರಾಂಶ :

ಈ ಗಂಟೆ ಶಾಸನದಲ್ಲಿ **ಹರಿಹರದ ಭಿಕ್ಷಾವರ್ತಿ ಮಠದ ನಂಜುಡಯ್ಯನವರು** ಈ ಗಂಟೆಯನ್ನು ಉ ॥ ಸಿ ॥ ದೇ ॥ ಅಂದರೆ ಉಜ್ಜಯಿನಿ ಸಿದ್ಧೇಶ್ವರ ದೇವರಿಗೆ ನೀಡಿದ ಭಕ್ತಿಯೆಂದು ಉಕ್ತವಾಗಿದೆ.

ನಂ. ೧೬

ಉಜ್ಜಯಿನಿ ಗ್ರಾಮದ ದಕ್ಷಿಣಕ್ಕಿರುವ ಹನುಮಂತ ದೇವರ ಗುಡಿಯ ಎದುರಿಗಿರುವ ಶಾಸನ ಫಲಕ

ಪಾಠ

೧. ವುಜ್ಜೈನಿ ವೈಶಿಮ್ಮ ಶೆಟ್ಯಪ್ಪನವರ ಧರ್ಮಪತ್ನಿ

೨. ಸುಬ್ಬಮ್ಮ

೩. ನವರ ಧರ್ಮ

೪. ಮಂಟಪ

೫. ೧೯೨೯

ಸಾರಾಂಶ

ಈ ಶಾಸನದಲ್ಲಿ ಅಲ್ಲಿಯ ಧರ್ಮ ಮಂಟಪವನ್ನು **ಉಜ್ಜೈನಿ ವೈಶಿಮ್ಮ ಶೆಟ್ಯಪ್ಪ**ನವರ ಧರ್ಮಪತ್ನಿ **ಸುಬ್ಬಮ್ಮ**ನವರು ಕ್ರಿ.ಶ. ೧೯೨೯ ರಲ್ಲಿ ಕಟ್ಟಿಸಿದರೆಂದು ಹೇಳಲಾಗಿದೆ.

ನಂ. ೧೭

ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯಮಹಾಸ್ವಾಮಿಗಳ ಗದ್ದುಗೆ ಮೇಲಿನ ಶಾಸನ

ಪಾಠ :

೧. ಶ್ರೀ ಮದುಜ್ಜಯಿನೀ

೨. ಸದ್ಧರ್ಮ ಸಿಂಹಾಸನಾಧೀಶ್ವರ

೩. ಶ್ರೀ ೧೦೮ ಜಗದ್ಗುರು

೪. ಸಿದ್ಧಲಿಂಗ ಶಿವಾಚಾರ್ಯ

೫. ಮಹಾಸ್ವಾಮಿಗಳವರು [।*]

೬. ಶ್ರೀಯುವ ನಾಮ ಸಂವತ್ಸರ

೭. ತಾ. ೧೨.೧.೧೯೩೬

೮. ಲಿಂಗೈಕ್ಯ ಸಮಾಧಿ

ಸಾರಾಂಶ

ಈ ಶಾಸನದಲ್ಲಿ **ಶ್ರೀಮದುಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ** ಮಹಾಸ್ವಾಮಿಗಳ ದಿನಾಂಕ ೧೨.೧.೧೯೩೬ ರಂದು ಲಿಂಗೈಕ್ಯ ಸಮಾಧಿಯನ್ನು ಮಾಡಲಾಯಿತೆಂದು ಹೇಳಲಾಗಿದೆ.

ನಂ. ೧೮

ಶ್ರೀ ಉಜ್ಜಯಿನಿ ಸದ್ಧರ್ಮ ಸಿಂಹಾಸನ ಮಠದ ಮುಂದಿನ ಶಾಸನ : *(ಚಿತ್ರ ನಂ. ೩೦)*

ಪಾಠ

೧. ೯.೧೧.೬೧ರಿಂದ ೧೯.೨.೬೨

೨. ಅಷ್ಟಗ್ರಹ ಕೂಟದ ಮಹಾ ಶಾಂತಿ

೩. ಕಾರ್ಯಕ್ರಮ

೪.

೧೨	೧	೨೩
೧೧	ಶಾಲಿವಾಹನ ಶಕ೧೮೮೩ ಪ್ಲವ॥ ಸಂ॥ ಪ್ರ॥ ಬಹುಳ ಅಮವಾಸ್ಯೆ ತಾ. ೪.೨.೧೯೬೨ ೫	೪ ರಾಹು
ರವಿ ಬುಧ ಶುಕ್ರ, ಕುಜ ಚಂದ್ರ, ಶನಿ ಕೇತು ಗುರು		
೯೮	೭	೬

೫. **ಶಿವಮೊಗ್ಗ** ಪ್ರಾಂತ **ಷಿಕಾರೀ ಪು**ರದ ಕುಮುದ್ವತಿ

೬. ನದೀತೀರದಲ್ಲಿ ಶ್ರೀ **ಶಾ॥ ೧೮೮೧ ವಿಕಾರಿ** ಸಂ

೭. ಫಾ॥ **ಶುದ್ಧ**ದಲ್ಲಿ ಶ್ರೀ ಜ॥ **ಸಿದ್ಧೇಶ್ವರ ಶಿವಾಚಾರ್ಯ**

೮. **ಸ್ವಾಮಿಗಳ** ಸನ್ನಿಧಿಯಲ್ಲಿ ೬೪ ಉಪಾಚಾರ್ಯರ

೯. ಪೂಜಾ ಅತಿರುದ್ರಹೋಮ ಮತ್ತು ಶಿವಾದ್ವೈತ


೧೦. ಸಮ್ಮೇಲನ ಕಾರ್ಯಗಳು ಮತ್ತು ಈ ಪೀಠದಲ್ಲಿ ಕಾ[।*]

೧೧. ದಿಂದ ಭಾರತ। ಹು । ಪರ್ಯಂತ ರುದ್ರಾಭಿಷೇಕ ಮ

೧೨. ತ್ತು ಜಪಯಜ್ಞಾದಿ ಕಾರ್ಯಗಳು ನಡೆದಿವೆ.

ಸಾರಾಂಶ


ಈ ಶಾಸನದಲ್ಲಿ ದಿನಾಂಕ ೯.೧೧.೬೧ರಿಂದ೧೬.೨.೬೨ರವರೆಗೆ ಅಷ್ಟಗ್ರಹ ಕೂಟದ ಮಹಾಶಾಂತಿ ಕಾರ್ಯಕ್ರಮ ನಡೆಯಿತೆಂದು ಮತ್ತು **ಶಿವಮೊಗ್ಗ** ಪ್ರಾಂತದ **ಶಿಕಾರೀಪುರ**ದ ಕುಮುದ್ವತಿ ನದಿ ತೀರದಲ್ಲಿ **ಶಾಲಿವಾಹನ ಶಕ** ೧೮೮೧, ವಿಕಾರಿ ಸಂವತ್ಸರ, ಅಂದರೆ ಕ್ರಿ.ಶ. ೧೯೫೯ರಲ್ಲಿ **ಶ್ರೀ ಜಗದ್ಗುರು ಸಿದ್ಧೇಶ್ವರ ಸ್ವಾಮಿ**ಗಳ ಸನ್ನಿಧಾನದಲ್ಲಿ ೬೪ ಉಪಾಚಾರ್ಯರಿಂದ ಅತಿರುದ್ರ ಹೋಮ ಪೂಜಾ ಮತ್ತು




೨೭. ಪಂಚಾಚಾರ್ಯರಿಂದ ದೀಕ್ಷೆ ಪಡೆದ ಗುಂಡಬ್ರಹ್ಮಯ್ಯರ ದಾಖಲೆ.




೨೮. ಶ್ರೀ ಮರುಳಸಿದ್ಧೇಶ್ವರ ದೇವಾಲಯದ ಗಂಟೆ ಶಾಸನ.



೨೯. ಶಾಂತನಹಳ್ಳಿ ಶ್ರೀ ಕೋಡದಪ್ಪನ ಮನೆ ಎದುರಿನ ಶಾಸನ ಫಲಕ ಮತ್ತು ನಂದಿ ಸ್ತಂಭ.



೨೯. ಶಾಂತನಹಳ್ಳಿ
ಶ್ರೀ ಕೋಡದಪ್ಪನ ಮನೆ
ಎದುರಿನ ಶಾಸನ



೩೦. ಉ||ಪ||ಪೀ|| ಮಠದ
ಮುಂದಿನ ಶಾಸನ.



೩೧. ಶ್ರೀ ಮಠದ
ಕಣದಲ್ಲಿರುವ
ಶ್ರೀ ಚನ್ನಬಸವ
ಸ್ವಾಮಿಗಳ ಗದ್ದುಗೆ.



೩೨. ಶ್ರೀಮಠದ
ಕಣದಲ್ಲಿರುವ
ಗದ್ದುಗೆಗಳು.

ಶಿವಾದ್ವೈತ ಪ್ರಮೋಕ್ಷಣದ ಕಾರ್ಯಗಳು ಜರುಗಿದವೆಂದು ಹೇಳಲಾಗಿದೆ. ಶ್ರೀ ಪೀಠದಿಂದ ಭಾರತ ಹುಣ್ಣಿಮೆ ಪರ್ಯಂತ ರುದ್ರಾಭಿಷೇಕ ಮತ್ತು ಜಪಾದಿ ಕಾರ್ಯಗಳು ನಡೆದವು ಎನ್ನಲಾಗಿದೆ.

ನಂ. ೧೯

ಉಜ್ಜಯಿನಿಯ ಶ್ರೀ ಆಂಜನೇಯಸ್ವಾಮಿ ದೇವಾಲಯದ ಮುಂದಿನ ಶಾಸನ ಫಲಕ

ಪಾಠ

೧. ಶ್ರೀ ಆಂಜನೇಯ ಸ್ವಾಮಿ ಉತ್ಸವ ಮೂರ್ತಿ ಸ್ಥಾಪನೆ.

೨. ತಾ. ३.೮.೭೯

೩. ಶನಿವಾರ ಉದಯ

೪. ಶ್ರೀಮದ್ ಉಜ[ನಿ] ೧೦೦೮

೫. ಸಿದ್ಧೇಶ್ವರ ಜಗದ್ಗುರು

೬. ಗಳ ನೇತೃತ್ವದಲ್ಲಿ ನೆರವೇರಿತು

೭. ಉಜ್ಜನಿ ಮಹಾದೈವದವರು

ಸಾರಾಂಶ

ದಿನಾಂಕ ३.೮.೭೯, ಶನಿವಾರ ಬೆಳಗ್ಗೆ **ಶ್ರೀ ಆಂಜನೇಯ ಸ್ವಾಮಿ** ಉತ್ಸವ ಮೂರ್ತಿಯ ಸ್ಥಾಪನೆಯು **ಶ್ರೀಮದ್ ಉಜ್ಜಯಿನಿ ೧೦೦೮ ಸಿದ್ಧೇಶ್ವರ ಜಗದ್ಗುರು**ಗಳ ನೇತೃತ್ವದಲ್ಲಿ ನೆರವೇರಿತೆಂದು ಈ ಶಾಸನದಲ್ಲಿ ಹೇಳಲಾಗಿದೆ. ಈ ಶಾಸನದಲ್ಲಿ **ಉಜ್ಜಯನಿ** ಮಹಾದೈವದವರ ಉಲ್ಲೇಖವೂ ಇದೆ.

ಶಾಸನಗಳ ಸ್ಥೂಲ ಸಾರ

ಒಟ್ಟಾರೆ ಈ ಶಾಸನಗಳಲ್ಲಿ ಉಜ್ಜಯನೀ ಸದ್ಧರ್ಮ ಪೀಠಕ್ಕೆ ಸಂಬಂಧಿಸಿದ ವಿಭಿನ್ನ ವಿಷಯಗಳು ಉಲ್ಲೇಖವಾಗಿರುವುದನ್ನು ಕಾಣಬಹುದು. ಈ ಪ್ರದೇಶದ ಬಾಗಳಿಯ ಕ್ರಿ.ಶ. ೧೦೬೮ ರ ಕಲ್ಲೇಶ್ವರ ದೇವಾಲಯದ ಶಾಸನದಲ್ಲಿ ಶ್ರೀ ರೇವಣಸಿದ್ಧರ ವಿವರ ಕಾಣಿಸಿರುವುದು (ಎಸ್.ಐ.ಐ. ೯, ನಂ. ೧೩೨) ಮಹತ್ವದ ಸಂಗತಿಯಾಗಿದೆ. ಆದರೆ ಉಜ್ಜಯಿನಿಯ ಕ್ರಿ.ಶ. ೧೨೬೮ ರ ಶಾಸನವು ಯಾದವ ಮಹಾದೇವರಾಯನ ಕಾಲದ್ದು. ಆದರಲ್ಲಿ ಸರ್ವಾಧಿಕಾರಿ ತಿಪ್ಪರಸನ ಅಳಿಯ ಚವುಡರಸ ಪಾಂಡ್ಯನಾಡ ಸರ್ವಾಧಿಕಾರಿಯಾಗಿದ್ದನೆಂದು ಆತನ ಪಡಿಕೇಣಿ ಮತ್ತು ಸುಂಕಾಧಿಕಾರಿ ಚೆಗಟೇರ ಸುಂಕದ ಚವುಡರಸ, ಉಜ್ಜೆನಿಯ ಸೇನಬೋವ ಗೋವಿಂದರಸನ ಮಗ ಸುಂಕದ ಭೋಗಯ್ಯ, ಅಳಿಯ ಚವುಡರಸರು ಕಾಣುವರು.

ಹಾಗೂ ಪುರದ ಗುಡುಗಳು ಮತ್ತು ಕಗರ ಗೋಪಯ್ಯರ ಹೆಸರುಗಳಿವೆ. ಹಾಗೂ ಉಜ್ಜನಿ ಮಲ್ಲಿಕಾರ್ಜುನ ದೇವರಿಗೆ ನೀಡಿದ ದಾನದ ವಿಷಯ ಇತ್ಯಾದಿ ಉಲ್ಲೇಖವಾಗಿದೆ. ಈ ಶಾಸನದಲ್ಲಿ ಈ ಧರ್ಮವನ್ನು ಯಾರಾದರೂ ಮೀರಿ ನಡೆದರೆ ಮಹಾಗಣಂಗಳ ಕಾರ್ಯ ನಡೆಸುವರೆಂದು ಉಲ್ಲೇಖಿಸಿರುವುದು ವೀರಶೈವ ಅಧ್ಯಯನಕ್ಕೆ ಮಹತ್ವದ್ದೆನಿಸಿದೆ. ಅಲ್ಲಿಯ ಸು.ಕ್ರಿ.ಶ. ೧೩ನೇ ಶತಮಾನದ ಮತ್ತೊಂದು ಶಾಸನದಲ್ಲಿ ಜಗದ್ದಳ ಪಾಂಡ್ಯದೇವನ ಪ್ರಶಸ್ತಿಯಿದೆ.

ಮರುಳಸಿದ್ಧರ ಉಲ್ಲೇಖ ಕ್ರಿ.ಶ. ೧೧೯೩ರ ಅವ್ವೆಯರ ಹಳ್ಳಿಯ ಶಾಸನದಲ್ಲಿ ಉಲ್ಲೇಖವಾಗಿದೆ. ಈತನು ಪವಾಡಮೆರೆದ ಮರಳುಸಿದ್ಧನೆಂದು ನಿರೂಪಿಸಲಾಗಿದೆ.

ಕುರುವತ್ತಿಯ ಶಾಸನದಲ್ಲಿ ಉಜ್ಜಯಿನಿ ಪುರವರಾಧೀಶ್ವರರೆಂಬ....ಪ್ರಶಸ್ತಿ ಇದ್ದು ಅದು ಉತ್ತರಭಾರತದಲ್ಲಿ ಆಳುತ್ತಿದ್ದ ಗುಪ್ತ ಮನೆತಕ್ಕೆ ಸೇರಿದ ಗುತ್ತವೊಳಲಿನ ಗುತ್ತರದ್ದಾಗಿದೆ. ಕ್ರಿ.ಶ. ೧೩೧೫ ರ ಮಂಡ್ಯ ಜಿಲ್ಲೆಯ ಮರಡಿಪುರದ ಶಾಸನದಲ್ಲಿ ದಾರುಕ ಮುಂತಾದವರ ಹೆಸರುಗಳು ಕಾಣುತ್ತವೆ.

ತದನಂತರ ವಿಜಯನಗರ ಕಾಲದ ಎರಡು ಶಾಸನಗಳಿವೆ. ಒಂದು ಕ್ರಿ.ಶ. ೧೫೪೪ ರ ಅಚ್ಯುತ ದೇವರಾಯನದ್ದು ಇನ್ನೊಂದು ಕ್ರಿ.ಶ. ೧೫೬೩ ರ ವೀರಸದಾಶಿವರಾಯನ ಕಾಲದ್ದಾಗಿದೆ. ಎರಡನೇ ಶಾಸನದಲ್ಲಿ ಸದಾಶಿವರಾಯನ ಆಳ್ವಿಕೆಯ ಕಾಲದಲ್ಲಿ ಹಡಪದ ಬಯ್ಯಪನಾಯಕನ ಮಗ ಕೃಷ್ಣಪ್ಪನಾಯಕನು ಕೋಗಳಿ ನಾಡನ್ನು ಆಳುವಾಗ ಆ ನಾಡಿನಲ್ಲಿ ಕೊಟ್ಟೂರು ಸೀಮೆಯ ಒಳಗಿನ ಉಜ್ಜೆನಿಯ ಮಲ್ಲಿಕಾರ್ಜುನ ದೇವರಿಗೆ ಭೂ ದತ್ತಿ ನೀಡಿದ ವಿವರಗಳಿವೆ. ಇದಲ್ಲದೆ ಗವೆಲೂರ ಕಾಳಯ ನಾಯಕನ ಮಗ ಮಾರ್ಗಸಹಾಯನಾಯಕ ಆ ದೇವರ ಮೂರನೆಯ ಜಾವದ ಅಮೃತಪಡಿ ನೈವೇದ್ಯಕ್ಕೆ ತ್ರಿವಾಚವೂ ಸಮರ್ಪಿಸಿದರೆಂದು ತಿಳಿಯುವುದು. ಹಾಗೂ ಹಾಳಾದ ನಾಗೇನಹಳ್ಳಿಯನ್ನು ಜೀರ್ಣೋದ್ಧಾರಗೊಳಿಸಲಾಯಿತೆಂದು ಹೇಳಲಾಗಿದೆ.

ಲಕ್ಷ್ಮೇಶ್ವರದ ಕ್ರಿ.ಶ. ೧೫೮೩ ರ ಶಾಸನದಲ್ಲಿ ದಾರುಕರ ಕಥೆ, ರೇವಣಸಿದ್ಧರ ಅವತಾರ ಹಾಗೂ ಶ್ರೀ ಮರುಳಸಿದ್ಧರ ಲಿಂಗಾವತಾರ ಮುಂತಾದ ವಿಷಯಗಳು ಉಲ್ಲೇಖವಾಗಿವೆ.

ಹರಪನಹಳ್ಳಿ ತಾಲೂಕಿನ ಕಸವನಹಳ್ಳಿಯ ಕ್ರಿ.ಶ. ೧೬೬೦ ರ ಶಾಸನದಲ್ಲಿ ವೆಂಕಟಪತಿ ಮಹಾದೇವರಾಯನ ಮಗ ಬಾಗುಳಿ ಬಸವಪ್ಪ ನಾಯಕರು ಕಸವನಹಳ್ಳಿ ದೇವರಿಗೆ ದತ್ತಿ ನೀಡಿದ ವಿವರವಿದೆ. ಹಾಗೂ ಆ ಪುರದ ಅರಮನೆ ಹಾಳಾಗಿದ್ದನ್ನು ಗಿರಿಮಲ್ಲಪ್ಪಣ್ಣನ ಮಗ ಬಸವಯ್ಯನು **ಉಜ್ಜನಿ ಸಿಂಹಾಸನ ಶಿಷ್ಯ** ಯೆಳೆಯ ಬಯ್ಯ ಗ್ರಾಮವನ್ನು ಜೀರ್ಣೋದ್ಧಾರ ಮಾಡಿದನೆಂದಿದೆ. ಇದಕ್ಕಾಗಿ ವಕುಳದ

ಎರೆಭೂಮಿಯನ್ನು ಗುರುಸ್ವಾಮಿ, ಮಳೆಸ್ವಾಮಿ ಪಟ್ಟದೈಯ್ಯಗಳು ಬಾಗಳಿ ಅರಸನ ಮೊಮ್ಮಗ ಸಾಂತರಾವುತನ ಮಗ ಗಿರಿಮಲ್ಲಪ್ಪ, ಆತನ ಮಗ ಬಸವಯ್ಯನ ಮಗ ತಿರುಕಪ್ಪನಿಗೆ ಪುತ್ರ-ಪೌತ್ರ ಪಾರಂಪರೆಯಾಗಿ ಆ ಚಂದ್ರಾರ್ಕವಾಗಿ ಶಾಸನವನ್ನು ಕೊಡಲಾಯಿತೆಂದು ಹೇಳಲಾಗಿದೆ. ಈ ಶಾಸನದ ಶಾಪಾಶಯ ತುಂಬಾ ಕೆಟ್ಟದಾಗಿದೆ.

ಕೋಗಳಿಯ ಕ್ರಿ.ಶ. ೧೪೫೩ರ ಶಾಸನದಲ್ಲಿ ವೀರಭದ್ರ ದೇವರನು ಉಜ್ಜಯಿನಿಯ ವಿರುಪಯ್ಯನೆಂದು ಹೇಳಿರುವುದು ಗಮನೀಯ.

ಉಜ್ಜಯಿನಿಯ ದಿನಾಂಕ ೨೭-೭-೧೭೧೨ ರ ಗಂಟೆ ಶಾಸನದಲ್ಲಿ ಬಾಗಳಿ ಬಸವಂತರಾಯ, ಮುದ್ದೆ ಬಸವಂತರಾಯರ ಕುಮಾರ, ಮುಮ್ಮಡಿ ಈಶ್ವರಪ್ಪ ನಾಯಕ, ವುಜ್ಜೆನಿ ಸಿದ್ದೇಶ್ವರ ದೇವರಿಗೆ ಗಂಟೆಯನ್ನು ಸಮರ್ಪಿಸಿದರೆಂದು ಹೇಳಲಾಗಿದೆ. ಅಲ್ಲಿಯ ಸು.ಕ್ರಿ.ಶ. ೧೮ನೇ ಶತಮಾನದ ಕೊನೆಯ ಭಾಗದ ಇನ್ನೊಂದು ಗಂಟೆ ಶಾಸನದಲ್ಲಿ ಉಜ್ಜೆನಿ ಸಿದ್ದೇಶ್ವರ ದೇವರಿಗೆ (ಉ॥ಸಿ॥ದೇ॥) ಹರಿಹರದ ಭಿಕ್ಷಾವರ್ತಿ ಮಠದ ನಂಜುಂಡೇರಾಯನ ಭಕ್ತಿ ಎಂದಿದೆ.

ಉಜ್ಜಯಿನಿಯ ಇನ್ನಿತರ ಶಾಸನಗಳು ಸುಮಾರು ಕ್ರಿ.ಶ. ೧೮ ರಿಂದ ೨೦ನೇ ಶತಮಾನಕ್ಕೆ ಸೇರಿವೆ. ಒಟ್ಟಾರೆ ಈ ಶಾಸನಗಳಲ್ಲಿ ಕಸವನಹಳ್ಳಿಯ ಕ್ರಿ.ಶ. ೧೬೬೦ ರ ಶಾಸನದಲ್ಲಿ ಮಾತ್ರ ಉಜ್ಜಯಿನಿಯ ಸಿಂಹಾಸನ ಎಂದು ಪ್ರಾಚೀನವಾಗಿ ಉಲ್ಲೇಖವಾಗಿರುವುದು ಗಮನೀಯ.

ಶ್ರೀಪೀಠದ ಜಗದ್ಗುರುಗಳ ಪಟ್ಟವಲ್ಲರಿ

ಯುಗ ಯುಗಾಂತಗಳ ಚರಿತ್ರೆಯಿದೆ ಎಂದು ಹೇಳುವ ಪಂಚಪೀಠಗಳಲ್ಲಿ ಉಜ್ಜಯಿನಿ ಪೀಠದ ಶ್ರೀ ಮರುಳಾರಾಧ್ಯರು ಕೃತಯುಗದಲ್ಲಿ ದ್ವ್ಯಕ್ಷರ ಶಿವಾಚಾರ್ಯರಾಗಿ, ತ್ರೇತಾಯುಗದಲ್ಲಿ ದ್ವಿವಕ್ತ್ರ ಶಿವಾಚಾರ್ಯರಾಗಿ, ದ್ವಾಪರಯುಗದಲ್ಲಿ ಶ್ರೀದಾರುಕ ಶಿವಾಚಾರ್ಯರಾಗಿ ಮತ್ತು ಕಲಿಯುಗದಲ್ಲಿ ಶ್ರೀ ಮರುಳಾರಾಧ್ಯ ಶಿವಾಚಾರ್ಯರಾಗಿ ಅವತರಿಸಿದರು.[೧] ಶ್ರೀ ಉಜ್ಜಯಿನಿ ಪೀಠದ ಜಗದ್ಗುರುಗಳಿಗೆ ಇನ್ನಿತರ ಪೀಠಗಳಂತೆ ತಮ್ಮದೇ ಆದ ದಂಡ, ಧ್ವಜ, ಮಂತ್ರ, ಸೂತ್ರ ಮತ್ತು ಗೋತ್ರಗಳಿವೆ. ಈ ಪೀಠದ ಜಗದ್ಗುರುಗಳ ಕೈಯಲ್ಲಿ ಪಲಾಶದಂಡ, ತಾಮ್ರವರ್ಣದ ಕಮಂಡಲು ಮತ್ತು ಕೆಂಪುವರ್ಣದ ಧ್ವಜವಿರುತ್ತದೆ. ಅವುಗಳನ್ನು ಹಿಡಿದು ಜಗದ್ಗುರುಗಳು ದೇಶಸಂಚಾರ ಮಾಡುತ್ತಾರೆ. ಕೆಂಪು ವರ್ಣ ತ್ಯಾಗದ ಪ್ರತೀಕ. ಇವರ ಮಂತ್ರ ಪಂಚಾಕ್ಷರವಿದ್ದು ಅದರ **ಮ**ಕಾರ ಬೀಜಮಂತ್ರ. ಇವರು ವೃಷ್ಟಿಸೂತ್ರದ ಅಧಿಪತಿಗಳು. ಈ ಪೀಠದ ಗೋತ್ರ ಪುರುಷ ನಂದಿ.[೨]

ಉಜ್ಜಯಿನಿ ಪೀಠಕ್ಕೆ ಚರ, ಸ್ಥಿರ ಮತ್ತು ಸಂಚಾರವೆಂಬ ಮೂರು ರೀತಿಯ ಪಟ್ಟಗಳಿವೆ. ಈ ಪೀಠದ ಅನೇಕ ಪೂರ್ವಾಚಾರ್ಯರ ಪಟ್ಟದ ವಿಷಯಗಳು ಸ್ಪಷ್ಟವಿಲ್ಲ. ಶ್ರೀ ಪೀಠದ ಮುಪ್ಪಿನ ಶ್ರೀಜಗದ್ಗುರು ಚನ್ನಬಸವರಾಜ ದೇಶಿಕೇಂದ್ರ ಮಹಾಸ್ವಾಮಿಗಳ ಕಾಲದಿಂದ ಪಟ್ಟಾಧ್ಯಕ್ಷರ ನೇಮಕದ ಹೆಚ್ಚಿನ ವಿಷಯಗಳು ತಿಳಿದು ಬರುತ್ತವೆ.

ದಾರುಕಾಚಾರ್ಯರು *(ಚಿತ್ರ.ನಂ.೨)*

ಉಜ್ಜಯಿನಿ ಪೀಠದ ಜಗದ್ಗುರುಗಳ ಪಟ್ಟವಲ್ಲರಿ ಅಥವಾ ಗುರುವರ್ಗದರ್ಪಣ ಅಥವಾ ವಂಶಾನುಚರಿತೆಯನ್ನು ದ್ವಾಪರ ಯುಗದಲ್ಲಿ ಅವತರಿಸಿದ ದಾರುಕಾಚಾರ್ಯರಿಂದ ಆರಂಭಿಸಲಾಗಿದೆ. ಏಕೆಂದರೆ ದಾರುಕರ ಪೂರ್ವದಲ್ಲಿದ್ದ ಕೃತಯುಗದ ದ್ವ್ಯಕ್ಷರ ಶಿವಾಚಾರ್ಯರ ಮತ್ತು ತ್ರೇತಾಯುಗದ ಶ್ರೀ ದ್ವಿವಕ್ತ್ರ ಶಿವಾಚಾರ್ಯರ ಕಾಲಘಟ್ಟದ ಮಾಹಿತಿಗಳು ತಿಳಿದು ಬಂದಿಲ್ಲ. ಉಜ್ಜಯಿನಿ ಪೀಠಕ್ಕೆ ಸಂಬಂಧಿಸಿದವರೆಲ್ಲ ದಾರುಕ ಶಾಖೆಗೆ ಸೇರಿದವರೆಂಬ ಸಂಪ್ರದಾಯವಿದೆ. ಶ್ರೀ ಪೀಠದಲ್ಲಿ ದಾರುಕರ ಜಯಂತಿಯು ಪ್ರತಿವರ್ಷ

ಜರುಗುತ್ತದೆ. ಪಾಶುಪತತಂತ್ರ ಇತ್ಯಾದಿ ಕೃತಿಗಳಲ್ಲಿ ದಧೀಚಿ, ಅಗಸ್ತ್ಯ, ಗೌತಮ, ದುರ್ವಾಸ ಮುಂತಾದವರಿಗೆ ದಾರುಕರಿಂದ ಲಿಂಗಧಾರಣೆಯ ಅನುಗ್ರಹ ವಾಯಿತೆನ್ನಲಾಗಿದೆ.

ದಾರುಕರ ಹೆಸರು ಶಿವಮಹಾಪುರಾಣದ ಒಂಬತ್ತನೇ ಅಧ್ಯಾಯದಲ್ಲಿ ಬರುವ ಇಪ್ಪತ್ತೆಂಟು ಯೋಗಾಚಾರ್ಯರ ಪಟ್ಟಿಯಲ್ಲಿದೆ.[೨] ಪೂಜ್ಯ ದಾರುಕರು ನೈಮಿಷಾರಣ್ಯದಲ್ಲಿ ವಾಸಮಾಡುತ್ತಿದ್ದ 'ದಧೀಚಿ' ಮಹಾಋಷಿಗೆ ಶಿವಾದ್ವೈತ ಸಿದ್ಧಾಂತವನ್ನು ಬೋಧಿಸಿ ಆತನನ್ನು ಮತ್ತು ಆತನ ಶಿಷ್ಯರನ್ನು ಸಂತೃಪ್ತರನ್ನಾಗಿಸಿದರು. ದಧೀಚಿ ಮಹಾಋಷಿ ಅಸಾಮಾನ್ಯನು. ಆತನು ಗುರುವಿನ ಸಂತೋಷಕ್ಕಾಗಿ ತನ್ನ ದೇಹವನ್ನೇ ಬಲಿಕೊಟ್ಟ ಮಹಾತ್ಯಾಗಿ. ಒಮ್ಮೆ ದೇವತೆಗಳು ಅಸುರರ ದಾಳಿಗೆ ಸಿಕ್ಕು ತತ್ತರಿಸುತ್ತಿದ್ದರು. ಆಗ ಆ ದೇವತೆಗಳು ದಧೀಚಿ ಮಹರ್ಷಿಯ ಬಳಿ ಬಂದು ಅಸುರರನ್ನು ಸಂಹರಿಸಲು ಬೇಕಾದ ಆಯುಧಗಳ ನಿರ್ಮಾಣಕ್ಕಾಗಿ ಆತನ ಬೆನ್ನ ಮೂಳೆಯನ್ನು ಕೊಡಲು ಕೇಳಿದರು. ಅದಕ್ಕೆ ತನ್ನ ಬೆನ್ನ ಮೂಳೆಯನ್ನೇ ತ್ಯಾಗ ಮಾಡಿ ದೇವಲೋಕವನ್ನು ಬದುಕಿಸಲು ಕಾರಣೀಭೂತನಾದನು.[೪]

ದಾರುಕಾಚಾರ್ಯರ ಅಷ್ಟೋತ್ತರ ಶತನಾಮಾವಳಿ (೧೦೮) ಮತ್ತು ಪಂಚಕಂಗಳಿದ್ದು ಇವುಗಳನ್ನು ವೀರಶೈವರು ತಮ್ಮ ಮಂಗಲ ಕಾರ್ಯದಲ್ಲಿ ಪಠಿಸುವರು[೫] ಅವು ಹೀಗಿವೆ :-

ಅಕ್ಷರಾಯನಮಃ
ಆಗಮವೇದ್ಯಾಯನಮಃ
ಇಷ್ಟಲಿಂಗಯುತಾಯನಮಃ
ಈಶಾತ್ಮಜಾಯನಮಃ
ಉಜ್ಜಯನೀಪುರೀಶಾಯನಮಃ
ಊರ್ಧ್ವರೇತಸೇನಮಃ
ಏಕಾದಶ ಜಟಾಮಕುಟಮಂಡಿತಾಯನಮಃ
ಋತ್ವಿಜೇನಮಃ
ಐಶ್ವರ್ಯದಾಯನಮಃ
ಓಂಕಾರ ರೂಪಾಯನಮಃ ॥೧೦॥
ಔದಾರ್ಯಾದಿಗುಣಾಲಂಕೃತಾಯ ನಮಃ
ಅಂತರ್ಲಿಂಗಪರಾಯನಮಃ
ಕಲ್ಯಾಣದಾಯನಮಃ
ಕಾಲಕಾಲಾಯನಮಃ

ಖವರ್ಗಗಮ್ಯಾಯನಮಃ
ಗಣನಾಯಕಾಯನಮಃ
ಗಾಯತ್ರೀ ಜಾಪಕಾಯನಮಃ
ಗಿರೀಶಾಯನಮಃ
ಗೀತಾರ್ಥವಾದಿನೇನಮಃ
ಗುರುವರ್ಯಾಯನಮಃ ॥೨೦॥
ಧರ್ಮಪೀಠಸ್ಥಾಪಕಾಯನಮಃ
ಧೀರಧ್ಯೇಯಾಯನಮಃ
ಧೀವರ್ಧಕಾಯನಮಃ
ಧೂಮ್ರಕೇಶಾಯನಮಃ
ನಗಮಂದಿರಾಯನಮಃ
ನಂದಿಗೋತ್ರಾಧಿನಾಥಾಯನಮಃ
ನಾಕಿನುತ್ಯಾಯನಮಃ
ನಿರಾಭಾರಿಸಂಘಸೇವಿತಾಯನಮಃ
ನುತಿಮೋದಾಯನಮಃ
ಪಲಾಶದಂಡಾಯನಮಃ ॥೩೦॥
ಗೂಢತತ್ವವೇದಿನೇನಮಃ
ಚಕ್ರವೃಂದಗತತತ್ವದರ್ಶಕಾಯನಮಃ
ಘನಲಿಂಗಾತ್ಮನೇನಮಃ
ಚಾರ್ವಾಕಮತಮರ್ದನಾಯನಮಃ
ಛವಿಮಯಾಯನಮಃ
ಜಗದ್ಗುರುವೇನಮಃ
ಝುಷಕೇತುನಾಶಾಯನಮಃ
ತಪೋಲೋಲಾಯನಮಃ
ತಾಮ್ರಕಮಂಡಲುಧರಾಯನಮಃ
ಧರ್ಮಭೂಷಣಾಯನಮಃ ॥೪೦॥
ದಕ್ಷಿಣ ಕಲಶಾಧಿಪಾಯನಮಃ
ದಾರುಕಾಚಾರ್ಯಾಯನಮಃ
ದಾರಿದ್ರ್ಯದಹನಾಯನಮಃ
ದೀನಬಂಧುವೇನಮಃ
ದೀಕ್ಷಾಗುರವೇನಮಃ

ದುಷ್ಟನಿಗ್ರಹಾಯನಮಃ
ದೂರೀಕೃತಮಲತ್ರಯಾಯನಮಃ
ದೇವದೇವಾಯನಮಃ
ದೈವಾಸ್ಪೃಷ್ಟಾಯನಮಃ
ದ್ವ್ಯಕ್ಷರಾಚಾರ್ಯಾಯನಮಃ ॥೫೦॥
ದ್ವಿಮುಖಾಯನಮಃ
ಭೂತದಯಾಯನಮಃ
ಭೃಂಗಿ ಪ್ರಮುಖಪೂಜಿತಾಯನಮಃ
ಭೈರವಲೀಲಾಯನಮಃ
ಭೋಗದಾಯಕಾಯನಮಃ
ಮರುಲಸಿದ್ಧಾಯನಮಃ
ಮರಣದೂರಾಯನಮಃ
ಮಾಯಾ ವಿದೂರಾಯನಮಃ
ಮಾಯಾಪಂಚಾಕ್ಷರೀಜಾಪಕಾಯನಮಃ
ಮೋಕ್ಷಗುರುವೇನಮಃ ॥೬೦॥
ಮುಮುಕ್ಷುಕಲ್ಪವೃಕ್ಷಾಯನಮಃ
ಮಂತ್ರಸ್ವರೂಪಾಯನಮಃ
ಪಂಚಮುದ್ರಾನ್ವಿತಾಯನಮಃ
ಪಾಪಾದ್ರಿವಜ್ರಾಯನಮಃ
ಫಣಿಭೂಷಿತಾಂಗಾಯನಮಃ
ಫಾಲನೇತ್ರಾಯನಮಃ
ಬಹುರೂಪಧರಾಯನಮಃ
ಬಾಲ್ಯಶಾಲಿನೇನಮಃ
ಭಕ್ತಪ್ರಿಯಾಯನಮಃ
ಭವಭೂಜಕುಠಾರಾಯನಮಃ ॥೭೦॥
ಭಸ್ಮೋದ್ಧೂಳಿತದೇಹಾಯನಮಃ
ಭಾಷ್ಯಕರ್ತೇನಮಃ
ಭೀತಿಹರಾಯನಮಃ
ಭುವನೈಕ ಪೂಜ್ಯಾಯನಮಃ
ವಿಷಯ ವಿದೂರಾಯನಮಃ
ವಿಜಯೋತ್ಸವಾಯನಮಃ

ವೀರಶೈವ ಧರ್ಮಸ್ಥಾಪಕಾಯನಮಃ
ವೇದಾಂತವೇದ್ಯಾಯನಮಃ
ವೈರಾಗ್ಯಶಾಲಿನೇನಮಃ
ಶಂಭುರೂಪಾಯನಮಃ ॥೮೦॥
ಶಾಖಾಧಿನಾಥಾಯನಮಃ
ಶಿಷ್ಯೋದ್ಧಾರಕಾಯನಮಃ
ಶಿವಲಾಂಛನಲಾಂಛಿತಾಯನಮಃ
ಷಟ್‌ಸ್ಥಲಜ್ಞಾನೋಪದೇಶಕಾಯನಮಃ
ಶಿವ ವಿಗ್ರಹಾಯನಮಃ
ಶಿಖಾಯಜ್ಞೋಪವೀತನೇ ನಮಃ
ಮೌಕ್ತಿಕಮಂಟಪ ಮಂಡನಾಯ ನಮಃ
ಯತಿತತಿಸ್ತುತ್ಯಾಯನಮಃ
ಯೋಗಲೋಲಾಯನಮಃ
ರಕ್ತವರ್ಣಾಯನಮಃ ॥೯೦॥
ರಕ್ತಕಂಥಾಯ ನಮಃ
ರಾಜರಾಜಪೂಜಿತಾಯನಮಃ
ರುದ್ರಾಕ್ಷಮಾಲಾಭರಣಾಯನಮಃ
ಲಯಕರಾಯನಮಃ
ವಟಕ್ಷೇತ್ರವಾಸಾಯನಮಃ
ವಾಮದೇವಮುಖೋದ್ಭವಾಯನಮಃ
ವಿಷ್ಣು ಸೇವ್ಯಾಯನಮಃ
ಷಡಧ್ವತತ್ವಾರ್ಥವಾದಿನೇನಮಃ
ಷಟ್ಸಹಸ್ರಚರಲಿಂಗಾಧಿಪತಯೇನಮಃ
ಶಿಕ್ಷಾಗುರುವೇ ನಮಃ ॥೧೦೦॥
ಸಚ್ಚಿದಾನಂದರೂಪಾಯನಮಃ
ಸರ್ವತಂತ್ರಸ್ವತಂತ್ರಾಯನಮಃ
ಸಾಂಗಶ್ರುತಿಬೋಧಕಾಯನಮಃ
ಸಿಂಹಾಸನಾಧೀಶಾಯನಮಃ
ಸಿದ್ಧೇಶ್ವರಸಂಭೂತಾಯನಮಃ
ಹಂಸಮಯಾಯನಮಃ
ಕ್ಷಮಾರ್ಣವಾಯನಮಃ
ಜ್ಞಾನದಾತ್ರೇನಮಃ ॥೧೦೮॥

ಶ್ರೀ ಜಗದ್ಗುರು ದಾರುಕೇಶ್ವರ ಪಂಚಕಂ:

ಯಂ ವೀರಶೈವನಿಕರೋ ಗುರುಮಿತ್ಯವೈತಿ ।
ಯಂ ಲಿಂಗರೂಪಮಿತಿ ವೇದವಿದೋ ವದಂತಿ ॥
ಯಂ ಜಂಗಮಾರ್ಯಮಿತಿ ಶಾಸ್ತ್ರಗಿರೋ ಗಿರಂತಿ ॥
ತಂ ದಾರುಕೇಶ್ವರಗುರುಂ ಶರಣಂ ಪ್ರಪದ್ಯೇ ॥೧॥
ಯತ್ಪಾದಪಂಕಜಜಲಂ ಪರಮಂ ಪವಿತ್ರಂ ।
ಹೃತ್ತಾಪಹಾರಿ ಸತತಂ ಪರಿಪೀಯ ಭೂಪಾಃ ॥
ಸತ್ಪಾತ್ರತಾಂ ಯಯುರರಂ ಹರತುಲ್ಯಕಾಯಂ ।
ತಂ ದಾರುಕೇಶ್ವರ ಗುರುಂ ಶರಣಂ ಪ್ರಪದ್ಯೇ ॥೨॥
ಯಸ್ಯ ಪ್ರಸಾದಮತುಲಂ ಮುನಿಭಿಃ ಸುಸೇವ್ಯಂ ।
ಬ್ರಹ್ಮಸ್ವಭೂಮುಖ್ಯಸುರೌಘಮಾನ್ಯಂ ॥
ಸಂಸೇವ್ಯ ಭೂತಲನರಾಃ ಸುರತಾಮವಾಪುಃ ।
ತಂ ದಾರುಕೇಶ್ವರಗುರುಂ ಶರಮಂ ಪ್ರಪದ್ಯೇ ॥೩॥
ಯೋ ಭೂತಿಭೂಷಿತತನುಸ್ತನುವಿಗ್ರಹೋ ಯೋ ।
ಯೋ ಭೂತಿದಃ ಶ್ರಿತನರಾಂ ಭವಬಾಧಿತಾನಾಂ ॥
ಯೋ ಭೂತಿಭವ್ಯಭವನೋ ಭವಭಕ್ತಿಭಾಸೀ ।
ತಂ ದಾರುಕೇಶ್ವರಗುರುಂ ಶರಣಂ ಪ್ರಪದ್ಯೇ ॥೪॥
ರುದ್ರಾಕ್ಷಕಾಶಿತಕರೋ ಹಿತಕಾರಕೋ ಯೋ ।
ರುದ್ರಾಕ್ಷಸಂಚಯಧರೋ ಭವತಾರಕೋ ಯೋ ॥
ಯೋ ಮಂತ್ರಮಂಡಿತಮುಖೋ ಮೃತಿಹಾರಕೋ ಯಃ ।
ತಂ ದಾರುಕೇಶ್ವರಗುರುಂ ಶರಣಂ ಪ್ರಪದ್ಯೇ ॥೫॥
ಅಷ್ಟಾವರಣರೂಪಸ್ಯ ಗುರೋಃ ಸ್ತೋತ್ರಂ ಮಹತ್ತರಂ ।
ಯಃ ಪಠೇದ್ಭಕ್ತಿತೋ ನಿತ್ಯಂ ಸ ಯಾತಿ ಪರಮಂ ಪದಂ ॥

ಶ್ರೀ ಉಜ್ಜಯಿನಿ ಸದ್ಧರ್ಮಪೀಠದ ಗುರುಪರಂಪರೆ ಅಥವಾ ಪಟ್ಟವಲ್ಲರಿ ಕುರಿತ ವಿವರಗಳು ವಿವಿಧ ಕೃತಿ ಮತ್ತು ಪತ್ರಿಕೆಗಳಲ್ಲಿ ಉಲ್ಲೇಖವಾಗಿವೆ. ಅವುಗಳಲ್ಲಿ ಶ್ರೀ ಜಗದ್ಗುರು ಪಂಚಪೀಠಗಳ ಪರಿಚಯದ ಗುರುವರ್ಗ ದರ್ಪಣ[೬] (೧ನೇ ಭಾಗ), 'ಸದ್ಧರ್ಮಪ್ರಭಾ' ಪತ್ರಿಕೆ[೭] ಮತ್ತು 'ಶ್ರೀ ಜಗದ್ಗುರು ಪಂಚ ಪೀಠಾಧೀಶ್ವರರು'[೮] ಕೃತಿಗಳು ಮುಖ್ಯವಾಗಿವೆ.[೧೪] ಉಜ್ಜಯಿನಿ ಸದ್ಧರ್ಮ ಪೀಠದಲ್ಲಿ ಇಂದಿನವರೂ ಸೇರಿ ಒಟ್ಟು ೧೧೧ ಜಗದ್ಗುರುಗಳ ಪಟ್ಟಿಯನ್ನು ಈ ಕೃತಿಗಳು ಅನುಮೋದಿಸುತ್ತವೆ. ಈ ಪಟ್ಟಿಯಲ್ಲಿ ಇನ್ನೂ ಅನೇಕ ಜಗದ್ಗುರುಗಳ ವಿವರಗಳಿಲ್ಲ. ಸ್ಥಳೀಯರು ಹೇಳುವ

ಅನೇಕ ಜಗದ್ಗುರುಗಳ ಹೆಸರುಗಳು ಮತ್ತು ಅವರ ಕಾರ್ಯ ಸಾಧನೆಗಳು ಹಾಗೂ ಶ್ರೀಪೀಠದ ಅನೇಕ ಪೂರ್ವಾಚಾರ್ಯರ ಗದ್ದುಗೆಗಳ ಹೆಸರುಗಳನ್ನು ಒಳಗೊಂಡ ಅಧ್ಯಯನ ಒಂದೆಡೆ ಕಾಣುವುದಿಲ್ಲ.

ಶ್ರೀ ಮರುಳಸಿದ್ಧರ ನಂತರ ಅನೇಕ ಜಗದ್ಗುರುಗಳು ಉಜ್ಜಯನಿ ಸದ್ಧರ್ಮ ಪೀಠವನ್ನು ಅಲಂಕರಿಸಿದರು. ಕೆಳದಿ ಬಸವಭೂಪನ (ಕ್ರಿ.ಶ. ೧೬೯೭ ರಿಂದ೧೭೧೫) ಶಿವತತ್ವ ರತ್ನಾಕರದಲ್ಲಿ ಉಜ್ಜಯಿನಿಯ ಮರುಳಸಿದ್ಧರ ಪರಂಪರೆಯಲ್ಲಿ ತನ್ನ ಕಾಲದಲ್ಲಿ ಬದುಕಿದ್ದವರ್ ಹೆಸರುಗಳನ್ನು ಹೀಗೆ ಉಲ್ಲೇಖಿಸಲಾಗಿದೆ.

ಆಸೀಮಮುಂಜ್ಜೆಯಿನಿ ಪತಿರ್ಮ ರುಳ ಸಿದ್ಧೇಶೋ ಗುರುಃ।
ಪ್ರಸ್ಫುರತ್ತದ್ದೇಶೋದ ವಸಂತದೇವ ಮಹಿತಃ ಶ್ರೀಮಲ್ಲಿಕಾರ್ಜುನೌ।
ವಿಲಸನ್ನ ಪರಸ್ತತಾ ಗುರುಪದ ಸ್ವಾಮಿ ವಸಂತಸ್ಸತಃ।
ತಸ್ಮಾನ್ನುನ್ನತ ಚನ್ನವೀರ ವಿಭುರಿತ್ಯಾಖ್ಯಪರಂಪರಿ ॥೨॥

ಈ ಶ್ಲೋಕದಲ್ಲಿ ಗುರುವಂಶದವರು ಹೀಗೆ ಕಾಣುವರು.

೧. ಮರುಳಸಿದ್ಧೇಶ
೨. ವಸಂತದೇವ
೩. ಮಲ್ಲಿಕಾರ್ಜುನ
೪. ಚೆನ್ನವೀರ ದೇವ
೫. ಗುರುಪಾದ ಸ್ವಾಮಿ
೬. ವಸಂತದೇವ
೭. ಚನ್ನವೀರದೇವ

ಈ ಎಲ್ಲಾ ಮಾಹಿತಿಗಳನ್ನು ಇಲ್ಲಿ ಗಣನೆಗೆ ತೆಗೆದುಕೊಂಡು ಶ್ರೀಪೀಠದ ಪಟ್ಟವಲ್ಲರಿ ಅಥವಾ ಗುರುಪರಂಪರೆಯನ್ನು ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ.

ಮರುಳಾರಾಧ್ಯರು

ಶ್ರೀ ಜಗದ್ಗುರು ಮರುಳಾರಾಧ್ಯರು ಅಘನಾಶಿ ಎಂದೆನಿಸಿದ ಕ್ಷಿಪ್ರಾ ನದಿಯ ದಂಡೆಯ ಮೇಲಿರುವ ಮಹಾಕಾಲ ಉಜ್ಜಯಿನಿಯ ವಟ ಪುಣ್ಯಕ್ಷೇತ್ರದ ಸಿದ್ಧೇಶ್ವರ ಲಿಂಗದಿಂದ ಕಲಿಯುಗದಲ್ಲಿ ಉದಯಿಸಿದರು.

ತದನ್ಮರುಳಸಿದ್ಧಸ್ಯ ವಟಕ್ಷೇತ್ರೇ ಮಹತ್ತರೇ।
ಸಿದ್ಧೇಶಲಿಂಗಾಜ್ಜನನಂ ಸ್ಥಾನಮುಜ್ಜಯಿನೀಪುರೇ॥

ಅವರನ್ನು ಮರುಲಾರಾಧ್ಯರೆಂದು ಕರೆಯುವವರು. ಅಲ್ಲಿಯೇ ಅವರು ಸದ್ಧರ್ಮ ಪೀಠವನ್ನು ಸ್ಥಾಪಿಸಿದರು.

ಉಜ್ಜಯಿನಿಯ ಅರಸು ಶ್ರೌತಪಾಲ ಮತ್ತು ಆತನ ರಾಣಿ ಶ್ರೀಮತಿ ಭಾನುಮತಿ ಅವರಿಗೆ ಮರುಳಸಿದ್ಧರು ಶಿವದೀಕ್ಷೆಯನ್ನು ನೀಡಿದರು. ವೀರಶೈವಧರ್ಮದ

ಪ್ರಮುಖ ತತ್ವಗಳಾದ ಅಷ್ಟಾವರಣ, ಪಂಚಾಚಾರ ಮತ್ತು ಷಟ್‌ಸ್ಥಲ ಸಿದ್ಧಾಂತಗಳನ್ನು ಅವರಿಗೆ ಬೋಧಿಸಿದರು. ದೇಶಸಂಚಾರದಲ್ಲೂ ಈ ತತ್ವಗಳನ್ನು ಸಾರಿದರು. ಗಂಗಾ-ಯಮುನಾ ನದಿಗಳ ಮಧ್ಯದಲ್ಲಿರುವ ದಾರುಕವನಕ್ಕೆ ದಯಮಾಡಿಸಿ ಅಲ್ಲಿಯ ಋಷಿ ಮುನಿಗಳಿಗೆಲ್ಲ ಶಿವಾದ್ವೈತ ಸಿದ್ಧಾಂತವನ್ನು ಬೋಧಿಸಿದರು. ಕಾಶಿಕ್ಷೇತ್ರಕ್ಕೆ ದಯಮಾಡಿಸಿ ಅಲ್ಲಿಯ ಜಗದ್ಗುರು ವಿಶ್ವಾರಾಧ್ಯರನ್ನು ಸಂದರ್ಶಿಸಿದರು. ಕಾಶಿಯಲ್ಲೇ ನಾಲ್ಕುನೂರು ವರ್ಷ ಯೋಗಸಮಾಧಿಯಲ್ಲಿದ್ದರು. ಅಲ್ಲಿಂದ ಶ್ರೀಶೈಲ ಕ್ಷೇತ್ರಕ್ಕೆ ದಯಮಾಡಿಸಿ ಅಲ್ಲಿಯ ಜಗದ್ಗುರು ಪಂಡಿತಾರಾಧ್ಯರನ್ನು ಭೆಟ್ಟಿಯಾದರು. ಅವರ ಸಂಗಡ ಧಾರ್ಮಿಕ ವಿಚಾರಗಳ ಬಗ್ಗೆ ಚರ್ಚಿಸಿದರು. ಶ್ರೀಶೈಲದಿಂದ ಕಾಶ್ಮೀರಕ್ಕೆ ಪ್ರಯಾಣಿಸಿ ಅಲ್ಲಿ ಶಿವಭಕ್ತಿಯ ಪ್ರಾಬಲ್ಯವನ್ನು ಹೆಚ್ಚಿಸಿದರು. ಕಾಶ್ಮೀರದಿಂದ ಕೇದಾರ ಸುಕ್ಷೇತ್ರಕ್ಕೆ ಹೋಗಿ ಅಲ್ಲಿಯ ಜಗದ್ಗುರು ಏಕೋರಾಮಾರಾಧ್ಯರನ್ನು ಸಂದರ್ಶಿಸಿ ಅವರ ಸಂಗಡ ಕೆಲಕಾಲ ತಂಗಿದರು.

ಮರುಳಾರಾಧ್ಯ ಮತ್ತು ಏಕೋರಾಮರಾಧ್ಯರಿಬ್ಬರೂ ಕೇದಾರದ ಗೌರೀ ಕುಂಡದಲ್ಲಿ ಮುಳುಗಿ ಮೇಲಕ್ಕೆ ಎದ್ದ ಬಳಿಕ ಆಕುಂಡದಲ್ಲಿ ಒಬ್ಬ ದಿವ್ಯ ವಟು ಉದ್ಭವಿಸುವುದನ್ನು ವೀಕ್ಷಿಸಿದರು. ಆ ವಟುವಿನ ತೇಜೋಮೂರ್ತಿಯನ್ನು ಗಮನಿಸಿ ಶ್ರೀ ಏಕೋರಾಮಾರಾಧ್ಯರು ಆತನಿಗೆ ನಂದೀಶ್ವರನೆಂದು ಕರೆದರು. ಆತನಿಗೆ ಆಶೀರ್ವದಿಸಿ ಮುಕ್ತಿಮುನಿ ಎಂದು ನಾಮಕರಣ ಮಾಡಿದರು. ಆತನನ್ನು ಉಜ್ಜಯಿನೀ ಸದ್ಧರ್ಮ ಪೀಠದ ಉತ್ತರಾಧಿಕಾರಿಯನ್ನಾಗಿ ನೇಮಿಸಿಕೊಳ್ಳಲು ಶ್ರೀ ಮರುಳಾರಾಧ್ಯರಿಗೆ ಸಲಹೆ ನೀಡಿದರು.

ಮುಕ್ತಿಮುನಿ

ಶ್ರೀ ಮರುಳಾರಾಧ್ಯಶಿವಾಚಾರ್ಯರು ಶ್ರೀ ಏಕೋರಾಮಾರಾಧ್ಯರನ್ನು, ಮುಕ್ತಿಮುನಿಗಳನ್ನು ಮತ್ತು ತಮ್ಮ ಪರಿವಾರವನ್ನು ಕರೆದುಕೊಂಡು ಉಜ್ಜಯಿನಿಯನ್ನು ತಲುಪಿದರು. ದಾರಿಯಲ್ಲಿ ರಾಜಮಹಾರಾಜರಿಂದ ಕಪ್ಪಕಾಣಿಕೆಗಳನ್ನು ಸ್ವೀಕರಿಸಿ ಜಗದ್ಗುರುಗಳು ಅವರಿಗೆ ಶಿವಸಿದ್ಧಾಂತವನ್ನು ಉಪದೇಶಿಸಿದರು. ಒಂದು ಶುಭ ದಿವಸ ಉಳಿದ ಮೂವರು ಜಗದ್ಗುರುಗಳನ್ನು, ರಾಜ-ಮಹಾರಾಜರನ್ನು ಶಾಖಾಮಠಗಳ ಉಪಾಚಾರ್ಯರನ್ನು ಆಹ್ವಾನಿಸಿ ಅವರ ಸಮ್ಮುಖದಲ್ಲಿ ಶ್ರೀ ಮುಕ್ತಿಮುನಿಗಳಿಗೆ ಪಟ್ಟಾಧಿಕಾರವನ್ನು ನೀಡಲಾಯಿತು. ಶ್ರೀ ಮುಕ್ತಿಮುನಿಗಳಿಗೆ ಸದ್ಧರ್ಮ ಸಿಂಹಾಸನದಲ್ಲಿ ಕೂಡಿಸಿ ರತ್ನಖಚಿತ ಕಿರೀಟವನ್ನು ಧರಿಸಿ ಅವರಿಗೆ ಜಗದ್ಗುರು ಶ್ರೀ ಮುಕ್ತಿಮುನಿರಾಜೇಂದ್ರಶಿವಾಚಾರ್ಯರೆಂದು ನಾಮಕರಣ ಮಾಡಲಾಯಿತು. ಈ ಸಂದರ್ಭದಲ್ಲಿ ಅನೇಕ ಕಾಣಿಕೆಗಳನ್ನು ಅರ್ಪಿಸಲಾಯಿತು.

ಮುಂದೆ ಶ್ರೀ ಮರುಳಾರಾಧ್ಯರು ಶ್ರೀ ಮುಕ್ತಿಮುನಿ ಶಿವಾಚಾರ್ಯರನ್ನು ತಮ್ಮ ಬಳಿ ಕೂಡಿಸಿಕೊಂಡು ಶ್ರೀ ಪೀಠದ ಕೀರ್ತಿ ಗೌರವಗಳನ್ನು ಉಳಿಸಿಕೊಂಡು ಬರಬೇಕು. ಷಟ್‌ಸ್ಥಲಸಿದ್ಧಾಂತವನ್ನು ಮುಂದುವರಿಸಿಕೊಂಡು ಹೋಗಬೇಕು ಮುಂತಾಗಿ ಅಪ್ಪಣೆ ಕೊಡಿಸಿದರು. ಕೊನೆಗೆ ಅವರನ್ನು ಹರಸಿ ಬೀಳ್ಕೊಂಡು ವಟಕ್ಷೇತ್ರಕ್ಕೆ ತೆರಳಿ ಅಲ್ಲಿ ಸಿದ್ಧೇಶ್ವರಲಿಂಗದಲ್ಲಿ ಲೀನರಾದರು.[೨೦]

ಮುಕ್ತಿಮುನಿಗಳು ಯೋಗವಿದ್ಯೆಗಳಲ್ಲಿ, ವೇದಾಗಮಗಳಲ್ಲಿ ಸಂಪೂರ್ಣ ಪಾಂಡಿತ್ಯ ಪಡೆದಿದ್ದರು. ಅವರ ಕೀರ್ತಿಯು ದೇಶಾಂತರದಲ್ಲಿ ಹರಡಿತು. ಅನೇಕ ರಾಜಾಧಿರಾಜರು ಅವರ ದರ್ಶನವನ್ನು ಪಡೆದು ದೀಕ್ಷಾ ಸಂಸ್ಕಾರ ಹೊಂದಿದರು. ಅವರ ಸಹಾಯದಿಂದ ದೇಶದಲ್ಲೆಲ್ಲ ಅನೇಕ ಶಾಖಾ ಮಠಗಳನ್ನು ಸ್ಥಾಪಿಸಿ ಅವುಗಳಿಗೆ ಉಪಾಚಾರ್ಯರನ್ನು ನೇಮಿಸಿದರು. ಜತೆಯಲ್ಲಿ ಅನ್ನ ದಾಸೋಹ ಮತ್ತು ಜ್ಞಾನದಾಸೋಹ ಕೇಂದ್ರಗಳನ್ನು ಅನಾಥಾಶ್ರಮಗಳನ್ನು ನಿರ್ಮಾಣ ಮಾಡಲು ಕಾರಣರಾದರು. ಮೇಲು ಕೀಳು ಬೇಧವಿಲ್ಲದೆ ಎಲ್ಲರಿಗೂ ಶಿವಲಿಂಗ ದೀಕ್ಷೆಯನ್ನು ನೀಡಿದರು. ಶಿವತತ್ವೋಪದೇಶವನ್ನು ಮಾಡಿದರು. ಇದರಿಂದ ಶಿವತತ್ವ ವ್ಯಾಪಕವಾಗಿ ಹರಡಿತು.

ದೇಶದ ಎಲ್ಲೆಡೆ ಸಂಚರಿಸುತ್ತ ಮುಕ್ತಿಮುನಿಗಳು ಯಜ್ಞ, ಯಾಗ, ಹೋಮ, ವ್ರತ, ಉಪವಾಸ, ಕೀಳು ದೇವತೆಗಳ ಆರಾಧನೆ ಇತ್ಯಾದಿ ತಾಂತ್ರಿಕ ಆಚರಣೆಗಳನ್ನು ಖಂಡಿಸಿ ಜನರಲ್ಲಿ ತಾತ್ವಿಕ ಜಾಗ್ರತೆಯನ್ನುಂಟು ಮಾಡಿದರು. ಅಲ್ಲದೆ ಅಸ್ಪೃಶ್ಯೋದ್ಧಾರ, ಸ್ತ್ರೀಸ್ವಾತಂತ್ರ್ಯ, ಕಾಯಕತತ್ವ, ದಾಸೋಹ ಪದ್ಧತಿ, ಸದಾಚಾರ ಮುಂತಾದ ಮಾನವೀಯ ಗುಣಗಳನ್ನು ಬೋಧಿಸುತ್ತ ಅವರನ್ನು ಪಾವನಗೊಳಿಸಿದರು. ಹದಿನೆಂಟು ಕುಲದವರಿಗೂ ಶಿವಲಿಂಗ ದೀಕ್ಷೆಯನ್ನು ನೀಡಿ ವರ್ಣಾಶ್ರಮ ಧರ್ಮವನ್ನು ನಿಷೇಧಿಸಿದರು.

ಸ್ತ್ರೀ-ಪುರುಷರ ಬೇಧವನ್ನು ಖಂಡಿಸಿ ಇಬ್ಬರೂ ಧಾರ್ಮಿಕ ಕಾರ್ಯಗಳನ್ನಾಚರಿಸಲು ಸಂಪೂರ್ಣ ಸ್ವಾತಂತ್ರರೆಂದು ಪ್ರತಿಪಾದಿಸಿದರು.

ಅವರ ಮಠಗಳು ಕೇವಲ ಹೆಸರಿಗೆ ಮಾತ್ರ ಮಠಗಳಾಗಿರದೆ ಸಮಾಜ ಪೋಷಕ ಸಂಸ್ಥೆಗಳೂ ಆಗಿದ್ದವು. ಆ ಮಠಗಳನ್ನು ಕ್ರಿಯಾಶೀಲರೂ, ಕರ್ತವ್ಯನಿರತರೂ, ಧರ್ಮಪರಾಯಣರೂ, ಸಚ್ಚಾರಿತ್ರರೂ, ಅನುಕಂಪ ಹೃದಯಿಗಳೂ ಆದ ಉಪಾಚಾರ್ಯರು ಸಮನ್ವಯ ಭಾವನೆಯಿಂದ ನಡೆಸುತ್ತಿದ್ದರು. ಅವರಲ್ಲಿ ಶಿವಾಚಾರ್ಯರೂ, ಮಹೇಶ್ವರರೂ, ಅಣ್ಣತಂಗಿಯರಂತೆ ಪರಸ್ಪರ ಸಮರ್ಪಣ ಭಾವನೆಯಿಂದ ಸೇವೆಯನ್ನು ಸಲ್ಲಿಸುತ್ತಿದ್ದರು.

ಶ್ರೀ ಮುಕ್ತಿಮುನಿ ಶಿವಾಚಾರ್ಯರು ಸುಮಾರು ೩೦೦ ವರ್ಷಗಳ ಕಾಲ ಸತತವಾಗಿ ವೀರಶೈವ ಮತವನ್ನು ಪ್ರಚಾರ ಮಾಡಿದರು. ತಮ್ಮ ಅವಸಾನ ಕಾಲವನ್ನರಿತು ಶ್ರೀ ಮುಕ್ತಿಮುನಿಗಳು ಶ್ರೀ ಸಿದ್ಧಮುನಿಗಳಿಗೆ ಶ್ರೀಪೀಠದ ಉತ್ತರಾಧಿಕಾರವನ್ನು ನೀಡಿ ಶಿವೈಕ್ಯರಾದರು.

ಶ್ರೀ ಪೀಠದ ಪಟ್ಟವಲ್ಲರಿಯಲ್ಲಿ ಮುಕ್ತಿಮುನಿ ಹೆಸರು ಎರಡು ಕಡೆ ಕಾಣಿಸಿಕೊಳ್ಳುತ್ತದೆ. ಶ್ರೀಮರುಳಾರಾಧ್ಯರಿಂದ ಇಪ್ಪತ್ತೊಂದು ಜಗದ್ಗುರುಗಳ ನಂತರ ಒಬ್ಬ ಮುಕ್ತಿಮುನಿಯ ಹೆಸರು ಇದೆ. ಈ ಇಪ್ಪತ್ತೊಂದು ಜಗದ್ಗುರುಗಳ ಬಗ್ಗೆ ಹೆಚ್ಚಿನ ವಿವರಗಳು ಇನ್ನೂ ತಿಳಿದು ಬಂದಿಲ್ಲ ಹಾಗೂ ಪಟ್ಟವಲ್ಲರಿಯಲ್ಲಿ ೬೯ನೆಯ ಹೆಸರು ಕೂಡ ಮುಕ್ತಿಮುನಿ ಎಂದಿದೆ. ಇಬ್ಬರಲ್ಲಿ ಯಾರು ಈ ಮುಕ್ತಿಮುನಿಗಳೆಂಬುದು ತಿಳಿದಿಲ್ಲ. ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ತಾಲೂಕಿನ ತರಗನಹಳ್ಳಿಯಲ್ಲಿ ಉಜ್ಜಯಿನಿ ಸದ್ಧರ್ಮ ಪೀಠದ ಒಬ್ಬ ಮುಕ್ತಿಮುನಿ ಶಿವಾಚಾರ್ಯರ ಗದ್ದುಗೆಯಿದ್ದು ಅದನ್ನು ಈಗಲೂ ಆರಾಧಿಸುವರೆಂದು ಹೇಳುವರು.[೧೧] ಬಹುಶಃ ಈ ಗದ್ದುಗೆಯೇ ಆ ಮುಕ್ತಿಮುನಿಯದ್ದಾಗಿರಬಹುದು.

ಸಿದ್ಧಮುನಿಗಳು ಇತರ ಮುನಿಗಳು

ಸಿದ್ಧಮುನಿಗಳು ೨೦೦ ವರ್ಷಗಳ ಕಾಲ ಬಾಳಿದರು. ಅವರ ನಂತರ ಕಾಣುವ ಅನೇಕ ಜಗದ್ಗುರುಗಳು ವಿಭಿನ್ನಕಾಲಮಾನಗಳಲ್ಲಿ ಇದ್ದರು. ಅವರಲ್ಲಿ ಶ್ರೀ ಶಿವಮುನೀಂದ್ರ ಸ್ವಾಮಿಗಳು ೧೨೫ ವರ್ಷ, ಶ್ರೀ ಶಾಂತಮುನಿಗಳು ೭೦ ವರ್ಷ, ಶ್ರೀ ಭವಭೂತಿ ಮುನಿಗಳು ೧೦೦ ವರ್ಷ ಪೀಠಾಧಿಕಾರಿಗಳಾಗಿದ್ದರು. ಶ್ರೀ ಭವಭೂತಿ ಮುನಿಗಳು ಘನ ವಿದ್ವಾಂಸರು ಮತ್ತು ಮಹಾತಪಸ್ವಿಗಳಾಗಿದ್ದರು. ಅವರಿಗೆ ಉಜ್ಜಯಿನಿಯ ಭೋಜರಾಜ ಹಾಗೂ ಅವನ ಆಸ್ಥಾನಕವಿ ಕಾಳಿದಾಸಾದಿಗಳಿಂದ ಮನ್ನಣೆ ದೊರೆತಿತ್ತು. ಇವರ ತರುವಾಯ ಶ್ರೀ ಜಗದ್ಗುರು ಇಮ್ಮಡಿ ಮುಕ್ತಿಮುನಿಗಳಿಗೆ ಪೀಠಾಧಿಕಾರವನ್ನು ಕೊಟ್ಟು ಲಿಂಗೈಕ್ಯರಾದರು.

ಮುಂದೆ ಇಮ್ಮಡಿ ಮುಕ್ತಿಮುನಿಗಳು ೫೦ ವರ್ಷ, ಶಕ್ತಿಮುನಿಗಳು ೨೦೦ ವರ್ಷ, ಇಮ್ಮಡಿ ಸಿದ್ಧಮುನಿಗಳು ೪೦ ವರ್ಷ, ಇಮ್ಮಡಿ ಶಾಂತಮುನಿಗಳು ೯೦ ವರ್ಷ, ಮುಮ್ಮಡಿ ಸಿದ್ಧಮುನಿಗಳು ೫೫ ವರ್ಷ, ಸಾಂಬಮುನಿಗಳು ೧೦೦ ವರ್ಷ, ಇಮ್ಮಡಿ ಶಿವಮುನಿಗಳು ೩೦ ವರ್ಷ ಮತ್ತು ಈಶಾನ್ಯ ಮುನಿಗಳು ೭೫ ವರ್ಷ ಇವರು ಉಜ್ಜಯಿನೀ ಸದ್ಧರ್ಮ ಪೀಠಾಧ್ಯಕ್ಷರಾಗಿ ವೀರಶೈವ ತತ್ವವನ್ನು ಪ್ರಚಾರ ಗೊಳಿಸಿದರು.[೧೨]

ಶಂಭುಮುನಿ

ಶ್ರೀ ಈಶಾನ್ಯ ಮುನಿಗಳ ತರುವಾಯ ಹದಿನೈದನೆಯ ಪೀಠಾಧಿಕಾರಿಗಳಾಗಿ ಶ್ರೀ ಶಂಭುಮುನಿ ಶಿವಾಚಾರ್ಯರು ಬರುತ್ತಾರೆ. ಆ ಕಾಲಕ್ಕಾಗಲೇ ಜೈನಧರ್ಮವು ಉಚ್ಛ್ರಾಯ ಸ್ಥಿತಿಯನ್ನು ತಲುಪಿತ್ತು. ಜೈನರಿಂದ ವೀರಶೈವ ಮತಕ್ಕೆ ಕಿರುಕುಳ ವುಂಟಾಯಿತು. ಜೈನ ದೊರೆ ವೀರಸೇನನೆಂಬವನು ವೀರಶೈವ ಮತವನ್ನು ನಾಶಗೊಳಿಸಲು ಪಣ ತೊಟ್ಟನು.[೧೩] ಈ ಸಂದರ್ಭದಲ್ಲಿ ವೀರಸೇನನ ಸಂಗಡ ಧರ್ಮಯುದ್ಧ ನಡೆದು ವೀರಶೈವರು ವಿಜಯಿಗಳಾದರು. ಈ ಯುದ್ಧದಲ್ಲಿ ಸಾವಿನ್ನಪ್ಪಿದ ಸೈನಿಕರು ಮತ್ತು ರಕ್ತಪಾತ ಮುಂತಾದವುಗಳನ್ನು ನೋಡಿ ಶ್ರೀ ಜಗದ್ಗುರುಗಳು ಬೇಸತ್ತು ಅಭಯಾರಣ್ಯವನ್ನು ಸೇರಿ ಅಲ್ಲಿ ಒಂದು ಪರ್ಣಕುಟೀರವನ್ನು ನಿರ್ಮಿಸಿ ೨೦ ವರ್ಷಗಳವರೆಗೆ ಯೋಗ, ಶಿವಾನುಷ್ಠಾನ ಮತ್ತು ತಪಸ್ಸು ಆಚರಿಸುತ್ತ ವೀರಶೈವ ಧರ್ಮವನ್ನು ಪ್ರಸಿದ್ಧಗೊಳಿಸಿದರು.

ಶ್ರೀ ಮರುಳಸಿದ್ಧರು

ಶಂಭುಮುನಿಗಳು ಅಥವಾ ಮುಕ್ತಿ ಮುನಿಗಳು ಇಪ್ಪತ್ತೆರಡನೆ ಪೀಠಾಧಿಕಾರಿಗಳನ್ನಾಗಿ ಶ್ರೀ ಮರುಳಸಿದ್ಧರಿಗೆ ಪೀಠಾರೋಹಣ ಮಾಡಿಸಿದರು. ಈ ಪೀಠದ ಗುರುವರ್ಗದರ್ಪಣದಲ್ಲಿ ನಾಲ್ಕಕ್ಕೂ ಹೆಚ್ಚು ಮರುಳಸಿದ್ಧರ ಹೆಸರುಗಳಿವೆ.[೧೪] ಬಹುಶಃ ಇವರು೨೮ನೆಯವರಿರಬೇಕು. ನಿಜಗುಣಾರಾಧ್ಯರ ವಿವೇಕ ಚಿಂತಾಮಣಿಯ ಶಿವಯೋಗ ಪ್ರಕರಣ,[೧೫] ನಾಗಭೂಷಣರು ಬರೆದ ಸಿದ್ಧೇಶ್ವರ ಸಾಂಗತ್ಯ,[೧೬] ದೇವಕವಿಯ ಮರುಳಸಿದ್ಧಾಂಕ[೧೭], ತಿರುಕೂರ ಪುರವರ ಸೋಮನ ಚತುರಾಚಾರ್ಯ ಪುರಾಣ,[೧೮] ಹೂಲಿ ನಂದೀಶ ಕವಿಯ ಮರುಳಾರಾಧ್ಯ ವಿಜಯ[೧೯] ಇತ್ಯಾದಿ ಕೃತಿಗಳು ಈ ಮರುಳಸಿದ್ಧರ ಚರಿತ್ರೆಯ ಮೇಲೆ ಬೆಳಕನ್ನು ಚೆಲ್ಲುತ್ತವೆ. ಸಿದ್ಧರಾಮ, ಆದಯ್ಯ ಮುಂತಾದವರ ವಚನಗಳಲ್ಲಿ ಮರುಳಸಿದ್ಧನನ್ನು ಹೆಸರಿಸಲಾಗಿದೆ. ಒಬ್ಬ ಮರುಳಸಿದ್ಧನು ೬೮೦೦೦ ವಚನಗಳನ್ನು ಬರೆದನೆಂದು ಸಿದ್ಧರಾಮನ ವಚನದಿಂದ ತಿಳಿದುಬರುತ್ತದೆ. ಈತನನ್ನು ಕುರಿತ ವಿವರಗಳಲ್ಲಿ ಭಿನ್ನತೆಯಿದೆ. ಕೆಲವು ಕೃತಿಗಳ ಕಾಲಮಾನ ಕ್ರಿ.ಶ. ೧೫೮೨ ಮತ್ತು ಕ್ರಿ.ಶ. ೧೬೦೦ ಇತ್ಯಾದಿಯಾಗಿದೆ. ಡಾ. ಚಂದ್ರಶೇಖರ ಶಿವಾಚಾರ್ಯರ ಕೃತಿಯಲ್ಲಿ ಮತ್ತು ಪಂ|| ಕವಲಿ ಚನ್ನಬಸಪ್ಪನವರ ಹೂಲಿ ನಂದೀಶಕವಿ ವಿರಚಿತ ಶ್ರೀ ಜಗದ್ಗುರು ಮರುಳಾರಾಧ್ಯ ವಿಜಯಕಾವ್ಯದ ಗದ್ಯ ಕೃತಿಯಲ್ಲಿ ಬರುವ ವಿವರಗಳು ವಿಶೇಷ ಗಮನವನ್ನು ಸೆಳೆಯುತ್ತವೆ.

ಹೂಲಿಯ ನಂದೀಶಕವಿ ವಿರಚಿತ ಶ್ರೀ ಜಗದ್ಗುರು ಮರುಳಾರಾಧ್ಯ ವಿಜಯ ಕಾವ್ಯದ ವಿವರವನ್ನು ಸ್ಥೂಲವಾಗಿ ಸದ್ಧರ್ಮಪ್ರಭಾ ಸಂಚಿಕೆಯಲ್ಲಿ ಮತ್ತು ವೀರಶೈವ

ಪಂಚಪೀಠ ಪರಂಪರೆಯಲ್ಲಿ ವಿವರಿಸಲಾಗಿದೆ.[೨೦] ಅದನ್ನೇ ಇಲ್ಲಿ ಪ್ರಸ್ತುತ ಪಡಿಸಲಾಗಿದೆ.

ಧರ್ಮ ಕಲಹವೇ ಬೇಡವೆಂದು ಶ್ರೀ ಶುಭಮುನಿಗಳು ಉಜ್ಜಯಿನಿ ನಗರವನ್ನೇ ತ್ಯಜಿಸಿ ಪ್ರಶಾಂತ ಅರಣ್ಯ ಸ್ಥಳಕ್ಕೆ ಧಾವಿಸಿದರು. ಅಲ್ಲಿ ಪರ್ಣಕುಟೀರವನ್ನು ನಿರ್ಮಿಸಿಕೊಂಡು ಧರ್ಮಕಾರ್ಯವನ್ನು ಮಾಡಿದರು. ಕೊನೆಗೆ ತಮ್ಮ ಪ್ರೀತಿಯ ಶಿಷ್ಯರಾದ ಶ್ರೀ ಮರುಳಸಿದ್ಧರಿಗೆ ಪಟ್ಟವನ್ನು ಕಟ್ಟಿ ಲಿಂಗೈಕ್ಯರಾದರು. ಮುಂದೆ ಶ್ರೀಮರುಳಸಿದ್ಧರು ತಮ್ಮ ಶಿಷ್ಯ ಪರಿವಾರ ಸಮೇತ ಮಹಾರಾಷ್ಟ್ರದ ಕಡೆಗೆ ದಯಮಾಡಿಸಿದರು. ಅಲ್ಲಿ ಪರಳಿ ಮುಂತಾದ ಜ್ಯೋತಿರ್ಲಿಂಗಗಳ ದರ್ಶನ ಪಡೆದು ಕೊಲ್ಲಾಪುರ ಬಳಿಯ **ಸಿದ್ಧಗಿರಿ** ಎಂಬ ಸ್ಥಳಕ್ಕೆ ಬಂದರು. ಹೀಗೆ ಅವರು ದೇಶಸಂಚಾರ ಮಾಡುತ್ತ, ವೀರಶೈವ ಧರ್ಮವನ್ನು ಪ್ರಚಾರ ಮಾಡುತ್ತ ತಮ್ಮ ಪೀಠದ ಶಾಖಾ ಮಠಗಳನ್ನು ಸ್ಥಾಪಿಸಿದರು. ಶ್ರೀ ಮರುಳ ಸಿದ್ಧರು ೨೦೦ ವರ್ಷಗಳ ಕಾಲ ಪೀಠಾಧಿಪತಿಗಳಾಗಿದ್ದರು. ಅವರು **ಸಿದ್ಧಗಿರಿ**ಗೆ ಆಗಮಿಸಿದಾಗ ಅಲ್ಲಿ ಶ್ರೀ ಜಗದ್ಗುರು ರೇವಣಸಿದ್ಧರ ದರ್ಶನ ಪಡೆದರು. ಉಜ್ಜಯಿನಿ ನಗರದಲ್ಲಿ ತಮ್ಮ ಪೀಠಕ್ಕೆ ಬಂದೊದಗಿದ ವಿಪತ್ತನ್ನು ಅವರಿಗೆ ಮನವರಿಕೆ ಮಾಡಿಕೊಟ್ಟರು. ಆ ವೃತ್ತಾಂತವನ್ನು ತಿಳಿದ ಶ್ರೀ ರೇವಣಸಿದ್ಧರು ಕರ್ನಾಟಕದ ಕೊಟ್ಟೂರು ಬಳಿಯ ಉಜ್ಜಯಿನಿ ಎಂಬಲ್ಲಿ ಹೊಸ ಪಟ್ಟಣವನ್ನು ನಿರ್ಮಿಸಿ ಅಲ್ಲಿಯೇ ಧರ್ಮಪೀಠವನ್ನು ಸ್ಥಾಪಿಸಲು ಅಪ್ಪಣೆಯನ್ನು ನೀಡಿದರು.

ಶ್ರೀಮರುಳಸಿದ್ಧರು ಶ್ರೀರೇವಣಸಿದ್ದರ ಅಪ್ಪಣೆಯ ಮೇರೆಗೆ ಕೊಲ್ಲಾಪುರಕ್ಕೆ ಹೋಗಿ ಅಲ್ಲಿಯ ಶ್ರೀ ಮಾಯಾದೇವಿಯ ಗರ್ವಭಂಗ ಮಾಡಿ ಅಪಾರ ಕೀರ್ತಿಯನ್ನು ಗಳಿಸಿದರು. ಅಲ್ಲಿಯ ಕರಟಾಸುರ ಮತ್ತು ಅವರ ಪರಿವಾರದವರಿಗೆಲ್ಲ ಶಿವದೀಕ್ಷೆಯನ್ನು ಅನುಗ್ರಹಿಸಿದರು. ಕೊಲ್ಲಾಪುರದಿಂದ ಆಂಧ್ರಪ್ರದೇಶದ ಓರಂಗಲ್ಲಿಗೆ ದಯಮಾಡಿಸಿದರು. ಅಲ್ಲಿ ಕಾಕತೀಯ ರಾಜ ಗಣಪತಿ ಮತ್ತು ಕಲ್ಯಾಣದ ಶ್ರೀ ಸೋಮೇಶ್ವರ ರಾಜರನ್ನು ಕಂಡರು. ಈ ರಾಜರ ಸಹಾಯದಿಂದ ಮತ್ತು ಜಕ್ಕಣ್ಣಾಚಾರ್ಯನ ಮೂಲಕ ಉಜ್ಜಯಿನಿಯಲ್ಲಿ ತಮ್ಮ ಪೀಠವನ್ನು ಕಟ್ಟಿಕೊಂಡರು. ನೂತನವಾಗಿ ನಿರ್ಮಾಣಗೊಳಿಸಿದ ಶ್ರೀ ಉಜ್ಜಯಿನಿ ಪೀಠದಲ್ಲಿ ಶ್ರೀ ಪೀಠದ ೧೪ ಜನ ಜಗದ್ಗುರುಗಳ ಮೂರ್ತಿಗಳನ್ನು ಮತ್ತು ಮೂಲ ಮರುಳಾಧ್ಯರ ಒಂದು ಲಿಂಗವನ್ನು ಸಂಸ್ಥಾಪಿಸಿದರು. ಈ ವಿನೂತನ ಪೀಠಕ್ಕೆ ಶ್ರೀ ಮರಳುಸಿದ್ಧರನ್ನು ಪೀಠಾಧ್ಯಕ್ಷರನ್ನಾಗಿ ನೇಮಿಸಲಾಯಿತು. ಈ ಶುಭಸಮಾರಂಭಕ್ಕೆ ಶ್ರೀ ಜಗದ್ಗುರು ರೇವಣಸಿದ್ಧರು, ಶ್ರೀ ಜಗದ್ಗುರು ಪಂಡಿತಾರಾಧ್ಯರು ಹಾಗೂ ಓರಂಗಲ್ಲು, ಪುರಿದೇಶಗಳ ಭೂಪಾಲರು ಆಗಮಿಸಿ ತಮ್ಮ ಭಕ್ತಿ ಕಾಣಿಕೆಗಳನ್ನು ಸಮರ್ಪಿಸಿದರು.

ಚಾಲುಕ್ಯ ಅರಸ ಭುವನೈಕಮಲ್ಲ ಸೋಮೇಶ್ವರನು ತನ್ನ ರಾಜ್ಯದ ೧೨೦ ಮಠಗಳನ್ನು ಶ್ರೀಗಳಿಗೆ ಉಂಬಳಿಯಾಗಿ ನೀಡಿದನು.

ಶ್ರೀ ಮರುಳಸಿದ್ಧರು ತಮ್ಮ ಪಟ್ಟಾಭಿಷೇಕವಾದ ಬಳಿಕ ಓರಂಗಲ್ಲು, ಹಂಪಿ, ಕೂಡಲಸಂಗಮ, ಕಪ್ಪತಗುಡ್ಡ, ಹರಪುರಿ ಮುಂತಾದ ಸ್ಥಳಗಲ್ಲಿ ಸಂಚರಿಸಿದರು. ವೀರಶೈವ ಧರ್ಮೋಪದೇಶವನ್ನು ಮಾಡುತ್ತ ಅನೇಕ ಜೈನರಿಗೂ ಲಿಂಗದೀಕ್ಷೆಯನ್ನು ಮಾಡಿ ಆಶೀರ್ವದಿಸಿದರು. ಮುಂದೆ ಶ್ರೀಸಿದ್ಧಪಂಡಿತರಿಗೆ ಪಟ್ಟವನ್ನು ಕಟ್ಟಿ ಶ್ರೀ ಮರುಳಸಿದ್ಧರು ಲಿಂಗೈಕ್ಯರಾದರು.

ಇನ್ನೊಂದು ಕಡೆ ಮಧ್ಯಪ್ರದೇಶದ ಉಜ್ಜಯಿನಿ ಭಾಗದಲ್ಲಿ ಮುಸ್ಲಿಂಮರ ಹಾವಳಿಯಿಂದ ತತ್ತರಿಸಿ ಶ್ರೀಪೀಠವನ್ನು ಶ್ರೀ ಮರುಳಸಿದ್ಧರು ಇಂದಿನ ಸ್ಥಳಕ್ಕೆ ತರಲು ಕಾರಣರಾದರೆಂದು ಡಾ. ಎಂ. ಶಿವಮೂರ್ತಿ ಅವರು ಪ್ರಸ್ತಾಪಿಸಿದ್ದಾರೆ.

ತದನಂತರ ಉಜ್ಜಯಿನೀ ಸದ್ಧರ್ಮ ಪೀಠಕ್ಕೆ ಶ್ರೀ ಸಿದ್ಧಲಿಂಗಾಚಾರ್ಯರು, ಶ್ರೀ ಸಿದ್ದೇಶ್ವರಾಚಾರ್ಯರು, ಶ್ರೀ ಸಿದ್ಧನಾಥರಾಧ್ಯರು ಜಗದ್ಗುರುಗಳಾಗಿದ್ದರು. ಶ್ರೀ ಸಿದ್ಧನಾಥಾರಾಧ್ಯರು ತಮ್ಮ ಅಂತ್ಯಕಾಲದಲ್ಲಿ ಹೂಲಿಯ ಸಿದ್ಧನಂಜೇಶ್ವರ ವಂಶದ ಮರುಳಾರಾಧ್ಯರಿಗೆ ಪಟ್ಟವನ್ನು ಕಟ್ಟಿ ಲಿಂಗೈಕ್ಯರಾದರು.

ಶ್ರೀ ಮರುಳಾಧ್ಯರ ಅನುಗ್ರಹದಿಂದಲೇ ತರೀಕೆರೆಯ ಸೋಮಣ್ಣನೆಂಬ ಕುರುಬಗೌಡನಿಗೂ ಕಗ್ಗಲ್ಲಪುರದ ಗೌಡನಿಗೂ ಪುತ್ರ ಸಂತಾನವಾದವು. ಈ ಕುರುಬಗೌಡನ ಶಿಶುವಿಗೆ ಅಮೋಘಸಿದ್ಧನೆಂಬ ಹೆಸರನ್ನಿಡಲಾಯಿತು. ಈತನಿಗೆ ಶಿವದೀಕ್ಷೆ ನೀಡಿ ಹೂಲಿಗೆ ಕರೆತರಲಾಯಿತು. ಅಲ್ಲಿಯ ಹಿರಿಯ ಶಂಭಯ್ಯ ವೀರಶೈವ ಕುರುಬರಿಗೆ ಶ್ರೀ ಅಮೋಘಸಿದ್ಧನನ್ನೇ ಗುರುವಾಗಿ ನೇಮಿಸಲಾಯಿತು. ಕಗ್ಗಲ್ಲಪುರದಲ್ಲಿ ಶ್ರೀ ಮರುಳಸಿದ್ಧ ಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು. ಬೆಂತೂರು, ಅನುಗೋಡೆಗಳಲ್ಲಿ ಸಂಚರಿಸಿ ಶ್ರೀ ಉಜ್ಜಯಿನಿಗೆ ಹಿಂದಿರುಗಿದ ಅವರು ಸದ್ಧರ್ಮ ಪೀಠದ ಉತ್ತರಾಧಿಕಾರವನ್ನು ಶ್ರೀ ಸಿದ್ಧಮಲ್ಲೇಶ್ವರರಿಗೆ ವಹಿಸಿದರು. ಕೊನೆಗೆ ಶ್ರೀ ಮರುಳಸಿದ್ಧರು ಹೂಲಿಯಲ್ಲಿಯೇ ಲಿಂಗೈಕ್ಯರಾದರು.

ವಿಶ್ವಬಂಧು ಮರುಳಸಿದ್ಧ ಎಂಬ ಕೃತಿಯಲ್ಲಿ ಮರುಳಸಿದ್ಧನ ಲೀಲೆಗಳು ಹಾಗೂ ಇನ್ನಿತರ ಮಾಹಿತಿಗಳಿವೆ.[೨೧] ಉಜ್ಜಯನಿಯ ಪರಿಸರದಲ್ಲಿ ಶ್ರೀ ಮರುಳಸಿದ್ಧನಿಗೆ ಸಂಬಂಧಿಸಿದ ಅನೇಕ ಐತಿಹ್ಯಗಳಿವೆ.[೨೨]

ಕಾಲಮಾನ

ಲಕ್ಷ್ಮೇಶ್ವರದ ಕ್ರಿ.ಶ.೧೫೧೩ರ ಶಿಲಾಶಾಸನದಲ್ಲಿ ಮರುಳಸಿದ್ಧರು ಲಿಂಗ ಮೂರ್ತಿಯಾಗಿ ನೆಲಸಿದ ವಿಷಯವಿದೆ. ಹಾಗೂ ದಾರುಕರ ಕಥೆ, ರೇವಣಸಿದ್ಧರ

ಅವತಾರ, ೧೪೦೦ ವರ್ಷಗಳ ಅವರ ಜೀವನಾವಧಿ ವಿಷಯಗಳೂ ಅಲ್ಲಿ ಪ್ರಸ್ತಾಪಗೊಂಡಿವೆ. ಈ ಶಿಲಾ ಶಾಸನದ ಪಾಠವನ್ನು **ಶಾಸನಗಳ ಅಧ್ಯಾಯ** ಭಾಗದಲ್ಲಿ ನೀಡಲಾಗಿದೆ. ಈ ಎಲ್ಲ ವಿವರಗಳಿಂದ ಮರುಳಸಿದ್ಧರೆಂಬುವರು ಒಬ್ಬರಿಗಿಂತ ಹೆಚ್ಚಿದ್ದರೆಂದೂ ಮತ್ತು ಒಬ್ಬೊಬ್ಬರ ಪವಾಡಗಳು ಒಂದೊಂದು ಬಗೆಯಾಗಿದ್ದವೆಂದೂ ತಿಳಿಯುವುದು. **ಮರುಳಾರಾಧ್ಯ ವಿಜಯ**ದಿಂದ ಮಾತ್ರ ಮಧ್ಯಭಾರತದ ಉಜ್ಜಯಿನಿಯಿಂದ ಆಗಮಿಸಿದ ಶ್ರೀ ಮರುಳಸಿದ್ಧರು ಉಜ್ಜಯಿನೀ ಪೀಠವನ್ನು ಈಗಿರುವ ಸ್ಥಳದಲ್ಲಿ ಸ್ಥಾಪಿಸಿದರೆಂದು ವಿಧಿತವಾಗುವುದು. ಲಕ್ಷ್ಮೇಶ್ವರದ ಶಾಸನ ಮತ್ತು ಮರುಳಾರಾಧ್ಯ ವಿಜಯ ಕೃತಿಯ ವಿವರಗಳಿಂದ ಶ್ರೀಮರುಳಸಿದ್ಧರ ಕಾಲಮಾನ ಸು.ಕ್ರಿ.ಶ. ೨ನೇ ಶತಮಾನದಷ್ಟು ಪೂರ್ವಕ್ಕೆ ಹೋಗುವುದೆಂದು ತರ್ಕಿಸಬಹುದು.

ಶ್ರೀ ರಾಮದಾಸಗೌಡರ ಕ್ರಿ.ಶ. ೧೯೩೮ ರ **ಹಿಂದುತ್ವ** ಎಂಬ ಹಿಂದೀ ಭಾಷೆಯ ಕೃತಿಯಲ್ಲಿ ಶ್ರೀ ಮರುಳಾರಾಧ್ಯರು ಶಿವನ ವಾಮದೇವ ಮೂರ್ತಿ ಸ್ವರೂಪವಾದ ಅವಂತಿಕಾಪುರಿಯ ಶ್ರೀ ಸಿದ್ಧೇಶ್ವರ ಲಿಂಗದಿಂದ ಅವತರಿಸಿದರು. ಮತ್ತು ಅವಂತಿಕಾ ಅರಸರಿಂದ ಮನಸ್ತಾಪವಾಗಿ ಆ ಸ್ಥಳವನ್ನು ಬಿಟ್ಟು ಬಳ್ಳಾರಿ ಜಿಲ್ಲೆಯ ಒಂದು ಊರಿಗೆ ಬಂದು ವಾಸಮಾಡಿ ಆ ಊರಿಗೆ 'ಉಜ್ಜಯನಿ' ಎಂದು ಹೆಸರು ಪಡೆಯಲು ಕಾರಣವಾಯಿತೆಂದು ಹೇಳಲಾಗಿದೆ. ಇಂದಿಗೂ ಅವಂತಿಕಾದಲ್ಲಿ ಇವರ ಒಂದು ಮಠವು ಇದೆ ಎಂದು ಹೇಳಲಾಗಿದೆ. ಹೀಗಾಗಿ ಮಧ್ಯಪ್ರದೇಶದ ಉಜ್ಜಯನಿಯಲ್ಲಿ ಶ್ರೀಪೀಠವು ಇತ್ತೀಚಿನ ಕಾಲದವರೆಗೆ ಇದ್ದಿತೆಂದು ತಿಳಿದುಬರುವುದು.[೨೩]

ಸಿದ್ಧವಟಕ್ಷೇತ್ರ

ಉಜ್ಜಯಿನೀ ಸದ್ಧರ್ಮ ಪೀಠವು ಮಧ್ಯಪ್ರದೇಶದ ಮೂಲ ಉಜ್ಜಯಿನಿಯ ಭೈರವಗಡ ಸಿದ್ಧವಟಕ್ಷೇತ್ರದ ಪವಿತ್ರ ಪರಿಸರದಲ್ಲಿ ಎರಡು ಎಕರೆ ಭೂಮಿಯನ್ನು ಖರೀದಿಸಿ ಅಲ್ಲಿ ಮೂರು ಕೋಣೆಗಳನ್ನು ಇತ್ತೀಚೆಗೆ ಕಟ್ಟಿಸಲಾಗಿದೆ. ಅದರ ಉಸ್ತುವಾರಿಯನ್ನು ನೋಡಿಕೊಂಡು ಹೋಗಲು ಐದು ಸದಸ್ಯರನ್ನೊಳಗೊಂಡ ಶ್ರೀ ಜಗದ್ಗುರು ಸಿದ್ಧೇಶ್ವರ ಸದ್ಧರ್ಮ ಕಾರ್ಯ ಸೇವಾಸಮಿತಿಯನ್ನು ಸ್ಥಾಪಿಸಲಾಗಿದೆ. ಉಜ್ಜಯಿನಿ ಸದ್ಧರ್ಮ ಪೀಠದ ಈಗಿನ ಜಗದ್ಗುರು ಶ್ರೀ ಮರುಳಸಿದ್ಧರಾಜ ದೇಶೀಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಈ ಸಮಿತಿ (ಟ್ರಸ್ಟ್)ಯ ಸಂಸ್ಥಾಪಕ ಸಂರಕ್ಷಕರಾಗಿದ್ದು ಅವರ ಅಪ್ಪಣೆಯಂತೆ ಈ ಟ್ರಸ್ಟ್ ಕಾರ್ಯ ನಿರ್ವಹಿಸುತ್ತಿದೆ. ***(ಚಿತ್ರ. ನಂ.೩ ರಿಂದ ೫)*** ಶ್ರೀ ಅಳವಂಡಿ ಶಿವಮೂರ್ತಿಸ್ವಾಮಿಗಳು ಈ ಕಾರ್ಯವನ್ನು ತುಂಬಾ ಶ್ರದ್ಧಾ-ಭಕ್ತಿಯಿಂದ ಶ್ರಮವಹಿಸಿ ಸೇವೆ ಸಲ್ಲಿಸುತ್ತಿರುವರು.

ಸಿದ್ಧಮಲ್ಲೇಶ್ವರರು

ಶ್ರೀ ಜಗದ್ಗುರು ಸಿದ್ಧಮಲ್ಲೇಶ್ವರರು ಬರಗಾಲದಲ್ಲಿ ಮಳೆಯನ್ನು ತರಿಸಿ **ಮಳೆಮಲ್ಲೇಶ್ವರ**ರೆಂಬ ನಾಮಾಂಕಿತವನ್ನು ಪಡೆದರು. ಸಂತಾನವಿಲ್ಲದವರಿಗೆ ಸಂತಾನವನ್ನಾಶೀರ್ವದಿಸಿ **ಸಂತಾನ ಮಲ್ಲೇಶ್ವ**ರೆಂತಲೂ ಖ್ಯಾತಿ ಪಡೆದರು. ಭಕ್ತರು ಸಾವಿರ ಹೊನ್ನು ಕೊಟ್ಟು ಸಂತಾನವನ್ನು ಇವರಿಂದ ಪಡೆಯುತ್ತಿದ್ದರು. ಇಂಥವರಲ್ಲಿ ಉಜ್ಜಯಿನಿಯ ಬಿಜ್ಜೇಗೌಡ, ಬಾಗಳಿ ಬಸವನಾಯಕ, ಓಂಕಾರನಾಯಕ, ಹರಪುರಿಯ ಬುಳ್ಳನೃಪಾಲ ಮತ್ತು ವಿಜಯನಗರದ ಶ್ರೀ ಪ್ರೌಢರಾಯರು ಪ್ರಮುಖರು. ಪ್ರೌಢರಾಯನಿಗೆ ಸಂತಾನ ಪ್ರಾಪ್ತವಾದ ಬಳಿಕ ಶ್ರೀ ಪೂಜ್ಯರ ಪ್ರಭಾವದಿಂದ ಹಂಪಿಯಲ್ಲಿ ಶಿವಭಕ್ತಿಯ ಪ್ರಚಾರ ಅಧಿಕಗೊಂಡಿತು. ರಾಜನ ಅಮಾತ್ಯನಾಗಿದ್ದ ಲಕ್ಕಣ್ಣ ದಂಡೇಶನು **ಶಿವತತ್ವ ಚಿಂತಾಮಣಿ** ಎಂಬ ಕೃತಿಯನ್ನು ಬರೆದು ಶ್ರೀ ಪೂಜ್ಯಗುರುಗಳ ಅನುಗ್ರಹಕ್ಕೆ ಪಾತ್ರನಾದನು.

ಶ್ರೀ ಜಗದ್ಗುರು ಸಿದ್ಧಮಲ್ಲೇಶ್ವರರು ಒಮ್ಮೆ ಸಿಂದೋಗಿಪುರದ ಗೌಡನಿಂದ ಸಾವಿರ ಹೊನ್ನು ಪಡೆದು ಆತನಿಗೆ ಸಂತಾನ ನೀಡಿದರು. ಇದನ್ನು ನೋಡಿದ ಆತನ ಆಳು ಮಗನಾದ ಹೊಲೆಯ ಜಾತಿಯ ಮಾರನೂ ಪೂಜ್ಯಗುರುಗಳ ಆಶೀರ್ವಾದ ಪಡೆದು ಗಂಡು ಸಂತಾನವನ್ನು ಪಡೆದನು. ಈತನು ಗುರುಗಳಿಗೆ ಸಾವಿರ ಹೊನ್ನು ಕೊಡಲು ಸಾಧ್ಯವಾಗಲಿಲ್ಲವಾದ್ದರಿಂದ ಸಾವಿರ ಕುಳ್ಳುಗಳನ್ನು ನೀಡಿದನು. ದಾಸೋಹ ಸೇವೆಯನ್ನು ಗೈದು ಗುರುವಿನ ಅನುಗ್ರಹ ಪಡೆದನು. ತನ್ನ ಮಗುವಿಗೆ ಮರುಳಸಿದ್ಧನೆಂಬ ಹೆಸರನ್ನಿಟ್ಟನು. ಈತನ ಪೂಜೆಗಾಗಿ ಸಿಂದೋಗಿಯ ಮಾದಿಗಕೇರಿಯಲ್ಲಿಯೇ ಶ್ರೀಗಳು ಶ್ರೀ ಮರುಳಸಿದ್ಧ ದೇವಾಲಯವನ್ನು ಕಟ್ಟಿಸಿದರು. ಅದರಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಿದರು. ಅದರ ಪೂಜೆಯ ಜವಾಬ್ದಾರಿಯನ್ನು ಈ ಮಗುವಿಗೇ ಒಪ್ಪಿಸಿದರು.

ಇದೇ ಸಂದರ್ಭದಲ್ಲಿ ಸಿಂದೋಗಿಯ ಹರಳ ಎಂಬವನು ಈ ಮರುಳಸಿದ್ಧ ದೇವಾಲಯದಲ್ಲಿ ಪೂಜಿಸುವುದಾಗಿ ಬೇಡಿಕೊಂಡನು. ಆಗ ಗುರುಗಳು ಆತನನ್ನು ಉಜ್ಜಯಿನಿಗೆ ಕರೆದುಕೊಂಡು ಬಂದು ಅಲ್ಲಿಯ ಮಾದಿಗರ ಕೇರಿಯಲ್ಲಿ ಒಂದು ಚಿಕ್ಕ ದೇವಾಲಯವನ್ನು ಕಟ್ಟಿಸಿದರು. ಅಲ್ಲಿಯ ಪೂಜೆಗಾಗಿ ಆತನನ್ನೇ ನೇಮಿಸಿದರು. ಆ ಮಂದಿರದ ಪೂಜೆಯನ್ನು ಅವನ ವಂಶಜರೇ ನೆರವೇರಿಸುತ್ತಿದ್ದರು. ಈ ಪೂಜಾರಿಯು ಕಾವಿ ಬಟ್ಟೆ ಧರಿಸಿ ಕೈಯಲ್ಲಿ ಬೆತ್ತವನ್ನು ಹಿಡಿಯುತ್ತಿದ್ದನು. ಆದರೆ ಈಗ ಈ ದೇವಾಲಯಕ್ಕೆ ಯಾವ ಪೂಜಾರಿಯೂ ಇಲ್ಲವಾಗಿದೆ.

ಹೀಗೆ ಶ್ರೀ ಸಿದ್ಧಮಲ್ಲೇಶ್ವರರು ದೇಶ ಸಂಚಾರ ಮಾಡಿ ಧರ್ಮ ಪ್ರಚಾರಗೈದರು. ಕೊನೆಗೆ ಶ್ರೀ ಸಿದ್ಧನಾಥಾಚಾರ್ಯರಿಗೆ ಪಟ್ಟವನ್ನು ಕಟ್ಟಿ

ಶಿವರಾತ್ರಿಯ ದಿವಸ ಲಿಂಗೈಕ್ಯರಾದರು. ಆ ಸಮಯದಲ್ಲಿಯೇ ಇವರ ಶಿಷ್ಯರಾದ ಉಜ್ಜಯಿನಿಯ ಹರಳ ಮತ್ತು ಸಿಂದೋಗಿಯ ಮರುಳಸಿದ್ಧರೀರ್ವರು ಶಿವಾಧೀನರಾದರು.[೨೪]

ಸಿದ್ಧನಾಥಶಿವಾಚಾರ್ಯರು

ಶ್ರೀಜಗದ್ಗುರು ಸಿದ್ಧನಾಥ ಶಿವಾಚಾರ್ಯರು ಹೂಲಿಯ ಸಿದ್ದನಂಜೇಶ್ವರ ವಂಶದ ಮರುಳಾರಾಧ್ಯರನ್ನು ತಮ್ಮ ಪೀಠದ ಉತ್ತರಾಧಿಕಾರಿಯನ್ನಾಗಿ ನೇಮಿಸಿದರು. ಶ್ರೀ ಮರುಳಾರಾಧ್ಯರು ಕಾಮಿತ ಫಲಗಳನ್ನು ನೀಡುವವರಾಗಿದ್ದರು. ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುತ್ತಿದ್ದರು. ಕುರುಬ ಅಮೋಘಸಿದ್ಧನಿಗೆ ಅನುಗ್ರಹ ನೀಡಿ ಆತನ ಗುರುವಾದರು.

ಸಿದ್ಧಮಲ್ಲೇಶ

ಶ್ರೀಜಗದ್ಗುರು ಸಿದ್ಧಮಲ್ಲೇಶ್ವರರು ತಪೋನಿಷ್ಠರಾಗಿದ್ದರು. ಭೀಕರ ಬರಗಾಲವಿದ್ದಾಗ ಮಳೆ ತರಿಸಿ ಮಳೆಮಲ್ಲೇಶ್ವರರೆಂದು, ಸಂತಾನವಿಲ್ಲದವರಿಗೆ ಸಂತಾನ ನೀಡಿ ಸಂತಾನ ಮಲ್ಲೇಶ್ವರರೆಂದು ಪ್ರಸಿದ್ಧಿ ಪಡಿದರು. ವಿಜಯನಗರದ ಅರಸ ಪ್ರೌಢರಾಯ ಇವರ ತಪಃ ಪ್ರಭಾವದಿಂದ ಶಿವಭಕ್ತನಾದ. ಪರಿಶಿಷ್ಟ ಜಾತಿಯ ಮಾರನನ್ನು ಮತ್ತು ಆತನ ತಂದೆಯನ್ನು ಅನುಗ್ರಹಿಸಿ ಸಾಮಾಜಿಕ ಸಮಾನತೆಯನ್ನು ತರಲು ಪ್ರಯತ್ನಿಸಿದರು. ಪೂಜ್ಯರು ಎಂಬತ್ತು ವರ್ಷಗಳವರೆಗೆ ಜೀವಂತವಾಗಿದ್ದರು. ಆದರೆ ಶ್ರೀಪೀಠದ ಪಟ್ಟವಲ್ಲರಿಯಲ್ಲಿ, ಸಿದ್ಧಪಂಡಿತರು, ಸಿದ್ಧನಾಥಶಿವಾಚಾರ್ಯರು ಮತ್ತು ಸಿದ್ಧಮಲ್ಲೇಶ್ವರರ ಹೆಸರುಗಳು ಉಕ್ತವಾಗಿಲ್ಲ.[೨೫]

ವಿರೂಪಾಕ್ಷ ಶಿವಾಚಾರ್ಯರು

ವಿರೂಪಾಕ್ಷ ಶಿವಾಚಾರ್ಯರು ಉಜ್ಜಯಿನಿ ಪೀಠದರ್ನೇ ಜಗದ್ಗುರುಗಳು. ಅವರು ಶಿವಗಂಗೆ, ನೆಲಮಂಗಲ, ತುಮಕೂರು, ಹೊಸಕೋಟೆ, ಬೆಂಗಳೂರು, ಮಾಗಡಿ, ಸಿನೀತಕಲ್ಲು ಮುಂತಾದ ಸ್ಥಳಗಳಿಗೆ ಸಂಚರಿಸಿ ಆ ಸ್ಥಳಗಳಲ್ಲಿ ಉಜ್ಜಯಿನಿಯ ಶಾಖಾ ಮಠಗಳನ್ನು ಸ್ಥಾಪಿಸಿದರು. ಅನ್ನದಾಸೋಹ, ಜ್ಞಾನದಾಸೋಹಗಳ ವ್ಯವಸ್ಥೆ ಕಲ್ಪಿಸಿದರು. ಇವರ ಸಮಾಧಿಯು ಕನ್ನಲಿ ಗ್ರಾಮದ ಮಹಾಂತರ ಮಠದಲ್ಲಿದೆ.[೨೬]

ಮಳಿಸ್ವಾಮಿ

ಒಂದು ಐತಿಹ್ಯದ ಪ್ರಕಾರ[೨೭] ಕೂಡ್ಲಿಗಿ ತಾಲೂಕಿನ ಮೊರಬ ಗ್ರಾಮದ ಶ್ರೀ ಮುಪ್ಪಿನಯ್ಯನವರ ಮನೆತನದ ಸುಮಾರು ೩೩ ಜನ ಉಜ್ಜಯಿನಿ ಪೀಠಕ್ಕೆ ಜಗದ್ಗುರುಗಳಾಗಿದ್ದರಂತೆ. ಅವರಲ್ಲಿ ಕರಡಿ ಮಳಿಸ್ವಾಮಿಯ ಇತಿಹಾಸ

ಸ್ವಾರಸ್ಯಕರವಾಗಿದೆ. ಶ್ರೀಪೀಠದ ಸನ್ನಿಧಿಗಳು ಸದರೀ ಮನೆಯಿಂದ ಒಬ್ಬರನ್ನು ಪಟ್ಟಕ್ಕೆ ನೀಡಲು ಅಪ್ಪಣೆ ಮಾಡಿದ್ದರಂತೆ. ಆಗಿನ ಶ್ರೀಪೀಠದ ಜಗದ್ಗುರುಗಳ ಹೆಸರು ತಿಳಿದು ಬಂದಿಲ್ಲ. ಈ ಸಂದರ್ಭದಲ್ಲಿ ಶ್ರೀ ಮುಪ್ಪಿನಯ್ಯನವರು ಶ್ರೀ ಮಳಿಸ್ವಾಮಿಯವರನ್ನು ಶ್ರೀಮಠಕ್ಕೆ ನೀಡಿದರಂತೆ. ಏಕೆಂದರೆ ಮನೆಯಲ್ಲಿ ಮಳಿಸ್ವಾಮಿಯು ಉಂಡಾಡಿ ಗುಂಡನಂತೆ ಅಲೆದಾಡುತ್ತಿದ್ದನಂತೆ.

ಅವರೊಬ್ಬ ನಿರಕ್ಷರಿಯಾಗಿದ್ದರೂ ಶ್ರೀಮಠಕ್ಕೆ ಜಗದ್ಗುರುಗಳನ್ನಾಗಿ ಪಟ್ಟಕಟ್ಟಿದರು. ಶ್ರೀ ಮಳಿಸ್ವಾಮಿಗಳಿಗೆ ಮುದ್ದೆ ಊಟ ತುಂಬಾ ಪ್ರಿಯ. ದಿನಂಪ್ರತಿ ಶಿವಪೂಜೆ ಮಾಡಿಕೊಂಡು ಮುದ್ದೆ ಊಟ ಮಾಡುತ್ತಿದ್ದರು. ಒಮ್ಮೆ ಶ್ರೀಮಠಕ್ಕೆ ಮಂಗಾಪುರದ ಭಕ್ತರು ಭೆಟ್ಟಿ ಇತ್ತಾಗ ಅವರ ಕಡೆಯಿಂದ ಬೆಲ್ಲದ ಪೆಂಟಿ ಶ್ರೀಮಠಕ್ಕೆ ಬಂದಿಲ್ಲವೆಂದು ಆರೋಪಿಸಿದರು. ಭಕ್ತರು ತಮ್ಮ ಗ್ರಾಮದಲ್ಲಿ ಆಲೆಗಾಣ ಆಡಲು ಕರಡಿಯೊಂದು ಕಿರುಕುಳ ಕೊಡುತ್ತಿದೆ ಎಂದು ನಿವೇದಿಸಿ ಅವರು ಮರಳಿ ಹೋದರು. ಮಾರನೇ ದಿನ ಬೆಳಿಗ್ಗೆ ಆ ಕರಡಿಯನ್ನು ಮಳಿಸ್ವಾಮಿಗಳು ಹಿಡಿದು ಶ್ರೀಮಠದ ಕಂಬಕ್ಕೆ ಕಟ್ಟಿ ಹಾಕಿದರು. ಕಟ್ಟಿದ ಆ ಕರಡಿಯನ್ನು ನೋಡಿ ಅಲ್ಲಿ ನೆರೆದ ಭಕ್ತರು ಭಯಭೀತರಾದರು. ಶ್ರೀಗಳವರು ಶಿವಪೂಜೆಯನ್ನು ಮುಗಿಸಿಕೊಂಡು ಮೂರು ಮುದ್ದೆಗಳನ್ನು ತೆಗೆದುಕೊಂಡು ಹೊರಗಡೆ ಬಂದು ಆ ಕರಡಿಗೆ ತಿನ್ನಿಸಿ ಆಲೆಗಾಣ ಆಡುವವರಿಗೆ ತೊಂದರೆ ಕೊಡಬಾರದೆಂದು ಬುದ್ಧಿವಾದ ಹೇಳಿ ಆ ಸ್ಥಳದಿಂದ ಅದನ್ನು ಬೇರೆಡೆಗೆ ಬಿಟ್ಟು ಬಿಟ್ಟರು. ಆ ದಿನದಿಂದ ಕರಡಿಯ ಕಾಟ ಮಂಗಾಪುರದಲ್ಲಿ ತಪ್ಪಿತು. ಸಂತಸಗೊಂಡ ಭಕ್ತರು ಸದರೀ ಗ್ರಾಮದಲ್ಲಿ ಆಲೆಗಾಣ ಆಡಿ ಬೆಲ್ಲದ ಪೆಂಟಿಯನ್ನು ಶ್ರೀಮಠಕ್ಕೆ ತಂದು ಒಪ್ಪಿಸಿದರು. ಈ ಕಾರಣದಿಂದ ಈ ಸ್ವಾಮಿಗಳಿಗೆ ಕರಡಿ ಮಳಿಸ್ವಾಮಿ ಎಂದು ಹೆಸರು ಬಂದಿತೆನ್ನುವರು. ಇದೂ ಅಲ್ಲದೇ ಶ್ರೀ ಪೀಠದಲ್ಲಿದ್ದ ಒಂದು ಭಾರವಾದ ಬೃಹತ್ ಕಲ್ಲು ಗುಂಡನ್ನು ಮೇಲಕ್ಕೆತ್ತಿ ಭಕ್ತರನ್ನು ಚಕಿತಗೊಳಿಸಿದ್ದರಂತೆ.

ಈ ಜಗದ್ಗುರುಗಳು ಶ್ರೀಮರುಳಸಿದ್ಧ ಜಗದ್ಗುರುಗಳಿಗಿಂತ ಪ್ರಾಚೀನರೆಂದು ಹೇಳುವರು. ಅವರ ಹೆಚ್ಚಿನ ವಿವರಗಳು ತಿಳಿದುಬಂದಿಲ್ಲ.

ಇದೇ ರೀತಿ ಮಾಜೀ ಲೋಕಸಭಾ ಸದಸ್ಯರಾದ ಶ್ರೀ ಅಳವಂಡಿ ಶಿವಮೂರ್ತಿ ಸ್ವಾಮಿಗಳ ಮನೆತನದಲ್ಲಿ ಪಲವರು ಈ ಪೀಠಕ್ಕೆ ಜಗದ್ಗುರುಗಳಾಗಿದ್ದರೆಂದು ಹೇಳುವರು. ಅವರ ಹೆಚ್ಚಿನ ಇತಿಹಾಸವನ್ನು ಇನ್ನೂ ಹುಡುಕಬೇಕಾಗಿದೆ.

ಅದೇ ರೀತಿ ತೂಲಹಳ್ಳಿ ಹಿರೇಮಠದ ವಂಶಸ್ಥರಲ್ಲಿ ನಾಲ್ವರು ಶ್ರೀಪೀಠದ ಜಗದ್ಗುರುಗಳಾಗಿದ್ದರೆಂದು ತಿಳಿಯಲಾಗಿದೆ. ಅವರಲ್ಲಿ ನಾಲ್ಕನೆಯವರು ಶ್ರೀಮಳೇಸ್ವಾಮಿಗಳು. ಅವರನ್ನು 'ಮಳೇಮಲ್ಲಿಕಾರ್ಜುನ ಸ್ವಾಮಿಗಳೆಂದು

ಕರೆಯುವರು. ಉಜ್ಜಯಿನೀ ಊರಿನ ಬದಿಯಲ್ಲಿ ಅವರ ಗದ್ದುಗೆ ಇದ್ದು ಮಳೆಯ ಅಭಾವದಲ್ಲಿ ಆ ಗದ್ದುಗೆಗೂ ಊರಿನ ದೈವಸ್ಥರು ಹಣ್ಣು-ಕಾಯಿಗಳನ್ನು ಸಮರ್ಪಿಸುವರು. ಈ ಕುರಿತು ಹೆಚ್ಚಿನ ಸಂಶೋಧನೆ ಆಗಬೇಕಾಗಿದೆ.

ಚೆನ್ನಬಸವಶಿವಾಚಾರ್ಯರು

ಮುಂದೆ ಉಜ್ಜಯಿನೀ ಸದ್ಧರ್ಮ ಪೀಠಾಧಿಪತಿಗಳಾಗಿ ಶ್ರೀಜಗದ್ಗುರು ಚೆನ್ನಬಸವ ಶಿವಾಚಾರ್ಯರು ನೇಮಕಗೊಂಡಿದ್ದು ಕಾಣುತ್ತದೆ. ಅವರು ಆನಂದ ಮೂರ್ತಿಗಳು. ಜನರಲ್ಲಿ ಶ್ರೀಪೀಠದ ಗೌರವವನ್ನು ಹೆಚ್ಚಿಸಿದರು. ಇವರ ಭವ್ಯವಾದ ಗದ್ದುಗೆ ಉಜ್ಜಯಿನಿಯ ಶ್ರೀಪೀಠದ ಮಠದ ಕಣದಲ್ಲಿ ಕಂಗೊಳಿಸುತ್ತಿದೆ.

ಚೆನ್ನವೀರಶಿವಾಚಾರ್ಯರು

ಶ್ರೀಪೀಠದ ಪಟ್ಟವಲ್ಲರಿಯ ಪ್ರಕಾರ ೧೦೩ನೇ ಪೀಠಾದೀಶ್ವರರು ಶ್ರೀ ಜಗದ್ಗುರು ಚೆನ್ನವೀರ ಶಿವಾಚಾರ್ಯರು.[೩೦] ಅವರು ಶಿವಪೂಜಾನಿಷ್ಠರು ಮತ್ತು ತಪೋನಿಧಿಗಳಾಗಿದ್ದರು. ಆಗಾಗ್ಗೆ ದೇಶಸಂಚಾರ ಮಾಡಿ ಜನರಲ್ಲಿ ಭಕ್ತಿ-ಭಾವಗಳನ್ನು ತುಂಬಿ ವೀರಶೈವ ಮತವನ್ನು ಜಾಗೃತಗೊಳಿಸಿದರು. ಶ್ರೀ ಚೆನ್ನವೀರ ಜಗದ್ಗುರುಗಳು ಸ್ಥಿರ-ಚರಪಟ್ಟಾಧ್ಯಕ್ಷರಾಗಿದ್ದರು. ಅವರ ಪೂರ್ವಜಗದ್ಗುರುಗಳು ಸಂಪಾದಿಸಿದ ಚಿನ್ನ, ಬೆಳ್ಳಿ, ಭೂಮಿ ಇತ್ಯಾದಿ ಆಸ್ತಿಪಾಸ್ತಿಯನ್ನು ಕಾಪಾಡಿಕೊಂಡರು. ''ಬಾಳೆಹಳ್ಳಿ ದೌಲತ್ತು, ಉಜ್ಜಯಿನಿ ಸಂಪತ್ತು'' ನೋಡೆಂಬ ನಾಣ್ಣುಡಿಯನ್ನು ಸಾರ್ಥಕಗೊಳಿಸಿದರು. ಮೂಲತಃ ಇವರು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ನಾಗರಕಟ್ಟೆ ಗ್ರಾಮದವರು. ಇಂದಿಗೂ ಶ್ರೀಮಹಾಸ್ವಾಮಿಗಳವರ ಸಂಬಂಧಿಗಳು ಈ ಭಾಗದಲ್ಲಿದ್ದಾರೆ. ಶ್ರೀ ಸನ್ನಿಧಿಗಳಿಗೆ ಶ್ರೀ ರಾಚೋಟಯ್ಯನೆಂಬವರು ಕಾರಭಾರಿಯಾಗಿದ್ದರು.

ಗುರುಸಿದ್ಧಶಿವಾಚಾರ್ಯರು

ಇವರು ೧೦೫ನೇ ಚರಪಟ್ಟಾಧ್ಯಕ್ಷರಾಗಿದ್ದರು. ಅವರು ಮಗಲಳ್ಳಿ ಎಂಬ ಗ್ರಾಮದ ಜಂಗಮ ಗುರು ವಂಶದಲ್ಲಿ ಜನಿಸಿ ವಿದ್ಯಾಭೂಷಿತರಾಗಿದ್ದರು. ಇವರ ನೇಮಕ ವಿಷಯ ತುಂಬಾ ಕುತೂಹಲಕಾರಿಯಾಗಿದೆ. ಅವರು ಭಕ್ತಿಪ್ರಿಯರು. ಭಕ್ತಿ ನೆಲೆಸಲು ಲೋಕ ಸಂಚಾರ ಮಾಡಿದರು. ಮೊದಲು ಗುರುಸಿದ್ಧಸ್ವಾಮಿಗಳು ಮೈಸೂರು ಸೀಮೆಯ ಶಂಭುಲಿಂಗ ಬೆಟ್ಟದಲ್ಲಿ (ಮೈಸೂರು ಜಿಲ್ಲೆ, ಕೊಳ್ಳೇಗಾಲ ತಾಲೂಕ) ಉಗ್ರ ತಪಸ್ಸನ್ನು ಆಚರಿಸಿ ಈ ಪ್ರದೇಶದ ಜನರಿಗೆ ಅಚ್ಚರಿಯನ್ನು ಮೂಡಿಸಿದರು. ಅವರಿಗೆ ಪಾದದ ತನಕ ಜಡೆಯಿದ್ದಿತು. ಅವರ ತಪಸ್ಸಿನ ಖ್ಯಾತಿಯನ್ನು ತಿಳಿದ ಮೈಸೂರಿನ ಅರಸ ಮುಮ್ಮಡಿ ಕೃಷ್ಣರಾಜ ಒಡೆಯರು ಶಂಭುಲಿಂಗ ಬೆಟ್ಟಕ್ಕೆ

ಹೋಗಿ ಪೂಜ್ಯರ ದರ್ಶನ ಪಡೆದುಕೊಂಡರು. ಉಭಯರು ಪರಸ್ಪರ ಯೋಗಕ್ಷೇಮವನ್ನು ವಿಚಾರಿಸಿದರು. ಮಹಾರಾಜರು ಗುರುಗಳಿಗೆ ತಮ್ಮ ಅರಮನೆಗೆ ದಯಮಾಡಿಸಲು ಪ್ರಾರ್ಥಿಸಿಕೊಂಡರು. ಗುರುಗಳು ಮಹಾರಾಜರ ಭಕ್ತಿಯ ವಿನಂತಿಗೆ ಸಂತಸಗೊಂಡರೂ ಸದ್ಯ ನಡೆದಿರುವ ತಪೋನುಷ್ಠಾನ ಕ್ರಿಯೆಗಳು ಪೂರೈಸುವವರೆವಿಗೂ ಬರಲು ಅವಕಾಶವಿಲ್ಲವೆಂದರು. ಆದರೂ ಮಹಾರಾಜರು ಪುನಃ ಪ್ರಾರ್ಥಿಸಿದರು. ಆಗ ಗುರುಗಳು ಸ್ವಲ್ಪ ಯೋಚಿಸಿ ಇನ್ನು ಮೂರು ತಿಂಗಳ ನಂತರ ತಮ್ಮ ಅರಮನೆಗೆ ಸಾಂಪ್ರದಾಯಿಕ ಸಿಬ್ಬಂದಿಯೊಡನೆ ದಯಮಾಡಿಸುವುದಾಗಿ ಅಪ್ಪಣೆಯಿತ್ತರು. ಇದಕ್ಕೆ ಸಂತೃಪ್ತಿಪಟ್ಟ ಮಹಾರಾಜರು, ಗುರುಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಮೈಸೂರಿಗೆ ಹಿಂದಿರುಗಿದರು.

ಮೂರು ತಿಂಗಳ ತಪೋನುಷ್ಠಾನ ಮುಗಿದ ನಂತರ ಗುರುಸಿದ್ಧಸ್ವಾಮಿಗಳು ಉಜ್ಜಯಿನಿ ಸದ್ಧರ್ಮ ಪೀಠಕ್ಕೆ ತೆರಳಿದರು. ಶ್ರೀ ಪೀಠದಲ್ಲಿ ಶ್ರೀ ಚೆನ್ನವೀರ ರಾಜದೇಶಿಕೇಂದ್ರ ಜಗದ್ಗುರುಗಳ ಪಾದಕ್ಕೆ ನಮಸ್ಕರಿಸಿ ಮೈಸೂರಿನ ಮಹಾರಾಜರ ಆಮಂತ್ರಣದ ವಿಷಯವನ್ನು ಅರಿಕೆ ಮಾಡಿಕೊಂಡರು. ಈ ವಿಷಯವನ್ನು ಕೇಳಿ ಶ್ರೀಮಹಾಸ್ವಾಮಿಗಳು ತುಂಬಾ ಆನಂದ ಭರಿತರಾದರು. ಆಗ ಶ್ರೀ ಜಗದ್ಗುರುಗಳು ಶ್ರೀಪೀಠಕ್ಕೆ ಶ್ರೀಗುರುಸಿದ್ಧಸ್ವಾಮಿಗಳು ಯೋಗ್ಯ ವಟುವೆಂದು ಭಾವಿಸಿ ಚತುರಾಚಾರ್ಯರನ್ನು, ರಾಜಮಹಾರಾಜರನ್ನು ಕರೆಸಿ ಅವರಿಗೆ ಶ್ರೀಪೀಠದ ಚರಪಟ್ಟಾಧಿಕಾರಿಯನ್ನಾಗಿ ನೇಮಿಸಿದರು. ಕೆಲವೇ ದಿವಸಗಳಲ್ಲಿ ಗುರುಸಿದ್ಧಸ್ವಾಮಿಗಳನ್ನು ದೇಶಸಂಚಾರಕ್ಕೆ ಕಳುಹಿಸಿದರು. ಅವರು ದೇಶ ಸಂಚರಿಸುತ್ತ ಶಿವಸಿದ್ಧಾಂತವನ್ನು ಉಪದೇಶಿಸುತ್ತಾ ಶಿವದೀಕ್ಷೆಯನ್ನು ನೀಡುತ್ತಾ ಮೈಸೂರು ನಗರವನ್ನು ತಲುಪಿ ರಾಜರಿಗೆ ತಮ್ಮ ಆಗಮನದ ಸಂದೇಶವನ್ನು ಕಳುಹಿಸಿದರು.

ಮೈಸೂರು ಮಹಾರಾಜರು ಮಹದಾನಂದದಿಂದ ರಾಜಮರ್ಯಾದೆಯೊಂದಿಗೆ ಶ್ರೀ ಗುರುಸಿದ್ಧಸ್ವಾಮಿ ಜಗದ್ಗುರುಗಳನ್ನು ನಗರ ದ್ವಾರದಲ್ಲಿ ಸಕಲ ಮರ್ಯಾದೆಗಳೊಂದಿಗೆ ಸ್ವಾಗತಿಸಿದರು. ಅರಮನೆಗೆ ಕರೆದೊಯ್ದು ರತ್ನಸಿಂಹಾಸನದಲ್ಲಿ ಕೂಡಿಸಿ ಪಾದಪೂಜೆ ಮಾಡಿದರು. ಶ್ರೀಗಳು ಅರಮನೆಯಲ್ಲಿ ಶಿವಪೂಜೆಯನ್ನು ನೆರವೇರಿಸಿ ಶಿವಸಿದ್ಧಾಂತವನ್ನು ಭೋಧಿಸಿದರು. ಆನಂದದಿಂದ ಮಹಾರಾಜರು ಪಟ್ಟೆಪಿತಾಂಬರಗಳನ್ನು, ರತ್ನಾಭರಣಗಳನ್ನು, ನಂದೀಧ್ವಜ, ಚಾಮರ ಮುಂತಾದ ವಸ್ತುಗಳನ್ನು ಕಾಣಿಕೆಯಾಗಿ ಅರ್ಪಿಸಿ ಆಶೀರ್ವಾದ ಪಡೆದರು.[೩೦] ಮೈಸೂರಿನಲ್ಲಿ ಒಂದು ಶಾಖಾಮಠವನ್ನು ಸ್ಥಾಪಿಸಬೇಕೆಂದು ಮಹಾರಾಜರು ಕೋರಿದರು. ಅದಕ್ಕೆ ಸಮ್ಮತಿಸಿ ಅರಮನೆಗೆ ಅನತಿ ದೂರದಲ್ಲೇ **ಅರಮನೆ ಜಪದ**

ಕಟ್ಟೆ ಮಠ ಎಂಬ ಶಾಖಾ ಮಠವನ್ನು ಸ್ಥಾಪಿಸಲಾಯಿತು. ಅಲ್ಲಿ ವೇದಾಧ್ಯಯನವನ್ನು ಆರಂಭಿಸಲಾಯಿತು. ಆ ಸಂಸ್ಥೆಯ ಈಗಿನ ಹೆಸರು ಶಂಕರ ವಿಲಾಸ ಸಂಸ್ಕೃತ ಪಾಠಶಾಲೆ. ಅಲ್ಲಿಂದ ಮುಂದೆ ಸಂಚರಿಸಿ ಅಲ್ಲಿ ಶಾಖಾ ಮಠಗಳನ್ನು ಸ್ಥಾಪಿಸಿ ಅವುಗಳಿಗೆ ಉಪಾಚಾರ್ಯರನ್ನು ನೇಮಿಸಿ ಹಿಂದಿರುಗಿದರು. ದೇಶಸಂಚಾರದ ತಮ್ಮ ಕಿರು ಸಾಧನೆಯನ್ನು ಉಜ್ಜಯಿನೀ ಜಗದ್ಗುರುಗಳಿಗೆ ನಿವೇದಿಸಿದರು. ಕಾಣಿಕೆಯನ್ನು ಗುರುಗಳಿಗೆ ಅರ್ಪಿಸಿದರು. ಈ ಮಠಗಳು ಉಜ್ಜಯಿನೀ ಸದ್ಧರ್ಮ ಪೀಠದ ಶಾಖಾಮಠಗಳಾಗಿವೆ.

ಮೂರು ತಿಂಗಳ ನಂತರ ಚರಪಟ್ಟವನ್ನು ತ್ಯಜಿಸಿ ಕೊಟ್ಟೂರು ನಗರದಲ್ಲಿ ದಾರುಕಾಶ್ರಮ ಸ್ಥಾಪಿಸಿ ಅಲ್ಲಿ ನೆಲೆಸಿದರು. ತಮ್ಮ ತಪೋದೃಷ್ಟಿಯಿಂದ ತಮ್ಮ ಅವಸಾನ ಕಾಲವು (ಅಂತ್ಯಕಾಲವು) ಹತ್ತಿರವಾಗಿರುವುದನ್ನು ಅರಿತರು. ಅಂತ್ಯಕಾಲದಲ್ಲಿ ಜೀವಂತ ಸಮಾಧಿಗೆ ವ್ಯವಸ್ಥೆ ಮಾಡಿಸಲು ಸ್ಥಳೀಯ ಭಕ್ತರಿಗೆ ಅಪ್ಪಣೆಯಿತ್ತರು. ಶ್ರೀಗಳು ಜೀವಂತ ಸಮಾಧಿ ಹೋಗುವುದು ಸರ್ಕಾರಕ್ಕೆ ಗೊತ್ತಾದ ತಕ್ಷಣ ಅದನ್ನು ಸರ್ಕಾರ ತಡೆಹಿಡಿಯಿತು. ಕೆಲಕಾಲ ಗತಿಸಿದ ಮೇಲೆ ಅವರು ಜೀವಂತ ಸಮಾಧಿ ಹೋಗುವುದನ್ನು ಭಕ್ತಾದಿಗಳಿಗೆ ತಿಳಿಸಿದರು. ದಾರುಕಾಶ್ರಮದಲ್ಲಿ ತಮ್ಮ ಯೋಗ ಸಮಾಧಿಯನ್ನು ಕೂಡ ವಿಧಿವತ್ತಾಗಿ ಸಿದ್ಧಪಡಿಸಿಕೊಂಡರು. ಕೊನೆಯ ದಿವಸ ಅವರ ಗುರುಗಳಾದ ಜಗದ್ಗುರು ಚೆನ್ನವೀರ ದೇಶೀಕೇಂದ್ರ ಮಹಾಸ್ವಾಮಿಗಳು ಆಗಮಿಸಿ ದರ್ಶನ ನೀಡಿ ಆಶೀರ್ವದಿಸಲೆಂದು ಆಶಿಸಿದರು. ಕೊಟ್ಟೂರಿನಿಂದ ನಾಲ್ಕು ಜನ ಭಕ್ತರನ್ನು ಉಜ್ಜಯಿನಿಗೆ ಕಳಿಸಲಾಯಿತು. ಶ್ರೀಪೀಠದ ಸನ್ನಿಧಿಯವರು ಶ್ರೀ ಗುರುಸಿದ್ಧಸ್ವಾಮಿಗಳಿಗೆ ಕೊನೆಯ ದರ್ಶನ, ಆಶೀರ್ವಾದ ನೀಡಲು ಕೊಟ್ಟೂರಿಗೆ ಆಗಮಿಸಬೇಕೆಂದು ಈ ಭಕ್ತರು ಅರಿಕೆ ಮಾಡಿಕೊಂಡರು.

ಆ ಸನ್ನಿಧಿಗಳು ಕೃಷಿಯಲ್ಲಿ ಅಗ್ರಗಣ್ಯರಿದ್ದು ಆ ಸಂದರ್ಭದಲ್ಲಿ ಹುಲ್ಲಿನ ಬಣವಿಗಳನ್ನು ಒಟ್ಟಿಸುತ್ತಾ ಕುಳಿತಿದ್ದರು. ಜಗದ್ಗುರುಗಳು, ಆ ಕೆಲಸ ಮುಗಿಸಿದ ನಂತರ ಕೊಟ್ಟೂರಿಗೆ ಆಗಮಿಸುವುದಾಗಿ ಹೇಳಿ ಕಳುಹಿಸಿದರು. ಆ ಭಕ್ತರು ಹಿಂದಿರುಗಿ ಬಂದು ಶ್ರೀ ಗುರುಸಿದ್ಧಸ್ವಾಮಿಗಳಿಗೆ ಅಲ್ಲಿಯ ವೃತ್ತಾಂತವನ್ನು ವರದಿ ಮಾಡಿದರು. ಅದನ್ನು ತಿಳಿದ ಶ್ರೀಗಳು ಕೋಪಗೊಂಡು ಅವರ ಮೇವಿನ ಬಣವಿ ಸುಟ್ಟು [illegible]ವಾಗಲೆಂದು ಶಪಿಸಿದರು.[೩೩] ತಮ್ಮ ಅಂತ್ಯಕಾಲದಲ್ಲಿ ಗುರುಗಳಿಲ್ಲದ ಬಳಿಕ [illegible]ರೇನೆಂದು ವ್ಯಥೆಪಟ್ಟರು. ತಾವು ನಿರ್ಧರಿಸಿದ ವೇಳೆಗೆ ಲಿಂಗಾರ್ಚನೆ ಮುಗಿಸಿ, ಜಂಗಮರಾಧನೆ ಮಾಡಿ, ಭಕ್ತರಿಗೆ ಅಂತ್ಯದರ್ಶನ ನೀಡಿ ಆಶೀರ್ವದಿಸಿ ಶಾಂತ ಮನಸ್ಕರಾಗಿ ತಾವು ಹೇಳಿದ ಸಮಯಕ್ಕೆ ಸರಿಯಾಗಿ ಸಮಾಧಿಗೆ ಹೋದರು. ಅವರ ಬ್ರಹ್ಮರಂದ್ರದಿಂದ ಆತ್ಮಜ್ಯೋತಿಯು ಹಾರಿ ಬಯಲಾಯಿತು. ಆ ಸಂದರ್ಭದಲ್ಲಿ

ಭಜನೆ ಮಾಡುತ್ತ ಭಕ್ತರು ಕುಳಿತಾಗ ಉಜ್ಜಯಿನಿಯಿಂದ ಜಗದ್ಗುರುಗಳು ಆ ಸ್ಥಳಕ್ಕೆ ಬಂಡಿ ಕಟ್ಟಿಸಿಕೊಂಡು ದಯಮಾಡಿಸಿದರು. ಆ ಮುಂಚೆಯೇ ಶ್ರೀ ಗುರುಸಿದ್ಧ ಸ್ವಾಮಿಗಳು ಯೋಗ ಸಮಾಧಿಗೆ ಹೋದ ವಿಷಯ ಕೇಳಿ ವ್ಯಥೆಪಟ್ಟರು. ಬೆಳಕು ಹರಿಯುವುದರಲ್ಲಿ ಉಜ್ಜಯಿನಿಯಿಂದ ಜನ ಬಂದು ಅವರು ಹಾಕಿಸಿದ ಮೇವಿನ ಬಣವಿ ಸುಟ್ಟು ಹೋಯಿತೆಂದು ಹೇಳಿದರು. ಈ ವಾರ್ತೆಯನ್ನು ಕೇಳಿ ಮನಸ್ಸಿಗೆ ಇನ್ನಷ್ಟು ನೋವುಂಟಾಯಿತು. ಮುಂದೆ ಶ್ರೀ ಜಗದ್ಗುರುಗಳು ಲಿಂಗೈಕ್ಯ ಗುರುಸಿದ್ಧ ಸ್ವಾಮಿಗಳ ಗಣಾರಾಧನೆಯನ್ನು ಅಲ್ಲಿ ವಿಜೃಂಭಣೆಯಿಂದ ನೆರವೇರಿಸಿದರು.

ಶ್ರೀ ಗುರುಸಿದ್ಧ ಸ್ವಾಮಿಗಳು ಗತಿಸಿದ್ದರಿಂದ ಶ್ರೀ ಜಗದ್ಗುರು ಚನ್ನವೀರರಾಜ ದೇಶಿಕೇಂದ್ರ ಮಹಾಸ್ವಾಮಿಗಳು ಚಿಂತಾಕ್ರಾಂತರಾದರು. ಕೂಡ್ಲಿಗಿ ತಾಲೂಕಿನ ಅಮ್ಮನಕೆರೆ ಗ್ರಾಮದ ಕೂಡ್ಲಿಮಠ ಮನೆತನದ ಒಬ್ಬ ವಿದ್ಯಾವಂತ ಜಂಗಮ ವಟುವಿಗೆ ಚರಪಟ್ಟಾಧಿಕಾರವನ್ನಿತ್ತು ಅವರಿಗೆ ಶ್ರೀ ಜಗದ್ಗುರು ಮರುಳಸಿದ್ಧರಾಜ ದೇಶಿಕೇಂದ್ರ ಸ್ವಾಮಿಗಳೆಂದು ಹೆಸರನ್ನಿಟ್ಟರು.

ಶ್ರೀ ಚನ್ನವೀರರಾಜ ಜಗದ್ಗುರುಗಳು ದೇಶಸಂಚಾರ ಮಾಡುತ್ತ ಒಮ್ಮೆ ಕೋಲಾರ ಸೀಮೆಯ ಗೌರಿಬಿದನೂರು ತಾಲೂಕಿನ ತರದಾಳು ಗ್ರಾಮಕ್ಕೆ ದಯಮಾಡಿಸಿದರು. ಅಲ್ಲಿನ ಹವಾಮಾನ ದೇಹಕ್ಕೆ ಒಗ್ಗದ ಕಾರಣ ಅವರು ಅಲ್ಲಿಯೇ ಲಿಂಗೈಕ್ಯರಾದರು. ಪೂಜ್ಯರ ಲಿಂಗೈಕ್ಯ ವಿಷಯ ತಿಳಿದು ನೂತನ ಜಗದ್ಗುರುಗಳು ತರದಾಳು ಗ್ರಾಮಕ್ಕೆ ಆಗಮಿಸಿ ತಮ್ಮ ಗುರುಗಳ ಉತ್ತರಕ್ರಿಯೆಗಳನ್ನು ಪೂರೈಸಿದರು.

ಶ್ರೀ ಮರುಳಸಿದ್ಧರಾಜ ದೇಶೀಕೇಂದ್ರ ಸ್ವಾಮಿಗಳು

ಪಟ್ಟವಲ್ಲರಿಯ ಪ್ರಕಾರ ಶ್ರೀಪೀಠದ ೧೦೬ನೇ ಜಗದ್ಗುರುಗಳಾಗಿ ಶ್ರೀ ಮರುಳಸಿದ್ಧಸ್ವಾಮಿಗಳು ನೇಮಕಗೊಂಡರು. ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಅಮ್ಮನಕೆರೆ ಗ್ರಾಮದ ಕೊಡ್ಲಿಮಠ ಮನೆತನದವರಾಗಿದ್ದ ಶ್ರೀಮಹಾಸ್ವಾಮಿಗಳು ವಿದ್ಯಾವಂತರು, ರಾಜದರ್ಪದವರು, ವಾಗ್ಮಿಗಳು, ಧೈರ್ಯಶಾಲಿಗಳು, ಶಿವಪೂಜಾಲೋಲರು, ಶಿವಾನುಭವ ನಿರತರು, ಶಾಸ್ತ್ರಾರ್ಥ ನಿಪುಣರು ಮತ್ತು ಒಳ್ಳೆಯ ಬರಹಗಾರರು. ಯೋಗದಲ್ಲಿ ಪರಿಣಿತಿ ಪಡೆದಿದ್ದರು. ವೀರಶೈವ ಸಿದ್ಧಾಂತದಲ್ಲಿ ಪಂಡಿತರು. ಪೂಜ್ಯರು ಚರಪಟ್ಟಾಧ್ಯಕ್ಷರಾಗಿದ್ದರು. ವೀರಶೈವ ಧರ್ಮವನ್ನು ಸುಧಾರಿಸಲು ಹೆಚ್ಚು ಶ್ರಮಿಸಿದರು. ಕೊಟ್ಟೂರಿನ ನೇಕಾರ ಸಮಾಜಕ್ಕೆ ಪ್ರಥಮವಾಗಿ ಲಿಂಗದೀಕ್ಷೆ ನೀಡಿದರು. ಅವರ ಸಂಗಡ ಸದಾ ೩೦ ಜನ ಭಕ್ತರಿರುತ್ತಿದ್ದು, ಅವರಿಗೆಲ್ಲ ಪ್ರತಿನಿತ್ಯ ಶಿವಾನುಭವ ಹೇಳುತ್ತಿದ್ದರು. ಅವರು **ಶಿಷ್ಯ ಸಂತಾಪಹರಣ, ಶಿವಾನುಭವ, ಪತಂಜಲಿಯೋಗಶಾಸ್ತ್ರ** ಗ್ರಂಥಗಳನ್ನು ರಚಿಸಿದರು.[೩೪] ಶ್ರೀಪೀಠದ ಆಡಳಿತ ವ್ಯವಸ್ಥೆಗೆ ಹೊಸ ಆಯಾಮಗಳನ್ನು ನೀಡಿದರು.

ಶ್ರೀ ಮರುಳಸಿದ್ಧ ಜಗದ್ಗುರುಗಳು ಸ್ವತಃ ಸುವರ್ಣ ತಯಾರಿಸುವುದರಲ್ಲಿ ನಿಪುಣರಾಗಿದ್ದರು. ಸುವರ್ಣ ತಯಾರಿಸಲು ಶ್ರೀಮಠದಲ್ಲಿ ಒಂದು ಕುಲುಮೆ ಇಟ್ಟಿದ್ದರು. ಆ ಕುಲುಮೆ ಶ್ರೀಪೀಠದ ಒಂದು ಕೋಣೆಯಾಗಿ ಪರಿವರ್ತನೆ ಹೊಂದಿದೆ. ಸುವರ್ಣವನ್ನು ದಿನಕ್ಕೆ ಮೂರು ಸಲ ರಸಸಿದ್ಧಿಯೋಗದಿಂದ ಕಲ್ಲುಪತ್ರೆಗಳನ್ನು ಹರಿದು ತಿಂಗಳ ನಂತರ ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಾಯಂಕಾಲ ಅದನ್ನು ಮಣ್ಣಿನ ಮೂಸೆಯಲ್ಲಿ ಹಾಕಿ ಅದರಿಂದ ಸುವರ್ಣವನ್ನು ತಯಾರಿಸುತ್ತಿದ್ದರೆಂದು ಸ್ಥಳಿಕರು ಹೇಳುತ್ತಾರೆ. ಆ ಸುವರ್ಣದಲ್ಲಿ ಶೇಕಡಾ ೪೦% ಒರೆಯಾಗಿ ಬಂಗಾರದ ಅಂಗಡಿಯಲ್ಲಿ ವ್ಯವಹಾರ ನಡೆಯುತ್ತಿತ್ತು. ಈ ಸುವರ್ಣ ತಯಾರಿಸುವ ಕುರಿತು ಮದ್ರಾಸ್ ಉಚ್ಚನ್ಯಾಯಾಲಯದಿಂದಲೂ ಸಮ್ಮತಿ ದೊರೆತಿತ್ತಂತೆ! ಆಶ್ಚರ್ಯಕರ ಸಂಗತಿಯೆಂದರೆ ಒಂದು ಸಲ ಈ ಸುವರ್ಣದಿಂದ ಆಭರಣ ತಯಾರಾದ ನಂತರ ಮತ್ತೊಮ್ಮೆ ಅದನ್ನು ಮುರಿದು ಆಭರಣ ತಯಾರಿಸಲು ಬರುತ್ತಿರಲಿಲ್ಲ![೨೫]

ಶ್ರೀಪೂಜ್ಯರ ಮನೆತನಕ್ಕೆ ಕೊಡ್ಲಿಮಠ ಎಂಬ ಹೆಸರು ಬರಲು ಒಂದು ಐತಿಹ್ಯವಿದೆ. ಅರಸನೊಬ್ಬ ಶ್ರೀಗುರುಗಳ ಪೂರ್ವಜನೊಬ್ಬನಿಗೆ ಏನು ಬೇಕೆಂದು ಕೇಳಿದನಂತೆ. ಆಗ ಆ ವಂಶದ ಪೂರ್ವಜ ಬೆತ್ತ ಬೀಸಿದನಂತೆ. ಆ ಕಾರಣದಿಂದ ಆ ಅರಸ ಅವರಿಗೆ ಬಂಗಾರದ ಕೊಡ್ಲಿಯನ್ನೇ ನೀಡಿದನಂತೆ. ಇದರಿಂದ ಈ ಮನೆತನಕ್ಕೆ ಕೊಡ್ಲಿಮಠ ಎಂದು ಹೆಸರು ಬಂದಿತು.

ಸ್ಥಿರ-ಚರಸ್ವಾಮಿಗಳ ನೇಮಕ

ಶ್ರೀಪೀಠದ ಆಡಳಿತಾಭಿವೃದ್ಧಿಗೊಳಿಸಲು ಸ್ಥಿರಪಟ್ಟ ಮತ್ತು ಚರಪಟ್ಟವೆಂಬೆರಡು ಅಧಿಕಾರ ಸ್ಥಾನಗಳನ್ನು ಪಟ್ಟವಲ್ಲರಿಯಲ್ಲಿ ಆರಂಭಿಸಿದರು. ಸ್ಥಿರಪಟ್ಟದ ಮಹಾಸ್ವಾಮಿಗಳು ಸದಾ ಶ್ರೀಪೀಠದಲ್ಲಿದ್ದು ದರ್ಶನಕ್ಕೆ ಬರುವ ಭಕ್ತಾದಿಗಳಿಗೆ ಆಶೀರ್ವಾದ, ಆದರಾತಿಥ್ಯ ನೀಡಿ ಧರ್ಮೋಪದೇಶಗೈದು ಶಿವಪೂಜಾನಂದಲೋಲರಾಗಿರಬೇಕು. ಚರಪಟ್ಟದ ಮಹಾಸ್ವಾಮಿಗಳು ಶ್ರೀಪೀಠದ ಸಿಬ್ಬಂದಿಯೊಡಗೂಡಿ ದೇಶಸಂಚಾರ ಕೈಗೊಂಡು ಧರ್ಮೋಪದೇಶ ನೀಡಬೇಕು. ಆಂದೋಲಿಕಾಮಹೋತ್ಸವಾದಿಗಳನ್ನು ಜರುಗಿಸುತ್ತ ಮಠಸಂಬಂಧ ವ್ಯಾಜ್ಯಗಳ ವಿಚಾರಣೆ ನಡೆಸಿ ತೀರ್ಮಾನಗಳನ್ನು ಕೊಡುತ್ತ, ಗುರುದರ್ಶನ ಮತ್ತು ಅಪರಾಧ ಕಾಣಿಕೆಗಳನ್ನು ಸ್ವೀಕರಿಸುತ್ತ, ಸಮಾಜದ ಏಳ್ಗೆ ಬಗ್ಗೆ ಸತ್ಕಾರ್ಯಗಳನ್ನು ಏರ್ಪಡಿಸುವುದು ಅತ್ಯವಶ್ಯವಾಗಿದ್ದಿತು.[೨೬]

ಈ ಸಂಕಲ್ಪದ ಮೇರೆಗೆ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ತುಂಬರಗುದ್ದಿ ಗ್ರಾಮದ ಬ್ರಹನ್ಮಠಾಧಿಕಾರಿಗಳಾಗಿದ್ದ ಶ್ರೀ ವಿರುಪಾಕ್ಷ ಶಾಸ್ತ್ರಿಗಳೆಂಬವರಿಗೆ ಶಾಲಿವಾಹನ ಶಕೆ ೧೮೨೮ರ ಪರಾಭವ ಸಂ|| ವೈಶಾಖ ಬ|| ೫ರಂದು

ಸ್ಥಿರಪಟ್ಟಾಧಿಕಾರವನ್ನು ಅನುಗ್ರಹಿಸಿದರು. ಅದೇ ಮಿತಿಯಲ್ಲಿ ಚಿತ್ರದುರ್ಗ ಜಿಲ್ಲೆಯ ಜಗಳೂರು ತಾಲೂಕಿನ ಬಂಗಾರನಾಯಕನಹಳ್ಳಿ ಹಿರೇಮಠದ ಶ್ರೀ ಸಿದ್ಧಲಿಂಗಾರ್ಯರೆಂಬವರಿಗೆ ಚರಪಟ್ಟಾಧಿಕಾರವನ್ನು ಅನುಗ್ರಹಿಸಿದರು. ಸ್ಥಿರಪಟ್ಟದವರಿಗೆ ಶ್ರೀಚೆನ್ನಬಸವಶಿವಾಚಾರ್ಯ ಸ್ವಾಮಿಗಳೆಂದು ಮತ್ತು ಚರಪಟ್ಟದವರಿಗೆ ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳೆಂದು ನಾಮಕರಣ ಮಾಡಿದರು.[೩೭]

ದಾರುಕಾಶ್ರಮ

ತದನಂತರ ಶ್ರೀ ಮರುಳಸಿದ್ಧಸ್ವಾಮಿಗಳು ತಮ್ಮ ವಾಸತಾಣವನ್ನು ಕೊಟ್ಟೂರಿಗೆ ವರ್ಗಾಯಿಸಿದರು. ಅಲ್ಲಿಯ ಗುರುಸಿದ್ಧಸ್ವಾಮಿಗಳ ಜೀವಂತ ಸಮಾಧಿ ಸಂಕೀರ್ಣದಲ್ಲಿ ದಾರುಕಾಶ್ರಮವನ್ನು ಕಟ್ಟಿಕೊಂಡು ವಾಸಮಾಡತೊಡಗಿದರು.

ಗುರುಸಿದ್ಧಸ್ವಾಮಿಯ ಗದ್ದುಗೆಯ ಮುಂದಿನ ಭಾಗವನ್ನು ಕಟ್ಟಿಸಿದರು. ಅದರ ಬದಿಗೆ ಒಂದು ಬೃಹದಾಕಾರದ ಮಹಲನ್ನು (ಭವನ) ಕಟ್ಟಲು ಕಾರಣರಾದರು. ಈ ಮಹಲನ್ನು ಒಂದು ಚರ್ಚ್ ಮಾದರಿಯಲ್ಲಿ ನಿರ್ಮಿಸಲಾಯಿತು. ಈ ಕಟ್ಟಡಕ್ಕೆ ಒಂದು ಉಪ್ಪರಿಗೆಯಿದೆ. ಅದಕ್ಕೆ ಒಂದು ವಿಶಾಲವಾದ ಕೋಣೆಯಿದೆ. ಅದರ ಬದಿಗಿನ ಗೋಡೆಗಳಲ್ಲಿ ಸಾಲಾಗಿ ಅನೇಕ ಕಿಡಕಿಗಳನ್ನು ಅಳವಡಿಸಲಾಗಿದೆ. ಆ ಮಹಲನ್ನು ಹತ್ತಲು ಅದರ ಉತ್ತರದ ಅಂಚಿನಲ್ಲಿ ಕೆಳಗಿನಿಂದ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಈ ಮಹಲನ್ನು ಇಟ್ಟಿಗೆ ಮತ್ತು ಗಾರೆಯಿಂದ ಕಟ್ಟಲಾಗಿದೆ. ಈ ಕಟ್ಟಡದ ಕೆಳಭಾಗದಲ್ಲಿ ವಿವಿಧ ಕೋಣೆಗಳಿದ್ದು ಅವುಗಳಲ್ಲಿ ಶಿವಪೂಜಾಕೋಣೆ, ಸ್ನಾನದ ಕೋಣೆ ಮತ್ತು ಅಡಿಗೆ ಕೋಣೆಗಳು ಮುಖ್ಯವೆನಿಸಿವೆ. ಮೇಲಿನ ಅಂತಸ್ತು ಶ್ರೀ ಸ್ವಾಮಿಗಳ ದರ್ಬಾರ ಮತ್ತು ಮಲಗುವ ಕೋಣೆಯಾಗಿತ್ತು. ಅಲ್ಲಿಯ ಒಂದು ದೊಡ್ಡ ನಿಲುಗನ್ನಡಿ ಮತ್ತು ಮಂಚ ತುಂಬಾ ಆಕರ್ಷಣೀಯವಾಗಿವೆ. ಈಗ ಅವುಗಳನ್ನು ಸ್ಥಳಾಂತರಿಸಲಾಗಿದೆ. ಈ ಆಶ್ರಮಕ್ಕೆ ಸುತ್ತಲೂ ವಿಸ್ತಾರವಾದ ೧೪ ಎಕರೆ ಭೂಮಿಯಿದೆ. ಅಲ್ಲಿ ಹೂವಿನ ತೋಟ, ಹುಣಸೆ, ಬೇವು ಇತ್ಯಾದಿ ಮರಗಳಿವೆ.

ಪೂಜ್ಯರ ದೇಹಕ್ಕೆ ಕಾಯಿಲೆ ತಗುಲಿತು. ಚಿಕಿತ್ಸೆಯಿಂದ ಗುಣವಾಗಲಿಲ್ಲ. ಈ ಆಶ್ರಮದಲ್ಲಿಯೇ ಶಕ ೧೮೫೨ ಪ್ರಮೋಧೂತ ಸಂವತ್ಸರದ ಆಶ್ವೀಜ ಬಹುಳ ೧೦ ರಂದು ತಾ. ೧೭-೧೦-೧೯೩೦ ಶುಕ್ರವಾರ ಶ್ರೀಗಳು ಲಿಂಗೈಕ್ಯರಾದರು. ಈ ಸಂದರ್ಭದಲ್ಲಿ ಕೊಟ್ಟೂರು ನಗರದಲ್ಲಿ ವೈಭವದಿಂದ ಅವರ ಪಾರ್ಥಿವ ಶರೀರದ ಮೆರವಣಿಗೆ ಜರುಗಿತು. ಕೊನೆಗೆ ಗುರುಸಿದ್ಧಸ್ವಾಮಿಗಳ ಗದ್ದುಗೆಯ ಎದುರಿಗೆ ನೆಲಮಾಳಿಗೆಯಲ್ಲಿ ಶ್ರೀಸಿದ್ಧಲಿಂಗ ಜಗದ್ಗುರುಗಳ ಸಾನ್ನಿಧ್ಯದಲ್ಲೇ ಅಂತ್ಯಕ್ರಿಯೆ ನಡೆಯಿತು.[೩೮] ಅದನ್ನು ಅವರು ತಾವು ಜೀವಂತವಿದ್ದಾಗಲೇ ಕಟ್ಟಿಸಿಕೊಂಡಿದ್ದರು.

ಶ್ರೀ ಮರುಳಸಿದ್ಧಸ್ವಾಮಿಗಳ ಗದ್ದುಗೆಯು ನೆಲಮಾಳಿಗೆಯನ್ನು ಹೊಂದಿದೆ. ಅದರ ಒಳಗಡೆ ಶ್ರೀಸ್ವಾಮಿಗಳ ಮುಖವಾಡ ಮತ್ತು ಆವುಗೆಗಳಿವೆ. ಆ ನೆಲಮಾಳಿಗೆಯ ಮೇಲೆ ಸುತ್ತಲೂ ಕಬ್ಬಿಣದ ಕಟಾಂಜನವನ್ನು ಚೌಕಾಗಿ ನಿರ್ಮಿಸಲಾಗಿದೆ.

ಶ್ರೀ ಚೆನ್ನಬಸವಶಿವಾಚಾರ್ಯರು : *(ಚಿತ್ರ. ನಂ.೬)*

ಶ್ರೀಮಹಾಸ್ವಾಮಿಗಳು ಶ್ರೀಪೀಠದ ೧೦೭ನೇ ಜಗದ್ಗುರುಗಳಾಗಿ ನೇಮಕಗೊಂಡರು. ಸ್ಥಿರಪಟ್ಟಾಧ್ಯಕ್ಷರಾದ ಅವರು ಬಾಲ್ಯದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕನ್ನಡ ಮತ್ತು ತೆಲಗು ಭಾಷೆಗಳಲ್ಲಿ ಪಡೆದರು. ಬಳಿಕ ಕಾಶೀ ಕ್ಷೇತ್ರಕ್ಕೆ ಹೋಗಿ ಸಂಸ್ಕೃತ, ಪ್ರಾಕೃತ ವಿಷಯಗಳನ್ನು ಅಭ್ಯಾಸ ಮಾಡಿದರು. ೨೫-೩೦ನೇ ವಯಸ್ಸಿನವರಾಗಿದ್ದರೂ ವಿವಾಹವಾಗದೇ ಹಾಗೆ ಉಜ್ಜಯನಿ ಪೀಠಕ್ಕೆ ಪಟ್ಟಾಧಿಕಾರ ಪಡೆಯಬೇಕೆಂಬ ಸಂಕಲ್ಪದಿಂದ ಬ್ರಹ್ಮಚಾರಿಗಳಾಗಿ ಉಳಿದಿದ್ದರು. ಅವರ ಇಚ್ಛೆ ಕೈಗೂಡಿತು. ಕ್ರಿ.ಶ. ೧೯೦೬ರಲ್ಲಿ ಉಜ್ಜಯಿನೀ ಪೀಠಕ್ಕೆ ಸ್ಥಿರಪಟ್ಟಾಧ್ಯಕ್ಷರಾಗಿ ಅವರು ಅಧಿಕಾರ ಸ್ವೀಕರಿಸಿದರು. ಅವರು ಪಂಡಿತರೂ, ಮೇಧಾವಿಗಳೂ ಮತ್ತು ಸಮಾಜದ ಉದ್ಧಾರದಲ್ಲಿ ಅತ್ಯಂತ ಉತ್ಸುಕರೂ ಆಗಿದ್ದರು.

ಪೂಜ್ಯರು ಹರಪನಹಳ್ಳಿ ಪ್ರದೇಶದಲ್ಲಿ ಎರಡು-ಮೂರು ವರ್ಷ ಸಂಚಾರ ಮಾಡಿ ಧರ್ಮೋಪದೇಶಗೈದರು. ಬಳ್ಳಾರಿಯಲ್ಲಿ ಜರುಗಿದ ಐದನೇ ಅಖಿಲ ಭಾರತ ವೀರಶೈವ ಮಹಾಸಭೆಗೆ ಪ್ರಯಾಣ ಬೆಳೆಸಿದರು. ಶ್ರೀಗಳಿಗೆ ಈ ಮಹಾಸಭೆಯನ್ನು ಉಜ್ಜಯಿನಿ ಅಥವಾ ಕೊಟ್ಟೂರಿನಲ್ಲಿ ಏರ್ಪಡಿಸುವ ಆಶಯವಿತ್ತು. ಅದಕ್ಕಾಗಿ ಅವಿಶ್ರಾಂತವಾಗಿ ಶ್ರಮಿಸಿದರು. ಕೆಲವು ಕಾರಣಗಳಿಂದ ಅದು ಅಸಾಧ್ಯವಾಯಿತು. ಕೊನೆಗೆ ಕೊಟ್ಟೂರಿನ ಜಾಗಟಗೇರಿ ಮಿ। ಮ। ದೊಡ್ಡ ವೀರಪ್ಪಯ್ಯನವರ ಮುಖಾಂತ ಬಳ್ಳಾರಿಯಲ್ಲಿ ಏರ್ಪಡಿಸಲು ಕಾರಣರಾದರು. ಈ ಮಹಾಸಭೆಗೆ ಸೊಲ್ಲಾಪುರದ ಶ್ರೀ ವಾರದ ಮಲ್ಲಪ್ಪನವರು್ಠ ಅಧ್ಯಕ್ಷರಾಗಿದ್ದರು (ಡಿಸೆಂಬರ್ ೧೯೦೯). ಈ ಮಹಾಸಭೆಗೆ ಅಲ್ಪ ಸಿಬ್ಬಂದಿಯೊಡನೆ ಶ್ರೀಮಹಾಸ್ವಾಮಿಗಳು ಪ್ರಯಾಣ ಬೆಳೆಸಿದರು. ಹಾಗೂ ಈ ಮಹಾಧಿವೇಶನದಲ್ಲಿ ಮದ್ರಾಸ್ ವೀರಶೈವ ವಿದ್ಯಾವರ್ಧಕ ಸಂಘದ ಸ್ಥಾಪನೆಗಾಗಿ ಐದುಸಾವಿರ ಬೆಳ್ಳಿ ರೂಪಾಯಿಗಳನ್ನು ದೇಣಿಗೆ ನೀಡುವುದಾಗಿ ಹರಸಿದ್ದರು. ಪ್ರಯಾಣದ ಮಾರ್ಗದಲ್ಲಿ ಕಡೆಕೊಳ್ಳ ಎಂಬ ಗ್ರಾಮದಲ್ಲಿ ದುರ್ದೈವದಿಂದ ಅಕಸ್ಮಾತ್ ಲಿಂಗೈಕ್ಯರಾದರು. ಅತ್ತ ಬಳ್ಳಾರಿಯಲ್ಲಿ ನಡೆಯುತ್ತಿದ್ದ ಮಹಾಸಭೆಯು ಈ ವಿಷಯವನ್ನು ತಿಳಿದು ಅತೀವ ಶೋಕವನ್ನು ವ್ಯಕ್ತಪಡಿಸಿತು.

ಶ್ರೀ ಸಿದ್ಧಲಿಂಗ ಶಿವಾಚಾರ್ಯರು

ಶ್ರೀಪೀಠದ ವಂಶಾನು ಚರಿತೆಯ ಪ್ರಕಾರ ೧೦೮ನೇ ಚರಪಟ್ಟಾಧ್ಯಕ್ಷರಾಗಿ ಶ್ರೀಸಿದ್ಧಲಿಂಗ ಜಗದ್ಗುರುಗಳು ನೇಮಕಗೊಂಡರು. *(ಚಿತ್ರ. ನಂ.೭ ರಿಂದ ೧೦)*

ಶ್ರೀಸಿದ್ಧಲಿಂಗ ಜಗದ್ಗುರುಗಳನ್ನು ಕುರಿತು ಶ್ರೀವಿರೂಪಾಕ್ಷಶಾಸ್ತ್ರಿಗಳು ಮತ್ತು ಶ್ರೀ ಎಸ್.ಎಂ. ಚಂದ್ರಶೇಖರಯ್ಯನವರು ಬರೆದ ಕಿರುಕೃತಿಗಳು ಮಹತ್ವದ್ದಾಗಿವೆ.[೪೦]

ಶ್ರೀ ಸಿದ್ಧಲಿಂಗಶಿವಾಚಾರ್ಯರು ಚಿತ್ರದುರ್ಗ ಜಿಲ್ಲೆಯ ಜಗಳೂರು ತಾಲೂಕಿನ ಬಂಗಾರನಾಯಕನಹಳ್ಳಿಯ ಗುರುಸ್ಥಲ ಮಠದ ಶ್ರೀಚನ್ನಬಸವಾರ್ಯ ಮತ್ತು ಸೌ॥ ಗುರುಸಿದ್ದಾಂಬೆ ಎಂಬ ದಂಪತಿಗಳಿಗೆ ಶಾಲಿವಾಹನ ಶಕೆ ೧೮೧೨ನೇ ವಿಕೃತಿ ಸಂವತ್ಸರ ಮಾಘ ಬಹುಳ ಸಪ್ತಮಿ ಮಂಗಳವಾರ ರಾತ್ರಿ (ಕ್ರಿ.ಶ.೧೮೯೦) ಜನಿಸಿದರು. ಇನ್ನೊಂದೆಡೆ ಇವರು ಭಾನುವಾರ ಸಂಧ್ಯಾಕಾಲದಲ್ಲಿ ಜನಿಸಿದರೆನ್ನಲಾಗಿ ಶ್ರೀ ಚನ್ನಬಸವಾರ್ಯರನ್ನು ಚನ್ನಬಸವಯ್ಯನೆಂದೂ ಕರೆಯುತ್ತಿದ್ದರು. ಮಗುವಿಗೆ ಸಿದ್ಧಲಿಂಗಾರ್ಯ ಎಂದು ಹೆಸರನ್ನಿಟ್ಟರು. ಇವರಿಗೆ ಸಿದ್ಧಲಿಂಗಾ ಸ್ವಾಮಿ ಎಂದೂ ಕರೆಯುತ್ತಿದ್ದರು. ಮಾತುಮಾತಿಗೆ ಕೋಪಗೊಳ್ಳುವ ಈ ಬಾಲಕ ತಾನು ಹುಟ್ಟಿದ ಸ್ಥಳದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿದರು.

ಬಂಗಾರನಾಯಕನ ಹಳ್ಳಿಯ ಸಮೀಪ ಚಿಕ್ಕಗೊಂಡನ ಹಳ್ಳಿಯಲ್ಲಿ ಕೆಂಡಪ್ಪ ಸ್ವಾಮಿಗಳೆಂಬ ಲೀಲಾಪುರುಷರಿದ್ದರು. ಆ ಲೀಲಾಪುರುಷರ ದರ್ಶನವಾದಾಗ ಶ್ರೀಸಿದ್ಧಲಿಂಗಾರ್ಯರ ತಂದೆ ಕುದುರೆಯಿಂದ ಇಳಿದು ಗೌರವ ಸಲ್ಲಿಸಿದರು. ಆದರೆ ಸಿದ್ಧಲಿಂಗಾರ್ಯ ಮಾತ್ರ ವಂದನೆ ಸಲ್ಲಿಸಲಿಲ್ಲ. ಕುದುರೆಯಿಂದ ಕೆಳಗಡೆ ಇಳಿಯಲೇ ಇಲ್ಲ. ಆಗ ತಂದೆಯು ಆತನೊಬ್ಬ ಹಟಮಾರಿ ಹುಡುಗನೆಂದು ಹೇಳಿ ಕ್ಷಮಿಸಲು ಕೇಳಿಕೊಂಡರು. ಆದರೆ ಕೆಂಡಪ್ಪ ಸ್ವಾಮಿಗಳು ಹತ್ತಿರ ಬಂದು 'ಬೇಡಪ್ಪ ಇಳಿಯಬೇಡ ನೀನು ನನಗಿಂತ ದೊಡ್ಡವನಾಗುತ್ತೀ' ಎಂದು ಭವಿಷ್ಯ ನುಡಿದರು.

ಮುಂದೆ ಒಮ್ಮೆ ಚನ್ನಬಸಯ್ಯನವರು ಕುಟುಂಬ ಸಮೇತ ಸಿದ್ಧಲಿಂಗಾರ್ಯನನ್ನೂ ಕರೆದುಕೊಂಡು ಉಜ್ಜಯಿನಿ ಶ್ರೀ ಮರುಳಸಿದ್ಧಸ್ವಾಮಿಯ ತೇರಿಗೆ ಹೋದರು. ೧೩ ವರ್ಷ ತುಂಬಿದ್ದ ಶ್ರೀ ಸಿದ್ಧಲಿಂಗಾರ್ಯರಿಗೆ ಅಲ್ಲಿ ಶಿವದೀಕ್ಷಾ ಸಂಸ್ಕಾರವೂ ನಡೆಯಿತು. ಸ್ವಾಮಿಯ ದರ್ಶನ, ಉತ್ಸವ, ಜಗದ್ಗುರುಗಳವರ ಆಶೀರ್ವಾದ ಪಡೆದು ತಮ್ಮ ಊರಿಗೆ ಮರಳಿದರು.

ಉಜ್ಜಯಿನೀ ಪೀಠದ ಶ್ರೀ ಜಗದ್ಗುರು ಚರಪಟ್ಟಾಧ್ಯಕ್ಷ ಮರುಳಸಿದ್ಧ ರಾಜ ದೇಶಿಕೇಂದ್ರ ಸ್ವಾಮಿಗಳು ಸಂಚಾರದಲ್ಲಿ ಒಮ್ಮೆ ಬಂಗಾರನಾಯಕನ ಹಳ್ಳಿಗೆ ದಯಮಾಡಿಸಿದರು. ಭಸಿತ ರುದ್ರಾಕ್ಷಾಧಾರಣ, ತುಂಬಿದ ಮುಖ, ಹೊಳೆಯುವ ಕಣ್ಣುಗಳುಳ್ಳ ಯುವಕ ಸಿದ್ಧಲಿಂಗಾರ್ಯನ ಮೇಲೆ ಜಗದ್ಗುರುಗಳ ಕೃಪಾದೃಷ್ಟಿ ಬಿದ್ದಿತು. ಕೆಲಕಾಲ ಗತಿಸಿದ ಮೇಲೆ ಶ್ರೀ ಪೀಠದ ಜಗದ್ಗುರುಗಳು ಬಂಗಾರನಾಯಕನಹಳ್ಳಿಯಿಂದ ಆತನ ತಂದೆಯನ್ನೂ ಸಿದ್ಧಲಿಂಗಾರ್ಯರನ್ನೂ ಕರೆಸಿ,

ತಮ್ಮ ಮಗನನ್ನು ಶ್ರೀಪೀಠದ ಮಠಕ್ಕೆ ಒಪ್ಪಿಸುವಂತೆ ವಾಗ್ದಾನ ಪಡೆದುಕೊಂಡರು. ತದನಂತರ ಶ್ರೀಸಿದ್ಧಲಿಂಗಾರ್ಯರನ್ನು ಶ್ರೀಪೀಠಕ್ಕೆ ಜಗದ್ಗುರುಗಳನ್ನಾಗಿ ಪಡೆದುಕೊಂಡರು.

ಎರಡು ವರ್ಷಗಳ ತರುವಾಯ ಶ್ರೀ ಪೀಠದ ಪರಂಪರೆಯಂತೆ ಜಗದ್ಗುರುಗಳಾದ ಶ್ರೀ ಮರುಳಸಿದ್ಧ ಶಿವಾಚಾರ್ಯ ಮಹಾಸ್ವಾಮಿಗಳು ಶಾಲಿವಾಹನ ಶಕೆ ೧೮೨೮ನೇ ಪರಾಭವ ಸಂವತ್ಸರ ವೈಶಾಖ ಬಹುಳ ಪಂಚಮಿ ಭಾನುವಾರ ಉದಯದ ಶುಭಮುಹೂರ್ತದಂದು, ೧೬ ವರ್ಷದ ಶ್ರೀ ಸಿದ್ಧಲಿಂಗಾರ್ಯರಿಗೆ ಷಟ್‌ಸ್ಥಲ ಸಿದ್ಧಾಂತೋಪದೇಶವನ್ನು ಮಾಡಿಸಿ ವೇದೋಕ್ತ ಕ್ರಮವಾಗಿ ಪಟ್ಟಾಭಿಷೇಕ ಮಾಡಿ ಚರಪಟ್ಟಾಧ್ಯಕ್ಷರಾಗಿ ನೇಮಿಸಿದರು. ಉಜ್ಜಯಿನಿ ಶ್ರೀಪೀಠಕ್ಕೆ ಅಧಿಪತಿಗಳಾಗಿ ಬಂದ ಎಲ್ಲಾ ಸ್ವಾಮಿಗಳ ಉತ್ಸವ ಕೊಟ್ಟೂರಿನಲ್ಲಿ ಮೊದಲು ಜರುಗಬೇಕು. ಈ ಪರಂಪರೆಯಂತೆ ಕೊಟ್ಟೂರಿನಲ್ಲಿ ಅವರ ಮೊದಲ ಉತ್ಸವ ನಡೆಯಿತು. ಚರಪಟ್ಟವಾದ ಶ್ರೀಸಿದ್ಧಲಿಂಗಸ್ವಾಮಿಗಳಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸಲಾಯಿತು. ಶ್ರೀಸಿದ್ಧಲಿಂಗಜಗದ್ಗುರುಗಳ ಸಂಸ್ಕೃತ ಮತ್ತು ಶಾಸ್ತ್ರಗಳ ಅಭ್ಯಾಸ ಮೊದಲು ಗೊಂಡಬಾಳದ ವೇ. ಬಸವಪ್ಪಶಾಸ್ತ್ರಿಗಳಲ್ಲಿ ಮತ್ತು ಉಜ್ಜಯಿನಿಯ ವೇ.ಬಿ. ಎಂ.ಗುರುಸಿದ್ಧಶಾಸ್ತ್ರಿಗಳಲ್ಲಿ ನಡೆಯಿತು. ಕೊಂಗವಾಡ ಹೀರೇಮಠದ ವೀರಭದ್ರಶಾಸ್ತ್ರಿಗಳಲ್ಲಿ ತರ್ಕ, ವೇದಾಂತ, ವ್ಯಾಕರಣಶಾಸ್ತ್ರದ ಅಭ್ಯಾಸ ನಡೆಯಿತು. ಡಮಣಿ ಗಾಡಿಯಲ್ಲಿ ಸಂಚಾರ ಮಾಡುವಾಗಲೂ ಪಾಠಕ್ರಮ ನಡೆಯುತ್ತಿತ್ತು. ವೀರಶೈವಶಾಸ್ತ್ರವು ಶ್ರೀಪೀಠದ ಆಸ್ಥಾನ ವಿದ್ವಾಂಸರಾದ ಪಂ॥ ಶ್ರೀ ಉಮಚಗಿಯ ಮಳಿಮಠದ ವೇ॥ ಶಂಕರಶಾಸ್ತ್ರಿಗಳಿಂದ ಲಭಿಸಿತು. ವೀರಶೈವ ಧರ್ಮಗ್ರಂಥವಾದ ಶ್ರೀ ಸಿದ್ಧಾಂತ ಶಿಖಾಮಣಿಯನ್ನು ಅಭ್ಯಾಸ ಮಾಡಿ ಅದರ ತತ್ವಗಳನ್ನು ತಮ್ಮ ಅನುಷ್ಠಾನದಲ್ಲಿ ತಂದರು. ಪೂಜ್ಯರು ಶಿವಪೂಜೆ, ವೈರಾಗ್ಯಶೀಲದ ೧೬ ಸಾಧನೆಗಳನ್ನು ತುಂಬಾ ಆಸಕ್ತಿಯಿಂದ ನಡೆಸುತ್ತಿದ್ದರು. ಹಿರೇಹಡಗಲಿ ಪುರಾಣಿಕಮಠ ಶ್ರೀವಿರೂಪಾಕ್ಷಶಾಸ್ತ್ರಿಗಳೂ ಕೆಲವು ಕಾಲ ಪಾಠ ಹೇಳಿದರು.

ವೇದಾಂತದ ಮನನ, ಅನುಷ್ಠಾನ, ವ್ಯಾಕರಣ, ಸಾಹಿತ್ಯ, ಸಾಂಖ್ಯ, ಯೋಗ ಇತ್ಯಾದಿ ಶಾಸ್ತ್ರಗಳನ್ನು, ಶ್ರೀಕರಭಾಷ್ಯ, ಶ್ರೀಕಂಠಭಾಷ್ಯ, ಸಿದ್ಧಾಂತ ಶಿಖಾಮಣಿ ಮೊದಲಾದ ಅಧ್ಯಾತ್ಮಿಕ ಗ್ರಂಥಗಳನ್ನು ಶ್ರೀಮಹಾಸ್ವಾಮಿಗಳು ಅಧ್ಯಯನ ಮಾಡಿದರು.

ಶ್ರೀ ಪೀಠದ ನಂದೆ, ಭದ್ರೆ, ಸುರಭಿ, ಸುಶೀಲೆ ಮತ್ತು ಸುಮನೆ ಎಂಬ ಐದು ವರ್ಗಗಳ ಗೋವುಗಳನ್ನು ಸಂರಕ್ಷಿಸಿ ಅವುಗಳ ಪಂಚಾಮೃತದಿಂದ ಲಿಂಗಾಭಿಷೇಕವನ್ನು ಮಾಡುತ್ತಿದ್ದರು. ಅವುಗಳ ಸಗಣಿಯಿಂದ ವಿಭೂತಿಯನ್ನು

ತಯಾರಿಸಿ ಅದನ್ನು ತಾವೂ ಧರಿಸಿ ಇತರರಿಗೂ ಆ ವಿಭೂತಿಯನ್ನು ಧರಿಸಲು ಉಪದೇಶಿಸುತ್ತಿದ್ದರು.

ಅವರ ಪೂರ್ವಾಶ್ರಮದ ಹಡೆದ ತಾಯಿಯವರು ಶ್ರೀಪೀಠಕ್ಕೆ ಬಂದರೂ, ಅವರನ್ನು ಬಹಳ ದಿವಸ ಮಠದಲ್ಲಿ ಉಳಿಸಿಕೊಳ್ಳದೇ ಅಲ್ಲಿನ ಶಾಸ್ತ್ರಿಗಳ ಮೂಲಕ ತಮ್ಮ ತಾಯಿಗೆ ಒಂದು ಸೀರೆ ಕೊಡಿಸಿ ಉಣಿಸಿ ಕಳಿಸಲು ಹೇಳಿಬಿಡುತ್ತಿದ್ದರು. ಶ್ರೀಗಳು ತಮ್ಮ ತಾಯಿಗೆ ಮನನೊಂದು ಹೀಗೆ ಹೇಳಿದರಂತೆ: ''ಏನವ್ವ ಒಂದು ರೊಟ್ಟಿ ಕೊಟ್ಟು ನನ್ನನ್ನು ಸಾಕುವಷ್ಟು ತಾಕತ್ತು ನಿನಗಿರಲಿಲ್ಲವೇ'' ಈ ವಿಷಯವನ್ನು ಗಮನಿಸಿದರೆ ಶ್ರೀಪೀಠದಲ್ಲಿ ಅನೇಕ ಜಠಿಲ ಸಮಸ್ಯೆಗಳು ಅವರಿಗೆ ಎದುರಾಗಿದ್ದವೆಂದು ಅದರಿಂದ ಅವರು ತುಂಬಾ ನೊಂದುಕೊಂಡಿದ್ದರೆಂದು ತಿಳಿದುಬರುವುದು. ಅಂತವುಗಳನ್ನೆಲ್ಲ ತಮ್ಮ ತಪೋಭಲದಿಂದ ದೂರ ಮಾಡಿ ಶ್ರೀಪೀಠವನ್ನು ಅಭಿವೃದ್ಧಿ ಪಥದಲ್ಲಿ ಸಾಗಿಸಿದರು.

ಶ್ರೀಮಹಾಸ್ವಾಮಿಗಳಿಗೆ ನೀರಿನಲ್ಲಿ ಅನೇಕ ಗಂಟೆಗಳ ವರೆಗೆ ಈಜುವುದು, ಕುದುರೆ ಸವಾರಿ ಮಾಡುವುದು ಹಿತಕರವೆನಿಸಿತ್ತು. ಹಸುಗಳ ಸಾಕಾಣಿಕೆ ಸಂದರ್ಭ ಬಂದರೆ ದನಗಳನ್ನು ಕಾಯುವುದು, ಮೈಮರೆತು ವೀಣೆಯನ್ನು ನುಡಿಸುವುದು, ಪ್ರಿಯವೆನಿಸಿದ್ದವು. ಮಠಸ್ಥರ ಹಕ್ಕುಬಾಧ್ಯತೆಗಳ ವಿಚಾರಣೆಗಾಗಿ ಒಂದು ನ್ಯಾಯಾಲಯವನ್ನು ಮಠದಲ್ಲಿ ಸ್ಥಾಪಿಸಿದರು. ಶ್ರೀಪೀಠದಲ್ಲಿ ಆ ಮೊದಲೇ ಮಠಸ್ಥರ ಹಕ್ಕು ಬಾದ್ಯತೆಗಳ ವ್ಯಾಜ್ಯಗಳು ನಡೆಯುತ್ತಿದ್ದವು. ಈ ನ್ಯಾಯಾಲಯದ ಕುರಿತು ಹೆಚ್ಚಿನ ವಿಷಯವನ್ನು ಈ ಕೃತಿಯಲ್ಲಿ ಪ್ರತ್ಯೇಕವಾಗಿ ವಿವರಿಸಲಾಗಿದೆ. ಕುತೂಹಲಕರ ಸಂಗತಿಯೆಂದರೆ ತಪ್ಪಿತಸ್ಥನನ್ನು ದೈಹಿಕವಾಗಿ ಬಂಧಿಸಿ ಕಬ್ಬಿಣದ ಸರಳುಗಳ ಕೋಣೆಯಲ್ಲಿಡುವ ಪದ್ಧತಿಯನ್ನು ಆರಂಭಿಸಿ ಅದು ಗುರುಗಳಿಗೆ ಸೂಕ್ತವಲ್ಲವೆಂದು ಕೈಬಿಡಲಾಯಿತು.

ಮದ್ರಾಸ್ ವೀರಶೈವ ವಿದ್ಯಾವರ್ಧಕ ಫಂಡ್ ಸ್ಥಾಪಿಸಲು ಶ್ರೀಪೀಠದ ಸ್ಥಿರಪಟ್ಟಾಧ್ಯಕ್ಷ ಶ್ರೀಚೆನ್ನಬಸವಸ್ವಾಮಿಗಳು ಸ್ವತಃ ಐದು ಸಾವಿರ ಬೆಳ್ಳಿಯ ರೂಪಾಯಿಗಳ ವಾಗ್ದಾನ ಮಾಡಿ ಹರಸಿದ್ದರು. ಆದರೆ ಅವರು ಬಳ್ಳಾರಿಗೆ ಪ್ರಯಾಣ ಮಾಡುವಾಗ ದಾರಿಯಲ್ಲೇ ಲಿಂಗೈಕ್ಯರಾದರೆಂದು ಈ ಮೇಲೆ ತಿಳಿಸಲಾಗಿದೆ. ಈ ವಾಗ್ದಾನವನ್ನು ಚರಪಟ್ಟಾಧ್ಯಕ್ಷರಾಗಿದ್ದ ಶ್ರೀಸಿದ್ಧಲಿಂಗಶಿವಾಚಾರ್ಯಸ್ವಾಮಿಗಳು ಐದುಸಾವಿರ ಬೆಳ್ಳಿಯ ರೂಪಾಯಿಗಳನ್ನು ೧೬.೧೦.೧೯೧೬ರಲ್ಲಿ ನೀಡಿ ಪೂರ್ವಜರ ವಾಗ್ದಾನವನ್ನು ಈಡೇರಿಸಿದರು. ಅವರ ನೇತೃತ್ವದಲ್ಲಿ ೭.೩.೧೯೧೮ರಂದು ಬ್ರಿಟಿಶ್ ಸರಕಾರದ ಸೊಸೈಟಿ ರಜಿಸ್ಟ್ರೇಶನ್ ಆಕ್ಟ್ ೨೧/೧೮೬೦ರ ಪ್ರಕಾರ ಈ ವಿದ್ಯಾ ಸಂಸ್ಥೆ ಅಸ್ತಿತ್ವಕ್ಕೆ ಬಂದಿತು. ಈ ಸಂಸ್ಥೆ ದೊಡ್ಡದಾಗಿ ಬೆಳೆದು ಈಗ ೧೬ ಮುಖ್ಯ

ವಿದ್ಯಾಸಂಸ್ಥೆಗಳನ್ನು ನಡೆಸುತ್ತಿದೆ. ಹೀಗೆ ಶ್ರೀಗಳು ಬಳ್ಳಾರಿ ವಿದ್ಯಾವರ್ಧಕ ಸಂಘ ಸ್ಥಾಪನೆಗೆ ಕಾರಣರಾದರು. ಸೊಲ್ಲಾಪುರದಲ್ಲಿ ಶ್ರೀಮದ್ ವೀರಶೈವ ವಾರದ ಸಂಸ್ಕೃತ ಪಾಠಶಾಲೆಯು ಆರ್ಥಿಕ ಕೊರತೆಯಿಂದ ನಿಲ್ಲುವ ಸ್ಥಿತಿಗೆ ಬಂದಿತ್ತು. ಈ ಸಂಸ್ಥೆಗೂ ೫೦೦೦ ಬೆಳ್ಳಿಯ ರೂಪಾಯಿಗಳನ್ನು ಶ್ರೀಮಹಾಸ್ವಾಮಿಗಳು ಉದಾರವಾಗಿ ನೀಡಿದರು.

ಶ್ರೀಪೀಠದ ಮಠಗಳ ಹಕ್ಕುಬಾಧ್ಯತೆಯ ವ್ಯಾಜ್ಯಗಳು ಶ್ರೀಪೀಠದ ನ್ಯಾಯಾಲಯದಲ್ಲಿ ನ್ಯಾಯ ಪಡೆಯುತ್ತಿದ್ದವು. ಆಗ ಟಿ. ಹೆಚ್. ಎಂ. ಸಿದ್ಧಯ್ಯನವರು, ಬಿ. ಎಂ. ಗುರುಸಿದ್ಧಯ್ಯನವರು, ಕಾಳಾಪುರದ ಚೆನ್ನವೀರ ಶಾಸ್ತ್ರಿಗಳು ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸುತ್ತಿದ್ದರು. ತದನಂತರ ಕಾಲದಲ್ಲಿ ಈ ನ್ಯಾಯಾಲಯದಲ್ಲಿ ಶ್ರೀ ಐ. ಹೆಚ್. ಎಂ. ಬಸಯ್ಯನವರು ಮತ್ತು ಜೆ.ಹೆಚ್. ಎಂ.ತಿಪ್ಪೇಸ್ವಾಮಿಯವರು ವಕೀಲರಾಗಿ ಸೇವೆ ಸಲ್ಲಿಸಿದರು.

ಶ್ರೀಪೀಠದಲ್ಲಿ ಶ್ರೀಸಿದ್ಧಲಿಂಗ ಶಿವಾಚಾರ್ಯರ ಕಾಲದಲ್ಲಿ ಕೆಲವು ಕಲಹ-ವ್ಯಾಜ್ಯಗಳು ನಡೆದವು. ಜಗದ್ಗುರು ಶ್ರೀ ಮರುಳಸಿದ್ಧ ಮಹಾಸ್ವಾಮಿಗಳು ಮತೋನ್ನತಿಯ ಕಾರ್ಯಗಳನ್ನು ಮತ್ತು ಭಕ್ತರ ಸೂಚನೆಗಳನ್ನು ಕಡೆಗಣಿಸುತ್ತ ಸಮಾಜಕ್ಕೆ ಹಾನಿಕರವಾದ ಕಲಹದಲ್ಲಿ ಪ್ರವೇಶಿಸಿ ನಾನಾ ರೀತಿಯಿಂದ ಶ್ರೀ ಸಿದ್ಧಲಿಂಗ ಜಗದ್ಗುರುಗಳಿಗೆ ಕಿರುಕುಳವನ್ನು ಕೊಡತೊಡಗಿದರು. ಕೊನೆಗೆ ಇಬ್ಬರ ಸಂಬಂಧಗಳು ತುಂಬಾ ಹದಗೆಟ್ಟವು. ಅನಿವಾರ್ಯವಾಗಿ ಶ್ರೀ ಮರುಳಸಿದ್ಧಸ್ವಾಮಿಗಳ ವಿರುದ್ಧ ಕೋರ್ಟಿನಲ್ಲಿ ವ್ಯಾಜ್ಯವನ್ನು ಹೂಡಿ ಜಯವನ್ನು ಗಳಿಸಿಕೊಂಡರು. ಶ್ರೀ ಜಗದ್ಗುರು ಚೆನ್ನಬಸವ ಸ್ವಾಮಿಗಳು ಶಿವೈಕ್ಯರಾದ ಬಳಿಕ ಶ್ರೀ ಪೀಠಕ್ಕೆ ೮ರಿಂದ ೧೦,೦೦೦ ರೂಪಾಯಿಗಳ ಸಾಲದ ಹೊರೆ ಬಿದ್ದಿತು ಹಾಗೂ ನಿಂಬಲಗೆರೆ ಗ್ರಾಮದವರು ಮಾಡಿದ ಕೃತಕ ಪಟ್ಟದ ವ್ಯಾಜ್ಯ ಮತ್ತು ಇನ್ನಿತರ ಕೆಲವು ವ್ಯಾಜ್ಯಗಳು ಮುಖ್ಯವೆನಿಸಿವೆ. ಈ ವ್ಯಾಜ್ಯಗಳು ಶ್ರೀ ಸಿದ್ಧಲಿಂಗ ಜಗದ್ಗುರುಗಳ ಪರವಾಗಿ ತಾ. ೨೬.೮.೧೯೧೨ರಲ್ಲಿ ಬಳ್ಳಾರಿ ನ್ಯಾಯಾಲಯ ತೀರ್ಪು ನೀಡಿತು.

ಶ್ರೀಮಠದ ಮರುಳಸಿದ್ಧದೇವಾಲಯದ ಅರ್ಚಕರಿಂದ ಒಂದು ವ್ಯಾಜ್ಯ ನಡೆಯಿತು. ಆ ಅರ್ಚಕರು ಶ್ರೀಪೀಠಕ್ಕೆ ಅಧಿಕಾರಿಗಳನ್ನು ಆಯ್ಕೆ ಮಾಡುವುದು ತಮಗೆ ಸಂಬಂಧಿಸಿದ್ದೆಂದು ಉಚ್ಚನ್ಯಾಯಾಲಯಕ್ಕೆ ಹೋದರು. ಬಳ್ಳಾರಿ ನ್ಯಾಯಾಲಯವು ಶ್ರೀಮಹಾಸ್ವಾಮಿಗಳ ಪರವಾಗಿ ದಿನಾಂಕ ೨೯-೮-೧೯೧೨ರಲ್ಲಿ ತೀರ್ಪನ್ನು ನೀಡಿತು. ತೀರ್ಪಿನಲ್ಲಿ ಶ್ರೀಮಠದ ಪೂಜಾರಿಗಳನ್ನು ನೇಮಕ ಮಾಡುವುದು, ಶ್ರೀಪೀಠದ ಜಗದ್ಗುರುಗಳ ಇಚ್ಛೆಯೆಂದು ಸೂಚಿಸಿತು. ದುರದೃಷ್ಟವಶಾತ್ ಈ ಸಂದರ್ಭದಲ್ಲಿ

ಶ್ರೀ ಮರುಳಸಿದ್ಧ ಸ್ವಾಮಿಯ ಬಂಗಾರದ ಮುಖವಾಡವು ಕಳುವಾಯಿತಂತೆ.[೨೧] ಹೀಗೆ ಅನೇಕ ಕಲಹಗಳನ್ನು ಆಂತರಿಕವಾಗಿ ಮತ್ತು ಬಾಹ್ಯವಾಗಿ ಶ್ರೀಪೀಠ ಎದುರಿಸಬೇಕಾಯಿತು. ಅವುಗಳ ವಿರುದ್ಧ ನ್ಯಾಯಾಲಯಗಳ ಕಟ್ಟೆಯನ್ನು ಹತ್ತಿ ಶ್ರೀಸಿದ್ಧಲಿಂಗ ಜಗದ್ಗುರುಗಳು ಜಯಗಳಿಸಿದರು.

ಶ್ರೀಗಳವರು ಶ್ರೀಪೀಠಕ್ಕೆ ಸಲಹೆಗಾರರಾಗಿ ವ್ಯವಹಾರ ಮುಂತಾದವುಗಳನ್ನು ನಿರ್ವಹಿಸಲಿಕ್ಕೆ ಪಂಚಪ್ರಮುಖರ ಸಮಿತಿಯನ್ನು ರಚಿಸಿಕೊಂಡಿದ್ದರು. ೧) ಕೊಟ್ಟೂರು ಜಾಗಟಗೇರಿ ಮಿ.ಮ. ದೊಡ್ಡವೀರಪ್ಪಯ್ಯ, ೨) ಹರಪನಹಳ್ಳಿ ತಾ. ಬೆಟ್ಟನ ಗೌಡರು, ೩) ಉಚ್ಚಂಗಿ ದುರ್ಗದ ಎಂ. ಸಿದ್ಧನಗೌಡರು, ೪) ಹೊಳಗುಂದಿ ಶಾ. ಮುಂ. ಸಿದ್ಧಲಿಂಗಪ್ಪ ಮತ್ತು ೫) ಹೂವಿನಹಡಗಲಿ ಕೋರಿ ಗುರುಶಾಂತಪ್ಪ.

ಶ್ರೀ ಕಾಶೀ ಪೀಠದಲ್ಲಿ ದಿನಾಂಕ ೨೧.೨.೧೯೧೮ರಲ್ಲಿ ಪಂಚಾಚಾರ್ಯರ ಸಮ್ಮೇಳನವನ್ನು ನಡೆಸಲು ಶ್ರೀಗಳೇ ಕಾರಣರಾದರು. ಈ ಸಮ್ಮೇಳನದಲ್ಲಿ ಎಂಟು ಮುಖ್ಯ ವಿಷಯಗಳ ಬಗ್ಗೆ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು. ಬೀರೂರಿನಲ್ಲಿ ಅಖಿಲಭಾರತ ಒಂಬತ್ತನೇ ವೀರಶೈವ ಮಹಾಸಭೆ ಶ್ರೀಗಳ ಸಾನ್ನಿಧ್ಯದಲ್ಲಿ ದಿನಾಂಕ ೩೦-೧೨-೧೯೧೯ರಂದು ಜರುಗಬೇಕಾಗಿತ್ತು. ಕಾರಣಾಂತರದಿಂದ ಅದು ಪರಿವರ್ತನೆಗೊಂಡಿತು.

ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲಾ ಪ್ರದೇಶದಲ್ಲಿ ಶ್ರೀ ಸನ್ನಿಧಿಗಳು ಸಂಚರಿಸಿದರು. ***(ಚಿತ್ರ ಸಂ. ೧೧ ರಿಂದ ೧೨)*** ಬಳ್ಳಾರಿ ಪ್ರಾಂತದಲ್ಲಿ ಮಳೆಯಿಲ್ಲದೆ ಬರಗಾಲ ಕವಿದಿತ್ತು. ಶ್ರೀಗಳು ಬಳ್ಳಾರಿಯ ದಾರಿಯಲ್ಲಿ ಭಕ್ತರು ವಿನಂತಿಸಿದ ಮೇರೆಗೆ ಅಲ್ಲಿಗೆ ದಯ ಮಾಡಿಸಿದರು. ಅಲ್ಲಿ ಶ್ರೀಗಳು ರುದ್ರಾಭಿಷೇಕ, ಶಿವಪೂಜೆ, ಅನುಷ್ಠಾನ ಮತ್ತು ಅನ್ನ ಸಂತರ್ಪಣೆಗಳನ್ನು ತಾ. ೪.೮.೧೯೨೧ರಂದು ನೆರವೇರಿಸಿದರು. ***(ಚಿತ್ರ ಸಂ. ೧೩)*** ತಕ್ಷಣ ಮೂರು-ನಾಲ್ಕು ದಿವಸ ದೊಡ್ಡ ಮಳೆ ಬಂದಿತು. ಶ್ರೀಗಳ ಮಹಿಮೆಯ ಕೀರ್ತಿ ನಾಡಿನೊಳಗೆಲ್ಲ ಹಬ್ಬಿತು. ಈ ಪವಾಡವನ್ನು ಇಂದಿಗೂ ಬಳ್ಳಾರಿ ಜನತೆ ಮರೆತಿಲ್ಲ.

ಕಲ್ಲುಹೊಳೆ ಗ್ರಾಮದ ಮಠಾಧಿಕಾರಿಗಳಾದ ವೇ|| ಕಲ್ಲುಹೊಳೆಯಪ್ಪಯ್ಯನವರು ಶ್ರೀ ಪೀಠಕ್ಕೆ ಗಜದಾನ ಮಾಡಿದರು. ಮುಂಡರಗಿ ತಾಲೂಕಿನ ಸಿಂಗಟಾಲೂರಿಗೆ ಹೋಗುವಾಗ ತಮ್ಮ ಮಿತ ಪರಿವಾರದೊಂದಿಗೆ ಗಜಾರೋಹಣರಾಗಿ ಅಲ್ಲಿಯ ಹೊಳೆಯನ್ನು ದಾಟಿದರು. ಸೋಗಿಗ್ರಾಮದಲ್ಲಿ ಏಕಾಂತಜೀವನ, ಪೂಜಾ, ಅಭ್ಯಾಸಗಳಲ್ಲಿ ನಿರತರಾಗಿ ಸಂತೃಪ್ತಿಪಟ್ಟರು. ಶ್ರೀ ಸನ್ನಿಧಿಗೆ ಮೈಸೂರು ಸೀಮೆ ರಹದಾರಿ ಪರವಾನಿಗೆಯನ್ನು ಸರ್ಕಾರ ದಿನಾಂಕ ೧೧.೨.೧೯೨೫ರಲ್ಲಿ ನೀಡಿತು.[೨೨]

ಪೂಜ್ಯರು ಪಂಚಪೀಠಗಳು ಹೆಚ್ಚು ಪ್ರಸಿದ್ಧಿ ಪಡೆಯಬೇಕೆಂದೂ, ಗುರು ವರ್ಗದವರು ಸುಧಾರಿಸಿ ಪ್ರಸಿದ್ಧಿಗೆ ಬರಬೇಕೆಂದೂ, ವೀರಶೈವ ಸಮಾಜಾಭಿವೃದ್ಧಿಯಾಗಿ ಧರ್ಮ, ನೀತಿ, ಭಕ್ತಿ, ವಿಶ್ವಾಸ ಬೆಳೆಯಬೇಕೆಂದೂ ಅತ್ಯಂತ ಕಳಕಳಿಯಿಂದ ಹಗಲಿರುಳು ಶ್ರಮಿಸುತ್ತಿದ್ದರು. ಅವರ ಪ್ರಯತ್ನಗಳಿಗೆ ಸದಾ ಸಹಾಯವನ್ನು ನೀಡಲು ನಾಗನೂರಿನ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳು ಸಿದ್ಧರಿರುತ್ತಿದ್ದರು.***(ಚಿತ್ರ, ಸಂ. ೧೪)*** ಬಹುದಿನಗಳಿಂದ ಕರ್ನಾಟಕಕ್ಕೆ ಆಗಮಿಸದೆ ಇದ್ದ ಕೇದಾರ ಪೀಠದ ಜಗದ್ಗುರು ಶ್ರೀ ವಿಶ್ವಲಿಂಗ ಶಿವಾಚಾರ್ಯರನ್ನು ಶ್ರೀಮಹಾಸ್ವಾಮಿಗಳು ಬರಮಾಡಿಕೊಂಡರು. ಅವರ ಉತ್ಸವಾದಿಗಳಿಗೆ ಅನೇಕ ರೀತಿಯಲ್ಲಿ ಸಹಾಯ ಮಾಡಿದರು. ಉಜ್ಜಯಿನಿಯಲ್ಲಿ ಅವರ ಅಂತ್ಯಾವಸ್ಥೆಯ ಸಮಯ ಬೇಗನೆ ಒದಗುವದೆಂಬ ಭೀತಿಯಿಂದ ಕೇದಾರ ಪೀಠಕ್ಕೆ ಸ್ಥಿರಪಟ್ಟಾಧಿಕಾರಿಗಳ ನೇಮಕ ಮಾಡಲು ವಿಲ್ ಬರೆಯಿಸಿ ನೋಂದಣಿ ಮಾಡಿಸಿದರು. ಅವರ ಬಯಕೆಯನ್ನು ಕಾರ್ಯರೂಪಕ್ಕೆ ತಂದು ಕೇದಾರ ಪೀಠವನ್ನು ಉದ್ಧರಿಸಲು ಹೋರಾಡಿದರು. ಕೇದಾರ ಶ್ರೀಗಳು ೩೦.೭.೨೦ರಲ್ಲಿ ಲಿಂಗೈಕ್ಯರಾದರು. ಅವರ ಅಂತ್ಯಸಂಸ್ಕಾರವನ್ನು ಶ್ರೀಪೀಠದ ಮಠದ ಕಣದಲ್ಲೇ ನೆರವೇರಿಸಲಾಯಿತು. ತದನಂತರ ಕೇದಾರ ಪೀಠಕ್ಕೆ ಶ್ರೀ ನೀಲಕಂಠ ಶಿವಾಚಾರ್ಯರಿಗೆ ದಿನಾಂಕ ೧.೧೦.೧೯೨೧ರಲ್ಲಿ ಪಟ್ಟಾಧಿಕಾರ ಮಾಡಿಸಿದರು.

ಉಜ್ಜಯಿನಿಯ ಶ್ರೀ ಪೀಠದ ಮಠವನ್ನು ಜೀರ್ಣೋದ್ಧಾರಗೊಳಿಸಿ ಭವ್ಯವಾದ ಶಿಲಾ ಮಠವನ್ನು ನಿರ್ಮಿಸಲು ಕಾರಣರಾದರು. ಈ ಕಾರ್ಯಕ್ಕಾಗಿ ೩೦ರಿಂದ ೪೦ ಸಾವಿರ ರೂಪಾಯಿಗಳನ್ನು ವೆಚ್ಚ ಮಾಡಿದರು. ಗುಡೇಕೋಟೆಯಿಂದ ಉಜ್ಜಯಿನಿಗೆ ಶಿಲಾ ತೊಲೆ-ಕಂಬಗಳನ್ನು ಒಡೆಸಿ ತರಲಾಯಿತು. ಉಜ್ಜಯಿನಿ ಪೀಠದ ಶ್ರೀ ಮರುಳಸಿದ್ಧ ಸ್ವಾಮಿಯ ರಥೋತ್ಸವ ಮತ್ತು ತೈಲಾಭಿಷೇಕ ಮಹೋತ್ಸವದ ಸಂದರ್ಭದಲ್ಲಿ **ಸದ್ಧರ್ಮ ಪರಿಷತ್** ಏರ್ಪಡಿಸುವ ಸಂಪ್ರದಾಯವನ್ನು ಆರಂಭಿಸಿದರು. ಈ ಕಾರ್ಯಕ್ರಮ ಪೂರ್ಣವಾದ ಬಳಿಕ ಪಂಡಿತರಿಗೆ, ವಿದ್ವಾಂಸರಿಗೆ, ಕೀರ್ತನಕಾರರಿಗೆ, ಗವಾಯಿಗಳಿಗೆ ಮತ್ತು ವಾದ್ಯಮೇಳದವರಿಗೆ ಸನ್ಮಾನ ಮಾಡುವ ಪರಂಪರೆಯನ್ನು ಆರಂಭಿಸಿದರು. ಪೂಜ್ಯರು ಗಾನಪ್ರಿಯರಾಗಿದ್ದರು. ಕೆಲಕಾಲ ಅವರ ಕಾರಭಾರಿಗಳಾಗಿದ್ದ ಹೀರೇಹಡಗಲಿ ಪುರಾಣಿಕ ಮಠದ ವೇ॥ ವಿರೂಪಾಕ್ಷ ಶಾಸ್ತ್ರಿಗಳವರಿಂದ ವೀಣಾವಾದನ ಮಾಡಿಸುತ್ತ ಆನಂದ ಪಡುತ್ತಿದ್ದರು.[೧೦] ***(ಚಿತ್ರ, ಸಂ. ೧೫)***

ರಂಭಾಪುರಿ ಪೀಠಕ್ಕೆ ಜಗದ್ಗುರುಗಳನ್ನು ನೇಮಿಸುವ ಸಂದರ್ಭದಲ್ಲಿ ಕೆಲವರಿಂದ ವಿರೋಧವುಂಟಾಯಿತು. ಅದಕ್ಕಾಗಿ ತರೀಕೇರಿ ಹತ್ತಿರದ

ಬುಕ್ಕಾಂಬೂದಿಯಲ್ಲಿ ಒಂಬತ್ತು ತಿಂಗಳ ತಪಸ್ಸನ್ನಾಚರಿಸಿದರು.*(ಚಿತ್ರ ಸಂ. ೧೬)* ಆ ಸಂದರ್ಭದಲ್ಲಿ ವೇ॥ ಕಾಶಿನಾಥ ಶಾಸ್ತ್ರಿಗಳವರು ಮೈಸೂರು ಶ್ರೀಮಹಾರಾಜ ಒಡೆಯರವರಿಂದ ರಂಭಾಪುರಿ ಪೀಠಾಧಿಕಾರಕ್ಕೆ ಹುಕುಂ ದೊರಕಿಸಿ ಕೊಡಲು ಕಾರಣರಾದರು. ಅದಕ್ಕಾಗಿ ವಟುವಿನ ಚುನಾವಣೆ ನಡೆಯಿತು. ಅದರಲ್ಲಿ ಪಂ॥ ಸದಾಶಿವಶಾಸ್ತ್ರಿಗಳವರು ಆರಿಸಿ ಬಂದರು. ಆಗ ಶ್ರೀ ಸಿದ್ಧಲಿಂಗ ಜಗದ್ಗುರುಗಳು ಆಗಮಿಸಿ ಮೂರು ತಿಂಗಳ ತೆರವಾಗಿದ್ದ ರಂಭಾಪುರಿ ಪೀಠಕ್ಕೆ ಸದಾಶಿವಶಾಸ್ತ್ರಿಗಳಿಗೆ ಶ್ರೀಶಿವಾನಂದಜಗದ್ಗುರುಗಳೆಂಬ ನಾಮಕರಣ ಮಾಡಿ ಅವರನ್ನು ಪೀಠಕ್ಕೆ ನೇಮಿಸುವಲ್ಲಿ ಯಶಸ್ಸನ್ನು ಕಂಡರು. (೨೨.೧೧.೧೯೨೫) ಅವರಿಗೆ ಕಂಥಾ, ಕೌಪೀನ, ಕಾಷಾಯವಸ್ತ್ರ, ಭಸ್ಮ, ರುದ್ರಾಕ್ಷ, ದಂಡ, ಕಮಂಡಲ ಮುದ್ರಾಂಕಿತ ಪೂರ್ವಕ ಸಿಂಹಾಸನಾರೋಹಣ ಮಾಡಿಸಿದರು. ಸುವರ್ಣರತ್ನ ಖಚಿತ ಕಿರೀಟಧಾರಣ ಮಾಡಿದರು.*(ಚಿತ್ರ ಸಂ. ೧೭)*

ಚರಪಟ್ಟಧಿಕಾರಿಗಳ ಐದನೇ ಸಮ್ಮೇಳನವನ್ನು ಶ್ರೀಗಳು ನಾಗನೂರು ಬ್ರಹನ್ಮಠಾಧ್ಯಕ್ಷ ಶ್ರೀ ವೇ॥ಪಂ॥ ಕಾಶೀನಾಥ ಶಾಸ್ತ್ರಿಗಳ ಕಾರ್ಯದರ್ಶಿತ್ವದಲ್ಲಿ ತಾ. ೨೫. ೧೨. ೧೯೨೬ರಲ್ಲಿ ಉಜ್ಜಯಿನಿಯ ಶ್ರೀಪೀಠದಲ್ಲಿ ನೆರವೇರಿಸಿದರು. ಮೈಸೂರಿನಿಂದ ''ಪಂಚಾಚಾರ್ಯ ಪ್ರಭಾಪತ್ರಿಕೆ'' ತಾ. ೧೬.೫.೧೯೨೭ರಿಂದ ಪ್ರಕಟವಾಗಲು ಆರ್ಥಿಕ ನೆರವು ನೀಡಿದರು. ''ಜ್ಞಾನಗುರು ವಿದ್ಯಾಪೀಠ'' ಸ್ಥಾಪನೆ ಮಾಡಿದರು. ಉಳಿದ ಪೀಠಗಳ ಉದ್ಧಾರಕ್ಕೆ ಶ್ರಮಪಟ್ಟರು. ಶ್ರೀಪೀಠದಲ್ಲಿ ೧೦೦೮ ಗೋವುಗಳ ಗೋಶಾಲೆ, ಪಂಚಾಚಾರ್ಯರ ಸಭಾಮಂಟಪ, ಭೋಜನಶಾಲೆ, ಪಾಕಶಾಲೆ, ರೆಕಾರ್ಡ್ ಕೋಣೆ, ಧರ್ಮಗ್ರಂಥಗಳ ಕೋಣೆ, ಶಿವಪೂಜಾ ಮಂದಿರ, ಭೂಗರ್ಭ ಕೋಶಾಗಾರ (ಖಜಾನೆ) ಕೋಣೆ, ಉಪ್ಪರಿಗೆಯಲ್ಲಿ ಶ್ರೀಗಳ ವಿಶ್ರಾಂತಿ ಮಂಟಪ, ೭೭ ಅಂಕಣಗಳ ಶ್ರೀ ಪಂಚಾಚಾರ್ಯರ ಸಮ್ಮೇಳನ ಮಂಟಪ, ಶಿವಯೋಗ ಮಂಟಪಗಳನ್ನು ನಿರ್ಮಿಸಲು ಕಾರಣರಾದರು.

ಶ್ರೀಪೂಜ್ಯರು ಅನೇಕ ಪವಾಡಗಳನ್ನು ಮಾಡಿ ಖ್ಯಾತಿ ಪಡೆದ ಸಂಗತಿ ಜನಜನಿತವಾಗಿದೆ. ಶ್ರೀಪೀಠದ ಗಂಜಿಬಾವಿಯಲ್ಲಿ ಸ್ನಾನಮಾಡುವಾಗ ಮುಳುಗಿ ಶ್ರೀಮಠದ ಬಾವಿಯಲ್ಲಿ ಏಳುತ್ತಿದ್ದರೆಂಬ ಐತಿಹ್ಯವಿದೆ. ಕೊಟ್ಟೂರು ಪಟ್ಟಣದಲ್ಲಿ ಅಲ್ಲಿಯ ಕಟ್ಟಿಮನಿ ದೈವದವರ ಉತ್ಸವ ಸಂದರ್ಭದಲ್ಲಿ ದೇವರ ಒಂದು ಗೂಳಿ ಸತ್ತಿತ್ತು. ಈ ವಿಷಯ ತಿಳಿದಾಗ ಶ್ರೀ ಸಿದ್ಧಲಿಂಗ ಜಗದ್ಗುರುಗಳು ಗೂಳಿ ಸತ್ತಿಲ್ಲ ಎಂದು ಹೇಳಿ ಎಲ್ಲರೂ ಉತ್ಸವದಲ್ಲಿ ಪಾಲ್ಗೊಳ್ಳಲು ಸೂಚಿಸಿದರು. ನಂತರ ಸತ್ತ ಗೂಳಿಯನ್ನು ಸ್ಪರ್ಶಮಾಡಿ ಅದಕ್ಕೆ ಮರುಜೀವ ತುಂಬಿದರೆಂದು ಹೇಳುವರು.

ರಾಂಪುರ ಮಠದ ಸಿದ್ಧಯ್ಯನವರ ಮಗನಿಗೆ ಶ್ರೀಮಹಾಸ್ವಾಮಿಗಳು ಹೇಳಿದ ಭವಿಷ್ಯ ನಿಜವಾಯಿತು. ಬಾಡದ ವೀರಪ್ಪಜ್ಜನ ಸಂಕಲ್ಪವನ್ನು ಪೂರೈಸಿದರು. ಹೀಗೆ ಶ್ರೀಗಳು ತಮ್ಮ ಜೀವನದ ಹಲವಾರು ಸಂದರ್ಭಗಳಲ್ಲಿ ಪವಾಡಗಳನ್ನು ಮೆರೆದು ಭಕ್ತರ ಪ್ರೀತಿ- ಗೌರವ- ಭಕ್ತಿ ಯನ್ನು ಹೆಚ್ಚಿಸಿಕೊಂಡರು.[೮೪]

ಪೂಜ್ಯ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವ ತಾ. ೩.೧೧.೧೯೩೫ರಲ್ಲಿ ಜಗಳೂರಿನಲ್ಲಿ ವೈಭವದಿಂದ ಜರುಗಿತು. ಅಲ್ಲಿಂದ ಸಂಚರಿಸುತ್ತ ಕೂನುಬೇವು ಗ್ರಾಮದಲ್ಲಿ ತಂಗಿದರು. ಅಲ್ಲಿ ಒಮ್ಮೆ ಶೌಚಕ್ಕೆ ಹೋದಾಗ ಎಡವಿದ ಕಾರಣ ಜ್ವರಪೀಡಿತರಾದರು. ಅಲ್ಲಿಂದ ತುರುವನೂರಿಗೆ ಆಗಮಿಸಿ ಎರಡು ದಿವಸ ತಂಗಿದರು. ಕಾಯಿಲೆ ಹೆಚ್ಚಾಗಿ ಯಾವ ಚಿಕಿತ್ಸೆಗೂ ಅದು ಕಡಿಮೆ ಆಗದಿದ್ದಾಗ ಅವರನ್ನು ಶ್ರೀಪೀಠಕ್ಕೆ ಮೋಟಾರ್ ಲಾರಿಯಲ್ಲಿ ಕರೆತರಲಾಯಿತು. ಅನೇಕ ರೀತಿಯಿಂದ ಔಷಧೋಪಚಾರವನ್ನು ಮಾಡಲಾಯಿತು. ಯಾವುದೂ ಫಲಕಾರಿಯಾಗದೆ ಜಗದ್ಗುರುಗಳವರು ಶಾಲಿವಾಹನಶಕೆ ೧೮೫೭ನೇ ಯುವನಾಮ ಸಂವತ್ಸರ ಪುಷ್ಯ ಬಹುಳ೪, ಭಾನುವಾರ ಬೆಳಿಗ್ಗೆ ತಮ್ಮ ೪೬ನೇ ವಯಸ್ಸಿನಲ್ಲಿ (ತಾ. ೧೨.೧.೧೯೩೬) ಶಿವೈಕ್ಯರಾದರು.[೮೫] ೬೦ರಿಂದ ೮೦,೦೦೦ ಭಕ್ತರ ಸಮ್ಮುಖದಲ್ಲಿ ಶ್ರೀಗಳವರ ಕಳೇಬರದ ಮೆರವಣಿಗೆಯು ವೈಭವದಿಂದ ಜರುಗಿತು. ಶ್ರೀಪೀಠದ ಅಗ್ನಿದಿಕ್ಕಿನಲ್ಲಿ ಶ್ರೀ ರಂಭಾಪುರಿ ಜಗದ್ಗುರು ಶಿವಾನಂದ ಮಹಾಸ್ವಾಮಿಗಳ ನೇತೃತ್ವದಲ್ಲಿ ಶ್ರೀಸನ್ನಿಧಿ ಅವರ ಅಂತ್ಯಕ್ರಿಯೆಯನ್ನು ಮಾಡಲಾಯಿತು.

ಈ ಸಮಾಧಿಯ ಮೇಲೆ ಶ್ರೀಗಳ ಭವ್ಯವಾದ ಅಮೃತಶಿಲಾ ಮೂರ್ತಿಯನ್ನು ಸ್ಥಾಪಿಸಲಾಗಿದೆ. ಅಲ್ಲಿ ಅವರ ಆವುಗೆಗಳನ್ನು ಇಟ್ಟು ಪೂಜೆ ಮಾಡಲಾಗುತ್ತಿದೆ. ಹುಚ್ಚನಾಗಲಿಂಗಸ್ವಾಮಿಗಳು ಶ್ರೀಮಹಾಸ್ವಾಮಿಗಳ ಸಮಾಧಿಯ ಕೋಣೆಗಳನ್ನು ಕಟ್ಟಿಸಿದರು. ಜಗದ್ಗುರುಗಳ ಪುಣ್ಯತಿಥಿಯನ್ನು ಅವರ ಪುರಾಣ ಹಾಗೂ ಅವರ ಭಾವಚಿತ್ರದ ಮೆರವಣಿಗೆಯೊಂದಿಗೆ ಪ್ರತಿವರ್ಷ ಜರುಗಿಸಲಾಗುತ್ತಿದೆ. ಪೂಜ್ಯರು ಮಹಾಶಿವಯೋಗಿಗಳೂ, ಶಾಪಾನುಗ್ರಹ ಸಮರ್ಥರೂ ಆಗಿದ್ದರು. ದೇಶದ ಎಷ್ಟೋ ಭಕ್ತರು ಪೂಜ್ಯರ ದರ್ಶನಾಶೀರ್ವಾದ ಪಡೆದು ರೋಗರುಜಿನೆಗಳನ್ನು ನಿವಾರಣೆ ಮಾಡಿಕೊಂಡರು. ಸಂತಾನಗಳನ್ನು ಪಡೆದರು, ದಾರಿದ್ರ್ಯವನ್ನು ದೂರಮಾಡಿಕೊಂಡು ಧನಿಕರಾದರು. ಹೀಗೆ ಭಕ್ತರು ತಮ್ಮ ಇಷ್ಟಾರ್ಥಗಳನ್ನು ಈಡೇರಿಸಿಕೊಂಡರು. ಪೂಜ್ಯರ ಉತ್ಸವ ದೇಶದ ವಿವಿಧೆಡೆಯಲ್ಲಿ ನಡೆಯಿತು. ಅವರ ಪ್ರಯಾಣದ ಉತ್ಸವವನ್ನು ಆಗಿನ ಸರ್ಕಾರ ಮನ್ನಿಸಿ ದಿನಾಂಕ ೧೧. ೬. ೧೯೩೫ರಲ್ಲಿ ಒಂದು ಪ್ರತ್ಯೇಕ ಆದೇಶವನ್ನೇ ಹೊರಡಿಸಿತ್ತು.[೮೬]

೧೯೧೨ರಲ್ಲಿ ಗುಲಬರ್ಗಾದ ಶ್ರೀ ಶರಣ ಬಸವೇಶ್ವರ ಸಂಸ್ಥಾನದ ದೊಡ್ಡಬಸವಅಪ್ಪಾ ಅವರ ಆಮಂತ್ರಣದ ಮೇರೆಗೆ ಅಲ್ಲಿಗೆ ದಯಮಾಡಿಸಿದರು. ಅಲ್ಲಿ ಬಹಳ ಅದ್ದೂರಿಯಿಂದ ಅಡ್ಡಪಲ್ಲಕ್ಕಿ ಉತ್ಸವ ನೆರವೇರಿತು. ಈ ಸಂದರ್ಭದಲ್ಲಿ ಶ್ರೀ ಶರಣ ಬಸವೇಶ್ವರ ಸಂಸ್ಥಾನದ ಕ್ರಿಯಾ ಮೂರ್ತಿಗಳಾದ ಶ್ರೀ ಸಿದ್ಧಲಿಂಗ ದೇಶಿಕರಿಗೆ ಮುಗಳನಾಗಾಯಿ ಹಿರೇಮಠದ ಪಟ್ಟಾಧಿಕಾರ ಮಾಡಿದರು.[೪೭]

ಶ್ರೀಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವಗಳು ಅವರ ಎಪ್ಪತ್ತೆರಡು ಬಿರುದಾವಳಿ ಗಳೊಡನೆ ದೇಶದ ಅನೇಕ ಕಡೆಗಳಲ್ಲಿ ಬಹು ವಿಜೃಂಭಣೆಯಿಂದ ಜರುಗಿದವು. ಅವುಗಳಲ್ಲಿ ಕೊಟ್ಟೂರು (ಕ್ರಿ.ಶ. ೧೯೦೬), ಹಿರೇಹಡಗಲಿ (೫.೩.೧೯೧೫), ಹೂವಿನಹಡಗಲಿ (೧.೯.೧೯೨೩), ಬಳ್ಳಾರಿ (೧೨.೧೨.೧೯೩೦), ಗುಲ್ಬರ್ಗಾ (ಪ್ರಮಾದೀಚ ಕಾರ್ತಿಕ ಶು. ೫), ಶಿವಮೊಗ್ಗ ಜಿಲ್ಲೆಯ ತರಿಕೇರಿ (ರಕ್ತಾಕ್ಷಿ ಸಂ. ಆಶ್ವೀಜ ಶು.೧೦), ಚಿಕ್ಕಮಗಳೂರು (೨೧. ೨. ೧೯೨೬), ಚಿತ್ರದುರ್ಗ ಜಿಲ್ಲೆಯ ಜಗಳೂರು (೯. ೧೦. ೧೯೨೮); ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯ- ಬಾರ್ಶಿ (೨೫.೯.೧೯೩೨), ಸೊಲ್ಲಾಪುರ (೧೨.೬.೧೯೩೩) ಮತ್ತು ಪಂಡರಾಪುರ (೨೩. ೧೦. ೧೯೩೩) ಇವು ಮುಖ್ಯವೆನಿಸಿವೆ. ಇವುಗಳಲ್ಲದೆ ಉತ್ತರ ಪ್ರದೇಶದ ಕಾಶಿ, ಕೇದಾರ; ಮಹಾರಾಷ್ಟ್ರದಲ್ಲಿ- ಮುಗಳಖೇಡ, ಹುಟಗಿ, ಆಂಧ್ರಪ್ರದೇಶದ- ಗುಂತಕಲ್ಲು, ರಾಯದುರ್ಗ, ತುಂಗಭದ್ರ, ಉರವಕೊಂಡ, ಕೊಂಡಕುಂದಿ ಮತ್ತು ಕರ್ನಾಟಕದ ಹರಪನಹಳ್ಳಿ, ಉತ್ತಂಗಿ, ಗುಡೇಕೋಟಿ, ಸಿಂಗಟಾಲೂರು, ಹೊಳಗುಂದಿ, ಸೋಗಿ, ನವಲಗುಂದ, ಕಲಾದಗಿ, ಬೀರೂರು, ದಾವಣಗೇರಿ, ಸತ್ತೀಗೇರಿ, ಸುರಪುರ, ಯಾದಗಿರಿ, ಹುಮನಾಬಾದ್, ರಾಯಚೂರು, ಮಹಾಗಾಂವ, ದೊರನಾಳ ಮುಂತಾದವು ಸೇರಿವೆ ಹಾಗೂ ಶ್ರೀಗಳು ಆಗಿನ ಮೈಸೂರಿನ ಸೀಮೆಯಲ್ಲಿ (ಕರ್ನಾಟಕ) ಅವರ ಬಿರುದಾವಳಿಗಳೊಂದಿಗೆ ಸಂಚರಿಸಲು ಮುಜರಾಯಿ ಕಮಿಶನರ್ ಇವರಿಂದ ಪರವಾನಿಗೆಯನ್ನು ಪಡೆದಿದ್ದರು.[೪೮]

ಸುಮಾರು ೨೬ ವರ್ಷಗಳ ಕಾಲ ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಶ್ರೀಉಜ್ಜಯಿನಿ ಸದ್ಧರ್ಮ ಪೀಠದ ಏಳ್ಗೆಗಾಗಿ ಅವಿರತ ಸೇವೆಗೈದರು. ಅವರ ಯೋಗಶಕ್ತಿ, ತಪಶಕ್ತಿ, ಕರ್ತೃತ್ವಶಕ್ತಿಗಳು ಭಕ್ತರ ಉದ್ಧಾರಕ್ಕಾಗಿ ವಿನಿಯೋಗವಾಗಿವೆ. ಅವರ ಜೀವನದಲ್ಲಿ ಸ್ವಾರ್ಥಕ್ಕೆ ಸ್ಥಾನವಿರಲಿಲ್ಲ. ಲೋಕ ಕಲ್ಯಾಣವೇ ಅವರ ಮುಖ್ಯ ಆಶಯವಾಗಿತ್ತು. ಇಂದು ಅವರ ಸ್ಥಾನ ಜಾಗ್ರತ ಸ್ಥಳವಾಗಿದೆ.

ಶ್ರೀಸಿದ್ಧೇಶ್ವರ ಶಿವಾಚಾರ್ಯಮಹಾಸ್ವಾಮಿಗಳು :

ಶ್ರೀ ಪೀಠದ ಪಟ್ಟವಲ್ಲರಿಯ ಪ್ರಕಾರ ೧೧೯ನೇ ಜಗದ್ಗುರುಗಳಾಗಿ ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ನೇಮಕಗೊಂಡರು.

(ಚಿತ್ರ. ನಂ.೧೮ ರಿಂದ ೧೯) ಶ್ರೀಮಹಾಸ್ವಾಮಿಗಳು ಕರ್ನಾಟಕ ರಾಜ್ಯದ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ಆನೇ ಸಿದ್ಧಾಪುರದ ಹಿರೇಮಠದ ವೇ॥ ದೊಡ್ಡವೀರಭದ್ರಯ್ಯನರು ಮತ್ತು ಪತ್ನಿ ಸೌ॥ ವೀರಮ್ಮ ದಂಪತಿಗಳ ಪುತ್ರರಾಗಿ ಶಕೆ ೧೮೨೮ನೇ ಪ್ಲವಂಗ ಸಂವತ್ಸರ ಪುಷ್ಯ ಬ. ೩, ಮಂಗಳವಾರ ಸಾಯಂಕಾಲ ೫ ಗಂಟೆಗೆ ಜನಿಸಿದರು(೧೯೦೬). ತಮ್ಮ ೧೪ನೇ ವಯಸ್ಸಿನಲ್ಲಿ ಅಂದರೆ ದುರ್ಮತಿ ಸಂವತ್ಸರ ಕಾರ್ತೀಕ ಶುದ್ಧ ದಂದು ಶ್ರೀ ಷ.ಬ್ರ.ತ್ರಿಲೋಚನ ಶಿವಾಚಾರ್ಯ ಸ್ವಾಮಿಗಳೆಂಬ ನಾಮಾಂಕಿತದಿಂದ ಅವರು ಸಿದ್ಧಾಪುರದ ಮೂಲ ಬೃಹನ್ಮಠದ ಪಟ್ಟಾಧಿಕಾರವನ್ನು ಸ್ವೀಕರಿಸಿದರು. ಅವರ ಸಂಸ್ಕೃತ ವಿದ್ಯಾಭ್ಯಾಸವು ಬಳ್ಳಾರಿ ಮತ್ತು ಕಾಶಿಯಲ್ಲಿ ನಡೆಯಿತು. ಶ್ರೀ॥ ಸಿದ್ಧಲಿಂಗ ಜಗದ್ಗುರುಗಳ ಅಕಾಲಿಕ ಅಗಲಿಕೆಯಿಂದ ಶ್ರೀಪೀಠಕ್ಕೆ ಯೋಗ್ಯವಾದ ವಟುವನ್ನು ಹುಡುಕುವ ಕಾರ್ಯ ಆರಂಭವಾಯಿತು. ಪಂ॥ ಕಾಶೀನಾಥ ಶಾಸ್ತ್ರಿಗಳು ಭಕ್ತಾದಿಗಳ ಪ್ರಾರ್ಥನೆಯಂತೆ ಆ ಹುದ್ದೆಯನ್ನು ಒಪ್ಪಿಕೊಂಡರು. ಆಗ ಸಿದ್ಧಾಪುರದ ಬೃಹನ್ಮಠಾಧ್ಯಕ್ಷರಾಗಿದ್ದ ಶ್ರೀ ಷ. ಬ್ರ. ತ್ರಿಲೋಚನಶಿವಾಚಾರ್ಯ ಸ್ವಾಮಿಗಳನ್ನು ಉಜ್ಜಯಿನಿ ಸದ್ಧರ್ಮ ಸಿಂಹಾಸನದ ಉತ್ತರಾಧಿಕಾರಿಯಾಗಿ ಅಧಿಕಾರ ವಹಿಸಿಕೊಳ್ಳಲು ನಿಶ್ಚಯಿಸಲಾಯಿತು. ಆಗ ಶ್ರೀಮಹಾಸ್ವಾಮಿಗಳವರಿಗೆ ಸುಮಾರು ೩೦ ವಯಸ್ಸಾಗಿದ್ದಿತು. ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯರು, ಹಿಮವತ್ಕೇದಾರ ವೈರಾಗ್ಯ ಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು ನೀಲಕಂಠಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ದಿನಾಂಕ ೨. ೨. ೧೯೩೬ ರಂದು ಶ್ರೀ ಉಜ್ಜಯಿನಿ ಸದ್ಧರ್ಮ ಪೀಠದ ಸ್ಥಿರ ಪಟ್ಟಾಧ್ಯಕ್ಷರಾಗಿ ಶ್ರೀಮಹಾಸ್ವಾಮಿಗಳವರು ಅಧಿಕಾರ ಸ್ವೀಕರಿಸಿದರು. ಶ್ರೀಮಹಾಸ್ವಾಮಿಗಳವರಿಗೆ ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳೆಂಬ ನಾಮಾಂಕಿತ ಅನುಗ್ರಹವಾಯಿತು.[೪೯]

ಬಹುಕಾಲ ಅಂದರೆ ಅರವತ್ತೆರಡು ವರ್ಷಗಳಕಾಲ ಶ್ರೀಪೀಠದ ಉದ್ಧಾರವನ್ನು ಮತ್ತು ಭಕ್ತೋದ್ಧಾರ ಕಾರ್ಯಗಳನ್ನು ನಿರ್ವಹಿಸಿದ ಕೀರ್ತಿ ಶ್ರೀ ಸಿದ್ಧೇಶ್ವರ ಜಗದ್ಗುರುಗಳದ್ದಾಗಿದೆ. ಶ್ರೀ ಸಿದ್ಧಲಿಂಗ ಜಗದ್ಗುರುಗಳ ಅಪೂರ್ಣ ಸಂಕಲ್ಪಗಳನ್ನು ಇವರು ಪೂರೈಸಿದ್ದಾರೆ. ಜ್ಞಾನಗುರು ವಿದ್ಯಾಪೀಠವನ್ನು ನೋಂದಾಯಿಸಿ ಆ ವಿದ್ಯಾಪೀಠದ ಸ್ಥಾಯಿ ಅಸ್ತಿತ್ವಕ್ಕೆ ಶ್ರೀಕಾರ ಹಾಕಿದರು. ಈ ಸಂಸ್ಥೆಯ ಕಾರ್ಯ ಚಟುವಟಿಕೆಗಳು ಸಾಂಗವಾಗಿ ನಡೆದುಕೊಂಡು ಹೋಗಲು ಭೂಮಿ ಮತ್ತು ಹಣವನ್ನು ಸಂಗ್ರಹಿಸಿ ಅದನ್ನು ಆರ್ಥಿಕವಾಗಿ ಭದ್ರಗೊಳಿಸಿದರು. ಶ್ರೀಮಹಾಸ್ವಾಮಿಗಳು ಅನೇಕ ಶಿಕ್ಷಣಕೇಂದ್ರಗಳನ್ನು ತೆರೆಯಲು ಕಾರಣರಾದರು.

ಅವುಗಳಲ್ಲಿ ಐದು ಸಂಸ್ಕೃತ ಪಾಠಶಾಲೆಗಳು (ಉಜ್ಜಯಿನಿ, ಯಲಿವಾಳ, ಹರಪನಹಳ್ಳಿ, ಯಶವಂತನಗರ, ಹೊಳಲಗುಂದಿ) ಅನೇಕ ಪ್ರೌಢಶಾಲೆ ಮತ್ತು ಕಾಲೇಜುಗಳು, (ಉಜ್ಜಯಿನಿ, ಅಂಬಳಿ, ಹರಪನಹಳ್ಳಿ, ಕೂಬಿಹಾಳ, ಎಲಿವಾಳ, ವರೂರ ಇತ್ಯಾದಿ ಸ್ಥಳಗಳಲ್ಲಿ) ಮತ್ತು ಪ್ರಸಾದ ನಿಲಯಗಳು (ಗದಗ, ಚಿತ್ರದುರ್ಗ, ತುರುವನೂರು) ಮುಖ್ಯವಾಗಿವೆ. ಶ್ರೀಪೀಠದಿಂದ ಧರ್ಮ ಪ್ರಚಾರಕ್ಕಾಗಿ ಸದ್ಧರ್ಮಪ್ರಭಾ ಎಂಬ ತ್ರೈಮಾಸಿಕ ಪತ್ರಿಕೆಯನ್ನು ಹೊರತರುವ ವ್ಯವಸ್ಥೆಯನ್ನು ಮಾಡಿದರು. ಹೀಗೆ ಅನೇಕ ಸಮಾಜೋಧಾರ್ಮಿಕ ಕಾರ್ಯಗಳು ಅವರ ಆಶೀರ್ವಾದ ಬಲದಿಂದ ನಡೆದವು.

ದಿನಾಂಕ ಅಕ್ಟೋಬರ್ ೯ ಮತ್ತು ೧೦, ೧೯೩೮ರಂದು ಬಳ್ಳಾರಿ ಜಿಲ್ಲೆಯ ಪಟ್ಟಚರಾಧಿಕಾರಿಗಳ ಪ್ರಥಮ ಸಮ್ಮೇಳನ ಶ್ರೀಮಹಾಸ್ವಾಮಿಗಳವರ ಸಾನ್ನಿಧ್ಯದಲ್ಲಿ ಜರುಗಿತು. ಈ ಸಮ್ಮೇಳನದಲ್ಲಿ ಚರಪಟ್ಟಾಧಿಕಾರಿಗಳ, ಮಠಾಧಿಪತಿಗಳ ಕರ್ತವ್ಯಗಳನ್ನು ಆಚಾರ್ಯೋಪಾಚಾರ್ಯರ ತಾರತಮ್ಯದ ಬಗ್ಗೆ ಠರಾವುಗಳನ್ನು ಮಾಡಲಾಯಿತು. ಅದರ ಬಗ್ಗೆ ಒಂದು ಕೃತಿಯನ್ನು ಹೊರತರಲಾಯಿತು. ಶ್ರೀಗಳು ತಮ್ಮ ಉದ್ಘಾಟನಾ ಆಶೀರ್ವಚನದಲ್ಲಿ ಹೀಗೆ ಅಪ್ಪಣೆ ಕೊಟ್ಟರು.[೫೦]

೧. ಗುರು, ಪಟ್ಟಾಧಿಕಾರಿಯನ್ನಾಗಿ ನಿಯಮಿಸುವ ವಟುವಿನ ಗುಣ, ಕುಲ, ಶೀಲ, ವಿದ್ಯಾ, ಗುರುಭಕ್ತಿ, ಗುರುಲಕ್ಷಣಗಳನ್ನು ಅವಶ್ಯವಾಗಿ ಪರೀಕ್ಷಿಸಬೇಕು.

೨. ಪ್ರತಿಯೊಬ್ಬ ಸ್ಥಿರ-ಚರಪಟ್ಟಾಧ್ಯಕ್ಷರು ಶ್ರೀ ೧೦೦೮ ಜಗದ್ಗುರು ಪಂಚಾಚಾರ್ಯ ಭಗವತ್ಪಾದರ ಆಜ್ಞೆಯನ್ನು ಶಿರಸಾವಹಿಸಿ ಆಚರಿಸಬೇಕು.

೩. ಸ್ಥಿರ-ಚರ ಪಟ್ಟಾಧ್ಯಕ್ಷರು ತಮ್ಮ ಶಿಷ್ಯೋದ್ಧಾರವೇ ಸ್ವಕರ್ತವ್ಯವೆಂದು ತಿಳಿದು ಯಾವಾಗಲೂ ಶಿಷ್ಯರಿಗೆ ಉಪದೇಶಿಸುತ್ತ ಸಂಚರಿಸಬೇಕು.

೪. ಮೋಕ್ಷಕ್ಕೆ ಮೂಲಭೂತವಾದ ದೀಕ್ಷಾ ಸಂಸ್ಕಾರವನ್ನು ಆದಷ್ಟು ಒತ್ತಾಯದಿಂದ ಕೃತಿಯಲ್ಲಿ ತರಬೇಕು. ದೀಕ್ಷಾ ಕಾಲದಲ್ಲಿ ದಕ್ಷಿಣೆಯ ಬಗ್ಗೆ ಹಟವನ್ನು ಹಿಡಿಯಬಾರದು.

೫. ಸ್ಥಿರ-ಚರ ಪಟ್ಟಾಧ್ಯಕ್ಷರಲ್ಲಿ ಯಾವಾಗಲೂ ಐಕ್ಯವು ಮೊದಲು ಬೇಕು.

೬. ಶ್ರೀ ವೇದ ಆಗಮ ಉಪನಿಷತ್ ಗ್ರಂಥಗಳಲ್ಲಿ ನಮ್ಮ ವೀರಶೈವ ಮತದ ಬಗ್ಗೆ ಹೇಳಿರುವುದರ ಅಧ್ಯಯನವನ್ನು ಅವಶ್ಯವಾಗಿ ಮಾಡಬೇಕು.

ಶ್ರೀಶೈಲ ಜಗದ್ಗುರು ನಾಗಲೂಟಿ ಭಿಕ್ಷಾವರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ಅಪೇಕ್ಷೆಯಂತೆ ಶ್ರೀಶೈಲ ಸೂರ್ಯ ಸಿಂಹಾಸನದ ಪಟ್ಟಾಧಿಕಾರವು ಮುದೇನೂರು ಹಿರೇಮಠದ ಪಟ್ಟಾಧೀಶ್ವರರಾದ ಶ್ರೀ ವಾಗೀಶ ಶಿವಾಚಾರ್ಯ ಸ್ವಾಮಿಗಳಿಗೆ ಪೂಜ್ಯರ ಸಾನ್ನಿಧ್ಯದಲ್ಲಿ ದಿನಾಂಕ ೭.೭.೧೯೪೦ರಲ್ಲಿ

ನಡೆಯಿತು. ಇದಲ್ಲದೆ ಸರ್ವಧಾರಿ ಸಂವತ್ಸರ ಕಾರ್ತಿಕ ಶು. ೧೩ರಂದು ರಂಭಾಪುರಿ ಪೀಠದ ಜಗದ್ಗುರು ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳ ಒಡಗೂಡಿ ಮದಗ ಮಾಸೂರಿನ ಹಿರೇಮಠದ ಶ್ರೀ ಪಟ್ಟದ ಶ್ರೀಗಳವರಿಗೆ ಕಾಶೀ ವಿಶ್ವಾರಾಧ್ಯ ಪೀಠದ ಪಟ್ಟಾಧಿಕಾರವನ್ನು ಅನುಗ್ರಹಿಸಿದರು. ಅವರಿಗೆ ಶ್ರೀ ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳೆಂದು ನಾಮಕರಣ ಮಾಡಲಾಯಿತು.

ಸಮತಾದೃಷ್ಟಿಯ ಶ್ರೀಮಹಾಸ್ವಾಮಿಗಳು ಸಾಮಾನ್ಯಬಡ ಭಕ್ತರು ಆಮಂತ್ರಿಸಿದಾಗ ಅವರಿಗೆ ಆರ್ಥಿಕ ಹೊರೆ ಬೀಳಬಾರದೆಂದು ಮತ್ತು ಶ್ರೀಪೀಠಕ್ಕೆ ಅನಾವಶ್ಯಕ ಹಣವ್ಯಯ ಆಗಬಾರದೆಂಬ ಕಾರಣಗಳಿಂದ ನೆಲದ ಮೇಲೆ ಹಾಸಿದ ಚಾಪಿ ಅಥವಾ ಜಮಖಾನದ ಮೇಲೆ ಆಸೀನರಾಗುತ್ತಿದ್ದರು ಮತ್ತು ಮಲಗುತ್ತಿದ್ದರು. ಮೇಲು-ಕೀಳೆನ್ನದೆ ಬಡವ- ಬಲ್ಲಿದರೆನ್ನದೆ, ಹಿರಿ-ಕಿರಿಯ ಭಕ್ತರ ಸಂಗಡ ನಿಕಟ ಸಂಪರ್ಕವನ್ನು ಇಟ್ಟುಕೊಂಡಿದ್ದರು. ಪೂಜ್ಯರು ಲಾರಿ, ಬಸ್ಸು, ಚಕ್ಕಡಿಗಳಲ್ಲೂ ಪ್ರಯಾಣ ಮಾಡುತ್ತಿದ್ದರು ! ಕೊಟ್ಟೂರು, ಬಳ್ಳಾರಿ, ಯಲಿವಾಳಗಳಲ್ಲಿ ಹೆಚ್ಚು ತಂಗುತ್ತಿದ್ದರು. ಶ್ರೀಪೀಠದ ವತಿಯಿಂದ **ಸದ್ಧರ್ಮಪ್ರಭಾ** ಪತ್ರಿಕೆಯಲ್ಲಿ ಶ್ರೀಪೀಠದ ಜ್ಞಾನಗುರು ವಿದ್ಯಾಪೀಠದ ೧೯೪೭ರಿಂದ ೧೯೫೩ರವರೆಗಿನ ವರದಿಗಳು ಪ್ರಕಟಗೊಂಡವು. ೧೯೬೨, ೬೩ರಲ್ಲಿ ವಿಚಾರ ಸಂಕಿರಣಗಳು ಶ್ರೀಸನ್ನಿಧಿಯವರ ಸಾನ್ನಿಧ್ಯದಲ್ಲಿ ಜರುಗಿದವು. ದೇಶದ ವಿವಿಧ ಭಾಗಗಳಲ್ಲಿ ಅನೇಕ ಧರ್ಮೋಪದೇಶ ಕಾರ್ಯಗಳು, ಅಡ್ಡಪಲ್ಲಕ್ಕಿ ಉತ್ಸವಗಳು ಬಹು ವಿಜೃಂಬಣೆಯಿಂದ ನಡೆದವು. ಸಮಕಾಲೀನ ಪಂಚಪೀಠಾಧೀಶ್ವರರಲ್ಲೇ ಹಿರಿಯರೆನಿಸಿದ್ದ ಇವರು ತಮ್ಮ ಉತ್ತರಾಧಿಕಾರಿಗಳ ನೇಮಕ ಮತ್ತು ಹಣವ್ಯಯ ಮಾಡುವುದರಲ್ಲಿ ಬಹಳ ಎಚ್ಚರಿಕೆ ವಹಿಸುತ್ತಿದ್ದರು. ಕೊಟ್ಟೂರಿನ ಕಟ್ಟೇಮನಿ ದೈವಸ್ಥರ ಒತ್ತಾಯದಿಂದಾಗಿ ತಮ್ಮ ಉತ್ತರಾಧಿಕಾರಿಗಳ ನೇಮಕಕ್ಕೆ ಮನಸ್ಸು ಮಾಡಿದರು. ಈ ಕುರಿತು ಶೀತಲ ಸಮರವೇ ನಡೆಯಿತು.

ಶ್ರೀಸನ್ನಿಧಿಗಳು ಸರಳರು, ಸಜ್ಜನರು, ಶಿವಪೂಜಾನಿಷ್ಠರು, ವಾಕ್‌ಚತುರರು, ತ್ರಿಕಾಲಜ್ಞಾನಿಗಳು, ತಪೋನಿಧಿಗಳು ಮತ್ತು ಯೋಗಸಿದ್ಧರೂ ಆಗಿದ್ದರು. ಪೂಜ್ಯರಲ್ಲಿ ವಯೋಬಲ, ತಪೋಬಲ, ಯೋಗಬಲ, ಅನುಭವಬಲ ಮುಂತಾದ ಬಲಗಳು ಮೈಗೂಡಿದ್ದವು. ಸರಳಜೀವನ ಅವರಿಗೆ ಪ್ರಿಯವೆನಿಸಿತ್ತು. ಪೀಠಕ್ಕೆ ಅನೇಕ ಕ್ಲಿಷ್ಟ ಸಮಸ್ಯೆಗಳು ಬಂದರೂ ಎದೆಗುಂದದೇ ಅವುಗಳನ್ನು ಬಗೆ ಹರಿಸಿದರು. ಅವರು ಅಷ್ಟಾವರಣಗಳಲ್ಲಿ ಪ್ರವೀಣರಾಗಿದ್ದರು. ಧರ್ಮೋಪದೇಶಕ್ಕಾಗಿ ದೇಶದ ವಿವಿಧ ಕಡೆಗಳಲ್ಲಿ ಸಂಚರಿಸಿದರು. ಪೀಠಕ್ಕೆ ಎದುರಾದ ಅನೇಕ ಸಮಸ್ಯೆಗಳನ್ನು ಬಗೆಹರಿಸಿದರು. ವ್ಯಾಜ್ಯಗಳಲ್ಲಿ ಯಶಸ್ಸನ್ನು ಪಡೆದರು.

ಕೊಟ್ಟೂರಿನಲ್ಲಿ ಪೂಜ್ಯರಿಗೆ ವೈಭವದಿಂದ ತುಲಾಭಾರ ನೆರವೇರಿತು. ತದನಂತರ ಅವರು ದಿನಾಂಕ ೧೭.೧೧.೯೮ರಂದು ಬಳ್ಳಾರಿಯಲ್ಲಿ ಶಿವೈಕ್ಯರಾದರು. ಅವರ ಇಚ್ಛೆಯ ಮೇರೆಗೆ ಉಜ್ಜಯಿನಿ ಗ್ರಾಮದ ಹತ್ತಿರದ ಸಿದ್ಧನವರ್ತಿಯಲ್ಲಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ ನಡೆಯಿತು.

ಶ್ರೀಸನ್ನಿಧಿಗಳು ತಮ್ಮ ಅಧಿಕಾರಾವಧಿಯಲ್ಲಿ ಈ ಪೀಠಕ್ಕೆ ಇಬ್ಬರು ಜಗದ್ಗುರುಗಳನ್ನು ನೇಮಿಸಿದರು. ಮೊದಲು ಚರಪಟ್ಟಾಧ್ಯಕ್ಷರನ್ನಾಗಿ ಶ್ರೀ ಮರುಳಾರಾಧ್ಯ ಶಿವಾಚಾರ್ಯರನ್ನು ನೇಮಿಸಿದರು. ಅವರ ಅಕಾಲಿಕ ಅಗಲಿಕೆಯ ನಂತರ ಸ್ಥಿರ ಪಟ್ಟಾಧ್ಯಕ್ಷರನ್ನಾಗಿ ಈಗಿನ ಶ್ರೀ ಮರುಳಸಿದ್ಧರಾಜದೇಶೀಕೇಂದ್ರ ಶಿವಾಚಾರ್ಯರಿಗೆ ಪಟ್ಟಾಧಿಕಾರವನ್ನು ಅನುಗ್ರಹಿಸಿದರು.

ಶ್ರೀಮರುಳಾರಾಧ್ಯ ಶಿವಾಚಾರ್ಯರು

ಉಜ್ಜಯಿನಿ ಶ್ರೀಪೀಠಕ್ಕೆ *(ಚಿತ್ರ. ನಂ. ೨೦ ರಿಂದ ೨೨)* ೧೧೦ನೇ ಜಗದ್ಗುರುಗಳಾಗಿ ಶ್ರೀಮರುಳಾರಾಧ್ಯ ಶಿವಾಚಾರ್ಯರು ನೇಮಕಗೊಂಡರು. ಅವರ ಪೂರ್ವಾಶ್ರಮದ ಹೆಸರು ಶಿವಪ್ರಕಾಶ. ಶ್ರೀಮಹಾಸ್ವಾಮಿಗಳು ಚಿತ್ರದುರ್ಗ ಜಿಲ್ಲೆಯ ಕಂದಗಲ್ಲು ಗ್ರಾಮದ ವೇ॥ ಶ್ರೀ ಚನ್ನಬಸಯ್ಯ ಮತ್ತು ಸೌ॥ ಕೊಟ್ರಮ್ಮ ಇವರ ಸುಪುತ್ರರಾಗಿ ೧೯೩೭ರಲ್ಲಿ ಜನಿಸಿದರು. ಶ್ರೀಮಹಾಸ್ವಾಮಿಗಳವರು ಮೊದಲು ಮೈಸೂರು ಅರಮನೆ ಜಪದಕಟ್ಟಿ ಬೃಹನ್ಮಠದ ಪಟ್ಟಾಧಿಕಾರಿಗಳಾಗಿದ್ದರು. ಜಗದ್ಗುರು ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳ ಸಂಕಲ್ಪದಂತೆ ಶ್ರೀ ಷ. ಬ್ರ. ಶಿವಪ್ರಕಾಶಶಿವಾಚಾರ್ಯಸ್ವಾಮಿಗಳಿಗೆ ದಿನಾಂಕ ೨೮.೮.೧೯೮೫ರಂದು ಉಜ್ಜಯಿನೀ ಸದ್ಧರ್ಮ ಪೀಠಕ್ಕೆ ಪಂಚ ಮುದ್ರಾಪೂರ್ವಕ ಕಿರೀಟಧಾರಣೆಯನ್ನು ಮಾಡಿ ಚರಪಟ್ಟಾಧಿಕಾರವನ್ನು ನೀಡಲಾಯಿತು. ಅವರಿಗೆ ಶ್ರೀ ಮರುಳಾರಾಧ್ಯಶಿವಾಚಾರ್ಯ ಮಹಾಸ್ವಾಮಿಗಳೆಂದು ನಾಮಕರಣ ಮಾಡಲಾಯಿತು. ಶ್ರೀ ಶಿವಪ್ರಕಾಶ ಸ್ವಾಮಿಗಳ ಬಹು ವರ್ಷಗಳ ಬಯಕೆ ಈಗ ಈಡೇರಿತು.

ಪೂಜ್ಯರು ಪ್ರಾಥಮಿಕ ಶಿಕ್ಷಣವನ್ನು ಚಿತ್ರದುರ್ಗದಲ್ಲಿ ಮುಗಿಸಿದರು. ಬೆಂಗಳೂರಿನ ಶ್ರೀ ಜಯ ಚಾಮರಾಜೇಂದ್ರ ಸಂಸ್ಕೃತ ಮಹಾಪಾಠ ಶಾಲೆಯಲ್ಲಿ ಹನ್ನೆರಡು ವರ್ಷ ಅಧ್ಯಯನ ಮಾಡಿ **ಶಕ್ತಿವಿಶಿಷ್ಟಾದ್ವೈತ** ವೇದಾಂತ ವಿದ್ವತ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಪಾಸಾದರು. ಈ ಸಂದರ್ಭದಲ್ಲಿ ಶ್ರೀಮಹಾಸ್ವಾಮಿಗಳು ೧೨ ವರ್ಷ ಬೆಂಗಳೂರಿನ ಮಹಂತ ಮಠದಲ್ಲಿ ತಂಗಿದ್ದರು. ವ್ಯಾಜ್ಯದಲ್ಲಿ ಸಿಲುಕಿದ್ದ ಶ್ರೀ ಪೀಠದ ಅರಮನೆ ಜಪದಕಟ್ಟಿ ಮಠದ ಉಳಿವಿಗಾಗಿ

ಶ್ರಮಿಸಿ ಯಶಸ್ಸು ಪಡೆದರು. ಶ್ರೀ ಪೀಠಕ್ಕೆ ಆನೆ ಒಂದನ್ನು ಸರಕಾರದ ಸಹಾಯದಿಂದ ಪಡೆದರು. ಚಿತ್ರದುರ್ಗದಲ್ಲೂ ಶ್ರೀಜಗದ್ಗುರು ಪಂಚಾಚಾರ್ಯ ಕಲ್ಯಾಣ ಮಂಟಪವನ್ನು ಕಟ್ಟಿಸಲು ಇವರು ಕಾರಣರಾಗಿದ್ದಾರೆ.

ಪೂಜ್ಯರು ಹಿರಿಯ ಜಗದ್ಗುರುಗಳ ಸಂಕಲ್ಪದಂತೆ ಸಮಾಜಕ್ಕೆ ಕೆಲವು ಒಳ್ಳೆಯ ಕಾರ್ಯಗಳನ್ನು ಮಾಡಿದರು. ಕೇಂದ್ರ ಸರ್ಕಾರದ ಆರ್ಥಿಕ ನೆರವಿನಿಂದ ಶ್ರೀಸನ್ನಿಧಿಗಳು ಕೆಲವು ಗ್ರಂಥಗಳನ್ನು ಪ್ರಕಟಿಸಿದರು. ಕೆಲಕೃತಿಗಳ ಅನುವಾದ ಕಾರ್ಯಕ್ಕೆ ಪ್ರೋತ್ಸಾಹ ನೀಡಿದರು. ಅವರ ಪ್ರಯತ್ನದಿಂದ ಈಶ, ಕೇನ, ಮುಂಡಕ, ಸಿದ್ಧಾಂತ ಶಿಖೋಪನಿಷತ್ತು ಮುಂತಾದ ವೀರಶೈವ ಸಿದ್ಧಾಂತ ಪರವಾದ ಭಾಷ್ಯ ಗ್ರಂಥಗಳು ಹೊರಬಂದವು. ಶ್ರೀ ಉಜ್ಜಯಿನಿ ಸಿಂಹಾಸನದ ಗುರುಪರಂಪರೆಯ ವಿಷಯವನ್ನು ಸಮಗ್ರವಾಗಿ ಸಂಗ್ರಹಿಸಿ ಸದ್ಧರ್ಮಪ್ರಭಾದ ೨೬ನೇ ಸಂಚಿಕೆಯಲ್ಲಿ (೧೯೯೨) ಪ್ರಕಟಿಸಿದರು. ದೇಶದ ವಿವಿಧ ಭಾಗಗಳಲ್ಲಿ ಸಂಚರಿಸಿದರು. ಅನೇಕ ಯೋಜನೆಗಳನ್ನು ಹಾಕಿಕೊಂಡು ಕಾರ್ಯಮಗ್ನರಾಗಿದ್ದಾಗಲೇ ಪೂಜ್ಯರು ದಿನಾಂಕ ೩.೪.೧೯೯೫ರಲ್ಲಿ ಅಕಾಲಿಕವಾಗಿ ಲಿಂಗೈಕ್ಯರಾದರು. ಶ್ರೀಸನ್ನಿಧಿಗಳವರ ಅಪೇಕ್ಷೆಯಂತೆ ಚಿತ್ರದುರ್ಗದಲ್ಲಿ ಅವರ ಅಂತ್ಯ ಸಂಸ್ಕಾರವಾಯಿತು. ಅಲ್ಲಿಯೇ ಅವರ ಸಮಾಧಿಯಿದೆ.

ಶ್ರೀ೧೦೦೮ ಜಗದ್ಗುರು ಮರುಳಸಿದ್ಧರಾಜದೇಶಿಕೇಂದ್ರ ಶಿವಾಚಾರ್ಯರು

ಶ್ರೀಸನ್ನಿಧಿಗಳು ಶ್ರೀಪೀಠದ ವಂಶಾನು ಪರಂಪರೆಯ ಪ್ರಕಾರ ೧೧೧ನೇ ಜಗದ್ಗುರುಗಳಾಗಿ ನೇಮಕಗೊಂಡರು. ಪೂಜ್ಯ ಮಹಾಸ್ವಾಮಿಗಳು ಬಳ್ಳಾರಿ ಜಿಲ್ಲೆಯ ಹಿರೇಹಾಳ ಗ್ರಾಮದ ವೇ॥ ಸಿದ್ದಯ್ಯ ಮತ್ತು ಸೌ॥ ಶ್ರೀಮತಿ ಚನ್ನಬಸಮ್ಮನವರ ಪುತ್ರರು. ಅವರ ಪೂರ್ವಾಶ್ರಮದ ಹೆಸರು ಬಸವರಾಜ. ಹಿಂದಿನ ಶ್ರೀಮದ್ ರಂಭಾಪುರಿ ಜಗದ್ಗುರು ಲಿಂ॥ ಶ್ರೀ ಶಿವಾನಂದರಾಜದೇಶಿಕೇಂದ್ರಶಿವಾಚಾರ್ಯರು ಹಿರೇಹಾಳ ಗ್ರಾಮದವ ರಾಗಿದ್ದರು. ಸಿರಿಗೆರೆ ಮತ್ತು ಹಿರೇಹಾಳು ಮಠದ ಪಟ್ಟಾಧ್ಯಕ್ಷರಾಗಿದ್ದ ಶ್ರೀ ಷ॥ಬ್ರ॥ ವಿರುಪಾಕ್ಷಶಿವಾಚಾರ್ಯಸ್ವಾಮಿಗಳ ದಿವ್ಯದೃಷ್ಟಿ ಸ್ಫುರದ್ರೂಪಿ ಬಾಲಕ ಬಸವರಾಜರ ಮೇಲೆ ಬಿದ್ದಿತು. ಹಿಂದಿನ ವಂಶದವರಾದ ಶ್ರೀಮದ್ ರಂಭಾಪುರಿ ಪೀಠದ ಲಿಂ॥ ವೀರಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳು ಬಳ್ಳಾರಿಗೆ ೧೯೬೭ರಲ್ಲಿ ಆಗಮಿಸಿದಾಗ ಷ॥ಬ್ರ॥ ವಿರುಪಾಕ್ಷ ಶಿವಾಚಾರ್ಯ ಸ್ವಾಮಿಗಳು ತಮ್ಮ ಮಠಕ್ಕೆ ಮರಿಯೊಬ್ಬರನ್ನು ಆಯ್ಕೆ ಮಾಡುವ ಕಾರ್ಯವನ್ನು ಹಮ್ಮಿಕೊಂಡರು. ಆ ನಿಮಿತ್ಯ ತಮ್ಮ ಪೂರ್ವಾಶ್ರಮ ಹಿರೇಹಾಳ್(ಡಿ) ಗ್ರಾಮದ ಮಳೆಮಠಕ್ಕೆ ಸಂಬಂಧಿಸಿದ ಎಂಟು ವಟುಗಳನ್ನು ಶ್ರೀ ರಂಭಾಪುರಿ ಜಗದ್ಗುರುಗಳ ಸನ್ನಿಧಾನದಲ್ಲಿ ಕರೆತರಿಸಿ ಸಾಲಾಗಿ ನಿಲ್ಲಿಸಲಾಯಿತು. ಆ

ಸಂದರ್ಭದಲ್ಲಿ ಮಹಾಸನ್ನಿಧಾನವು ಇವರನ್ನೇ (ಬಸವರಾಜ) ಆಯ್ಕೆ ಮಾಡಿ ಆಶೀರ್ವದಿಸಿದರು. ಈ ಆಯ್ಕೆ ಬಗ್ಗೆ ತಂದೆ, ತಾಯಿ, ಚಿಕ್ಕಪ್ಪ, ಅಣ್ಣ ಮತ್ತು ಮಾವನವರಿಗೆ ಸಮ್ಮತಿಯಿರಲಿಲ್ಲ. ಶ್ರೀಮಹಾಸ್ವಾಮಿಗಳ ಅಭಿಪ್ರಾಯವನ್ನು ಅವರು ವಿರೋಧಿಸಿದರು. ೧೯೮೦ ಜೂನ್ ೨೬ರಂದು ಶ್ರೀಮದುಜ್ಜಯಿನಿ ಸದ್ಧರ್ಮ ಪೀಠದ ಶ್ರೀ೧೦೦೮ ಜಗದ್ಗುರು ಸಿದ್ಧೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸನ್ನಿಧಿ ಅವರ ಕೃಪಾಶೀರ್ವಾದದಿಂದ ೧೫ರ ಹರೆಯದಲ್ಲೇ ಬಸವರಾಜರಿಗೆ ಪಟ್ಟಾಭಿಷೇಕ ಅನುಗ್ರಹವಾಗಿತ್ತು. ಶ್ರೀಗಳಿಗೆ ಶ್ರೀ ಷ॥ಬ್ರ॥ ಮರುಳಸಿದ್ಧ ಶಿವಾಚಾರ್ಯರೆಂಬ ನಾಮಾಂಕಿತವನ್ನು ದಯಪಾಲಿಸಲಾಯಿತು.

ಪೂಜ್ಯ ಶ್ರೀಗಳು ತಮ್ಮ ಆರನೆಯ ವಯಸ್ಸಿನಲ್ಲಿ ತಮ್ಮ ಹುಟ್ಟೂರಾದ ಹಿರೇಹಾಳ್ ಗ್ರಾಮದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಆರಂಭಿಸಿದರು. ನಂತರ ಶ್ರೀಗಳವರ ವಿದ್ಯಾಭ್ಯಾಸವು ಸಿದ್ಧಗಂಗಾ ಮತ್ತು ಕಾಶಿ ಪೀಠದ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ನಡೆಯಿತು. ಅವರು ಬಿ.ಎ.; ಎಂ. ಎ., ಮುಗಿಸಿ ಪಿಎಚ್.ಡಿ. ಸಂಶೋಧನೆಗೆ ನೋಂದಾಯಿಸಿದರು. ಅವರ ಸಂಶೋಧನ ವಿಷಯ ''ಶೈವಾಗಮ ಮತ್ತು ಉಪನಿಷತ್ತುಗಳಲ್ಲಿ ವೀರಶೈವಧರ್ಮ-ದರ್ಶನಗಳ ವಿಮರ್ಶೆ'' ಆಗಿತ್ತು.

ಶ್ರೀಮಹಾಸ್ವಾಮಿಗಳು ಕಾಶಿಯಲ್ಲಿ ಪಿಎಚ್.ಡಿ. ಸಂಶೋಧನೆಯಲ್ಲಿ ನಿರತರಾಗಿದ್ದ ಸಂದರ್ಭದಲ್ಲಿ ಶ್ರೀ ಉಜ್ಜಯಿನಿ ಜಗದ್ಗುರು ಶ್ರೀ ಮರುಳಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಹೊಸಪೇಟೆಯಲ್ಲಿ ಶ್ರೀ ಮರುಳಸಿದ್ಧರು ಉಜ್ಜಯಿನಿ ಪೀಠದ ಉತ್ತರಾಧಿಕಾರಿಯಾಗುವರೆಂದು ಸ್ವಯಂ ಘೋಷಿಸಿದರು. ಆ ಕಡೆ ಹಂಪೆಯ ಸಾವಿರ ದೇವರ ಮಠದ ಶ್ರೀ ಸಿದ್ಧಲಿಂಗಶಿವಾಚಾರ್ಯರು ಇವರ ಸಮ್ಮತಿಯನ್ನು ಕೇಳದೆ ತಮ್ಮ ಉತ್ತರಾಧಿಕಾರಿಯೆಂದು ಘೋಷಿಸಿ ೧೯೫೫ ನವ್ಹೆಂಬರ್ ೫ರಂದು ಪಟ್ಟಾಧಿಕಾರ ನೆರವೇರಿಸುವುದಾಗಿ ಪ್ರಕಟಿಸಿದರು. ಇದರಿಂದ ಶ್ರೀಮಹಾಸ್ವಾಮಿಗಳಿಗೆ ಈ ಬಗ್ಗೆ ಅನಾಸಕ್ತಿ ಉಂಟಾಯಿತು. ಮೊದಲು ತಮ್ಮ ಡಾಕ್ಟರೇಟ್ ಪದವಿ ಮುಗಿಸಿಕೊಳ್ಳುವುದು ಮುಖ್ಯ ಗುರಿಯೆಂದು ಭಾವಿಸಿದರು.

ಕೊಟ್ಟೂರಿನಲ್ಲಿ ಕಟ್ಟೀಮನಿ ದೈವಸ್ಥರು ಮೊದಲು ಮಾಡಿ ಶ್ರೀಪೀಠಕ್ಕೆ ಹೊಸ ಮರಿಗಳನ್ನು ನೇಮಿಸಬೇಕೆಂದು ಶ್ರೀಮದುಜ್ಜಯಿನೀ ಸದ್ಧರ್ಮ ಪೀಠದ ಜಗದ್ಗುರು ಶ್ರೀ ಸಿದ್ಧೇಶ್ವರರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳಿಗೆ ಒತ್ತಾಯ ತರಲಾರಂಭಿಸಿದರು. ಅವರ ಒತ್ತಾಯಕ್ಕೆ ಮಣಿದು ಈಗಿನ ಪೂಜ್ಯ ಶ್ರೀಗಳವರನ್ನು ನೇಮಿಸಲು ಸೂಚಿಸಿದರು. ಶ್ರೀ ಸಿದ್ಧೇಶ್ವರ ಜಗದ್ಗುರುಗಳು ಸೂಚಿಸಿದ ಹೆಸರಿಗೆ ಕಟ್ಟೀಮನಿ ದೈವಸ್ಥರು ಸಮ್ಮತಿಯನ್ನು ವ್ಯಕ್ತಪಡಿಸಿ ಒಪ್ಪಂದ

ಪತ್ರಕ್ಕೆ ಸಹಿಹಾಕಿಸಿಕೊಂಡರು. ತದನಂತರ ದೂತರ ಮೂಲಕ ಈ ವಿಷಯವನ್ನೊಳಗೊಂಡ ಒಂದು ಪತ್ರ ಕಳಿಸಲಾಯಿತು. ಈಗಿನ ಪೂಜ್ಯ ಶ್ರೀಗಳು ಆ ಪತ್ರವನ್ನು ಸ್ವೀಕರಿಸಿ ತೆರೆದು ನೋಡಿದಾಗ ಅವರಿಗೆ ನಂಬಲು ಅಸಾಧ್ಯವಾಯಿತು. ಶ್ರೀ ಸನ್ನಿಧಿಯವರ ಅಪ್ಪಣೆ ಹಾಗೂ ದೂತರ ಆಗ್ರಹಕ್ಕೆ ಮಣಿದು ಶ್ರೀಗಳವರು ಉಜ್ಜಯಿನಿ ಪೀಠಕ್ಕೆ ಅಮಾವಾಸ್ಯೆ ದಿವಸ ಆಗಮಿಸಿದರು. ಶ್ರೀ ಪೀಠದ ಪ್ರಾಂಗಣದಲ್ಲಿ ಸಾವಿರಾರು ಭಕ್ತ ಜನರು ಶ್ರೀಗಳವರ ಬರುವನ್ನು ವೀಕ್ಷಿಸುತ್ತ ಕಾದು ಕುಳಿತಿದ್ದರು. ಅಲ್ಲಿ ಆಸೀನರಾಗಿದ್ದ ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಇವರನ್ನು ಸಭೆಯ ಭಕ್ತರಿಗೆ ಪರಿಚಯಿಸಿ ಇವರೇ (ಮರುಳಸಿದ್ಧ) ತಮ್ಮ ಉತ್ತರಾಧಿಕಾರಿಗಳೆಂದು ಘೋಷಿಸಿದರು. ಆದರೂ ಈಗಿನ ಶ್ರೀಮಹಾಸ್ವಾಮಿಗಳು ಈ ಜವಾಬ್ದಾರಿ ತಮಗೆ ಬೇಡ, ತಮಗಿಂತ ಬೇರೆ ಅನುಭವಿ ಹಿರಿಯರಿಗೆ, ವಿದ್ವಾಂಸರಿಗೆ ಶ್ರೀ ಪೀಠಕ್ಕೆ ಆಯ್ಕೆ ಮಾಡಿಕೊಂಡರೆ ಒಳ್ಳೆಯದೆಂದು ಪರಿಪರಿಯಾಗಿ ಪ್ರಾರ್ಥಿಸಿಕೊಂಡರು. ಅವರ ವಿನಂತಿ ಫಲಕಾರಿಯಾಗಲಿಲ್ಲ. ಭಕ್ತರ ಕರತಾಡನ, ಜಯಘೋಷಣೆಗಳ ಮಧ್ಯೆಯೇ ಜಗದ್ಗುರು ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಅವರಿಗೆ ರೇಶ್ಮೆ ಮಡಿ ಹೊದಿಸಿ ಮಾಲೆಯನ್ನು ಹಾಕಿ ಆಶೀರ್ವದಿಸಿದರು.

ಮುಂದೆ ದಾವಣಗೆರೆಯಲ್ಲಿ ಜರುಗಿದ ಪಂಚಪೀಠಾಧೀಶ್ವರರ ಧರ್ಮ ಸಭೆಯಲ್ಲಿ ಶ್ರೀಗಳನ್ನು ಉಜ್ಜಯಿನೀ ಸದ್ಧರ್ಮ ಪೀಠದ ಭಾವೀ ಜಗದ್ಗುರುಗಳೆಂದು ಘೋಷಿಸಿದರು. ಪಂಚಪೀಠಾಧೀಶ್ವರರು ಶ್ರೀಗಳನ್ನು ಹರಸಿದರು. ಉಜ್ಜಯಿನಿ ಶ್ರೀ ಪೀಠದಲ್ಲಿ ದಿನಾಂಕ ೦೫-೧೧-೧೯೯೫ರಂದು ಪೀಠಾರೋಹಣ ಸಮಾರಂಭವಿದೆ ಯೆಂದು ಘೋಷಣೆ ಮಾಡಲಾಯಿತು. ಪಂಚಾಚಾರ್ಯರ ದಿವ್ಯ ಸನ್ನಿಧಾನದಲ್ಲಿ ಭಾರತದ ಮಾಜಿ ಪ್ರಧಾನಿ ಶ್ರೀ ಹೆಚ್.ಡಿ.ದೇವೆಗೌಡ (ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದಾಗ), ಶ್ರೀ ಎಂ.ಪಿ.ಪ್ರಕಾಶ (ಮಂತ್ರಿಗಳಾಗಿದ್ದಾಗ), ಅನೇಕ ಹಿರಿ-ಕಿರಿಯ ಮಂತ್ರಿಗಳು, ಶಾಸಕರು ಮುಖಂಡರು, ನಾಗರಿಕರು ಮತ್ತು ದೇಶ-ವಿದೇಶದ ಸಾವಿರಾರು ಭಕ್ತರ ಸಮ್ಮುಖದಲ್ಲಿ ಶ್ರೀ ಪೂಜ್ಯರನ್ನು ಉಜ್ಜಯಿನಿ ಸದ್ಧರ್ಮ ಪೀಠದ ಸ್ಥಿರ ಪಟ್ಟಾಧ್ಯಕ್ಷರನ್ನಾಗಿ ನೇಮಿಸಲಾಯಿತು. ಆಗ ಪಂಚ ಮುದ್ರಾಪೂರ್ವಕ ಕಿರೀಟ ಧಾರಣ ಮಾಡಿ, ಗುರುಪೀಠದ ಉಂಗುರ ನೀಡಿ ಆಶೀರ್ವದಿಸುವ ಮೂಲಕ ಪಟ್ಟಾಧಿಕಾರ ಉತ್ಸವವನ್ನು ವೈಭವದಿಂದ ೧೯೯೫ ನವಂಬರ್ ೫ರಂದು ನೆರವೇರಿಸಲಾಯಿತು.*(ಚಿತ್ರ ಸಂ. ೨೩ ರಿಂದ ೨೬)* ನೂತನ ಪೂಜ್ಯರಿಗೆ ಶ್ರೀ ೧೦೦೮ ಜಗದ್ಗುರು ಮರುಳಸಿದ್ಧ ರಾಜದೇಶಿಕೇಂದ್ರ ಶಿವಾಚಾರ್ಯರೆಂಬ ನಾಮಾಂಕಿತವನ್ನು ಅನುಗ್ರಹಿಸಲಾಯಿತು.

ಜಗದ್ಗುರುಗಳು ವಿದ್ವಾಂಸರು, ಸ್ಪುರದ್ರೂಪಿಗಳು, ಸರಳರು, ಸಜ್ಜನರು, ವಾಗ್ಮಿಗಳು, ಶಿಕ್ಷಣ-ಸಾಹಿತ್ಯ ಪ್ರೇಮಿಗಳು, ಶಿವಪೂಜಾನಿಷ್ಠರು, ದೂರದೃಷ್ಟಿಯುಳ್ಳವರು, ತಪೋನಿಧಿಗಳು, ಗಟ್ಟಿಮನಸ್ಸುಳ್ಳವರು, ಸೌಮ್ಯವಾದಿಗಳು ಅಲ್ಪ ಸಮಯದಲ್ಲೇ ಶ್ರೀಪೀಠವನ್ನು ಸರ್ವತೋಮುಖವಾಗಿ ಅಭಿವೃದ್ಧಿ ಪಥದಲ್ಲಿ ಸಾಗಿಸುತ್ತಿರುವರು. ಅನೇಕ ಹೊಸ ಹೊಸ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಶ್ರಮಿಸುತ್ತಿರುವರು. ಈಗಾಗಲೇ ಕೆಲವು ಕಾರ್ಯಗಳನ್ನು ಪೂರ್ತಿಗೊಳಿಸಿರುವರು. ಶ್ರೀಮಠದಲ್ಲಿ ಸದಾ ದಾಸೋಹ ವ್ಯವಸ್ಥೆಯನ್ನು ಕಲ್ಪಿಸಿರುವರು. ಧರ್ಮ ಜಾಗೃತಿಗೊಳಿಸಲು ಈಗಾಗಲೇ ದೇಶದ ನಾನಾ ಕಡೆಗಳಿಗೆ ಸಂಚರಿಸಿರುವರು. **ಸದ್ಧರ್ಮಪ್ರಭಾ** ತ್ರೈಮಾಸಿಕ ಪತ್ರಿಕೆಯ (ಈಗ ಮಾಸಿಕ) ಪ್ರಕಟಣಾಕಾರ್ಯ ಚುರುಕಾಗಿ ನಡೆಯಲು ಚೈತನ್ಯ ತುಂಬಿರುವರು. ಶ್ರೀ ಪೀಠದಿಂದ ವೆಬ್‌ಸೈಟನ್ನು ಆರಂಭಿಸಿರುವರು. ಆದರಿಂದ ಶ್ರೀಪೀಠದ ಚರಿತ್ರೆ ಹಾಗೂ ಅದರ ಸಾಂಸ್ಕೃತಿಕ ಚಟುವಟಿಕೆಗಳು ವಿಶ್ವದ ಎಲ್ಲ ಕಡೆ ಪಸರಿಸುವ ಕಾರ್ಯ ಆರಂಭವಾಗಿದೆ. ಹರಪನಹಳ್ಳಿ ಮತ್ತು ಕೊಟ್ಟೂರಿನಲ್ಲಿ ತಮ್ಮ ಸಂಸ್ಥೆಗಳಲ್ಲಿ ನೂತನ ತರಗತಿಗಳನ್ನು ತೆರೆದಿರುವರು. ನಿರಂತರವಾಗಿ ಶ್ರೀ ಪೀಠದಲ್ಲಿ ಪುರಾಣ-ಪ್ರವಚನ, ಧರ್ಮಗೋಷ್ಠಿ ಮುಂತಾದವುಗಳನ್ನು ಏರ್ಪಡಿಸುತ್ತಿರುವರು. ಶ್ರೀ ಪೀಠದ ಶ್ರೇಯೋಭಿವೃದ್ಧಿಗೆ ಶ್ರಮಿಸುವ, ಸಹಕರಿಸುವ ರಾಜಕೀಯಧುರೀಣರಿಗೆ, ಮಂತ್ರಿವರ್ಯರಿಗೆ, ಭಕ್ತರಿಗೆ; ಶ್ರೀಪೀಠದ ಚರಿತ್ರೆ ಬರೆಯುವವರಿಗೆ ಸಾಹಿತ್ಯ, ಸಂಗೀತ, ಪುರಾಣ, ಪ್ರವಚನ ಮುಂತಾದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿ ಕೊಂಡವರಿಗೆ ಗುರುರಕ್ಷೆ ನೀಡಿ ಸನ್ಮಾನಿಸುವ ಔದಾರ್ಯತೆಯನ್ನು ಜಾರಿಗೆ ತಂದಿರುವರು.

ಶ್ರೀಪೀಠದಲ್ಲಿ ಈಗ ಸದಾ ಪೂಜೆ-ಪ್ರವಚನ, ಹಬ್ಬ-ಉತ್ಸವ ಕಾರ್ಯಗಳು ಎಡೆಬಿಡದೆ ವಿಧಿವತ್ತಾಗಿ ನಡೆಯುತ್ತಿವೆ. ಶ್ರೀಪೀಠದ ವಿದ್ಯಾಸಂಸ್ಥೆಗಳ ಉತ್ತರೋತ್ತರ ಅಭಿವೃದ್ಧಿ ಪಡಿಸಿದ್ದಾರೆ. ಶ್ರೀಪೀಠಕ್ಕೆ ಒಂದು ಆನೆಯು ಬಂದಿದೆ. ಹೀಗೆ ಹತ್ತಾರು ಕಾರ್ಯಚಟುವಟಿಕೆಗಳನ್ನು ವ್ಯವಸ್ಥಿತವಾಗಿ ಶ್ರೀಪೀಠದಲ್ಲಿ ನಡೆಸಿಕೊಂಡು ಹೋಗುತ್ತಿರುವುದು ಭಕ್ತ ಸಮುದಾಯಕ್ಕೆ ಸೌಭಾಗ್ಯವೆನಿಸಿದೆ. ಈಗ ಶ್ರೀಜಗದ್ಗುರುಗಳ ಮತ್ತು ಶ್ರೀಪೀಠದ ದರ್ಶನ ಪಡೆಯುವ ಭಕ್ತರ ಸಂಖ್ಯೆ ಅಗಣಿತವಾಗಿದೆ.

ಅಲ್ಪಕಾಲಾವಧಿಯಲ್ಲಿಯೇ ಶ್ರೀಜಗದ್ಗುರುಗಳವರ ಅಡ್ಡಪಲ್ಲಕ್ಕಿ ಉತ್ಸವಗಳು ದೇಶದಲ್ಲಿ ಈ ಕೆಳಗಡೆ ಕಾಣಿಸಿದ ಸ್ಥಳಗಳಲ್ಲಿ ಜರುಗಿವೆ.

ಕರ್ನಾಟಕ : ಕೊಟ್ಟೂರು, ಬಳ್ಳಾರಿ, ಭಾಲ್ಕಿ, ಗುಲಬರ್ಗಾ, ರಾಯಚೂರು, ವಿಜಾಪುರ, ಜಮಖಂಡಿ, ಬಾಗಲಕೋಟೆ, ಬೆಳಗಾಂ, ಮೈಸೂರು, ಕವಲೇದುರ್ಗ, ಶಿವಮೊಗ್ಗ, ಬೆಂಗಳೂರು, ತುಮಕೂರು, ಹುಬ್ಬಳ್ಳಿ ಇತ್ಯಾದಿ.

ಮಹಾರಾಷ್ಟ್ರ : ಕೊಲ್ಲಾಪುರ, ಪಂಢರಾಪುರ, ನಾಂದೇಡ, ಸಾಂಗ್ಲಿ, ರತ್ನಾಗಿರಿ, ಕೊಯ್ನಾ, ಪಾಟ್ನೆ, ನಾಗಪುರ, ಸೊಲ್ಲಾಪುರ, ನಾಶಿಕ, ಔರಂಗಾಬಾದ್, ಮುಂಬಯಿ ಇತ್ಯಾದಿ.

ಆಂಧ್ರಪ್ರದೇಶ : ಸಿದ್ಧಪೇಟೆ, ನಾರಾಯಣಪೇಟೆ, ಹೊಳಗುಂದಿ, ಜೆಜ್‌ಭರ್ಲಾ ಇತ್ಯಾದಿ.

ಉತ್ತರಾಂಚಲ : ಕೇದಾರ, ಊಖೀಮಠ.

ಹರಿಯಾಣ : ಶಿವಾಲ.

ಶ್ರೀಜಗದ್ಗುರುಗಳವರ ಅಡ್ಡಪಲ್ಲಕ್ಕಿ ಉತ್ಸವ ಸಂದರ್ಭದಲ್ಲಿ ಭಕ್ತರು ನೀಡಿದ ಬಿನ್ನಹ ಪತ್ರಗಳು ಶ್ರೀಪೀಠದಲ್ಲಿ ರಾರಾಜಿಸುತ್ತಿವೆ.

ಮರಳಿದ ಭಂಡಾರ

ಶ್ರೀ ಮಹಾಸ್ವಾಮಿಗಳ ಪೂರ್ವಾಚಾರ್ಯರಾದ ಲಿಂ॥ ಶ್ರೀ ಜಗದ್ಗುರು ಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಶ್ರೀಪೀಠದ ಆಭರಣಗಳುಳ್ಳ ಭಂಡಾರ (ಟ್ರೆಜುರಿ)ವೊಂದನ್ನು ಕೊಟ್ಟೂರಿನ ಚಾನುಕೋಟಿ ಮಠದ ಶ್ರೀಮತಿ ಕಸ್ತೂರಮ್ಮ ಅವರ ಮನೆಯಲ್ಲಿ ೩೦ ವರ್ಷ ಕಾಲ ಇಟ್ಟಿದ್ದರು. ಪೂಜ್ಯ ಶ್ರೀಸಿದ್ಧೇಶ್ವರ ಜಗದ್ಗುರುಗಳು ಲಿಂಗೈಕ್ಯರಾದ ನಂತರ ಈ ಟ್ರೆಜುರಿಯನ್ನು ಪುರದ ಮುಖಂಡರಾದ ಶ್ರೀ ಚಾನುಕೋಟಿ ಮಠದ ಶ್ರೀ ಸಿದ್ಧಲಿಂಗ ಶಿವಾಚಾರ್ಯರು, ಮಾಜಿ ಸಚಿವರಾದ ಶ್ರೀ ಎಮ್.ಎಮ್.ಜೆ. ಸದ್ಯೋಜಾತ ಹಾಗೂ ಮಾಜಿ ಶಾಸಕ ಶ್ರೀ ಬಿ.ಎಸ್.ವೀರಭದ್ರಪ್ಪ ಮುಂತಾದ ಗಣ್ಯರ ಸಮಕ್ಷಮ ಶ್ರೀಮತಿ ಕಸ್ತೂರಮ್ಮನವರು ಶ್ರೀಪೀಠದ ಈಗಿನ ಜಗದ್ಗುರುಗಳವರಿಗೆ ಅರ್ಪಿಸಿರುವರು. ***(ಚಿತ್ರ ಸಂ. ೧೮೧)*** ಅವರ ಪ್ರಾಮಾಣಿಕತೆಯನ್ನು ಮೆಚ್ಚಿ ಭಕ್ತ-ಬಾಂಧವರು ಮತ್ತು ಶ್ರೀಪೀಠದ ಸನ್ನಿಧಿಯವರು ಅವರನ್ನು ಹರಸಿ ಆಶೀರ್ವದಿಸಿದರು. ಈ ಭಂಡಾರದಲ್ಲಿ ಶ್ರೀಪೀಠದ ನವರತ್ನ, ಬೆಳ್ಳಿ, ಬಂಗಾರದ ಆಭರಣಗಳು, ಪಾದ ಪೆಂಡೆ ಮತ್ತು ಕೆಲವು ಬಿರುದಾವಳಿಯ ಉಪಕರಣಗಳಿದ್ದವೆನ್ನಲಾಗಿದೆ.

ಈಗಿನ ಜಗದ್ಗುರುಗಳು ಲಿಂ॥ಜ॥ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳ ಸಂಸ್ಮರಣೋತ್ಸವವನ್ನು ಪಂಚಾಚಾರ್ಯರ ಸಮ್ಮುಖದಲ್ಲಿ ಏರ್ಪಡಿಸಲು ಕಾರಣರಾಗಿರುವರು. ***(ಚಿತ್ರ ಸಂ. ೧೮೨)***

ಶ್ರೀಮಹಾಸ್ವಾಮಿಗಳವರು ಶ್ರೀಪೀಠದ ಸಮಗ್ರ ಬೆಳವಣಿಗೆಗಾಗಿ ಮತ್ತು ವೀರಶೈವ ಧರ್ಮದ ಏಳ್ಗೆಗಾಗಿ ಅರ್ಪಣಾ ಮನೋಭಾವದಿಂದ ತಮ್ಮನ್ನು ತಾವು ತೊಡಗಿಸಿಕೊಂಡಿರುವುದು ಭಕ್ತರ ಪುಣ್ಯವೇ ಸರಿ.

ಶ್ರೀಪೀಠದ ಗುರುಪಟ್ಟಾವಳಿ

೧೯೫೩ರ ಗುರು ವರ್ಗದರ್ಪಣದಲ್ಲಿ ಮತ್ತು ೧೯೯೨ರ ಸದ್ಧರ್ಮ ಪ್ರಭಾ ಸಂಚಿಕೆ ಪತ್ರಿಕೆಯಲ್ಲಿ ಬಂದಿರುವ ಶ್ರೀ ಉಜ್ಜಯಿನಿ ಸದ್ಧರ್ಮ ಪೀಠದ ಗುರುಪರಂಪರೆಯ ಪಟ್ಟಿ ಹೀಗಿದೆ

ಶ್ರೀ ಜಗದ್ಗುರು ದ್ವ್ಯಕ್ಷರಶಿವಾಚಾರ್ಯರು (ಕೃತಯುಗ)
ಶ್ರೀ ಜಗದ್ಗುರು ದ್ವಿ ವಕ್ತ್ರಶಿವಾಚಾರ್ಯರು (ತ್ರೇತಾಯುಗ)
ಶ್ರೀ ಜಗದ್ಗುರು ದಾರುಕಶಿವಾಚಾರ್ಯರು (ದ್ವಾಪರ ಯುಗ)

ಮಧ್ಯಪ್ರದೇಶದ ಮೂಲ ಉಜ್ಜಯಿನಿ ಪೀಠದಲ್ಲಿದ್ದ ಜಗದ್ಗುರುಗಳು

೧. ಶ್ರೀ ಜ. ಮರುಳಾರಾಧ್ಯ ಶಿವಾಚಾರ್ಯರು (ಕಲಿಯುಗ)
೨. ಶ್ರೀ ಜ. ಮುಕ್ತಿಮುನಿ
೩. ಶ್ರೀ ಜ. ಸಿದ್ಧಮುನಿ (೨೦೦ ವರ್ಷ)
೪. ಶ್ರೀ. ಜ. ಶಿವಮುನೀಂದ್ರ ಸ್ವಾಮಿಗಳು (೧೨೫ ವರ್ಷ)
೫. ಶ್ರೀ. ಜ. ಶಾಂತ ಮುನಿ (೭೦ ವರ್ಷ)
೬. ಶ್ರೀ. ಜ. ಭವಭೂತಿಮುನಿ (೧೦೦ ವರ್ಷ)
(ಶ್ರೀಗಳಿಗೆ ಉಜ್ಜಯಿನಿ ಭೋಜರಾಜ ಹಾಗೂ ಅವರ ಆಸ್ಥಾನ ಕವಿ ಕಾಳಿದಾಸ ಮುಂತಾದವರಿಂದ ಮನ್ನಣೆ ಪಡೆದಿದ್ದರು.)
೭. ಶ್ರೀ. ಜ. ಇಮ್ಮಡಿ ಮುಕ್ತಿಮುನಿ (೫೦ ವರ್ಷ)
೮. ಶ್ರೀ. ಜ. ಶಕ್ತಿಮುನಿ (೨೦೦ ವರ್ಷ)
೯. ಶ್ರೀ. ಜ. ಇಮ್ಮಡಿ ಸಿದ್ಧಮುನಿ (೪೦ ವರ್ಷ)
೧೦. ಶ್ರೀ. ಜ. ಇಮ್ಮಡಿ ಶಾಂತಮುನಿ (೯೦ ವರ್ಷ)
೧೧. ಶ್ರೀ. ಜ. ಮುಮ್ಮಡಿ ಸಿದ್ಧಮುನಿ (೫೫ ವರ್ಷ)
೧೨. ಶ್ರೀ. ಜ. ಸಾಂಬಮುನಿ (೧೦೦ ವರ್ಷ)
೧೩. ಶ್ರೀ ಜ. ಇಮ್ಮಡಿ ಶಿವಮುನಿ (೩೦ ವರ್ಷ)
೧೪. ಶ್ರೀ. ಜ. ಈಶಾನ್ಯಮುನಿ (೭೫ ವರ್ಷ)
೧೫. ಶ್ರೀ. ಜ. ಶಂಭುಮುನಿ
(ಮುಂದಿನ ೧೬ರಿಂದ ೨೪ರವರೆಗಿನ ಜಗದ್ಗುರುಗಳ ಪಟ್ಟಿ ನೀಡಬೇಕಾಗಿದೆ)

ಕರ್ನಾಟಕದ ಈಗಿನ ಉಜ್ಜಯಿನಿ ಪೀಠದಲ್ಲಿರುವ ಜಗದ್ಗುರುಗಳು

೧. ಶ್ರೀ ಜ. ಮರುಳಾರಾಧ್ಯಶಿವಾಚಾರ್ಯರು (ಕಲಿಯುಗ)
೨. ಶ್ರೀ ಜಗದ್ಗುರು ಮಲ್ಲಿಕಾರ್ಜುನಶಿವಾಚಾರ್ಯರು
೩. ಶ್ರೀ ಜಗದ್ಗುರು ಸಿದ್ಧೇಶ್ವರಶಿವಾಚಾರ್ಯರು
೪. ಶ್ರೀ ಜಗದ್ಗುರು ಗುರುನಾಥಶಿವಾಚಾರ್ಯರು
೫. ಶ್ರೀ ಜಗದ್ಗುರು ಶಿವಯೋಗೀಂದ್ರಶಿವಾಚಾರ್ಯರು
೬. ಶ್ರೀ ಜಗದ್ಗುರು ತ್ರ್ಯಂಬಕಶಿವಾಚಾರ್ಯರು
೭. ಶ್ರೀ ಜಗದ್ಗುರು ಶಿವಾನಂದಶಿವಾಚಾರ್ಯರು
೮. ಶ್ರೀ ಜಗದ್ಗುರು ಮರುಲಸಿದ್ಧಶಿವಾಚಾರ್ಯರು
೯. ಶ್ರೀ ಜಗದ್ಗುರು ಅಮಿತಾನಂದಶಿವಾಚಾರ್ಯರು
೧೦. ಶ್ರೀ ಜಗದ್ಗುರು ನೀಲಗ್ರೀವಶಿವಾಚಾರ್ಯರು
೧೧. ಶ್ರೀ ಜಗದ್ಗುರು ನಂದೀಶ್ವರಶಿವಾಚಾರ್ಯರು
೧೨. ಶ್ರೀ ಜಗದ್ಗುರು ಗುರುರಾಜಶಿವಾಚಾರ್ಯರು
೧೩. ಶ್ರೀಜಗದ್ಗುರು ಮಹಾದೇವ(ಮಯಂತ) ಶಿವಾಚಾರ್ಯರು
೧೪. ಶ್ರೀ ಜಗದ್ಗುರು ಮಾಯಂತಕಶಿವಾಚಾರ್ಯರು
೧೫. ಶ್ರೀ ಜಗದ್ಗುರು ಗುರುಶಾಂತಶಿವಾಚಾರ್ಯರು
೧೬. ಶ್ರೀ ಜಗದ್ಗುರು ವೃಷಭಧ್ವಜಶಿವಾಚಾರ್ಯರು
೧೭. ಶ್ರೀ ಜಗದ್ಗುರು ವೀರವೃಷೇಂದ್ರಶಿವಾಚಾರ್ಯರು
೧೮. ಶ್ರೀಜಗದ್ಗುರು ದ್ವಿತೀಯ ಮಲ್ಲಿಕಾರ್ಜುನಶಿವಾಚಾರ್ಯರು
೧೯. ಶ್ರೀ ಜಗದ್ಗುರು ಶಿವಲಿಂಗಶಿವಾಚಾರ್ಯರು
೨೦. ಶ್ರೀ ಜಗದ್ಗುರು ದ್ವಿತೀಯ ಸಿದ್ಧೇಶ್ವರಶಿವಾಚಾರ್ಯರು
೨೧. ಶ್ರೀ ಜಗದ್ಗುರು ಲಿಂಗಾನಂದಶಿವಾಚಾರ್ಯರು
೨೨. ಶ್ರೀ ಜಗದ್ಗುರು ಸೋಮೇಶ್ವರಶಿವಾಚಾರ್ಯರು
೨೩. ಶ್ರೀ ಜಗದ್ಗುರು ಮುಕ್ತಿನಾಥಶಿವಾಚಾರ್ಯರು
೨೪. ಶ್ರೀ ಜಗದ್ಗುರು ವಾಮದೇವಶಿವಾಚಾರ್ಯರು

೨೫. ಶ್ರೀ ಜಗದ್ಗುರು ಜಗದೀಶ್ವರಶಿವಾಚಾರ್ಯರು
೨೬. ಶ್ರೀ ಜಗದ್ಗುರು ನಿಜಾನಂದಶಿವಾಚಾರ್ಯರು
೨೭. ಶ್ರೀ ಜಗದ್ಗುರು ವಿದ್ಯೇಶ್ವರಶಿವಾಚಾರ್ಯರು
೨೮. ಶ್ರೀ ಜಗದ್ಗುರು ಮಹೇಶ್ವರಶಿವಾಚಾರ್ಯರು
೨೯. ಶ್ರೀ ಜಗದ್ಗುರು ಅಘೋರಶಿವಾಚಾರ್ಯರು
೩೦. ಶ್ರೀ ಜಗದ್ಗುರು ಚೆನ್ನವೀರಶಿವಾಚಾರ್ಯರು
೩೧. ಶ್ರೀ ಜಗದ್ಗುರು ಜಟಾಸಿದ್ಧಶಿವಾಚಾರ್ಯರು
೩೨. ಶ್ರೀ ಜಗದ್ಗುರು ಗಂಗಾಧರಶಿವಾಚಾರ್ಯರು
೩೩. ಶ್ರೀ ಜಗದ್ಗುರು ಸಿದ್ಧವೀರಶಿವಾಚಾರ್ಯರು
೩೪. ಶ್ರೀ ಜಗದ್ಗುರು ರುದ್ರೇಶ್ವರಶಿವಾಚಾರ್ಯರು
೩೫. ಶ್ರೀ ಜಗದ್ಗುರು ಶಾಂತಲಿಂಗಶಿವಾಚಾರ್ಯರು
೩೬. ಶ್ರೀ ಜಗದ್ಗುರು ವೈ॥ ನಂದೀಶ್ವರಶಿವಾಚಾರ್ಯರು
೩೭. ಶ್ರೀ ಜಗದ್ಗುರು ಗಂಗಾಧರಶಿವಾಚಾರ್ಯರು
೩೮. ಶ್ರೀ ಜಗದ್ಗುರು ಮಹಾಲಿಂಗಶಿವಾಚಾರ್ಯರು
೩೯. ಶ್ರೀ ಜಗದ್ಗುರು ಪಂಚಾನನಶಿವಾಚಾರ್ಯರು
೪೦. ಶ್ರೀ ಜಗದ್ಗುರು ಬಿಲ್ವದಳಭೂಷಣಶಿವಾಚಾರ್ಯರು
೪೧. ಶ್ರೀ ಜಗದ್ಗುರು ಮಾರಸುರ್ಧನಶಿವಾಚಾರ್ಯರು
೪೨. ಶ್ರೀ ಜಗದ್ಗುರು ನಾಗಭೂಷಣಶಿವಾಚಾರ್ಯರು
೪೩. ಶ್ರೀ ಜಗದ್ಗುರು ಶ್ಯಾಮ ಕಂಧರಶಿವಾಚಾರ್ಯರು
೪೪. ಶ್ರೀ ಜಗದ್ಗುರು ಚಂದ್ರಶೇಖರಶಿವಾಚಾರ್ಯರು
೪೫. ಶ್ರೀ ಜಗದ್ಗುರು ಗುರುಸಿದ್ಧಶಿವಾಚಾರ್ಯರು
೪೬. ಶ್ರೀ ಜಗದ್ಗುರು ಭವಹರಶಿವಾಚಾರ್ಯರು
೪೭. ಶ್ರೀ ಜಗದ್ಗುರು ಚಂಡೀಶ್ವರಶಿವಾಚಾರ್ಯರು
೪೮. ಶ್ರೀ ಜಗದ್ಗುರು ಅಮೃತೇಶ್ವರಶಿವಾಚಾರ್ಯರು
೪೯. ಶ್ರೀ ಜಗದ್ಗುರು ಸುಜ್ಞಾನಶೇಖರಶಿವಾಚಾರ್ಯರು
೫೦. ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರು
೫೧. ಶ್ರೀ ಜಗದ್ಗುರು ಶೇಷಭೂಷಣಶಿವಾಚಾರ್ಯರು
೫೨. ಶ್ರೀ ಜಗದ್ಗುರು ಶಂಕರಾನಂದಶಿವಾಚಾರ್ಯರು
೫೩. ಶ್ರೀ ಜಗದ್ಗುರು ಮಹಾ ಮಲ್ಲಿಕಾರ್ಜುನಶಿವಾಚಾರ್ಯರು
೫೪. ಶ್ರೀ ಜಗದ್ಗುರು ಶಂಭುಲಿಂಗಶಿವಾಚಾರ್ಯರು
೫೫. ಶ್ರೀ ಜಗದ್ಗುರು ಶಿವಯೋಗ ಪ್ರಭಾಕರಶಿವಾಚಾರ್ಯರು

೫೬. ಶ್ರೀ ಜಗದ್ಗುರು ಚಿನ್ಮಯೋದಧಿಶಿವಾಚಾರ್ಯರು

೫೭. ಶ್ರೀ ಜಗದ್ಗುರು ಶಿವಜ್ಞಾನ ಸಂಜೀವನಶಿವಾಚಾರ್ಯರು

೫೮. ಶ್ರೀ ಜಗದ್ಗುರು ಗಜೇಂದ್ರ ಮಂದಾರಶಿವಾಚಾರ್ಯರು

೫೯. ಶ್ರೀ ಜಗದ್ಗುರು ಸಿದ್ಧೇಶ್ವರಶಿವಾಚಾರ್ಯರು

೬೦. ಶ್ರೀ ಜಗದ್ಗುರು ವರಸಿದ್ಧೇಶ್ವರಶಿವಾಚಾರ್ಯರು

೬೧. ಶ್ರೀ ಜಗದ್ಗುರು ಮಹಾಂತ ದೇವಶಿವಾಚಾರ್ಯರು

೬೨. ಶ್ರೀ ಜಗದ್ಗುರು ಮಲ್ಲಿಕಾರ್ಜುನಶಿವಾಚಾರ್ಯರು

೬೩. ಶ್ರೀ ಜಗದ್ಗುರು ವೃಷ್ಟಿಶಂಕರಶಿವಾಚಾರ್ಯರು

೬೪. ಶ್ರೀ ಜಗದ್ಗುರು ಶಂಭುಲಿಂಗಶಿವಾಚಾರ್ಯರು

೬೫. ಶ್ರೀ ಜಗದ್ಗುರು ಮದನಾರಿಶಿವಾಚಾರ್ಯರು

೬೬. ಶ್ರೀ ಜಗದ್ಗುರು ಮಾಯಾಕೋಲಾಹಲಶಿವಾಚಾರ್ಯರು

೬೭. ಶ್ರೀ ಜಗದ್ಗುರು ಶಿವಲೀಲಾ ಚೆನ್ನವೀರಶಿವಾಚಾರ್ಯರು

೬೮. ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರು

೬೯. ಶ್ರೀ ಜಗದ್ಗುರು ಓಂಕಾರಶಿವಾಚಾರ್ಯರು

೭೦. ಶ್ರೀ ಜಗದ್ಗುರು ಮುಕ್ತಿನಾಥಶಿವಾಚಾರ್ಯರು

೭೧. ಶ್ರೀ ಜಗದ್ಗುರು ಮಹಾದೇವಶಿವಾಚಾರ್ಯರು

೭೨. ಶ್ರೀ ಜಗದ್ಗುರು ಭರ್ಗೋದೇವಶಿವಾಚಾರ್ಯರು

೭೩. ಶ್ರೀ ಜಗದ್ಗುರು ಬಾಲಸಿದ್ಧೇಶ್ವರಶಿವಾಚಾರ್ಯರು

೭೪. ಶ್ರೀ ಜಗದ್ಗುರು ಚೆನ್ನ ವೃಷಭಶಿವಾಚಾರ್ಯರು

೭೫. ಶ್ರೀ ಜಗದ್ಗುರು ವೃದ್ಧ ವೃಷಭೇಂದ್ರಶಿವಾಚಾರ್ಯರು

೭೬. ಶ್ರೀ ಜಗದ್ಗುರು ಚೆನ್ನಮಲ್ಲಿಕಾರ್ಜುನಶಿವಾಚಾರ್ಯರು

೭೭. ಶ್ರೀ ಜಗದ್ಗುರು ಮುಕ್ತಿ ಮಲ್ಲಿಕಾರ್ಜುನಶಿವಾಚಾರ್ಯರು

೭೮. ಶ್ರೀ ಜಗದ್ಗುರು ಸಿದ್ಧಮಲ್ಲಿಕಾರ್ಜುನಶಿವಾಚಾರ್ಯರು

೭೯. ಶ್ರೀ ಜಗದ್ಗುರು ಏಕೋದೇವಶಿವಾಚಾರ್ಯರು

೮೦. ಶ್ರೀ ಜಗದ್ಗುರು ಆಚಾರ್ಯ ಭಾಸ್ಕರಶಿವಾಚಾರ್ಯರು

೮೧. ಶ್ರೀ ಜಗದ್ಗುರು ಮೋಕ್ಷೇಶ್ವರಶಿವಾಚಾರ್ಯರು

೮೨. ಶ್ರೀ ಜಗದ್ಗುರು ಸಿದ್ಧವೀರೇಶಶಿವಾಚಾರ್ಯರು

೮೩. ಶ್ರೀ ಜಗದ್ಗುರು ಭದ್ರೇಶ್ವರಶಿವಾಚಾರ್ಯರು

೮೪. ಶ್ರೀ ಜಗದ್ಗುರು ಅಮಿತಾನಂದಶಿವಾಚಾರ್ಯರು

೮೫. ಶ್ರೀ ಜಗದ್ಗುರು ಷಡಕ್ಷರಶಿವಾಚಾರ್ಯರು

೮೬. ಶ್ರೀ ಜಗದ್ಗುರು ಭಕ್ತಿವರ್ಧನಶಿವಾಚಾರ್ಯರು

೮೭. ಶ್ರೀ ಜಗದ್ಗುರು ಪಾಶಹರಶಿವಾಚಾರ್ಯರು
೮೮. ಶ್ರೀ ಜಗದ್ಗುರು ಮಹಿಮಾಕಾರಶಿವಾಚಾರ್ಯರು
೮೯. ಶ್ರೀ ಜಗದ್ಗುರು ಶಿವಲಿಂಗಶಿವಾಚಾರ್ಯರು
೯೦. ಶ್ರೀ ಜಗದ್ಗುರು ನಯನತ್ರಯಶಿವಾಚಾರ್ಯರು
೯೧. ಶ್ರೀ ಜಗದ್ಗುರು ವಿರೂಪಾಕ್ಷಶಿವಾಚಾರ್ಯರು
೯೨. ಶ್ರೀ ಜಗದ್ಗುರು ಮರುಲಸಿದ್ಧಶಿವಾಚಾರ್ಯರು
೯೩. ಶ್ರೀ ಜಗದ್ಗುರು ಮಹಾಂತ ಮಲ್ಲಿಕಾರ್ಜುನಶಿವಾಚಾರ್ಯರು
೯೪. ಶ್ರೀ ಜಗದ್ಗುರು ವೃಷ್ಟಿ ಮಲ್ಲಿಕಾರ್ಜುನಶಿವಾಚಾರ್ಯರು
೯೫. ಶ್ರೀ ಜಗದ್ಗುರು ಶಿವಲಿಂಗಶಿವಾಚಾರ್ಯರು
೯೬. ಶ್ರೀ ಜಗದ್ಗುರು ಭೃಹಚ್ಚೆನ್ನವೀರಶಿವಾಚಾರ್ಯರು
೯೭. ಶ್ರೀ ಜಗದ್ಗುರು ಪರಚನ್ನವೀರಶಿವಾಚಾರ್ಯರು
೯೮. ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರು
೯೯. ಶ್ರೀ ಜಗದ್ಗುರು ಮರುಲಸಿದ್ಧಶಿವಾಚಾರ್ಯರು
೧೦೦. ಶ್ರೀ ಜಗದ್ಗುರು ಜಟಾಗುರುಸಿದ್ಧಶಿವಾಚಾರ್ಯರು
೧೦೧. ಶ್ರೀ ಜಗದ್ಗುರು ಚೆನ್ನವೃಷಭಶಿವಾಚಾರ್ಯರು
೧೦೨. ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರು
೧೦೩. ಶ್ರೀ ಜಗದ್ಗುರು ಚನ್ನವೀರಶಿವಾಚಾರ್ಯರು
೧೦೪. ಶ್ರೀ ಜಗದ್ಗುರು ಚನ್ನವೃಷಭಶಿವಾಚಾರ್ಯರು
೧೦೫. ಶ್ರೀ ಜಗದ್ಗುರು ಗುರುಸಿದ್ಧಶಿವಾಚಾರ್ಯರು
೧೦೬. ಶ್ರೀ ಜಗದ್ಗುರು ಮರುಲಸಿದ್ಧಶಿವಾಚಾರ್ಯರು
೧೦೭. ಶ್ರೀ ಜಗದ್ಗುರು ಚನ್ನವೃಷಭಶಿವಾಚಾರ್ಯರು
೧೦೮. ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರು
೧೦೯. ಶ್ರೀ ಜಗದ್ಗುರು ಸಿದ್ಧೇಶ್ವರಶಿವಾಚಾರ್ಯರು
೧೧೦. ಶ್ರೀ ಜಗದ್ಗುರು ಮರುಳಾರಾಧ್ಯಶಿವಾಚಾರ್ಯರು
೧೧೧. ಶ್ರೀ ಜಗದ್ಗುರು ಮರುಳಸಿದ್ಧ ರಾಜದೇಶೀಕೇಂದ್ರಶಿವಾಚಾರ್ಯರು (ಈಗಿನ ಶ್ರೀಗಳು)

ಶ್ರೀಪೀಠದ ಇನ್ನೂ ಅನೇಕ ಜಗದ್ಗುರುಗಳ ಹೆಸರುಗಳು ಮತ್ತು ಅವರ ಸಾಧನೆಗಳು ಅಲ್ಲಲ್ಲಿ ಗೋಚರಿಸಿದ್ದು ಅವರ ಹೆಸರುಗಳನ್ನು ಈ ಪಟ್ಟಿಯಲ್ಲಿ ಈ ಸಧ್ಯ ನೀಡಿರುವುದಿಲ್ಲ.

ಅಡಿ ಟಿಪ್ಪಣಿಗಳು :

೧. **ವೀರಶೈವ ಸದಾಚಾರ ಸಂಗ್ರಹ,** ೧,೩೭-೩೯.

೨. ಡಾ. ಶಿವಾನಂದ ಶಿವಾಚಾರ್ಯ; ೧೯೯೩ : **ಶ್ರೀ ಜಗದ್ಗುರು ಪಂಚಾಪೀಠಾಧೀಶ್ವರರು**, ಪು. ೨೬-೨೭, ಬೆಂಗಳೂರು.

೩. **ಅದೇ ಮತ್ತು ಶಿವಮಹಾಪುರಾಣ** : ಒಂಬತ್ತನೇ ಅಧ್ಯಾಯ.

೪. ಡಾ. ಶಿವಾನಂದ ಶಿವಾಚಾರ್ಯ, ಅದೇ, ಪು. ೨೮-೨೯.

೫. **ಸದ್ಧರ್ಮಪ್ರಭ,** ೧೯೯೨, ಸಂ.೨೬, ಪು. ೭೧-೭೩, ಮೈಸೂರು.

೬. ವಿರೂಪಾಕ್ಷ ಶಾಸ್ತ್ರಿಗಳು : ೧೯೫೩, **ಗುರುವರ್ಗದರ್ಪಣ,** ಶ್ರೀ ಜಗದ್ಗುರು ಪಂಚಪೀಠಗಳ ಪರಿಚಯ, ಪು.೧೭-೨೬, ಮೈಸೂರು.

೭. **ಸದ್ಧರ್ಮ ಪ್ರಭಾ;** ೧೯೯೨, ಸಂ.೨೬,

೮. ಡಾ.ಶಿವಾನಂದ ಶಿವಾಚಾರ್ಯ ಸ್ವಾಮಿಗಳು, ೧೯೯೩, ಅದೇ.

೯. ಕಲ್ಲಿಮಂಗಲಂ ಶ್ರೀಕಂಠಯ್ಯ ಮಾಗಡಿ : **ವೀರಶೈವ ಮತಾಚಾರ್ಯರ ಕಾಲನಿರ್ಣಯ,** ಪು. ೭೧

೧೦. **ಸದ್ಧರ್ಮ ಪ್ರಭಾ;** ೧೯೯೨ ಅದೇ, ಪು.೪೫-೪೬.

೧೧. ಡಾ.ಎಂ.ಶಿವಮೂರ್ತಿ ಅವರು ಈ ವಿಷಯವನ್ನು ತಿಳಿಸಿರುವರು.

೧೨. ಶ್ರೀ ಕಾಶೀ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು, ೨೦೦೧, **ವೀರಶೈವ ಪಂಚಪೀಠ ಪರಂಪರೆ,** ಪು.೨೫, ಉಜ್ಜಯಿನಿ (ಈ ಕೃತಿಯ ಲೇಖಕರ ಪೂರ್ವ ನಾಮಾಂಕಿತ ಈ ಮೇಲೆ ತಿಳಿಸಿದ ಡಾ.ಶಿವಾನಂದ ಶಿವಾಚಾರ್ಯರು)

೧೩. ಅದೇ.

೧೪. **ಸದ್ಧರ್ಮ ಪ್ರಭಾ;** ೧೯೯೨ ಅದೇ, ಪು.೬೭-೭೦.

೧೫. ಡಾ. ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು ; ೨೦೦೧: ಅದೇ.

೧೬. ಅದೇ.

೧೭. ಅದೇ.

೧೮. ಅದೇ.

೧೯. ಅದೇ.

೨೦. ಅದೇ.

೨೧. ವಿಶ್ವಬಂಧು ಮರುಳಸಿದ್ಧ.

೨೨. ಉಜ್ಜಯಿನಿ ಶ್ರೀ ಚನ್ನವೀರಸ್ವಾಮಿ ಇವರು ಈ ವಿಷಯವನ್ನು ತಿಳಿಸಿರುವರು.

೨೩. ಡಾ. ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು ; ೨೦೦೧: ಅದೇ ಪು. ೨೮.

೨೪. ಅದೇ.

೨೫. ವಿರೂಪಾಕ್ಷ ಶಾಸ್ತ್ರಿಗಳು; ೧೯೫೩., ಅದೇ ಮತ್ತು ಸದ್ಧರ್ಮ ಪ್ರಭಾ; ೧೯೯೨ ಸಂ.೨೬, ಪು. ೬೭-೭೦.

೨೬. **ಸದ್ಧರ್ಮ ಪ್ರಭಾ;** ೧೯೯೨ ಸಂ.೨೬., ಪು. ೫೮.

೨೭. ಉಜ್ಜಯನಿಯ ಶ್ರೀ ಯು. ಎಂ. ವೀರಯ್ಯನವರು ಈ ವಿಷಯವನ್ನು ತಿಳಿಸಿದರು.

೨೮. ಆಳವಂಡಿ ಶಿವಮೂರ್ತಿ ಸ್ವಾಮಿಗಳು ಈ ವಿಷಯವನ್ನು ಹೇಳಿರುವರು.

೨೯. ಉಜ್ಜಯನಿಯ ಶ್ರೀ ಯು. ಎಂ. ವೀರಯ್ಯನವರು ಈ ವಿಷಯವನ್ನು ಹೇಳಿದ್ದಾರೆ.

೩೦. ವಿರೂಪಾಕ್ಷ ಶಾಸ್ತ್ರಿಗಳು; ೧೯೫೩, ಅದೇ, ಪು. ೧೯.

೩೧. **ಸದ್ಧರ್ಮ ಪ್ರಭಾ;** ೧೯೯೨ ಅದೇ,

೩೨. ಅದೇ.

೩೩. ಕೊಟ್ಟೂರಿನ ಮಾಜಿ ಪುರಾಧ್ಯಕ್ಷ ಶ್ರೀ ಕೆ.ಸಿದ್ಧಲಿಂಗನಗೌಡ ಅವರು ತಿಳಿಸಿರುವರು. ಮತ್ತು **ಸದ್ಧರ್ಮ ಪ್ರಭಾ**; ೧೯೯೨ ಸಂ.೨೬.

೩೪. ವಿರೂಪಾಕ್ಷ ಶಾಸ್ತ್ರಿಗಳು; ೧೯೫೩, ಅದೇ, ಪು. ೧೯.

೩೫. ಉಜ್ಜಯನಿಯ ಶ್ರೀ ಯು. ಎಂ. ವೀರಯ್ಯನವರು ಈ ವಿಷಯವನ್ನು ಹೇಳಿದ್ದಾರೆ.

೩೬. ವಿರೂಪಾಕ್ಷ ಶಾಸ್ತ್ರಿಗಳು; ೧೯೫೩, ಅದೇ, ಪು. ೨೦.

೩೭. ವಿರೂಪಾಕ್ಷ ಶಾಸ್ತ್ರಿಗಳು; ೧೯೫೩, ಅದೇ, ಪು. ೧೯-೨೦.

೩೮. ವಿರೂಪಾಕ್ಷ ಶಾಸ್ತ್ರಿಗಳು; ೧೯೪೪, **ಜಗದ್ಗುರು ಶ್ರೀ ಸಿದ್ಧಲಿಂಗೇಶ ವಿಜಯ.**

೩೯. ಅದೇ.

೪೦. ವಿರೂಪಾಕ್ಷ ಶಾಸ್ತ್ರಿಗಳು; ೧೯೪೪, ಅದೇ, ಮತ್ತು ಎಸ್.ಎಂ.ಚಂದ್ರಶೇಖರಯ್ಯ; ೧೯೮೭, ಶ್ರೀ ಸಿದ್ಧಲಿಂಗ ಶಿವಾಚಾರ್ಯರು, ಗದಗ.

೪೧. ಕೊಟ್ಟೂರಿನ ಶ್ರೀ ಕೋಡಿಹಳ್ಳಿ ದೊಡ್ಡವೀರಪ್ಪನವರು ಈ ವಿಷಯವನ್ನು ತಿಳಿಸಿರುವರು.

೪೨. ವಿರೂಪಾಕ್ಷ ಶಾಸ್ತ್ರಿಗಳು; ೧೯೪೪, ಅದೇ.

೪೩. ಅದೇ.

೪೪. ಶ್ರೀ ಶಾಂತವೀರಯ್ಯ; **ಕನ್ನಡಪ್ರಭ ದಿನಪತ್ರಿಕೆ;** ೧೮-೪-೨೦೦೨.

೪೫. ವಿರೂಪಾಕ್ಷ ಶಾಸ್ತ್ರಿಗಳು; ೧೯೪೪, ಅದೇ.

೪೬. ಅದೇ.

೪೭. ಅದೇ.

೪೮. ಅದೇ ಮತ್ತು ವಿರೂಪಾಕ್ಷ ಶಾಸ್ತ್ರಿಗಳು, ೧೯೫೩, ಅದೇ, ಪು. ೨೪.

೪೯. ವಿರೂಪಾಕ್ಷ ಶಾಸ್ತ್ರಿಗಳು, ೧೯೫೩, ಅದೇ, ಪು. ೨೯.

೫೦. **ಬಳ್ಳಾರಿ ಜಿಲ್ಲೆಯ ಪಟ್ಟಚರಾಧಿಕಾರಿಗಳ ಸಮ್ಮೇಳನದ ರಿಪೋರ್ಟು**, ೧೯೩೮, ಬಳ್ಳಾರಿ.

ಶ್ರೀಪೀಠದ ಜಗದ್ಗುರುಗಳ ನೇಮಕ-ಪಟ್ಟಾಭಿಷೇಕ

ಭಾರತದ ಪ್ರತಿಯೊಂದು ಮತ ಧರ್ಮದಲ್ಲಿ ತನ್ನದೇ ಆದ ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಯಿದೆ. ಅದರಲ್ಲಿ ಪುರೋಹಿತ ಮತ್ತು ಸಾಮಾನ್ಯ ವರ್ಗಗಳ ಜೋಡಣೆಯಿದೆ. ಇದೇರೀತಿಯ ಸಮಾಜೋಧಾರ್ಮಿಕ ಪರಿಕಲ್ಪನೆ ವೀರಶೈವರಲ್ಲಿದೆ. ವೀರಶೈವ ಧರ್ಮದಲ್ಲಿ ಗುರುವರ್ಗ ಮತ್ತು ಶಿಷ್ಯವರ್ಗಗಳಿವೆ. ಗುರುವರ್ಗದವರನ್ನು ಜಂಗಮರೆಂದು ಶಿಷ್ಯವರ್ಗದವರನ್ನು ಲಿಂಗಾಯತರೆಂದು ಕರೆಯಲಾಗುತ್ತದೆ. ಈ ಧರ್ಮದ ಮೂಲ ಧರ್ಮಗುರುಗಳು ಪಂಚ ಪೀಠಾಧೀಶ್ವರರು. ಪ್ರತಿಯೊಂದು ಪೀಠಕ್ಕೆ ಶಾಖಾ ಮಠಗಳು ಇರುತ್ತವೆ. ಉಜ್ಜಯಿನಿ ಸದ್ಧರ್ಮಪೀಠಕ್ಕೆ ೨೮೦೦೦ ಶಾಖಾಮಠಗಳಿದ್ದವು. ಈಗ ೬೦೦೦ ಶಾಖಾಮಠಗಳು ಮಾತ್ರ ಚಾಲ್ತಿಯಲ್ಲಿವೆ.[1] ಅವುಗಳ ಸಮಗ್ರಪಟ್ಟಿ ಮತ್ತು ಇತಿಹಾಸವನ್ನು ಇನ್ನೂ ರಚಿಸಬೇಕಿದೆ. ಈ ಪಂಚಪೀಠಗಳಿಗೆ ಮತ್ತು ಶಾಖಾಮಠಗಳಿಗೆ ವೀರಶೈವ ಜಂಗಮರ ಮನೆತನದ ವಟುಗಳನ್ನೇ ಸ್ವಾಮಿಗಳನ್ನಾಗಿ ಅಥವಾ ಜಗದ್ಗುರುಗಳನ್ನಾಗಿ ಆಯ್ಕೆ ಮಾಡುವ ಪರಂಪರೆಯಿದೆ. ಶಾಖಾಮಠಗಳ ಸ್ವಾಮಿಗಳಿಗೆ ಷಟ್‌ಸ್ಥಳ ಬ್ರಹ್ಮಿ ಎಂತಲೂ ಮತ್ತು ಜಗದ್ಗುರುಗಳಿಗೆ ಶ್ರೀ೧೦೦೮ ಜಗದ್ಗುರುಗಳೆಂತಲೂ ಕರೆಯಲಾಗುತ್ತದೆ. ಈ ಹಿನ್ನೆಲೆಯಲ್ಲಿ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರರ ನೇಮಕ, ಆಚಾರ, ವಿಚಾರ, ಉತ್ಸವ, ಧರ್ಮೋಪದೇಶಗಳು ವೈಶಿಷ್ಟ್ಯಪೂರ್ಣವಾಗಿವೆ.

ನೇಮಕಾತಿ

ಈಗಾಗಲೇ ಉಜ್ಜಯಿನಿ ಸದ್ಧರ್ಮಪೀಠದ ೧೧೧ಕ್ಕೂ ಹೆಚ್ಚು ಜಗದ್ಗುರುಗಳ ಸಂಕ್ಷಿಪ್ತ ವಿವರವನ್ನು ಈ ಕೃತಿಯ ಜಗದ್ಗುರುಗಳ ಪಟ್ಟವಲ್ಲರಿಯಲ್ಲಿ ಕೊಡಲಾಗಿದೆ. ಈ ಪೀಠದ ಆರು ಸಾವಿರ ಶಾಖಾಮಠಗಳು ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ, ತಮಿಳುನಾಡು ಇತ್ಯಾದಿ ಪ್ರದೇಶಗಳಲ್ಲಿ ಉಳಿದಿವೆ. ಸಾಮಾನ್ಯವಾಗಿ ಈ ಶಾಖಾಮಠಗಳ ಸ್ವಾಮಿಗಳನ್ನು ಇನ್ನಿತರ ಪೀಠಗಳಂತೆ ಜಗದ್ಗುರುಗಳನ್ನಾಗಿ ನೇಮಕ ಮಾಡುವರು. ಈ ಪೀಠದಲ್ಲಿ ಸ್ಥಿರ ಮತ್ತು ಚರ ಎಂಬ ಎರಡು ರೀತಿಯ ಜಗದ್ಗುರುಗಳನ್ನು ನೇಮಕ ಮಾಡುವ ಪರಂಪರೆಯಿದೆ.

ಉಜ್ಜಯಿನಿ ಸದ್ಧರ್ಮಪೀಠದಲ್ಲಿ ಅನೇಕ ಸಮಸ್ಯೆಗಳಿದ್ದವು. ಅವುಗಳ ವ್ಯಾಜ್ಯಗಳು ಕೋರ್ಟಿನಲ್ಲಿ ನಡೆಯುತ್ತಿದ್ದವು. ಹೀಗಾಗಿ ಶ್ರೀಪೀಠದ ಶ್ರೇಯೋಭಿವೃದ್ಧಿಗಾಗಿ ಶ್ರೀಸಿದ್ಧಲಿಂಗ ಜಗದ್ಗುರುಗಳವರ ಕಾಲಾವಧಿಯಲ್ಲಿ ಕೊಟ್ಟೂರಿನಲ್ಲಿ ಒಂದು ವೀರಶೈವ ಮಂಡಳಿಯೊಂದು ಅಸ್ತಿತ್ವಕ್ಕೆ ಬಂದಿತು. ಆ ಮಂಡಳಿಯಲ್ಲಿ ಕೊಟ್ಟೂರಿನ ಶ್ರೀಚರಪಟ್ಟಾಧಿಕಾರಿಗಳು, ಮಠಸ್ಥರು, ಗೌಡರು, ಸಾಹುಕಾರರು, ಬಣಕಾರರು, ಬುದ್ಧಿವಂತರು, ರೈತರು ಮುಂತಾದ ಸಮಸ್ತ ದೈವದವರು ಒಳಗೊಂಡಿದ್ದರು.

ಈ ದೈವದಲ್ಲಿದ್ದ ಕೊಟ್ಟೂರಿನ ಜಾಗಟಗೇರಿ ಮಿ॥ ಮ॥ ದೊಡ್ಡ ವೀರಪ್ಪಯ್ಯನವರು ಬಳ್ಳಾರಿಯಲ್ಲಿ ಶ್ರೀ ಜ॥ ಚೆನ್ನಬಸವಶಿವಾಚಾರ್ಯ ಮಹಾಸ್ವಾಮಿಗಳವರ ಅಭಿಲಾಷೆಯ ಪ್ರಕಾರ ಐದನೆಯ ಅಖಿಲಭಾರತ ವೀರಶೈವ ಮಹಾಸಭೆಯನ್ನು ಮತ್ತು ಇನ್ನಿತರ ಕಾರ್ಯಗಳನ್ನು ನೆರವೇರಿಸಲು ಕಾರಣರಾಗಿದ್ದರು. (೧೯೦೯ ಡಿಸೆಂಬರ್‌ನಲ್ಲಿ) ಈ ವಿಷಯಗಳನ್ನು ಜಗದ್ಗುರು ಶ್ರೀಸಿದ್ಧಲಿಂಗೇಶ ವಿಜಯ ಕೃತಿಯಲ್ಲಿ ಪ್ರಸ್ತಾಪಿಸಲಾಗಿದೆ.

ಉಜ್ಜಯಿನಿ ಪೀಠಾಚಾರ್ಯರ(ಜಗದ್ಗುರುಗಳ) ನೇಮಕಕ್ಕೆ ಶ್ರೀಪೀಠದ ಜಗದ್ಗುರುಗಳು ಸೂಚಿಸಿದ ಜಂಗಮ ವಟುವನ್ನು ಆಯ್ಕೆ ಮಾಡಲು ಕೊಟ್ಟೂರಿನ ಕಟ್ಟೀಮನಿ ದೈವಸ್ಥರ ಮತ್ತು ಹಾಗೂ ಇನ್ನುಳಿದ ನಾಲ್ವರು ಪೀಠಾಚಾರ್ಯರು ಸೂಚಿಸಿದ ವಟುವನ್ನು ಆಯ್ಕೆಮಾಡುವರು. ಕೊಟ್ಟೂರಿನ ಈ ಕಟ್ಟೀಮನಿ ದೈವಸ್ಥರು ಈಗ ಹೆಚ್ಚು ಜಾಗ್ರತರಾಗಿದ್ದಾರೆ. ಅದೊಂದು ಶ್ರೀಪೀಠದ ಹಿತರಕ್ಷಣಾ ಸಮಿತಿಯೂ ಆಗಿದೆ.

ಈ ದೈವಸ್ಥರಲ್ಲಿ ಶೆಟ್ಟರು, ಗೌಡರು, ಬಣಕಾರರು, ಸಾಹುಕಾರರು ಮತ್ತು ಮಠಸ್ಥರು ಕೆಳಗಿನಂತೆ ಇದ್ದಾರೆ.

೧. **ಶೆಟ್ಟರು :** ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿಯ ಹಿರೇಮಠದ ಹತ್ತಿರ ಶೆಟ್ರ ಗುರುಬಸಪ್ಪ ಮನೆತನದವರು. ಅವರು ಶ್ರೀ ಕೆ. ಸಿದ್ಧಲಿಂಗನಗೌಡರ ಬೀಗರು. ಈಗ ಶೆಟ್ರ ಮನೆತನದವರಾರೂ ಈ ಊರಲ್ಲಿ ಉಳಿದಿಲ್ಲ.

೨. **ಗೌಡರು :** ಗೌಡರು, ಕೊಟ್ಟೂರಿನ ಮಾಜಿ ಪುರಸಭಾಧ್ಯಕ್ಷರಾದ ಶ್ರೀ ಕೆ. ಸಿದ್ಧಲಿಂಗನಗೌಡರ ಮನೆತನದವರು. ಶ್ರೀ ಸಿದ್ಧಲಿಂಗನಗೌಡರ ಹಿರಿಯ ಅಣ್ಣಂದಿರಾದ ಲಿಂಗೈಕ್ಯ ಶ್ರೀ ಕೆ.ಕೊಟ್ರಬಸವನಗೌಡರು ಮಾಜಿ ವಿಧಾನಸಭಾ ಸದಸ್ಯರಾಗಿದ್ದರು. ಅವರು ಶ್ರೀ ಪೀಠದ ಸರ್ವತೋಮುಖ ಏಳ್ಗೆಗೆ ಸದಾ ಕಂಕಣಬದ್ಧರಾಗಿ ಸೇವೆಯನ್ನು ಸಲ್ಲಿಸುತ್ತಿದ್ದರು.

೩. ಬಣಕಾರರು : ಬಣಕಾರರು, ಕೊಟ್ಟೂರಿನ ದೇವರಮನಿ ಮನೆತನದವರು. ಅವರ ಮನೆಗಳು ಶ್ರೀಗುರು ಕೊಟ್ಟೂರೇಶ್ವರಸ್ವಾಮಿಯ ಹಿರೇಮಠದ ಹತ್ತಿರ ಇವೆ. ಈ ಮನೆತನದ ಶ್ರೀ ಸೋಮಜ್ಜ ತುಂಬಾ ಪ್ರಸಿದ್ಧರಾಗಿದ್ದರು.

೪. ಸಾಹುಕಾರರು : ಈ ಊರಿನಲ್ಲಿ ಮೊದಲು ಸಾಹುಕಾರರ ಹೆಸರಿನಲ್ಲಿ ಕಣಕುಪ್ಪಿ ಮನೆತನದವರಿದ್ದರು. ಈಗ ಜಾಗಟಗೇರಿ ದೊಡ್ಡೀರಜ್ಜರ ವಂಶಸ್ಥರಲ್ಲಿ ಶ್ರೀ ಎಂ. ಎಂ. ಜೆ. ಸದ್ಯೋಜಾತಪ್ಪನವರು ಇದ್ದಾರೆ. ಅವರು ಕೂಡ್ಲಿಗಿ ಕ್ಷೇತ್ರದಿಂದ ಅನೇಕ ಸಲ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾಗಿದ್ದರು. ಒಮ್ಮೆ ಕರ್ನಾಟಕ ಸರ್ಕಾರದ ಮಂತ್ರಿಗಳೂ ಆಗಿದ್ದರು. ಇವರನ್ನು ಸ್ಥಳಿಕರು ಈಗಲೂ ಧಣಿಗಳೆಂದು ಕರೆಯುವರು. ರಾಜಕೀಯವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಪ್ರಬಲರಾಗಿರುವ ಇವರೂ ಸಹ ಶ್ರೀಪೀಠದ ಸಂರಕ್ಷಣೆಗಾಗಿ ಮತ್ತು ಏಳ್ಗೆಗಾಗಿ ಸದಾ ಕಂಕಣ ಬದ್ಧರಾಗಿ ಸೇವೆ ಸಲ್ಲಿಸುತ್ತಿರುವರು. ಇವರ ಪುತ್ರರೂ ಶ್ರೀಪೀಠದ ಏಳ್ಗೆಗಾಗಿ ಕಂಕಣ ಬದ್ಧರಾಗಿ ಸೇವೆ ಸಲ್ಲಿಸುತ್ತಿರುವರು.

೫. ಮಠಸ್ಥರು : ಈ ಮಠಸ್ಥರಲ್ಲಿ ಶ್ರೀ ಪೀಠದ ಶಾಖಾ ಮಠಗಳು ಮತ್ತು ಗೃಹಸ್ಥ ಮಠಗಳು ಸೇರಿವೆ. ಅವರಲ್ಲಿ ನಾಲ್ಕು ಜನ ಪಟ್ಟದ ದೇವರು ಮತ್ತು ಹದಿನಾರು ಜನ ಗೃಹಸ್ಥ ಮಠಸ್ಥರು ಇದ್ದಾರೆ. ಪಟ್ಟದ ದೇವರಲ್ಲಿ ೧. ಭೂತಭುಜಂಗಮಠ ೨. ಅರಾಳಮಠ, ೩. ಗುಡೇಕೋಟಿಮಠ (ಇವರು ಶ್ರೀ ಗುರು ಕೊಟ್ಟೂರೇಶ್ವರ ಮಠಕ್ಕೆ ಕ್ರಿಯಾ ಮೂರ್ತಿಗಳಾಗಿದ್ದರು) ಮತ್ತು ೪. ಭಿಕ್ಷಾವರ್ತಿಮಠ. ಇತ್ತೀಚೆಗೆ ಚಾನುಕೋಟಿಮಠದ ಸಿದ್ಧಲಿಂಗ ಸ್ವಾಮಿಗಳನ್ನು ಐದನೆಯವರನ್ನಾಗಿ ಸೇರಿಸಲಾಗಿದೆ.

ಗೃಹಸ್ಥ ಮಠಗಳು : ೧. ಕೆಂಬಾವಿ ಮಠ, ೨. ಬೆನ್ನಳ್ಳಿ ಮಠ, ೩. ರುದ್ರವಡೆಯರ ಮಠ, ೪. ಪ್ರಭುವಡೆಯರ ಮಠ ಇತ್ಯಾದಿ ಗೃಹಸ್ಥರ ಮಠಗಳು ಸೇರಿವೆ.

ಪಟ್ಟಾಧಿಕಾರ

ಉಜ್ಜಯಿನಿ ಸದ್ಧರ್ಮ ಪೀಠದ ಜಗದ್ಗುರುಗಳವರ ಅಪೇಕ್ಷೆಯಂತೆ ಕೊಟ್ಟೂರು ಕಟ್ಟೇಮನೆ ದೈವಸ್ಥರ ಮತ್ತು ಚತುರಾಚಾರ್ಯರ ಸಮ್ಮತಿಯಿಂದ ಆಯ್ಕೆಯಾದ ವಟುವಿಗೆ[1] ಮೊದಲು ಶ್ರೀಪೀಠದಲ್ಲಿ ಪಟ್ಟಮಹೋತ್ಸವ ಕಾರ್ಯ ಜರುಗುವುದು. ಸದಾ ಶಿವಲಿಂಗಧಾರಿಗಳಾದ ಈ ವಟುವನ್ನು ಆ ಸಂದರ್ಭದಲ್ಲಿ ಪಂಚಪೀಠಾಧಿಪತಿಗಳ ಸಮ್ಮುಖದಲ್ಲಿ ಪಾದೋದಕ, ಗೋಮೂತ್ರ, ಪಂಚಗವ್ಯ, ಪಂಚಾಮೃತ ಇವುಗಳಿಂದ ಶುದ್ಧೀಕರಿಸುವರು. ಹಿರಿಯ ಗುರುಗಳು ಅವರ ನೆತ್ತಿಯ ಮೇಲೆ ಪಾದವಿಟ್ಟು ಅಭಿಷೇಕ ಮಾಡುವರು. ಶುದ್ಧಿಯ ನಂತರ ವಟುವಿಗೆ ನೂತನ ಉಡುದಾರ, ಶಿವದಾರ, ಬಟ್ಟೆಗಳನ್ನು ಕೊಡುವರು.

ಪಟ್ಟಬಂಧ ನಿಮಿತ್ತ ಬಂಗಾರದ ತಗಡಿನ ಮೇಲೆ ಅಧಿಕಾರ ಕೊಟ್ಟ ವಿವರದ ಪಟ್ಟಿಯನ್ನು ಹಣೆಗೆ ಕಟ್ಟುವರು. ಶ್ರೀಪೀಠದ ಮುದ್ರೆ ಉಂಗುರವನ್ನು ನೀಡಿ ಮುದ್ರಾಧರ್ಮ ಮುಗಿಸುವರು. ಮುತ್ತುಗದ ಬೆತ್ತಕ್ಕೆ ಕೆಂಪು ಧ್ವಜ ಕಟ್ಟಿ ಆ ಧರ್ಮಧ್ವಜವನ್ನು ಕೈಯಲ್ಲಿ ನೀಡುವರು. ತಾಮ್ರದ ಕಮಂಡಲನ್ನು ಕೈಯಲ್ಲಿ ಕೊಟ್ಟು, ವಿಭೂತಿ, ಗಂಧ, ರುದ್ರಾಕ್ಷಿ ಧಾರಣ ಮಾಡುವರು. ನಂತರ ಬಂಗಾರದ ಕಿರೀಟ ಧಾರಣ ಮಾಡುವರು.

ಅಡ್ಡಪಲ್ಲಕ್ಕಿ ಉತ್ಸವ

ಅಡ್ಡಪಲ್ಲಕ್ಕಿ ಉತ್ಸವ ಸಂದರ್ಭದಲ್ಲಿ ಜಗದ್ಗುರುಗಳು ಹೆಚ್ಚಿನ ವಸ್ತ್ರಾಭರಣಗಳನ್ನು ಧರಿಸುವರು. ಅವು ರೇಷ್ಮೆಯ ನಿಲುವಂಗಿ, ರುದ್ರಾಕ್ಷಿ ಕಂಕಣ, ಬೆಳ್ಳಿಯ ಪಾದರಕ್ಷೆ, ಚಿನ್ನದ ಪಾದಪೆಂಡಿ, ಚಿನ್ನ-ಹವಳ-ಮುತ್ತು ಮತ್ತು ರುದ್ರಾಕ್ಷಿಗಳ ಸರ, ಪದಕವುಳ್ಳ ಸರ, ಕಿರೀಟ ಮತ್ತು ಕೈಗಳ ಹತ್ತೂ ಬೆರಳುಗಳಿಗೆ ಹತ್ತು ಉಂಗುರಗಳನ್ನು ಧರಿಸುವರು. ಪಟ್ಟಾಭಿಷೇಕ ಪಡೆದ ನೂತನ ಜಗದ್ಗುರುಗಳನ್ನು ಮೊದಲು ಶ್ರೀಪೀಠದ ಅಡ್ಡಪಲ್ಲಕ್ಕಿಯಲ್ಲಿ ಕೂಡಿಸಿ ಬಹು ವಿಜೃಂಭಣೆಯಿಂದ ಉತ್ಸವವನ್ನು ಏರ್ಪಡಿಸುವರು. ಆನಂತರ ನೂತನ ಜಗದ್ಗುರುಗಳು ಸಿಂಹಾಸನಾರೋಹಣ ಮಾಡುವರು. ಪ್ರತಿಯೊಂದು ಕಾರ್ಯದಲ್ಲಿ ವೇದ ಮಂತ್ರಗಳನ್ನು ಪಠಿಸುವರು. ನಂದಿ, ಪುಣ್ಯಾ, ಪಂಚಕಳಸ, ರುದ್ರಕಳಸ, ಉಮಾ-ಮಹೇಶ್ವರ ಪ್ರತಿಷ್ಠಾಪನೆ, ವಿಘ್ನೇಶ್ವರ ಪ್ರತಿಷ್ಠಾಪನೆ ಇವೆಲ್ಲವುಗಳು ವೇದಘೋಷದೊಂದಿಗೆ ನಡೆಯುತ್ತವೆ. ಈ ಸಂದರ್ಭದಲ್ಲಿ ಜಂಗಮ ಪುರೋಹಿತರಿಗೆ ಗದ್ದಿಗೆ ಕಂಬಳಿಯನ್ನು ಹಾಸುವರು.

ಶ್ರೀಪೀಠದಲ್ಲಿ ಉತ್ಸವ ನಡೆದ ನಂತರ ಸಂಚಾರದ ಮೊದಲನೇ ಅಡ್ಡಪಲ್ಲಕ್ಕಿ ಉತ್ಸವ ಕೊಟ್ಟೂರಿನಲ್ಲಿ ಜರುಗುವ ಕಟ್ಟಳೆಯಿದೆ. ತದನಂತರವೇ ಇನ್ನಿತರ ಕಡೆಗಳಲ್ಲಿ ಶ್ರೀಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವ ಜರುಗುತ್ತದೆ. ಪೀಠಕ್ಕೆ ಪಟ್ಟಾಧಿಕಾರಿಗಳಾದ ಜಗದ್ಗುರುಗಳು ದೇವರ ಸರಿಸಮಾನರು ಮತ್ತು ಪೀಠದ ಮುಖ್ಯಸ್ಥರು.

ಜಗದ್ಗುರುಗಳ ಬಿರುದಾವಳಿ ಇತ್ಯಾದಿ

ಶ್ರೀಪೀಠದ ಜಗದ್ಗುರುಗಳಿಗೆ ೭೨ ಬಿರುದಾವಳಿಗಳಿವೆ. ಅವುಗಳೊಡನೆ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ ನಡೆಯಲು ಈ ಮೊದಲು ಸರಕಾರಿ ಜಿಲ್ಲಾ ಮೆಜಿಸ್ಟ್ರೇಟರಿಂದ ಹುಕುಂ ಪಡೆಯಲಾಗಿದೆ.

ಬಿರುದಾವಳಿಗಳ ಹೆಸರುಗಳು

ಅಡ್ಡಪಾಲಕಿ, ಸುವರ್ಣಪಾಲಕಿ, ರಜತಪಾಲಕಿ, ಪಾಲಕಿ, ಮೇಣೆ, ಪಂಚಕಲಶ, ವ್ಯಾಸಹಸ್ತ, ಶ್ವೇತಚ್ಛತ್ರ, ನಂದಿಧ್ವಜ, ಆಪ್ತಾಗಿರಿ, ಪಂಚವರ್ಣದ ಛತ್ರ, ಚಾಮರ, ವ್ಯಜನ, ಭೂಚಕ್ರದ ಕೊಡೆ, ಮಕರತೋರಣ, ರಾಜಗೊಂಡೆ, ಹಗಲುದೀವಟಿಗೆ, ಪಂಚದೀವಟಿಗೆ, ಬ್ರಹ್ಮಕಪಾಲ, ಸುವರ್ಣಪಾದಪೆಂಡೆ, ರಜತದಂಡ, ಸುವರ್ಣಭಲ್ಲೆ, ರಜತಭಲ್ಲೆ, ತ್ರಿಶೂಲ, ಹಸಿರು ನಿಶಾನಿ, ಕೆಂಪು ನಿಶಾನಿ, ಕಾವಿಯ ನಿಶಾನಿ, ನೀಲಿನಿಶಾನಿ, ನಾನಾವರ್ಣದ ನಿಶಾನಿ, ಅಶ್ವ, ಗಜ, ಒಂಟೆ, ಆನೆಯ ಮೇಲೆ ಹಸಿರು ನಿಶಾನಿ, ಒಂಟೆಯ ಮೇಲೆ ಹಸಿರು ನಿಶಾನಿ, ಆನೆಯ ಮೇಲೆ ಹಸಿರು ಕಾಷಾಯ ಧ್ವಜ, ಕುದುರೆಯ ಮೇಲೆ ಢಂಕಾ, ಆನೆಯ ಮೇಲೆ ಢಂಕಾ, ಒಂಟೆಯ ಮೇಲೆ ಢಂಕಾ, ಜಯಭೇರಿ, ಜಯಘಂಟೆ, ಜಂಗು, ಡಮರು, ಕಹಳೆ, ಕರ್ನಿ, ಜಾಗಟೆ, ಸುನಾದ, ಸೂರ್ಯವಾದ್ಯ, ಚಂದ್ರವಾದ್ಯ, ಮೃದಂಗ, ತಾಳ, ಪದಾತಿಗಣ, ಶಸ್ತ್ರಧಾರಿ, ತ್ರಿಶೂಲಧಾರಿ, ರಥ, ಪಂಚಾಶ್ವರಥ, ಬಲೀವರ್ದ, ಬಲೀವರ್ದರಥ, ದರ್ಪಣ, ವೇದಪಾಠಕ, ವಿಪ್ರವೀರ, ಮಾಹೇಶ್ವರ ಗಣ, ಭಜನಾ ಮಂಡಳಿ, ಭಟ್ಟಂಗಿ, ಸುಮಂಗಲ ಆರತಿ, ಪುರಾಣಿಕ, ಕೀರ್ತನಕಾರ, ವೈಯ್ಯಾಕರಣಿ, ನೈಯ್ಯಾಯಿಕ, ಷಡ್‌ದರ್ಶನ ಪಾರಂಗತ.

ಶ್ರೀಪೀಠಕ್ಕೆ ಎರಡು ಬೆಳ್ಳಿಯ ಸಿಂಹಾಸನ, ಒಂದು ಬೆಳ್ಳಿಯ ಪಲ್ಲಕ್ಕಿಗಳಿವೆ. ಬಂಗಾರದ ಎರಡು ಕಿರೀಟಗಳಿವೆ. ಐದು ನವರತ್ನ ಮಾಲೆಗಳಿವೆ. ಸುಮಾರು ಒಂದು ಕೆ.ಜಿ. ಬಂಗಾರದ ಪಾದ ಪೆಂಡೆಯವಿದೆ. ೫ ರಿಂದ೬ ಕೆ.ಜಿ.ಯ ಎರಡು ಕಹಳೆಗಳಿವೆ.

ಶ್ರೀ ಜಗದ್ಗುರುಗಳು ವೀರಶೈವರ ಪ್ರಧಾನ ತತ್ವಗಳಾದ ಅಷ್ಟಾವರಣ, ಷಟ್‌ಸ್ಥಲ ಮತ್ತು ಪಂಚಾಚಾರಗಳನ್ನು ಆಚರಿಸುವದು ಮತ್ತು ಪಂಚಯಜ್ಞ, ಇಷ್ಟಲಿಂಗ ಪೂಜೆ, ಮಾಡುವರು. ಪ್ರಣವ ಪಂಚಾಕ್ಷರಿ ಮಂತ್ರಪಠನ, ಶ್ರೀರುದ್ರ ಪಠನದ ಜೊತೆಗೆ, ಶಿವಾಗಮಗಳ ಅಧ್ಯಯನವನ್ನೂ ಮಾಡುವರು. ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತದ ಪ್ರತಿಪಾದನೆ ಮಾಡುವರು.

ಶ್ರೀಜಗದ್ಗುರುಗಳು ಧಾರ್ಮಿಕ ವಿಧಿ ವಿಧಾನಗಳಲ್ಲಿ ಶಿವಲಿಂಗಧಾರಣೆ, ಶಿವಲಿಂಗದೀಕ್ಷೆ, ಮಾಹೇಶ್ವರ ದೀಕ್ಷೆ (ಅಯ್ಯಾಚಾರ), ಉಪದೇಶ, ಅನುಗ್ರಹ ಮೂರ್ತಿಯ ಪ್ರತಿಷ್ಠಾಪನೆ ಮುಂತಾದ ಶುಭ ಕಾರ್ಯಗಳನ್ನು ನೆರವೇರಿಸುವರು.

ಅಡ್ಡಪಲ್ಲಕ್ಕಿ ಉತ್ಸವಗಳಲ್ಲಿ ಜಗದ್ಗುರುಗಳು ತಮ್ಮ ಸಕಲ ಬಿರುದಾವಳಿಗಳೊಂದಿಗೆ ಬಂಗಾರದ ಕಿರೀಟಧಾರಣ ಮಾಡಿರಬೇಕು. ಸಂಪ್ರದಾಯದ ಪ್ರಕಾರ ಪೂಜ್ಯ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವಗಳಲ್ಲಿ ಮೆರೆಯಬೇಕು. ಶ್ರೀಪೀಠಾಚಾರ್ಯರ ಅಡ್ಡಪಲ್ಲಕ್ಕಿ ಉತ್ಸವಗಳಿಗೆ ಸಮಾಜದಲ್ಲಿ ತನ್ನದೇ ಆದ

ಉನ್ನತ ಸ್ಥಾನಮಾನವಿದೆ. ಭಕ್ತಿ ಗೌರವವಿದೆ. ಉಜ್ಜಯಿನಿ ಜಗದ್ಗುರುಗಳ ಪಲ್ಲಕ್ಕಿಯ ಮೆರವಣಿಗೆಯನ್ನು ಭಕ್ತ ಜನಸ್ತೋಮದ ಮುಂದೆ ಆನೆ, ಒಂಟೆ, ಕುದುರೆ, ಎತ್ತು ಮತ್ತು ವಾದ್ಯ ಮೇಳದೊಂದಿಗೆ ಸಂಭ್ರಮದಿಂದ ಜರುಗಿಸುವ ಪರಂಪರೆಯಿದೆ. ಈ ಉತ್ಸವದಲ್ಲಿ ಈ ಮೊದಲು ಎರಡು ಆನೆಗಳು, ಮೂರು ಒಂಟೆಗಳು, ಅನೇಕ ಎತ್ತುಗಳು ಇರುತ್ತಿದ್ದವು. ಅಲ್ಲದೆ ಅನೇಕರು ನಂದಿಕೋಲು ಹೊತ್ತು ಕುಣಿಯುತ್ತಿದ್ದರು. ಸಮಾಳ ಮುಂತಾದ ವಾದ್ಯಮೇಳದವರು ಉತ್ಸವದಲ್ಲಿ ಪಾಲ್ಗೊಳ್ಳುವರು. ಅವರು ಭಕ್ತಿಯಿಂದ ಮೈ ಮರೆತು ತಮ್ಮ ವಾದ್ಯಸೇವೆಯನ್ನು ಮಾಡುವರು.

ಶ್ರೀ ಜಗದ್ಗುರುಗಳು ನಿತ್ಯ ಕನಿಷ್ಠ ಎರಡು ಸಲ ಶಿವಪೂಜೆಯನ್ನು ಮಾಡಿಕೊಳ್ಳುವರು. ಶ್ರಾವಣ ಮಾಸದಲ್ಲಿ ತ್ರಿಕಾಲ ಪೂಜೆ ನಡೆಸುವರು. ಈಗಿನ ಶ್ರೀ೧೦೦೮ ಜಗದ್ಗುರು ಶ್ರೀ ಮರುಳಸಿದ್ಧ ರಾಜದೇಶೀಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ನಿತ್ಯ ತ್ರಿಕಾಲ ಪೂಜೆ ಮಾಡಿಕೊಳ್ಳುವರು. ಶ್ರೀಮಹಾಸ್ವಾಮಿಗಳು ತಮ್ಮ ಶಿವಪೂಜೆ ನಂತರ ಶ್ರೀಪೀಠದ ಶ್ರೀ ಮರುಳಸಿದ್ಧಸ್ವಾಮಿ ಮತ್ತು ಇನ್ನಿತರ ದೇವರ ದರ್ಶನವನ್ನು ಏಕಚಿತ್ತದಿಂದ ಮೌನದಿಂದ ನಡೆಸುವರು. ಅದು ವಿಶಿಷ್ಟ ರೀತಿಯಲ್ಲಿದೆ. ಆ ಸಂದರ್ಭದಲ್ಲಿ ಭಕ್ತರಲ್ಲಿ ಭಯ-ಭಕ್ತಿಯನ್ನು ಉಕ್ಕಿಸುತ್ತದೆ. ಶ್ರೀಮಹಾಸ್ವಾಮಿಗಳವರ ಶಿವಪೂಜೆಯು ವೈಶಿಷ್ಟ್ಯಪೂರ್ಣವಾಗಿದೆ.

ಶ್ರೀಪೀಠದ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಅಂತಿಮ ಆದೇಶ ಮತ್ತು ತೀರ್ಪು ಶ್ರೀಪೀಠದ ಶ್ರೀಜಗದ್ಗುರುಗಳದ್ದೆ. ಶ್ರೀ ಜಗದ್ಗುರುಗಳ ಅನುಪಸ್ಥಿತಿಯಲ್ಲಿ ಅವರು ನೇಮಿಸಿದ ಪಟ್ಟಾಧಿಕಾರಿಗಳು ಶ್ರೀ ಪೀಠದ ಧಾರ್ಮಿಕ ಕಾರ್ಯಗಳನ್ನು ನೋಡಿಕೊಳ್ಳುವರು. ಶ್ರೀ ಜಗದ್ಗುರುಗಳ ಸಂಗಡ ಸದಾ ಶಿವಪೂಜಾ ಮರಿಗಳು ಮತ್ತು ಕಾರಭಾರಿಗಳಿರುತ್ತಾರೆ. ಶ್ರೀಮಹಾಸ್ವಾಮಿಗಳ ಸಂಚಾರವು ಮೊದಲು ಮೇಣೆಯ ಮೂಲಕ ನಡೆಯುತ್ತಿತ್ತು. ಜಗದ್ಗುರುಗಳು ಕುಳಿತ ಮೇಣೆಯನ್ನು ಜಟ್ಟಿಗಳು ಹೊತ್ತುಕೊಂಡು ಹೋಗುತ್ತಿದ್ದರು. ವಾಹನಗಳ ಸೌಕರ್ಯದಿಂದಾಗಿ ಜಗದ್ಗುರುಗಳು ಈಗ ಬಸ್ಸು, ಕಾರು, ಜೀಪುಗಳಲ್ಲಿ ಸಂಚರಿಸುವರು.

ಶ್ರೀಪೀಠದ ಜಗದ್ಗುರುಗಳನ್ನು ಆಹ್ವಾನಿಸುವಾಗ ಈ ಕೆಳಗಡೆ ತಿಳಿಸಿದ ಮಾದರಿಯಲ್ಲಿ ವಿಜ್ಞಾಪನಾ ಪತ್ರಗಳನ್ನು ಅರ್ಪಿಸುವ ಪರಂಪರೆಯಿದೆ.



೩೩. ಶ್ರೀ ಮಠದ
ಕಣದಲ್ಲಿರುವ
ಶ್ರೀ ಮಳಿಸ್ವಾಮಿ
ಜಗದ್ಗುರುಗಳ ಗದ್ದುಗೆ.

೩೫. ಸಿದ್ಧನವರ್ತಿಯ ಆಲದ
ಮರದ ಬುಡದಲ್ಲಿ
ಲಿಂ|| ಶ್ರೀ ಉ||ಜ|| ಸಿದ್ಧೇಶ್ವರ
ಮಹಾಸ್ವಾಮಿಗಳ ಗದ್ದುಗೆ.





೩೬. ಉ||ಪ||ಜ||
ಶ್ರೀ ಸಿದ್ಧೇಶ್ವರ ಶಿವಾಚಾರ್ಯ
ಮಹಾಸ್ವಾಮಿಗಳ ಗದ್ದುಗೆ
ಮುಂದೆ ಭಕ್ತರಿಂದ ಭಜನೆ.

೩೭. ಮಂಗಾಪುರದಲ್ಲಿ
ಶ್ರೀ ಗುರುಸಿದ್ಧ ಸ್ವಾಮಿಗಳ
ಗದ್ದುಗೆ.



ವಿಜ್ಞಾಪನಾ ಪತ್ರ

ಶ್ರೀ ಜಗದ್ಗುರು ಪಂಚಾಚಾರ್ಯಃ ಪ್ರಸೀದಂತು

ಜೀಯಾಚ್ಛ್ರೀ ದಾರುಕಾಚಾರ್ಯಃ ಶಿವಾಚಾರ್ಯಃ ಶಿಖಾಮಣೀ ।

ಯೋ ವೀರಶೈವ ಸಿದ್ಧಾಂತಂ ಸ್ಥಾಪಯಾಮಾಸ ಭೂತಲೇ ॥

ಶ್ರೀಮತ್ಸಚ್ಚಿದಾನಂದನಿತ್ಯಪರಿಪೂರ್ಣತ್ವಾದಿಲಕ್ಷಣಲಕ್ಷಿತಸಕಲ ಪ್ರಪಂಚ ಸೃಷ್ಟಿ ಸ್ಥಿತಿ ಸಂಹಾರತಿರೋಧಾನಾನುಗ್ರಹಕಾರಣೀಭೂತಶ್ರೀಮತ್ಪರಶಿವಪರಬ್ರಹ್ಮದಕ್ಷಿಣಲಪ ನೋದ್ಭವ ಶ್ರೀಮದ್ವೇದಾಗಮ ಪ್ರತಿಪಾದಿತ ವೀರಶೈವ ಮಹಾಮತಸ್ಥಾಪನಾಚಾರ್ಯ ಶ್ರೀಮತ್ ತ್ರಿಭುವನಗುರು ಶ್ರೀ ದಾರುಕ ಶಿವಾಚಾರ್ಯ ಪರಾವತಾರ ಶ್ರೀಮತ್ಸಿದ್ಧಸಂತಾನ ಸಂಸ್ತುತವಟವೃಕ್ಷಸಿದ್ಧೇಶ್ವರಲಿಂಗಗರ್ಭಾವಿರ್ಭೂತ ದಧೀಚಿಮುಖಾನೇಕಮಹಾಮುನಿಜನಮನೋವನವಸಂತದೇವನಂದನಾದಿಸಾರ್ವಭೌಮಸಂಘಸಂಪೂಜಿತ ಚರಣಸರೋಜ, ದುಷ್ಟಶಿಕ್ಷಣ ಶಿಷ್ಟರಕ್ಷಣಕರಣವಿಚಕ್ಷಣ ಬಹಿಷ್ಕಾರಪ್ರಾಯಶ್ಚಿತ್ತ ನಿಧಿನಿಷೇಧಶಾಸನಶೀಲ ತಿರ್ಯಗಾಂದೋಲಿಕಾಶ್ವೇತಾತ ಪತ್ರಶ್ವೇತಶಂಖಶ್ವೇತಚಾಮರ ಮಯೂರವ್ಯ ಜನಪಂಚಕಲಶನಂದಿಧ್ವಜ ಹೇಮದಂಡಾದಿವಾದೀಪಾದಿದ್ವಾಸಪ್ತತಿ ಬಿರುದಾವಳಿಭೂಷಿತ ಮೌಕ್ತಿಕಮಂಟಪಮಂಡನಾಯಮಾನ ಪಂಚಮುದ್ರಾಮುದ್ರಿತ ಶ್ರೀಮಜ್ಜಗದ್ಗುರು ಮರುಳಸಿದ್ಧರಾಜದೇಶೀಕೇಂದ್ರಶಿವಾಚಾರ್ಯ ಸಂಸ್ಥಾಪಿತ ಶ್ರೀಮದುಜ್ಜಯಿನೀಸದ್ಧರ್ಮ ಸಿಂಹಾಸನಾಧೀಶ್ವರಶ್ರೀ ೧೦೦೮ ಜಗದ್ಗುರು ಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿನಾಂ ಕರಕಮಲಸಂಜಾತ ಶ್ರೀ೧೦೦೮ ಜಗದ್ಗುರು ಮರುಳಸಿದ್ಧ ಶಿವಾಚಾರ್ಯ ಮಹಾಸ್ವಾಮಿನಾಂ ಸನ್ನಿಧಾನೇನ-

ಶ್ರೀಮದ್ ಚರವರಗುರುಚರಣಾರವಿಂದಮಕರಂದ ಸೇವನ ಮಧುಕರಾಯ ಮಾನರಾದ..

.....................ಜಿಲ್ಲಾ ....ತಾಲೂಕು........................

ಶ್ರೀ ಘನಲಿಂಗಾಂಗಿಗಳಾದ ಶ್ರೀ ಪಟ್ಟಚರಾಧಿಕಾರಿಗಳು, ಮಠಾಧಿಕಾರಿಗಳು, ಮಹತ್ತಿನವರು, ಗೌಡರು, ನಾಡಗೌಡರು, ದೇಸಾಯರು, ದೇಶಪಾಂಡ್ಯರು, ಶಾನಭೋಗರು, ಶೆಟ್ಟರು, ಯಜಮಾನರು, ಬಣಕಾರರು, ಬುದ್ಧಿವಂತರು, ಮಹಾಜನರು ಮೊದಲಾದ ಸಮಸ್ತ ವೀರಶೈವ ಮಂಡಲಿಗೂ ವೀರಶೈವ ಮತಾನುಯಾಯಿಗಳಾದ ಅನಾದಿಶೈವಾದಿಶೈವ ಯೋಗಶೈವ ಜ್ಞಾನಶೈವ ಪ್ರವರ ಶೈವಾದಿ ಸಪ್ತವಿಧಶೈವರಿಗೂ ಸಕಲ ಸಂಪತ್ಸಮೃದ್ಧಿರಸ್ತಿತ್ಯಾಶೀರ್ವಚನರೂಪಮದಾಗಿ-

ವಯಮೇತಾವತ್ಪರ್ಯಂತಂ ಶ್ರೀ ಶಿವಯೋಗಾನಂದತಪಸ್ಸಾಮ್ರಾಜ್ಯ ವೈಭವೈರ್ವಸಾಮಃ ಯುಷ್ಮದಾಬಾಲವೃದ್ಧ ಶುಭಾಂಗಯೋಗಕ್ಷೇಮಾತಿಶಯಂಗಳಿಗೆ ಪದೇಪದೇ ಬಿನ್ನೈಸಿಕೊಳ್ಳುವಲ್ಲಿ ಕೇವಲ ಗುರುಪುತ್ರರೇ ಇರುವಿರಿ. ತತಃ -

ಶ್ರೀಮಹಾ ॥ ....॥ ಗುರುಗಳವರು ದೇಶ ಮಧ್ಯದಲ್ಲಿ ತನುತ್ರಯಗತವಾದ ಆಣವಾದಿಮಲತ್ರಯವನ್ನು ದೀಕ್ಷಾತ್ರಯದಿಂದ ನಾಶಮಾಡಿ ಲಿಂಗತ್ರಯವನ್ನು ಅನುಗ್ರಹಿಸಿ ಜಗಜ್ಜೀವಿಗಳನ್ನುದ್ಧರಿಸಲೋಸುಗ ದಯಮಾಡಿಸುವರಾದಕಾರಣ ನೀವೀ ನಿರೂಪದರ್ಶನ ಮಾತ್ರವೇ ಸುಸ್ಥಲಗಳಲ್ಲಿ ಶಿವಪೂಜಾಗೃಹವನ್ನೂ, ದಾಸೋಹಮಂದಿರವನ್ನೂ, ಅಶ್ವಶಾಲಾಗೋಶಾಲಾದಿಗಳನ್ನೂ, ಸೇವಕರ ವಸತಿಯನ್ನೂ, ಸಭಾಸ್ಥಾನವನ್ನೂ ಸಿದ್ಧಪಡಿಸುವುದಲ್ಲದೆ ಪಟ್ಟಿಯಲ್ಲಿ ಕಂಡಂತೆ ಶಿವಪೂಜಾಸಾಮಗ್ರಿಗಳನ್ನೂ ಸಹ ಸಿದ್ಧಪಡಿಸಿಕೊಂಡು ವೀಧಿಗಳನ್ನಲಂಕರಿಸಿ ಮಂಗಲವಾದ್ಯಗಳೊಡನೆ ಸರ್ವದೈವದವರೂ ಫಲವೀಟಿಕಾದಿಗುರುದರ್ಶನೋಚಿತ ಮಂಗಲ ದ್ರವ್ಯಗಳಿಂದ ಶ್ರೀ ಜಗದಾಚಾರ್ಯರ ಸಮಾಗಮನ ನಿರೀಕ್ಷೆಯಲ್ಲಿರತಕ್ಕದ್ದು. ಈ ಬಗ್ಗೆ ಶ್ರೀ ಗುರುಸೇವಾಕರಣಧುರೀಣರಿಗೆ ಹೆಚ್ಚಿಗೆ ಅಪ್ಪಣೆಕೊಡಿಸುವವೇನದೆ.

ಮೊಕ್ಕಾಂ....................

ತಾಲೂಕು....................

ತಾರೀಖು....................

ಅಡ್ಡಪಲ್ಲಕ್ಕಿ ಉತ್ಸವಗಳು

ಶ್ರೀ ಪಂಚಪೀಠಾಧೀಶ್ವರರ ಉತ್ಸವವು ವೈಭವದಿಂದ ಜರುಗುತ್ತದೆ. ಉತ್ಸವ ಸಂದರ್ಭಗಳಲ್ಲಿ ಮಾತ್ರ ಜಗದ್ಗುರುಗಳು ರೇಷ್ಮೆಯ ವಸ್ತ್ರ, ಚಿನ್ನದ ಕಿರೀಟ, ಮುದ್ರಾಂಕಿತ ಚಿನ್ನದ ಉಂಗುರ, ರುದ್ರಾಕ್ಷಿಗಳ ಸರಮಾಲೆ, ಹೂವಿನ ಮಾಲೆ, ಕೈಗಳ ಹತ್ತು ಬೆರಳುಗಳಿಗೆ ವಿವಿಧ ರೀತಿಯ ಉಂಗುರ, ಚಿನ್ನದ ಕಡಗ ಇತ್ಯಾದಿ ವಸ್ತ್ರಾಭರಣಗಳನ್ನು ಧರಿಸಿರುತ್ತಾರೆ. ಹಣೆಗೆ, ದೇಹಕ್ಕೆ ವಿಭೂತಿ, ಗಂಧದ ಲೇಪನೆಯಾಗಿರುತ್ತದೆ. ಭಕ್ತಾದಿಗಳಿಗೆ ಆಶೀರ್ವದಿಸುತ್ತ ಏಳು-ಎಂಟು ಗಂಟೆಗಳವರೆಗೆ ಏಕಚಿತ್ತರಾಗಿ ಹಸನ್ಮುಖದಿಂದ ಪಲ್ಲಕ್ಕಿಯಲ್ಲಿಯೇ ಕುಳಿತಿರುತ್ತಾರೆ. ಅಡ್ಡಪಲ್ಲಕ್ಕಿ ಉತ್ಸವ ಮುಗಿದ ಬಳಿಕ ಧರ್ಮಗೋಷ್ಠಿಗಳಲ್ಲೂ ಅನೇಕ ತಾಸುಗಳವರೆಗೆ ಕುಳಿತಿರುತ್ತಾರೆ. ಅವರ ದಿವ್ಯ ದರ್ಶನ ಹಾಗೂ ಆಶೀರ್ವಾದಕ್ಕಾಗಿ ಸಾವಿರಾರು ಭಕ್ತರ ನೂಕು ನುಗ್ಗಲು ನಡೆದಿರುತ್ತದೆ. ಇಂತಹ ಸಂದರ್ಭದಲ್ಲೂ ಶ್ರೀ ಪೀಠದ ಈಗಿನ ಜಗದ್ಗುರುಗಳು ಹಸನ್ಮುಖರಾಗಿ ಆರು-ಎಂಟು ತಾಸುಗಳವರೆಗೆ ಪಾಲಕಿಯಲ್ಲಿ ಕುಳಿತು ಭಕ್ತರಿಗೆ ಆಶೀರ್ವದಿಸುವರು. ಹಾಗೂ ಸಭೆ-ಸಮಾರಂಭ-ಸಮ್ಮೇಳನಗಳಲ್ಲೂ ಕುಳಿತು ಆಶೀರ್ವಚನವನ್ನು ನೀಡುವರು. ಅಡ್ಡಪಲ್ಲಕ್ಕಿ ಉತ್ಸವ ದೇಶದ ಅನೇಕ ನಗರ, ಪಟ್ಟಣ, ಗ್ರಾಮ, ಹಳ್ಳಿಗಳಲ್ಲಿ ಅದ್ದೂರಿಯಾಗಿ ಜರುಗಿದೆ. ಶ್ರೀ ಪೀಠದ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವದ ಇತಿಹಾಸದಲ್ಲಿ ಈಗಿನ ಜಗದ್ಗುರುಗಳು ತಮ್ಮ ಅಲ್ಪ ಕಾಲಾವಧಿಯಲ್ಲೇ ಅತಿ ಹೆಚ್ಚು ಉತ್ಸವಗಳಲ್ಲಿ ಭಾಗವಹಿಸಿದ್ದು ಕಂಡುಬರುತ್ತದೆ. ಪ್ರಮುಖವಾದ ಕೆಲವೇ ಉತ್ಸವ ಸ್ಥಳಗಳ ವಿವರ ಹೀಗಿದೆ:

ಕರ್ನಾಟಕ : ಕೊಟ್ಟೂರು, ಬೆನಕನಹಳ್ಳಿ, ರಾಣೆಬೆನ್ನೂರು, ರಟ್ಟೀಹಳ್ಳಿ, ಕವಲೇದುರ್ಗ, ಶಿವಮೊಗ್ಗ, ಬೆಂಗಳೂರು, ತುಮಕೂರು, ಹುಬ್ಬಳ್ಳಿ, ಕೂಡಲಸಂಗಮ, ಬಳ್ಳಾರಿ, ಭಾಲ್ಕಿ, ಗುಲಬುರ್ಗಾ, ರಾಯಚೂರು, ವಿಜಾಪುರ, ಜಮಖಂಡಿ, ಬಾಗಲಕೋಟೆ, ಬೆಳಗಾಂ, ಮೈಸೂರು ಇತ್ಯಾದಿ.

ಮಹಾರಾಷ್ಟ್ರ : ಕೊಲ್ಲಾಪುರ, ಪಂಢರಾಪುರ, ನಾಂದೇಡ, ಸಾಂಗ್ಲಿ, ರತ್ನಾಗಿರಿ, ಕೋಯ್ನಾ, ಪಾಟ್ನೆ, ನಾಗಪುರ, ಸೊಲ್ಲಾಪುರ, ನಾಶಿಕ, ಔರಂಗಾಬಾದ್, ಮುಂಬಯಿ ಇತ್ಯಾದಿ.

ಆಂಧ್ರಪ್ರದೇಶ : ಸಿದ್ಧಪೇಟೆ, ನಾರಾಯಣಪೇಟೆ, ಹೊಳಗುಂದಿ, ಭೆಜ್ಜ ಇತ್ಯಾದಿ

ಉತ್ತರಾಂಚಲ : ಕೇದಾರ, ಹುಕ್ಕೀಮಠ

ಹರಿಯಾಣ : ಶಿವಾಲ

ಶ್ರೀ ಪೀಠದ ಜಗದ್ಗುರುಗಳ ಅಡ್ಡ ಪಲ್ಲಕ್ಕಿ ಉತ್ಸವ ಸಂದರ್ಭಗಳಲ್ಲಿ ಭಕ್ತರು ನೀಡಿದ ವಿಜ್ಞಾಪನಾ ಪತ್ರಗಳು ಶ್ರೀಪೀಠದಲ್ಲಿ ರಾರಾಜಿಸುತ್ತಿವೆ. ಅವುಗಳ ಅಧ್ಯಯನವನ್ನು ಪ್ರತ್ಯೇಕವಾಗಿ ಕೈಕೊಳ್ಳಬೇಕಾಗಿದೆ.

ಅಡಿ ಟಿಪ್ಪಣಿ

೧. ಉಜ್ಜಯಿನಿ ಸದ್ಧರ್ಮಪೀಠದ ಕಛೇರಿಯಿಂದ ಈ ಮಾಹಿತಿಯನ್ನು ಪಡೆಯಲಾಗಿದೆ.

೨. ಕೊಟ್ಟೂರಿನ ಮಾಜಿ ಪುರಸಭಾ ಅಧ್ಯಕ್ಷರಾದ ಶ್ರೀ ಕೆ. ಸಿದ್ಧಲಿಂಗನಗೌಡರು ಈ ವಿಷಯವನ್ನು ತಿಳಿಸಿದ್ದಾರೆ.

೩. ಉಜ್ಜಯಿನಿಯ ಗೊಂಗಡಿ ಶ್ರೀ ಯು. ಎಂ. ವೀರಯ್ಯನವರು ಈ ಮಾಹಿತಿಯನ್ನು ನೀಡಿರುವರು

ಪಂಚ ಪೀಠಾಧೀಶ್ವರರು



ಶ್ರೀ ರಂಭಾಪುರಿ ಜಗದ್ಗುರು ವೀರಸೋಮೇಶ್ವರ
ಶಿವಾಚಾರ್ಯ ಮಹಾಸ್ವಾಮಿಗಳು



ಶ್ರೀ ಉಜ್ಜಯಿನಿ ಜಗದ್ಗುರು ಮರುಳಸಿದ್ಧ
ಶಿವಾಚಾರ್ಯ ಮಹಾಸ್ವಾಮಿಗಳು



ಶ್ರೀ ಕೇದಾರ ಜಗದ್ಗುರು ಭೀಮಶಂಕರಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು



ಶ್ರೀ ಶ್ರೀಶೈಲ ಜಗದ್ಗುರು ಉಮಾಪತಿ ಪಂಡಿತಾರಾಧ್ಯ
ಶಿವಾಚಾರ್ಯ ಮಹಾಸ್ವಾಮಿಗಳು



ಶ್ರೀ ಕಾಶೀ ಜಗದ್ಗುರು ಡಾ। ಚಂದ್ರಶೇಖರ
ಶಿವಾಚಾರ್ಯ ಮಹಾಸ್ವಾಮಿಗಳು



ಶ್ರೀ ಜಗದ್ಗುರು ದಾರುಕಾಚಾರ್ಯರು



ಗದ್ದುಗೆಯ ಮೇಲೆ
ಶ್ರೀ ಸಿದ್ಧಲಿಂಗ ಜಗದ್ಗುರುಗಳ ಅಮೃತಶಿಲಾ ವಿಗ್ರಹ



ಶ್ರೀ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ
ಶ್ರೀ ೧೦೦೮ ಜಗದ್ಗುರು
ಸಿದ್ಧಲಿಂಗ ಶಿವಾಚಾರ್ಯರು



ಶ್ರೀ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ
ಶ್ರೀ ೧೦೦೮ ಜಗದ್ಗುರು ಸಿದ್ಧೇಶ್ವರ ಶಿವಾಚಾರ್ಯರು



ಶ್ರೀ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ
ಶ್ರೀ ೧೦೦೮ ಜಗದ್ಗುರು ಮರುಳಾರಾಧ್ಯ ಶಿವಾಚಾರ್ಯರು



ಪಾಲಕಿ ಉತ್ಸವದಲ್ಲಿ ಶ್ರೀ ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧೇಶ್ವರ
ಶಿವಾಚಾರ್ಯರು ಮತ್ತು ಶ್ರೀ ಮರುಳಾರಾಧ್ಯ ಶಿವಾಚಾರ್ಯರು



ಚತುರಾಚಾರ್ಯರಿಂದ
ಉಜ್ಜಯಿನಿ
ಸದ್ಧರ್ಮ ಪೀಠದ
ನೂತನ ಜಗದ್ಗುರು
ಶ್ರೀ ಮರುಳಸಿದ್ಧ
ಮಹಾಸ್ವಾಮಿಗಳ
ಪಟ್ಟಾಧಿಕಾರ
ಮಹೋತ್ಸವ.



ಶ್ರೀ ೧೦೦೮ ಜಗದ್ಗುರು
ಶ್ರೀ ಮರುಳಸಿದ್ಧ
ರಾಜದೇಶಿಕೇಂದ್ರ
ಶಿವಾಚಾರ್ಯ
ಮಹಾಸ್ವಾಮಿಗಳ
ಪಟ್ಟಾಧಿಕಾರ
ಸಂದರ್ಭದಲ್ಲಿ
ಮಾಜಿ ಪ್ರಧಾನಿ
ದೇವೇಗೌಡರು
ಮತ್ತು
ಪ್ರಮುಖರು.









ಶ್ರೀ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು
ಮರುಳಸಿದ್ಧ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು





ಮುಖವಾಡವುಳ್ಳ ಶ್ರೀ ಮರುಳಸಿದ್ಧೇಶ್ವರ



ಶಿವಲಿಂಗದಲ್ಲಿ ಶ್ರೀ ಮರುಳಸಿದ್ಧೇಶ್ವರ



ಕಂಕಣ ಧರಿಸಿದ
ಶ್ರೀ ಮರುಳಸಿದ್ಧೇಶ್ವರ
ಮತ್ತು
ಶ್ರೀ ಗೌರಮ್ಮ
ಉತ್ಸವ ಮೂರ್ತಿ



ಶ್ರೀ ಮರುಳಸಿದ್ಧೇಶ್ವರ ಸ್ವಾಮಿಯ ಉತ್ಸವ ಮೂರ್ತಿ



ಶ್ರೀ ಗೌರಮ್ಮ ಉತ್ಸವ ಮೂರ್ತಿ



ಶ್ರೀ ಸದ್ಧರ್ಮ ಪೀಠ : ಮಠದ ಕಟ್ಟಿಗೆಯ ಮಹಾದ್ವಾರ



ಬಸವಣ್ಣನವರಿಗೆ ಜಾತವೇದ ಮುನಿಗಳು
ಭಸ್ಮಧಾರಣೆ ಮಾಡಿ ಪಂಚಾಕ್ಷರಿ
ಮಂತ್ರೋಪದೇಶ,
ಲಿಂಗಧಾರಣೆ ಮಾಡುತ್ತಿರುವುದು.
ಜೊತೆಯಲ್ಲಿ ತಂದೆ ಮಾದರಸ,
ತಾಯಿ ಮಾದಲಾಂಬಿಕೆ,
ಅಕ್ಕ ಅಕ್ಕನಾಗಮ್ಮ
(ಭಕ್ತಿ : ಶ್ರೀ ಕೆ. ಗಂಗಾಧರ,
ಬಸವನಬಾಗೇವಾಡಿ).

ಬಸವಣ್ಣನವರು
ಜಾತವೇದ ಮುನಿಗಳಲ್ಲಿ
ವಿದ್ಯೆಗಾಗಿ ಬಂದು
ದರ್ಶನ ಪಡೆಯುತ್ತಿರುವುದು
(ಭಕ್ತಿ : ಶ್ರೀ ಕೆ. ಗಂಗಾಧರ,
ಬಸವನಬಾಗೇವಾಡಿ).





ಜಾತವೇದ ಮುನಿಗಳು
ಬಸವಣ್ಣನವರಿಗೆ ವಿದ್ಯಾದಾನ
ಮಾಡುತ್ತಿರುವುದು,
ಜೊತೆಯಲ್ಲಿ
ಅಕ್ಕ ಅಕ್ಕನಾಗಮ್ಮ,
ಪತಿ ಶಿವದೇವ
(ಭಕ್ತಿ : ಶ್ರೀ ಕೆ. ಗಂಗಾಧರ,
ಬಸವನಬಾಗೇವಾಡಿ).

ಜಾತವೇದ ಮುನಿಗಳು
(ಈಶಾನ್ಯ ಮುನಿ)
ಮಂಗಳವೇಡೆಗೆ ಹೊರಟ
ಬಸವಣ್ಣನನ್ನು
ಆಶೀರ್ವದಿಸುತ್ತಿರುವುದು.
ಜೊತೆಯಲ್ಲಿ ಅಕ್ಕನಾಗಮ್ಮ,
ಚನ್ನಬಸವಣ್ಣ, ಶಿವದೇವ
ಮತ್ತು ಮಂತ್ರಿ ಬಲದೇವ.





೩. ಮೂಲ ಸಿದ್ಧವಟ
ಕ್ಷೇತ್ರದಲ್ಲಿ
ಶ್ರೀ ಸಿದ್ಧೇಶ್ವರ ಲಿಂಗ
ಮಧ್ಯಪ್ರದೇಶದ ಉಜ್ಜಯಿನಿ
(ಭಕ್ತಿ : ಶ್ರೀ ಅಳವಂಡಿ
ಶಿವಮೂರ್ತಿ ಸ್ವಾಮಿಗಳು)



೪. ಮೂಲ ಸಿದ್ಧೇಶ್ವರ ದೇವಸ್ಥಾನದ ಮುಂದೆ
ಈಗಿನ ಉಜ್ಜಯಿನಿ ಶ್ರೀಗಳು ಭಕ್ತವೃಂದದಲ್ಲಿ
(ಭಕ್ತಿ : ಶ್ರೀ ಅಳವಂಡಿ ಶಿವಮೂರ್ತಿ ಸ್ವಾಮಿಗಳು)




೫. ಮೂಲ ಸಿದ್ಧೇಶ್ವರ ದೇವಸ್ಥಾನದ
ಪ್ರವೇಶದ್ವಾರ (ಮಧ್ಯಪ್ರದೇಶ) ದಲ್ಲಿ ಈಗಿನ
ಶ್ರೀಸನ್ನಿಧಿಗಳು ಭಕ್ತವೃಂದದ ಸಂಗಡ.
(ಭಕ್ತಿ ಶ್ರೀ ಅಳವಂಡಿ ಶಿವಮೂರ್ತಿ ಸ್ವಾಮಿಗಳು)



೬. ಶ್ರೀ ಜಗದ್ಗುರು ಚನ್ನಬಸವ
ಶಿವಾಚಾರ್ಯ ಮಹಾಸ್ವಾಮಿಗಳು



೭. ಉಜ್ಜಯಿನಿ ಜಗದ್ಗುರು
ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು



೮. ಶ್ರೀ ಉಜ್ಜಯಿನಿ ಸದ್ಧರ್ಮ
ಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು
ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು



೧೦. ಉಜ್ಜಯಿನಿ ಶ್ರೀ ಸಿದ್ಧಲಿಂಗ ಜಗದ್ಗುರುಗಳು
(ಮೊದಲಿಗೆ ಕುಳಿತಿರುವರು)



೧೧. ಸೊಲ್ಲಾಪುರದ ಹುಟಗಿ ಬ್ರ। ಮ। ಚನ್ನವೀರ
ಸ್ವಾಮಿಗಳು ಉಜ್ಜಯಿನಿ ಜಗದ್ಗುರು
ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳ ಸನ್ನಿಧಾನದಲ್ಲಿ



೧೨. ಸೊಲ್ಲಾಪುರದ ಶ್ರೀ ಮಲ್ಲಿಕಾರ್ಜುನ
ದೇವಾಲಯದಲ್ಲಿ ಉಜ್ಜಯಿನಿ ಜಗದ್ಗುರು
ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು

೧೩. ಬಳ್ಳಾರಿಯಲ್ಲಿ ೭೨ ಬಿರುದಾವಳಿಗಳಿಂದ
ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗ
ಮಹಾಸ್ವಾಮಿಗಳ ಅಡ್ಡಪಲ್ಲಕ್ಕಿ ಮಹೋತ್ಸವ



೧೪. ಉಜ್ಜಯಿನಿ ಜಗದ್ಗುರು
ಶ್ರೀ ಸಿದ್ಧಲಿಂಗ
ಜಗದ್ಗುರುಗಳ ಸನ್ನಿಧಿಯಲ್ಲಿ
ಶ್ರೀ ಕಾಶೀನಾಥ ಶಾಸ್ತ್ರಿಗಳು



೧೫. ಉಜ್ಜಯಿನಿ
ಜಗದ್ಗುರು
ಶ್ರೀ ಸಿದ್ಧಲಿಂಗ
ಮಹಾಸ್ವಾಮಿಗಳ
ಜೊತೆ
ವಿರೂಪಾಕ್ಷ ಶಾಸ್ತ್ರಿಗಳು





೧೬. ಶ್ರೀ ಸಿದ್ಧಲಿಂಗ ಜಗದ್ಗುರುಗಳು ಬುಕ್ಕಾಂಬದಿ ಗಿರಿಯಲ್ಲಿ ತಪಸ್ಸನ್ನಾಚರಿಸುತ್ತಿರುವ ದೃಶ್ಯ

೧೭. ಉಜ್ಜಯಿನಿ ಶ್ರೀ ಸಿದ್ಧಲಿಂಗ ಜಗದ್ಗುರುಗಳು ರಂಭಾಪುರಿ ಜಗದ್ಗುರುಗಳಿಗೆ ಪಟ್ಟಾಧಿಕಾರ ಅನುಗ್ರಹಿಸುತ್ತಿರುವುದು





೧೮. ಉಜ್ಜಯಿನಿ ಸದ್ಧರ್ಮ ಪೀಠದ ಶ್ರೀ ೧೦೦೮ ಜಗದ್ಗುರು ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು (೧೯೫೩)



೨೨. ಉ॥ಸ॥ಪೀ॥ ಜರುಗಿದ ವಿಚಾರ ಸಂಕಿರಣವನ್ನು ೧೯೮೩ರಲ್ಲಿ ಉದ್ಘಾಟಿಸಿದ ಶ್ರೀ ಜಗದ್ಗುರು ಸಿದ್ಧೇಶ್ವರ ಮಹಾಸ್ವಾಮಿಗಳು ಮತ್ತು ಉ॥ಸ॥ ಜಗದ್ಗುರುಗಳು ಶ್ರೀ ಮರುಳಾರಾಧ್ಯ ಮಹಾಸ್ವಾಮಿಗಳು.



೧೮೧. ಕೊಟ್ಟೂರಿನ ಚಾಸುಕೋಟಿ ಮಠದ ಶ್ರೀಮತಿ ಕಸ್ತೂರಮ್ಮ ಅವರು ಗಣ್ಯರ ಸಮ್ಮುಖದಲ್ಲಿ ಶ್ರೀಪೀಠದ ಆಭರಣಗಳನ್ನು ಈಗಿನ ಉ||ಸ||ಪೀ|| ಜಗದ್ಗುರುಗಳಿಗೆ ಅರ್ಪಿಸುತ್ತಿರುವುದು.



೧೮೨. ಲಿಂ||ಜ|| ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳ ಸಂಸ್ಮರಣೋತ್ಸವದಲ್ಲಿ ಪಂಚಾಚಾರ್ಯರು.

ಶ್ರೀಪೀಠದ ಜಗದ್ಗುರುಗಳ ಗದ್ದುಗೆಗಳು

ಶ್ರೀ ಉಜ್ಜಯಿನಿ ಸದ್ಧರ್ಮ ಸಿಂಹಾಸನ ಪೀಠದ ಲಿಂಗೈಕ್ಯ ಜಗದ್ಗುರುಗಳ ಗದ್ದುಗೆಗಳು ನಾಡಿನ ವಿವಿದೆಡೆಗಳಲ್ಲಿವೆ. ಈ ಗದ್ದುಗೆಗಳನ್ನು ಶ್ರೀಪೀಠದ ಲಿಂಗೈಕ್ಯ ಜಗದ್ಗುರುಗಳ ಕಳೇಬರಹಗಳುಳ್ಳ ಸಮಾಧಿಗಳ ಮೇಲೆ ಕಟ್ಟಲಾಗಿದೆ. ಈವರೆಗೆ ಶ್ರೀಪೀಠದ ಲಿಂ॥ ಜಗದ್ಗುರುಗಳ ೨೦ ಗದ್ದುಗೆಗಳ ಸ್ಥೂಲ ಮಾಹಿತಿಯು ಲಭ್ಯವಾಗಿದೆ. ಅವುಗಳನ್ನು ಇಲ್ಲಿ ಪರಿಚಯಿಸಲಾಗಿದೆ.

೧. ಚನ್ನಬಸವಸ್ವಾಮಿಗಳ ಗದ್ದುಗೆ : *(ಚಿತ್ರ ನಂ.೩೧)*

ಉಜ್ಜಯಿನೀ ಪಟ್ಟಣದ ದಕ್ಷಿಣದಲ್ಲಿ ಶ್ರೀಉಜ್ಜಯಿನೀ ಸದ್ಧರ್ಮ ಪೀಠದ ಜಾಗದಲ್ಲಿ ನಾಲ್ಕು ಗದ್ದುಗೆಗಳಿವೆ. ಆ ಸ್ಥಳವು ಸುಮಾರು ೪ ಎಕರೆಯಷ್ಟಿದ್ದು ಅದನ್ನು ಶ್ರೀ ಪೀಠದ ಮಠದ ಕಣವೆಂದು ಕರೆಯುತ್ತಾರೆ. ಅವುಗಳಲ್ಲಿ ಶ್ರೀಚನ್ನಬಸವಸ್ವಾಮಿಗಳ ಗದ್ದುಗೆ ಒಂದಾಗಿದೆ. ಇದೊಂದು ವಿಶಾಲವಾದ ಮತ್ತು ಭವ್ಯವಾದ ದೇವಾಲಯದಂತಿದೆ. ಅದು ಉತ್ತರಕ್ಕೆ ಮುಖ ಮಾಡಿದೆ. ಅದರ ಆಯತಾಕಾರದ ಗರ್ಭಗೃಹದಲ್ಲಿ ಈ ಸ್ವಾಮಿಗಳ ಗದ್ದುಗೆಯಿದೆ. ಈ ಗದ್ದುಗೆಯ ಮೇಲೆ ಶ್ರೀಚನ್ನಬಸವ ಸ್ವಾಮಿಗಳ ಹೆಸರಿನ ಮುಖವಾಡ ಮತ್ತು ಅವರು ಬಳಸಿದ ಜೋಡು ಆವುಗೆಗಳಿವೆ. ನಿತ್ಯ ಈ ಗದ್ದುಗೆಗೆ ಪೂಜೆ ಸಲ್ಲುತ್ತದೆ. ಈ ಕಟ್ಟಡದ ಮುಂಭಾಗದಲ್ಲಿ ತೆರೆದ ಮುಖಮಂಟಪವಿದೆ. ಎತ್ತರವಾದ ಈ ಭವ್ಯ ಮಂದಿರದ ಮುಂದಿನ ಛಾವಣಿಯ ಮೇಲೆ ಎತ್ತರದ ಗೋಡೆಯಿದೆ. ಅದರಲ್ಲಿ ಐದು ಗೂಡುಗಳಿವೆ. ಅಲ್ಲಿ ಸುಂದರವಾದ ಗಚ್ಚಿನಿಂದ ತಯಾರಿಸಿದ ವಿವಿಧ ಸುಂದರ ವಿಗ್ರಹಗಳಿವೆ. ಮಧ್ಯದ ಗೂಡಿನಲ್ಲಿ ಶ್ರೀಚನ್ನಬಸವ ಸ್ವಾಮಿಗಳ ವಿಗ್ರಹವಿದೆ. ಅದರ ಎರಡು ಅಂಚಿನ ಗೂಡುಗಳಲ್ಲಿ ಹಲ್ಲಿಗಳು ಇಳಿಬಿದ್ದಿವೆ. ಉಳಿದ ವಿಗ್ರಹಗಳನ್ನು ಗುರುತಿಸಬೇಕಾಗಿದೆ. ಈ ಮಾಳಿಗೆಯ ಗೋಡೆಗಳ ಮೇಲೆ ನಾಲ್ಕು ಮೂಲೆಗಳಲ್ಲಿ ನಂದಿಯ ವಿಗ್ರಹಗಳಿವೆ. ಜೋಡು ಮುಖವುಳ್ಳ ಈ ನಂದಿಗಳನ್ನು ಗಾರೆಯಿಂದ ನಿರ್ಮಿಸಲಾಗಿದೆ. ಶ್ರೀಪೀಠದ ಜಗದ್ಗುರುಗಳ ಪಟ್ಟವಲ್ಲರಿಯಲ್ಲಿ ಶ್ರೀಚನ್ನಬಸವಸ್ವಾಮಿಗಳು ಶ್ರೀ ವಿರೂಪಾಕ್ಷ ಶಿವಾಚಾರ್ಯರ ನಂತರ ಮತ್ತು ಶ್ರೀ ಕರಡಿ ಮಳಿಸ್ವಾಮಿಗಳಿಗಿಂತ ಮೊದಲು ಇದ್ದವರೆಂದು ಹೇಳುವರು.

ಈ ಗದ್ದುಗೆಯ ಪಕ್ಕದಲ್ಲಿ ಕೇದಾರ ಪೀಠದ ರಾಹುಲ್ ಶ್ರೀ೧೦೦೮ ವಿಶ್ವಲಿಂಗ[೨] ಶಿವಾಚಾರ್ಯ ಜಗದ್ಗುರುಗಳ ಗದ್ದುಗೆಯಿದೆ. ಉಜ್ಜಯಿನಿಯ ಲಿಂ|| ಪೂಜ್ಯ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಸ್ವಾಮಿಗಳು ೧೯೧೯ರ ಡಿಸೆಂಬರ್‌ನಲ್ಲಿ ಒಂಬತ್ತನೇ ವೀರಶೈವ ಮಹಾಸಭೆಗೆ ದಯಮಾಡಿಸಲು ಆಗಿನ ಕೇದಾರ ಪೀಠದ ಜಗದ್ಗುರುಗಳನ್ನು ಉಜ್ಜಯಿನಿಗೆ ಆಮಂತ್ರಿಸಿದ್ದರು. ಈ ಸಮ್ಮೇಳನ ಮುಗಿದ ನಂತರ ಅನೇಕ ಕಡೆಗಳಿಗೆ ಪ್ರಯಾಣ ಮಾಡಿ ಕೆಲವು ತಿಂಗಳ ನಂತರ ಕೇದಾರ ಶ್ರೀಗಳು ಉಜ್ಜಯಿನಿ ಪೀಠಕ್ಕೆ ಆಗಮಿಸಿದರು. ಅಲ್ಲಿ ಕಾಯಿಲೆಯಿಂದ ನರಳಿ೧೯೨೧ರ ಜುಲೈ ೧೫ರಂದು ಲಿಂಗೈಕ್ಯರಾದರು. ಅವರ ಅಂತ್ಯಕ್ರಿಯೆ ಸ್ಥಳದಲ್ಲಿ ಅವರ ಗದ್ದುಗೆಯನ್ನು ಕಟ್ಟಲಾಗಿದೆ. ಈ ವಿಷಯ ಜಗದ್ಗುರು ಶ್ರೀಸಿದ್ಧಲಿಂಗೇಶ್ವರ ವಿಜಯ ಕೃತಿಯಲ್ಲಿ ಉಲ್ಲೇಖಗೊಂಡಿದೆ.

೨. ಶ್ರೀ ಮಳೆಸ್ವಾಮಿ ಗದ್ದುಗೆ : *(ಚಿತ್ರ ನಂ. ೩೩)*

ಶ್ರೀಚನ್ನಬಸವಸ್ವಾಮಿಗಳ ಗದ್ದುಗೆ ಸಮೀಪ ಇನ್ನೆರಡು ಗದ್ದುಗೆಗಳಿದ್ದು ***(ಚಿತ್ರ ನಂ. ೩೨)*** ಅದರಲ್ಲಿ ಒಂದು ಉಜ್ಜಯಿನಿ ಸದ್ಧರ್ಮಪೀಠದ ಶ್ರೀಮಳೆಸ್ವಾಮಿ ಜಗದ್ಗುರುಗಳದ್ದಾಗಿದೆ. ಈ ಗದ್ದುಗೆ ಬಯಲಲ್ಲಿದ್ದು ಅದಕ್ಕೆ ಯಾವ ಮಂಟಪವನ್ನು ಕಟ್ಟಿರುವುದಿಲ್ಲ. ಹಾಗೂ ಪೂಜೆ ನಡೆಯುತ್ತಿಲ್ಲ. ಆದರೆ ಬರಗಾಲವಿದ್ದಾಗ ಭಕ್ತರು ಹಣ್ಣುಕಾಯಿ ನೈವೇದ್ಯವನ್ನು ಈ ಗದ್ದುಗೆಗೂ ಅರ್ಪಿಸಿದರೆ ಮಳೆ ಬರುವುದೆಂಬ ನಂಬಿಕೆ ಇದೆ.

ಮಳೆಮಲ್ಲೇಶ್ವರಸ್ವಾಮಿಗಳ ಗದ್ದುಗೆ ಪಕ್ಕ ಇನ್ನೊಂದು ಗದ್ದುಗೆಯಿದೆ. ಅದರ ಹೆಸರು ತಿಳಿದಿಲ್ಲ. ಈ ಗದ್ದುಗೆಯ ಬದಿಗೆ ಒಂದು ಹಾಳು ಬಾವಿಯಿದೆ.

೩. ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳ ಗದ್ದುಗೆ : *(ಚಿತ್ರ ನಂ.೩೪)*

ಶ್ರೀ ಉಜ್ಜಯಿನಿ ಸದ್ಧರ್ಮ ಪೀಠದ ಸಂಕೀರ್ಣದ ಆಗ್ನೇಯ ದಿಕ್ಕಿನಲ್ಲಿ ಮತ್ತು ಪ್ರವೇಶದ್ವಾರದ ಬದಿಯಲ್ಲಿ ಲಿಂ|| ಶ್ರೀಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳ ಗದ್ದುಗೆಯಿದೆ. ಶ್ರೀ ಪೂಜ್ಯರ ಪರಿಚಯವನ್ನು ಈಗಾಗಲೇ ಶ್ರೀ ಸದ್ಧರ್ಮ ಪೀಠದ ಜಗದ್ಗುರುಗಳ ಪಟ್ಟವಲ್ಲಿರಿಯಲ್ಲಿ ನೀಡಲಾಗಿದೆ. ಶ್ರೀ ಪೂಜ್ಯರ ಅಮೃತ ಶಿಲೆಯ ವಿಗ್ರಹ ಈ ಗದ್ದುಗೆಯ ಮೇಲಿದೆ. ಗದ್ದುಗೆಯ ಮೇಲೆ ಶ್ರೀಗಳವರು ಬಳಸಿದ ಆವುಗೆಗಳನ್ನು ಇಡಲಾಗಿದೆ. ಗೋಡೆಯಲ್ಲಿ ಶ್ರೀಗಳ ಭಾವಚಿತ್ರವಿದೆ. ಈ ಗದ್ದುಗೆಯನ್ನು ಮುಷ್ಟೂರಿನ ಶ್ರೀ ಹುಚ್ಚನಾಗಲಿಂಗ ಸ್ವಾಮಿಗಳು ಜೀರ್ಣೋದ್ಧಾರಗೊಳಿಸಿದರೆಂದು[೨] ಹೇಳುತ್ತಾರೆ.

೪. ಶ್ರೀ ಸಿದ್ಧೇಶ್ವರಸ್ವಾಮಿಗಳ ಗದ್ದುಗೆ : *(ಚಿತ್ರ ನಂ.೩೫ ರಿಂದ ೩೬)*

ಸುಮಾರು ೬೨ ವರ್ಷ ಶ್ರೀಪೀಠದ ಸ್ಥಿರ ಪಟ್ಟಾಧ್ಯಕ್ಷರಾಗಿದ್ದ ಲಿಂ॥ ಶ್ರೀ ೧೦೦೮ ಜಗದ್ಗುರು ಸಿದ್ಧೇಶ್ವರಸ್ವಾಮಿಗಳ ಗದ್ದುಗೆಯು ಉಜ್ಜಯಿನಿಯಿಂದ ಉತ್ತರಕ್ಕೆ ಸುಮಾರು ಒಂದು ಕಿ.ಮೀ. ಅಂತರದಲ್ಲಿರುವ ಸಿದ್ಧನವರ್ತಿ ಸ್ಥಳದಲ್ಲಿದೆ. ವಿಶಾಲವಾದ ಆಲದ ಮರದ ಕೆಳಗಡೆ ಇರುವ ಈ ಸ್ಥಳವನ್ನು ಪೂಜ್ಯರು ಜೀವಂತವಿದ್ದಾಗಲೇ ತಮ್ಮ ಗದ್ದುಗೆಯನ್ನು ಅಲ್ಲಿ ಕಟ್ಟಲು ಆಯ್ಕೆ ಮಾಡಿದ್ದರು. ಅವರ ಗದ್ದುಗೆಯನ್ನು ಕಟ್ಟಿಸುವ ಜವಾಬ್ದಾರಿಯನ್ನು ಕೊಟ್ಟೂರಿನ ಜಾನುಕೋಟಿ ಮಠದ ಶ್ರೀಮತಿ ಕಸ್ತೂರಮ್ಮ ಅವರು ತೆಗೆದುಕೊಂಡಿರುವರೆಂದು ತಿಳಿಯಲಾಗಿದೆ.

ಈ ಸ್ಥಳಕ್ಕೆ ತನ್ನದೇ ಆದ ಐತಿಹ್ಯವಿದೆ. ಶ್ರೀ ಮರುಳಸಿದ್ಧರು ತಮ್ಮ ಮೂವರು ಶಿಷ್ಯರಾದ ಬಡಗೇರ ಭೈರಸಿದ್ಧ, ಕುರುಬರ ಮೈಲಾರಲಿಂಗ ಮತ್ತು ತಳವಾರ ಜಟ್ಟೆಪ್ಪರೊಂದಿಗೆ ಸಂಚರಿಸುತ್ತಾ ಈ ಸ್ಥಳಕ್ಕೆ ಬಂದು ಕುಳಿತರಂತೆ. ಬಾಯಾರಿಕೆಯನ್ನು ನಿವಾರಿಸಿಕೊಳ್ಳಲು ಶ್ರೀಮರುಳಸಿದ್ಧರು ತಮ್ಮ ಹೆಬ್ಬಟ್ಟಿನಿಂದ ಅಲ್ಲೊಂದು ನೀರಿನ ಒರತೆ ತೋಡಿದರು. ಆ ಸ್ಥಳದಲ್ಲಿ ಅವರು ಮೊದಲು ಕುಳಿತು ನಂತರ ಶ್ರೀ ಮರುಳಸಿದ್ಧರು ಉಜ್ಜಯಿನಿಯನ್ನು ಅವರ ಕಾರ್ಯಕ್ಷೇತ್ರವನ್ನಾಗಿ ಆಯ್ಕೆ ಮಾಡಿಕೊಂಡರೆಂದು ಹೇಳುವರು.[೪]

೫. ಮಂಗಾಪುರದ ಗುರುಸಿದ್ಧಸ್ವಾಮಿಗಳ ಗದ್ದುಗೆ : *(ಚಿತ್ರ ನಂ. ೩೭ ರಿಂದ ೩೮)*

ಉಜ್ಜಯಿನಿ ಸಮೀಪ ಪೂರ್ವದಿಕ್ಕಿನಲ್ಲಿ ಮಂಗಾಪುರ ಗ್ರಾಮವಿದೆ. ಈ ಊರ ಹೊರಗಡೆ ಪೂರ್ವಕ್ಕೆ ಸುಮಾರು ಒಂದು ಕಿ.ಮೀ. ಅಂತರದಲ್ಲಿ ಉಜ್ಜಯಿನೀ ಪೀಠದ ಶ್ರೀಗುರುಸಿದ್ಧಸ್ವಾಮಿಗಳ ಗದ್ದುಗೆಯಿದೆ. ಅದೊಂದು ಕಿರಿದಾದ ಮಂದಿರ. ಅದರಲ್ಲಿ ಶ್ರೀಗಳ ಗದ್ದುಗೆಯಿದೆ. ಆ ಗದ್ದುಗೆ ಮೇಲೆ ಕಂಚಿನ ಶ್ರೀಗಳ ಹೆಸರಿನ ಮುಖವಾಡವನ್ನು ಪ್ರತಿಷ್ಠಾಪಿಸಲಾಗಿದೆ. ಗದ್ದುಗೆಯ ಮುಂದೆ ಎರಡು ಜೋಡು ಆವುಗೆಗಳಿವೆ. ಈ ಮಂದಿರಕ್ಕೆ ಮುಖಮಂಟಪವಿದೆ. ಶ್ರೀ ಪೂಜ್ಯರ ಜೀವಂತ ಸಮಾಧಿಯ ಗದ್ದುಗೆಯು ಕೊಟ್ಟೂರಿನಲ್ಲಿ ಇರುವುದು. ಆ ಗದ್ದುಗೆಯು ನಿತ್ಯ ಪೂಜೆಗೊಳ್ಳುತ್ತಿದೆ. ಪ್ರತಿವರ್ಷ ಇಲ್ಲಿ ಸಂಭ್ರಮ ಸಡಗರದಿಂದ ಶ್ರೀಸ್ವಾಮಿಗಳ ಉತ್ಸವ ನಡೆಯುವುದು. ಈ ಉತ್ಸವದಲ್ಲಿ ಪರ್ವವನ್ನು ಏರ್ಪಡಿಸುವರು. ಕುತೂಹಲದ ಸಂಗತಿಯೆಂದರೆ ಈ ಗದ್ದುಗೆಯ ಹಿಂದೆ ಒಂದು ಕಿರಿದಾದ ಬಚ್ಚಲಿನಂತಹ ಚೌಕಾಕಾರದ ಗೋಡೆಯ ಕಟ್ಟಡವಿದೆ. ಪೂರ್ವ ದಿಕ್ಕಿನಲ್ಲಿ ಅದಕ್ಕೆ ಕಿರಿದಾದ ದಾರಿಯಿದೆ. ಅದರ ಮಧ್ಯ ನೆಲದಲ್ಲಿ ಒಂದು ಮಗಿಯನ್ನು ಹೂಳುವಷ್ಟು ಗುಂಡಿಯಿದೆ. ಪ್ರತಿವರ್ಷ ಏರ್ಪಡಿಸಿದ ಪರ್ವದ ಪ್ರಸಾದವನ್ನು ಒಂದು ಮಗಿಯಲ್ಲಿಟ್ಟು, ಆ ಗುಂಡಿಯಲ್ಲಿ ಮುಚ್ಚುವರು. ಪ್ರಸಾದದಲ್ಲಿ ಅನ್ನ, ಬಾಳೆಹಣ್ಣು,

ತುಪ್ಪ ಮತ್ತು ನೀರಿರುತ್ತದೆ. ಈ ಪ್ರಸಾದವನ್ನು ಮುಂದಿನ ವರ್ಷ ಹೊರತೆಗೆದಾಗ ಅದರ ಸ್ವರೂಪವನ್ನು ನೋಡಿ ಸ್ಥಳದ ಸುಬಿಕ್ಷತೆಯನ್ನು ಸ್ಥಳಿಕರು ನಿರ್ಧರಿಸುವ ಪರಂಪರೆಯಿದೆ.[೫]

೬. ಕಡಕೋಳದಲ್ಲಿ ಶ್ರೀವಿರೂಪಾಕ್ಷ ಜಗದ್ಗುರುಗಳ ಗದ್ದುಗೆ

ಉಜ್ಜಯಿನಿ ಸದ್ಧರ್ಮ ಪೀಠದ ಸ್ಥಿರಪಟ್ಟಾಧ್ಯಕ್ಷರಾಗಿದ್ದ ಶ್ರೀವಿರೂಪಾಕ್ಷ ಪಂಡಿತರು ಬಳ್ಳಾರಿಗೆ ಅಖಿಲ ಭಾರತ ವೀರಶೈವ ಮಹಾ ಅಧಿವೇಶನಕ್ಕೆ ಹೋಗುವ ದಾರಿಯಲ್ಲಿ (ಕೂಡ್ಲಗಿ ತಾಲೂಕಿನ ಕಡಕೋಳ ಗ್ರಾಮ) ಶಿವೈಕ್ಯರಾದರು. ಆದುದರಿಂದ ಶ್ರೀಗಳವರ ಮೃತದೇಹವನ್ನು ದಾರಿಯ ಬದಿಯ ಕಡಕೋಳ ಗ್ರಾಮದಲ್ಲಿ ಸಮಾಧಿ ಮಾಡಲಾಯಿತು. ಆ ಸಮಾಧಿಯ ಮೇಲೆ ಗದ್ದುಗೆಯನ್ನು ಕಟ್ಟಲಾಗಿದೆ.[೬]

೭. ಕೊಟ್ಟೂರಿನಲ್ಲಿರುವ ಗುರುಸಿದ್ಧಸ್ವಾಮಿಗಳ ಗದ್ದುಗೆ

ಕೊಟ್ಟೂರಿನಲ್ಲಿ ದಾರುಕಾಶ್ರಮವನ್ನು ಉಜ್ಜಯಿನಿ ಶ್ರೀ ಸಿದ್ಧಲಿಂಗ ಜಗದ್ಗುರುಗಳು ಸ್ಥಾಪಿಸಿದರು. ಈ ಆಶ್ರಮದಲ್ಲಿ ಬಹುಕಾಲ ನೆಲೆಸಿ ಅಲ್ಲಿಯೇ ಜೀವಂತ ಸಮಾಧಿ ಹೊಂದಿದ ಶ್ರೀ ಗುರುಸಿದ್ಧಸ್ವಾಮಿಗಳ ಗದ್ದುಗೆಯಿದೆ. ಅದು ಈ ಭಾಗದಲ್ಲಿ ಖ್ಯಾತಿಯನ್ನು ಪಡೆದಿದೆ. ಭವ್ಯ ಕಟ್ಟಡವುಳ್ಳ ಈ ಗದ್ದುಗೆಯು ಉತ್ತರಕ್ಕೆ ಮುಖಮಾಡಿದೆ. ಈ ಮಂದಿರದ ತಳಪಾಯದಲ್ಲಿ ಆಯತಾಕಾರದ ಗರ್ಭಗೃಹ ಮತ್ತು ತೆರೆದ ವಿಶಾಲವಾದ ಸ್ತಂಭಗಳುಳ್ಳ ಮಂಟಪವಿದೆ. ಗರ್ಭಗೃಹದಲ್ಲಿರುವ ಗದ್ದುಗೆಯ ಮೇಲೆ ಶ್ರೀಸ್ವಾಮಿಯ ಹೆಸರಿನ ತಾಮ್ರದ ಮುಖವಾಡವನ್ನು ಸ್ಥಾಪಿಸಲಾಗಿದೆ. ಅದಕ್ಕೆ ಜಟಾಮಕುಟ, ಮಕರ ಕುಂಡಲಗಳಿವೆ. ಏಳು ಹೆಡೆಯ ಸರ್ಪದ ನಾಗಮುರಿಯನ್ನು ಮುಖವಾಡವನ್ನು ಅಲಂಕರಿಸಲಾಗಿದೆ. ಈಗಾಗಲೇ ಶ್ರೀಗುರುಸಿದ್ಧಸ್ವಾಮಿಗಳ ಗದ್ದುಗೆ ಮಂಗಾಪುರದಲ್ಲಿರುವುದನ್ನು ತಿಳಿಸಲಾಗಿದೆ. ಅಲ್ಲಿ ಮಾತ್ರ ಅವರ ಆವುಗೆಗಳಿರುವುದು ಗಮನೀಯ. ಶ್ರೀಸ್ವಾಮಿಗಳ ಪರಿಚಯವನ್ನು ಶ್ರೀಪೀಠದ ಜಗದ್ಗುರುಗಳ ಪಟ್ಟವಲ್ಲಿರಿಯಲ್ಲಿ ನೀಡಲಾಗಿದೆ.

೮. ಶ್ರೀ ಮರುಳಸಿದ್ಧಸ್ವಾಮಿಗಳ ಗದ್ದುಗೆ

ಕೊಟ್ಟೂರಿನ ದಾರುಕಾಶ್ರಮದಲ್ಲಿರುವ ಶ್ರೀಗುರುಸಿದ್ಧಸ್ವಾಮಿಗಳ ಗದ್ದುಗೆ ಎದುರಿಗೆ ಶ್ರೀಮರುಳಸಿದ್ಧಸ್ವಾಮಿಗಳ ಗದ್ದುಗೆಯಿದೆ. ಈ ಗದ್ದುಗೆಯು ನೆಲಮಾಳಿಗೆಯಲ್ಲಿದೆ. ಈ ನೆಲಮಾಳಿಗೆಯಲ್ಲಿ ಒಂದು ಗರ್ಭಗೃಹವಿದೆ. ಪೂರ್ವಕ್ಕೆ ಮುಖಮಾಡಿದ ಈ ಗದ್ದುಗೆಗೆ ಮೇಲಿಂದ ಇಳಿಯಲು ಮೆಟ್ಟಿಲುಗಳಿವೆ. ಗದ್ದುಗೆಯ ಮೇಲೆ ಶ್ರೀಗಳವರ ಹೆಸರಿನ ಮುಖವಾಡ ಮತ್ತು ಅವರು ಬಳಸಿದ ಆವುಗೆಗಳನ್ನು ಇಡಲಾಗಿದೆ. ಈ ಗದ್ದುಗೆಗೆ ನಿತ್ಯ ಪೂಜೆ ನಡೆಯುತ್ತದೆ.

೯. ಶ್ರೀ ಕರಿಬಸವಸ್ವಾಮಿಗಳ ಗದ್ದುಗೆ

ಕೊಟ್ಟೂರಿನ ಗುರುಸಿದ್ಧಸ್ವಾಮಿಗಳ ಗದ್ದುಗೆಯ ಎಡಬದಿಗೆ ಒಂದು ಕಿರು ದೇವಾಲಯವಿದೆ. ಅದರ ತಳಪಾಯದಲ್ಲಿ ಒಂದು ಚೌಕಾಕಾರ ಗರ್ಭಗೃಹವಿದ್ದು ಅದಕ್ಕೆ ಎತ್ತರದ ಕಟ್ಟೆಯಿದೆ. ಗರ್ಭಗೃಹದ ದ್ವಾರಬಂಧದಲ್ಲಿ ಶೈವ, ವೈಷ್ಣವದ್ವಾರ ಪಾಲಕರಿದ್ದಾರೆ. ಗರ್ಭಗೃಹದ ಮೂರು ಗೋಡೆಗಳಲ್ಲಿ ಜಾಲಂಧ್ರಗಳಿವೆ. ಗರ್ಭಗೃಹದ ಒಳಗಡೆ ಕರಿಬಸವ ಸ್ವಾಮಿಗಳ ಗದ್ದುಗೆ ಮೇಲೆ ಶಿವಲಿಂಗವನ್ನು ಇಡಲಾಗಿದೆ ಎಂದು ಸ್ಥಳಿಕರು ಹೇಳುತ್ತಾರೆ. ಅದರ ಬಾಗಿಲದ ಚೌಕಟ್ಟನ್ನು ಬೇರೆ ಕಡೆಯಿಂದ ತರಲಾಗಿದೆ. ಆದರೆ ಈ ಕರಿಬಸವ ಸ್ವಾಮಿಗಳು ಯಾರೆಂದು ತಿಳಿದುಬರುವುದಿಲ್ಲ.

೧೦. ಚಿತ್ರದುರ್ಗದಲ್ಲಿ ಶ್ರೀ ಮರುಳಾರಾಧ್ಯರ ಗದ್ದುಗೆ

ಜಗದ್ಗುರು ಶ್ರೀ ಮರುಳಾರಾಧ್ಯಶಿವಾಚಾರ್ಯರು ಮೈಸೂರಿನಲ್ಲಿ ಲಿಂಗೈಕ್ಯರಾದರು. ಅವರ ಸಮಾಧಿಯು ಚಿತ್ರದುರ್ಗದಲ್ಲಿದೆ.

೧೧. ಸೋಮವಾರ ಪೇಟೆಯ ಗದ್ದುಗೆ

ಕೊಡಗು ಜಿಲ್ಲೆಯ ಸೋಮವಾರ ಪೇಟೆಯಿಂದ ೪೦ ಕಿ.ಮೀ. ಅಂತರದಲ್ಲಿ ಒಂದು ಗದ್ದುಗೆಯಿದೆ. ಅದನ್ನು ಉಜ್ಜಯಿನಿ ಪೀಠದ ಶ್ರೀಮರುಳಸಿದ್ಧೇಶ್ವರ ಸ್ವಾಮಿಗಳ ಗದ್ದುಗೆ ಎನ್ನುವರು. ಅಲ್ಲಿನ ಬಿಲ್ವಪತ್ರಿ ವನ ಮನ ಮೋಹಕವಾಗಿದೆಯಂತೆ.[೭]

೧೨-೧೩. ಹೆಗ್ಗಡಾಳ ಮತ್ತು ನಿಂಬಳಗೇರಿಯ ಗದ್ದುಗೆಗಳು

ಶ್ರೀಪೀಠದ ಇಬ್ಬರು ಜಗದ್ಗುರುಗಳ ಗದ್ದುಗೆಗಳು ಹೆಗ್ಗಡಾಳು ಮತ್ತು ನಿಂಬಳಗೇರಿಯಲ್ಲಿ ಇರುವುದಾಗಿ ಸ್ಥಳಿಕರು ಹೇಳುವರು. ನಿಂಬಳಗೇರಿಯಲ್ಲಿ ನಿರ್ಮಿಸಿದ ಗದ್ದುಗೆಯು ಶ್ರೀಗಳು ಶ್ರೀಪೀಠದ ಸ್ವಾಮಿಗಳಾಗಲು ಪ್ರಯತ್ನಿಸಿದ ಸ್ಥಳೀಯ ಚೂರಿಮನೆತನದವರೆಂದು ಹೇಳುವರು. ಚೂರಿ ಎಂದರೆ ಬುದ್ಧಿವಂತರು' ಎಂದು ಅರ್ಥೈಸುವರು.

೧೪. ಆಲೂರಿನ ಗದ್ದುಗೆ

ಕೂಡ್ಲಿಗಿ ತಾಲೂಕಿನ ಕಾನಾಮಡಗಿನ ಹತ್ತಿರದ ಆಲೂರಿನಲ್ಲಿ ಶ್ರೀಪೀಠದ ಒಬ್ಬ ಜಗದ್ಗುರುಗಳ ಗದ್ದುಗೆ ಇದೆ. ಅದು ಮುಸ್ಲಿಂ ಜನರ ಓಣಿಯಲ್ಲಿದೆ. ಈ ಗದ್ದುಗೆಯ ಸ್ವಾಮಿಗಳ ಹೆಸರು ತಿಳಿದಿಲ್ಲ.[೯]

೧೫. ಶಿರಾದ ಗದ್ದುಗೆ

ಶಿರಾದಲ್ಲಿ ಟಿಪ್ಪು ಸುಲ್ತಾನರ ಕಾಲದ ಶ್ರೀ ಉಜ್ಜಯನಿ ಸದ್ಧರ್ಮಪೀಠದ ಒಬ್ಬ ಜಗದ್ಗುರುಗಳ ಗದ್ದುಗೆ ಇದೆ. ಅದೂ ಸಹ ಮುಸ್ಲಿಂ ಜನರ ಓಣಿಯಲ್ಲಿದೆ. ಆ ಗದ್ದುಗೆಯ ಹೆಸರು ಶ್ರೀಪೀಠದ ಶ್ರೀವೃಷಭಲಿಂಗಶಿವಾಚಾರ್ಯಮಹಾಸ್ವಾಮಿಗಳು. ಶ್ರೀಸ್ವಾಮಿಗಳವರ ಹೆಚ್ಚಿನ ವಿವರಗಳು ಇನ್ನೂ ತಿಳಿದಿಲ್ಲ.[೧೦]

೧೬. ಪಾಂಡವಪುರದ ಗದ್ದುಗೆ

ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯ ಪಾಂಡವಪುರದ ಬಳಿ ಇರುವ ಸಿದ್ಧನ ಕೆರೆಯಲ್ಲಿ ಶ್ರೀ ಉಜ್ಜಯಿನಿ ಸದ್ಧರ್ಮ ಪೀಠದ ಒಬ್ಬ ಜಗದ್ಗುರುಗಳ ಸಮಾಧಿಯಿದೆಯೆಂದು ತಿಳಿದು ಬರುತ್ತದೆ.[೧೧]

೧೭. ದೇವರ ಹೊಸಹಳ್ಳಿಯ ಗದ್ದುಗೆ

ಎಡೆಯೂರ ಹತ್ತಿರದ ದೇವರ ಹೊಸಹಳ್ಳಿಯಲ್ಲಿ ಉಜ್ಜಯಿನಿ ಸದ್ಧರ್ಮಪೀಠದ ಒಬ್ಬ ಜಗದ್ಗುರುಗಳ ಸಮಾಧಿ ಇರುವುದೆಂದು ಹೇಳಲಾಗುತ್ತದೆ.[೧೨] ಅದನ್ನು ನಾಲ್ಕು ನೂರು ವರ್ಷಗಳ ಹಿಂದಿನ ಶ್ರೀಪೀಠದ ಜಗದ್ಗುರುಗಳೊಬ್ಬರ ಜೀವಂತ ಸಮಾಧಿ ಎನ್ನುವರು. ಈ ಗದ್ದುಗೆಗೆ ಉಜ್ಜೆನೇಶ್ವರ ಎಂದು ಹೆಸರು.

೧೮. ಮುಕ್ತಿಮುನಿ ಗದ್ದುಗೆ

ಈ ಗದ್ದುಗೆಯು ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ತಾಲೂಕಿನ ತರಗನಹಳ್ಳಿಯಲ್ಲಿದೆ.[೧೩] ಅದನ್ನು ಉಜ್ಜಯಿನಿ ಪೀಠದ ಮುಕ್ತಿಮುನಿ ಶಿವಾಚಾರ್ಯರ ಗದ್ದುಗೆ ಎಂದು ಆರಾಧಿಸುವರು.

೧೯-೨೦ : ಶ್ರೀಪೀಠದ ಅನೇಕ ಲಿಂಗೈಕ್ಯ ಜಗದ್ಗುರುಗಳ ಗದ್ದುಗೆಗಳು ಉಜ್ಜಯಿನಿ ಗ್ರಾಮದ ದಕ್ಷಿಣದ[೧೪] ಮಸಲೆತ್ತಿನ ಬಸಪ್ಪನ ಗುಡಿ ಸಮೀಪ ಇವೆ. ಅವುಗಳ ಹೆಚ್ಚಿನ ವಿವರಗಳು ಇನ್ನೂ ತಿಳಿದಿಲ್ಲ. ಅವು ಅನಾಥವಾಗಿ ಉಳಿದಿದ್ದು ಅವುಗಳನ್ನು ಸಂರಕ್ಷಿಸುವ ಅವಶ್ಯಕತೆಯಿದೆ. ಶ್ರೀ ಪೀಠದ ಜಗದ್ಗುರುಗಳ ಗದ್ದುಗೆಗಳು ಕೊಪ್ಪಳ ತಾಲೂಕಿನ ಹಿರೇಶಿಂದೋಗಿಯಲ್ಲಿವೆ ಎಂದು ಹೇಳುವರು. ಶ್ರೀ ಪೀಠದ ಇನ್ನೂ ಅನೇಕ ಜಗದ್ಗುರುಗಳ ಗದ್ದುಗೆಗಳಿರುವ ಸ್ಥಳಗಳನ್ನು ಹುಡುಕುವ ಕೆಲಸ ನಡೆಯಬೇಕಾಗಿದೆ. ಈಗ ಕೇವಲ ೨೦ ಗದ್ದುಗೆಗಳ ವಿವರಗಳು ಸಂಗ್ರಹವಾಗಿವೆ. ಆದರೆ ಕೆಲವು ಗದ್ದುಗೆಗಳ ಬಗ್ಗೆ ಹೆಚ್ಚಿನ ವಿವರಗಳು ತಿಳಿದಿಲ್ಲ.

ಅಡಿ ಟಿಪ್ಪಣಿ

೧. ಉಜ್ಜಯಿನಿಯ ಯು. ಎಂ. ಗೊಂಗಡಿ ವೀರಯ್ಯನವರು ತಿಳಿಸಿರುವರು.

೨. ಹಿರೇಹಡಗಲಿ ಪುರಾಣಿಕಮಠದ ವಿರೂಪಾಕ್ಷಯ್ಯ ಶಾಸ್ತ್ರಿ; ಸಿದ್ಧಲಿಂಗೇಶ್ವರ ವಿಜಯ, ೧೯೪೪

೩. ಈ ವಿಷಯವನ್ನು ಉಜ್ಜಯಿನಿಯ ಶ್ರೀ ಯು. ಎಂ. ಗೊಂಗಡಿ ವೀರಯ್ಯನವರು ತಿಳಿಸಿರುವರು.

೪. ಅವರೇ.

೫. ಅವರೇ.

೬. ಅವರೇ.

೭. ಅವರೇ.

೮. ಈ ವಿಷಯವನ್ನು ಶ್ರೀ ಐ. ಹೆಚ್. ಎಂ. ವಿಜಯಕುಮಾರ ತಿಳಿಸಿರುವರು.

೯. ಈ ವಿಷಯವನ್ನು ಉಜ್ಜಯಿನಿಯ ಶ್ರೀ ಯು. ಎಂ. ಗೊಂಗಡಿ ವೀರಯ್ಯನವರು ತಿಳಿಸಿರುವರು.

೧೦. ಅವರೇ,

೧೧. ಅವರೇ.

೧೨. ಅವರೇ.

೧೩. ಈ ವಿಷಯವನ್ನು ಡಾ. ಎಂ. ಶಿವಮೂರ್ತಿ ಅವರು ತಿಳಿಸಿರುವರು.

೧೪. ಈ ವಿಷಯವನ್ನು ಶ್ರೀ ಯು. ಎಂ. ಗೊಂಗಡಿ ವೀರಯ್ಯನವರು ತಿಳಿಸಿದ್ದಾರೆ.

ಶ್ರೀಪೀಠದ ಬಿನ್ನವತ್ತಳೆಗಳು ಮತ್ತು ಪತ್ರಗಳು

ಉಜ್ಜಯನಿ ಸದ್ಧರ್ಮ ಪೀಠದ ಜಗದ್ಗುರುಗಳು ಭಕ್ತರ ವಿನಂತಿಯ ಮೇರೆಗೆ ದೇಶ ಸಂಚರಿಸುವರು. ಆ ಸಂದರ್ಭದಲ್ಲಿ ಜಗದ್ಗುರುಗಳ ಅಡ್ಡ ಪಲ್ಲಕ್ಕಿ ಉತ್ಸವಗಳು ವೈಭವದಿಂದ ಜರಗುತ್ತವೆ ಮತ್ತು ಧರ್ಮಗೋಷ್ಠಿಗಳು ನಡೆಯುತ್ತವೆ. ಅದಕ್ಕಾಗಿ ಭಕ್ತರು ತಮ್ಮ ಗ್ರಾಮ/ಪಟ್ಟಣಗಳ ವತಿಯಿಂದ ಜಗದ್ಗುರುಗಳಿಗೆ ಬಿನ್ನವತ್ತಳೆಗಳನ್ನು ಅರ್ಪಿಸುವರು. ಈ ಸಂಪ್ರದಾಯದ ಪ್ರಕಾರ ಉಜ್ಜಯಿನಿ ಪೀಠದ ಜಗದ್ಗುರುಗಳಿಗೆ ದೇಶದ ವಿವಿಧ ಭಾಗಗಳ ಭಕ್ತರು ಬಿನ್ನವತ್ತಳೆಗಳನ್ನು ಅರ್ಪಿಸಿದ್ದಾರೆ. ಶ್ರೀಜಗದ್ಗುರುಗಳವರ ಉತ್ಸವದಲ್ಲಿ ಭಕ್ತರ ಕೋರಿಕೆಯ ಮೇರೆಗೆ ಆ ಸ್ಥಳಗಳಲ್ಲಿ ಅನೇಕ ಜನಹಿತ ಕಾರ್ಯಗಳನ್ನು ಮಾಡಿ ತಮ್ಮ ಸ್ಥಾನ-ಮಾನವನ್ನು ಹೆಚ್ಚಿಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಬಳ್ಳಾರಿಯ ಜನರ ಆಶೋತ್ತರಗಳನ್ನು ಈಡೇರಿಸಿದರು. ಅದಕ್ಕಾಗಿ ಭಕ್ತರು ಶ್ರೀ ಪೀಠದ ಶ್ರೀ ಸಿದ್ಧಲಿಂಗ ಜಗದ್ಗುರುಗಳಿಗೆ ದಿನಾಂಕ ೨೩.೧೨.೧೯೩೦ರಂದು ಅರ್ಪಿಸಿದ ಬಿನ್ನವತ್ತಳೆ ಒಂದು ಉದಾಹರಣೆಯಾಗಿದ್ದು ಅದನ್ನು ಮಾತ್ರ ಇಲ್ಲಿ ನೀಡಲಾಗಿದೆ. ಇಂತಹ ನೂರಾರು ಬಿನ್ನವತ್ತಳೆಗಳು ಶ್ರೀಪೀಠದಲ್ಲಿವೆ. ಈ ಕುರಿತು ಪ್ರತ್ಯೇಕ ಅಧ್ಯಯನ ನಡೆಸಬೇಕಾಗಿದೆ.

॥ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸಿದಂತು॥

ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಜಗದ್ಗುರು

ಚರಪಟ್ಟಾಧ್ಯಕ್ಷ ಶ್ರೀ ೧೦೮ ಸಿದ್ಧಲಿಂಗರಾಜದೇಶಿಕೇಂದ್ರ

ಮಹಾಸ್ವಾಮಿಗಳವರ ದಿವ್ಯಸನ್ನಿಧಾನಂಗಳಲ್ಲಿ

ಬಳ್ಳಾರಿ ಪಟ್ಟಣದ ವೀರಶೈವಮಂಡಳಿಯಿಂದ ಸಮರ್ಪಿಸಿದ

ವಿಜ್ಞಾಪನಾಪಂಚರತ್ನಂ

ವಾ.ಷ॥ ನಿರತಿಗಂಧಂ ತೀವಿಸಾರೆ ಜಗದಂತಮಂ।
ಕರುಣಾಲಸನ್ಮಧುವು ಸೋರೆ ಮಿಗೆ ಸಂತತಂ।
ವರಭಕ್ತಭೃಂಗನಿವಹಂ ಪಾರೆ ನುತಿಯ ನುಣ್ದನಿಗೂಡಿ ಬಳಸಿನಲಿಪಿಂ॥
ಪರಕೆಯ ಫಲಂ ತೋರೆ ಸುಖದ ತಣ್ಪಿಂದೆಸೆವ ।

ನೆರಳಲ್ಲಿ ಸೇರೆ ವಿಭುದಾಳಿ ಸನ್ಮುಕ್ತಿಲತೆ ।
ವೆರಸಿ ರಾಜಿಸುವ ಸದ್ಗುರುಸಿದ್ಧಲಿಂಗಸುರತರುವೀಗೆ ನಮ್ಮಿಷ್ಟಮಂ॥
ಗುರುವೆ ನಿನ್ನಧ್ಯಕ್ಷತೆಯೊಳುದಯವಾಗಿ ಮೇಣ್ ।
ವರಕೃಪಾಬಲದೆ ವೃದ್ಧಿಯ ಹೊಂದುತಿರುವ ಭಾ ।
ಸುರ ವೀರಶೈವ ವಿದ್ಯಾವೃದ್ಧಿಕರ ಸಂಘದಿಂದೊಪ್ಪುವೀ ಪುರದೊಳು ॥
ಕರುಣದಿಂದಂ ನೀನು ಸಕಲ ಬಿರುದಂಗಳಿಂ ।
ಪರಿಶೋಭೆಯಂ ಪಡೆದು ತಿರ್ಯುಗಾಂದೋಳನಂ ।
ಪರಮೋತ್ಸವದೊಳು ಬಿಜಯಂಗೆಯ್ದು ಪರಸಿದುದು
ನಮ್ಮ ಪುಣ್ಯದಫಲವಿದು ॥
ಕಲಿತು ವರವಿದ್ಯೆಯಂ ಗಳಿಸಿ ಧನಕನಕಮಂ ।
ಬೆಳೆಸಿ ಸದ್ಧರ್ಮಮಂ ನೆಲಸೆ ಸುಖಶಾಂತಿಗಳುಂ ।
ಸಲೆ ಬಾಳುತಿರ್ಪುದೆಲ್ಲಾ ಜನಾಂಗಂ ಪಲವುನಾಡೊಳೀಕಲಿಯುಗದೊಳು ॥
ಒಲಿದು ದುರ್ವಾದಕ್ಕೆ ಸಿಲುಕಿ ಮಿಗೆಜಗಳಕ್ಕೆ ।
ತುಳಿದಧೋತಳಕೈಕ್ಯತೆಯನಳಲ ಬೇಗೆಯದು ।
ಬಳಸೆ ಬಳಲುವದೆಮ್ಮ ಮತಮನಾಯಕರಾಜ್ಯದಂತಾನಾದಕತದಿಂ॥
ವೀರಶೈವರ ಸುಸಿದ್ಧಾಂತಾದಿಗಳ ವರವಿ ।
ಚಾರದಿಂದೊಪ್ಪುವುದ್ಗ್ರಂಥಗಳ ಬೋಧನದೆ ।
ಭೂರಿವಿದ್ಯಾರ್ಥಿಗಳ ಸೂರಿಪದಕೇರಿಸುವ ಸಂಸ್ಕೃತ ಕಲಾಶಾಲೆಯಂ॥
ವೀರಶೈವರ ವಸತಿಗಿದು ಕೇಂದ್ರಮೆನಿಪ ಬ ।
ಳ್ಳಾರಿಪುರದೊಳ್ ಸ್ಥಾಪಿಸುತೆ ಮತದ ಧರ್ಮದು ।
ದ್ಧಾರಮಂ ಮಾಡುತೈಕ್ಯತೆಯ ನೆಲೆಗೊಳಿಸೆಮ್ಮೊಳೆಂದು ಬೇಡುವೆವು ಗುರುವೇ॥
ಅನ್ನಾದಿ ಸೌಕರ್ಯಮಿಲ್ಲದೆ ನಿರಂತರಂ ।
ಬನ್ನವಡೆದೋದಿನೊಳ್ ಹಿಂದುಳಿಯುತಿರ್ಪರಾ ।
ಚೆನ್ನಪುರಿಯಲ್ಲಾಂಗ್ಲಭಾಷೆಯಂ ಕಲಿವೆಮ್ಮ ಮತದ ಬಡತರುಳರೆಲ್ಲಂ ॥
ಇನ್ನನಾಥರ್ಗವರಿಗಾರಾಶ್ರಯಮದಿಲ್ಲ ।
ನಿನ್ನ ಮೊರೆವೊಕ್ಕರೈ ಶ್ರೀಸಿದ್ಧಲಿಂಗಮಹಿ ।
ಮೋನ್ನತಸ್ವಾಮಿ ವಿದ್ಯಾರ್ಥಿನಿಲಯವ ನಿರ್ಮಿಸಲ್ಲಿ ನೀಂ ಕರುಣದಿಂದಂ॥

ತಾ. ೨೩.೧೨.೩೦

ಬಳ್ಳಾರಿ

ವೀರಶೈವ ಮಂಡಳಿ, ಬಳ್ಳಾರಿ.

ಬಳ್ಳಾರಿಯ ವೀರಶೈವ ವಿದ್ಯಾವರ್ಧಕ ಸಂಘ ಸ್ಥಾಪಿಸಲು ಲಿಂ॥ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಐದುಸಾವಿರ ರೂಪಾಯಿ ಬೆಳ್ಳಿ ನಾಣ್ಯಗಳನ್ನು ನೀಡಿದರು. ಈಗ ಈ ಸಂಸ್ಥೆ ಹೆಮ್ಮರವಾಗಿ ಬೆಳೆದು ನಿಂತು ಶ್ರೀಪೀಠಕ್ಕೆ ಋಣಿಯಾಗಿದೆ.

ಶ್ರೀಪೀಠಕ್ಕೆ ಅನೇಕ ಆಜ್ಞಾಪತ್ರಗಳನ್ನು ಸರ್ಕಾರದವರು ಹೊರಡಿಸಿದ್ದಾರೆ. ಅದರಲ್ಲಿ ಆಗಿನ ಮೈಸೂರು ಸರ್ಕಾರ ದಿನಾಂಕ : ೧೧.೦೬.೧೯೩೫ರಂದು ನೀಡಿದ ರಹದಾರಿ ಪತ್ರದ ವಿವರ ಈ ರೀತಿಯಿದೆ.★

Office of the Muzarai Commissioner in Mysore
R Dis. No. 4 of 1925-26 11 June 1935

ಮೈಸೂರು ಸೀಮೆಯ ಮುಜರಾಯಿ ಕಮೀಶನರವರ ಕಚೇರಿಯಿಂದಾ-

ಮೈಸೂರು ಸೀಮೆಯ ಎಲ್ಲಾ ತಾಲೂಕು ಅಮೀನರಿಗೂ ಮತ್ತು ಡೆಪ್ಯುಟಿ ಅಮೀನರಿಗೆ ಬರೆಸಿ ಕಳುಹಿಸಿದ ನಿರೂಪುಅದಾಗಿ -

ಬಳ್ಳಾರಿ ಜಿಲ್ಲಾ ಕೂಡ್ಲಿಗಿ ತಾಲೂಕು ಉಜ್ಜಯಿನಿ ಸದ್ಧರ್ಮ ಸಿಂಹಾಸನ ಮಠದ ಚರಪಟ್ಟಾಧ್ಯಕ್ಷ ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳವರು ಮೈಸೂರು ಸೀಮೆಯಲ್ಲಿ ವೀರಶೈವ ಮತದ ಆಚಾರ, ವಿಚಾರ ಮತ್ತು ಶಿಷ್ಯಾರ್ಜನೆ ಉದ್ದಿಶ್ಯ ಸಂಚಾರ ಮಾಡುವುದರಿಂದ ಸದರಿ ಸ್ವಾಮಿಗಳವರು ನಿಮ್ಮ ನಿಮ್ಮ ಗಡಿಗಳ ಮಾರ್ಗವಾಗಿ ಬಂದಲ್ಲಿ ಉಕ್ಕಡ ಕಣಿವೆಗಳಲ್ಲಿ ಅಟಕಾಯಿಸದೆ ಬಿಟ್ಟುಬಿಡುವುದು ಮತ್ತು ಗುರುಗಳಿಗೂ ಇವರ ಪರಿವಾರಕ್ಕೂ ಸಹ ಜನಗಳಿಂದ ಸರಬರಾಜಿಆದ ಜಿನಸುಗಳಿಗೆ ವಾಜಬಿ ಕ್ರಯ ಕೊಡಸಿಕೊಡತಕ್ಕದ್ದಲ್ಲದೆ ಖೈದುವಾರು ಜಾಗವಲ್ಲಿ ಇಳಿಸಿ ರಾತ್ರಿ ವೇಳೆ ಕಳ್ಳಕಾಕರ ಉಪದ್ರವವಿಲ್ಲದಂತೆ ವುಸ್ತುವಾರಿ ಮಾಡಿಸಿ ದರಮುಜಲಿನಲ್ಲಿಯೂ ಮರ್ಯಾದಿಯಿಂದ ನಡೆದುಕೊಂಡು ಬರುವುದು.

ಇವರ ಮಠಹ ಈ ಕೆಳಗೆ ನಮೂದಿಸಿರುವಂತೆ ಬಿರುದು ಬಾವಲಿಗಳು ಇರುತ್ತಾಗಿ ನಿಮ್ಮ ನಿಮ್ಮ ಸರಹದ್ದುಗಳಲ್ಲಿ ತಡೆಯದೆ ಬಿಟ್ಟುಬಿಡುವುದು.

ಪಾಲಕಿ೨, ಮೇಣ೧, ಮಕರತೋರಣ, ಹಗಲು ದೀವಟಿಗೆ, ಚಾಮರ ಮತ್ತು ಮೂರ್ಚಾಲುಳ, ವಾಲುಗಳು೨, ಬಿಳಿ ಮತ್ತು ಕೆಂಪು ಛತ್ರಿ೨, ಭೂಚಕ್ರದ ಕೊಡೆ೨,

---

★ ಹಿರೇಹಡಗಲಿ ಪುರಾಣಿಕಮಠ ವಿರೂಪಾಕ್ಷಶಾಸ್ತ್ರಿಗಳು; ೧೯೫೩, 'ಗುರುವರ್ಗದರ್ಪಣ', **ಶ್ರೀಜಗದ್ಗುರು ಪಂಚಪೀಠಗಳ ಪರಿಚಯ**, ಪು.೨೪.

ಆಪ್ತಗಿರಿ ೨, ಪಂಚದೀವಟಿಗೆ ೨, ಬೆಳ್ಳಿ ಬೆತ್ತ ೨, ಬೆಳ್ಳಿ ಚೊಟ ೨, ಭಲ್ಲೆ ಮತ್ತು ಗಗ್ಗರಿ ಕಟ್ಟಿಗೆ ೪, ಕಾವಿ ನಿಶಾನಿ ೨, ತ್ರಿಶೂಲ, ನಂದಿಧ್ವಜ, ನಿಶಾನಿ ಸಹಿತ ಆನೆ ೨, ಕುದುರೆ ಮೇಲೆ ಡಂಕ, ಭೇರಿ, ಕಹಳೆ, ಕರ್ನೆ, ನಫೂರಿ, ನಗಾರಿ, ಜಾಗಟೆ, ಘಂಟೆ, ಸೂರ್ಯವಾದ್ಯ ಚಂದ್ರವಾದ್ಯ ವಗೈರೆ, ನಾನಾ ತರಹದ ವಾದ್ಯಗಳು, ರಥ ೧, ಕುದುರೆ ೪, ಗೋವು ೮, ಎತ್ತು ೧೦, ಬಂದೂಕು ೨, ಹತ್ಯಾರು ೪, ಭೋವಿಯವರು ೮, ಜಿಲ್ಲೇ ಜವಾನರು ೧೨, ಫೌಜುದಾರರು ೨, ಚಡಿಯವರು ೮, ಪಂಡಿತರು ೪, ವೇದಘೋಷಕರು ೪, ಅಂಗರಕ್ಷಕರು ೪, ಇತರ ಸಿಬ್ಬಂದಿ ಜನ ೪೦.

ಬೆಂಗಳೂರು
ತಾ|| ೧೧-೫-೧೯೨೫

(ಸಹಿ) ಸಿ.ಎಸ್. ಬಾಲಸುಂದರಂ ಐಯ್ಯರ್
ಮುಜರಾಯಿ ಕಮೀಶನರ್

ಶ್ರೀಪೀಠದ ಶಾಖಾಮಠಗಳು

ಪಂಚಪೀಠಗಳಲ್ಲೊಂದಾದ ಉಜ್ಜಯಿನಿ ಸದ್ಧರ್ಮಪೀಠವು ವೀರಶೈವ ಧರ್ಮತತ್ವವನ್ನು ಪ್ರಚಾರಗೊಳಿಸಲು ತನ್ನ ಸಂಸ್ಕಾರ ಕ್ರಿಯೆಗಳನ್ನು ನಡೆಸಿಕೊಂಡು ಹೋಗಲು ದೇಶದ ಉದ್ದಗಲಕ್ಕೂ ಸುಮಾರು ೨೮,೦೦೦ ಶಾಖಾ ಮಠಗಳನ್ನು ಸ್ಥಾಪಿಸಿದೆ. ಅವು ಕರ್ನಾಟಕ, ಮಹಾರಾಷ್ಟ್ರ, ತಮಿಳುನಾಡು, ಮಧ್ಯಪ್ರದೇಶ, ಆಂಧ್ರಪ್ರದೇಶ ಮುಂತಾದ ರಾಜ್ಯಗಳಲ್ಲಿವೆ. ಈಗ ಅನೇಕ ಶಾಖಾಮಠಗಳು ಕಂಡುಬರುವುದಿಲ್ಲ. ಯಾವುದೇ ಮಹಂತನ ಮಠಗಳಿದ್ದರೆ ಅವು ಉಜ್ಜಯಿನಿ ಶ್ರೀ ಸದ್ಧರ್ಮಪೀಠಕ್ಕೆ ಸೇರಿದವಾಗಿವೆ ಹಾಗೂ ಸಿದ್ಧೇಶ್ವರ ಅಂಕಿತಗಳೆಲ್ಲ ಮರುಳಸಿದ್ಧರ ಹೆಸರುಗಳಾಗಿವೆ ಎಂದು ಈಗಿನ ಉಜ್ಜಯಿನಿ ಸದ್ಧರ್ಮ ಪೀಠದ ಜಗದ್ಗುರುಗಳು ಹೇಳುವರು. ಶ್ರೀಪೀಠದ ಈ ಶಾಖಾಮಠಗಳು ಗುರುವರ್ಗಕ್ಕೆ ಸೇರಿದವಾಗಿವೆ. ಅವು ಎರಡು ಪ್ರಕಾರಗಳಲ್ಲಿವೆ.

೧. ಹಿರೇಮಠ ಅಥವಾ ಪುತ್ರವರ್ಗಮಠ

೨. ಶಿಷ್ಯವರ್ಗದ ಮಠ

ಹಿರೇಮಠದವರಿಗೆ ಶ್ರೀಮದ್, ಘನಲಿಂಗ ಚಕ್ರವರ್ತಿ ಎಂತಲೂ, ಷಟಸ್ಥಲ ಬ್ರಹ್ಮಿಗಳೆಂದು ಕರೆಯುವರು. ಚರಮೂರ್ತಿಗಳು, ದೇಶಿಕರು ಮತ್ತು ಪಟ್ಟದೇವರೆಂಬ ನಾಮಾಂಕಿತದಿಂದ ಇವರು ಧಾರ್ಮಿಕ ಕ್ರಿಯೆಗಳಲ್ಲಿ ಪಾಲ್ಗೊಳ್ಳುವರು. ಈ ಮಠಗಳಿಗೆ ಮರಿಗಳನ್ನು ಅದೇ ಮಠದ ಯೋಗ್ಯ ವಟುಗಳನ್ನು ಆರಿಸಿ ನೇಮಿಸುವರು. ಅಧಿಕಾರ ಹಸ್ತಾಂತರಿಸುವ ಸಂದರ್ಭದಲ್ಲಿ ಅವರಿಗೆ ಪಟ್ಟಾಭಿಷೇಕವನ್ನು ಮಾಡಿ ದಂಡ, ಕಮಂಡಲ, ಧರ್ಮಗ್ರಂಥವಾದ ಸಿದ್ಧಾಂತ ಶಿಖಾಮಣಿಯನ್ನು, ಮುದ್ರೆ, ಉಂಗುರ, ಹಣೆಪಟ್ಟಿ ಇತ್ಯಾದಿ ವಸ್ತುಗಳನ್ನು ಅರ್ಪಿಸುವರು. ಶಿಷ್ಯವರ್ಗದ ಮಠಗಳಲ್ಲಿ ತಮ್ಮ ಮಠದ ವೀರಮಹೇಶ್ವರರು ಜಂಗಮರಾದವರಲ್ಲಿ ಯೋಗ್ಯರಾದವರನ್ನು ಆರಿಸಿ ಉತ್ತರಾಧಿಕಾರಿಯನ್ನಾಗಿ ನೇಮಿಸಿ ಪಟ್ಟಾಭಿಷೇಕ ಮಾಡುವರು. ಪುತ್ರವರ್ಗದ ಮಠವು ಗುರುಸ್ಥಳ ಮಠಗಳಲ್ಲಿ ಒಂದಾಗಿದ್ದು ಈ ಮಠಗಳಲ್ಲಿ ಅವರು ಯಾರೇ ಇರಲಿ ಅಂದರೆ ಶಿಷ್ಯರಿರಲಿ,

ಭಕ್ತರಿರಲಿ, ಜನಸಾಮಾನ್ಯರಿರಲಿ ಅವರು ಶಿಷ್ಯರಾಗುವರು. ಪುತ್ರವರ್ಗದ ವಂಶಸ್ಥರನ್ನೇ ಸಾಮಾನ್ಯವಾಗಿ ಮಠದ ಮರಿಯನ್ನಾಗಿ ನೇಮಿಸುವರು.

ಉಜ್ಜಯಿನಿ ಸದ್ಧರ್ಮ ಪೀಠದ ೨೮,೦೦೦ ಶಾಖಾಮಠಗಳು ಷಟ್‌ಸ್ಥಳ ಬ್ರಹ್ಮಿಗಳಾಗಿ ಮುಂದುವರೆಯುವರು. ಈ ಶಾಖಾಮಠಗಳ ದಾಖಲೆಗಳ ಕೊರತೆ ಇರುವುದರಿಂದ ಅವುಗಳ ಸಮಗ್ರ ವಿವರ ತಿಳಿದಿಲ್ಲ. ಇಲ್ಲಿ ಶ್ರೀಪೀಠದ ಕೆಲವು ಶಾಖಾ ಮಠಗಳ ಪಟ್ಟಿಯನ್ನು ನೀಡಲಾಗಿದೆ. ಉಜ್ಜಯಿನಿ ಸದ್ಧರ್ಮ ಪೀಠದ ಕೆಲವು ಶಾಖಾ ಮಠಗಳು ವಿರಕ್ತ ಮಠಗಳಾಗಿವೆ. ಉದಾಹರಣೆಗೆ ಗವಿಮಠ, ಬ್ರಹ್ನಮಠ, ಕಲ್‌ಮಠ ಇತ್ಯಾದಿ. ಈ ಎಲ್ಲ ಶಾಖಾಮಠದ ಸ್ವಾಮಿಗಳು ತಾವಿರುವ ಮಠದಲ್ಲಿ ಸದಾ ವೀರಶೈವ ಧರ್ಮದ ಪ್ರಚಾರ, ಶೋಡಷಕರ್ಮ ಮತ್ತು ವಿಧಿ ವಿಧಾನವನ್ನು ತಿಳಿಸುತ್ತ ಧರ್ಮೋಪದೇಶ ಮಾಡುತ್ತ ಬ್ರಹ್ಮಚಾರಿಗಳಾಗಿ ಮುಂದುವರಿಯುವರು. ಶಿಷ್ಯ ಬಳಗಕ್ಕೆ ಈ ಧರ್ಮವನ್ನು ಆಚರಿಸಲು ಪ್ರಭಾವ ಬೀರುವರು. ವೀರಶೈವರ ಧಾರ್ಮಿಕ ಮತ್ತು ಸಾಮಾಜಿಕ ಸಂಸ್ಕಾರಗಳನ್ನು ಶ್ರೀಪೀಠದ ಮಠದಯ್ಯಗಳು ವಿಧಿವತ್ತಾಗಿ ನಿರ್ವಹಿಸುವರು. ಶಾಖಾಮಠದಯ್ಯಗಳು ಶ್ರೀಪೀಠದ ನಿಯಮದಂತೆ ತಮ್ಮ ಸಂಸ್ಕಾರ ಕಾರ್ಯಗಳಾದ ನಾಮಕರಣ, ಲಿಂಗದೀಕ್ಷೆ, ಮದುವೆ, ಸೀಮಂತ ಕಾರ್ಯ, ಶವಸಂಸ್ಕಾರ ಇತ್ಯಾದಿಗಳನ್ನು ನಿರ್ವಹಿಸುವರು. ಈ ಕಾರ್ಯಗಳನ್ನು ಸರಿಯಾಗಿ ನಡೆಸದಿದ್ದರೆ ಅಥವಾ ಪಾಲಿಸದಿದ್ದರೆ ಶ್ರೀ ಪೀಠವು ಅಂಥವರಿಗೆ ದಂಡ/ಶಿಕ್ಷೆ ವಿಧಿಸುವ ಅಧಿಕಾರವಿದೆ. ಅದಕ್ಕಾಗಿ ಪಂಚಪೀಠಗಳಲ್ಲೊಂದಾದ ಉಜ್ಜಯಿನಿ ಸದ್ಧರ್ಮ ಪೀಠದಲ್ಲಿ ಒಂದು ನ್ಯಾಯಾಲಯವನ್ನು ಸ್ಥಾಪಿಸಲಾಗಿದೆ. ಈ ನ್ಯಾಯಾಲಯ ವೀರಶೈವ ಧರ್ಮದ ಬೆಳವಣಿಗೆಗೂ ತನ್ನದೇ ಆದ ಕೊಡುಗೆಯನ್ನು ನೀಡಿದೆ.

ವೀರಶೈವ ಮಠಗಳಲ್ಲಿ ತಮ್ಮ ಚರಿತ್ರೆಯ ಕಾಗದ ಇತ್ಯಾದಿ ಹಸ್ತಪ್ರತಿಗಳಿರುತ್ತವೆ. ಅವುಗಳನ್ನು ತಮ್ಮ ಮನೆಯ/ಮಠದ ದೇವರ ಜಗಲಿಯ ಮೇಲಿಟ್ಟು ಪೂಜಿಸುವರು. ಅಂತವುಗಳ ಅಧ್ಯಯನವನ್ನು ಕೈಗೆತ್ತಿಕೊಳ್ಳಬೇಕಾಗಿದೆ.

ಸಂಘಟನೆಗಳು

ವೀರಶೈವರ ಮಠಮಾನ್ಯಗಳ ಗುರುಗಳು ತಮ್ಮ ಆಚಾರ ವಿಚಾರಗಳನ್ನು ಉಳಿಸಲು, ಬೆಳೆಸಲು ಮತ್ತು ಧರ್ಮೋದ್ಧಾರ ಮಾಡಲು ಅನೇಕ ಸಂಘಟನೆಗಳನ್ನು ಆರಂಭಿಸಿದರು. ಅವುಗಳಲ್ಲಿ ಪಟ್ಟ-ಚರಾಧಿಕಾರಿಗಳ ಸಂಘಟನೆ ಮುಖ್ಯವಾಗಿದೆ. ಇದೂ ಅಲ್ಲದೆ ಶ್ರೀಪೀಠದ ವತಿಯಿಂದ ಸದ್ಧರ್ಮ ಪರಿಷತ್ತು ಆರಂಭವಾಯಿತು. ಜೊತೆಯಲ್ಲಿ ಗುರುವರ್ಗದವರ ಪ್ರಾಂತಿಕ ಪರಿಷತ್ತು ಉದಯವಾಯಿತು. ಹಾಗೆಯೇ ಗುರುವರ್ಗ ಸುಧಾರಣಾ ನಿಮಿತ್ಯ ಅಲ್ಲಲ್ಲಿಯ ಮಠಗಳಲ್ಲಿ ಪಾಠ ಶಾಲೆಗಳು

ಸ್ಥಾಪನೆಯಾದವು. ಇದೂ ಅಲ್ಲದೆ ಅಖಿಲ ಭಾರತೀಯ ಗುರುವರ್ಗೋತ್ತೇಜ ಸಂಘವು ಕುಂದಗೋಳದಲ್ಲಿ ಸ್ಥಾಪನೆಯಾಯಿತು.

ಗುರುವರ್ಗದ ಪಟ್ಟ-ಚರಾಧಿಕಾರಿಗಳ ಸಂಘಟನೆಯು ಪ್ರತಿವರ್ಷ ದೇಶದ ಬೇರೆ ಬೇರೆ ಕಡೆಗಳಲ್ಲಿ ಸಮ್ಮೇಳನಗಳನ್ನು ಏರ್ಪಡಿಸಲಾರಂಭಿಸಿತು. ನವಲಗುಂದದಲ್ಲಿ ಎರಡನೇ ಸಮ್ಮೇಳನ (೨೬.೫.೧೯೨೦), ಮನಗೂಳಿಯಲ್ಲಿ ಮೂರನೇ ಸಮ್ಮೇಳನ, ಸತ್ತಿಗೇರಿಯಲ್ಲಿ ನಾಲ್ಕನೇ ಸಮ್ಮೇಳನ (೩೦.೪.೧೯೨೩), ಉಜ್ಜಯಿನಿಯಲ್ಲಿ ಐದನೇ ಸಮ್ಮೇಳನ (೨೫.೧೨.೧೯೨೬) ಮುಂತಾದ ಕಡೆಗಳಲ್ಲಿ ಜರುಗಿದವು. ಪ್ರತಿಯೊಂದು ಸಮ್ಮೇಳನದ ಅಂತ್ಯದಲ್ಲಿ ವೀರಶೈವರ ಪಂಚಪೀಠಗಳ ಶಾಖಾ ಮಠಗಳ ಉಸ್ತುವಾರಿಯನ್ನು ನೋಡಿಕೊಳ್ಳುವ ಈ ಚರ-ಪಟ್ಟಾಧಿಕಾರಿಗಳ ಕರ್ತವ್ಯ, ಕಾರ್ಯ ಚಟುವಟಿಕೆ ಇತ್ಯಾದಿಗಳ ಬಗ್ಗೆ ಅನೇಕ ಗೊತ್ತುವಳಿಗಳನ್ನು ಮಂಡಿಸಿ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ. ಬಳ್ಳಾರಿಯಲ್ಲಿ ಜರುಗಿದ ಚರಪಟ್ಟಾಧಿಕಾರಿಗಳ ಸಮ್ಮೇಳನದಲ್ಲಿ ಹಿರೆಹಾಳ್ ಬೃಹನ್ಮಠದ ಷ॥ಬ್ರ॥ ಶ್ರೀ ವಿರೂಪಾಕ್ಷಶಿವಾಚಾರ್ಯಸ್ವಾಮಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಕಲಾದಗಿಯಲ್ಲಿ ಗುರುವರ್ಗದ ಪ್ರಾಂತಿಕ ಪರಿಷತ್ತಿನಲ್ಲಿ ತೆಗೆದುಕೊಂಡ ನಿರ್ಣಯದ ಪ್ರಕಾರ ಕುಂದಗೋಳದಲ್ಲಿ ಅಖಿಲ ಭಾರತೀಯ ಗುರುವರ್ಗೋತ್ತೇಜಕ ಸಂಘ ಸ್ಥಾಪನೆಯಾಯಿತು. ಶ್ರೀಪೀಠದ ಐದನೇ ಸದ್ಧರ್ಮ ಪರಿಷತ್ತಿನಲ್ಲಿ ಅನೇಕ ವಿಷಯಗಳು ಪಾಸಾದವು. ಅವುಗಳಲ್ಲಿ ಪಂಡಿತರ ವಿದ್ವತ್ತಿಗನುಗುಣವಾಗಿ ವರ್ಷಾಶನ, ಸರ್ವಧರ್ಮದವರಿಗೂ, ಕೀರ್ತನಕಾರರಿಗೆ, ಸಂಗೀತಗಾರರಿಗೆ, ವಿದ್ವನ್ಮಣಿಗಳಿಗೆ ಪ್ರಶಸ್ತಿ-ಮಾಶಾಸನ, ಗುರುವರ್ಗದವರ ಸುಧಾರಣೆ ಮುಂತಾದವುಗಳನ್ನು ನೀಡಿ ಗೌರವಿಸುವುದು ಮುಖ್ಯವಾಗಿ ಕಾಣುತ್ತವೆ. ಇದಕ್ಕೆ ಸಂಬಂಧಿಸಿದ ಹೆಚ್ಚಿನ ವಿವರಗಳನ್ನು ಈ ಕೃತಿಯ ಶೈಕ್ಷಣಿಕ ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗಿದೆ. ಪಟ್ಟಚರಾಧಿಕಾರಿಗಳ ಸಂಘಟನೆಯ ಬದಲು ಒಟ್ಟಾರೆ ಈಗ ಅಖಿಲ ಭಾರತ ಶಿವಾಚಾರ್ಯರ ಸಂಸ್ಥೆಯೊಂದು ಅಸ್ತಿತ್ವಕ್ಕೆ ಬಂದಿದೆ. ಈಗ ಅಳಿದುಳಿದ ಉಜ್ಜಯಿನಿ ಸದ್ಧರ್ಮ ಪೀಠದ ಕೆಲವು ಷ॥ಬ್ರ॥ ಶಾಖಾಮಠಗಳ ಪಟ್ಟಿ ಹೀಗಿವೆ.

೧. ಶ್ರೀ॥ ಷ॥ ಬ್ರ॥ ಶ್ರೀ ತ್ರಿಲೋಚನಶಿವಾಚಾರ್ಯರು, ಮಠದ ದೊಡ್ಡಿಮಠ, ಕ್ಯಾತಘಟ್ಟ ಅಂಚೆ, ಮುದ್ದೂರು ತಾಲೂಕು, ಮಂಡ್ಯ ಜಿಲ್ಲೆ.

೨. ಶ್ರೀ॥ಷ॥ಬ್ರ॥ ಶ್ರೀಪ್ರಸನ್ನ ಮಲ್ಲಿಕಾರ್ಜುನಶಿವಾಚಾರ್ಯರು, ದೊಡ್ಡಮಠ, ಶ್ರೀ ರೇಣುಕಾಚಾರ್ಯ ಆಶ್ರಮ, ರೇಣುಕನಗರ, ಶಿರಗುಪ್ಪಿ, ಶಿರಗುಪ್ಪಿ ತಾಲೂಕ, ಬಳ್ಳಾರಿ ಜಿಲ್ಲೆ.

೩. ಶ್ರೀ||ಷ||ಬ್ರ|| ಶ್ರೀಶಿವಲಿಂಗಶಿವಾಚಾರ್ಯರು, ಕಬ್ಬಿಣ ಕಂಥಿಮಠ, ರಟ್ಟಿಹಳ್ಳಿ, ತಾ. ಹಿರೇಕೆರೂರ, ಜಿ. ಧಾರವಾಡ.

೪. ಶ್ರೀ||ಷ||ಬ್ರ|| ಶ್ರೀಸಿದ್ಧಲಿಂಗಶಿವಾಚಾರ್ಯಸ್ವಾಮಿಗಳು, ಶ್ರೀಮಠದ ಉತ್ತರಾಧಿಕಾರಿಗಳು ಮಹಾಮುತ್ತಿನ ಭುವನಗಿರಿ ಸಂಸ್ಥಾನಮಠ, ಕವಲೆದುರ್ಗ, ತಾ.ತೀರ್ಥಹಳ್ಳಿ, ಜಿ. ಶಿವಮೊಗ್ಗಾ.

೫. ಶ್ರೀ||ಷ||ಬ್ರ|| ಶ್ರೀಚನ್ನಮಲ್ಲಿಕಾರ್ಜುನ ಶಿವಾಚಾರ್ಯರು, ತಂಗಲಗೋಡು ಬ್ರಹನ್ಮಠ, ಎಸಳೂರು, ತಾ.ಸಕಲೇಶಪುರ, ಜಿ. ಹಾಸನ.

೬. ಶ್ರೀ||ಷ||ಬ್ರ|| ಶ್ರೀಜಯದೇವಶಿವಾಚಾರ್ಯರು, ಹೊಸಮಠ ಕುದೇರ, ತಾ.ಚಾಮರಾಜನಗರ, ಜಿ.ಮೈಸೂರು.

೭. ಶ್ರೀ||ಷ||ಬ್ರ|| ಶ್ರೀಸಿದ್ಧಲಿಂಗಶಿವಾಚಾರ್ಯರು, ಡೋಣೂರಿನ ಚಾನುಕೋಟಿಮಠ, ಕೊಟ್ಟೂರು, ಬಳ್ಳಾರಿ ಜಿಲ್ಲೆ.

೮. ಶ್ರೀ||ಷ||ಬ್ರ|| ಶ್ರೀಸಿದ್ಧಲಿಂಗದೇವರು, ಗುರುಮಠ, ಚಿಪ್ಪಲಕಟ್ಟಿ, ತಾ.ರಾಮದುರ್ಗ, ಜಿ.ಬೆಳಗಾಂವ.

೯. ಶ್ರೀ||ಷ||ಬ್ರ|| ಶ್ರೀಶಿವಲಿಂಗದೇವರು, ಗುರುಕುಲ ಹಿರೇಮಠ, ಭಾಗೋಜಿಕೊಪ್ಪ, ತಾ.ರಾಮದುರ್ಗ, ಜಿ.ಬೆಳಗಾಂವ.

೧೦. ಶ್ರೀ||ಷ||ಬ್ರ|| ಶ್ರೀಶಿವಲಿಂಗಶಿವಾಚಾರ್ಯರು, ಸಂಸ್ಥಾನಮಠ ಹೆಡಗಾಪುರ, ತಾ.ಔರಾದ, ಜಿ.ಬೀದರ.

೧೧. ಶ್ರೀ||ಷ||ಬ್ರ|| ಶ್ರೀಮಹಾಂತ ಮಳೇಂದ್ರಶಿವಾಚಾರ್ಯರು, ಹಿರೇಮಠ, ಅರ್ಜುಣಗಿ ಬಿ.ಕೆ., ತಾ.ಇಂಡಿ, ಜಿ.ಬಿಜಾಪುರ.

೧೨. ಶ್ರೀ||ಷ||ಬ್ರ|| ಶ್ರೀಸಿದ್ಧಮಲ್ಲಿಕಾರ್ಜುನಶಿವಾಚಾರ್ಯರು, ಹಸ್ತಿಕೇರೆಮಠ, ತಲಕಾಡು, ತಾ.ಟಿ.ನರಸೀಪುರ, ಜಿ.ಮೈಸೂರು.

೧೩. ಶ್ರೀ||ಷ||ಬ್ರ|| ಶ್ರೀಮಳೆಮಲ್ಲಿಕಾರ್ಜುನಶಿವಾಚಾರ್ಯರು, ಕರೆಮಣಿಯಮಠ, ಹಳ್ಳದಕೇರಿ, ಲಕ್ಷ್ಮೇಶ್ವರ, ಶಿರಹಟ್ಟಿ, ತಾ. ಜಿ.ಧಾರವಾಡ.

೧೪. ಶ್ರೀ||ಷ||ಬ್ರ|| ಶ್ರೀಶಾಂತವೀರಶಿವಾಚಾರ್ಯರು, ಹಿರೇಮಠ, ತಾ.ಔಸಾ, ಜಿ.ಲಾತೂರ, (ಮಹಾರಾಷ್ಟ್ರ)

೧೫. ಶ್ರೀ||ಷ||ಬ್ರ|| ಶ್ರೀನಂದೀಶ್ವರಶಿವಾಚಾರ್ಯರು, ಗಂಟಾಪುರ ಸಂತ ಶಿಗ್ಗಿ, ಶಿರಹಟ್ಟಿ, ಗದಗ ಜಿಲ್ಲೆ.

೧೬. ಶ್ರೀ||ಷ||ಬ್ರ|| ಶ್ರೀಮರುಳಸಿದ್ಧಶಿವಾಚಾರ್ಯರು, ಶಿರಿಗೇರಿ, ಹಿರೇಹಾಳು, ಬಳ್ಳಾರಿ ಜಿಲ್ಲೆ.

೧೭. ಶ್ರೀ||ಷ||ಬ್ರ|| ಶ್ರೀಸೋಗೂರೇಶ್ವರ ದೇವರು, ಹಿರೇಮಠ, ಶಹಾಪುರ, ಗುಲ್ಬರ್ಗಾ ಜಿಲ್ಲೆ.

೧೮. ಶ್ರೀ||ಷ||ಬ್ರ|| ಶ್ರೀಗುರುಲಿಂಗಶಿವಾಚಾರ್ಯರು, ಅಯ್ಯಪ್ಪಸ್ವಾಮಿ ಹಿರೇಮಠ, ಚಿಟಗುಪ್ಪ, ತಾ.ಹುಮನಾಬಾದ, ಜಿ. ಬೀದರ್.

೧೯. ಶ್ರೀ||ಷ||ಬ್ರ|| ಶ್ರೀಚಂದ್ರಶೇಖರ ಶಿವಾಚಾರ್ಯರು ಪರಶುಮಠ, ಶಹಬಜಾರ, ಗುಲಬರ್ಗಾ.

೨೦. ಶ್ರೀ||ಷ||ಬ್ರ|| ಶ್ರೀಸಿದ್ಧಪಾದ ಶಿವಾಚಾರ್ಯಸ್ವಾಮಿಗಳು, ಕಾಮಿನಾಳ, ಕರ್ನೂಲ್, ಆಂಧ್ರಪ್ರದೇಶ.

೨೧. ಶ್ರೀ||ಷ||ಬ್ರ|| ಶ್ರೀಶಾಂತವೀರ ಶಿವಾಚಾರ್ಯರು, ನಿಡಸೋಸಿ, ತಾ.ಕುಷ್ಟಗಿ, ಜಿ.ಕೊಪ್ಪಳ.

೨೨. ಶ್ರೀ॥ಷ॥ಬ್ರ॥ ಶ್ರೀವಾಮದೇವ ಮಹಂತಶಿವಾಚಾರ್ಯ ಸ್ವಾಮಿಗಳು, ಎಮ್ಮಿಗನೂರು (ಮಹಂತನಗರ-ಶಿಷ್ಯವರ್ಗಮಠ)
೨೩. ಶ್ರೀ॥ಷ॥ಬ್ರ॥ ಶ್ರೀಭೂತಭುಜಂಗಶಿವಾಚಾರ್ಯಸ್ವಾಮಿಗಳು, ಕೊಟ್ಟೂರು.
೨೪. ಶ್ರೀ॥ಷ॥ಬ್ರ॥ ಶ್ರೀಸಿದ್ಧರಾಜಯೋಗಿಂದ್ರ ಶಿವಾಚಾರ್ಯ ಸ್ವಾಮಿಗಳು, ಮುಖೇಡ, (ಮಹಾರಾಷ್ಟ್ರ).
೨೫. ಶ್ರೀ॥ಷ॥ಬ್ರ॥ ಶ್ರೀಚನ್ನಮಲ್ಲಶಿವಾಚಾರ್ಯ ಸ್ವಾಮಿಗಳು, ಪರಶಿವಮಠ, ಗುಲಬರ್ಗಾ.
೨೬. ಶ್ರೀ॥ಷ॥ಬ್ರ॥ ಶ್ರೀನೀಲಕಂಠಶಿವಾಚಾರ್ಯ ಸ್ವಾಮಿಗಳು, ಧಾರೇಶ್ವರ, ಮಹಾರಾಷ್ಟ್ರ.
೨೭. ಶ್ರೀ॥ಷ॥ಬ್ರ॥ ಶ್ರೀಮಲ್ಲಿಕಾರ್ಜುನಶಿವಾಚಾರ್ಯ ಸ್ವಾಮಿಗಳು, ಕೂಡ್ಲಿಗಿ, ಬಳ್ಳಾರಿ ಜಿ.
೨೮. ಶ್ರೀ॥ಷ॥ಬ್ರ॥ ಶ್ರೀಮುಕ್ತಿಮುನಿಶಿವಾಚಾರ್ಯ ಸ್ವಾಮಿಗಳು, ಕಪ್ಪಗಲ್, ಬಳ್ಳಾರಿ ಜಿ.
೨೯. ಶ್ರೀ॥ಷ॥ಬ್ರ॥ ಶ್ರೀಸಿದ್ಧರಾಮಶಿವಾಚಾರ್ಯ ಸ್ವಾಮಿಗಳು, ದೇವದುರ್ಗ, ರಾಯಚೂರುಜಿ.
೩೦. ಶ್ರೀ॥ಷ॥ಬ್ರ॥ ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಎಸ್.ಎನ್.ಹಿಪ್ಪರಗಿ, ಗುಲ್ಬರ್ಗಾ.
೩೧. ಶ್ರೀ॥ಷ॥ಬ್ರ॥ ಶ್ರೀಶಶಿಧರ ಶಿವಾಚಾರ್ಯ ಸ್ವಾಮಿಗಳು, ನರೇಗಲ್.
೩೨. ಶ್ರೀ॥ಷ॥ಬ್ರ॥ ಶ್ರೀ ಡಾ॥ ಜೈ ಸಿದ್ಧೇಶ್ವರಶಿವಾಚಾರ್ಯ ಸ್ವಾಮಿಗಳು, ಗೌಡಗಾಂವ, (ಮಹಾರಾಷ್ಟ್ರ)
೩೩. ಶ್ರೀ॥ಷ॥ಬ್ರ॥ ಶ್ರೀತೈಲಂ ಶಿವಾಚಾರ್ಯಸ್ವಾಮಿಗಳು, ಸತ್ಯಮಂಗಲ, ತಮಿಳುನಾಡು.
೩೪. ಶ್ರೀ॥ಷ॥ಬ್ರ॥ ಶ್ರೀಅಭಿನವ ಕಾಡಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು, ಗುಳೇದಗುಡ್ಡ, ಬಾಗಲಕೋಟೆ ಜಿ.
೩೫. ಶ್ರೀ॥ಷ॥ಬ್ರ॥ ಶ್ರೀಶಿವಾನಂದ ಶಿವಾಚಾರ್ಯ ಸ್ವಾಮಿಗಳು, ರೇವೂರ.
೩೬. ಶ್ರೀ॥ಷ॥ಬ್ರ॥ ಶ್ರೀಶಿವಕುಮಾರ ಶಿವಾಚಾರ್ಯ ಸ್ವಾಮಿಗಳು, ಸೋಂತ.
೩೭. ಶ್ರೀ॥ಷ॥ಬ್ರ॥ ಶ್ರೀಗಂಗಾಧರ ಶಿವಾಚಾರ್ಯ ಸ್ವಾಮಿಗಳು - ಮೊರಬ, ಗುಡೂರು.
೩೮. ಶ್ರೀ॥ಷ॥ಬ್ರ॥ ಶ್ರೀವೀರಭದ್ರ ಶಿವಾಚಾರ್ಯ ಸ್ವಾಮಿಗಳು - ಕಡಗಂಚಿ, ಗುಲ್ಬರ್ಗಾ ಜಿ.
೩೯. ಶ್ರೀ॥ಷ॥ಬ್ರ॥ ಶ್ರೀಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು - ಶಾನಾವಾಸಪುರ, ಬಳ್ಳಾರಿ ಜಿ.
೪೦. ಶ್ರೀ॥ಷ॥ಬ್ರ॥ ಶ್ರೀಸಿದ್ಧರಾಮಶಿವಾಚಾರ್ಯ ಸ್ವಾಮಿಗಳು, ರೌಡಗುಂದಿ, ಗುರುಸ್ಥಲ್-ಪುತ್ರವರ್ಗ, ರಾಯಚೂರು ಜಿಲ್ಲೆ, ಸಿಂಧನೂರು.
೪೧. ಶ್ರೀ॥ಷ॥ಬ್ರ॥ ಶ್ರೀವಿಶ್ವಾರಾಧ್ಯಶಿವಾಚಾರ್ಯ ಸ್ವಾಮಿಗಳು - ಮಾಗಣಗೇರಿ, ವಿಜಾಪುರ ಜಿ.
೪೨. ಶ್ರೀ॥ಷ॥ಬ್ರ॥ ಶ್ರೀಮಳೇಂದ್ರಶಿವಾಚಾರ್ಯ ಸ್ವಾಮಿಗಳು, ಅಪಝಲಪುರ, ಗುಲ್ಬರ್ಗಾ ಜಿ.
೪೩. ಶ್ರೀ॥ಷ॥ಬ್ರ॥ ಶ್ರೀಚನ್ನಮಲ್ಲೇಶ್ವರಶಿವಾಚಾರ್ಯ ಸ್ವಾಮಿಗಳು, ಬಡಿದಾಳ್.
೪೪. ಶ್ರೀ॥ಷ॥ಬ್ರ॥ ಶ್ರೀಶಿವಾನಂದಶಿವಾಚಾರ್ಯ ಸ್ವಾಮಿಗಳು, ಝಳಕೋಟ, ಮಹಾರಾಷ್ಟ್ರ.
೪೫. ಶ್ರೀ॥ಷ॥ಬ್ರ॥ ಶ್ರೀಪಂಚಾಕ್ಷರಿಶಿವಾಚಾರ್ಯ ಸ್ವಾಮಿಗಳು, ಬಾರ್ಸಿ (ಮಹಾರಾಷ್ಟ್ರ)
೪೬. ಶ್ರೀ॥ಷ॥ಬ್ರ॥ ಶ್ರೀಪ್ರಭು ಸಾರಂಗದೇವ ಶಿವಾಚಾರ್ಯ ಸ್ವಾಮಿಗಳು, ಸಿಂಧಗಿ, ಬಿಜಾಪುರ.
೪೭. ಶ್ರೀ॥ಷ॥ಬ್ರ॥ ಶ್ರೀಶಿವಾನಂದಶಿವಾಚಾರ್ಯ ಸ್ವಾಮಿಗಳು, ವಾಳವೇಶ್ವರ.
೪೮. ಶ್ರೀ॥ಷ॥ಬ್ರ॥ ಶ್ರೀ ದಾರುಕಾಚಾರ್ಯಶಿವಾಚಾರ್ಯ ಸ್ವಾಮಿಗಳು, ಬ್ಯಾಹಟ್ಟಿ.
೪೯. ಶ್ರೀ॥ಷ॥ಬ್ರ॥ ಶ್ರೀ ಉಜ್ಜೊಡೆಯರ ಮಠ, ಹೊಳಗುಂದಿ.
೫೦. ಶ್ರೀ॥ಷ॥ಬ್ರ॥ ಶ್ರೀ ಶಿವಕುಮಾರಶಿವಾಚಾರ್ಯ ಸ್ವಾಮಿಗಳು, ಹಿರೇಮಠ, ಕಾಳಗಿ.

೫೧. ಶ್ರೀ||ಷ||ಬ್ರ|| ಶ್ರೀ ಸಿದ್ಧರಾಮೇಶ್ವರಶಿವಾಚಾರ್ಯ ಸ್ವಾಮಿಗಳು, ಸುಳ್ಳ, ಮೈಂದರಗಿ ಹಿರೇಮಠ ಕುಂದರವಾಡ ಸಂಸ್ಥಾನಕ್ಕೆ ಸೇರಿದೆ.

೫೨. ಶ್ರೀ||ಷ||ಬ್ರ|| ಶ್ರೀ ಹಿರೇಮಠ ಪುತ್ರವರ್ಗ ಮಠ - ಬೀಳಗಿ.

೫೩. ಶ್ರೀ||ಷ||ಬ್ರ|| ಶ್ರೀ ಗಿರಿಸಿದ್ದೇಶ್ವರ ಶಿವಾಚಾರ್ಯ, ಹೊಟ್ಯಾಪುರ, ಹೊನ್ನಾಳಿ ತಾ. ಶಿವಮೊಗ್ಗ ಜಿ.

೫೪. ಶ್ರೀ||ಷ||ಬ್ರ|| ಶ್ರೀ ರೇಣುಕಶಿವಾಚಾರ್ಯಸ್ವಾಮಿಗಳು, ಮಂದ್ರೂಪ, ಮಹಾರಾಷ್ಟ್ರ.

೫೫. ಶ್ರೀ||ಷ||ಬ್ರ|| ಶ್ರೀ ರೇಣುಕ ಶಿವಾಚಾರ್ಯಸ್ವಾಮಿಗಳು, ನಾಗಣಸೂರ, ಅಕ್ಕಲಕೋಟ ತಾ. ಮಹಾರಾಷ್ಟ್ರ.

೫೬. ಶ್ರೀ||ಷ||ಬ್ರ|| ಅಳವಂಡಿ ಸಂಸ್ಥಾನಮಠ, ಕೊಪ್ಪಳ ಜಿಲ್ಲೆ.

೫೭. ಶ್ರೀ||ಷ||ಬ್ರ|| ಶ್ರೀಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು, ಕಣ್ಣೂರು, ವಿಜಾಪುರಜಿ.

೫೮. ಶ್ರೀ||ಷ||ಬ್ರ|| ಶ್ರೀ ಮರುಳಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ಕಣ್ಣೂರು, ಸಿಂಧಗಿ ತಾ. ವಿಜಾಪುರ ಜಿ.

೫೯. ಶ್ರೀ||ಷ||ಬ್ರ|| ಶ್ರೀಸಿದ್ಧಲಿಂಗಶಿವಾಚಾರ್ಯ ಸ್ವಾಮಿಗಳು, ಸಾಕರಖೇಡ್, ಮಧ್ಯಪ್ರದೇಶ. (ಸಾಕರಖೇಡದಲ್ಲಿ ಪಲಾಶದಂಡವಿದೆ. ಶ್ರೀ ಮರುಳಸಿದ್ಧ ಜಗದ್ಗುರುಗಳು ಇಲ್ಲಿಗೆ ದಯಮಾಡಿಸಿದಾಗ ಅವರು ಈ ದಂಡವನ್ನು ಎಸೆದಿದ್ದರಂತೆ)

೬೦. ಶ್ರೀ||ಷ||ಬ್ರ|| ಶ್ರೀ ಶಿವಯೋಗಿ ಶಿವಾಚಾರ್ಯರು, ಮೈಶಾಳ್‌ಕರ್, (ಸಾಂಗ್ಲಿ, ಮಹಾರಾಷ್ಟ್ರ)

೬೧. ಶ್ರೀ||ಷ||ಬ್ರ|| ಶ್ರೀ ಶಿವಾಚಾರ್ಯರು, ಬೆಳ್ಳಂಕಿ, ಮಹಾರಾಷ್ಟ್ರ.

೬೨. ಶ್ರೀ||ಷ||ಬ್ರ|| ಶ್ರೀ ಶಿವಾಚಾರ್ಯರು, ಸೋನ್‌ಪೇಟೆ, ಮಹಾರಾಷ್ಟ್ರ.

೬೩. ಶ್ರೀ||ಷ||ಬ್ರ|| ಶ್ರೀ ವಿರೂಪಾಕ್ಷ ಶಿವಾಚಾರ್ಯರು, ಬಾಳಾಪುರಕರ್, ಬೀಡ್ ಜಿ, ಮಹಾರಾಷ್ಟ್ರ.

೬೪. ಶ್ರೀ||ಷ||ಬ್ರ|| ಶ್ರೀ ಶಿವಾಚಾರ್ಯರು, ಲಾಠಿವಸಮತ್, ಮಹಾರಾಷ್ಟ್ರ.

೬೫. ಶ್ರೀ||ಷ||ಬ್ರ|| ಶ್ರೀ ಶಿವಾಚಾರ್ಯರು, ಸಿದ್ಧನಕೇರಿ, ಮಹಾರಾಷ್ಟ್ರ.

೬೬. ಶ್ರೀ||ಷ||ಬ್ರ|| ಶ್ರೀ ಶಿವಾಚಾರ್ಯ ಸ್ವಾಮಿಗಳು, ಬಸವನ ಬಾಗೇವಾಡಿ, ವಿಜಾಪುರ.

೬೭. ಶ್ರೀ||ಷ||ಬ್ರ|| ಶ್ರೀ ಶಿವಾಚಾರ್ಯ ಸ್ವಾಮಿಗಳು, ಅಲಮೇಲ, ವಿಜಾಪುರ.

೬೮. ಶ್ರೀ||ಷ||ಬ್ರ|| ಶ್ರೀ ಶಿವಾಚಾರ್ಯ ಸ್ವಾಮಿಗಳು, ಮುಗಳ್‌ನಾವಿ, ಗುಲಬರ್ಗಾ ಜಿ.

೬೯. ಶ್ರೀ||ಷ||ಬ್ರ|| ಶ್ರೀ ಶಿವಾಚಾರ್ಯ ಸ್ವಾಮಿಗಳು, ಪಾಳ, ಗುಲಬರ್ಗಾ ಜಿ.

೭೦. ಶ್ರೀ||ಷ||ಬ್ರ|| ಶ್ರೀ ಶಿವಾಚಾರ್ಯ ಸ್ವಾಮಿಗಳು, ಸರಡಗಿ, ಗುಲಬರ್ಗಾ ಜಿ.

೭೧. ಶ್ರೀ||ಷ||ಬ್ರ|| ಶ್ರೀ ಶಿವಾಚಾರ್ಯ ಸ್ವಾಮಿಗಳು, ತೊಗರ್ಸಿ, ಶಿವಮೊಗ್ಗ ಜಿ.

೭೨. ಶ್ರೀ||ಷ||ಬ್ರ|| ಶ್ರೀ ಶಿವಾಚಾರ್ಯ ಸ್ವಾಮಿಗಳು, ಮಂಗಳವೇಡೆ, ಮಹಾರಾಷ್ಟ್ರ.

ಅಡಿಟಿಪ್ಪಣಿ :

೧. ಈ ಅಧ್ಯಾಯದ ಅನೇಕ ವಿಷಯಗಳನ್ನು ಶ್ರೀಪೀಠದಿಂದ ಪಡೆಯಲಾಗಿದೆ.

ಶ್ರೀ ಜಾತವೇದ ಶಿವಾಚಾರ್ಯರು

ಜಾತವೇದ ಶಿವಾಚಾರ್ಯರು

ಬಸವಣ್ಣನವರು ತಮ್ಮ ವಚನದಲ್ಲಿ ಶ್ರೀಗುರುವನ್ನು ಲಿಂಗವನ್ನು ತಮ್ಮ ಅನುಭವದಿಂದ ಸ್ಮರಿಸಿದ್ದಾರೆ. ಲಿಂಗ ಲಕ್ಷಣವನ್ನು ವಿವರಿಸಿ ಲಿಂಗಕರುಣಿಸಿದ ಗುರುವನ್ನು ಮನಸಾರೆ ಹೀಗೆ ಹೊಗಳಿದ್ದಾರೆ.

''ವೇದವೇದಾಂತಗಳಿಗೆ ಅಸಾಧ್ಯವಾದ ಅನುಪಮ ಲಿಂಗವ
ತಂದು ಕೊಟ್ಟನಯ್ಯ ಸದ್ಗುರು ಎನ್ನ ಕರಸ್ಥಲಕ್ಕೆ
ನಾದ ಬಿಂದು ಕಲೆಗಳಿಗಭೇದ್ಯವಾದ ಅಚಲಿತ ಲಿಂಗವ
ತಂದು ಕೊಟ್ಟನಯ್ಯಾ ಸದ್ಗುರು ಎನ್ನಕರಸ್ಥಲಕ್ಕೆ
ಇನ್ನುನಾನುಬದುಕಿದೆನು ನಾ ಬಯಸುವ ಬಯಕೆ
ಕೈಸೇರಿತಿಂದು ಕೂಡಲಸಂಗಮದೇವಾ''

ವೃಷಭೇಶ್ವರನ ವರಪ್ರಸಾದದಿಂದ ಹುಟ್ಟಿದ ಮಗುವಿಗೆ ಬಸವನೆಂಬ ಹೆಸರನ್ನೇ ಇಡಲು ತಂದೆ-ತಾಯಿಗಳಿಗೆ ಹೇಳಿದ ಶ್ರೀಜಾತವೇದಮುನಿ ಶಿವಾಚಾರ್ಯ ಗುರುಗಳು ಲಿಂಗಧಾರಣವನ್ನು ಮಾಡಿದರು. ಆ ಲಿಂಗವನ್ನು ಅವರು ತನ್ನ ಪೀಠದಲ್ಲಿಟ್ಟು ಅರ್ಘ್ಯ, ಅಚಮನಾದಿಗಳಿಂದ ನಿತ್ಯ ಪೂಜಿಸಬೇಕು. ಆ ಲಿಂಗ ಪ್ರಸಾದವನ್ನೇ ಶಿಶುವಿಗೆ ಅರ್ಪಿಸಬೇಕೆಂದು ಅಪ್ಪಣೆ ಕೊಟ್ಟರು. ನಂತರ ಯೋಗ ನಿದ್ರೆಯಲ್ಲಿದ್ದ ಮಗು ಬಸವಣ್ಣನವರಿಗೆ ಜಾತವೇದ ಮುನಿಗಳು ಭಸ್ಮಧಾರಣೆ ಮಾಡಿ, ಲಿಂಗದೀಕ್ಷೆ ನೀಡಿ ಪಂಚಾಕ್ಷರಿ ಮಂತ್ರ ಉಪದೇಶ ಮಾಡಿದರು. ಆ ಸಂದರ್ಭದಲ್ಲಿ ಆತನ ತಂದೆ ಮಾದರಸ, ತಾಯಿ ಮಾದಲಾಂಬಿಕೆ ಮತ್ತು ಅಕ್ಕ ನಾಗಮ್ಮ ಉಪಸ್ಥಿತರಿದ್ದರು. ***(ಚಿತ್ರ.ಸಂ. ೩೯)*** ಮುಂದೆ ಅವರು ಕೂಡಲಸಂಗಮಕ್ಕೆ ತೆರಳಿದರು. ಅದರಂತೆ ತಂದೆ-ತಾಯಿಗಳು ಮಗುವನ್ನು ಸಂರಕ್ಷಿಸಿದರೆಂದು ಸುಸ್ಪಷ್ಟವಾಗಿ ಹೇಳಲಾಗಿದೆ.

ಬಸವಣ್ಣನವರು ಸಾರಂಗಮಠದ ಶ್ರೀಜಾತವೇದ ಮುನಿಗಳಿಂದ ಲಿಂಗದೀಕ್ಷೆಯನ್ನು ಪಡೆದರೆಂದು ಹೀಗೆ ಹೇಳಿದೆ. ಈ ವಿಷಯ ಶಿವಕವಿ ಸಿಂಗಿರಾಜನ ಅಮಲ ಬಸವಚರಿತ ಅಥವಾ ಸಿಂಗಿರಾಜ ಪುರಾಣದಲ್ಲಿ ಹೀಗೆ ಬರುತ್ತದೆ.[೧]

''............................ವೃಷಭ
ನಿಂದೊಗೆದ ಪಿಂಡರ್ವೆಲಾ ಪೆಸರಿಡುವುದೆನೆಹಸಾದ ವಾಂತಂಸುಖಿಮಿಹ
ಭಂದವೇ ನಿರವಿನೆನೆ ಇದೆ ಭಿಸಿತವಿಡುವುದಾ
ವೊಂದು ಲಿಂಗವನೀತಗಿತ್ತಪೆವೆನುತ್ತಿತ್ತು
ವಂದಿ ಪಂದವ ಜಾತವೇದಿ ಪೂರ್ವಾಚಾರ್ಯ ಸಾಂಪ್ರದಾಯಕ ರೊರೆದರು
ಇಷ್ಟಕೃತಾರ್ಥ ಬಂದೊಲಿದಿತ್ತೆವಾಗಿತ್ತು
ನ್ನಿಷ್ಟ ಲಿಂಗಮದಕ್ಕೂ ಈ ಲಿಂಗಮಂ ಸಿಂಹ
ವಿಷ್ಟರದೊಳಿಬಿಟ್ಟರ್ಚಿನರ್ಘ್ಯ ಪಾದ್ಯಾಚಮನ ಜಲಕ್ರಮದಲ್ಲದುದನು.
ಮುಟ್ಟಿಸಿದರೇನು ವನನರ್ಪಿತವನೇ ನೊಂದು
ಕೊಟ್ಟು ಕೆಡಿಸದಿರೆನ್ನುತ್ತಾ ಜ್ಞಾಪಿಸುಪದೇಶ
ಗೊಟ್ಟು ಪೋಗಲ್ಕೆ ಭೋಕ್ತದಲಿ ಶಿಶುರಕ್ಷಣಂ ಗೈವುತ್ತ ದಿನದಿನಗಳ''

ಜಾತವೇದಿ ಪ್ರಭುಗಳುಪದೇಶಿಸಿದ ಪರಿಯೋಳೀತಂಗೇ ಲಿಂಗದರ್ಶನ ಸ್ವರ್ಶನಂ ಪಾದಪೂತೋದಕಂ ಸ್ನಾನಪಾನಪಾ ಲ್ಬೆಣ್ಣೆ ಶರ್ಕರೆಯೌಷಧಾದಿದ್ರವ್ಯ ವ್ರಾತಗಳನಾ ಲಿಂಗಮುಖದೊಳಲ್ಲದೆ ಜಗನ್ಮಾತೆ **ಮಾದಾಂಬಿಕೆ**ಯದೊಂದನಾ ಶಿಸುವಿಗೆಸುನೀತೆ ಮುಟ್ಟಿಸದೆ ಮಾರ್ಗ್ಗಾಚಾರ ಮಾತೆಯಾದಂತೆ ರಕ್ಷಿಸುತಿರಲ್ಕೆ'' ಈ ವಿಷಯ ಸಿಂಗಿರಾಜ ಪುರಾಣ ಅಥವಾ **ಅಮಲ ಬಸವಚರಿತ**ದಲ್ಲಿ ನಿರೂಪಿತವಾಗಿದೆ.[೨]

ಸಾರಂಗ ಮಠದ ಜಾತವೇದ ಮುನಿಗಳಿಂದ ಬಸವಣ್ಣನವರಿಗೆ ಲಿಂಗದೀಕ್ಷೆ ನೀಡಿದ ವಿವರವು ರಾಘವಾಂಕನ ಶ್ರೀ ಸಿದ್ಧರಾಮೇಶ್ವರ ಪುರಾಣದಲ್ಲಿ ಹೀಗೆ ವರ್ಣಿಸಲಾಗಿದೆ.[೩]

ಪುತ್ರವೆರಗಷ್ಟ ವರ್ಷಗಳುಂ ತುಂಬುತಿರೆ
ಶಾಸ್ತ್ರನಿಧಿಯಂ ಮೌಜಿಯಂ ಮಾಡಲನುವಾಗಿ
ಉತ್ತಮ ಸ್ಮಾರ್ತ ಧರ್ಮದ ಭಟ್ಟರಿಗೆ ಮಾದರಸ ಮುದದಿ ಬಿನ್ನವಿಸಿರೆ
ಇತಿಹ ಬಹಿಷ್ಕಾರ ಬಗೆಯಿಂದ ಭಟ್ಟರು
ಪೊತ್ತು ಭಾರವೆ ಮೌಂಜಿಯಂ ಮಾಡಲವಕಾಶ
ಬಿತ್ತರಿಸದಿರಲಾಗ ಮಾದರಸ ಸಂಗಮೇಶ್ವರ ಪುರದಿನಲಿಯುತಿರುವ ॥
ಸಾರಂಗ ಮಠದೊಳಗೆ ಮೆರವ ಸ್ಥಿರಪಟ್ಟದಧಿ-
ಕಾರಿ ಗುರು ಜಾತವೇದರ್ಗೆ ಬಿನ್ನವಿಸುತಿರ-
ಲಾರ ಪರವೆಯ ಮಾಡದಲೆ ಮಾರರಸನ ಬಿನ್ನಪವನು ಮನ್ನಿಸುತಲೆ
ವೀರಶಿವಧರ್ಮ ಶಾಸ್ತ್ರೋಕ್ತ ಸುವಿದಾನದಿಂ
ಸಾರತರ ಸಕುಟುಂಬ ಲಿಂಗದೀಕ್ಷೆಯನಿತ್ತು
ದಾರೆದಿಂ ಗಾಯತ್ರಿಮನುವ ಪಂಚಾಕ್ಷರಿಯ ಮಂತರವಂ ಬೋಧಿಸಿದನು।

ಸಿಂಗಿರಾಜ ಪುರಾಣದಲ್ಲಿ ಬಸವಣ್ಣನವರಿಗೆ ಜಾತವೇದ ಮುನಿಗಳು ದೀಕ್ಷಾ ಗುರುಗಳಾಗಿದ್ದರೆಂಬುದನ್ನು ಹೀಗೆ ಹೇಳಲಾಗಿದೆ."

ಆಡುವಡೆ ಪಾಡುವೆಡೆ ನೋಡುವಡೆ ಕೂರ್ತು ಮಾ-
ತಾಡುವಡೆ ಶಿವನ ಶಿವನವರ ಲೀಲೆಯದಲ್ಲ
ದೋಡುವಾತೊಂದಿಲ್ಲದಿರಲವರು ಮುದ್ದಿನಿಂ ಮುದ್ದಾಡುತಾಡುತನಗೆ
ಮೂಡಿ ಹುಟ್ಟುತ್ತ ಶೀಲವನೆಂತು ತಂದೆ ನೀಂ
ಜೋಡಿಸಿದೆ ಜಾತವೇದಿಗಳನರಿದು ಉಪದೇಶ ಮಾಡಿ
ಲಿಂಗವ ತೋರಿದೊಡೆಯದೇ ಮಂಗಳಂ ಎನಲದಿದನಾಡಿ ಕುಲವ"

ಬಾಲಕ ಬಸವಣ್ಣನು ಕೂಡಲ ಸಂಗಮೇಶ್ವರ ಸಾನಿಧ್ಯದಲ್ಲಿ ಜಾತವೇದಮುನಿ (ಈಶಾನ್ಯ ಗುರು) ಗಳಲ್ಲಿ ವಿದ್ಯೆಗಾಗಿ ಬಂದು ದರ್ಶನ ಪಡೆದನು. *(ಚಿತ್ರ ಸಂ.೪೦)* ಕೂಡಲ ಸಂಗಮದಲ್ಲಿರುವ ಅವರ ವಿದ್ಯಾಪೀಠದಲ್ಲಿ ಆತನು ವಿದ್ಯೆ ಪಡೆದನು. ಕೂಡಲಸಂಗಮದಲ್ಲಿರುವ ವಿದ್ಯಾಪೀಠದಲ್ಲಿ ಜಾತವೇದ ಮುನಿಗಳು ಬಾಲಕ ಬಸವಣ್ಣನಿಗೆ ವಿದ್ಯೆದಾನಗೈಯ್ದರು. *(ಚಿತ್ರ ಸಂ.೪೧)* ಆತನ ಜೊತೆಯಲ್ಲಿ ಅಕ್ಕನಾಗಮ್ಮ ಮತ್ತು ಆಕೆಯ ಪತಿ ಶಿವದೇವ ಇದ್ದರು. ಜಾತವೇದ ಮುನಿಗಳು ಮಂಗಳವೇಡೆಗೆ ಹೊರಟ ಬಸವಣ್ಣನನ್ನು ಆಶೀರ್ವದಿಸಿ ಬೀಳ್ಕೊಟ್ಟರು. ಜೊತೆಯಲ್ಲಿ ಅಕ್ಕನಾಗಮ್ಮ, ಚನ್ನಬಸವಣ್ಣ, ಶಿವದೇವ, ಮಂತ್ರಿ ಬಲದೇವ ಮತ್ತು ಸಂಗಯ್ಯ (ಆತನ ಮಿತ್ರ) ಹೊರಟರು. *(ಚಿತ್ರ ಸಂ.೪೨)*

ಸಾಂಸ್ಕೃತಿಕ ಪರಂಪರೆ

ಜಾತವೇದ ಮುನಿಗಳಿಗೆ ಈಶಾನ್ಯ ಗುರು ಹಾಗೂ ಶ್ರೀಸಂಗಮೇಶ್ವರ ಗುರುಗಳೆಂದೂ ಹೆಸರು. ಅವರು ಬಸವಣ್ಣನವರ ಪರಮಗುರು. ಜಾತವೇದಮುನಿಗಳು ಸಾರಂಗಮಠದ ಪಟ್ಟದ ದೇವರು. ಸಾರಂಗ ಮಠವು ಉಜ್ಜಯಿನಿ ಸದ್ಧರ್ಮ ಪೀಠದ ಒಂದು ಶಾಖಾಮಠ. ಅದು ಕೂಡಲ ಸಂಗಮೇಶ್ವರ ದೇವಾಲಯದ ಬಲ ಬದಿಗಿದೆ. ಅಲ್ಲಿ ಜಾತವೇದ ಮುನಿಗಳ ಪ್ರಾಚೀನ ಗದ್ದುಗೆ ಇರುವುದು. ಈ ಮಠಕ್ಕೆ ಇಂದಿಗೂ ದತ್ತಿ ಭೂಮಿ ಇರುವುದು. ಈ ಮುನಿಗಳ ಗದ್ದುಗೆಗೆ ಪೂಜಾ ವ್ಯವಸ್ಥೆಯಿದೆ. ಈ ಗದ್ದುಗೆಗೆ ಕೂಡಲ ಸಂಗಮದ ಸಾರಂಗಮಠದವರ ಮನೆಯಿಂದ ನೈವೇದ್ಯ ಬರುತ್ತದೆ. ಈ ನೈವೇದ್ಯವನ್ನು ಮಾಡಿದ ನಂತರ ಮುಂದಿನ ಮಂಗಳಕಾರ್ಯಗಳು ಇಂದಿಗೂ ನಡೆಯುತ್ತವೆ. ಈ ಗದ್ದುಗೆಯ ಜೀರ್ಣೋದ್ಧಾರ ಕಾರ್ಯಕ್ಕೆ ಸಮಿತಿಯೊಂದು ಈ ಹಿಂದೆ ರಚನೆಯಾಗಿತ್ತು.

ಕಾಶಿಯಿಂದ ಬೀಳಗಿ, ಬಾಗಲಕೋಟೆ, ಶಿರೂರು, ಐಹೊಳೆ, ಪಟ್ಟದಕಲ್ಲು ಮುಂತಾದ ಸ್ಥಳಗಳಿಗೆ ಆಗಮಿಸಿ ವೀರಶೈವ ಧರ್ಮ ಪ್ರಚಾರ ಮಾಡಿದನು.

ಹೀಗೆ ಸಾರಂಗದೇವನು ಕಾಶಿಯಲ್ಲಿ ಮಳೆಯ ಮಲ್ಲೇಶ್ವರನೆಂದೂ, ಶ್ರೀಶೈಲದಲ್ಲಿ ಸಾರಂಗದೇವನೆಂದೂ, ಮೈಸೂರು ಸೀಮೆಯಲ್ಲಿ ಮರುಳ ಸಿದ್ಧೇಶ್ವರನೆಂದೂ ಪ್ರಸಿದ್ಧಿ ಪಡೆದನೆಂದು ಈತನ ಪುರಾಣದಲ್ಲಿ ಹೇಳಿರುವುದಾಗಿ ಲಿಂ॥ ರಾ. ಬ. ಫ. ಗು. ಹಳಕಟ್ಟಿಯವರು ತಮ್ಮ ಲೇಖನ 'ಶ್ರೀಸಾರಂಗಮಠದ ಹಿರಿಮೆ'ಯಲ್ಲಿ ವ್ಯಕ್ತಪಡಿಸಿರುವರು. ಈ ವಿಷಯ ಸಾರಂಗದೇವ ಕೃತಿಯಲ್ಲಿ ಉಲ್ಲೇಖವಾಗಿದೆ.[೫]

ಅಡಿಟಿಪ್ಪಣಿ

೧. ಪಂ॥ ಕಾಶೀನಾಥಸ್ವಾಮಿ ಚನ್ನಯ್ಯಸ್ವಾಮಿ ಸಾರಂಗಮಠ, ೧೯೮೯, ಸಾರಂಗಮಠಾಧ್ಯಕ್ಷ **ಶ್ರೀ ಜಾತವೇದಮುನಿಶಿವಾಚಾರ್ಯ**, ಪು.೨, ಧಾರವಾಡ ಮತ್ತು ಪಂ॥ಕಾಶೀನಾಥಸ್ವಾಮಿ ಚ. ಸಾರಂಗಮಠ, ೨೦೦೦, ಪು. ೫೮-೫೯.

೨. ಅದೇ ಪು. ೬೬-೮೦ ಮತ್ತು ಪು. ೫.

೩. ಅದೇ ಪು. ೬.

೪. ಅದೇ ಪು. ೭.

೫. ಈ ಅಧ್ಯಯನದ ಅನೇಕ ವಿಷಯಗಳನ್ನು ಲಿಂ॥ ಸಾರಂಗಮಠ ಅವರು ತಿಳಿಸಿದ್ದರು.



೩೮. ಮಂಗಾಪುರದಲ್ಲಿ
ಶ್ರೀ ಗುರುಸಿದ್ಧ ಸ್ವಾಮಿಗಳ
ಗದ್ದುಗೆ ಹಿಂದಿನ ಕಟ್ಟಡ.





೪೩. ಶ್ರೀ ಮರುಳಸಿದ್ಧೇಶ್ವರ ಸ್ವಾಮಿಯ
ಹೊಸ ರಥದಲ್ಲಿರುವ ಆನೆಗಳು
ಮತ್ತು ಸರಸ್ವತಿ ವಿಗ್ರಹಗಳು.



೪೪. ಶ್ರೀ ಮರುಳಸಿದ್ಧೇಶ್ವರ ಸ್ವಾಮಿಯ
ರಥಕ್ಕೆ ಕಟ್ಟಿದ ಒಂದು ಅಂಕಣ.

ಶ್ರೀಪೀಠದ ಶ್ರೀಮರುಳಸಿದ್ಧಸ್ವಾಮಿಯ ಪೂಜಾ-ಸಾಮಗ್ರಿಗಳು

ಶ್ರೀ ಉಜ್ಜಯಿನಿ ಸದ್ಧರ್ಮ ಪೀಠದ ಶ್ರೀಮರುಳಸಿದ್ಧಸ್ವಾಮಿಯ ಪೂಜಾ ಸಾಮಗ್ರಿಗಳು ವೈವಿಧ್ಯಮಯವಾಗಿವೆ. ನಿತ್ಯ ಶ್ರೀಸ್ವಾಮಿಯನ್ನು ನಾಲ್ಕು ಸಲ ವಿಧ್ಯುಕ್ತವಾಗಿ ಪೂಜಿಸುವರು. ಬೆಳಿಗ್ಗೆ ೮.೦೦, ಮಧ್ಯಾಹ್ನ ೧೨.೦೦, ಸಾಯಂಕಾಲ ೪.೦೦ ಮತ್ತು ರಾತ್ರಿ ೯.೦೦ ಗಂಟೆಗೆ ಪೂಜೆ ನಡೆಯುತ್ತದೆ. ಬೆಳಿಗ್ಗೆ ಮತ್ತು ಸಾಯಂಕಾಲಗಳ ಪೂಜಾ ಸಂದರ್ಭದಲ್ಲಿ ಮಾತ್ರ ಶ್ರೀಸ್ವಾಮಿಯ ಕಿರೀಟ ಕವಚಯುಕ್ತ ಮುಖವಾಡವನ್ನು ಶಿವಲಿಂಗಕ್ಕೆ ಧರಿಸಿ ಅಲಂಕರಿಸುವರು. ಅಲಂಕರಣ ವಸ್ತುಗಳಲ್ಲಿ ಛತ್ರಿ, ಚಾಮರ, ರುದ್ರಾಕ್ಷಿಸರ, ಪ್ರಭಾವಳಿ, ಕರ್ಣಕುಂಡಲಗಳು, ಆವುಗೆಗಳು ಇರುತ್ತವೆ. ಆಗ ಶಿವಲಿಂಗಕ್ಕೆ ಹೊಂದಿಸಿ ಶ್ರೀಸ್ವಾಮಿಯ ತಲೆ ಮೇಲೆ ಹೆಡೆಗಳುಳ್ಳ ತಾಮ್ರದ ನಾಗಸರ್ಪನನ್ನು ಕೂಡಿಸುವರು. ಶ್ರೀಸ್ವಾಮಿಯ ದೇಹಾಂಗಗಳಿಗೆ ಪತ್ರಿ, ಹೂಗಳನ್ನು ಮುಡಿಸಿ ಪೂಜಿಸುವರು. ಉಳಿದೆರಡು ಪೂಜಾ ಸಂದರ್ಭಗಳಲ್ಲಿ ಮುಖವಾಡವಿಲ್ಲದೆ ಪೂಜೆ ನಡೆಯುವುದು. ಆಗ ಶಿವಲಿಂಗಕ್ಕೆ ಕವಚ ಮಾತ್ರ ಧರಿಸಿ ಪೂಜಿಸಲಾಗುವುದು. ಮಧ್ಯಾಹ್ನ ಸಂಧ್ಯಾ ಮಹಾಭೋಗ ಪೂಜೆ ಮತ್ತು ರಾತ್ರಿ ಭಸ್ಮ, ರುದ್ರಾಕ್ಷಿಯುಕ್ತ ಅವಸರದ ಏಕಾಂತ ಲಘುಪೂಜೆ ನಡೆಯುತ್ತದೆ. ಈ ಪೂಜೆ ಮುಗಿದ ನಂತರ ಯಾವ ಭಕ್ತರನ್ನೂ ಒಳಗಡೆ ಬಿಡದೆ ನಿಶ್ಯಬ್ಧವಾಗಿ ಸ್ವಾಮಿಯ ಶಯನ ರೀತಿಯನ್ನು ತೋರಿಸುವರು. ಹೀಗಾಗಿ ರಾತ್ರಿ ಪೂಜೆಯು ಆನಂದಮಯವೂ, ಅವರ್ಣನೀಯವೂ ಆಗಿದೆ.

ಪೂಜೆಗೊಂಡ ಶ್ರೀಸ್ವಾಮಿಯ ಮೂರ್ತಿಯು ಎದುರಿಗೆ ಇಳಿಬಿಟ್ಟ ಎರಡು ನಂದಾದೀಪಗಳ ಮಧ್ಯ ಸುಂದರವಾಗಿ ಕಂಗೊಳಿಸುತ್ತದೆ. ಇತ್ತೀಚಿನ ದಶಕದಲ್ಲಿ ಶ್ರೀಸ್ವಾಮಿಯ ಮುಖವಾಡವನ್ನು ನೂತನವಾಗಿ ನಿರ್ಮಿಸಲಾಗಿದೆ.

ಶ್ರೀಸ್ವಾಮಿಯ ಪೂಜಾ ಸಂದರ್ಭದಲ್ಲಿ ವಾದ್ಯ-ಆರತಿ ಸೇವೆ ನಡೆಯುವುದು. ಆಗ ಘಂಟೆ, ನಗಾರಿ, ಜಾಗಟೆ, ಆರತಿ, ಧೂಪಾರತಿ, ದರ್ಪಣ, ಕಳಸ ಇತ್ಯಾದಿ ಪರಿಕರಗಳನ್ನು ಬಳಸುವರು ಹಾಗೂ ಶ್ರೀಸ್ವಾಮಿಯ ಅನೇಕ ಹೆಸರುಗಳನ್ನು ಹೇಳುತ್ತ

ಉಘೇ, ಉಘೇ, ಪರಾಕ್ ಎಂದು ಘೋಷಿಸುವುದು ವಿಶೇಷವೆನಿಸಿದೆ. ಶ್ರೀಸ್ವಾಮಿಯ ಉತ್ಸವ ಮೂರ್ತಿಯನ್ನು ಪ್ರತಿಯೊಂದು ಉತ್ಸವದಲ್ಲಿ ಪಲ್ಲಕ್ಕಿಯಲ್ಲಿಟ್ಟು ಮೆರವಣಿಗೆ ಮಾಡುವರು. ಉತ್ಸವದ ಮೂರ್ತಿ ಬೆಳ್ಳಿಯದು. ಆ ಮೂರ್ತಿಯು ಶಿವ-ಪಾರ್ವತಿ ಯರದ್ದಾಗಿದೆ. ಅವರನ್ನು ಮರುಳಸಿದ್ಧ-ಗೌರಮ್ಮ ಎಂದು ಕರೆಯುವರು. ಉತ್ಸವ ಸಂದರ್ಭದಲ್ಲಿ ಉತ್ಸವ ಮೂರ್ತಿಗೆ ಅರವತ್ತು ಮೊಳದ ಒಂದೇ ಪಂಜೆಯನ್ನು ಉಡಿಸುವರು. ಈ ಅಲಂಕರಣದಲ್ಲಿ ಸ್ವಾಮಿಗೆ ಪೇಟವನ್ನು ಧರಿಸುವರು. ಪ್ರತಿದಿವಸ ಶ್ರೀ ಸ್ವಾಮಿಗೆ ರುದ್ರಾಭಿಷೇಕ ನಡೆಯುತ್ತದೆ. ಪ್ರತಿ ಸೋಮವಾರ ರಾತ್ರಿ೮ ರಿಂದ ೯ ಗಂಟೆವರೆಗೆ ಉತ್ಸವ ಜರುಗುವುದು. ಉತ್ಸವದಲ್ಲಿ ಪಲ್ಲಕ್ಕಿ, ಶ್ವೇತಛತ್ರ ***(ಚಿತ್ರ, ಸಂ. ೪೬-೪೭)***, ಪಂಚಕಳಸಗಳಲ್ಲದೆ ನವಿಲು, ನಾಗಾಭರಣ, ಆನೆ, ಸಿಂಹ, ನಂದಿ, ಕುಂಟಾನೆ ವಾಹನಗಳನ್ನು ಹಿಡಿದುಕೊಂಡು ಹೋಗುವರು. ಶ್ರೀ ಸ್ವಾಮಿಯ ಹಬ್ಬ-ಉತ್ಸವಗಳಲ್ಲಿ ಬಳಸುವ ಮತ್ತು ಶ್ರೀ ಸ್ವಾಮಿಗೆ ಧರಿಸುವ ವಸ್ತುಗಳು ಹೀಗಿವೆ.[೧]

	ಸಾಮಾನುಗಳು	ಸಂಖ್ಯೆ
೧.	ಬೆಳ್ಳಿಯ ಮುಖ	೧
೨.	ಬೆಳ್ಳಿಯ ಭುಜ	೨
೩.	ಬೆಳ್ಳಿಯ ಪಕ್ಕೆ ಪಟ್ಟಿಗಳು	೨
೪.	ಬೆಳ್ಳಿಯ ಮುಖದ ಮುಂಭಾಗದ ಅಡ್ಡಪಟ್ಟಿ	೧
೫.	ಬೆಳ್ಳಿಯ ನಾಲ್ಕು ಕ್ಯಾದಿಗೆಗಳು	೪
೬.	ಬೆಳ್ಳಿಯ ಛತ್ರಿ	೧
೭.	ತಾಮ್ರದ ನಾಗಾಬರಣ	೧
೮.	ಬೆಳ್ಳಿಯ ಪ್ರಭಾವಳಿ ; ಅಲ್ಲಲ್ಲಿ ತಾಮ್ರದ ಪಟ್ಟಿ ಹಾಕಿಸಿದೆ	೧
೯.	ಬೆಳ್ಳಿಯ ಮೂರು ಜೊತೆ ಆವಿಗೆಗಳಲ್ಲಿ ದೊಡ್ಡ ಆವುಗೆಗಳಿಗೆ ತಾಮ್ರದ ಪಟ್ಟಿ ಹಾಕಿಸಿದೆ. ಕಿರಿಯ ಆವುಗೆಗಳು ಏಕ ತಗಡಿನಲ್ಲಿವೆ	೬
೧೦.	ಮೂರು ರುದ್ರಾಕ್ಷಿ ಸರಗಳ ರುದ್ರಾಕ್ಷಿ ಟೋಪಿ	೫
೧೧.	ಸಣ್ಣ ಪಾಲ್ಕಿಯ ಬೆಳ್ಳಿಯ ಪಂಚ ಕಲಶ	೧
೧೨.	ಹಿತ್ತಾಳೆ ತಟ್ಟೆಗಳು	೨
೧೩.	ತಾಮ್ರದ ಕೊಡ ೧, ಸ್ಟೀಲ್ ಕೊಡಪಾನ ೩	೪
೧೪.	ತಾಮ್ರದ ಹಂಡೆಗಳು	೩
೧೫.	ಹಿತ್ತಾಳೆ ಸಮೆಗಳು	೪
೧೬.	ತಾಮ್ರದ ಚರುಕಲಿ	೧

೧೭.	ಬೆಳಗುವ ಆರತಿಗಳು : ಹಿತ್ತಾಳೆಯ ೫ ಕಡ್ಡಿ ಬತ್ತಿ	೫
೧೮.	ಬೆಳಗುವ ಆರತಿಗಳು : ಬೆಳ್ಳಿಯ ಒಂದು ಕಡ್ಡಿ ಬತ್ತಿ	೧
೧೯.	ಮಂಗಳಾರತಿ ಬೆಳಗುವ ಹಿಡಿಕೆ ತಟ್ಟೆ	೧
೨೦.	ಮಂಗಳಾರತಿ ಬೆಳಗುವ ಹಿತ್ತಾಳೆ ತಟ್ಟೆ	೩
೨೧.	ಬೆಳ್ಳಿಯ ಉತ್ಸವ ಮೂರ್ತಿ	೧
೨೨.	ಉತ್ಸವದ ಮೂರ್ತಿಯ ಹಲಗೆಯ ಮೇಲ್ಭಾಗದ ನಂದಿ	೧
೨೩.	ಎರಕದ ಜಾಗಟೆಗಳು	೧
೨೪.	ಹಿತ್ತಾಳೆ ಗಂಟೆ	೧
೨೫.	ಮಂಗಳಾರತಿ ಗಂಟೆ	೧
೨೬.	ಹಿತ್ತಾಳೆ ನಗಾರಿ (ಮೇಲ್ಭಾಗದಲ್ಲಿ ಚರ್ಮವಿದೆ)	೧
೨೭.	ಬೆಳ್ಳಿಯ ತುದಿ ಹಿಡಿಕೆ ಉಳ್ಳ ಉದೇವು (ಆಯುಧ)	೧
೨೮.	ಮರದ ನಾಲ್ಕುಗಳು	೪
೨೯.	ಕಟ್ಟಿಗೆಯ ಒಂದು ದೊಡ್ಡ ಪಲ್ಲಕ್ಕಿ ಒಂದು ಸಣ್ಣ ಪಲ್ಲಕ್ಕಿ	೨
೩೦.	ಹಿತ್ತಾಳೆಯ ಮಹಾಂತಿನ ಮುಖ (ರುಂಡಭಾಗ)	೨
೩೧.	ಹಿತ್ತಾಳೆಯ ದೀವಟಿಗೆಗಳು	೨
೩೨.	ಎಣ್ಣೆ ಹಾಕುವ ಹಿತ್ತಾಳೆ ಬುರುಡೆಗಳು	೨
೩೩.	ಕಬ್ಬಿಣದ ಹಿಲಾಲುಗಳು ಕಟ್ಟಿಗೆ ಸಹಿತ (ಬೆಳಕಿಗಾಗಿ)	೨
೩೪.	ತೇರಿನ ಏಣಿ	೧
೩೫.	ವಾಹನಗಳು : ೧. ನವಿಲು, ೨. ನಾಗಾಭರಣ, ೩. ಆನೆ, ೪. ಸಿಂಹ, ೫. ನಂದಿ, ೬. ಕುಂಟಾನೆ	೬
೩೬.	ಪಲ್ಲಕ್ಕಿ, ನಂದಿಕೋಲುಗಳು	೨
೩೭.	ಬಿದಿರಿನ ಬೊಂಬುಗಳು	೩
೩೮.	ಬೆಳ್ಳಿಯ ತಂತಿಯ ರುದ್ರಾಕ್ಷಿಸರದಲ್ಲಿ ಒಂಬತ್ತು ಬಿಲ್ವ ಪತ್ರಿಗಳು ಏಳು ರುದ್ರಾಕ್ಷಿ ಸರ	೧
೩೯.	ಬೆಳ್ಳಿ ತಂತಿಯ ೧೮ ರುದ್ರಾಕ್ಷಿ ಬೆಳ್ಳಿ ಪತ್ರದಳ	೧೮
೪೦.	ಬೆಳ್ಳಿಯ ತಂತಿಯ ೨೦ ರುದ್ರಾಕ್ಷಿ ಬಿಲ್ವದಳ	೧
೪೧.	ಬಿಡಿ ರುದ್ರಾಕ್ಷಿಗಳು ೧೩ ದೊಡ್ಡವು, ೫೦ ಸಣ್ಣವು	೬೩
೪೨.	ಶ್ವೇತ ಛತ್ರ ಕಾವು ಸಹಿತ	೨

೪೩. ಬೆಳ್ಳಿ ಸರದಲ್ಲಿ ೫೮ ಬೆಳ್ಳಿಯ ಬಿಲ್ವದಳ ೧

೪೪. ಬೆಳ್ಳಿಯ ತಂತಿಯಿಂದ ಕೂಡಿದ ೬೯ ರುದ್ರಾಕ್ಷಿಯುಳ್ಳ ೫೧ ಬಿಲ್ವದಳ ೧

೪೫. ಸ್ಟೀಲಿನ ತೀರ್ಥಥಾಲಿ ೧

೪೬. ಬೆಳ್ಳಿಯ ಅರ್ಘ್ಯ ಸೌಟು ೧

೪೭. ಹಿತ್ತಾಳೆಯ ಧೂಪಾರತಿ ೧

೪೮. ಕಬ್ಬಿಣದ ಧೂಪಾರತಿ ೧ (ಸ್ವಾಮಿಯ ಹತ್ತಿರವಿರುವುದು) ೧

೪೯. ಎರಕದ ಸಣ್ಣ ಜಾಗಟೆ ೧

೫೦. ಅಂಬು ಎಸೆಯುವ ಬಿಲ್ಲು (ದಸರಾದಲ್ಲಿ) ೧

೫೧. ನಾಗಾಭರಣ, ಚಾಮರ, ದರ್ಪಣ, ೮ ಲೋಟಗಳು ೧೧

೫೨. ಉತ್ಸವದ ಸಾಮಾನುಗಳು (೩ ಛತ್ರಿ, ೪ ಕ್ವಾರಿ ಪಟ,
೯ ಹೊಂಬಾಳೆ ದಳಗಳು, ಚಿನ್ನ-ವಜ್ರದ ತುರಾಯಿ,
೯ ಕಂಠಾಭರಣಗಳು, ಕಸಿನಸರ, ೨ ಬೆಳ್ಳಿಯ ಹಾವಿಗೆ, ೨ ಚಾಮರ)

೫೩. ಚರಿಗೆಗಳು : ೧. ತಾಮ್ರ ೨. ಹಿತ್ತಾಳೆ ೨

೫೪. ಧಾರಾಪಾತ್ರೆಗಳು ೩

೫೫. ಹಿತ್ತಾಳೆಯ ಛತ್ರ, ಕಲಶ ೧

ಒಟ್ಟು ೧೦೮

ಉಜ್ಜಯಿನಿ ಸದ್ಧರ್ಮ ಪೀಠಕ್ಕೆ ಶ್ರೀಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳ ಕಾಲಾವಧಿಯಲ್ಲಿ ಅನೇಕ ಪೂಜಾ ಸಾಮಗ್ರಿಗಳಿದ್ದವು ಮತ್ತು ವಿವಿಧ ಸಿಬ್ಬಂದಿ ವರ್ಗದವರಿದ್ದರು.[೨] ಅದರಲ್ಲಿ ಶ್ರೀಸ್ವಾಮಿಯ ಪೂಜಾ ಸಾಮಗ್ರಿಗಳ ಪಟ್ಟಿ ಹೀಗಿದೆ.

೭೨ ಬಿರುದಾವಳಿಗಳಾದ ಪಾಲಕಿ ೨, ಮೇನ ೧, ಮಕರ ತೋರಣ, ಹಗಲು ದೀವಟಿಗೆ, ಚಾಮರ ಮತ್ತು ಮೂರ್ಚಾಲು ೪, ವಾಲುಗಳು ೨, ಬಿಳೀ ಮತ್ತು ಕೆಂಪು ಛತ್ರಿ ೨, ಭೂಚಕ್ರದ ಕೊಡೆ ೨, ಆಪ್ತಗಿರಿ ೨, ಪಂಚದೀವಟಿಗೆ ೨, ಬೆಳ್ಳಿ ಬೆತ್ತ ೨, ಬೆಳ್ಳಿ ಲೋಟ ೨, ಭಲ್ಲೆ ಮತ್ತು ಗಗ್ಗರಿ ಕಟ್ಟಿಗೆ ೪, ಕಾವಿ ನಿಶಾನಿ ೨, ತ್ರಿಶೂಲ, ನಂದಿಧ್ವಜ, ನಿಶಾನಿ ಸಹಿತ ಆನೆ ೨, ಕುದುರೆ ಮೇಲೆ ಡಂಕ, ಭೇರಿ ಕಹಳೆ, ಕರ್ನೆ, ನಫೂರಿ, ನಗಾರಿ, ಜಾಗಟೆ, ಘಂಟೆ, ಸೂರ್ಯವಾದ್ಯ ಇತ್ಯಾದಿ ನಾನಾ ತರಹದ ವಾದ್ಯಗಳು, ರಥ ೧, ಕುದುರೆ ೪, ಗೋವು ೮, ಎತ್ತು ೧೦, ಬಂದೂಕು ೨, ಹತ್ಯಾರು ೪, ಭೋವಿಯರು ೮, ಬಿಲ್ಲೇ ಜವಾನರು ೧೨, ಫೌಜುದಾರರು ೨, ಚಡಿಯವರು ೮, ಪಂಡಿತರು ೪, ವೇದಘೋಷಕರು ೪, ಅಂಗರಕ್ಷಕರು ೪, ಇತರ ಸಿಬ್ಬಂದಿಜನ ೪೦.

ಅಡಿ ಟಿಪ್ಪಣಿ

೧. ಶ್ರೀ ಸ್ವಾಮಿಯ ಪೂಜಾ ಸಾಮಗ್ರಿಗಳ ಮಾಹಿತಿಯನ್ನು ಸದ್ಧರ್ಮ ಪೀಠದ ಕಚೇರಿಯಿಂದ ಸಂಗ್ರಹಿಸಲಾಗಿದೆ.

೨. ಮೈಸೂರು ಸೀಮೆಯ ಮುಜರಾಯಿ ಕಮೀಶನರ ಕಚೇರಿಯ ಪತ್ರ. ನಂ. ೪, ೧೯೨೫-೨೬, ೧೧ ಜೂನ್ ೧೯೩೫. ಮತ್ತು ಹಿರೇಹಡಗಲಿ ಪುರಾಣಕಮಠದ ವಿರೂಪಾಕ್ಷ ಶಾಸ್ತ್ರಿಗಳ ೧೯೫೩ರ **ಶ್ರೀ ಜಗದ್ಗುರು ಪಂಚಪೀಠಗಳ ಪರಿಚಯ,** ಪು. ೨೪.

ಶ್ರೀಪೀಠದ ಹಬ್ಬ-ಉತ್ಸವಗಳು

ಉಜ್ಜಯಿನಿ ಶ್ರೀಸದ್ಧರ್ಮ ಪೀಠದ ಪ್ರಧಾನ ದೇವತೆಯಾದ ಜಗದ್ಗುರು ಶ್ರೀಮರುಳಸಿದ್ಧ ಸ್ವಾಮಿಯ ಹಬ್ಬ ಉತ್ಸವಗಳನ್ನು ವೈಶಿಷ್ಟ್ಯಪೂರ್ಣವಾಗಿ ಆಚರಿಸಲಾಗುತ್ತಿದೆ. ಅವುಗಳಲ್ಲಿ ಶ್ರೀ ಸ್ವಾಮಿಯ ರಥೋತ್ಸವ, ತೈಲಾಭಿಷೇಕ, ನೂಲುಹುಣ್ಣಿಮೆ, ಶ್ರಾವಣಮಾಸ, ಕಾರ್ತಿಕೋತ್ಸವ, ಭಾರತ ಹುಣ್ಣಿಮೆ, ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳ ಜಯಂತಿ ಪ್ರಮುಖವೆನಿಸಿವೆ.

ಸಕಲ ಮತದವರು ಮೇಲುಕೀಳೆನ್ನದೆ ಶ್ರದ್ಧಾ-ಭಕ್ತಿಯಿಂದ ಶ್ರೀಪೀಠದ ಹಬ್ಬ ಉತ್ಸವಗಳನ್ನು ಆಚರಿಸುವರು. ಕೆಲವು ಮಹತ್ವದ ಉತ್ಸವಗಳಲ್ಲಿ ಹರಿಜನ-ಗಿರಿಜನರು ಪಾಲ್ಗೊಳ್ಳಲು ವಿಶೇಷ ಅವಕಾಶ ನೀಡಿರುವುದು ಔಚಿತ್ಯಪೂರ್ಣವೆನಿಸಿದೆ. ಅನ್ಯಮತೀಯರು ಶ್ರೀಪೀಠದಲ್ಲಿ ಸೇವೆ ಮಾಡಲು ಅವಕಾಶವನ್ನು ನೀಡಲಾಗಿದೆ. ಈ ರೀತಿಯ ವ್ಯವಸ್ಥೆಗಳು ಸಮಾಜದಲ್ಲಿ ಧರ್ಮಸಹಿಷ್ಣತೆಯನ್ನು ಸಂರಕ್ಷಿಸಿಕೊಳ್ಳಲು ಸಹಕಾರಿಯಾಗಿವೆ. ಈ ಹಬ್ಬ ಉತ್ಸವಗಳ ಕಿರು ಪರಿಚಯವನ್ನು ಸಂಕ್ಷಿಪ್ತವಾಗಿ ಕೆಳಗೆ ಪ್ರಸ್ತಾಪಿಸಲಾಗಿದೆ.

ಪಾಲಕಿ ಉತ್ಸವ

ಪ್ರತಿ ಸೋಮವಾರ ಶ್ರೀ ಸ್ವಾಮಿಯ ಪಾಲಕಿ ಉತ್ಸವವನ್ನು ರಾತ್ರಿ ೮ರಿಂದ ೯ರವರೆಗೆ ನೆರವೇರಿಸುವ ಪದ್ಧತಿಯಿದೆ. ಈ ಸಂದರ್ಭದಲ್ಲಿ ಶ್ರೀಮರುಳಸಿದ್ಧ ಸ್ವಾಮಿಯ ಉತ್ಸವಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಕೂಡಿಸಿ ಆರಾಧಿಸುವರು.

ರಥೋತ್ಸವ *(ಚಿತ್ರ ಸಂ. ೪೩ ರಿಂದ ೪೫)*

ಜರ್ಮಲೆಯ ಪಾಳೆಗಾರರ ಇತಿಹಾಸದಲ್ಲಿ ಉಜ್ಜಯಿನಿ ಶ್ರೀಮರುಳಸಿದ್ಧ ಸ್ವಾಮಿಯ ರಥೋತ್ಸವವನ್ನು ಆರಂಭಿಸುವ ವಿಷಯ ಪ್ರಸ್ತಾಪಿಸಲಾಗಿದೆ. ಅದನ್ನು ಜರ್ಮಲೆಯ ಪಾಳೆಗಾರರ ಅಧ್ಯಾಯದಲ್ಲಿ ನೋಡಬಹುದು. ಈ ರಥೋತ್ಸವವು ಹತ್ತು ದಿವಸಗಳ ಅವಧಿಯವರೆಗೆ ನಡೆಯುತ್ತದೆ.

ರಥ : ಈ ರಥ ತಂಗಲು ಊರಲ್ಲಿ ಒಂದು ಪ್ರತ್ಯೇಕ ತಾಣವಿದೆ. ಅದನ್ನು ತೇರುಗಡ್ಡೆ (ತೇರಿನಮನೆ) ಎನ್ನುವರು. ರಥೋತ್ಸವಕ್ಕೆ ಮೊದಲು ಅದನ್ನು ಆ ಸ್ಥಳದಿಂದ

ಹೊರಗಡೆಗೆ ತೆಗೆಯುತ್ತಾರೆ. ಇದನ್ನು ತೇರುಗಾಲಿ ಹೊರಹಾಕುವದು ಎಂದು ಕರೆಯುತ್ತಾರೆ.

ಪ್ರತಿವರ್ಷ ಚೈತ್ರ ಹುಣ್ಣಿಮೆ ಆದ ಐದು ದಿವಸಕ್ಕೆ ತೇರುಗಾಲಿಯನ್ನು ಹೊರಗೆ ಹಾಕುವರು. ಆಗ ತೇರಿನ ಮೇಲೆ ಒಬ್ಬ ಪಟ್ಟದೇವರನ್ನು ಕೂಡಿಸಿರುತ್ತಾರೆ. ನಂತರ ತೇರನ್ನು ಊರಿನ ಪಾದಗಟ್ಟೆಯವರೆಗೆ ಎಳೆದುಕೊಂಡು ಹೋಗುವರು. ಆ ದಿನ ರಾತ್ರಿ ಶ್ರೀಪೀಠದ ಮರುಳಸಿದ್ಧಸ್ವಾಮಿಯ ಉತ್ಸವ ಮೂರ್ತಿಯನ್ನು ಪಾಲಕಿಯಲ್ಲಿ ಮೆರವಣಿಗೆ ಮೂಲಕ ಪಾದಗಟ್ಟೆಯವರೆಗೆ ತೆಗೆದುಕೊಂಡು ಹೋಗುವರು. ಸೇವೆ ಮಾಡುವ ವಿಶ್ವಕರ್ಮರಿಂದ ಹಿಡಿದು ಎಲ್ಲಾ ಆಯಗಾರರನ್ನು ಆ ಸ್ಥಳಕ್ಕೆ ಕರೆದಿರುತ್ತಾರೆ. ಅವರೆಲ್ಲ ಶ್ರೀಸ್ವಾಮಿಯ ಎದುರಿಗೆ ರಥೋತ್ಸವ ಸಾಂಗವಾಗಿ ನೆರವೇರಲು ತಮಗೆ ವಹಿಸಿದ ಕೆಲಸಗಳನ್ನು ಸರಿಯಾಗಿ ಮಾಡುತ್ತೇವೆಂದು ಪ್ರಮಾಣ ವಚನ ಸ್ವೀಕರಿಸುವರು.

ಮುಂದೆ ಐದನೆಯ ದಿನದಿಂದ ವಿಶ್ವಕರ್ಮದವರು ಹಂತಹಂತವಾಗಿ ತೇರಿಗೆ ನಾಲ್ಕು ಎತ್ತರದ ಅಂಕಣಗಳನ್ನು ಕಟ್ಟುವರು. ಅದು ಮುಗಿದ ಬಳಿಕ ಬಸವ ಉತ್ಸವ ದಿವಸ ತೇರಿನ ಮೇಲೆ ಅರ್ಧ ವೃತ್ತಾಕಾರದ ಬಿದಿರಿನ ಝಲ್ಲಿಯನ್ನು ಕೂಡಿಸುವರು. ಅದರ ಮೇಲೆ ಕಳಸಾರೋಹಣ ಮಾಡುವರು. ಕೆಳಗಿನ ಅಂಕಣದ ಸುತ್ತಲೂ ಸುಂದರ ವರ್ಣಮಯ ಚಿತ್ರಪಟಗಳನ್ನೂ ಇಡುವರು. ಉಳಿದವುಗಳ ಸುತ್ತ ಬಣ್ಣಬಣ್ಣದ ಬಟ್ಟೆಗಳನ್ನು ಸುತ್ತುವರು. ಅಲ್ಲಲ್ಲಿ ಧ್ವಜಗಳನ್ನು ಇಡುವರು. ಈ ಪಟಗಳಲ್ಲಿ ದೇವ-ದೇವತೆಗಳು ಮತ್ತು ಋಷಿ-ಆಚಾರ್ಯರ ಚಿತ್ರಗಳಿವೆ. ಅವು ದಾರುಕರಿಂದ ದಧೀಚಿ ಮಹಾಋಷಿಗೆ ಶಿವೋಪದೇಶ, ಯಕ್ಷ-ಮಿಥುನ, ಕಾಂಚೀ ಕ್ಷೇತ್ರದ, ಮಧ್ಯಭಾರತದ ಉಜ್ಜಯಿನಿಯ ವಟಸಿದ್ಧೇಶ್ವರ ಲಿಂಗದಿಂದ ದಾರುಕರ ಉದ್ಭವ, ವಿಘ್ನೇಶ್ವರ, ಲಕ್ಷ್ಮೀ, ಬ್ರಹ್ಮ, ಸರಸ್ವತಿ, ಮಹಾವಿಷ್ಣು, ಷಣ್ಮುಖ, ಪಾರ್ವತಿ ಹೀಗೆ ದೇವ-ದೇವತೆಗಳ ಪ್ರತ್ಯೇಕ ಚಿತ್ರಗಳು. ಶ್ರೀಜಗದ್ಗುರು ರುದ್ರಮುನಿ ಶಿವಾಚಾರ್ಯರು ಭೂಮಿಯಿಂದ ಅವತರಿಸಿದ ದೃಶ್ಯ, ಶ್ರೀನೀಲಕಂಠೇಶ್ವರ ಅವತಾರ ಹಾಗೂ ಎರಡು ಶೈವ ದ್ವಾರಪಾಲಕರ ಇತ್ಯಾದಿ ಚಿತ್ರಪಟಗಳಾಗಿವೆ.

ಭವ್ಯವಾದ ಕಟ್ಟಿಗೆಯ ಈ ರಥ (ತೇರು)ವನ್ನು ಕಾಲಕಾಲಕ್ಕೆ ನವೀಕರಿಸಲಾಗುತ್ತದೆ. ಇತ್ತೀಚೆಗೆ ನೂತನ ತೇರನ್ನು ನಿರ್ಮಿಸಿದ್ದು ಅದಕ್ಕಾಗಿ ಕಟ್ಟಿಗೆಯನ್ನು ಸಾಗರ, ಮಡ್ರಳ್ಳಿ ಮುಂತಾದ ಪ್ರದೇಶದ ಕಾಡುಗಳಿಂದ ತರಿಸಲಾಗಿದೆ. ಈ ನೂತನ ರಥ ಪ್ರತಿಷ್ಠಾಪನ ಮಹೋತ್ಸವವು ದಿನಾಂಕ ೨೦-೪-೧೯೭೮ರಲ್ಲಿ ನೆರವೇರಿತು. ಶ್ರೀ ಪೀಠದ ಲಿಂ॥ಜಗದ್ಗುರು ೧೦೦೮ ಶ್ರೀಸಿದ್ಧೇಶ್ವರರಾಜ ದೇಶಿಕೇಂದ್ರ ಶಿವಾಚಾರ್ಯಮಹಾಸ್ವಾಮಿಗಳ ಕೃಪೆಯಿಂದ ಅದು ನಡೆಯಿತು.

ಆರು ವೃತ್ತಾಕಾರದ ಭವ್ಯ ಚಕ್ರವುಳ್ಳ ಈ ರಥವನ್ನು ಚನ್ನಗಿರಿ ತಾಲೂಕಿನ ಗೊಪ್ಪೇನಹಳ್ಳಿಯ ವಿಶ್ವಬ್ರಾಹ್ಮಣ ಶಿಲ್ಪಿ ಪರಮೇಶ್ವರಾಚಾರ್ಯರು ತಯಾರಿಸಿದ್ದಾರೆ. ಈ ವಿಷಯವನ್ನು ಈ ರಥದ ಪೂರ್ವ-ಪಶ್ಚಿಮ ಮುಖಗಳಲ್ಲಿ ಕೆತ್ತಲಾಗಿದೆ.

ಶ್ರೀಮರುಳಸಿದ್ಧಸ್ವಾಮಿಯ ರಥೋತ್ಸವ ಪ್ರತಿವರ್ಷ ವೈಶಾಖ ಶುದ್ಧ ಅಮವಾಸ್ಯೆಯಿಂದ ಆರಂಭವಾಗುತ್ತದೆ. ಅಂದು ಶ್ರೀಮರುಳಸಿದ್ಧ ಸ್ವಾಮಿ ಮತ್ತು ಗೌರಮ್ಮರಿಗೆ ಲಗ್ನದ ಧ್ಯೋತಕವಾಗಿ ಕಂಕಣ ಧಾರಣ ಮಾಡುವರು. ಅವರ ಲಗ್ನದ ಸಂದರ್ಭದಲ್ಲಿ ಹಾಡುಗಳನ್ನು ಹೇಳುವರು. ನಂತರ ಶ್ರೀನಾಗವಾಹನ ಮಹೋತ್ಸವ ಜರುಗುವುದು. ಮಾರನೆಯ ದಿವಸ ಶ್ರೀ ಮಯೂರವಾಹನೋತ್ಸವ, ಮುಂದಿನ ದಿನ ಶ್ರೀ ಗಜವಾಹನೋತ್ಸವ ನಂತರ ಶ್ರೀ ಸಿಂಹ ವಾಹನೋತ್ಸವ ಮತ್ತು ಶ್ರೀವೃಷಭ ವಾಹನೋತ್ಸವ ನಡೆಯುತ್ತವೆ.

ಪಂಚಮಿಯ ದಿನ ಸಾಯಂಕಾಲ ಸುಮಾರು ೪.೦೦ಗಂಟೆಯ ನಂತರ ಶ್ರೀಸ್ವಾಮಿಯ ರಥೋತ್ಸವವು ಬಹು ವಿಜೃಂಬಣೆಯಿಂದ ನಡೆಯುತ್ತದೆ. ಈ ಸಂದರ್ಭದಲ್ಲಿ ವಾದ್ಯಮೇಳದೊಂದಿಗೆ ಹೋಗಿ 'ಸೊಂಬಾದಿ' ಅಡಿಗೆಯನ್ನು ಶೃಂಗರಿಸಿದ ರಥದ ಗಾಲಿಗಳಿಗೆ ಪೂಜೆ ಪುನಸ್ಕಾರದೊಂದಿಗೆ ಹಾಕುವರು. ಸೊಂಬಾದಿ ಅಡಿಗೆಯಲ್ಲಿ ಅನ್ನದ ಉಂಡೆಗಳಿರುತ್ತವೆ. ಶ್ರೀಮರುಳಸಿದ್ಧಸ್ವಾಮಿಯ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಕೂಡಿಸಿಕೊಂಡು ತೇರಿರುವ ಸ್ಥಳಕ್ಕೆ ವಾದ್ಯ ಮೇಳದೊಂದಿಗೆ ಕರೆದೊಯ್ಯುವರು. ಶ್ರೀಪೀಠದ ಸನ್ನಿಧಿಯವರು ಅಥವಾ ಪಟ್ಟದಯ್ಯನವರು ಶ್ರೀ ಸ್ವಾಮಿಯ ಸಂಗಡ ಹೋಗುವರು. ಈ ರಥದಲ್ಲಿ ಶ್ರೀ ಸ್ವಾಮಿಯನ್ನು ಮತ್ತು ಪಟ್ಟದಯ್ಯನವರನ್ನು ಕೂಡಿಸಿದ ನಂತರ ತೇರು ಮೊದಲು ಉತ್ತರಕ್ಕೆ ಸ್ವಲ್ಪ ದೂರ ಅಂದರೆ ಸಮೀಪದ ಬನ್ನಿಯ ಕಟ್ಟೆಯವರೆಗೆ ಎಳೆದೊಯ್ಯುವರು. ಅಲ್ಲಿಂದ ಮರಳಿ ತೇರಿನ ಗಡ್ಡೆಯ ಸಮೀಪಕ್ಕೆ ತಂದು ನಿಲ್ಲಿಸುವರು. ರಥೋತ್ಸವ ಮುಗಿದ ಬಳಿಕ ಐದನೇ ದಿವಸ ಶ್ರೀಮರುಳಸಿದ್ಧ ಸ್ವಾಮಿಯ ಕಂಕಣ ವಿಸರ್ಜನೆ ಮಾಡುವರು. ಆ ದಿವಸ ತೇರಿನ ಕಳಸವನ್ನು ಇಳಿಸುವರು ಹಾಗೂ ತೇರಿನ ಅಂಕಣಗಳನ್ನು ಬಿಚ್ಚುವರು.

ಅದಾದ ನಂತರ ಐದು ದಿವಸದ ಮೇಲೆ ತೇರನ್ನು ತೇರಿನ ಮನೆಯಲ್ಲಿ ದೂಡಿ ನಿಲ್ಲಿಸುವರು. ಈ ಸಂದರ್ಭದಲ್ಲಿ ಪಟ್ಟದಯ್ಯನನ್ನು ತೇರಿನಲ್ಲಿ ಕೂಡಿಸುವುದಿಲ್ಲ.

ತೈಲಾಭಿಷೇಕ

ಶ್ರೀಮರುಳಸಿದ್ಧಸ್ವಾಮಿಯ ರಥೋತ್ಸವ ನೆರವೇರುವ ಮರುದಿನ ಅಂದರೆ ಷಷ್ಠಿ ದಿವಸ ಶ್ರೀಮರುಳಸಿದ್ಧಸ್ವಾಮಿಯ ದೇವಸ್ಥಾನದ ಶಿಖರಕ್ಕೆ ಬಹು

ವಿಜೃಂಭಣೆಯಿಂದ ತೈಲಾಭಿಷೇಕ ಜರುಗುವುದು. ***(ಚಿತ್ರ ಸಂ. ೪೮ ರಿಂದ ೫೩)*** ಪರಂಪರೆಯಂತೆ ಶ್ರೀಸ್ವಾಮಿಯ ಶಿಖರಕ್ಕೆ ಸಾಯಂಕಾಲದಲ್ಲಿ ಜರ್ಮಲೆಯಿಂದ ಬಂದ ಎಣ್ಣೆಯನ್ನು ಮೊದಲು ಎರೆಯುವರು. ಜರ್ಮಲೆ ಪಾಳೆಗಾರರ ಚರಿತ್ರೆಯನ್ನು ಈ ಕೃತಿಯಲ್ಲಿ ಪ್ರತ್ಯೇಕವಾಗಿ ನೀಡಲಾಗಿದೆ.

ರಥೋತ್ಸವದ ಐದನೇ ದಿವಸಕ್ಕೆ ಶ್ರೀ ಸ್ವಾಮಿಯ ಕಂಕಣವನ್ನು ಬಿಚ್ಚಿ ವಿಸರ್ಜನೆ ಮಾಡುವರು. ಹಾಗೂ ಶ್ರೀಮರುಳಸಿದ್ಧಸ್ವಾಮಿಯ ದೇವಸ್ಥಾನವನ್ನು ಶುದ್ಧಿಗೊಳಿಸುವರು.

ಗಣಪತಿ ಹಬ್ಬ

ಮೊದಲು ಶ್ರೀಪೀಠದ ಶ್ರೀಮರುಳಸಿದ್ಧದೇವಾಲಯದಲ್ಲಿ ಮಾತ್ರ ಗಣಪತಿಯನ್ನು ಗಣಪತಿ ಹಬ್ಬದಲ್ಲಿ ಕೂಡಿಸುತ್ತಿದ್ದರು. ಇದರಿಂದ ಸ್ಥಳೀಯ ಭಕ್ತರು ಶ್ರೀಪೀಠದಲ್ಲೇ ಗಣಪತಿಯ ಪೂಜೆ ಮತ್ತು ದರ್ಶನ ಮಾಡಿಕೊಳ್ಳುತ್ತಿದ್ದರು. ಈ ಗಣಪತಿಯ ವಾಹನ ಇಲಿಯ ಬದಲು ಇಲ್ಲಿ ಸಿಂಹವಿರುವುದು ವಿಶೇಷ.

ಶ್ರಾವಣಮಾಸದ ಉತ್ಸವ

ಪ್ರತಿವರ್ಷದ ಶ್ರಾವಣಮಾಸದಲ್ಲಿ ಶ್ರೀಪೀಠದಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳು ಜರುಗುತ್ತವೆ. ಶ್ರೀಮರುಳಸಿದ್ಧ ಸ್ವಾಮಿಗೆ ವಿಶೇಷ ರುದ್ರಾಭಿಷೇಕ ನಡೆಯುವುದು. ವಿಶೇಷ ನೂಲು ಹುಣ್ಣಿಮೆ ದಿವಸ ಶ್ರೀ ಸ್ವಾಮಿಗೆ ನೂಲು ಧರಿಸುವ ಪದ್ಧತಿಯಿದೆ. ಆ ದಿವಸ ನೂಲನ್ನು ಗಂಧದಲ್ಲಿ ಅದ್ದಿ ಮಾರನೆಯ ದಿವಸ ಭಕ್ತಾದಿಗಳಿಗೆ ರಕ್ಷಾಬಂಧನವಾಗಿ ಕಟ್ಟಲಾಗುವುದು.

ಕರುವಿನ ಕಲ್ಲ ಗುಡ್ಡದ ಸಂಪ್ರದಾಯ

ಉಜ್ಜಯನಿ ಗ್ರಾಮದಿಂದ ಪಶ್ಚಿಮಕ್ಕೆ ಸುಮಾರು ೧ ಕಿ. ಮೀ. ಅಂತರದಲ್ಲಿ ಎತ್ತರದ ಗುಡ್ಡವಿದೆ. ***(ಚಿತ್ರ ನಂ.೫೪)*** ಆದಕ್ಕೆ ಕರುವಿನ ಕಲ್ಲಗುಡ್ಡ ಎಂದು ಹೆಸರು. ಶ್ರೀಮರುಳಸಿದ್ಧರು ಚಿಕ್ಕ ಹುಡುಗನಿದ್ದಾಗ ಆ ಗುಡ್ಡದಲ್ಲಿ ದನಕರುಗಳನ್ನು ಮೇಯಿಸುತ್ತಿದ್ದರು. ವಿನೋದಕ್ಕಾಗಿ ಕರುಗಳ ಕುತ್ತಿಗೆಗೆ ಉರುಲು ಹಾಕಿ ಮೇಲಿಂದ ಕೆಳಕ್ಕೆ ದೂಡುವ ಪವಾಡ ನಡೆಸಿದ್ದರು. ಆತನ ಪವಾಡದ ಸ್ಥಳವಾದ ಈ ಗುಡ್ಡಕ್ಕೆ ಶ್ರೀಮರುಳಸಿದ್ಧಸ್ವಾಮಿಯು ಶ್ರಾವಣದ ಮೂರನೇ ಮಂಗಳವಾರ ಪಲ್ಲಕ್ಕಿಯಲ್ಲಿ ಯಾತ್ರೆ ಹೋಗುವರು. ಕುತೂಹಲದ ಸಂಗತಿಯೆಂದರೆ ಶ್ರೀಸ್ವಾಮಿಯ ಭಕ್ತರು ಆ ದಿವಸ ಕರುವಿನ ಕಲ್ಲುಗುಡ್ಡಕ್ಕೆ ಎಡೆಯನ್ನು ಕಳಿಸುವರು. ಜತೆಯಲ್ಲಿ ಹಿಂದಿನ ವರ್ಷ ತಂದ ಕಲ್ಲುಗಳನ್ನು ಆ ಗುಡ್ಡದಲ್ಲಿ ಹಾಕಿ, ಹೊಸ ಜೋಡು ಕಲ್ಲುಗಳನ್ನು ಆ ಗುಡ್ಡದಿಂದ ತಮ್ಮ ಮನೆಗೆ ತಂದುಕೊಳ್ಳುವರು. ಈ ಕಲ್ಲುಗಳನ್ನು ಸಾಂಕೇತಿಕವಾಗಿ

ಕರುಗಳಿಂದ ಕರೆಯುವರು. ಈ ಕಲ್ಲುಗಳನ್ನು ದೇವರ ಜಗುಲಿಯ ಮೇಲಿಟ್ಟು ವರ್ಷ ಉದ್ದಕ್ಕೂ ಪೂಜಿಸುವರು. ರೈತಾಪಿ ಭಕ್ತಸಮುದಾಯಕ್ಕೆ ಇದೊಂದು ವಿಶೇಷ ಹಬ್ಬ.

ಕಾರ್ತಿಕೋತ್ಸವ

ಪ್ರತಿವರ್ಷ ಕಾರ್ತಿಕೋತ್ಸವ 45 ದಿವಸ ನಡೆಯುತ್ತದೆ. ಆಗ ಪ್ರತಿದಿನ ರಾತ್ರಿ ಶ್ರೀಸ್ವಾಮಿಯ ಪಲ್ಲಕ್ಕಿ ಉತ್ಸವ ಹಾಗೂ ದೀಪೋತ್ಸವ ಜರುಗುತ್ತದೆ. ಮಾರ್ಗಶಿರ ಹುಣ್ಣಿಮೆ ದಿವಸ ಕಾರ್ತಿಕೋತ್ಸವ ಕೊನೆಗೊಳ್ಳುತ್ತದೆ. ಅದರ ಕೊನೆಯ ದಿವಸ ಶ್ರೀಪೀಠದಲ್ಲಿ ಲಕ್ಷದೀಪೋತ್ಸವ. ಅಂದು ಶ್ರೀಸ್ವಾಮಿಗೆ ಹೊಸದಾಗಿ ಬೆಳೆದ ನವಣಕ್ಕಿ ಅನ್ನ ತಯಾರಿಸಿ ಉಂಡಿಗಳನ್ನು ಮಾಡಿ ಅರ್ಚಕರ ಮನೆಗಳಿಂದ ನೈವೇದ್ಯ ಮಾಡುವರು. ತದನಂತರವೇ ಭಕ್ತರು ಹೊಸ ನವಣೆಯನ್ನು ಊಟಕ್ಕೆ ಬಳಸುವರು. ಈ ಕಾರ್ತೀಕವು ಊರಿನ ಗೌಡರಿಂದ ಪ್ರಾರಂಭವಾಗುವುದು. ಆ ಊರಿನ ಗೌಡರಾದ ಲಿ॥ಶ್ರೀ ಸಿದ್ದನಗೌಡರು ನಂತರ ಅವರ ಮಗ ಮತ್ತು ಶಾಸಕರಾಗಿದ್ದ ಲಿ॥ ಶ್ರೀ ಮರುಳಸಿದ್ದನ ಗೌಡರಿಂದ ಆರಂಭವಾಗುತ್ತಿತ್ತು. ಈಗ ಆ ಊರಿನ ಶ್ರೀ ಸಿದ್ಧಲಿಂಗನ ಗೌಡರಿಂದ ಆರಂಭವಾಗುತ್ತದೆ.

ಶಿವರಾತ್ರಿ

ಶಿವರಾತ್ರಿಯಲ್ಲಿ ಶ್ರೀಪೀಠದ ಮರುಳಸಿದಸ್ವಾಮಿಗ ರಾತ್ರಿಯಿಂದ ಬೆಳಗಿನವರೆಗೆ ಸುಮಾರು 25 ರಿಂದ 30 ಸಲ ಪೂಜೆ ಸಲ್ಲುವುದು. ಭಕ್ತರು ಈ ಪೂಜೆಯಲ್ಲಿ ಭಾಗವಹಿಸುವರು. ವಿಶೇಷವೆಂದರೆ ಈ ಸಂದರ್ಭದಲ್ಲಿ ಕಾಶಿ ಧರಿಸಿದ ಪೂಜಾರಿ ಪ್ರತಿಸಲದ ಪೂಜೆಗೂ ತನ್ನ ಬೆನ್ನನ್ನು ಶ್ರೀ ಸ್ವಾಮಿಗೆ ಕಾಣದ ಹಾಗೆ ವಿಮುಖವಾಗಿ ಹೋಗುತ್ತ ಆರತಿಯನ್ನು ಬೆಳಗುವನು.

ದಸರಾ

ದಸರಾ ಸಂದರ್ಭದಲ್ಲಿ ಕುಂಬಾರರು ಹೊಸಗಡಿಗೆ ಮತ್ತು ಮುಚ್ಚಳಗಳನ್ನು ತಯಾರಿಸಿ ಶ್ರೀಪೀಠದ ಅರ್ಚಕರುಗಳಿಗೆ ಕೊಡುವರು. ಆ ಗಡಿಗೆಯಲ್ಲಿ ಅರ್ಚಕರು ಪ್ರಸಾದವನ್ನು ತಯಾರಿಸುವರು. ಆ ದಿವಸ ಶ್ರೀ ಸ್ವಾಮಿಯು ಆಯುಧ ಸಮೇತವಾಗಿ ಪಾಲಕಿ ಉತ್ಸವದೊಡನೆ ಭಕ್ತರ ಸಮೂಹ ಸೇರಿ ಅಂಬು ಎಸೆಯುವ ಪೂಜಾರಿ ಕೂಡಿ ಊರ ಉತ್ತರಕ್ಕಿರುವ ಬನ್ನಿಮಂಟಪಕ್ಕೆ ಭಕ್ತಿಯಿಂದ ಹೋಗುವರು. ಬನ್ನಿಮಂಟಪದ ಆಸನದಲ್ಲಿ ಶ್ರೀ ಸ್ವಾಮಿಯನ್ನು ಕೂಡಿಸುವರು. ಬನ್ನಿಕಟ್ಟೆಯ ಮೇಲೆ ಆಯುಧಗಳನ್ನಿಡುವರು. ಪಕ್ಕದಲ್ಲಿ ಬಿಲ್ಲು-ಬಾಣಗಳನ್ನಿಡುವರು. ನಂತರ ಕಾಶಿ ಪೂಜಾರಿಯಿಂದ ಶ್ರೀಸ್ವಾಮಿಗೆ ಪೂಜೆ ಸಲ್ಲುವುದು ಮತ್ತು ಅವರು ತಯಾರಿಸಿದ ನೈವೇದ್ಯವನ್ನು ಎಡೆ ಮಾಡುವರು. ಮುಂದೆ ಭಕ್ತಸಮೂಹ ಶ್ರೀಸ್ವಾಮಿಗೆ ಹಾಗೂ ಜತೆಯಲ್ಲಿರುವ ಮಠದ ಅಯ್ಯನವರಿಗೂ ಬನ್ನಿಯನ್ನು ಕೊಟ್ಟು ಆಶೀರ್ವಾದ ಪಡೆಯುವರು. ತದನಂತರ ಕಾಶಿ ಪೂಜಾರಿ ಪ್ರತಿ ದೊಡ್ಡ ಉತ್ಸವಗಳಲ್ಲಿ ಹಿಡಿದುಕೊಳ್ಳುವ ಖಡ್ಗವನ್ನು ಹಿಡಿದು ಅಂಬು ಎಸೆಯುವವರ ಹಾಗೂ ಉಳಿದ ಆಯುಧ ಹಿಡಿದವರ

ಸಮೇತ ಶ್ರೀಸ್ವಾಮಿ ಸೇರಿ ಬನ್ನಿಮಂಟಪವನ್ನು ಮೂರು ಸಾರಿ ಪ್ರದಕ್ಷಿಣೆ ಮಾಡುವರು ಪ್ರದಕ್ಷಿಣೆ ಮಾಡುವಾಗ ಕಾಶಿ ಪೂಜಾರಿ ಶ್ರೀಸ್ವಾಮಿಯ ಎದುರಿನಲ್ಲಿ ನಿಂತು ಕತ್ತಿಯನ್ನು ಝಳಪಿಸುವನು ಆ ಸಂದರ್ಭದಲ್ಲೂ ನಮಿಸುತ್ತಾರೆ. ನಂತರ ಅಂಬನ್ನು ಎಸೆಯುವರು ಅಂಬನ್ನು ಹೊಡೆದವರು ಆ ದಿವಸ ಮಡಿಪುಡಿಯಿಂದ ಒಪ್ಪೊತ್ತು ಇರುತ್ತಾರೆ. ನಂತರ ಅವರನ್ನು ಶ್ರೀಪೀಠಕ್ಕೆ ಕರೆಯಿಸಿ ಪಾದಯ್ಯನವರಿಂದ ಕರುಣಪ್ರಸಾದವನ್ನು ಕೊಡಿಸಿ ಆತನ ಒಪ್ಪೊತ್ತನ್ನು ಬಿಡಿಸುವರು. ಈಗ ಪಾಳಿಯ ಪ್ರಕಾರ ಅರ್ಚಕರಾದ ಶ್ರೀ ಮತ್ತೊಳ್ಳಿ ರಾಜಕೋಟಪ್ಪ ಈ ಅಂಬನ್ನು ಹೊಡೆಯುತ್ತಿರುವನು. ನಂತರ ಆ ಅಂಬನ್ನು ಬಾರಿಕರ ಶ್ರೀ ಸಿದ್ದಲಿಂಗಪ್ಪನ ಕೈಯಲ್ಲಿ ಕೊಡುವರು. ಮುಂದೆ ಅದನ್ನು ಊರ ತಳವಾರನಿಗೆ ಕೊಡುವರು.

ಜೋಕುಮಾರ ಹುಣ್ಣಿಮೆ

ಜೋಕುಮಾರನು ಹುಟ್ಟಿದ ದಿವಸ ಆತನನ್ನು ಶ್ರೀಪೀಠದ ಸಿಂಹಾಸನದ ಮುಂಭಾಗದಲ್ಲಿ ತೆಗೆದುಕೊಂಡು ಆತನ ಭಕ್ತವೃಂದದವರು ಹೋಗುವರು. ಅಲ್ಲಿ ಶ್ರೀಪೀಠದ ಜಗದ್ಗುರುಗಳಿಂದ ಅವರು ಆಶೀರ್ವಾದ ಪಡೆದುಕೊಳ್ಳುವರು. ಅಲ್ಲಿಂದ ಜೋಕುಮಾರನನ್ನು ತೆಗೆದುಕೊಂಡು ಹಾಡುಗಳನ್ನು ಹೇಳುತ್ತ ಶ್ರೀಪೀಠದ ಸುತ್ತಲಿನ ಒಂಭತ್ತು ಪಾವಗಟ್ಟೆಗಳಿಗೆ ಹಾಗೂ ಸುತ್ತಲಿನ ಹಳ್ಳಿಗಳನ್ನು ಸುತ್ತಿಕೊಂಡು ಕೊನೆಗೆ ಶ್ರೀಪೀಠಕ್ಕೆ ಮರಳಿ ಬರುವರು. ಶ್ರೀಪೀಠದಲ್ಲಿ ಅರ್ಚಕರಿಂದ ಜೋಕುಮಾರನಿಗೆ ಪೂಜೆ ಮಾಡಲಾಗುವುದು. ನಂತರ ಶ್ರೀಪೀಠದಿಂದಲೂ ದವಸಧಾನ್ಯಗಳನ್ನು ನೀಡಿಸಿಕೊಂಡು ಹೋಗುವ ಪದ್ಧತಿ ಈಗಲೂ ರೂಢಿಯಲ್ಲಿದೆ.

ಹಬ್ಬಗಳಲ್ಲಿ ಊರ ದೇವತೆಗಳ ಪೂಜೆ

ದೀಪಾವಳಿ ಪಾಡ್ಯ, ಕಾರ್ತೀಕ, ಶಿವರಾತ್ರಿ ಮತ್ತು ಶ್ರೀಪೀಠದ ಶ್ರೀಮರುಳಸಿದ್ಧ ಗೌರಮ್ಮರಿಗೆ ಕಂಕಣ ಕಟ್ಟುವ ದಿನಗಳಂದು ಶ್ರೀ ಮರುಳಸಿದ್ಧ ದೇವಾಲಯದ ಅರ್ಚಕರು ಊರಿನ ಎಲ್ಲಾ ದೇವಾನುದೇವತೆಗಳಿಗೆ ಅಗ್ಗವಣಿ ಮತ್ತು ಧೂಪಹಾಕಿ, ಕಾಯಿ ಒಡೆದು ನಮಸ್ಕರಿಸಿ ಪೂಜೆ ಸಲ್ಲಿಸುವದೊಂದು ವಿಶೇಷ ಸಂಪ್ರದಾಯ. ಅಗ್ಗವಣಿ ಎಂದರೆ ನೀರು ಹಾಕುವುದು.

ಹಬ್ಬಗಳನ್ನು ಸಾರುವುದು

ಶ್ರೀಪೀಠದ ವಿಶೇಷ ಕಾರ್ಯಕ್ರಮಗಳಾದ ಹಬ್ಬ, ಪಟ್ಟಾಭಿಷೇಕ, ಉತ್ಸವ, ಪ್ರತಿ ಅಮಾವಾಸ್ಯೆ, ಹುಣ್ಣಿಮೆ ಮತ್ತು ನಾಡಹಬ್ಬ ಇವುಗಳನ್ನು ಶ್ರೀಪೀಠದ ಜಗದ್ಗುರುಗಳ ಅಪ್ಪಣೆಯ ಮೇರೆಗೆ ಜಾಗಟೆಯನ್ನು ಹೊಡೆಯುತ್ತ ಊರಲ್ಲಿ ಸಾರುವ ವ್ಯವಸ್ಥೆಯಿದೆ.

ಇಸ್ಲಾಂ ಹಬ್ಬಗಳು

ಸ್ಥಳೀಯ ಇಸ್ಲಾಂ ಧರ್ಮದವರ ಉರ್ಸು ಹಬ್ಬದ ಆಚರಣೆಯ ದಿವಸ ಶ್ರೀಪೀಠದ ಜಗದ್ಗುರುಗಳನ್ನು ಬರಮಾಡಿಕೊಳ್ಳುವರು. ಮೊಹರಂನಲ್ಲಿ ಶ್ರೀಪೀಠದಿಂದ ಎಣ್ಣೆ ಮತ್ತು ಹೊಸವಸ್ತ್ರವನ್ನು ಪಡೆದ ಮೇಲೆ ಅವರು ತಮ್ಮ ದೇವತಾ ಕಾರ್ಯಕ್ಕೆ ಉಪಯೋಗಿಸುವರು.

ಭಾರತ ಹುಣ್ಣಿಮೆ

ಶ್ರೀಮರುಳಸಿದ್ಧಸ್ವಾಮಿಯ ಭಾರತ ಹುಣ್ಣಿಮೆಯ ಆಚರಣೆ ತುಂಬಾ ವಿಶಿಷ್ಟವಾದದ್ದು. ಮಾಘ ಮಾಸದ ಭಾರತ ಹುಣ್ಣಿಮೆ ಆಚರಣೆಯಲ್ಲಿ ಉಜ್ಜಯಿನಿ ಮತ್ತು ಅದರ ಸುತ್ತಲಿನ ಎಂಟು ದಿಕ್ಕುಗಳಲ್ಲಿರುವ ಒಂಬತ್ತು ಪಾದಗಟ್ಟೆಗೆ ಶ್ರೀಸ್ವಾಮಿಯನ್ನು ಪಲ್ಲಕ್ಕಿಯಲ್ಲಿ ಕರೆದೊಯ್ಯುವರು. ಈ ಹಬ್ಬವು ರಾಕ್ಷಸನ ಸಂಹಾರದ ಸಂಕೇತವಾಗಿದೆ. ಈ ಭಾಗದಲ್ಲಿ ಒಬ್ಬ ರಾಕ್ಷಸನ ಹಾವಳಿ ಹೆಚ್ಚಾಗಿತ್ತು. ಅದನ್ನು ನಿವಾರಿಸಲು ಶ್ರೀಮರುಳಸಿದ್ಧ ಸ್ವಾಮಿಯು ತನ್ನ ಕಾರ್ಯಕ್ಷೇತ್ರವಾದ ಉಜ್ಜಯಿನಿಯನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಬಸಪ್ಪನಿಗೆ ನೀಡಿ ಅಲ್ಲಿಂದ ಯಾತ್ರೆಯನ್ನು ಆರಂಭಿಸಿದರು. ಹಾರಕನಾಳು ಗ್ರಾಮದ ಬದಿಯಲ್ಲಿ ನೆಲೆಸಿದ್ದ ರಾಕ್ಷಸನನ್ನು ಸಂಹಾರ ಮಾಡಿ ಉಜ್ಜಯಿನಿಗೆ ಮರಳಿ ಬಂದರು. ಆ ಸಂದರ್ಭದಲ್ಲಿ ಬಸಪ್ಪನು ಉಜ್ಜಯನಿ ಗ್ರಾಮದ ಆಡಳಿತವನ್ನು ಸ್ವಾಮಿಗೆ ಬಿಟ್ಟುಕೊಡಲು ವಿರೋಧ ವ್ಯಕ್ತಪಡಿಸಿದನು. ಆಗ ಅವನ ಕಾಲನ್ನು ಮುರಿದು ಆತನನ್ನು ಹೊರಹಾಕಿ ಶ್ರೀಸ್ವಾಮಿಯು ಉಜ್ಜಯಿನಿಯನ್ನು ಪ್ರವೇಶಿಸಿದನು. ಈ ಹಿನ್ನೆಲೆಯಲ್ಲಿ ಶ್ರೀಸ್ವಾಮಿಯ ಒಂಬತ್ತು ಪಾದಗಟ್ಟೆಗಳ ಯಾತ್ರೆಯನ್ನು ಪ್ರೇತ ಭಾರತ ಹುಣ್ಣಿಮೆಯೆಂದು ಸಂಭ್ರಮ ಸಡಗರದಿಂದ ಆಚರಿಸುವರು.

ಮೊದಲು ರಥಸಪ್ತಮಿಯಲ್ಲಿ ಪಲ್ಲಕ್ಕಿಯಲ್ಲಿ ಶ್ರೀಮರುಳಸಿದ್ಧಸ್ವಾಮಿಯು ಒಂಬತ್ತು ಪಾದಕ್ಕೆ ಒಂಬತ್ತು ದಿವಸ ಹೋಗುತ್ತಿದ್ದರು. ಒಂದೊಂದು ಪಾದಗಟ್ಟೆಯಲ್ಲಿ ಒಂದೊಂದು ದಿವಸ ಕಳೆಯುತ್ತಿದ್ದರು. ಕಾಲಕ್ರಮದಲ್ಲಿ ಒಂಬತ್ತು ದಿವಸ ಭಕ್ತಾದಿಗಳಿಗೆ ಊರು ಬಿಟ್ಟು ಹೋಗಲು ತೊಂದರೆಯಾಗುವುದೆಂದು ಈಗ ಮೂರುದಿವಸ ಮಾತ್ರ ಈ ಕಾರ್ಯಕ್ರಮವನ್ನು ನಡೆಸುವರು. ಆ ದಿವಸಗಳಲ್ಲಿ ಉಜ್ಜಯಿನಿ ಸುತ್ತಲೂ ಇರುವ ಏಳು ಪಾದಗಳಿಗೆ ಮತ್ತು ಉಜ್ಜಯಿನಿ ಗ್ರಾಮ ಮತ್ತು ಮಠದಲ್ಲಿರುವ ಎರಡು ಪಾದಗಳಿಗೆ ಶ್ರೀ ಮರುಳಸಿದ್ಧಸ್ವಾಮಿಯನ್ನು ಪಾಲಕಿಯಲ್ಲಿ ತೆಗೆದುಕೊಂಡು ಹೋಗುವರು. ಆ ಪಾದಗಟ್ಟೆಗಳು ಹೀಗಿವೆ.

೧. ಶ್ರೀ ಉಜ್ಜಯಿನಿ ಸದ್ಧರ್ಮ ಪೀಠದಲ್ಲಿ	೨. ಉಜ್ಜಯಿನಿ ಗ್ರಾಮದ ತೇರುಗಡ್ಡೆ ಪಕ್ಕದಲ್ಲಿ
೩. ಮಾಚೇನಹಳ್ಳಿ ಪಾದ	೪. ಬೆಳದೇರಿ ಪಾದ
೫. ಬೆನಕನಹಳ್ಳಿ ಪಾದ	೬. ಸೊಕ್ಕೆ ಪಾದ
೭. ಸಾಸ್ವಿಹಳ್ಳಿ ಪಾದ	೮. ಹಾರಕನಾಳ ಪಾದ
೯. ನಡುಮಾನಳ್ಳಿ ಭುಜಂಗಪಾದ	

ಭಾರತಹುಣ್ಣಿಮೆಯಂದು ಶ್ರೀಮರುಳಸಿದ್ಧಸ್ವಾಮಿಯ ಉತ್ಸವ ಮೂರ್ತಿಯನ್ನು ಪಾಲಕಿಯಲ್ಲಿಟ್ಟು ವಾದ್ಯ ಮೇಳದೊಂದಿಗೆ ಸಂಚಾರವನ್ನು

ಆರಂಭಿಸುವರು. ಈ ಪಲ್ಲಕ್ಕಿಯನ್ನು ಭಕ್ತರು ಹೊತ್ತುಕೊಂಡು ಹೋಗುವರು. ಮೊದಲು ಉಜ್ಜಯಿನಿ ಗ್ರಾಮದ ಉತ್ತರದ ತೇರುಗಡ್ಡೆಯ ಬದಿಗಿನ ಪಾದಕ್ಕೆ ಭೆಟ್ಟಿ ನೀಡಿ ಅಲ್ಲಿಂದ ಸಿದ್ಧನವರ್ತಿಗೆ ಹೋಗುವರು. ಆ ಸ್ಥಳದಿಂದ ಮಾಚೇನಹಳ್ಳಿ ಪಾದಕ್ಕೆ ಭೆಟ್ಟಿ ನೀಡುವರು.

ಮಾಚೇನಹಳ್ಳಿಯಿಂದ ಬೆಳದೇರಿ ಪಾದಕ್ಕೆ ಹೋಗುವರು. ಈ ಪಾದಗಟ್ಟೆಯು ಅಲ್ಲಿಯ ಶ್ರೀ ಕುರುಡಿ ಸಿದ್ಧನಗೌಡರ ಹೊಲದಲ್ಲಿದೆ. ಶ್ರೀಸ್ವಾಮಿಯು ಬೆಳದೇರಿಯ ಬಸವಣ್ಣನ ಗುಡಿಯಲ್ಲಿ ನಿಲ್ಲುತ್ತದೆ. ಆ ಸ್ಥಳದಲ್ಲಿ ಭಕ್ತರಿಂದ ಆರತಿ ಬೆಳಗಿಸಿಕೊಂಡು ಅಲ್ಲಿಂದ ಬೆನಕನಹಳ್ಳಿ ಪಾದಕ್ಕೆ ಹೋಗುವರು. ಅಲ್ಲಿ ಬಸವಣ್ಣ ದೇವರ ಗುಡಿ ಹತ್ತಿರ ತಂಗುವರು. ಅಲ್ಲಿಯ ಭಕ್ತರಿಂದ ಆರತಿ ಬೆಳಗಿಸುವರು.

ಬೆನಕನಹಳ್ಳಿ ಪಾದದಿಂದ ಸೊಕ್ಕೆ ಪಾದಕ್ಕೆ ಹೋಗುವರು. ಅಲ್ಲಿ ಕರುವಿನ ಮೂಗಣ್ಣನ ಗುಡಿಯಲ್ಲಿ ವಿಶ್ರಾಂತಿ ಪಡೆಯಲು ತಂಗುವರು. ಕಾಶಿಧರಿಸಿದ ಪೂಜಾರಿ ಅಲ್ಲಿ ಕಾಶಿ ಬಿಚ್ಚಿ ಸ್ನಾನ-ಪೂಜೆ ಮಾಡುವರು. ಉಜ್ಜಯಿನಿ ಶ್ರೀಪೀಠದ ಮಠದಿಂದ ಬಂದ ಹೋಳಿಗೆಯನ್ನು ಮೂಗಣ್ಣನಿಗೆ ಹೊದಿಕೆ ಹಾಕುವರು. ಪ್ರಸಾದವನ್ನು ಸ್ವೀಕರಿಸಿ ಅಲ್ಲಿಂದ ಸಾಸ್ವಿಹಳ್ಳಿ ಪಾದಕ್ಕೆ ಹೋಗಿ ಅಲ್ಲಿ ಶ್ರೀಸ್ವಾಮಿಯ ಪಾದಕ್ಕೆ ಪ್ರದಕ್ಷಿಣೆಯನ್ನು ಹಾಕುವರು. ರಾತ್ರಿ ೨.೦೦ ಗಂಟೆಗೆ ಕಾಳಾಪುರಕ್ಕೆ ಬಂದು ಅಲ್ಲಿಯ ಬಸವಣ್ಣನ ಗುಡಿಯಲ್ಲಿ ತಂಗುವರು. ಬೆಳಿಗ್ಗೆ ಶ್ರೀಪೀಠದಿಂದ ಸನ್ನಿಧಿಯವರನ್ನು ಕಾಳಾಪುರದ ಭಕ್ತವೃಂದ ಬರಮಾಡಿಕೊಂಡು ಶ್ರೀಸ್ವಾಮಿಗೆ ಕ್ರಿಯಾಪ್ರಸಾದ ಕೊಡಿಸಿದ ಮೇಲೆ ಮಧ್ಯಾಹ್ನ ೨ ಗಂಟೆಗೆ ಕಾಳಾಪುರದಿಂದ ನಡುವೂವಿನ ಹಳ್ಳಿಗೆ ಬಂದು ಅಲ್ಲಿ ಆರತಿಯನ್ನು ಬೆಳಗಿ ಶ್ರೀ ಸ್ವಾಮಿಯನ್ನು ಗ್ರಾಮದವರು ಭಕ್ತಿ-ಗೌರವದಿಂದ ಸ್ವಾಗತಿಸುವರು. ಅಲ್ಲಿಂದ ಹಾರಕನಾಳಿಗೆ ಹೋಗಿ ಅಲ್ಲಿ ಕಡುಬಿನ ಕಾಳಗ ಮುಗಿಸಿಕೊಂಡು ಅಲ್ಲಿಯ ಪಾದಕ್ಕೆ ಬರುವರು. ಅಲ್ಲಿಯ ಭಕ್ತರಿಂದ ಆರತಿ ನೈವೇದ್ಯ ಸ್ವೀಕರಿಸಿ ಅಲ್ಲಿಂದ ಈಚಲಕಟ್ಟೆ ದೇವರ ಆಲದ ಮರಕ್ಕೆ ಶ್ರೀ ಸ್ವಾಮಿಯನ್ನು ತೆಗೆದುಕೊಂಡು ಹೋಗುವರು. ಅಲ್ಲಿಯ ಭುಜಂಗ ಪಾದಕ್ಕೆ ಪ್ರದಕ್ಷಿಣೆ ಮಾಡುವರು. ಅಲ್ಲಿಂದ ಆ ಗ್ರಾಮದ ಹತ್ತಿರದ ಕಾಶಿಬಸವಣ್ಣನ ಗುಡಿ ಹತ್ತಿರ ಬಂದು ಕಾಶಿಪೂಜಾರಿ ಕಾಶಿಯನ್ನು .ಬಿಚ್ಚುವನು. ಅಲ್ಲಿ ನೈವೇದ್ಯ ಆರತಿ ಆಗುವುದು. ಬಳಿಕ ಅಲ್ಲಿಂದ ಹೊರಟು ಉಜ್ಜಯಿನಿ ಗ್ರಾಮದಿಂದ ಉತ್ತರ ದಿಕ್ಕಿನ ೧ ಕಿ.ಮೀ. ಹತ್ತಿರ ಬಂದು ಅಲ್ಲಿ ಸ್ವಾಮಿಯನ್ನು ಹಿಡಿದುಕೊಂಡು ನಿಲ್ಲುವರು.

ಶ್ರೀ ಪೀಠದ ಮಠದಿಂದ ಕುರುಬರು ಕುಂಟ ಬಸಪ್ಪನ ವಾಹನವನ್ನು ಹೊತ್ತುಕೊಂಡು ಸ್ಥಳೀಯ ಗೌಡ, ತಳವಾರ, ಮಠದ ಅಯ್ಯನವರ ಜತೆ ಅಲ್ಲಿಗೆ

ಆಗಮಿಸುವರು. ಆಗ ಶ್ರೀ ಸ್ವಾಮಿಯನ್ನು ಊರ ಒಳಗಡೆ ಬರದಂತೆ ತಡೆಯುವರು. ಅಲ್ಲಿ ಶ್ರೀಸ್ವಾಮಿಯ ಪಾಲಕಿಯನ್ನು ಹೊತ್ತ ಗುಂಪು ಮತ್ತು ಕುಂಟಬಸಪ್ಪನ ಗುಂಪಿನವರ ಮಧ್ಯೆ ಸಾಂಕೇತಿಕವಾಗಿ ಹೊಡೆದಾಟವಾಗುತ್ತದೆ. ಕೊನೆಗೆ ಕುಂಟಬಸಪ್ಪನ ವಾಹನ ಹಿಡಿದವನನ್ನು ಬೇಲಿ ಕಡೆಗೆ ದೂಡಿ ಅವರಿಂದ ತಪ್ಪು ಕಾಣಿಕೆಯನ್ನು ಪಡೆಯುವರು. ಈ ಹೊಡೆದಾಟವು ಲಕ್ಕೆ ಜುಳ್ಳಿನಿಂದ ನಡೆಯುತ್ತದೆ. ನಂತರ ಶ್ರೀ ಸ್ವಾಮಿಯು ಊರನ್ನು ಪ್ರವೇಶಿಸುತ್ತದೆ.

ಮೊದಲಸಿಯಿಂದ ಊರಲ್ಲಿ ಆಗಮಿಸಿದ ಶ್ರೀಸ್ವಾಮಿಗೆ ಪ್ರಥಮದಲ್ಲಿ ಸದರೀ ಪಟ್ಟಣದ ಹರಿಜನ ಭಕ್ತರಿಂದ ಶ್ರೀಸ್ವಾಮಿಗೆ ಹಗಿ ಸಸಿಯ ಆರತಿ ಆಗುತ್ತದೆ. ಎರಡನೆಯದಾಗಿ ಆತನ ಪರಮಭಕ್ತನಾದ ತಳವಾರ ಜಟ್ಟೆಪ್ಪನ ವಂಶಸ್ಥರಿಂದ ಪೂಜೆ ಮತ್ತು ಕ್ರಿಯಾ ಪ್ರಸಾದ ಮಾಡುವರು. ಅವನೇ ಶ್ರೀಸ್ವಾಮಿಗೆ ಎಡೆ ಕೊಡುವನು. ಕ್ರಿಯಾದಾರತಿ ಎತ್ತುವನು. ಆನಂತರ ಇನ್ನಿತರ ಜನಾಂಗದವರಾದ ನೇಕಾರರು, ವೀರಶೈವರು, ಕುರುಬರು ಶ್ರೀಸ್ವಾಮಿಗೆ ಆರತಿ ಬೆಳಗುವರು. ಶ್ರೀಸ್ವಾಮಿಯ ಪಾಲಕಿ ಸಂಗಡ ಸ್ವಾಮಿಯ ಅರ್ಚಕ, ಕಾಶಿ ಪೂಜಾರಿ, ಮಠದಯ್ಯ ಎಲ್ಲಾ ಜನಾಂಗದವರು, ಗಗ್ಗರ ಮತ್ತು ಧ್ವಜ ಸಮೇತರಾಗಿ ಹೋಗಿರುತ್ತಾರೆ.

ಭಕ್ತಾದಿಗಳಿಂದ ಆರತಿ ಮಾಡಿಸಿಕೊಂಡ ಶ್ರೀ ಸ್ವಾಮಿಯನ್ನು ಗುಡಿ (ದೇವಸ್ಥಾನ) ದುಂಬಲು ಆಗಮಿಸುತ್ತಾರೆ. ಈ ಸಂದರ್ಭದಲ್ಲಿ ಶ್ರೀಸ್ವಾಮಿಗೆ ದೃಷ್ಟಿ ಆಗದಿರಲೆಂದು ನಿವಾಳಿ ಆರತಿ ಮಾಡಿ ಶ್ರೀಸ್ವಾಮಿಗೆ ವಾಮನ ಕಪ್ಪನ್ನು ಧರಿಸಿ ಮೆಣಸಿನ ಕಾಯಿ ಧೂಪ ಹಾಕುವರು. ಈ ರೀತಿಯಲ್ಲಿ ಬಹು ಸಂಭ್ರಮ ಸಡಗರದಿಂದ ಭಾರತ ಹುಣ್ಣಿಮೆಯ ಹಬ್ಬ ಜರುಗುತ್ತದೆ.

ಅಯ್ಯಾಚಾರ

ಈ ಉತ್ಸವಗಳಲ್ಲದೆ ಶ್ರೀಸ್ವಾಮಿಯ ರಥೋತ್ಸವದ ನಂತರ ಷಷ್ಠಿ ರಾತ್ರಿಯಂದು ಜಂಗಮ ವಟುಗಳಿಗೆ ಶ್ರೀಪೀಠದ ಮಠದಲ್ಲಿ ಶಿವಲಿಂಗದೀಕ್ಷಾ ಕಾರ್ಯ ಜರುಗುವುದು. ಈ ಕಾರ್ಯಕ್ಕೆ ವಿವಿಧೆಡೆಯಿಂದ ಜಂಗಮರು ತಮ್ಮ ಮಕ್ಕಳನ್ನು ಇಲ್ಲಿಗೆ ಕರೆದುಕೊಂಡು ಬಂದು (ಅಯ್ಯಾಚಾರ) ಶಿವದೀಕ್ಷೆಯನ್ನು ಮಾಡಿಸುವರು. ಅಲ್ಲದೆ ಶ್ರೀಪೀಠದಲ್ಲಿ ಆಗಿಂದಾಗ್ಗೆ ಪುರಾಣ, ಧರ್ಮಗೋಷ್ಠಿಗಳು ಶ್ರೀಜಗದ್ಗುರುಗಳ ಸನ್ನಿಧಾನದಲ್ಲಿ ನಡೆಯುವವು. ಹೀಗೆ ಶ್ರೀಪೀಠದಲ್ಲಿ ಹಬ್ಬ, ಉತ್ಸವಗಳಲ್ಲದೆ ಇನ್ನಿತರ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ವೈಶಿಷ್ಟ್ಯಪೂರ್ಣವಾಗಿ ಜರುಗುತ್ತವೆ.

ಅಡಿ ಟಿಪ್ಪಣಿ

೧. ಈ ಅಧ್ಯಯನ ಅನೇಕ ವಿಷಯಗಳನ್ನು ಉಜ್ಜಯಿನಿ ಸದ್ಧರ್ಮ ಪೀಠದ ಕಛೇರಿಯಿಂದ ಪಡೆಯಲಾಗಿದೆ.

■




೪೫. ಶ್ರೀ ಜ.
ಮರುಳಸಿದ್ಧೇಶ್ವರ
ಸ್ವಾಮಿಯ ರಥೋತ್ಸವ.



೪೬. ಶ್ರೀ ಜ.
ಮರುಳಸಿದ್ಧೇಶ್ವರ
ಸ್ವಾಮಿಯ ಶ್ವೇತಛತ್ರಿ.



೪೭. ಶ್ರೀ ಮರುಳಸಿದ್ಧೇಶ್ವರ
ಸ್ವಾಮಿಯ ಪಾಲಕಿ.



೪೮. ಶ್ರೀ ಮರುಳಸಿದ್ಧೇಶ್ವರ
ಸ್ವಾಮಿಯ ಶಿಖರದ
ತೈಲಾಭಿಷೇಕಕ್ಕೆ
ಅಣಿಯಾಗಿರುವುದು.



೪೯. ಜರ್ಮಲೆಯ ಅರಸರು
ಕಳುಹಿಸಿದ ತೈಲ-ಕುಂಭದ
ಮೆರವಣಿಗೆ

೪೯. ಜರ್ಮಲೆಯ ದೊರೆಗಳಿಂದ
ಬಂದ ಎಣ್ಣೆಯ ಕೊಡವನ್ನು
ಮೊದಲು ಶ್ರೀ ಮರುಳಸಿದ್ಧೇಶ್ವರ
ಸ್ವಾಮಿಯ ಶಿಖರಕ್ಕೆ ಎರೆಯಲು
ಮೇಲೇರಿಸುತ್ತಿರುವುದು.





೦. ಜರ್ಮಲೆಯ ಪಾಳೆಗಾರರ ಎಣ್ಣೆಯನ್ನು
ಶ್ರೀ ಜ. ಮರುಳಸಿದ್ಧೇಶ್ವರ ಸ್ವಾಮಿಯ
ಖರಕ್ಕೆ ಮೊದಲು ಎರೆಯುತ್ತಿರುವುದು.



೫೧. ಇನ್ನಿತರ ಭಕ್ತರು ಅರ್ಪಿಸಿದ
ಎಣ್ಣೆಯ ಡಬ್ಬಿಯನ್ನು ಶಿಖರದ
ಮೇಲಕ್ಕೆ ಎತ್ತುತ್ತಿರುವುದು.



೫೨. ಭಕ್ತರಿಂದ ಶ್ರೀ ಜ.
ಮರುಳಸಿದ್ಧೇಶ್ವರ ಸ್ವಾಮಿಯ
ಶಿಖರಕ್ಕೆ ಇನ್ನಿತರರು ಅರ್ಪಿಸಿದ
ತೈಲದ ಅಭಿಷೇಕ.

ಶ್ರೀ ಪೀಠದ ಶ್ರೀ ಮರುಳಸಿದ್ಧಸ್ವಾಮಿಯ ಒಂಬತ್ತು ಪಾದಗಟ್ಟೆಗಳು

ಶ್ರೀ ಮರುಳಸಿದ್ಧ ಜಗದ್ಗುರುಗಳು ಈಗಿನ ಉಜ್ಜಯಿನಿ ಪ್ರದೇಶಕ್ಕೆ ಆಗಮಿಸಿದ ಬಳಿಕ ಜರ್ಮಲೆಯ ಪಾಳೆಗಾರರು ಅಲ್ಲಿ ಮುಚ್ಚಿದ್ದ ದೇವಾಲಯವನ್ನು ಹೊರಗಡೆ ತಗೆಸಿದರೆಂದು ಜರ್ಮಲೆಯ ಪಾಳೆಗಾರರ ಅಧ್ಯಯನದಲ್ಲಿ ತಿಳಿಯಲಾಗಿದೆ. ಮತ್ತೊಂದೆಡೆ ಈ ಸಂದರ್ಭದಲ್ಲಿ ಇವರು ಶ್ರೀ ಮರುಳಸಿದ್ಧ ದೇವಸ್ಥಾನದ ಸುತ್ತ ಈಗಿರುವ ಒಂಬತ್ತು ಪಾದಗಟ್ಟೆಗಳಿರುವ ಭೂಪ್ರದೇಶವನ್ನು ಶ್ರೀಪೀಠದ ಜಗದ್ಗುರುಗಳಿಗೆ ಸಮರ್ಪಿಸಿದರೆಂದು ಹೇಳಲಾಗಿದೆ.[೧]

ಉಜ್ಜಯನಿ ಸದ್ಧರ್ಮ ಪೀಠದ ಸುತ್ತಲೂ ವಿವಿಧ ದಿಕ್ಕುಗಳಲ್ಲಿ ಸುಮಾರು ೨ ಕಿ.ಮೀ.ದಿಂದ ೫ ಕಿ.ಮೀ. ಅಂತರದಲ್ಲಿ ಶ್ರೀ ಮರುಳಸಿದ್ಧ ಸ್ವಾಮಿಯ ಏಳು ಪಾದಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಅವುಗಳು ಶ್ರೀಪೀಠದ ಶ್ರೀಮರುಳಸಿದ್ಧ ದೇವಾಲಯದ ಎದುರಿನ ಯತಿವರ್ಯರುಳ್ಳ ಮಕರತೋರಣದ ಕೆಳಗಡೆ ಒಂದು ಹಾಗೂ ಈ ಗ್ರಾಮದ ದಕ್ಷಿಣಕ್ಕೆ ತೇರು ನಿಲ್ಲುವ ಸ್ಥಳದ ಪಕ್ಕದಲ್ಲಿ ಇನ್ನೊಂದು ಇವೆ. ಪ್ರತಿವರ್ಷ ಭಾರತ ಹುಣ್ಣಿಮೆಯಲ್ಲಿ ಈ ಒಂಬತ್ತು ಪಾದಗಟ್ಟಿಗಳಿಗೆ ಶ್ರೀ ಮರುಳಸಿದ್ಧ ಸ್ವಾಮಿಯು ಭೇಟಿ ನೀಡುವ ಪರಂಪರೆ ತುಂಬಾ ವೈಶಿಷ್ಟ್ಯಪೂರ್ಣವೆನಿಸಿದೆ. ಈ ಉತ್ಸವದ ಪರಿಚಯವನ್ನು ಶ್ರೀಪೀಠದ ಹಬ್ಬ ಉತ್ಸವಗಳ ಭಾಗದಲ್ಲಿ ಪರಿಚಯಿಸಲಾಗಿದೆ.[೨] ಈ ಪಾದಗಟ್ಟಿಗಳ ವಿವರ ಅನುಕ್ರಮವಾಗಿ ಹೀಗಿದೆ. ***(ಚಿತ್ರ ನಂ.೫೫ ರಿಂದ ೬೪)***

೧. ಶ್ರೀಮರುಳಸಿದ್ಧ ಸ್ವಾಮಿಯ ದೇವಾಲಯ ಎದುರಿನ ಪಾದಗಟ್ಟಿ
೨. ಮಾಚನಹಳ್ಳಿ ಪಾದಗಟ್ಟೆ
೩. ಬೆಳದೇರಿ ಪಾದಗಟ್ಟೆ
೪. ಬೆನಕನಹಳ್ಳಿ ಪಾದಗಟ್ಟೆ
೫. ಸೊಕ್ಕೆ ಪಾದಗಟ್ಟೆ
೬. ಸಾಸ್ವಿಹಳ್ಳಿ ಪಾದಗಟ್ಟಿ
೭. ಹಾರಕನಾಳು ಪಾದಗಟ್ಟೆ
೮. ನಡುಮಾವಿನಳ್ಳಿ ಭುಜಂಗ ಪಾದಗಟ್ಟೆ
೯. ಉಜ್ಜಯಿನಿ ಗ್ರಾಮದ ಪಾದಗಟ್ಟೆ

೧. ಶ್ರೀಮರುಳಸಿದ್ಧ ದೇವಾಲಯದ ಪಾದಗಟ್ಟೆ

ಶ್ರೀ ಪೀಠದ ಶ್ರೀಮರುಳಸಿದ್ಧ ದೇವಾಲಯದ ಎದುರಿಗೆ ಯತಿವರ್ಯರ ಚಿತ್ರವಿರುವ ಮಕರಸ್ತಂಭ ತೋರಣವಿದ್ದು ಕೆಳಗಡೆ ಈ ಪಾದಗಟ್ಟೆಯಿದೆ. ಅಲ್ಲಿ ಒಂದು ಪೀಠದ ಮೇಲೆ ಜೋಡು ಪಾದಗಳಿವೆ. ಇದನ್ನು ಉಜ್ಜಯಿನೀ ಮಧ್ಯಪಾದವೆನ್ನುವರು.

೨. ಮಾಚನಹಳ್ಳಿ ಪಾದಗಟ್ಟೆ

ಉಜ್ಜಯಿನಿ ಪಟ್ಟಣದ ಈಶಾನ್ಯ ದಿಕ್ಕಿನಲ್ಲಿ ಸಿದ್ಧನವರ್ತಿಯಿದ್ದು ಅಲ್ಲಿಯ ಆಲದ ಮರದ ಸಮೀಪ ಒಂದು ಹೊಲದಲ್ಲಿ ಪಾದಗಟ್ಟೆಯಿದೆ. ಈ ಪಾದಗಟ್ಟೆಗೆ ಒಂದು ತೆರೆದ ಸ್ತಂಭ ಮಂಟಪವಿದೆ. ಈ ಮಂಟಪದ ಅಧಿಷ್ಠಾನ ಎತ್ತರವಾಗಿದೆ. ಅದಕ್ಕೆ ನಾಲ್ಕು ಸ್ತಂಭಗಳಿವೆ. ಅದರ ಛತ್ತಿನ ಮೇಲೆ ದ್ರಾವಿಡ ಮಾದರಿಯ ಶಿಖರವಿದೆ. ಇದನ್ನು ಮಾಚನಹಳ್ಳಿ ಪಾದಗಟ್ಟೆ ಎನ್ನುವರು.

೩. ಬೆಳದೇರಿ ಪಾದಗಟ್ಟೆ

ಉಜ್ಜಯಿನಿ ಗ್ರಾಮದ ಪೂರ್ವಕ್ಕಿರುವ ಬೆಳದೇರಿ ಗ್ರಾಮದ ದಾರಿಯಲ್ಲಿ ಒಂದು ಪಾದಗಟ್ಟೆಯಿದೆ. ಅದು ರಸ್ತೆಬದಿಯ ಒಂದು ಹೊಲದಲ್ಲಿದೆ. ಈ ಪಾದಗಟ್ಟೆಯ ಮಂಟಪದ ರಚನಾಕ್ರಮವು ಮಾಚನಹಳ್ಳಿಯ ಪಾದಗಟ್ಟೆಯಂತಿದೆ. ಅಲ್ಲಿಯ ವಿಶೇಷತೆಯೆಂದರೆ ಈ ಮಂಟಪದ ಹತ್ತಿರ ಪೂರ್ವಕ್ಕೆ ಒಬ್ಬ ಭಕ್ತನ ಶಿಲ್ಪವಿದೆ. ಈ ಶಿಲ್ಪದಲ್ಲಿ ಭಕ್ತನು ಕೈಮುಗಿದು ನಿಂತಿದ್ದಾನೆ. ಆತನ ಮೇಲ್ಗಡೆ ಶಿವಲಿಂಗವನ್ನು ತೋರಿಸಲಾಗಿದೆ. ಅಲ್ಲಿಂದ ಸ್ವಲ್ಪ ದೂರದಲ್ಲಿ ನಾಗೇನಹಳ್ಳಿಯ ಹಾಳು ನೆಲೆಯಿದೆ. ಆ ನೆಲೆಯಲ್ಲಿ ಮೂರು ಖಂಡುಗದಷ್ಟು ಬಳೆಗಳನ್ನು ದಂಡಿನ ರಂಡೆರು ಒಡೆದುಕೊಂಡರೆಂಬ ಐತಿಹ್ಯವಿದೆ. ***(ಚಿತ್ರ ಸಂ. ೬೫ ರಿಂದ ೬೬)***

೪. ಬೆನಕನಹಳ್ಳಿ ಪಾದಗಟ್ಟೆ

ಉಜ್ಜಯಿನಿ ಗ್ರಾಮ ಮತ್ತು ಅದರ ಕೆರೆಯ ಆಗ್ನೇಯ ದಿಕ್ಕಿಗೆ ಬೆನಕನಹಳ್ಳಿ ಗ್ರಾಮವಿದ್ದು ಅದರ ಹತ್ತಿರ ಉತ್ತರಕ್ಕೆ ಒಂದು ಹೊಲದಲ್ಲಿ ಒಂದು ಪಾದಗಟ್ಟೆಯಿದೆ. ಈ ಪಾದಗಟ್ಟೆಯಿಂದ ಉತ್ತರ ದಿಕ್ಕಿಗೆ ನೋಡಿದರೆ ಶ್ರೀಪೀಠದ ಉತ್ತರದ್ವಾರ ಗೋಪುರ ಕಾಣಿಸುತ್ತದೆ. ಈ ಪಾದಗಟ್ಟೆಗೂ ಒಂದು ತೆರೆದ ಸ್ತಂಭ ಮಂಟಪವಿದೆ.

೫. ಸೊಕ್ಕೆ ಪಾದಗಟ್ಟೆ

ಉಜ್ಜಯಿನಿ ಸೊಕ್ಕೆ ದಾರಿಯಲ್ಲಿ ಉಜ್ಜಯಿನಿಯಿಂದ ಸುಮಾರು ಎರಡು ಕಿ.ಮೀ. ದೂರದಲ್ಲಿ ನೈಋತ್ಯ ದಿಕ್ಕಿನಲ್ಲಿ ಒಂದು ಹೊಲದಲ್ಲಿ ಹುಣಿಸೆ ಗಿಡದ ಹತ್ತಿರ

ಒಂದು ಪಾದಗಟ್ಟೆಯಿದೆ. ಈ ಪಾದಗಟ್ಟೆಗೂ ತೆರೆದ ಸ್ತಂಭ ಮಂಟಪವಿದೆ. ಈ ಮಂಟಪಕ್ಕೆ ಇತ್ತೀಚೆಗೆ ಬಣ್ಣವನ್ನು ಹಚ್ಚಲಾಗಿದೆ. ಅಲ್ಲಿಂದ ಉತ್ತರಕ್ಕೆ ಎತ್ತರದ ಕಲ್ಲು ಗುಡ್ಡವಿದ್ದು ಅದನ್ನು ಕರುವಿನಕಲ್ಲು ಗುಡ್ಡವೆನ್ನುವರು. ಗುಡ್ಡದ ತಳಭಾಗದಲ್ಲಿ ಮೂಗಣ್ಣನ ದೇವಸ್ಥಾನವಿದೆ. ಭಾರತ ಹುಣ್ಣಿಮೆಯಲ್ಲಿ ಶ್ರೀ ಸ್ವಾಮಿಯು ರಾತ್ರಿ ೧೨ ರಿಂದ ೩ ಗಂಟೆಯ ಒಳಗೆ ಅಲ್ಲಿ ಬಂದಾಗ ಶ್ರೀ ಪೀಠದಿಂದ ಶ್ರೀ ಮೂಗಣ್ಣನಿಗೆ ಹೋಳಿಗೆ ಹೊದಿಕೆಯ ಪೂಜೆ ನಡೆಯುವುದು. ಭಾರತ ಹುಣ್ಣಿಮೆಯ ಆಚರಣೆಯ ದಿನ ಭಕ್ತರು ಈ ಗುಡ್ಡಕ್ಕೆ ಎಡೆಯನ್ನು ಒಯ್ದು ಅಲ್ಲಿ ಸ್ವಾಮಿಗೆ ನೈವೇದ್ಯ ಮಾಡಿ ಆ ಗುಡ್ಡದಲ್ಲಿರುವ ಕಲ್ಲುಗಳನ್ನು ತಮ್ಮ ಮನೆಗೆ ತರುವರು. ಅವುಗಳನ್ನು ತಮ್ಮ ಮನೆಗಳ ಗದ್ದುಗೆಯ ಮೇಲಿಟ್ಟು 'ಕರುಗಳೆಂಬ' ಭಾವನೆಯಿಂದ, ಭಕ್ತಿಯಿಂದ ಆರಾಧಿಸುವರು. ಏಕೆಂದರೆ ಶ್ರೀ ಮರುಳಸಿದ್ಧರು ಚಿಕ್ಕವರಿದ್ದಾಗ ದನಗಳನ್ನು ಇಲ್ಲಿ ಕಾಯುತ್ತಿದ್ದರು. ಆ ದನಗಳನ್ನು ಈ ಗುಡ್ಡಕ್ಕೆ ನಿತ್ಯ ಹೊಡೆದುಕೊಂಡು ಬಂದು ಅಲ್ಲಿ ಮೇಯಿಸಿದ ಬಳಿಕ ಸಾಯಂಕಾಲ ಅವುಗಳ ಕಾಲುಗಳನ್ನು ಕಟ್ಟಿ ಕೆಳಗಡೆ ಬಿಡುತ್ತಿದ್ದರೆಂಬ ಐತಿಹ್ಯವಿದೆ.

೬. ಸಾಸ್ವಿಹಳ್ಳಿ ಪಾದಗಟ್ಟೆ

ಉಜ್ಜಯಿನಿ ಗ್ರಾಮದಿಂದ ಪಶ್ಚಿಮಕ್ಕೆ ಸುಮಾರು ಮೂರು ಕಿ.ಮೀ. ಅಂತರದ ಸಾಸ್ವಿಹಳ್ಳಿ ದಾರಿಯಲ್ಲಿ ಹಾಗೂ ಕಾಳಾಪುರದ ಹತ್ತಿರ ಒಂದು ಹೊಲದಲ್ಲಿ ಈ ಪಾದಗಟ್ಟೆಯಿದೆ. ಈ ಪಾದಗಟ್ಟೆಗೂ ಇತ್ತೀಚೆಗೆ ಬಣ್ಣವನ್ನು ಹಚ್ಚಲಾಗಿದೆ. ಕರುವಿನ ಕಲ್ಲುಗುಡ್ಡವು ಈ ಪಾದಗಟ್ಟೆಗೂ ಅತೀ ಸಮೀಪವಿದೆ.

೭. ಹಾರಕನಾಳು ಪಾದಗಟ್ಟೆ

ಉಜ್ಜಯಿನಿ ಉತ್ತರಕ್ಕೆ ಸುಮಾರು ಐದು ಕಿ.ಮೀ. ದೂರದಲ್ಲಿ ಹಾರಕನಾಳು ಗ್ರಾಮವಿದ್ದು ಅದರ ಮಧ್ಯೆ ಈ ಪಾದಗಟ್ಟೆಯಿದೆ. ವಿಶೇಷವೆಂದರೆ ಈ ಪಾದಗಟ್ಟೆಯು ಈ ಗ್ರಾಮದಲ್ಲಿರುವುದು ಹಾಗೂ ಈ ಪಾದಗಟ್ಟೆಯ ರಚನೆಯು ಇನ್ನಿತರ ಪಾದಗಟ್ಟೆಯ ಮಂಟಪಗಳಿಗಿಂತ ಭಿನ್ನವಾಗಿದೆ. ಈ ಪಾದಗಟ್ಟೆಗೆ ಒಂದು ಮಂಟಪವಿದ್ದು ಅದಕ್ಕೆ ನಾಲ್ಕು ಕಡೆಗಳಲ್ಲಿ ಗೋಡೆಗಳಿಂದ ಮುಚ್ಚಿದೆ. ಈ ಗೋಡೆಗಳ ದಕ್ಷಿಣ ಮತ್ತು ಉತ್ತರಕ್ಕೆ ದ್ವಾರಗಳಿವೆ. ಈ ಕೋಣೆಯ ಒಳಗಡೆ ಮಧ್ಯದಲ್ಲಿ ಜೋಡು ಪಾದ ಪೀಠವಿದೆ. ದಕ್ಷಿಣ ಗೋಡೆಯ ಮೇಲೆ 'ಶ್ರೀ' ಎಂದು ಬರೆಯಲಾಗಿದೆ. ಈ ಸ್ಥಳದಲ್ಲೇ ಶ್ರೀ ಮರುಳಸಿದ್ಧರು ರಾಕ್ಷಸನನ್ನು ಸಂಹಾರ ಮಾಡಿದರೆಂದು ಹೇಳುವರು. ಇದರ ಪ್ರತೀಕವಾಗಿ ಈಗಲೂ ಗೋದಿಯಿಂದ ಮಾಡಿದ ಕಡುಬಿನಿಂದ ಕಾಳಗ ಮಾಡುವರು.

೮. ನಡುಮಾವಿನಹಳ್ಳಿ ಪಾದಗಟ್ಟೆ - ಭುಜಂಗ ಪಾದಗಟ್ಟೆ

ಹಾರಕನಾಳು ದಕ್ಷಿಣಕ್ಕೆ ಮತ್ತು ಉಜ್ಜಯಿನಿ ಉತ್ತರಕ್ಕೆ ಸುಮಾರು ಮೂರು ಕಿ.ಮೀ. ಅಂತರದಲ್ಲಿ ನಡುಮಾವಿನ ಹಳ್ಳಿಯಿದೆ. ಆ ಗ್ರಾಮದ ಪೂರ್ವಕ್ಕೆ ಒಂದು ಹೊಲದಲ್ಲಿ ಈ ಪಾದಗಟ್ಟೆಯಿದೆ. ಅದಕ್ಕೆ ಒಂದು ಸ್ತಂಭ ಮಂಟಪವಿದ್ದು ಅದೂ ಸಹ ದ್ರಾವಿಡ ಶೈಲಿಯಲ್ಲಿದೆ.


ಈ ಪಾದಗಟ್ಟೆಗೆ ಭುಂಜಗ ಪಾದವೆಂದೂ ಹೆಸರು. ಈ ಸ್ಥಳದಲ್ಲಿ ಭಕ್ತರು ದನ ಕರುಗಳನ್ನು ಕಟ್ಟಿ ಅಲ್ಲಿ ನಿಲ್ಲಿಸಿ ಅಡುಗೆ ಮಾಡಿಕೊಂಡು ಹೋಗುವರು. ಈ ಗ್ರಾಮದ ಹತ್ತಿರ ದಕ್ಷಿಣಕ್ಕೆ ಕಾಶಿಬಸವಣ್ಣನ ಹೆಸರಿನ ಗುಡಿಯಿದೆ. ಈ ಸ್ಥಳಕ್ಕೆ ಶ್ರೀಮರುಳಸಿದ್ಧ ಸ್ವಾಮಿಯು ಎಂಟು ಪಾದಗಟ್ಟೆಗಳಿಗೆ ಭೇಟಿ ಕೊಟ್ಟ ಬಳಿಕ ಅಲ್ಲಿ ಕಾಶಿಪೂಜಾರಿ ಧರಿಸಿದ ಕಾಶಿಯನ್ನು ಬಿಚ್ಚುವನು. ಶ್ರೀಸ್ವಾಮಿಯ ಪೂಜಾರಿಗಳು ತಮ್ಮ ಮನೆಯಿಂದ ಹೋಳಿಗೆ ಮಾಡಿಕೊಂಡು ಮಡಿ ಉಡಿಯಿಂದ ಅಲ್ಲಿಗೆ ನೈವೇದ್ಯವನ್ನು ತೆಗೆದುಕೊಂಡು ಬರುವರು. ನೈವೇದ್ಯದ ನಂತರ ಅಲ್ಲಿ ಎಲ್ಲರಿಗೂ ಪ್ರಸಾದವನ್ನು ನೀಡುವರು. ಈ ಪ್ರಸಾದದಲ್ಲಿ ಹೋಳಿಗಿ, ಅನ್ನ, ಉಂಡಿ ಇತ್ಯಾದಿ ಅಡಿಗೆ ಪದಾರ್ಥಗಳಿರುತ್ತವೆ.

೯. ಊರ ಮುಂದಿನ ಪಾದಗಟ್ಟೆ

ಉಜ್ಜಯಿನಿ ಪಟ್ಟಣದ ಉತ್ತರಕ್ಕೆ ಒಂದು ಪಾದಗಟ್ಟೆಯಿರುವುದು. ಈ ಪಾದಗಟ್ಟೆಗೂ ತೆರೆದ ಸ್ತಂಭಮಂಟಪವಿದೆ. ಇದೇ ಕೊನೆಯ ಪಾದಗಟ್ಟೆ. ಶ್ರೀ ಮರಳ ಸಿದ್ಧಸ್ವಾಮಿಯ ರಥೋತ್ಸವವು ಈ ಕಟ್ಟೆಯ ಹತ್ತಿರದಿಂದಲೇ ಆರಂಭವಾಗುತ್ತದೆ. ರಥೋತ್ಸವ ಸಂದರ್ಭದಲ್ಲಿ ಈ ಮಂಟಪದಲ್ಲಿ ಶ್ರೀ ಪೀಠದ ಜಗದ್ಗುರುಗಳು ಆಸೀನರಾಗಿ ಭಕ್ತರಿಗೆ ದರ್ಶನವನ್ನು ನೀಡುವರು.

ಶ್ರೀ ಮರುಳಸಿದ್ಧಸ್ವಾಮಿಯ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟು ಕೊಂಡು ಶ್ರೀಪೀಠದಿಂದ ಈ ಮೇಲೆ ಹೇಳಿದ ಒಂಬತ್ತು ಪಾದಗಟ್ಟೆಗಳಿಗೆ ಮೂರುದಿವಸ ಭಾರತ ಹುಣ್ಣಿಮೆಯಲ್ಲಿ ಪ್ರವಾಸವನ್ನು ಕೈಕೊಳ್ಳುವರು. ಈ ಪಾದಗಟ್ಟೆಗಳ ಶೈಲಿಯು ಸುಮಾರು ಎರಡು ಶತಮಾನದಷ್ಟು ಪ್ರಾಚೀನದ್ದಾಗಿವೆ. ಆದರೆ ಶ್ರೀ ಮರುಳಸಿದ್ಧ ದೇವಾಲಯದ ಎದುರಿನ ಮೊದಲನೇ ಪಾದಗಟ್ಟೆಗಿರುವ ಯತಿಯರ್ವರ ಸ್ತಂಭ ತೋರಣ ಸುಮಾರು ಎಂಟು ಶತಮಾನದಷ್ಟು ಪ್ರಾಚೀನ. ಈ ಪಾದಗಟ್ಟೆಗಳ ಸ್ಥಳಗಳ ನಕಾಶೆಯನ್ನು ಕೊಡಲಾಗಿದೆ.

ಉಜ್ಜಯಿನಿ ಶ್ರೀಸದ್ಧರ್ಮ ಪೀಠದ ಶ್ರೀಮರುಳಸಿದ್ಧ ಸ್ವಾಮಿಯ ಒಂಬತ್ತು ಪಾದಗಟ್ಟೆಗಳು



ಅಡಿ ಟಿಪ್ಪಣಿ


೧. ಉಜ್ಜಯಿನಿಯ ಶ್ರೀ ಯು. ಎಂ. ವೀರಯ್ಯನವರು ಮತ್ತು ಶ್ರೀ ರುದ್ರಪ್ಪ ಇವರು ಒದಗಿಸಿರುವರು.

೨. ಡಾ.ಎಂ.ಶಿವಮೂರ್ತಿ; ೧೯೯೯, 'ಶ್ರೀಮದ್ ಉಜ್ಜಯಿನಿ ಸದ್ಧರ್ಮ ಸಿಂಹಾಸನ ಪೀಠ ಹಿನ್ನೆಲೆ ಮತ್ತು ಕಾರ್ಯ ಚಟುವಟಿಕೆಗಳು', **ಗುರುಕಾರುಣ್ಯ**, ಪು. ೪೦-೪೧, ಬೆಂಗಳೂರು.



೫೩. ಭಕ್ತರಿಂದ
ಶ್ರೀ ಜ. ಮರುಳಸಿದ್ಧೇಶ್ವರ ಸ್ವಾಮಿಯ
ತೈಲಾಭಿಷೇಕದ ವೀಕ್ಷಣೆ.

೫೪. ಕುರುವಿನಕಲ್ಲು ಗುಡ್ಡ.





೬೫. ನಾಗೇನಹಳ್ಳಿಯಲ್ಲಿ
ಖಂಡುಗ ಬಳೆಗಳು
ಹುಗಿದ ನೆಲೆ.




೬೬. ನಾಗೇನಹಳ್ಳಿಯಲ್ಲಿ
ಖಂಡುಗ ಬಳೆಗಳು
ಹುಗಿದ ನೆಲೆ.



೬೨. ನಡುಮಾನಳ್ಳಿಯ ಶ್ರೀ ಜ.
ಮರುಳಸಿದ್ಧೇಶ್ವರ ಸ್ವಾಮಿಯ ಪಾದಗಟ್ಟೆ.



೬೩. ಕಾಶಿ ಬಸವಣ್ಣನ ಗುಡಿ
(ನಡುವಾನಳ್ಳಿ-ಉಜ್ಜಯಿನಿ ಮಧ್ಯ).




೭೦. ಉಜ್ಜಯಿನಿ
ಶ್ರೀಪೀಠದ
ನ್ಯಾಯಾಲಯ.



೬೭.
ಲಿಂ॥ ಶ್ರೀ
ಐ.ಎಸ್.ಎಂ.
ಬಸಯ್ಯನವರು.



೬೮.
ಲಿಂ॥ ಶ್ರೀ
ಪ್ಯಾಟಿ
ಜೆ.ಎಚ್.ಎಂ.
ತಿಪ್ಪೇಸ್ವಾಮಿ.



೬೯. ಲಿಂ॥ ಶ್ರೀ ಗುರುಸಿದ್ಧ
ಶಾಸ್ತ್ರಿಗಳು.



೫೫. ಶ್ರೀ ಜ. ಮರುಳಸಿದ್ಧೇಶ್ವರ ದೇವಾಲಯದ ಮುಂದಿನ ಮೊದಲನೆಯ ಪಾದಗಟ್ಟೆ (ಮಕರ ತೋರಣದ ಕೆಳಗಡೆ).



೬೪. ಉಜ್ಜಯಿನಿ ಗ್ರಾಮದ ಪಾದಗಟ್ಟೆ.



೫೬. ಮಾಚೇನಹಳ್ಳಿಯ ಶ್ರೀ ಜ. ಮರುಳಸಿದ್ಧೇಶ್ವರ ಸ್ವಾಮಿಯ ಪಾದಗಟ್ಟೆ.



೫೭. ಬೆಳದೇರಿಯ ಶ್ರೀ ಜ. ಮರುಳಸಿದ್ಧೇಶ್ವರ ಸ್ವಾಮಿಯ ಪಾದಗಟ್ಟೆ.



೫೮. ಬೆನಕನಹಳ್ಳಿಯ ಶ್ರೀ ಜ.
ಮರುಳಸಿದ್ಧೇಶ್ವರ ಸ್ವಾಮಿಯ ಪಾದಗಟ್ಟಿ.



೫೯. ಸೊಕ್ಕಿಯ ಶ್ರೀ ಜ. ಮರುಳಸಿದ್ಧೇಶ್ವರ
ಸ್ವಾಮಿಯ ಪಾದಗಟ್ಟಿ.



೬೦. ಸಾಸ್ವೆಹಳ್ಳಿಯ ಶ್ರೀ ಜ.
ಮರುಳಸಿದ್ಧೇಶ್ವರ ಸ್ವಾಮಿಯ ಪಾದಗಟ್ಟಿ.



೬೧. ಹಾರಕನಾಳಿನಲ್ಲಿರುವ ಶ್ರೀ ಜ.
ಮರುಳಸಿದ್ಧೇಶ್ವರ ಸ್ವಾಮಿಯ ಪಾದಗಟ್ಟಿ.

ಶ್ರೀ ಪೀಠದ ಸಿಬ್ಬಂದಿ-ಆಯಗಾರರು

ಭಾರತೀಯ ಸಾಂಸ್ಕೃತಿಕ ಚರಿತ್ರೆಯಲ್ಲಿ ಪ್ರತಿಯೊಂದು ಮತದವರ ಸಾಮಾಜಿಕ- ಧಾರ್ಮಿಕ- ಆರ್ಥಿಕ ವ್ಯವಸ್ಥೆಗಳಲ್ಲಿ ವಿವಿಧ ರೀತಿಯ ಸಿಬ್ಬಂದಿ ಮತ್ತು ಆಯಗಾರರ ಸೇವೆಯನ್ನು ಸಲ್ಲಿಸುವರು. ಈ ರೀತಿಯ ನಿದರ್ಶನವು ಉಜ್ಜಯಿನಿ ಸದ್ಧರ್ಮ ಪೀಠದಲ್ಲೂ ಇದೆ.

ಶ್ರೀಪೀಠದಲ್ಲಿ ಈ ಮೊದಲು ಸುಮಾರು ೨೫೦ ಸಿಬ್ಬಂದಿ ಸೇವೆ ಸಲ್ಲಿಸುತ್ತಿದ್ದರು. ಲಿಂ॥ ಪರಮಪೂಜ್ಯ ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಕಾಲದಲ್ಲಿ ಅತಿ ಹೆಚ್ಚಿನ ಸಿಬ್ಬಂದಿ ವರ್ಗ ಶ್ರೀಪೀಠದಲ್ಲಿತ್ತು. ಅದರಲ್ಲಿ ಶ್ರೀಪೀಠಕ್ಕೆ ಹದಿನೆಂಟು ಮಂದಿ ಆಯಗಾರರಿದ್ದು ಅವರ ಪಟ್ಟಿಯನ್ನು ಈ ಅಧ್ಯಾಯದ ಅಂತ್ಯದಲ್ಲಿ ನೀಡಲಾಗಿದೆ. ಶ್ರೀಪೀಠದಲ್ಲಿ ಬೋವಿಯರು, ಬಿಲ್ಲೆ ಜವಾನರು-೧೨, ಫೌಜುದಾರರು-೨, ಚಡಿಯವರು-೮, ಪಂಡಿತರು-೪, ವೇದಘೋಷಕರು-೪, ಅಂಗರಕ್ಷಕರು-೪, ಇತರ ಸಿಬ್ಬಂದಿ-೪೦ ಇದ್ದರೆಂದು ಮೈಸೂರು ಸೀಮೆಯ ಮುಜರಾಯಿ ಕಮೀಶನರ್ ಇವರ ೧೯೨೫ರ ಪತ್ರದಲ್ಲಿ ಹೇಳಲಾಗಿದೆ. ಅಲ್ಲದೆ ಸರ್ವಾಧಿಕಾರಿಗಳು, ಕಾರಭಾರಿಗಳು, ನ್ಯಾಯಾಧೀಶರು, ಆಸ್ಥಾನ ವಿದ್ವಾಂಸರು, ಶಿವಪೂಜಾಮರಿಗಳು, ಪಟ್ಟದ ದೇವರು, ಮುನ್ಷಿಗಳು, ವಕೀಲರು, ಕಟ್ಟಡಗಳ ನಿರ್ಮಾಣದ ಕಾರಭಾರಿ, ಆನೆ-ಒಂಟೆಗಳ ಮಾಹುತರು, ಬಾಬುದಾರರು, ಜಂಗಮರು, ಪೂಜಾರಿಗಳು, ತಳವಾರರು, ಕಮ್ಮಾರರು, ಮಡಿವಾಳರು, ಹರಿಜನರು, ಚಲವಾದಿಗಳು, ವ್ಯವಸಾಯ ನೋಡಿಕೊಳ್ಳುವವರು, ಗೋಶಾಲೆ-ಪಾಕಶಾಲೆ ನೋಡಿಕೊಳ್ಳುವವರು ಮುಂತಾದವರು ಅಲ್ಲಿದ್ದರು. ಶ್ರೀಪೀಠದ ಸಿಬ್ಬಂದಿ ಮತ್ತು ಅವರ ಕಾರ್ಯಗಳ ಸ್ಥೂಲ ವಿವರವನ್ನು ಇಲ್ಲಿ ಒದಗಿಸಲಾಗಿದೆ.[೨]

ಸರ್ವಾಧಿಕಾರಿಗಳು ಮತ್ತು ಕಾರಭಾರಿಗಳು

ಶ್ರೀಸಿದ್ಧಲಿಂಗ ಜಗದ್ಗುರುಗಳವರ ಕಾಲಾವಧಿಯಲ್ಲಿ ರಾಯದುರ್ಗಮಠದ ಶ್ರೀ ಮುರುಗೇಂದ್ರಯ್ಯನವರು ಸರ್ವಾಧಿಕಾರಿಗಳಾಗಿದ್ದರು. ಅವರಿಗೆ ''ನೀನು, ತಾನೆಂದು ನಡೆದಾಡುವ ಹಕ್ಕನ್ನು'' ನೀಡಲಾಗಿತ್ತು. ಶ್ರೀ ಪೀಠಕ್ಕೆ ಅನೇಕರು ಕಾರಭಾರಿಗಳಾಗಿದ್ದರು. ಅವರಲ್ಲಿ ಹೊಸಕೆರೆಯ ಶ್ರೀಟಿ.ಎಂ.ಸಿದ್ಧಯ್ಯನವರು,

ಅಗ್ರಹಾರಮಠದ ಶ್ರೀ ಸಿದ್ಧಲಿಂಗಯ್ಯನವರು ಮತ್ತು ಶ್ರೀ ಐ.ಹೆಚ್.ಎಂ. ಬಸಯ್ಯನವರು ***(ಚಿತ್ರ, ಸಂ. ೬೭)*** ಪ್ರಮುಖರು. ಮುರುಗೇಂದ್ರಯ್ಯನವರು ರಾಯದುರ್ಗ ಹಿರೇಮಠದವರು. ಅವರು ಶ್ರೀಸಿದ್ಧಲಿಂಗ ಜಗದ್ಗುರುಗಳ ಕಾರಿನ ಚಾಲಕರಾಗಿಯೂ ಸೇವೆಗೈದರು. ಹಾಗೂ ೧೫ ವರ್ಷ ಕಾರಭಾರಿ ಯಾಗಿಯೂ ಸೇವೆಸಲ್ಲಿಸಿದರು. ಅವರು ಶ್ರೀಸಿದ್ಧೇಶ್ವರಸ್ವಾಮಿಗಳಿಗೆ ಪಟ್ಟವಾದ ಒಂದು ವರ್ಷದ ನಂತರ, ಆಡಳಿತ ವ್ಯವಹಾರದಲ್ಲಿ ಭಿನ್ನಾಭಿಪ್ರಾಯ ಉಂಟಾದವು. ವಾಹನಗಳ ಸೌಕರ್ಯ ಆರಂಭವಾದವು. ಇದರಿಂದ ಶ್ರೀಪೀಠವನ್ನು ತ್ಯಜಿಸಿ ಮೊರಬಕ್ಕೆ ಮರಳಿದರು.

ಶ್ರೀಪೀಠದಲ್ಲಿ ಜಗದ್ಗುರುಗಳಾಗಿದ್ದ ಶ್ರೀಚನ್ನಬಸವಸ್ವಾಮಿಗಳವರ ಕಾಲಾವಧಿಯಲ್ಲಿ ಗೊಂಗಡಿ ಶ್ರೀ ಯು.ಎಂ. ವೀರಭದ್ರಯ್ಯನವರು ಕಾರಭಾರಿಗಳಾಗಿದ್ದರು. ಶ್ರೀ ಸಿದ್ಧಲಿಂಗ ಜಗದ್ಗುರುಗಳ ಕಾಲಾವಧಿಯಲ್ಲಿ ನಾಗರಕಟ್ಟಿ ರಾಚೋಟಯ್ಯನವರು ಶ್ರೀಪೀಠಕ್ಕೆ ಕಾರಭಾರಿಗಳಾಗಿದ್ದರು ಮತ್ತು ಕೆಲಕಾಲ ಹಿರೇಹಡಗಲಿಯ ವೇ|| ವಿರೂಪಾಕ್ಷಶಾಸ್ತ್ರಿಗಳು ಕಾರಭಾರಿಯಾಗಿ ಸೇವೆಯನ್ನು ಸಲ್ಲಿಸಿದರು. ಶ್ರೀ ಸಿದ್ಧೇಶ್ವರಜಗದ್ಗುರುಗಳ ಕಾಲಾವಧಿಯಲ್ಲಿ ೧೯೬೭ರವರೆಗೆ ಶ್ರೀ ಐ.ಹೆಚ್.ಎಂ. ಬಸಯ್ಯನವರು ಕಾರಭಾರಿಗಳಾಗಿ ಸೇವೆ ಸಲ್ಲಿಸಿದರು. ಅವರ ಕಾಲಾವಧಿಯಿಂದ ಇತ್ತೀಚಿನವರೆಗೂ ಶ್ರೀಮಲ್ಲಪ್ಪನವರು ಮ್ಯಾನೇಜರ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಅವರ ಪುತ್ರ ಶ್ರೀಕೊಟ್ರೇಶಿ ಮತ್ತು ಶ್ರೀಆರ್.ಎಂ. ಗುರುಬಸವರಾಜ ಗುಮಾಸ್ತರಾಗಿದ್ದರು. ಈಗ ಶ್ರೀ ವೀರೇಶ ಮತ್ತು ಶ್ರೀ ರಾಜಶೇಖರ ಇವರು ಶ್ರೀಪೀಠದಲ್ಲಿ ಗುಮಾಸ್ತರಾಗಿ ಸೇವೆ ಸಲ್ಲಿಸುತ್ತಿರುವರು. ಶ್ರೀ ಮಲ್ಲಪ್ಪನವರ ಸ್ಥಾನದಲ್ಲಿ ಈಗ ಮತ್ತೊಬ್ಬರು ಸೇವೆ ಸಲ್ಲಿಸುತ್ತಿರುವರು.

ನ್ಯಾಯಾಧೀಶರು ಮತ್ತು ವಕೀಲರು

ಶ್ರೀಪೀಠದಲ್ಲಿರುವ ನ್ಯಾಯಾಲಯದ ವ್ಯಾಜ್ಯಗಳನ್ನು ಇಬ್ಬರು ವಕೀಲರಾದ ಶ್ರೀ ಐರಣಿ ಹಿರೇಮಠದ ಬಸಯ್ಯನವರು ಮತ್ತು ಉಜ್ಜಯಿನಿಯ ಶ್ರೀ ಜಿ.ಹೆಚ್.ಎಂ. ತಿಪ್ಪೇಸ್ವಾಮಿಯವರು ನಿರ್ವಹಿಸುತ್ತಿದ್ದರು. ***(ಚಿತ್ರ, ಸಂ. ೬೮)*** ಶ್ರೀಸಿದ್ಧಲಿಂಗ ಜಗದ್ಗುರುಗಳ ಕಾಲಾವಧಿಯಲ್ಲಿ ಬಂಗಿ(ಬೃಂಗಿ)ಮಠದ ಶ್ರೀಗುರುಸಿದ್ಧಶಾಸ್ತ್ರಿಗಳು ***(ಚಿತ್ರ, ಸಂ. ೬೯)*** ಮತ್ತು ಶ್ರೀ ಟಿ.ಹೆಚ್.ಎಂ.ಚನ್ನವೀರಸ್ವಾಮಿಗಳು ಈ ನ್ಯಾಯಾಲಯದ ನ್ಯಾಯಾಧೀಶರಾಗಿ ಸೇವೆ ಸಲ್ಲಿಸದರು. ಶ್ರೀಪೀಠದ ಜಗದ್ಗುರುಗಳು ಈ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು. ವ್ಯಾಜ್ಯಗಳ ಬಗ್ಗೆ ವಕೀಲರ ವಾದವನ್ನು ಆಲಿಸಿ ಅಂತಿಮ ತೀರ್ಪು ನೀಡುವ ಜವಾಬ್ದಾರಿ ಮಾತ್ರ ಮುಖ್ಯ ನ್ಯಾಯಾಧೀಶರೆನಿಸಿದ ಶ್ರೀ ಜಗದ್ಗುರುಗಳಿಗೆ ಸೇರಿತ್ತು. ಅನೇಕ ಕಡೆಗಳ ಮಠದಯ್ಯನವರ ವ್ಯಾಜ್ಯಗಳು ಶ್ರೀಪೀಠದ ನ್ಯಾಯಾಲಯದಲ್ಲೇ ನಿರ್ಣಯಗೊಂಡಿವೆ.

ಆಸ್ಥಾನ ಪಂಡಿತರು

ಶ್ರೀ ಸಿದ್ಧಲಿಂಗಸ್ವಾಮಿಗಳವರ ಕಾಲದಲ್ಲಿ ಮೂವರು ಆಸ್ಥಾನದ ವಿದ್ವಾಂಸರಿದ್ದರು. ಪಂಡಿತ ಶ್ರೀ ಕಾಶಿನಾಥ ಶಾಸ್ತ್ರಿಗಳು (ಬೆಳಗಾಂ ಜಿಲ್ಲೆಯ ನಾಗನೂರ ಬೃಹನ್ಮಠದ ಅಧ್ಯಕ್ಷರು), ಉಜ್ಜಯಿನಿ ಶ್ರೀ ಜೆ. ಎಂ. ಶಂಕರಶಾಸ್ತ್ರಿಗಳು ಮತ್ತು ಉಮಚಿಗಿ ಶ್ರೀ ಶಂಕರಶಾಸ್ತ್ರಿಗಳವರು ಶ್ರೀಪೀಠಕ್ಕೆ ಅಮೋಘ ಸೇವೆಯನ್ನು ಸಲ್ಲಿಸಿದರು.

ಪಟ್ಟದಯ್ಯನವರು

ಶ್ರೀ ಸಿದ್ಧಲಿಂಗಸ್ವಾಮಿಗಳ ಕಾಲದಲ್ಲಿ ಶ್ರೀ ಕೆಂಪಯ್ಯ ಪಟ್ಟದ ದೇವರು ಶ್ರೀಪೀಠದ ಪಟ್ಟದಯ್ಯರಾಗಿದ್ದರು. ಶ್ರೀಸಿದ್ಧೇಶ್ವರ ಜಗದ್ಗುರುಗಳ ಕಾಲದಲ್ಲಿ ಶ್ರೀ ಕಾಮನಾಳ ಪಟ್ಟದಯ್ಯನವರಿದ್ದರು. ಶ್ರೀಜಗದ್ಗುರುಗಳ ಅನುಪಸ್ಥಿತಿಯಲ್ಲಿ ಶ್ರೀಪೀಠದ ಸಕಲ ದೇವತಾಕಾರ್ಯಗಳನ್ನು ಪಟ್ಟದಯ್ಯನವರ ಸಮ್ಮುಖದಲ್ಲಿ ನೆರವೇರಿಸಲಾಗುತ್ತಿತ್ತು.

ಮಂಗಲ ಕಾರ್ಯ

ವೀರಶೈವ ಸಮಾಜದ ಭಕ್ತರ ಮನೆಯಲ್ಲಿ ಲಗ್ನ ಇತ್ಯಾದಿ ಮಂಗಲ ಕಾರ್ಯಗಳು ಜರುಗುವ ಮುನ್ನ ಶ್ರೀಪೀಠದ ಜಗದ್ಗುರುಗಳಿಂದ ಆಶೀರ್ವಾದ ಮತ್ತು ಮಂತ್ರಾಕ್ಷತೆಗಳನ್ನು ಪಡೆದುಕೊಂಡು ಹೋಗುವರು. ಮದುವೆ ಸಂದರ್ಭದಲ್ಲಿ ಪೂಜ್ಯ ಜಗದ್ಗುರುಗಳಿಂದ ಪಡೆದ ಮಂತ್ರಾಕ್ಷತೆಗಳನ್ನು ಹಾಕಿ ಅಲ್ಲಿ ಪಂಚಕಳಸಗಳನ್ನು ಹೂಡಿ ಪಂಚಾಚಾರ್ಯರ ಐದು ನಿಶಾನೆಗಳನ್ನು ನಿಲ್ಲಿಸುವರು. ಜೊತೆಯಲ್ಲಿ ಅಕ್ಕಿ ಮತ್ತು ಪಂಚಪೀಠಸ್ಥರಿಗೆ ೫ ಪರಡಿಗಳನ್ನು ಕಟ್ಟಿ ಇಡುವರು.

ಕಟ್ಟಡಗಳ ನಿರ್ಮಾಣದ ಕಾರಬಾರಿ

ಶ್ರೀ ಸಿದ್ಧಲಿಂಗ ಜಗದ್ಗುರುಗಳವರ ಕಾಲದಲ್ಲಿ ಬಳ್ಳಾರಿಯ ಶ್ರೀ ಕೆಂಪಯ್ಯನವರು ಶ್ರೀಪೀಠದ ಕಟ್ಟಡಗಳ ನಿರ್ಮಾಣದ ಕಾರಭಾರಿಗಳಾಗಿದ್ದರು. ಈಗಿನ ಶ್ರೀ ೧೦೦೮ ಜಗದ್ಗುರುಮರುಳಸಿದ್ಧ ರಾಜದೇಶೀಕೇಂದ್ರಶಿವಾಚಾರ್ಯ ಮಹಾಸ್ವಾಮಿಗಳವರ ಮಾರ್ಗದರ್ಶನದಲ್ಲಿ ಶ್ರೀಪೀಠದ ಕಟ್ಟಡ ನಿರ್ಮಾಣದ ಸೇವೆಯನ್ನು ಶ್ರೀ ಆರ್.ಎಂ. ರಾಜಶೇಖರ ನೋಡಿಕೊಳ್ಳುತ್ತಿರುವನು. ಈಗ ಶ್ರೀಪೀಠದ ಹತ್ತಿರ ವಿಶ್ರಾಂತಿಗೃಹಗಳನ್ನು ಮತ್ತು ಇನ್ನಿತರ ಕಟ್ಟಡಗಳ ನಿರ್ಮಾಣದ ಕೆಲಸಗಳನ್ನು ಮಾಡುತ್ತಿರುವನು.

ಶಿವಪೂಜಾ ಮರಿ

ಶ್ರೀಪೀಠದ ಜಗದ್ಗುರುಗಳವರ ಶಿವಪೂಜಾಮರಿಗಳಾಗಿ ಅನೇಕರು ತುಂಬಾ ಶ್ರದ್ಧೆ ಮತ್ತು ಭಕ್ತಿಯಿಂದ ಸೇವೆ ಸಲ್ಲಿಸಿರುವರು. ಲಿಂ|| ಶ್ರೀ ಸಿದ್ಧಲಿಂಗ ಜಗದ್ಗುರುಗಳಿಗೆ ಸುಮಾರು ೨೫ ಶಿವಪೂಜಾ ಮರಿಗಳಿದ್ದರಂತೆ. ಶ್ರೀಕುರುಮನಳ್ಳಿ ಮಠದ ಟಿ.ಹೆಚ್.ಎಂ. ಶಾಂತವೀರಯ್ಯನವರು ಈ ಹಿಂದೆ ಜಗದ್ಗುರುಗಳ ಶಿವಪೂಜಾಮರಿಗಳಾಗಿ ಸೇವೆಗೈದರು. ಈಗಿನ ಜಗದ್ಗುರುಗಳಿಗೆ ಮೂವರು ಶಿವಪೂಜಾಮರಿಗಳಿದ್ದಾರೆ. ಅವರು ಶ್ರೀ ಪ್ರಕಾಶ್.ಯು.ಎಂ. ಶ್ರೀ ವಿಜಯಕುಮಾರ ನಿರಂತರವಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಮುನ್ಷಿ/ಪಾರುಪತ್ಯಗಾರರು

ಶ್ರೀಪೀಠದ ವರದಿ ಪತ್ರಗಳ ವಿಲೇವಾರಿ ಕೆಲಸವನ್ನು ಕಾಳಾಪುರದ ಶ್ರೀಗಡದಯ್ಯನವರು ನೋಡಿಕೊಳ್ಳುತ್ತಿದ್ದರು. ಅವರನ್ನು ಪಾರುಪತ್ಯಗಾರ/ಮುನ್ಷಿ ಎಂದು ಕರೆಯುತ್ತಿದ್ದರು. ಶ್ರೀಪೀಠದ ಪತ್ರಗಳ ರವಾನೆಯ ಕಾರ್ಯ, ಓಡಾಟಕ್ಕಾಗಿ ಶ್ರೀ ಗಡದಯ್ಯನವರಿಗೆ ಬಲಿಷ್ಠವಾದ ಆರು ಕುದುರೆಗಳನ್ನು ಕೊಡಲಾಗಿತ್ತು. ಅವರು ಎತ್ತರ ದೇಹ ಮೈಕಟ್ಟುಳ್ಳವರಾಗಿದ್ದರು. ಅವರ ಗರ್ಜನೆಗೆ ಜನರು ಹೆದರುತ್ತಿದ್ದರು. ಅವರಿಗೆ ಇಬ್ಬರು ಪತ್ನಿಯರಿದ್ದರು. ಶ್ರೀ ಗಡದಯ್ಯನವರು ಶ್ರೀಪೀಠದಲ್ಲಿ ಸೇವೆಗೈದ ಶ್ರೀ ಗುರುಸಿದ್ಧಶಾಸ್ತ್ರಿಗಳವರ ಬೀಗರಾಗಿದ್ದರು.

ಜಟ್ಟಿಗಳು

ಶ್ರೀ ಪೀಠದ ಸನ್ನಿಧಿಗಳು ಸಂಚರಿಸಲು ಮೊದಲು ವಾಹನಗಳ ವ್ಯವಸ್ಥೆ ಇಲ್ಲದ ಕಾರಣ ಬೆಳ್ಳಿಯ ದಮಣಿ ಮತ್ತು ಮ್ಯಾನಗಳನ್ನು ಬಳಸುತ್ತಿದ್ದರು. ಸಂಚಾರದಲ್ಲಿ ದಮಣಿಗೆ ಎತ್ತುಗಳನ್ನು ಕಟ್ಟುತ್ತಿದ್ದರು. ಕೆಲವೊಮ್ಮೆ ಶ್ರೀಸನ್ನಿಧಿಯವರನ್ನು ಶ್ರೀಮಠದ ಮ್ಯಾನದಲ್ಲಿ ಕೂಡಿಸಿಕೊಂಡು ಸಂಚಾರ ಮಾಡುತ್ತಿದ್ದರು. ಈ ಮ್ಯಾನಗಳನ್ನು ಹೊರಲಿಕ್ಕೆ ವಾಲ್ಮೀಕಿ ಜಟ್ಟಿಗಳಿದ್ದರು. ಸ್ಥಳೀಯ ಭೀಮಪ್ಪ ನಾಯಕ, ರಂಗಪ್ಪ ನಾಯಕ, ಓಬಪ್ಪ ನಾಯಕ ಮುಂತಾದವರು ಮೇಣೆ ಹೊರುವ ಮನೆತನಕ್ಕೆ ಸೇರಿದವರಾಗಿದ್ದರು. ಈಗ ವಾಹನಗಳ ಬಳಕೆ ಇರುವುದರಿಂದ ಈ ಎರಡೂ ಉಪಕರಣಗಳ ಬಳಕೆಯು ಸಂಪೂರ್ಣವಾಗಿ ನಿಂತು ಹೋಗಿದೆ.

ಮಾಹುತರು

ಶ್ರೀಸಿದ್ಧಲಿಂಗ ಜಗದ್ಗುರುಗಳ ಕಾಲಾವಧಿಯಲ್ಲಿ ಎರಡು ಆನೆಗಳು, ಒಂಟೆಗಳು, ಕುದುರೆಗಳು ಇದ್ದವು. ಶ್ರೀಪೀಠದ ಆನೆಗಳಿಗೆ ಸಿದ್ಧ ಮತ್ತು ಸಿದ್ಧಿ ಎಂಬ ಹೆಸರುಗಳನ್ನು ಕೊಡಲಾಗಿತ್ತು. ಶ್ರೀಗಳ ಸಂಚಾರದಲ್ಲಿ ಇವುಗಳು

ಜತೆಯಲ್ಲಿರುತ್ತಿದ್ದವು. ಒಮ್ಮೆ ಈ ಆನೆಗಳು ಕತ್ತೆಬೆನ್ನೂರಿಗೆ ಹೋದಾಗ ಗಂಡಾನೆಯಾದ ಸಿದ್ಧ ವರ್ಗದಲ್ಲಿ ಕಾಲನ್ನು ಸಿಗಿಸಿಕೊಂಡು ಸಾವನ್ನಪ್ಪಿತು. ಆ ಆನೆಯನ್ನು ಅಲ್ಲಿಯೇ ಹುಗಿಯಲಾಯಿತು. ಇದರಿಂದ ಈ ಗ್ರಾಮದಲ್ಲಿ ಈಗ ಆನೆಯಷ್ಟು ಸಂಪತ್ತಿದೆ ಎಂದು ಹೇಳುತ್ತಾರೆ.

ಶ್ರೀಪೀಠದ ಆನೆ, ಒಂಟೆಗಳನ್ನು ಸವಾರಿ ಮಾಡಲು ಮುಸ್ಲಿಂ ಜನಾಂಗದ ಮಾವುತರನ್ನು ನೇಮಿಸುವರು. ಮಾವುತ ಶ್ರೀ ಸೈಫುಲ್ಲಾ ಎಂಬುವನಿಗೆ ಶ್ರೀಪೀಠವು ಮನೆಕಟ್ಟಿಕೊಳ್ಳಲು ನಿವೇಶನವನ್ನು ನೀಡಿದೆ.

ಮಠದಯ್ಯನವರು : ಶ್ರೀ ಪೀಠದ ಮತ್ತು ಶ್ರೀ ಪೀಠಕ್ಕೆ ಸೇರಿದ ಒಂಭತ್ತು ಪಾದದ ಪಳಿಗಳ ಎಲ್ಲಾ ಮಂಗಳ ಕಾರ್ಯಗಳನ್ನಾಗಲಿ, ಯಾವ ಅಶುಭ ಕಾರ್ಯಗಳನ್ನಾಗಲಿ ಈ ಊರಿನ ಮಠದಯ್ಯನವರೇ ನಡೆಸಿಕೊಂಡು ಹೋಗುತ್ತಿರುವರು. ಶ್ರೀ ಪೀಠದಲ್ಲಿ ನಡೆಯುವ ಎಲ್ಲಾ ಮಂಗಳ ಕಾರ್ಯಗಳನ್ನು ಜಗದ್ಗುರುಗಳ ಅಪ್ಪಣೆಯ ಪ್ರಕಾರ ನಡೆಸುವರು. ಹಾಗೂ ಶ್ರೀ ಜಗದ್ಗುರುಗಳ ಅನುಪಸ್ಥಿತಿಯಲ್ಲೂ ಇವರೇ ಈ ಮಂಗಲಕಾರ್ಯಗಳನ್ನು ನಡೆಸುವರು. ಈ ಮಠದಯ್ಯನವರನ್ನು ಉಜ್ಜಯಿನಿ ಮಠದಯ್ಯನವರೆನ್ನುವರು. ಅವರು ಲಿ. ಗುರುಸಿದ್ದಯ್ಯ, ಲಿ. ಮರುಳಸಿದ್ದಯ್ಯ ಮತ್ತು ಲಿ ಪಾಲಕ್ಷಯ್ಯ ಈ ವಂಶದವರೇ ಪಾರಂಪರ್ಯವಾಗಿ ಈ ಮಂಗಲ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿರುವರು.

ವಸತಿ-ಪ್ರಸಾದ ಮಠಗಳು : ಶ್ರೀ ಪೀಠದ ಸದ್ಭಕ್ತರಿಗಾಗಿ ಈ ಊರಲ್ಲೇ ವಸತಿ ಮತ್ತು ಪ್ರಸಾದ ವ್ಯವಸ್ಥೆಗಾಗಿ ಚೌಕಿಮಠ ಮತ್ತು ಹಂಚಿನಮಠಗಳಿವೆ. ಶ್ರೀ ಪೀಠದ ಜಗದ್ಗುರುಗಳ ಅಪ್ಪಣೆಯ ಮೇರೆಗೆ (ಸೂರ್ಯ-ಚಂದ್ರರು ಇರುವತನಕ) ಈ ವ್ಯವಸ್ಥೆಯನ್ನು ಮಾಡಿಕೊಂಡು ಹೋಗಬೇಕು. ಚೌಕಿ ಮಠವೆಂದರೆ ನಾಲ್ಕು ದಿಕ್ಕುಗಳಿಂದ ಭಕ್ತರು ಬಂದು ಸೇರುವ ಸ್ಥಳ (ತೆಲುಗಿನಲ್ಲಿ ಮದರಾಸ ರಾಜ್ಯವಿದ್ದಾಗ ಇದಕ್ಕೆ ಛಾಠಾಸಾರನಿಮಿತ್ತಂ ಎಂದು ಕೊಡಲಾಗಿದೆ).

ಅರ್ಚಕರು : ಶ್ರೀ ಪೀಠದ ಮರುಳಸಿದ್ಧ ದೇವಾಲಯದ ದೇವರ ಪೂಜಾಕಾರ್ಯವನ್ನು ಅರ್ಚಕರು ನೋಡಿಕೊಳ್ಳುವರು. ಇವರು ಪ್ರತಿನಿತ್ಯ ಶ್ರೀ ಸ್ವಾಮಿಗೆ ನಾಲ್ಕು ಸಲ ಪೂಜೆ ಮಾಡುವರು. ಅರ್ಚಕರ ೩೦ ರಿಂದ ೪೦ ಮನೆಗಳು ಉಜ್ಜಯಿನಿ ಊರಲ್ಲಿವೆ. ಈ ಅರ್ಚಕರ ಮನೆತನದವರಿಗೆ ಬೆಳಕಟ್ಟೆರು, ಬಿಳೆಲೆರು, ಗೊಳೆಲರು, ಅಡ್ಡಲೆರು, ಮತ್ತಿಯಳ್ಳರು, ಕೋಣೇಲರು, ಅಲುಬೂರರು, ಬಡ್ಡಿಗಣ್ಣಿಯರು ಮತ್ತು ಬಂಗಾರೆರು, ಪಟ್ಟೆರು ಎಂಬ ಒಂಭತ್ತು ಮನೆತನಗಳಿವೆ. ಸರತಿ ಪ್ರಕಾರ ಎರಡು ವರ್ಷಕ್ಕೊಮ್ಮೆ ಒಂದೊಂದು ಮನೆತನದ ಈ ಅರ್ಚಕರು ಶ್ರೀ ಮರುಳಸಿದ್ದ ದೇವರ ಪೂಜೆಯ ಸೇವೆಯನ್ನು ಮಾಡುವರು. ಈ ಹಿಂದೆ ಕೆಲವು ಅರ್ಚಕರು ಶ್ರೀ ಪೀಠದ ಜಗದ್ಗುರುಗಳ ವಿರುದ್ಧ ವ್ಯಾಜ್ಯ ಮಾಡಿದರು. ಅದು ಅವರ ವಿರುದ್ಧವಾಯಿತು. ಮತ್ತು ಜಗದ್ಗುರುಗಳ ಪರ ತೀರ್ಪನ್ನು ನೀಡಲಾಯಿತು.

ಮಡಿವಾಳರು, ತಳವಾರರು, ಬಾರಿಕರು ಇತ್ಯಾದಿ : ಶ್ರೀ ಪೀಠದ ಸಕಲ ದೇವತಾ ಉತ್ಸವ ಕಾರ್ಯಕ್ಕೆ ಅನೇಕ ಆಯಗಾರರು ಸೇವೆಯನ್ನು ಸಲ್ಲಿಸುತ್ತಿರುವರು

ಶ್ರೀ ಸ್ವಾಮಿಗೆ ದೀವಟಿಗೆಯ ಹಾಜನ್ನು ಪಾಂಗಿಕರು ಹಿಡಿಯುವರು. ಶ್ರೀ ಪೀಠದ ಜಗದ್ಗುರುಗಳು ಮತ್ತು ಶ್ರೀ ಸ್ವಾಮಿಯ ಉತ್ಸವದಲ್ಲಿ ಮಡಿವಾಳರು ದಾರಿಯುದ್ದಕ್ಕೂ ಮಡಿಬಟ್ಟೆಯನ್ನು ಹಾಸುವರು. ಶ್ರೀ ಸ್ವಾಮಿಯ ಪೂಜಾರಾಧನೆಗೆ ಪತ್ರಿತರುವವರಿದ್ದು ಅವರನ್ನು **ಪತ್ರಿ ಮಾನೆವ್ವ** ಎನ್ನುವರು. ಇವರಿಗೂ ಶ್ರೀ ಪೀಠದಿಂದ ಇನಾಮು ಭೂಮಿಯನ್ನು ಕೊಡಲಾಗಿದೆ. ಶ್ರೀ ಮರುಳಸಿದ್ಧಸ್ವಾಮಿಯ ಉತ್ಸವ ಮೂರ್ತಿಗೆ ದೇವಕಾರ್ಯ ಮಾಡುವ ಸಂದರ್ಭದಲ್ಲಿ ಕಾಳಿ ಊದುವವರಿದ್ದಾರೆ. ಸ್ವಾಮಿಯ ಸಕಲ ಉತ್ಸವ ಸಂದರ್ಭಗಳಲ್ಲಿ ಚಲವಾದಿಗಳು ನಿರಂತರವಾಗಿ ವಾದ್ಯಮೇಳ ಮಾಡುವರು. ಅವರಿಗೆ ಶ್ರೀ ಪೀಠದಿಂದ ಭೂಮಿಯನ್ನು ಇನಾಮವಾಗಿ ಕೊಡಲಾಗಿದೆ.

ಹಡಪದವರು (ಕ್ಷೌರಿಕರು) : ಶ್ರೀಪೀಠದ ಜಗದ್ಗುರುಗಳಿಗೆ ಶ್ರೀ ಪೀಠದಲ್ಲಿ ನಡೆಯುವ ಚೌಲ ಕಾರ್ಯ ಮತ್ತು ವಟುಗಳ ಶಿವದೀಕ್ಷಾ ಕಾರ್ಯ ಇತ್ಯಾದಿ ಸಂದರ್ಭಗಳಲ್ಲಿ ಲಿಂಗಧಾರಿಗಳಾದ ಸ್ಥಳೀಯ ಹಡಪದ ಶ್ರೀ ಪತ್ರೆಪ್ಪನವರ ವಂಶಸ್ಥರು ಮಾತ್ರ ಕೂದಲನ್ನು ತೆಗೆಯುವ ಸೇವೆ ಮಾಡುವರು.

ಹರಿಜನರು : ಸದರೀ ಪಟ್ಟಣದ ಹರಿಜನ ಕೇರಿಯಲ್ಲಿ ೨೦ನೇ ಶತಮಾನದ ಒಂದು ಮರುಳಸಿದ್ಧನ ಕಿರುದೇವಾಲಯವಿದೆ. ಈ ಮರುಳಸಿದ್ಧ ದೇವರನ್ನು ಕೂಗಿಮಾರನ ಸಾಕುಮಗನೆಂದು ಹೇಳಲಾಗುತ್ತದೆ. ಆತನ ಹೆಸರಿನಿಂದಲೇ ಈ ದೇವಾಲಯ ಅಲ್ಲಿ ಹುಟ್ಟಿಕೊಂಡಿದೆಯಂತೆ! ಅದರಲ್ಲಿ ನಂದಿ ಮೇಲೆ ಕುಳಿತಿರುವ ಶಿವಪಾರ್ವತಿಯರ (ಮರುಳಸಿದ್ಧ-ಗೌರಮ್ಮ) ಕಂಚಿನ ವಿಗ್ರಹವಿದೆ. ಶ್ರೀ ಪೀಠದಿಂದ ದೀಕ್ಷೆ ಪಡೆದ ಒಬ್ಬ ಹರಿಜನ ವ್ಯಕ್ತಿ ಈ ದೇವಾಲಯದ ಶ್ರೀ ಮರುಳಸಿದ್ಧ ಸ್ವಾಮಿಯ ಪೂಜೆಯನ್ನು ನಿರ್ವಹಿಸುತ್ತಿದ್ದನು. ಆತನ ಮರಣಾನಂತರ ಈಗ ಯಾರೂ ಇಲ್ಲ. ಅವಶ್ಯವೆನಿಸಿದಾಗ ಅಲ್ಲಿಯ ಕುರುಬ ಜನಾಂಗದವರನ್ನೊಬ್ಬರನ್ನು ಕರೆಸಿ ಶ್ರೀ ಸ್ವಾಮಿಯ ಪೂಜೆಯನ್ನು ನಡೆಸುವುದಾಗಿ ಹೇಳುತ್ತಾರೆ.

ಶ್ರೀ ಪೀಠದ ಶ್ರೀ ಮರುಳಸಿದ್ಧಸ್ವಾಮಿಯ ರಥೋತ್ಸವ ಸಂದರ್ಭದಲ್ಲಿ ಶೃಂಗರಿಸಿದ ತೇರಿನ ಗಾಲಿಯೊಳಗೆ ಮೊದಲು ಎಣ್ಣೆಯನ್ನು ಹರಿಜನರು ಎರೆಯುವರು. ಅವರು ತೇರಿಗೆ ಏಣಿಯನ್ನು ಹಾಕಿದ ಬಳಿಕ ಪಾಲಕಿಯಲ್ಲಿ ಬಂದ ಸ್ವಾಮಿ ಉತ್ಸವ ಮೂರ್ತಿಯನ್ನು ಅರ್ಚಕರು ತೆಗೆದುಕೊಂಡು ತೇರಿನ ಮೇಲಕ್ಕೆ ಏರುವರು. ಈ ರಥವು ಚಲಿಸಲು ಅಥವಾ ಅದನ್ನು ನಿಲ್ಲಿಸಲು ಅವರು 'ಬಡ್ಡು' ಹಾಕುವರು. ಇಷ್ಟೇ ಅಲ್ಲ ಸದಾ ಶ್ರೀ ಪೀಠದ ಆವರಣದ ಸ್ವಚ್ಛತೆಯನ್ನು ಅವರೇ ನೋಡಿಕೊಳ್ಳುವರು.

ಸ್ವಾರಸ್ಯಕರ ಸಂಗತಿಯೆಂದರೆ ಶ್ರೀ ಸ್ವಾಮಿಯ ತೇರಿನ ಗಾಲಿಗಳಿಗೆ ಭಕ್ತರು ತೆಂಗಿನಕಾಯಿಗಳನ್ನು ಒಡೆಯುವರು. ತೇರಿನ ಒಂದು ಭಾಗದ ಗಾಲಿಗಳಿಗೆ ಒಡೆಯುವ ತೆಂಗಿನಕಾಯಿಗಳನ್ನು ಬಡಿಗೇರರು ಮತ್ತು ಇನ್ನೂ ನಾಲ್ಕರು ಆಯಗಾರರು ತೆಗೆದುಕೊಳ್ಳುವರು. ಇನ್ನೊಂದು ಭಾಗದ ಗಾಲಿಗಳಿಗೆ ಒಡೆಯುವ ತೆಂಗಿನಕಾಯಿಗಳನ್ನು ಹರಿಜನರು ತೆಗೆದುಕೊಳ್ಳುವರು.

ಇವರಿಗೆ ಶ್ರೀ ಪೀಠದಿಂದ ಮನೆಕಟ್ಟಿಕೊಳ್ಳಲು ಒಂದು ಎಕರೆ ಐದು ಸೆಂಟ್ಸ್ ಜಾಗವನ್ನು ನೀಡಲಾಗಿದೆ. ಈ ಹರಿಜನ ಹಟ್ಟಿಯಿಂದಲೇ ಶ್ರೀಪೀಠದ ಶುಭಕಾರ್ಯಗಳನ್ನು ನೋಡಿಕೊಳ್ಳಲು ಪ್ರತಿವರ್ಷ ಅವರಲ್ಲೇ ಒಬ್ಬ ಗೌಡನನ್ನು

ನೇಮಿಸುವರು. ಆತನ ಮುಂದಾಳತ್ವದಲ್ಲಿ ಈ ಶುಭ ಕಾರ್ಯಗಳು ನಡೆಯುವವು. ಸದರಿ ಗ್ರಾಮದಲ್ಲಿ ಸುಮಾರು ೬೭ ಹರಿಜನರ ಮನೆಗಳಿವೆ.

ಶ್ರೀ ಪೀಠದ ಉತ್ಸವ ಸಂದರ್ಭಗಳಲ್ಲಿ ಛತ್ರಿ ಹಿಡಿಯುವ, ಚಾಮರ ಬೀಸುವ, ಕಹಳೆ ಊದುವ ಮತ್ತು ಶ್ರೀ ಸ್ವಾಮಿಗೆ ಪರಾಕ್ ಜಯಕಾರ ಹೇಳಿ ಸೇವೆ ಸಲ್ಲಿಸುವ ಆಯಗಾರರೂ ಇದ್ದಾರೆ. ಈ ಸಂದರ್ಭಗಳಲ್ಲಿ ಅವರಿಗೆ ಶ್ರೀಪೀಠದಿಂದ ಎಣ್ಣೆಯನ್ನು ಹಂಚುವರು.

ಬಡಿಗ, ಕಮ್ಮಾರ ಮತ್ತು ಕುಂಬಾರರು

ಶ್ರೀಪೀಠದ ತೇರು, ಪಲ್ಲಕ್ಕಿ, ಕೃಷಿ ಇತ್ಯಾದಿಗಳಿಗೆ ಸಂಬಂಧಿಸಿದ ಕಟ್ಟಿಗೆಯ ಕೆಲಸಗಳನ್ನು ಅಲ್ಲಿಯ ಐದು ಜನ ಬಡಿಗೇರರು ಮಾಡುವರು. ಕಬ್ಬಿಣದ ಉಪಕರಣಗಳನ್ನು ಕಮ್ಮಾರರು ನಿರ್ವಹಿಸುವರು. ಶ್ರೀಪೀಠದ ಕಾರ್ಯಗಳಿಗೆ ಬೇಕಾಗುವ ಗಡಿಗೆ- ಮಡಿಕೆಗಳನ್ನು ನಡುಮಾವಿನಹಳ್ಳಿ ಕುಂಬಾರರು ಒದಗಿಸುವರು.

ಬಿಲ್ಲೆ ಜವಾನರು

ಜಾತ್ರೆಯ ಸಂದರ್ಭದಲ್ಲಿ ಶ್ರೀಪೀಠದ ೨೦ ಮಂದಿ ಬಿಲ್ಲೆ ಜವಾನರು ಸೇವೆ ಸಲ್ಲಿಸುವರು.

ಜ್ಯೋತಿಷಿಗಳು

ಶ್ರೀಪೀಠದಲ್ಲಿ ಜ್ಯೋತಿಷ್ಯ, ಸಂಗೀತ, ಸಾಹಿತ್ಯ, ಸಂಸ್ಕೃತ ವಿಷಯಗಳ ಅಧ್ಯಾಪಕರನ್ನು ಮತ್ತು ಪಾಠ ಹೇಳುವವರನ್ನು ನೇಮಕ ಮಾಡಿಕೊಳ್ಳಲಾಗಿತ್ತು. ಅವರಿಗೂ ಶ್ರೀಪೀಠದ ವತಿಯಿಂದ ಇನಾಮುಗಳಿದ್ದವು.

ಶ್ರೀ ಮರುಳಸಿದ್ಧಸ್ವಾಮಿಗೆ ಸೇವೆಸಲ್ಲಿಸುತ್ತಿರುವ ಆಯಗಾರರು ಮತ್ತು ಸಿಬ್ಬಂದಿ ವರ್ಗದವರ ವಿವರ ಹೀಗಿದೆ :

ಅರ್ಚಕರು

೧. ಬೆಳಕಟ್ಟೆರು - ಶ್ರೀ ವೀರಭದ್ರಪ್ಪನ ವಂಶದವರು
೨. ಬಿಳಿಲೆರು - ಶ್ರೀ ಚೆಂಡ್ರಜ್ಜನ ಮನೆತನದವರು
೩. ಗೂಳೆಲರು - ಶ್ರೀ ರೇವಣಸಿದ್ಧಪ್ಪನ ಮನೆತನದವರು
೪. ಅಡ್ಡವೆರು - ಶ್ರೀ ಮರುಳಜ್ಜನ ಮನೆತನದವರು
೫. ಬಂಗಾರೆರು (ಪಟ್ಲೆರು) - ಶ್ರೀಗುರುಸಿದ್ಧನ ಮನೆತನದವರು
೬. ಮತ್ತೇಹಳ್ಳೇರು - ಶ್ರೀ ಚನ್ನವೀರಪ್ಪನ ಮನೆತನದವರು
೭. ಕೊಣೇಲರು - ಶ್ರೀ ರುದ್ರಪ್ಪನ ಮನೆತನದವರು

೮. ಆಲಬೂರರು	-	ಶ್ರೀ ಈರಪ್ಪನ ಮನೆತನದವರು
೯. ಬಡ್ಡಿಗಣರು	-	ಶ್ರೀ ಸಿದ್ಧಲಿಂಗಪ್ಪನ ಮನೆತನದವರು
[illegible]	-	ಶ್ರೀ [illegible] ಸಿದ್ಧಲಿಂಗಪ್ಪನವರ ಮನೆತನದವರು
ಛತ್ರಿ ತರುವವರು	-	
ಕಾಶಿ ಧರಿಸುವವರು	-	
[illegible]	-	ಶ್ರೀ [illegible] ಮನೆತನದವರು
[illegible]	-	ಶ್ರೀ [illegible] ಮನೆತನದವರು
ದೀವಟಿಗೆ ಹಿಡಿಯುವವರು		
ನಿಡುಮಾನಕ್ಕೆ ಕುಂಬಾರರು	-	
[illegible]	-	[illegible]
[illegible]		ಶ್ರೀ [illegible] ಮನೆತನದವರು
ಪತ್ತಾರರು (ಪಲ್ಲಕ್ಕಿ ಕಟ್ಟೆ ಬೆಳ್ಳಿ- [illegible])	-	ಶ್ರೀ ನೀಲಕಂಠಾಚಾರಿ ಮನೆತನದವರು
[illegible]	-	ಶ್ರೀ [illegible] ಮನೆತನದವರು
[illegible]		[illegible]
[illegible]		ಶ್ರೀ ಸಿದ್ಧಲಿಂಗಪ್ಪ [illegible]
[illegible]	-	[illegible]
[illegible]	-	[illegible]
[illegible]	-	ಶ್ರೀ [illegible]
ಬಾರಿಕರು ([illegible])	-	ಶ್ರೀ ಸಿದ್ಧಲಿಂಗಪ್ಪನ ಮನೆತನದವರು
[illegible]		
[illegible]		
[illegible]		
[illegible]		
ಪೇಟೆ ಮತ್ತು ಕೋಟೆ ಗಂಡಿಯುವವರು		
ಪೇಟೆ ಅಯ್ಯನವರು		
ಪಕೀರರು ಇತ್ಯಾದಿ		

ಆಯಗಾರರಿಗೆ ಇನಾಮ್

ಶ್ರೀ ಮಠದ ಎಲ್ಲಾ ಆಯಗಾರರಿಗೆ ಶ್ರೀ ಮಠದಿಂದ ಜಮೀನನ್ನು ಇನಾಮು ಕೊಡಲಾಗಿದೆ. ಅವರು ವಂಶಪರಂಪರೆಯಾಗಿ ಶ್ರೀಮಠಕ್ಕೆ ಸೇವೆ ಸಲ್ಲಿಸಿಕೊಂಡು

ಹೊಲಗಳು ಈ ಇನಾಮನ್ನು ಕೊಡಲಾಗಿದೆ. ಈ ಕುರಿತ ಕೆಲವು ಉದಾಹರಣೆಗಳು ಹೀಗಿವೆ.

೧. ಮಂಗಳಾರತಿ ಸೇವೆ ಮಾಡುವ ಶ್ರೀ ಕರಣಿ ಸಿದ್ಧಲಿಂಗಯ್ಯನವರಿಗೆ - ೧೯ ಎಕರೆ ೪೫ ಗುಂಟೆ

೨. ವಾದ್ಯದವರಿಗೆ - ೧೨ ಎಕರೆ

೩. ಪತ್ರಿತರುವವರಿಗೆ - ೦೪ ಎಕರೆ

೪. ಕಾಶಿಧರಿಸುವವರಿಗೆ - ೦೪ ಎಕರೆ

೫. ಪೂಜಾರಿಗೆ (ಅರ್ಚಕರಿಗೆ) - ೧೬ ಎಕರೆ ಈಗ ಅವರು ಈ ಭೂಮಿಯನ್ನು ಮಾರಿದ್ದಾರೆ.

೬. ಚೌಕಿಮಠ (ಭಕ್ತರಿಗೆ ಪ್ರಸಾದ ವ್ಯವಸ್ಥೆ) - ೬೦ ಎಕರೆ

೭. ಹಂಚಿನಮಠ (ಭಕ್ತರ ವಸತಿಗಾಗಿ) - ೫೦ ಎಕರೆ

೮. ಫಕೀರರಿಗೆ (ಶ್ರೀ ಪೀಠದ ಬೆಳ್ಳಿ ಛತ್ರಿ, ಚಾಮರ ಮುಂತಾದ ಸೇವೆ ಸಲ್ಲಿಸಲು) - ೫೦ ಎಕರೆ

೯. ಮಾವುತ (ಶ್ರೀಪೀಠದ ಆನೆಯನ್ನು ನೋಡಿಕೊಳ್ಳಲು)

೧೦. ಸ್ಥಳೀಯ ಆಂಜನೇಯ ಸ್ವಾಮಿಯ ಪೂಜಾರಿ ಶ್ರೀ ದಾಸಯ್ಯನಿಗೆ ಶ್ರೀಪೀಠದಿಂದ ಕಾಣಿಕೆಯನ್ನು ಕೊಡಲಾಗುತ್ತಿದೆ.

ಶ್ರೀಪೀಠದ ಶ್ರೀಮರುಳಸಿದ್ಧಸ್ವಾಮಿಯ ವಿವಿಧ ಉತ್ಸವಗಳಲ್ಲಿ ಸೇವೆ ಸಲ್ಲಿಸುವ ಈಗಿನ ಆಯಗಾರರಿಗೆ ನೀಡುವ ಎಣ್ಣೆ ಕಾಳಿನ ವಿವರ ಹೀಗಿದೆ.

ನಂ.	ಆಯಗಾರರು	ಎಣ್ಣೆ ಕೆ.ಜಿ.	ಕಾಯಿ	ಹಚ್ಚಡೆ
೧	ಮಂಗಳಾರತಿ ಸೇವೆ ಮಾಡುವವರು	೧.೨೫೦	೩	-
೨	ಕಾಶಿ ಧರಿಸುವ ಸೇವೆ ಮಾಡುವವರು	೧.೨೫೦	೩	-
೩	ದೊಡ್ಡ ಬಸವೇಶ್ವರ ಅರ್ಚಕ	೧.೨೫೦	೩	-
೪	ಬಡಿಗೇರರು ೫ ಮಂದಿ	೧೦	೧೮	-
೫	ಪತ್ತಾರರು	೧.೨೫೦	೩	-
೬	ಬಣ್ಣಗಾರರು	೧.೨೫೦	೩	-
೭	ಮಡಿವಾಳರು	೧.೨೫೦	೩	೧
೮	ತಲಾದಿ	೧೧.೨೫೦	೩	೧

೯	ಕಮ್ಮಾರರು	೩.೭೫೦	೬	-
೧೦	ಬಾರಿಕರು	೧.೨೫೦	೩	-
೧೧	ಮಾದಿಗರು	೫	೧೫	೧
೧೨	ಪಕೀರರು	೧.೨೫೦	-	-
೧೩	ಸುವಾದದವರು ೪ ಮಂದಿ	೫	೯	-
೧೪	ಡಂಗೂರದವರು	೧.೨೫೦	೩	-
೧೫	ಕೋಟೆ ಗರಡಿಯವರು	೧.೨೫೦	-	-
೧೬	ಪೇಟೆ ಗರಡಿಯವರು	೧.೨೫೦	-	-
೧೭	ಮಠದ ಅಯ್ಯನವರು	೨.೫೦೦	-	-
೧೮	ಉಕ್ಕಂದ ಹಚ್ಚಿದವರು (ಕಾರ್ತಿಕದಲ್ಲಿ ೪೫ ದಿವಸ ದೀಪಗಳಿಗೆ ಎಣ್ಣೆ ಬತ್ತಿ ಹಾಕುವವರು)	೧	-	-

ದಿನಚರಿ

ಉಜ್ಜಯಿನಿ ಸದ್ಧರ್ಮ ಪೀಠವನ್ನು ಸರ್ವತೋಮುಖ ಅಭಿವೃದ್ಧಿಗೊಳಿಸಲು ಶ್ರೀ ಸಿದ್ಧಲಿಂಗ ಜಗದ್ಗುರುಗಳವರಿಗೆ ಆಳವಾದ ಮುಂದಾಲೋಚನೆಯಿತ್ತು. ಸಮಯ ಸಿಕ್ಕಾಗಲೆಲ್ಲಾ ಶ್ರೀ ಸಿದ್ಧಲಿಂಗ ಜಗದ್ಗುರುಗಳು ಶ್ರೀಪೀಠದ ಕಾರ್ಯವೈಖರಿ ಯಾವ ರೀತಿಯಲ್ಲಿ ನಡೆಯಬೇಕೆಂಬುದರ ಬಗ್ಗೆ ತಮ್ಮ ದಿನಚರಿಯಲ್ಲಿ ಬರೆದಿರುವರು. ಈ ವಿಷಯಗಳನ್ನು ದಿನಾಂಕ ೧೨-೧೧-೧೯೩೦ರಿಂದ ೨೦-೧೧-೧೯೩೨ರವರೆಗೆ ಬರೆದಿಟ್ಟಿರುವರು.[2] ಅದರಲ್ಲಿ ಹೇಳಿದ ಶ್ರೀಪೀಠದ ಸಿಬ್ಬಂದಿಯ ಸ್ಥೂಲ ವಿವರವನ್ನು ಇಲ್ಲಿ ಪರಿಚಯಿಸಲಾಗಿದೆ.

ಶ್ರೀಪೀಠದ ಕೃಷಿ ಸಾಗುವಳಿಗೆ ಒಂಬತ್ತು ಎತ್ತಿನ ಬಂಡಿಗಳಿಗೆ ೧೮ ಎತ್ತುಗಳಿರಬೇಕು. ಅವುಗಳನ್ನು ನೋಡಿಕೊಳ್ಳಲು ಮೂರು ವರ್ಗಗಳ ಸೇವಕರಿರಬೇಕು ಎಂದಿರುವರು. ಅವು ಶ್ರೀ ಜ್ಞಾನಗುರುಸ್ಥಲ ವರ್ಗ, ವ್ಯವಸಾಯ ವರ್ಗ ಮತ್ತು ಅಧಿಕಾರವರ್ಗ. ಇವುಗಳಲ್ಲದೆ ಜಲಾನೇತ್ರಗಳು, ಉಪಪೌರೋಗಗಳು, ಪೌರೋಗತನು ಇತ್ಯಾದಿ ಭಾಗಗಳಿಗೂ ಸಿಬ್ಬಂದಿ ಇರಬೇಕು. ಈ ಸೇವಕರು ಶ್ರೀಮಠದ ಶಿವಪೂಜಾ ಮಂದಿರ, ಅಡಿಗೆ ಮನೆ ಮುಂತಾದ ಕಡೆಗಳ ಹಿತ್ತಾಳೆ, ಬೆಳ್ಳಿ, ಬಂಗಾರ, ತಾಮ್ರ, ಕಂಚಿನ ಪಾತ್ರೆಯಂತಹ ಭಾಂಡೆಗಳನ್ನು ಉಜ್ಜಿ ತೊಳೆಯಬೇಕು. ಇದಲ್ಲದೆ ನೆಲಸಾರಿಸಿ, ರಂಗವಲ್ಲಿಯಿಟ್ಟು, ನೀರು ಕಾಯಿಸುವ ಕೆಲಸವನ್ನೂ ನಿರ್ವಹಿಸಬೇಕು.

ರಾತ್ರಿ ೧೧ ಗಂಟೆಯಿಂದ ಬೆಳಿಗ್ಗೆ ೪ ಗಂಟೆಯವರೆಗೆ ಉತ್ತರಕ್ಕೆ ಕಾಲು ಮಾಡಿ ದಕ್ಷಿಣಕ್ಕೆ ತಲೆಮಾಡಿ ಪಶ್ಚಿಮಕ್ಕೆ ಮುಖ ಮಾಡಿ ಮಲಗಬೇಕು.

ಈ ಸೇವಕರು ಜಲಪಾಕ, ಅನ್ನಪಾಕ, ಭಕ್ಷ್ಯ, ಭೋಜ್ಯ, ಲೇಹ್ಯ, ಚೋಹ್ಯಗಳನ್ನು ಹೆಚ್ಚು ಕಡಿಮೆ ಆಗದಂತೆ, ಸುಗಂಧವು ಬರುವಂತೆ, ಚೆಂದಾಗಿ ಕಾಣುವಂತೆ ಪಾಕಗಳನ್ನು, ಕಾಯಪಲ್ಯ, ಸಾರು, ವ್ಯಂಜನಗಳನ್ನು ಶಿವಶಾಸ್ತ್ರ ಪ್ರಕಾರ ತಯಾರಿಸಲು ಸೂಚಿಸಿರುವರು. ಬಾವಿ, ಕೆರೆಗಳಿಗೆ ಹೋಗಿ ಬಟ್ಟೆಗಳನ್ನು ತೊಳೆಯಬೇಕು. ಶಿವಪೂಜೆಗೆ ಮಡಿಯ ನೀರನ್ನು ತರಬೇಕು. ೫೦ ರಿಂದ ೬೦ ವಿದ್ಯಾರ್ಥಿಗಳಿಗೆ ನೀರನ್ನು ತರಲು ಒಳ್ಳೆ ಸೇವಕರು ಇರಬೇಕು. ಶ್ರೀ ಸನ್ನಿಧಿಗಳ ಸೇವಾರ್ಥವಾಗಿ ನಿತ್ಯಾಚಾರಕ್ಕೆ ಒಬ್ಬ ಸೇವಕ ಮತ್ತು ಒಬ್ಬ ಜಲಾನೇತೃ ಈ ಇಬ್ಬರೂ ಇನ್ನಿತರರಂತೆ ಸೇವೆ ಮಾಡಬೇಕು. ದಾಸೋಹ ಗೃಹದಲ್ಲಿ ಇಬ್ಬರು ಸೇವಕರು ಮತ್ತು ಇಬ್ಬರು ಜಲಾನೇತೃಗಳು ಪಾಕ, ನೀರಿನ ಕ್ರಿಯೆಗಳನ್ನು ನಿರ್ವಹಿಸಬೇಕು ಹಾಗೂ ಅತಿಥಿಗಳಾದ ಭಕ್ತರನ್ನು ಸಂರಕ್ಷಿಸಿ ಸಂತೋಷ ಪಡುವಂತೆ ವರ್ತಿಸಬೇಕು. ಈ ಕಾರ್ಯಕ್ಕೆ ನಾಲ್ವರಿಗಿಂತಲೂ ಜಾಸ್ತಿ ಜನರನ್ನು ಅಲ್ಲಿ ನೇಮಿಸಬಾರದೆಂದು ಸೂಚಿಸಿರುವರು.

ಶ್ರೀಪೀಠದ ಅಡಿಗೆ ಮನೆಯಲ್ಲಿ ಸೇವಕರಿರಬೇಕು. ಪೌರೋಗ, ಆದಾಯ ವ್ಯಯದ ಪುಸ್ತಕ, ನಿತ್ಯಾಚಾರ ಪುಸ್ತಕ, ಸೇವಕ ವರ್ಗದ ಹಾಜರಿ ಪುಸ್ತಕ ಈ ನಾಲ್ಕು ಪುಸ್ತಕಗಳನ್ನು ಇಡಬೇಕು. ನಿತ್ಯಾಚಾರ ಪುಸ್ತಕದಲ್ಲಿ ನಿತ್ಯ ನಡೆದ ಕಾರ್ಯಗಳನ್ನು ಬರೆಯಬೇಕು. ಈ ಪುಸ್ತಕಗಳನ್ನು ಎಂಟು ದಿವಸಕ್ಕೊಮ್ಮೆ ಕಾರ್ಯಭಾರಿಗಳು ತನಿಖೆ ಮಾಡಿ ಅಧ್ಯಕ್ಷ, ಉಪಾಧ್ಯಕ್ಷರಿಂದ ಸಹಿಪಡೆದು ಕೋಶಾಧ್ಯಕ್ಷರಿಂದ ಬಾಕಿ ಹಣವನ್ನು ಪಡೆಯಬೇಕು.

ತಿಂಗಳಿಗೊಮ್ಮೆ ನೌಕರವರ್ಗದ ಹಾಜರಿ, ಗೈರ್ ಹಾಜರಿ ಬಗ್ಗೆ ಪುಸ್ತಕವನ್ನು ಪೌರೋಗವನ್ನು ತನಿಖೆ ಮಾಡಿಸಿ ಮೇಲಿನವರಿಂದ ಅಪ್ಪಣೆ ಪಡೆದು ಹಣವನ್ನು ಪಾವತಿ ಮಾಡಬೇಕು. ಪ್ರತಿನಿತ್ಯ ಪೌರೋಗಮನು ಪಾಕ ಮತ್ತು ಶಿವಪೂಜೆಯ ಪಾತ್ರೆಗಳನ್ನು ತನಿಖೆ ಮಾಡಿ, ಲೆಕ್ಕವಿಟ್ಟುಕೊಂಡಿರಬೇಕು. ಕಳೆದವರಿಗೆ ಆ ಭಾಂಡೆಗಳ ಕ್ರಯದ ಹಣವನ್ನು ತೆಗೆದು, ಉಳಿದ ಸಾಮಾನುಗಳನ್ನು ನೋಡಿಕೊಳ್ಳಬೇಕು. ಅದಕ್ಕೆ ಪೌರೋಗಮನೇ ಜವಾಬ್ದಾರ. ಅತಿಥಿಗಳ ಸತ್ಕಾರವನ್ನು ಎರಡು ಅಥವಾ ಮೂರು ದಿನಗಳವರೆಗೂ ಪೌರೋಗಮನು ನಡೆಸಬೇಕು. ಮೂರು ದಿವಸಗಳನ್ನು ಮೀರಿ ವಾಸಿಸುವ ಅತಿಥಿಗಳು ತಮ್ಮ ಸ್ವಂತ ಖರ್ಚಿನಿಂದ ವಾಸಿಸಬೇಕೆಂದು ಸಲಹೆ ಮಾಡಿದ್ದಾರೆ.

ಈ ಸಿಬ್ಬಂದಿಯು ಶ್ರೀಮಠದಲ್ಲಿ ಕೆಲಸಕ್ಕೆ ಸೇರುವ ಮೊದಲು ಯೋಗ್ಯರಾದ ಯಜಮಾನರಿಂದ ಜವಾಬ್ದಾರಿ ಪತ್ರವನ್ನು ತರಬೇಕು ಮತ್ತು ಹಣವನ್ನು ಠೇವಣಿ

ಇಡಬೇಕು. ಜವಾಬ್ದಾರಿ ಪತ್ರದ ಸಂಗಡ ಜಲಾನೇತೃ ೧೦೦ ರೂಪಾಯಿ, ಪಾಚಕ ೧೫೦ ರೂಪಾಯಿ, ಉಪಪೌರೋಗಮ ೨೫೦ ರೂಪಾಯಿ, ಪೌರೋಗಮ ೫೦೦ ರೂಪಾಯಿ, ಠೇವಣಿಯಿಟ್ಟು ತಮ್ಮ ಕರ್ತವ್ಯದಲ್ಲಿ ಯಾವ ಲೋಪಗಳೂ ಬಾರದಂತೆ ನಡೆದುಕೊಳ್ಳುವುದಾಗಿ ಮತ್ತು ಲೋಪವಾದರೆ ಜಾಮೀನು ಹಣವನ್ನು ಮುರಿದುಕೊಳ್ಳಲು ಕರಾರುಪತ್ರದಲ್ಲಿ ಬರೆಸಿಕೊಳ್ಳಲು ಸೂಚಿಸಬೇಕೆಂದು ಹೇಳಿರುವರು.

ಈ ವರ್ಗದವರ ತಿಂಗಳ ಪಗಾರದ ವಿವರ ಹೀಗೆ ನೀಡಿದ್ದಾರೆ : ಜಲಾನೇತೃಗೆ ೪ರಿಂದ ೮ ರೂಪಾಯಿ, ಪಾಚಕನಿಗೆ ೫ ರಿಂದ ೧೦ ರೂಪಾಯಿ, ಉಪಪೌರೋಗಮನಿಗೆ ೬ ರಿಂದ ೧೨ ರೂಪಾಯಿ, ಪೌರೋಗಮನಿಗೆ ೧೨ ರಿಂದ ೨೪ ರೂಪಾಯಿ. ಇವರಿಗೆ ರಜಾ ದಿನಗಳು ಶ್ರೀ ಸ್ವಾಮಿಯ ರಥೋತ್ಸವ ಮುಗಿದ ನಂತರ ವೈಶಾಖದ ದಶಮಿಯಿಂದ ಜೇಷ್ಠ ಶುದ್ಧ ತ್ರಯೋದಶಿವರೆಗೆ ಇರಬೇಕು. ಈ ರಜಾದಿನಗಳಲ್ಲಿ ಈ ಸಿಬ್ಬಂದಿಗೆ ಪಗಾರವನ್ನು ಕೊಡಬೇಕೆಂದು ಸೂಚಿಸಿರುವರು.

೧೩ ವರ್ಷ ವಯಸ್ಸಾದವರನ್ನು ಈ ಕಾರ್ಯಕ್ಕೆ ಸೇರಿಸಿಕೊಳ್ಳಬೇಕು. ಯಾವ ತಪ್ಪಿಲ್ಲದೆ ೬೦-೭೦ ವರ್ಷಗಳ ಸೇವೆ ಸಲ್ಲಿಸಿದರೆ ಅವರಿಗೆ ಪಗಾರದ ೩ ಅಂಶಗಳಲ್ಲೊಂದು ಅಂಶ ಹಣವನ್ನು ಪಿಂಚಣಿಯೆಂದು ಮರಣಪರ್ಯಂತ ಪ್ರತಿವರ್ಷ ತಪ್ಪದೇ ಈ ಜ್ಞಾನ ಗುರುಸ್ಥಲದಿಂದ ಸಲ್ಲಬೇಕೆಂದು ಹೇಳಿರುವರು.

ವ್ಯವಸಾಯ ವರ್ಗದಲ್ಲಿ ಗೋಪ, ಕೃಷಿಕ, ಪ್ರಧಾನ ಕೃಷಿಕ ಮತ್ತು ಕೃಷಿಕಾಧಿಪ ಇರಬೇಕೆಂದು ವಿಧಿಸಿರುವರು. ಅವರ ಕೆಲಸ ಕಾರ್ಯಗಳ ನೀತಿ ನಿಯಮಗಳನ್ನು ವಿವರಿಸಲಾಗಿದೆ. ಕೃಷಿಕ ಸಿಬ್ಬಂದಿಯಲ್ಲಿ ಜ್ಞಾನಗುರು ಸ್ಥಲದಲ್ಲಿ ೧೨ ಎತ್ತುಗಳಿಗೆ ಆರು ಜನ ಕೃಷಿಕರು, ಶಿಕ್ಷಾ ಗುರುಸ್ಥಲದಲ್ಲಿ ೧೨ ಎತ್ತುಗಳಿಗೆ ೬ ಜನ ಕೃಷಿಕರು, ದೀಕ್ಷಾ ಗುರು ಸ್ಥಲದಲ್ಲಿ ೧೨ ಎತ್ತುಗಳಿಗೆ ೬ ಜನ ಕೃಷಿಕರು ಇರತಕ್ಕದ್ದು ಎಂದಿರುವರು. ೧೬ ರಿಂದ ೫೦ ವರ್ಷದವರನ್ನು ಕೃಷಿಕರೆಂದು ಸೇರಿಸಿಕೊಳ್ಳತಕ್ಕದ್ದೆಂದು ಹೇಳಿರವ ಜೊತೆಗೆ ಅವರ ನಿತ್ಯಾಚಾರಗಳನ್ನೂ ಹೇಳಿರುವರು.

ಭೂಮಿ ಹಿಡುವಳಿ ಕಾರ್ಯ ಕುರಿತು ಹೇಳುವಾಗ ಜೇಷ್ಠ ಮಾಸದಲ್ಲಿ ಭೂಮಿಗಳನ್ನು ಹದಮಾಡಿಕೊಂಡು ಬಿತ್ತಬೇಕು. ಆಷಾಢದಲ್ಲಿ ಕೆಂಪು ಭೂಮಿಗೆ ಬೀಜಗಳನ್ನು ಬಿತ್ತಬೇಕು. ಶ್ರಾವಣದಲ್ಲಿ ಕರಿಭೂಮಿಗಳನ್ನು ಬಿತ್ತಬೇಕು, ಆಶ್ವೀಜದಲ್ಲಿ ಉಳಿದ ಭೂಮಿಗಳಲ್ಲಿ ಹಿಂಗಾರಿ ಬೀಜ ಬಿತ್ತಬೇಕು. ಕಾರ್ತಿಕ ಮಾಸದಲ್ಲಿ ಕೆಂಪು ಭೂಮಿಯ ಫಲ ತೆಗೆದು ಸಾಗುವಳಿ ಮಾಡಬೇಕು. ಕೆಲ ಬೀಜ ಬಿತ್ತಬೇಕು. ಮಾರ್ಗಶಿರದಲ್ಲಿ ಫಲ ತೆಗೆದು ಸಾಗುವಳಿ ಮಾಡಬೇಕು. ಪುಷ್ಯದಲ್ಲಿ

ಸಾಗುವಳಿ ಮಾಡಿ, ಮಾಘದಲ್ಲಿ ಹೊಲದಲ್ಲಿರುವ ಗೂಡುಗಳನ್ನು ಕಣಕ್ಕೆ ಹೇರಿ ಮುಂದಿನ ಕೆಲಸ ಮಾಡಬೇಕು. ಪಾಲ್ಗುಣದಲ್ಲಿ ಧಾನ್ಯಗಳನ್ನು ಹಗೇವುಗಳಿಗೆ ಹಾಕಿ, ಮೇವಿನ ಬಣವೆಗಳನ್ನು ಒಟ್ಟಿಸಬೇಕು. ಚೈತ್ರದಲ್ಲಿ ಅಡವಿಯಿಂದ ಕಟ್ಟಿಗೆ ತರಿಸಬೇಕು. ಭಕ್ತರ ಗ್ರಾಮಗಳಿಂದ ಧಾನ್ಯ ಸಂಗ್ರಹಿಸಬೇಕು. ವೈಶಾಖದಲ್ಲಿ ಹೊಲಗಳಿಗೆ ಗೊಬ್ಬರ ಹೇರುವ ಕಾರ್ಯ ಮಾಡಿಸಬೇಕೆಂದು ಸೂಚಿಸಲಾಗಿದೆ. ಗದ್ದೆ, ತೋಟದ ಕೆಲಸಗಳನ್ನು ಹೇಗೆ ಕೈಕೊಳ್ಳಬೇಕೆಂಬುದನ್ನೂ ತಿಳಿಸಿರುವರು.

ವ್ಯವಸಾಯಕ್ಕೆ ಸಂಬಂಧಿಸಿ ೬ ಚಕ್ಕಡಿಗಳು, ೬ ಕುಂಟಿಗಳು-ಮಡಿಕೆಗಳು, ೨ ಆರೆತ್ತಿನ ಕುಂಟೆಗಳು, ೬ ಎಡೆ ಕುಂಟೆಗಳು, ೧೮ ಜಂತೆಗಳು, ಹಗ್ಗ, ಕಣ್ಣಿ, ತೊಗಲು, ಕಬ್ಬಿಣದ ಸಾಮಾನು, ೧೦೦ ಕುರ್ಚಿಗಿ, ೫೦ ಕುಡಗೋಲು, ಬಿತ್ತುವ ಸಡ್ಡೆ ಇತ್ಯಾದಿ ಉಪಕರಣಗಳ ವಿವರಗಳನ್ನು ತಿಳಿಸಿರುವರು.

ಶ್ರೀಪೀಠದ ಅಧಿಕಾರ ವರ್ಗದ ವಿವರಗಳನ್ನು ಹೀಗೆ ನೀಡಿರುವರು. ಸ್ಥಿರಾಧಿಕಾರವರ್ಗ ಮತ್ತು ಚರಾಧಿಕಾರವರ್ಗ. ಸ್ಥಿರಾಧಿಕಾರದಲ್ಲಿ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ದ್ವಾರಪಾಲಕ ಇತ್ಯಾದಿಗಳಿವೆ. ಶ್ರೀಪೀಠದ ಜ್ಞಾನಗುರುಸ್ಥಲದಲ್ಲಿ ಕೆಲಸ ಮಾಡುವ ಅಧ್ಯಾಪಕರ, ವಟುಗಳ, ವಿದ್ಯಾರ್ಥಿಗಳ ಮತ್ತು ಸೇವಕರ ನಿಯಮಗಳೂ ಇವೆ.

ಶ್ರೀ ಪೀಠದ ಪ್ರಾಚೀನ ಪರಂಪರೆಯಲ್ಲಿ ದೀನ-ದಲಿತರು, ಹರಿಜನರು-ಗಿರಿಜನರು ಶ್ರೀ ಪೀಠದ ವಿಭಿನ್ನ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವುದು ಕಂಡು ಬರುತ್ತದೆ. ಇದು ಶ್ರೀಗಳ ಧರ್ಮಸಮನ್ವಯದ ದ್ಯೋತಕವಾಗಿದೆ. ಆಧುನಿಕ ಕಾಲದಲ್ಲಿ ನಮ್ಮ ಸರ್ಕಾರವು ದೀನದಲಿತರ, ಹರಿಜನ-ಗಿರಿಜನರ ಉದ್ಧಾರಕ್ಕೆ ೫೦% ಮೀಸಲಾತಿಯ ಕಾಯಿದೆಯನ್ನು ಜಾರಿಗೊಳಿಸಿದ್ದರೆ ಶ್ರೀಪೀಠವು ಸಮಾಜದ ಎಲ್ಲ ವರ್ಗದವರನ್ನು ಒಂದುಗೂಡಿಸಿಕೊಂಡು ಧರ್ಮಸಮನ್ವಯವನ್ನು ಈ ರೀತಿಯಲ್ಲಿ ಎತ್ತಿ ಹಿಡಿದಿರುವುದು ಗಮನೀಯ.

ಅಡಿ ಟಿಪ್ಪಣಿ

೧. ಉಜ್ಜಯಿನಿ ಸದ್ಧರ್ಮಪೀಠದ ಕಛೇರಿಯಿಂದ ಸ್ಥಳೀಯ ಶ್ರೀ ಯು. ಎಂ. ವೀರಯ್ಯ, ಶ್ರೀಚನ್ನವೀರಸ್ವಾಮಿ, ಡಾ.ಎ.ಹೆಚ್.ಎಂ. ಸಿದ್ಧಲಿಂಗಯ್ಯ ಮತ್ತು ಕೊಟ್ಟೂರಿನ ಶ್ರೀ ದೊಡ್ಡವೀರಪ್ಪ ಅವರಿಂದ ಸಂಗ್ರಹಿಸಲಾಗಿದೆ.

೨. **ಸದ್ಧರ್ಮ ಪ್ರಭಾ**, ಸಂಪುಟ-೨, ಸಂಚಿಕೆ-೧.

ಶ್ರೀಪೀಠದ ನ್ಯಾಯಾಲಯ

ವೀರಶೈವ ಧರ್ಮ ಮತ್ತು ಅನ್ಯ ಧರ್ಮೀಯರ ವ್ಯಾಜ್ಯಗಳನ್ನು ಬಗೆಹರಿಸುವ ನ್ಯಾಯಾಲಯವೊಂದು ಉಜ್ಜಯಿನಿ ಸದ್ಧರ್ಮ ಪೀಠದಲ್ಲಿದೆ. ಈ ನ್ಯಾಯಾಲಯವು ಹೇಗೆ ಸ್ಥಾಪಿತವಾಯಿತು ಎನ್ನುವುದು ತಿಳಿದಿಲ್ಲ. ಈ ನ್ಯಾಯಾಲಯದಲ್ಲಿ ಮತಗಟ್ಟಲೆ ವಿಚಾರಗಳು, ಆಚಾರಬಾಬು, ಶಿವಾಯಬಾಬು, ಧರ್ಮಕಟ್ಟಲೆಗಳು ನಡೆಯುತ್ತಿದ್ದವು. ಈ ನ್ಯಾಯಾಲಯದ ಬಹುತೇಕ ಚಟುವಟಿಕೆಗಳು ಲಿಂ॥ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳ ಕಾಲಾವಧಿಗೆ ಸೇರಿವೆ. ಅದರ ಕಾರ್ಯವೈಖರಿ ಮತ್ತು ಸಾಧನೆ ಇಂದು ಜನಮನದಲ್ಲಿ ಇತಿಹಾಸವಾಗಿ ಉಳಿದಿದೆ. ಈ ನ್ಯಾಯಾಲಯದ ಚಟುವಟಿಕೆಗಳಲ್ಲಿ ಕಕ್ಷಿದಾರರು ಸಲ್ಲಿಸುವ ಫಿರ್ಯಾದಿಗಳು, ನ್ಯಾಯಾಧೀಶರು ನೀಡುವ ನಿಷ್ಪಕ್ಷಪಾತ ತೀರ್ಮಾನಗಳು, ವಾದ-ಪ್ರತಿವಾದಗಳನ್ನು ನಡೆಸುವ ವಕೀಲರು, ಕಕ್ಷಿದಾರರನ್ನು ಅಥವಾ ಸಾಕ್ಷಿದಾರರನ್ನು ಕೂಗಿ ಕರೆಯುವ ಸಿಪಾಯಿಗಳು ಮುಖ್ಯವಾಗಿ ಗೋಚರಿಸುತ್ತವೆ. ಪ್ರಸ್ತುತ ಅಧ್ಯಾಯದಲ್ಲಿ ಈ ನ್ಯಾಯಾಲಯದ ಸ್ಥಳ ಮತ್ತು ಕಾರ್ಯವೈಖರಿಗಳನ್ನು ಪರಿಚಯಿಸಲಾಗಿದೆ.

ನ್ಯಾಯಾಲಯದ ಸ್ಥಳ *(ಚಿತ್ರ ಸಂ. ೭೦)*

ಈ ನ್ಯಾಯಾಲಯ ಶ್ರೀ ಪೀಠದ ದಾರುಕ ಮಂಟಪ ಮತ್ತು ಪಂಚಾಚಾರ್ಯ ಮಂಟಪಗಳ ಮಧ್ಯಲ್ಲಿದೆ. ಅದೊಂದು ಸ್ತಂಭಗಳುಳ್ಳ ಆಯತಾಕಾರದ ಕಿರುಕೋಣೆ. ಅದರ ಉತ್ತರ ಮತ್ತು ದಕ್ಷಿಣಕ್ಕೆ ಮುಖ್ಯ ಪ್ರವೇಶದ್ವಾರಗಳಿವೆ. ಪಶ್ಚಿಮದ ಗೋಡೆಗೆ ಹೊಂದಿ ಒಂದು ಎತ್ತರದ ಶಿಲಾ ಸ್ತಂಭಗಳುಳ್ಳ ಆಯತಾಕಾರದ ಕಟ್ಟೆಯಿದೆ. ಅಲ್ಲಿ ನ್ಯಾಯಾಧೀಶರೆನಿಸಿದ ಶ್ರೀ ಪೀಠದ ಜಗದ್ಗುರುಗಳು ಕುಳಿತುಕೊಳ್ಳುತ್ತಿದ್ದರು. ಈ ಕಟ್ಟೆಯ ಮಧ್ಯಗೋಡೆಗೆ ಹೊಂದಿ ಮತ್ತೊಂದು ಎತ್ತರದ ಆಸನ ಕಟ್ಟೆಯಿದೆ. ***(ಚಿತ್ರ ಸಂ. ೭೧)*** ಆ ಕಟ್ಟೆಯ ಮೇಲೆ ಸದಾ ರತ್ನಗಂಬಳಿಯನ್ನು ಹಾಸಲಾಗುತ್ತಿತ್ತು. ಅದರ ಮೇಲೆ ಮುಖ್ಯ ನ್ಯಾಯಾಧೀಶರೆನಿಸಿದ ಶ್ರೀಪೀಠದ ಜಗದ್ಗುರುಗಳು ವ್ಯಾಜ್ಯಗಳು ನಡೆಯುವ ಸಂದರ್ಭಗಳಲ್ಲಿ ಆಸೀನರಾಗಿರುತ್ತಿದ್ದರು. ಅವರ ಅಧೀನರಾಗಿ ಧರ್ಮಾಧಿಕಾರ ಸ್ಥಾನದಿಂದ ನ್ಯಾಯಾಧೀಶರು ಧರ್ಮವ್ಯಾಜ್ಯಗಳನ್ನು ನಡೆಸುತ್ತಿದ್ದರು.

ಅವರ ಅನುಪಸ್ಥಿತಿಯಲ್ಲಿ ವಕೀಲರ ವಾದ-ಪ್ರತಿವಾದಗಳನ್ನು ಕಟ್ಟೆಯ ಮೇಲೆ ಕುಳಿತ ನ್ಯಾಯಾಧೀಶರು ತೀರ್ಪುಗಳನ್ನು ಬರೆದಿಡುತ್ತಿದ್ದರು. ಶ್ರೀ ಜಗದ್ಗುರುಗಳು ಆಗಮಿಸಿದ ಬಳಿಕ ಕೆಲವೊಮ್ಮೆ ಆ ತೀರ್ಪನ್ನು ಪರಾಮರ್ಶಿಸಿ ಅಂತಿಮ ಆದೇಶವನ್ನು ಹೊರಡಿಸುತ್ತಿದ್ದರು.

ಈ ನ್ಯಾಯಾಲದ ಶ್ರೇಷ್ಠತೆಯನ್ನು ಎತ್ತಿಹಿಡಿಯುವಲ್ಲಿ ಅನೇಕರು ಕಾರಣರಾಗಿದ್ದಾರೆ.

ಫಿರ್ಯಾದಿಗಳು

ಧರ್ಮಬಾಹಿರತೆ, ಜಾತಿಭ್ರಷ್ಠತೆ, ಮಠದ ಆಸ್ತಿ ವ್ಯಾಜ್ಯ, ಪೀಠಗಳ ಸಮಸ್ಯೆ, ಮಠದಯ್ಯಗಳ ದರ್ಜೆ-ನಡವಳಿಕೆ, ಜನಾಂಗೀಯ ಘರ್ಷಣೆ ಇವೆ ಮುಂತಾದ ಸಮಸ್ಯೆಗಳಿಗೆ ಪರಿಹಾರ ಬಯಸಿ ಫಿರ್ಯಾದಿಗಳು ಶ್ರೀ ಪೀಠದ ನ್ಯಾಯಾಲಯಕ್ಕೆ ಬರುತ್ತಿದ್ದವು. ಅನ್ಯ ಧರ್ಮಿಯರೂ ಸಹ ನ್ಯಾಯ ಬೇಡಿ ಶ್ರೀಪೀಠದ ನ್ಯಾಯಾಲಯಕ್ಕೆ ಮೊರೆ ಹೋಗುತ್ತಿದ್ದರು. ಪಂಚಪೀಠಗಳಲ್ಲಿ ಕಾಶೀಪೀಠ, ಕೇದಾರಪೀಠ, ಶ್ರೀಶೈಲಪೀಠ ಮತ್ತು ರಂಭಾಪುರಿ ಪೀಠಗಳ ಶಾಖಾ ಮಠಗಳೂ ಕೂಡ ತಮಗೆ ನ್ಯಾಯ ಬಯಸಿ ಈ ನ್ಯಾಯಾಲಯದ ಕಟ್ಟೆಯನ್ನು ಹತ್ತಿದ್ದವು. ನ್ಯಾಯ ಬಯಸಿ ಬರುವ ಎಲ್ಲಾ ಕಕ್ಷಿದಾರರು ಮೊದಲು ತಮ್ಮ ದೂರುಗಳನ್ನು ಶ್ರೀಪೀಠದ ನ್ಯಾಯಾಲಯದಲ್ಲಿ ದೊರೆಯುವ ಸ್ಟ್ಯಾಂಪುಗಳನ್ನು ಪೇಪರ್‌ಗಳಲ್ಲಿ ಅಂಟಿಸಿ ದಾಖಲಿಸಿ ಅವುಗಳನ್ನು ವಕೀಲರ ಮೂಲಕ ನ್ಯಾಯಾಲಯಕ್ಕೆ ಮಂಡಿಸಿದ ಮೇಲೆ ವಿಚಾರಣೆ ಆರಂಭವಾಗುತ್ತಿತ್ತು.

ಕಕ್ಷಿದಾರರು ತಮ್ಮ ವ್ಯಾಜ್ಯಗಳನ್ನು ನಡೆಸಲು ಶ್ರೀಪೀಠದ ವಕೀಲರ ಮೊರೆ ಹೋಗುತ್ತಿದ್ದರು. ವಕೀಲರಿಗೆ ಕೊಡುವ ಸಂಭಾವನೆ ಬಗ್ಗೆ ಒಪ್ಪಂದವನ್ನು ಮಾಡಿಕೊಳ್ಳುತ್ತಿದ್ದರು. ಕಕ್ಷಿದಾರರ ಫಿರ್ಯಾದಿಗಳನ್ನು ವಕೀಲರು ತಯಾರಿಸಿ ಅದರಲ್ಲಿ ಕಕ್ಷಿದಾರರ ಮತ್ತು ಸಾಕ್ಷಿದಾರರ ರುಜುಗಳನ್ನು ಹಾಕಿಸುತ್ತಿದ್ದರು. ಶ್ರೀಪೀಠದಲ್ಲಿ ದೊರೆಯುವ ನಿಗದಿತ ಸ್ಟ್ಯಾಂಪು ಖರೀದಿಸಿ ಅದರ ಮೇಲೆ ಅಂಟಿಸಿ, ನ್ಯಾಯಾಲಯಕ್ಕೆ ಶುಲ್ಕವನ್ನು ಕಟ್ಟಿ ವಕೀಲರ ಮೂಲಕ ಅದನ್ನು ಸಲ್ಲಿಸುತ್ತಿದ್ದರು.

ದೂರು ದಾಖಲಾದ ಬಳಿಕ ವ್ಯಾಜ್ಯದ ದಿನಾಂಕವನ್ನು ಪ್ರಕಟಿಸಲಾಗುತ್ತಿತ್ತು. ವ್ಯಾಜ್ಯನಡೆಯುವ ಸಂದರ್ಭದಲ್ಲಿ ಮುಖ್ಯ ನ್ಯಾಯಾಧೀಶರೆನಿಸಿದ ಶ್ರೀಪೀಠದ ಜಗದ್ಗುರುಗಳು ನ್ಯಾಯಾಲಯದ ಒಳಗಡೆ ಕಟ್ಟೆಯ ಮೇಲಿನ ಪೀಠವನ್ನು ಅಲಂಕರಿಸುತ್ತಿದ್ದರು. ಅದನ್ನು ಮುಖ್ಯ ನ್ಯಾಯಾಧೀಶರ ಪೀಠವೆನ್ನುವರು. ತದನಂತರವೇ ಶ್ರೀ ಮಹಾಸ್ವಾಮಿಗಳವರ ಕೆಳ ಬದಿಯಲ್ಲಿ ನ್ಯಾಯಾಧೀಶರು ಕಟ್ಟೆಯ

ಮೇಲೆ ಕುಳಿತುಕೊಳ್ಳುತ್ತಿದ್ದರು. ಆ ಕಟ್ಟೆಯ ಎದುರು ವಕೀಲರು ನಿಂತು ವಾದ ಪ್ರತಿವಾದ ಮಾಡುತ್ತಿದ್ದರು. ಅದನ್ನು ಅವರ ಬದಿಗೆ ವ್ಯಾಜ್ಯ ನಡೆಸುವ ಕಕ್ಷಿದಾರರು ಮತ್ತು ಸಾರ್ವಜನಿಕರು ಕೆಳಗಡೆ ಕುಳಿತು ವೀಕ್ಷಿಸುತ್ತಿದ್ದರು.

ವ್ಯಾಜ್ಯದ ಆರಂಭದಲ್ಲಿ ಸಿಪಾಯಿಯು ಕಕ್ಷಿದಾರ ಮತ್ತು ಸಾಕ್ಷಿದಾರರನ್ನು ಕೂಗಿ ಕರೆಯುತ್ತಿದ್ದನು. ಆತನು ತನ್ನ ದೇಹದ ಮೇಲೆ ಅಡ್ಡವಾಗಿ ಒಂದು ಬಟ್ಟೆಯ ಪಟ್ಟಿಯನ್ನು ಧರಿಸಿರುತ್ತಿದ್ದನು. ಅದರ ಮೇಲೆ ಒಂದು ದೊಡ್ಡ ಲೋಹದ ಬಿಲ್ಲೆ(ದಬಾಲಿ) ಇರುತ್ತಿತ್ತು. ಆ ಬಿಲ್ಲೆಯ ಮೇಲೆ ಶ್ರೀಪೀಠದ ಹೆಸರನ್ನು ಮುದ್ರಿಸಲಾಗಿತ್ತು. ವ್ಯಾಜ್ಯದಲ್ಲಿ ವಕೀಲರು ತಮ್ಮ ತಮ್ಮ ವಾದಗಳನ್ನು ಆಧಾರ ಮತ್ತು ಪುರಾವೆಗಳನ್ನು ಹಿಡಿದುಕೊಂಡು ವಾದಿಸುತ್ತಿದ್ದರು. ಅವರ ವಾದ-ಪ್ರತಿವಾದಗಳನ್ನು ಆಲಿಸಿದ ಬಳಿಕ ಮುಖ್ಯ ನ್ಯಾಯಾಧೀಶರಾದ ಶ್ರೀಪೀಠದ ಜಗದ್ಗುರುಗಳು ತೀರ್ಪನ್ನು ನೀಡಿ ವ್ಯಾಜ್ಯವನ್ನು ಅಂತ್ಯಗೊಳಿಸುತ್ತಿದ್ದರು.

ಧರ್ಮ ವ್ಯಾಜ್ಯಗಳನ್ನು ಬಗೆಹರಿಸುವುದರ ಜೊತೆಗೆ ಶಿಕ್ಷೆ ಕೊಡುವ ಉಚ್ಚ ಅಧಿಕಾರವನ್ನು ಶ್ರೀ ಜಗದ್ಗುರುಗಳು ಹೊಂದಿದ್ದರು. ಈ ಅಧಿಕಾರವನ್ನು ರಾಜ ಮಹಾರಾಜರು ಶ್ರೀಪೀಠದ ಜಗದ್ಗುರುಗಳವರಿಗೆ ದಯಪಾಲಿಸಿದ್ದರೆಂದು ಹೇಳುವರು.

ಬ್ರಿಟೀಷರಿಂದ ಮನ್ನಣೆ

ಮಠೀಯ ಗಲಭೆಗಳಿಗೆ ಸಂಬಂಧಿಸಿದ ದೂರುಗಳನ್ನು ಶ್ರೀಪೀಠದ ನ್ಯಾಯಾಲಯಕ್ಕೆ ಒಯ್ಯುವಂತೆ ಬ್ರಿಟೀಷ ಅಧಿಕಾರಿಗಳು ಆದೇಶಿಸುತ್ತಿದ್ದರು. ಈ ನ್ಯಾಯಾಲಯವು ನೀಡುವ ತೀರ್ಪನ್ನು ಅವರು ಮಾನ್ಯ ಮಾಡುತ್ತಿದ್ದರು. ಈ ತೀರ್ಪಿನ ವಿರುದ್ಧ ಉಚ್ಚನ್ಯಾಯಾಲಯಕ್ಕೆ ಮೊರೆ ಹೋಗುವ ಅವಕಾಶವನ್ನು ಕಲ್ಪಿಸಲಾಗಿತ್ತು. ಅಂತಹ ವ್ಯಾಜ್ಯಗಳು ಉಚ್ಚ ನ್ಯಾಯಾಲಯಕ್ಕೆ ಹೋದರೂ ಅಲ್ಲಿಯ ತೀರ್ಪುಗಳು ಸಾಮಾನ್ಯವಾಗಿ ಶ್ರೀ ಪೀಠದ ತೀರ್ಪಿನಂತೆಯೇ ಇರುತ್ತಿದ್ದವು. ಈ ನ್ಯಾಯಾಲಯ ನೀಡಿದ ತೀರ್ಪುಗಳು ಸುಮಾರು ಒಂದು ಶತಮಾನಕ್ಕೂ ಹೆಚ್ಚು ಪ್ರಾಚೀನಕ್ಕೆ ಹೋಗುತ್ತವೆಂದು ಹೇಳುವರು.

ನ್ಯಾಯಾಧೀಶರು

ಶ್ರೀಪೀಠದ ನ್ಯಾಯಾಲಯದಲ್ಲಿ ಅನೇಕರು ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದರು. ಲಿಂ|| ಜಗದ್ಗುರು ಶ್ರೀಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಕಾಲಾವಧಿಯಲ್ಲಿ ಭಂಗಿ(ಬೃಂಗಿ)ಮಠದ ಶ್ರೀಗುರುಸಿದ್ಧಶಾಸ್ತ್ರಿಗಳು ನ್ಯಾಯಾಧೀಶರಾಗಿ ಅಮೋಘ ಸೇವೆಸಲ್ಲಿಸಿದರು. ಇವರ ಕಾಲದಲ್ಲಿ ಅನೇಕ ಧರ್ಮಕಟ್ಟಲೆಯ ವ್ಯಾಜ್ಯಗಳು

ನಡೆದವು. ಅವರ ಕಾಲದಲ್ಲಿ ಧರ್ಮದ ನ್ಯಾಯಾಧೀಶರ ಸಮ್ಮುಖದಲ್ಲಿ ಪಂಚಾಚಾರ್ಯರ ಮಹಾಸಮ್ಮೇಳನವು ಕಾಶೀಪೀಠದಲ್ಲಿ ಜರುಗಿತು. ಆಗ ಅನೇಕ ಠರಾವುಗಳು ಪಾಸಾದವು. ಈ ವಿಷಯ ಅವರ ಬರವಣಿಗೆಯ ಹಸ್ತಪ್ರತಿಯಲ್ಲಿ ದಾಖಲಾಗಿದೆ ಎಂದು ತಿಳಿಯಲಾಗಿದೆ. ಶ್ರೀಗುರುಸಿದ್ಧಶಾಸ್ತ್ರಿಗಳವರ ಅಧೀನದಲ್ಲಿ ಧರ್ಮ ಸಚಿವ,, ಕರ್ಮಸಚಿವರಾಗಿ ಶ್ರೀಪೀಠದ ಪುತ್ರವರ್ಗ ಮಠದ ತೂಲಹಳ್ಳಿ ಹಿರೇಮಠದ ಚನ್ನವೀರ ಶಾಸ್ತ್ರಿಗಳು ಭಾಗಿಗಳಾಗಿ ಕೆಲಸ ನಿರ್ವಹಿಸಿದರು. ಅವರ ಅನುಪಸ್ಥಿತಿಯಲ್ಲಿ ಚನ್ನವೀರಶಾಸ್ತ್ರಿಗಳೇ ನ್ಯಾಯಾಧೀಶರಾಗಿ ಸೇವೆಸಲ್ಲಿಸುತ್ತಿದ್ದರು. (೧೯೪೯-೧೯೫೩).

ಲಿಂ॥ ಶ್ರೀಸಿದ್ಧೇಶ್ವರಶಿವಾಚಾರ್ಯ ಜಗದ್ಗುರುಗಳವರ ಅಧಿಕಾರಾವಧಿಯಲ್ಲಿ ಶ್ರೀಟಿ.ಎಚ್.ಎಂ.ಚೆನ್ನವೀರಶಾಸ್ತ್ರಿಗಳು ನ್ಯಾಯಾಧೀಶರಾಗಿ ಸೇವೆಗೈದರು. ಕೆಲ ಕಾಲ ಕಾಮನಾಳ ಪಟ್ಟದೇವರು ಮತ್ತು ಲಿಂ॥ ಶ್ರೀಚನ್ನವೀರಸ್ವಾಮಿಗಳೂ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸಿದರು.

ಮುನ್ಷಿ

ಶ್ರೀಗುರುಸಿದ್ದಶಾಸ್ತ್ರಿಗಳ ಸಂಬಂಧಿಕರಾದ ಶ್ರೀಗಡದಯ್ಯನವರು ಮುನ್ಷಿಯಾಗಿ ಸೇವೆ ಸಲ್ಲಿಸಿದರು. ಶ್ರೀಗುರುಸಿದ್ಧಶಾಸ್ತ್ರಿಗಳು ಮೂಲತಃ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಜೋಗಿಕಲ್ಲು ಗ್ರಾಮದವರು.

ವಕೀಲರು

ಶ್ರೀ ಪೀಠದ ನ್ಯಾಯಾಲಯದಲ್ಲಿ ನಡೆದ ವ್ಯಾಜ್ಯಗಳಲ್ಲಿ ವಾದಿ-ಪ್ರತಿವಾದಿಗಳ ಪರವಾಗಿ ಹಲವರು ವಕೀಲರಾಗಿ ಸೇವೆಗೈದರು. ಶ್ರೀಪೀಠ ಈ ವಕೀಲರಿಗೆ ಯಾವುದೇ ಭತ್ತೆಯನ್ನು ನೀಡುತ್ತಿರಲಿಲ್ಲ. ವಕೀಲರು ವ್ಯಾಜ್ಯಗಳನ್ನು ನಡೆಸುವ ಕಕ್ಷಿದಾರರಿಂದಲೇ ಸಂಭಾವನೆಯನ್ನು ಪಡೆಯುತ್ತಿದ್ದರು. ಆ ಸಂಭಾವನೆಯು ನ್ಯಾಯಾಧೀಶರಿಗಿಂತ ಹೆಚ್ಚಿರುತ್ತಿತ್ತು. ಅದು ಆ ಕಾಲದಲ್ಲಿ (೧೯೫೭) ರೂಪಾಯಿ೧೦೦ ರಿಂದ ೧೫೦ರವರೆಗೆ ಶುಲ್ಕವನ್ನು ವಕೀಲರಿಗೆ ಕೊಡುತ್ತಿದ್ದರು. ಹೀಗಾಗಿ ವಕೀಲರಿಗೆ ಹೆಚ್ಚು ಸಂಭಾವನೆ ದೊರೆಯುತ್ತಿತ್ತು.

ಲಿಂ॥ ಶ್ರೀಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಅಧಿಕಾರಾವಧಿಯಲ್ಲಿ ಶ್ರೀ ಟಿ.ಹೆಚ್.ಎಂ.ಚನ್ನವೀರಶಾಸ್ತ್ರಿಗಳು ಕೆಲಕಾಲ ವಕೀಲರಾಗಿಯೂ ಸೇವೆಗೈದರು. ಅವರು ತರ್ಕಶಾಸ್ತ್ರ ಪ್ರವೀಣರಾಗಿದ್ದರು. ಲಿಂ॥ಶ್ರೀಸಿದ್ಧೇಶ್ವರ ಶಿವಾಚಾರ್ಯ ಜಗದ್ಗುರುಗಳವರ ಅಧಿಕಾರಾವಧಿಯ ಆರಂಭದಲ್ಲಿ ಲಿಂ॥ ಶ್ರೀ ಐರಣಿ ಹಿರೇಮಠದ ಬಸಯ್ಯನವರು ಮತ್ತು ಲಿಂ॥ ಪ್ಯಾಟೀ

ತಿಪ್ಪೇಸ್ವಾಮಿಗಳು ವಕೀಲರಾಗಿ ಕಾರ್ಯ ನಿರ್ವಹಿಸಿದರು. ಶ್ರೀ ಬಸಯ್ಯನವರು ಮೂಲತಃ ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲೂಕಿನ ಐರಣಿ ಹಿರೇಮಠದವರು. ಲಿಂII ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಒಮ್ಮೆ ಐರಣಿ ಗ್ರಾಮಕ್ಕೆ ಆಗಮಿಸಿದಾಗ ಶ್ರೀ ಬಸಯ್ಯನವರು ಚಿಕ್ಕ ಹುಡುಗರಾಗಿದ್ದರು. ಅವರ ಶ್ರದ್ಧಾಭಕ್ತಿಯನ್ನು ಗಮನಿಸಿ ಅವರನ್ನೂ ತಮ್ಮ ಜೊತೆಗೆ ಉಜ್ಜಯಿನಿ ಪೀಠಕ್ಕೆ ಕರೆದುಕೊಂಡು ಹೋದರು. ಶ್ರೀ ಪೂಜ್ಯ ಜಗದ್ಗುರುಗಳು ಅವರನ್ನು ಸದಾ ತಮ್ಮ ಜೊತೆಯಲ್ಲಿ ಇಟ್ಟುಕೊಳ್ಳುತ್ತಿದ್ದರು. ಮುಂದೆ ಶ್ರೀಮಹಾಸ್ವಾಮಿಗಳವರ ಕೃಪಾಶೀರ್ವಾದದಿಂದಲೇ ಅವರ ಮದುವೆ ನಿಶ್ಚಯವಾಯಿತೆಂದು ಹೇಳುವರು.

ಕೆಲವ್ಯಾಜ್ಯಗಳು

ಈ ನ್ಯಾಯಾಲಯದ ಧಾರ್ಮಿಕ-ವ್ಯಾಜ್ಯಗಳ ತೀರ್ಪುಗಳು ಅಲ್ಲಲ್ಲಿ ಇನ್ನೂ ಜೀವಂತವಾಗಿ ಉಳಿದಿದ್ದು ಕೆಲವುಗಳನ್ನು ಇಲ್ಲಿ ನೀಡಲಾಗಿದೆ.

೧. ೧೯೪೯-೧೯೫೦ರಲ್ಲಿ ದಾವಣಗೇರಿ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ಮತ್ತಿಹಳ್ಳಿ ಗ್ರಾಮದ ಮಡಿವಾಳರ ಕೇಸಿನಲ್ಲಿ ಮತೀಯ ಅನಾಚಾರದ ಕಟ್ಟಲೆಯೊಂದು ದಾಖಲಾಯಿತು. ಶ್ರೀಪೀಠದ ನ್ಯಾಯಾಧೀಶರಾಗಿದ್ದ ಶ್ರೀಚನ್ನವೀರಶಾಸ್ತ್ರಿಗಳು ವಿಚಾರಣೆಗೆ ಕೈಗೆತ್ತಿಕೊಂಡರು. ಸದರೀ ಪ್ರತಿವಾದಿ ಮತ್ತಿಹಳ್ಳಿಯ ಹನ್ನೆರಡು ಜನ ಮಡಿವಾಳರು ಶ್ರೀಪೀಠದ ನ್ಯಾಯಾಲಯ ನೀಡಿದ ತೀರ್ಪಿನ ವಿರುದ್ಧ ಹೊಸಪೇಟೆಯ ಕೋರ್ಟಿಗೆ ಹೋದರು. ಅದು ೧೯೫೩ರಲ್ಲಿ ಫೈಸಲಾತಿ ಪಡೆಯಿತು.

೨. ಹಡಗಲಿ ತಾಲೂಕಿನ ಹೊಳಗುಂದಿ ಊರಿನ ಸಮೀಪದ ಸಾಲುಮಾರನಹಳ್ಳಿ ಮಠಾಧಿಕಾರ ಹಕ್ಕು ಬಾಧ್ಯತೆಯ ವಿಚಾರಣೆ ನಡೆಯಿತು.

೩. ಹೊಸಪೇಟೆ ತಾಲೂಕಿನ ಮರಿಯಮ್ಮನಹಳ್ಳಿಯ ಹತ್ತಿರದ ದಾಣಾಪುರದ ಮಠಾಧಿಕಾರಿಗಳ ಹಕ್ಕುಬಾಧ್ಯತೆಯ ವ್ಯಾಜ್ಯ ನಡೆಯಿತು.

೪. ಹೊಸಕೇರಿ ಗ್ರಾಮದ ಬಳಿಯ ಗೌರೀಪುರದ ಮಠಾಧಿಕಾರಿಗಳ ವ್ಯಾಜ್ಯ ನಡೆಯಿತು.

೫. ಜಗಲೂರು ತಾಲೂಕಿನ ಸಿದ್ಧಮ್ಮನಹಳ್ಳಿ ಗ್ರಾಮದ ಮಠಾಧಿಕಾರಿತ್ವದ ವ್ಯಾಜ್ಯ ನಡೆಯಿತು.

೬. ವಿಜಾಪುರ ಜಿಲ್ಲೆಯ ತಾಳೀಕೋಟೆ ಬದಿಯ ಖೋಟಖಂಡ್ಕಿ ಮಠಾಧಿಪತಿಗಳ ವ್ಯಾಜ್ಯ ನಡೆಯಿತು.

ಶ್ರೀಭಂಗೀಮಠದ ಗುರುಸಿದ್ಧಶಾಸ್ತ್ರಿಗಳು ಶ್ರೀಪೀಠದ ನ್ಯಾಯಾಧೀಶ ರಾಗಿದ್ದಾಗ(೧೯೩೩ರಲ್ಲಿ) ಉಜ್ಜಯಿನಿ ಬಳಿಯ ನಿಂಬಳಗೇರಿಯ 'ಬಾಲವಡೆಯರ

ಮಠಸ್ತರ' ತೀರ್ಮಾನ ನೀಡಿದ್ದು ಈಗಲೂ ಕೂಡ್ಲಿಗಿ ಕೋರ್ಟಿನಲ್ಲಿ ವ್ಯಾಜ್ಯ ನಡೆಯುತ್ತಿದೆ ಎನ್ನಲಾಗಿದೆ.

ಕುತೂಹಲ ಸಂಗತಿಯೆಂದರೆ ವೀರಶೈವ ಸಮಾಜ ಬಾಂಧವರು ಕಾರಣಾಂತರದಿಂದ ತೊಗಲಿನ ಪಾದರಕ್ಷೆಯಿಂದ ಏಟು ತಿಂದರೆ ಅಂಥವರು ಅಶುದ್ಧರಾದರೆಂದು ಸಮಾಜ ಗುರ್ತಿಸುವುದು. ಅವರ ಈ ಮೈಲಿಗೆಯನ್ನು ಶುದ್ಧಗೊಳಿಸಲು ಶ್ರೀ ಪೀಠಗ ಜಗದ್ಗುರುಗಳವರ ಪಾದತೀರ್ಥವನ್ನು ತಲೆಯ ಮೇಲೆ ನೀರನ್ನು ವಿಧಿವತ್ತಾಗಿ ಹಾಕಿಸಿಕೊಳ್ಳುವರು. ***(ಚಿತ್ರ ನಂ. ೭೨)*** ಕೆಲವೊಮ್ಮೆ ತಮ್ಮ ವಾಸ ಸ್ಥಾನದ ಮಠದಯ್ಯಗಳ ಹಸ್ತದಿಂದಲೂ ತಲೆಯ ಮೇಲೆ ಹಾಕಿಸಿಕೊಂಡು ಶುದ್ಧರಾಗುವರು. ತದನಂತರವೇ ಅಂತವರು ತಮ್ಮ ಮನೆಯ ಒಳಗಡೆ ಪ್ರವೇಶಿಸಲು ಅರ್ಹತೆಯನ್ನು ಪಡೆಯುವರು. ಈ ಪರಂಪರೆಯು ಇನ್ನೂ ಜೀವಂತವಾಗಿ ಉಳಿದಿದೆ.

ಒಂದು ಊರಿನ ಸಾಮಾಜಿಕ ರಚನೆಯಲ್ಲಿ ಅನೇಕ ದೈವದವರು ಒಳಗೊಂಡಿರುತ್ತಾರೆ. ಕಾರಣಾಂತರದಿಂದ ಕೆಲವು ದೈವದವರು ಈ ವ್ಯವಸ್ಥೆಯಿಂದ ವಂಚಿತರಾಗಿದ್ದರೆ ಅಂಥವರು ಶ್ರೀ ಪೀಠದ ನ್ಯಾಯಾಲಯದಲ್ಲಿ ವ್ಯಾಜ್ಯ ನಡೆಸಿದರು. ಇದೂ ಅಲ್ಲದೆ ಯಾವ ಯಾವ ಮಠದಯ್ಯಗಳು ಯಾವ ಯಾವ ಧಾರ್ಮಿಕ ಮತ್ತು ಸಂಸ್ಕಾರ ಕ್ರಿಯೆಗಳಲ್ಲಿ ಪಾಲ್ಗೊಳ್ಳಬೇಕೆಂಬುದರ ಬಗ್ಗೆ ಶ್ರೀಪೀಠದ ನ್ಯಾಯಾಲಯದಿಂದ ಆದೇಶಗಳೂ ಹೊರಬಂದಿವೆ. ಆದೇಶಗಳನ್ನು ಪಾಲಿಸದ ಮಠದಯ್ಯಗಳಿಗೆ ಕೆಲವೊಮ್ಮೆ ದಂಡ ವಿಧಿಸಿದ್ದೂ ಉಂಟು.


ಶ್ರೀಪೀಠದ ನ್ಯಾಯಾಲಯದ ಕಾರ್ಯ ಚಟುವಟಿಕೆಗಳು ಈಗ ಕ್ರಮೇಣವಾಗಿ ಕಣ್ಮರೆಯಾಗಿವೆ. ಆದರೂ ಅದರ ಬಗ್ಗೆ ಅಪಾರ ಭಕ್ತಿ, ಗೌರವ ಭಕ್ತರಲ್ಲಿದೆ. ಹೀಗಾಗಿ ಈ ನ್ಯಾಯಾಲಯದ ಸಮಗ್ರ ಚರಿತ್ರೆಯನ್ನು ರಚಿಸಲು ಸಂಬಂಧಿಸಿದ ದಾಖಲೆಗಳನ್ನು ಸಂಗ್ರಹಿಸಬೇಕಾಗಿದೆ.

ಅಡಿಟಿಪ್ಪಣಿ

ಈ ಅಧ್ಯಾಯದ ಅನೇಕ ವಿಷಯಗಳನ್ನು ಶ್ರೀ ಪೀಠದ ಕಛೇರಿಯಿಂದ, ಶ್ರೀ ಗೊಂಗಡಿ ವೀರಯ್ಯನವರು, ಡಾ. ಎ. ಹೆಚ್. ಎಂ. ಸಿದ್ಧಲಿಂಗಯ್ಯನವರು, ಶ್ರೀ ಜಿ. ಎಂ. ಸದಾಶಿವಯ್ಯನವರು ಮತ್ತು ಶ್ರೀ ತೂಲಹಳ್ಳಿ ಹಿರೇಮಠದ ಸಿದ್ಧಲಿಂಗಸ್ವಾಮಿಗಳು, ಶ್ರೀ ರುದ್ರಪ್ಪನವರು (ಲೇಖನ ಕನ್ನಡಪ್ರಭ - ೨೮-೪-೨೦೦೧) ನೀಡಿರುವರು.



ಲಿಂ. ಶ್ರೀ ಕೆ. ಕೊಟ್ರಬಸವನಗೌಡ,
ಮಾಜಿ ಶಾಸಕರು, ಕೊಟ್ಟೂರು




ಶ್ರೀ ಎಂ.ಎಂ.ಜೆ. ಸದ್ಯೋಜಾತ
ಮಾಜಿ ಮಂತ್ರಿಗಳು, ಕೊಟ್ಟೂರು



ಲಿಂ. ಶ್ರೀ ಟಿ. ಮರುಳಸಿದ್ಧನಗೌಡ,
ಮಾಜಿ ಶಾಸಕರು, ಉಜ್ಜಯಿನಿ



ಶ್ರೀ ಬಿ.ಎಸ್. ವೀರಭದ್ರಪ್ಪ
ಮಾಜಿ ಶಾಸಕರು, ಕೊಟ್ಟೂರು



೭೧. ಶ್ರೀಪೀಠದ ನ್ಯಾಯಾಧೀಶರ ಕಟ್ಟೆ.



೭೨. ಪಾದರಕ್ಷೆಗಳಿಂದ ಜಗಳ ಮಾಡಿ ಅಶುದ್ಧರೆನಿಸಿದವರು ಶ್ರೀಪೀಠದಲ್ಲಿ ಶುದ್ದೀಕರಣ.



೭೩. ಉ॥ಸ॥ಪೀ॥ ದಕ್ಷಿಣ ದಿಕ್ಕಿನ ಈಗಿನ ಕೈಲಾಸ ಮಹಾದ್ವಾರ.



೭೪. ಉ॥ಸ॥ಪೀ॥ ದಕ್ಷಿಣ ದಿಕ್ಕಿನ ಹಳೆಯ ಕೈಲಾಸ ಮಹಾದ್ವಾರ.

ಶ್ರೀ ಪೀಠದ ಶಿಕ್ಷಣ

ಉಜ್ಜಯಿನೀ ಸದ್ಧರ್ಮ ಪೀಠವು ಶಿಕ್ಷಣ ಪ್ರಚಾರ ಕೆಲಸದಲ್ಲೂ ತನ್ನನ್ನು ತಾನು ತೊಡಗಿಸಿಕೊಂಡು ಅಪಾರ ಕೊಡುಗೆಯನ್ನಿತ್ತಿದೆ. ತನ್ನ ಶೈಕ್ಷಣಿಕ ಚಟುವಟಿಕೆಗಳ ಅಂಗವಾಗಿ ಅನೇಕ ಕಡೆಗಳಲ್ಲಿ ವಿದ್ಯಾಕೇಂದ್ರಗಳನ್ನು ಮತ್ತು ವಿದ್ಯಾರ್ಥಿ ಪ್ರಸಾದ ನಿಲಯಗಳನ್ನು ಪೀಠ ಆರಂಭಿಸಿದೆ. ಇದರ ಜೊತೆಯಲ್ಲಿ ವಿಶೇಷ ಉಪನ್ಯಾಸ, ವಿಚಾರ ಸಂಕಿರಣ, ಸಮ್ಮೇಳನ, ಪುರಾಣ-ಪ್ರವಚನ ಮತ್ತು ಧರ್ಮಗೋಷ್ಠಿಗಳನ್ನು ಏರ್ಪಡಿಸಲಾಗುತ್ತಿದೆ. ಡೈರಿ, ಕ್ಯಾಲೆಂಡರ್, ಪತ್ರಿಕೆ ಅಥವಾ ನಿಯತಕಾಲಿಕೆಗಳನ್ನೂ ಹೊರತರುತ್ತಿದೆ. ಈ ಶೈಕ್ಷಣಿಕ ಕಾರ್ಯಗಳ ಉಸ್ತುವಾರಿಯನ್ನು ನೋಡಿಕೊಳ್ಳಲು ಶ್ರೀ ಪೀಠದ ಜಗದ್ಗುರುಗಳ ಅಧ್ಯಕ್ಷತೆಯಲ್ಲಿ ಕಾಲಕಾಲಕ್ಕೆ ಸಮಿತಿ-ಉಪಸಮಿತಿಗಳನ್ನು ರಚಿಸಿಸಲಾಗುತ್ತದೆ. ಹೀಗೆ ಶ್ರೀ ಪೀಠವು ತನ್ನ ಶಿಕ್ಷಣ ಪ್ರಸಾರವನ್ನು ಪ್ರಗತಿಪರವಾಗಿ ಮುಂದುವರಿಸಿಕೊಂಡು ಹೋಗುತ್ತಿದೆ.

ಶ್ರೀಪೀಠದ ಶೈಕ್ಷಣಿಕ ಚರಿತ್ರೆಯು ಶ್ರೀ ಸಿದ್ಧಲಿಂಗ ಜಗದ್ಗುರುಗಳ ಕಾಲಾವಧಿಯಿಂದ ಸ್ವಲ್ಪ ನಿಚ್ಚಳವಾಗಿ ಗೋಚರಿಸುವುದು. ೧೯೨೦ರ ಮುಂಚೆಯೇ ಶ್ರೀ ಪೀಠದಲ್ಲಿ ಸಂಸ್ಕೃತ ವೈದಿಕ ಶಾಲೆಯನ್ನು ತೆರೆಯಲಾಗಿದ್ದಿತು. ಈ ಪಾಠಶಾಲೆಯ ಅಧ್ಯಾಪಕರನ್ನಾಗಿ ಶ್ರೀ ಉಮಚಗಿ ಮಳೀಮಠದ ಶಂಕರಶಾಸ್ತ್ರಿಗಳನ್ನು ನೇಮಿಸಲಾಗಿತ್ತು. ಈ ಶಾಲೆಯಲ್ಲಿ ತರ್ಕ, ವೇದಾಂತ, ಸಾಂಖ್ಯಶಾಸ್ತ್ರಗಳ ಅಧ್ಯಾಪನ ಜೊತೆಗೆ ದೀಕ್ಷಾ, ವಿವಾಹಾದಿ ವಿಧಿಗಳ ಪಾಠಗಳೂ ನಡೆಯುತ್ತಿದ್ದವು.

ಶ್ರೀ ಸಿದ್ಧಲಿಂಗ ಜಗದ್ಗುರುಗಳು ಶ್ರೀಪೀಠದ ಜಗದ್ಗುರುಗಳಾದ ಬಳಿಕ ತಮ್ಮ ಆರಂಭಿಕ ಸಂಸ್ಕೃತ ಶಿಕ್ಷಣವನ್ನು ಕೆಲವು ದಿವಸ ಗೊಂಡಬಾಳು ವೇ|| ಬಸವಪ್ಪ ಶಾಸ್ತ್ರಿಗಳಲ್ಲಿ ಮಾಡಿದರು. ನಂತರ ಧಾರವಾಡ ಜಿಲ್ಲೆಯ ಕೊಂಗವಾಡ ಗ್ರಾಮದ ವೇ||ಪಂ|| ವೀರಭದ್ರ ಶಾಸ್ತ್ರಿಗಳನ್ನು ಆಹ್ವಾನಿಸಿ ವ್ಯಾಕರಣ, ಶಾಸ್ತ್ರಾಭ್ಯಾಸವನ್ನು ಮಾಡಿದರು. ತದನಂತರ ಉಜ್ಜಯಿನಿ ಗ್ರಾಮದ ವೇ|| ಬಿ. ಎಂ. ಗುರುಸಿದ್ಧ ಶಾಸ್ತ್ರಿಗಳ ಮಾರ್ಗದರ್ಶನದಲ್ಲೂ ಅಭ್ಯಾಸ ನಡೆಸಿದರು.

ಶ್ರೀ ಸಿದ್ಧಲಿಂಗ ಜಗದ್ಗುರುಗಳು ಸೊಲ್ಲಾಪುರದಲ್ಲಿ ವಾರದ ಮಲ್ಲಪ್ಪನವರ ಸಂಸ್ಕೃತ ಪಾಠಶಾಲೆಯನ್ನು ವೇ||ಪಂ|| ಶಂಕರಶಾಸ್ತ್ರಿಗಳೊಡನೆ ದಿನಾಂಕ

೩೧-೮-೧೯೩೩ರಲ್ಲಿ ವೀಕ್ಷಿಸಿದರು. ಆ ಶಾಲೆಯ ವ್ಯವಸ್ಥೆಯನ್ನು ಮತ್ತು ವಿದ್ಯಾರ್ಥಿಗಳನ್ನು ಪರೀಕ್ಷಿಸಿದರು. ಶ್ರೀ ಮಲ್ಲಪ್ಪ ಅವರ ಸ್ಮಾರಕವಾಗಿ ಆ ಶಾಲೆಗೆ ಐದು ಸಾವಿರ ಬೆಳ್ಳಿಯ ರೂಪಾಯಿಗಳನ್ನು ದೇಣಿಗೆಯಾಗಿ ನೀಡಿದರು. ಸಂಸ್ಕೃತ ವಿದ್ಯಾಭಿವೃದ್ಧಿ ಫಂಡ್‌ನ್ನು ಸ್ಥಾಪಿಸಿದರು.

ಕೊಟ್ಟೂರಿನ ಗಚ್ಚಿನ ಮಠದಲ್ಲಿ ಶ್ರೀದಾರುಕಾಚಾರ್ಯ ಸಂಸ್ಕೃತ ಪಾಠ ಶಾಲೆಯನ್ನು ಸ್ಥಾಪಿಸಿದರು. ಆ ಶಾಲೆಗೆ ವೇ॥ ಪಂ॥ ಉಮಚಗಿ ಶಂಕರ ಶಾಸ್ತ್ರಿಗಳನ್ನು ಅಧ್ಯಾಪಕರನ್ನಾಗಿ ನೇಮಿಸಿದರು. ಈ ಶಿಕ್ಷಣ ಸಂಸ್ಥೆಯನ್ನು ನೋಡಿಕೊಳ್ಳಲು ಹನ್ನೆರಡು ಸದಸ್ಯರುಳ್ಳ ಸಮಿತಿಯನ್ನು ನೇಮಕ ಮಾಡಿದರು.

ಶ್ರೀ ಜಗದ್ಗುರುಗಳು ತಮ್ಮ ಸಮಯವನ್ನು ದೈನಂದಿನ ಚಟುವಟಿಕೆಗಳಿಗೆ ಮತ್ತು ಅಧ್ಯಯನ-ಅಧ್ಯಾಪನಗಳಿಗೂ ಮೀಸಲಾಗಿಟ್ಟದ್ದರು. ೪ ಗಂಟೆಯಿಂದ ವೇದಾಂತ ಗ್ರಂಥಾವಲೋಕನ ಮಾಡುತ್ತಿದ್ದರು. ಸಾಯಂಕಾಲ ೭ ಗಂಟೆಯಿಂದ ಧರ್ಮೋಪದೇಶ ಕಾರ್ಯದಲ್ಲಿ ನಿರತರಾಗಿರುತ್ತಿದ್ದರು.

ಬೆಂಗಳೂರಿನಲ್ಲಿ ಸಂಸ್ಕೃತ ಕಾಲೇಜನ್ನು ತೆರೆಯಲು ಹನ್ನೊಂದು ಸಾವಿರ ರೂಪಾಯಿಗಳನ್ನು ನೀಡುವುದಾಗಿ ದಿನಾಂಕ ೧೬.೧೦.೧೯೩೯ರಲ್ಲಿ ವಾಗ್ದಾನ ಮಾಡಿದರು. ಶ್ರೀ ಹಾನಗಲ್ ಕುಮಾರಸ್ವಾಮಿಗಳಿಗೆ ಶಿವಯೋಗ ಮಂದಿರವನ್ನು ಸ್ಥಾಪಿಸಲು ಐದು ಸಾವಿರ ಬೆಳ್ಳಿ ನಾಣ್ಯಗಳನ್ನು ಆಶೀರ್ವದಿಸಿದರು.

ದೇಶದಲ್ಲಿ ಗುರುವರ್ಗದವರ ಸುಧಾರಣೆಗಾಗಿ ಅನೇಕ ಉಪಯುಕ್ತ ಕಾರ್ಯಗಳನ್ನು ಶ್ರೀಮಹಾಸ್ವಾಮಿಗಳು ಮಾಡಿ ಅದಕ್ಕಾಗಿ ಪಾಠಶಾಲೆಗಳನ್ನು ಸ್ಥಾಪಿಸಿದರು. ಉಜ್ಜಯಿನೀ ಪೀಠದಲ್ಲಿ ಮೂರು ದಿವಸ ವೈಶಾಖ ಮಾಸದಲ್ಲಿ ಐದನೇ ಸದ್ಧರ್ಮ ಪರಿಷತ್ತನ್ನು ಏರ್ಪಡಿಸಿದರು. ಈ ಪರಿಷತ್ತಿನಲ್ಲಿ ಅನೇಕ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು. ಅವು ಹೀಗಿವೆ:

೧. ಪಂಡಿತರ ವಿದ್ವತ್ತಿಗೆ ಅನುಗುಣವಾಗಿ ವರ್ಷಾಶನ ನೀಡುವುದು.

೨. ಸಂಸ್ಕೃತ ಕಲಿಯುವ ವಿದ್ಯಾರ್ಥಿಗಳನ್ನು ಪರೀಕ್ಷಿಸಿ ಸಂಭಾವನೆ ನೀಡುವುದು.

೩. ಶ್ರೀಮದ್ ಪಂಚಾಚಾರ್ಯರ ಬಗ್ಗೆಯಾಗಲೀ ಅಥವಾ ಒಬ್ಬೊಬ್ಬ ಆಚಾರ್ಯರ ಬಗ್ಗೆಯಾಗಲೀ ಶಿವಕೀರ್ತನಕಾರರು ಕೀರ್ತನ ಮಾಡಿದರೆ ಅವರಿಗೆ ಸುವರ್ಣಫಲಕ ಹಾಗೂ ಮಾಶಾಸನ ನೀಡುವುದು.

ಗ್ರಂಥ ಪ್ರಕಟಣೆ ದಿಶೆಯಲ್ಲಿಯೂ ಅನೇಕ ಮಹತ್ವದ ಕಾರ್ಯವನ್ನು ಶ್ರೀ ಸಿದ್ಧಲಿಂಗಶಿವಾಚಾರ್ಯರು ಮಾಡಿದರು. ಪ್ರಸಿದ್ಧ ಪತ್ರಿಕೆ, ವಾರ್ತಾಪತ್ರಿಕೆ, ವಾರಪತ್ರಿಕೆ ಮತ್ತು ಮಾಸ ಪತ್ರಿಕೆಗಳನ್ನು ಹೊರ ತರಲು ನೆರವನ್ನು ನೀಡಿದರು. ಮೈಸೂರಿನ

ಪಂಚಾಚಾರ್ಯ ಪ್ರಭಾ ವಾರ ಪತ್ರಿಕೆಯನ್ನು ೧೬-೫-೧೯೨೭ರಲ್ಲಿ ಹೊರ ತರಲು ಇವರೇ ಕಾರಣರಾದರು. ಈ ವಾರ ಪತ್ರಿಕೆಗೆ ಮೈಸೂರು ಮಹಾರಾಜರ ಆಸ್ಥಾನ ವಿದ್ವಾನ್ ಶಿರಸಿ ವೇ॥ ಗುರುಶಾಂತಶಾಸ್ತ್ರಿಗಳು ಸಂಪಾದಕರಾಗಿದ್ದರೆ, ವೇ॥ ಪಂ॥ ಕಾಶೀನಾಥಶಾಸ್ತ್ರಿಗಳು ಸಂಚಾಲಕರಾಗಿದ್ದರು. ಗುರುಗಳ ಅಥವಾ ಪಂಚಾಚಾರ್ಯ ಸೌರ್ವಭೌಮರ ಭಾವಚಿತ್ರಗಳ ಮುದ್ರಣ ಕಾರ್ಯಕ್ಕೆ ಪ್ರೋತ್ಸಾಹ ನೀಡಿದರು. ಇಷ್ಟೇ ಅಲ್ಲ ಪಂಚಾಚಾರ್ಯರ ಭಜನಾ ಮಂಡಳಗಳು ಉದಯಿಸಲು ಕಾರಣರಾದರು.

ಈ ರೀತಿಯ ಶೈಕ್ಷಣಿಕ ಕ್ಷೇತ್ರದ ಬೆಳವಣಿಗೆಯ ಜೊತೆ ಶ್ರೀ ಪೀಠದಲ್ಲಿ ಜ್ಞಾನಗುರು ವಿದ್ಯಾಪೀಠವನ್ನು ಸ್ಥಾಪಿಸಬೇಕೆಂಬುದು ಲಿಂ॥ ಶ್ರೀ ಸಿದ್ಧಲಿಂಗ ಜಗದ್ಗುರುಗಳ ಸದಾಶಯವಾಗಿತ್ತು. ಈ ವಿದ್ಯಾಪೀಠದ ಚಟುವಟಿಕೆಗಳ ಬಗ್ಗೆ ಪ್ರತ್ಯೇಕ ಸಂವಿಧಾನ ರಚನೆ ಶ್ರೀ ಸಿದ್ಧಲಿಂಗ ಜಗದ್ಗುರುಗಳ ಯೋಜನೆಯಾಗಿತ್ತು. ಅದನ್ನು ಪರಮಪೂಜ್ಯ ಜಗದ್ಗುರು ಲಿಂ॥ ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಕಾರ್ಯರೂಪಕ್ಕೆ ತಂದುದು ಸಂತಸದ ಸಂಗತಿ. ಅವರು ೧೯೪೭ರಲ್ಲಿ ಉಜ್ಜಯಿನಿ ಸದ್ಧರ್ಮ ಸಿಂಹಾಸನ ಜ್ಞಾನಗುರು ವಿದ್ಯಾಪೀಠವನ್ನು ಸ್ಥಾಪಿಸಿದರು. ಶ್ರೀಗಳವರಿಗೆ ವೀರಶೈವದ ಲಿಂಗದೀಕ್ಷೆ, ವಿವಾಹ, ಅಂತ್ಯಸಂಸ್ಕಾರ ಇತ್ಯಾದಿ ಸಂಸ್ಕಾರಗಳನ್ನು ಸಕ್ರಮವಾಗಿ, ಶಾಸ್ತ್ರಶುದ್ಧವಾಗಿ ನಡೆಸುವ ಜಂಗಮ ಯುವಕರನ್ನು ತಯಾರಿಸುವ ಉದ್ದೇಶಕ್ಕೆ ಪ್ರೋತ್ಸಾಹ ನೀಡಿದರು. ಸಮಾಜದ ಎಲ್ಲ ವರ್ಗದ ಜನರು ಸಂಸ್ಕೃತ, ವೈದಿಕ, ಜ್ಯೋತಿಷ್ಯ ಇವುಗಳನ್ನು ಕಲಿಯಬೇಕೆಂಬ ಇಚ್ಛೆಯೂ ಮೂಡಿತು. ಅದಕ್ಕಾಗಿ ಶ್ರೀ ಪೀಠದಲ್ಲಿ ಸಂಸ್ಕೃತ-ವೈದಿಕ ಶಾಲೆಗಳನ್ನು ತೆರೆಯಬೇಕೆನಿಸಿತು. ಸರ್ಕಾರದಿಂದ ಸಹಾಯ ಪಡೆಯುವದಕ್ಕೋಸ್ಕರ ಈ ಶಾಲಾ ಕಾಲೇಜುಗಳನ್ನು ತೆರೆಯಬೇಕೆಂಬ ಅಭಿಲಾಷೆ ಶ್ರೀಸನ್ನಿಧಿಗಳಿಗೆ ಇರಲಿಲ್ಲ. ಮೊದಲು ಈ ವಿದ್ಯಾಕೇಂದ್ರಗಳನ್ನು ತೆರೆಯಲು ಮೂಲ ಧನವನ್ನು ಸಂಗ್ರಹಿಸಬೇಕು. ಪೂರಕ ಆಸ್ತಿಯನ್ನು ಗಳಿಸಬೇಕೆಂಬ ಗುರಿ ಅವರದಾಗಿತ್ತು. ಈ ಕಾರಣಕ್ಕಾಗಿ ಲಿಂ॥ ಶ್ರೀಸಿದ್ಧೇಶ್ವರ ಜಗದ್ಗುರುಗಳು ಮತ್ತು ಲಿಂ॥ ಶ್ರೀ ಮರುಳಾರಾಧ್ಯ ಜಗದ್ಗುರುಗಳು ದೇಶಸಂಚರಿಸಿ ಭಕ್ತರಿಂದ ನಿಧಿಯನ್ನು ಸಂಗ್ರಹಿಸಿ ಈ ಕಾರ್ಯವನ್ನು ಆರಂಭಿಸಿದರು.

ಶ್ರೀಪೀಠದ ವಿದ್ಯಾಕೇಂದ್ರಗಳನ್ನು ನಡೆಸಲು ವ್ಯವಸ್ಥಿತ ಒಂದು ಬೈಲಾವನ್ನು ತಯಾರಿಸಲು ಕಾರಣರಾದವರು ಮಂಗಾಪುರದ ಶ್ರೀ ಚೆನ್ನಬಸಯ್ಯನವರು. ಶಿವಾದ್ವೈತ ಸಮ್ಮೇಳನವನ್ನು ಜಾರಿತಂದವರು ಮಂಗಾಪುರದ, ಕೈರೋದಲ್ಲಿ ಸೇವೆ ಸಲ್ಲಿಸಿದ ಡಾ.ಎಂ.ಶಿವಮೂರ್ತಿಗಳು. ವಿಶೇಷವಾಗಿ ಶ್ರೀಪೀಠದಲ್ಲಿ ಸಾಹಿತ್ಯಿಕವಾಗಿ ಸೇವೆ ಸಲ್ಲಿಸಿದವರು ಡಾ.ಎಂ.ಶಿವಕುಮಾರಸ್ವಾಮಿ ಮತ್ತು ಡಾ.ಹೆಚ್.ಎಂ. ಮರುಳಸಿದ್ಧಯ್ಯನವರು. ಹರಪನಹಳ್ಳಿ ಯ ತೆಗ್ಗಿನಮಠದ ಶ್ರೀ ಷ॥ಬ್ರ॥ ಚಂದ್ರಮೌಳಿ ಶಿವಾಚಾರ್ಯ

ಮಹಾಸ್ವಾಮಿಗಳು ಶ್ರೀಪೀಠದ ವಿದ್ಯಾಕೇಂದ್ರಗಳ ಏಳ್ಗೆಗಾಗಿ ಶ್ರಮಿಸಿದರು. ಇತ್ತೀಚಿನ ದಿನಗಳಲ್ಲಿ ವಿದ್ಯಾ ಪೀಠದ ಏಳ್ಗೆಗಾಗಿ ಸೊಕ್ಕೆಯ ಶ್ರೀ ಕೆ. ಕೊಟ್ರಪ್ಪ ಅವರು ಅಮೋಘ ಸೇವೆಯನ್ನು ಸಲ್ಲಿಸುತ್ತಿರುವರು. ಹೀಗೆ ಶ್ರೀಪೀಠದ ವಿದ್ಯಾಕೇಂದ್ರಗಳ ಬೆಳವಣಿಗೆಗೆ ಅನೇಕರು ಮುಕ್ತ ಮನಸ್ಸಿನಿಂದ ಸೇವೆ ಸಲ್ಲಿಸುತ್ತಿರುವುದು ಸಂತಸದ ಸಂಗತಿಯಾಗಿದೆ.

ಜ್ಞಾನಗುರು ವಿದ್ಯಾಪೀಠ

ಆರಂಭಿಕ ಹಂತದಲ್ಲಿ ಶ್ರೀಸನ್ನಿಧಿಗಳು ಶ್ರೀ ಪೀಠದಲ್ಲಿ ಹಿಂದಿದ್ದ ಸಂಸ್ಕೃತ ಶಾಲೆಯನ್ನು ಪುನಃ ಪ್ರಾರಂಭಿಸಿದರು. ಶ್ರೀ ಪೀಠದ ಜ್ಞಾನ ಗುರು ವಿದ್ಯಾಪೀಠಕ್ಕೆ ಚರಪಟ್ಟಾಧ್ಯಕ್ಷರಾಗಿದ್ದ ಲಿಂ॥ ಶ್ರೀಮರುಳಾರಾಧ್ಯಶಿವಾಚಾರ್ಯ ಮಹಾಸ್ವಾಮಿಗಳನ್ನು ಉಪಾಧ್ಯಕ್ಷರನ್ನಾಗಿ ನೇಮಿಸಿದರು. ೧೯೬೩ರಲ್ಲಿ ಶ್ರೀ ಪೀಠದಲ್ಲಿಯೇ ಪ್ರೌಢಶಾಲೆಯನ್ನು ಪ್ರಾರಂಭಿಸಿದರು. ಅದರ ಆರಂಭಿಕ ಮುಖ್ಯೋಪಾಧ್ಯಾಯರನ್ನಾಗಿ ಶ್ರೀ ಸಿದ್ಧಲಿಂಗಯ್ಯನವರನ್ನು ನೇಮಿಸಲಾಯಿತು. ತದನಂತರ ಇನ್ನಿತರರು ನೇಮಕಗೊಂಡರು.

ಶ್ರೀ ಉಜ್ಜಯಿನಿ ಸದ್ಧರ್ಮ ಸಿಂಹಾಸನ ಜ್ಞಾನಗುರು ವಿದ್ಯಾಸಂಸ್ಥೆಯ ವತಿಯಿಂದ ಅನೇಕ ಶಾಲೆಗಳು, ಕರ್ನಾಟಕ ರಾಜ್ಯದ ಧಾರವಾಡ, ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ ಜಿಲ್ಲೆಗಳಲ್ಲಿ ತೆರೆಯಲ್ಪಟ್ಟವು.

ಈ ವಿದ್ಯಾಕೇಂದ್ರಗಳನ್ನು ಶ್ರೀ ಪೀಠದ ಅನೇಕ ಸಮಸ್ಯೆಗಳ ನಡುವೆ ಬೆಳೆಸಲಾಗುತ್ತಿದೆ. ಈಗಿನ ಜಗದ್ಗುರುಗಳಾದ ಶ್ರೀ ಮರುಳಸಿದ್ಧ ರಾಜದೇಶೀಕೇಂದ್ರ ಶಿವಾಚಾರ್ಯ ಭ.ಗವತ್ಪಾದ ಮಹಾಸ್ವಾಮಿಗಳವರು ಶಿಕ್ಷಣ ಕೇಂದ್ರಗಳನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಲು ಅವಿರತವಾಗಿ ಶ್ರಮಿಸುತ್ತಿರುವರು. ಅದಕ್ಕಾಗಿ ತಮ್ಮ ಅಧ್ಯಕ್ಷತೆಯಲ್ಲಿ ಕಾರ್ಯಕಾರಿ ಸಮಿತಿಯನ್ನು ರಚಿಸಿರುವರು. ಈಗ ಶ್ರೀ ಪೀಠದ ಅಧೀನದಲ್ಲಿ ಉಳಿದಿರುವ ವಿದ್ಯಾಕೇಂದ್ರಗಳು; ಅಂಬಳಿ, ಹರಪನಹಳ್ಳಿ, ಕೊಟ್ಟೂರು, ವರೂರು, ಉಜ್ಜಯಿನಿ, ಕೂಬಿಹಾಳ್, ಜಗಳೂರು, ಅರಸೀಕೆರೆ, ಹೊಸಹಳ್ಳಿ ಮತ್ತು ಬುಕ್ಕಾಂಬೂದಿಗಳಲ್ಲಿವೆ. ಈ ವಿದ್ಯಾಕೇಂದ್ರಗಳನ್ನು ನಡೆಸಲು ಅಲ್ಲಿಯ ಸ್ಥಳಿಕರೂ ಸಹ ತಮ್ಮ ತನು, ಮನ, ಧನವನ್ನು ಸಮರ್ಪಿಸಿದ್ದಾರೆ.

ಶ್ರೀ ಪೀಠದ ವತಿಯಿಂದ ಈಗಿನ ಶ್ರೀಗಳು ಕೆಲವು ಹೊಸ ವಿದ್ಯಾಕೇಂದ್ರಗಳನ್ನು ತೆರೆದಿರುವರು. ಅವು ಕೊಟ್ಟೂರು, ಉಜ್ಜಯಿನಿ ಮತ್ತು ಹರಪನಹಳ್ಳಿಗಳಲ್ಲಿವೆ. ಒಟ್ಟಾರೆ ಶ್ರೀ ಪೀಠದ ವಿದ್ಯಾಕೇಂದ್ರಗಳ ಪಟ್ಟಿ ಹೀಗಿದೆ:

೧. ಉಜ್ಜಯಿನಿ ಜಗದ್ಗುರು ಮರುಳಾರಾಧ್ಯ ಪದವಿಪೂರ್ವ ಕಲಾ ಮತ್ತು ವಿಜ್ಞಾನ ಕಾಲೇಜು, ಹರಪನಹಳ್ಳಿ, (ದಾವಣಗೇರಿ ಜಿಲ್ಲೆ).

೨. ಉಜ್ಜಯಿನಿ ಜಗದ್ಗುರು ಮಹಿಳಾ ಪದವಿ ಮಹಾವಿದ್ಯಾಲಯ, ಹರಪನಹಳ್ಳಿ, (ದಾವಣಗೇರಿ ಜಿಲ್ಲೆ).
೩. ಶ್ರೀ ಉಜ್ಜಯಿನಿ ಜಗದ್ಗುರು ಸಂಯುಕ್ತ ಪದವಿ ಪೂರ್ವಕಾಲೇಜು, ಉಜ್ಜಯಿನಿ-(ಕೂಡ್ಲಿಗಿ ತಾಲೂಕು, ಬಳ್ಳಾರಿ ಜಿಲ್ಲೆ).
೪. ಶ್ರೀ ಉಜ್ಜಯಿನಿ ಸಿದ್ಧಲಿಂಗ ಜಗದ್ಗುರು ಪದವಿ ಪೂರ್ವ ಕಾಲೇಜು, ಕೂಬಿಹಾಳ, ಕುಂದಗೋಳ(ತಾ), ಧಾರವಾಡ(ಜಿ).
೫. ಶ್ರೀ ಉಜ್ಜಯಿನಿ ಸಿದ್ಧೇಶ್ವರ ಪ್ರೌಢಶಾಲೆ, ವರೂರು, ಹುಬ್ಬಳ್ಳಿ (ತಾ), ಧಾರವಾಡ(ಜಿ).
೬. ಶ್ರೀ ಬಸವೇಶ್ವರ ಪ್ರೌಢಶಾಲೆ, ಉಕ್ಕುಂದ, ರಾಣೆಬೆನ್ನೂರು (ತಾ), ಹಾವೇರಿ (ಜಿ).
೭. ಶ್ರೀ ಉಜ್ಜಯಿನಿ ಜಗದ್ಗುರು ಸಿದ್ಧೇಶ್ವರ ಬಾಲಕಿಯರ ಪ್ರೌಢಶಾಲೆ, ಜಗಳೂರು, ದಾವಣಗೇರಿ (ಜಿ).
೮. ಶ್ರೀ. ಜಿ.ವಿ.ವಿ.ಡಿ.ಪ್ರೌಢಶಾಲೆ, ಅರಸೀಕೆರೆ, ಹರಪನಹಳ್ಳಿ (ತಾ), ದಾವಣಗೇರಿ(ಜಿ).
೯. ಶ್ರೀ ಕೆ.ಡಿ.ಡಿ. ಪ್ರೌಢಶಾಲೆ, ಹೊಸಹಳ್ಳಿ, ಕೂಡ್ಲಿಗಿ(ತಾ), ಬಳ್ಳಾರಿ (ಜಿ).
೧೦. ಶ್ರೀ ಕಲ್ಲೇಶ್ವರ ಪ್ರೌಢಶಾಲೆ, ಅಂಬಳಿ, ಹಗರಿಬೊಮ್ಮನಹಳ್ಳಿ (ತಾ), ಬಳ್ಳಾರಿ (ಜಿ).
೧೧. ಶ್ರೀ ಉಜ್ಜಯಿನಿ ಸಿದ್ಧಲಿಂಗ ಜಗದ್ಗುರು ಪ್ರೌಢಶಾಲೆ, ಬುಕ್ಕಾಂಬದಿ, ತರಿಕೇರಿ(ತಾ), ಚಿಕ್ಕಮಂಗಳೂರು(ಜಿ).
೧೨. ಶ್ರೀ ಉಜ್ಜಯಿನಿ ಜಗದ್ಗುರು ಕೈಗಾರಿಕಾ ತರಬೇತಿ ಕೇಂದ್ರ, ಕೊಟ್ಟೂರು, ಕೂಡ್ಲಿಗಿ (ತಾ), ಬಳ್ಳಾರಿ (ಜಿ).
೧೩. ಶ್ರೀ ಮರುಳಸಿದ್ಧೇಶ್ವರ ಸಂಸ್ಕೃತ ಪಾಠಶಾಲೆ, ಉಜ್ಜಯಿನಿ, ಕೂಡ್ಲಿಗಿ(ತಾ), ಬಳ್ಳಾರಿ(ಜಿ).
೧೪. ಶ್ರೀ ಮರುಳಸಿದ್ಧೇಶ್ವರ ಸಂಗೀತ ಪಾಠಶಾಲೆ, ಉಜ್ಜಯಿನಿ, ಕೂಡ್ಲಿಗಿ(ತಾ), ಬಳ್ಳಾರಿ(ಜಿ).

ಈ ಎಲ್ಲಾ ವಿದ್ಯಾಕೇಂದ್ರಗಳನ್ನು ಶ್ರೀಪೀಠದ ''ಜ್ಞಾನಗುರು ವಿದ್ಯಾ ಪೀಠದ'' ಅಡಿಯಲ್ಲಿ ನೋಡಿಕೊಳ್ಳಲಾಗುತ್ತಿದೆ. ಅದರ ಉಸ್ತುವಾರಿಯನ್ನು ನೋಡಿಕೊಳ್ಳಲು ಒಂದು ಪ್ರತ್ಯೇಕ ಕಾರ್ಯಕಾರಿ ಮಂಡಳಿಯನ್ನು ರಚಿಸಲಾಗಿದೆ. ಈ ಕಾರ್ಯಕಾರಿ ಮಂಡಳಿಯ ಕಾಲಾವಧಿ ಮೂರು ವರ್ಷಗಳು. ಈ ಕಾರ್ಯಕಾರಿ ಮಂಡಳಿಗೆ ಖಾಯಂ ಅಧ್ಯಕ್ಷರು ಶ್ರೀಪೀಠದ ಜಗದ್ಗುರುಗಳು. ಈಗಿರುವ (೧೯೯೯-೨೦೦೦) ಕಾರ್ಯಕಾರಿ ಮಂಡಳಿಯ ವಿವರ ಹೀಗಿದೆ.

೧. ಶ್ರೀ ಮದ್ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಮರುಳಸಿದ್ಧರಾಜದೇಶೀಕೇಂದ್ರ ಮಹಾಸ್ವಾಮಿಗಳು, ಉಜ್ಜಯಿನಿ-ಅಧ್ಯಕ್ಷರು

೨. ಶ್ರೀ ಎಂ.ಎಂ.ಜೆ. ಸದ್ಯೋಜಾತ, ಮಾಜಿ ಸಚಿವರು, ಉಪಾಧ್ಯಕ್ಷ.

೩. ಶ್ರೀ ಎಸ್.ಮರುಳಸಿದ್ಧಪ್ಪ, ಕೃಷಿಕರು, ಉಜ್ಜಯಿನಿ-ಖಜಾಂಚಿ.

೪. ಶ್ರೀ ಸಿ.ಜೆ.ಎಂ. ಚನ್ನವೀರಸ್ವಾಮಿ, ವಕೀಲರು,ಹರಪನಹಳ್ಳಿ : ಕಾರ್ಯದರ್ಶಿ

೫. ಶ್ರೀ ಎಸ್.ಮಲ್ಲಿಕಾರ್ಜುನ, ಮಾಜಿ ಪ್ರಧಾನರು, ಉಜ್ಜಯಿನಿ: ಸಹಕಾರ್ಯದರ್ಶಿ.

೬. ಶ್ರೀ ಷ॥ಬ್ರ॥ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಡೋಣರು, ಚಾನುಕೋಟಿಮಠ, ಕೊಟ್ಟೂರು-ಸದಸ್ಯರು.

೭. ಶ್ರೀ ಷ॥ಬ್ರ॥ ವೀರಭದ್ರ ಶಿವಾಚಾರ್ಯಸ್ವಾಮಿಗಳು, ಕಂಬಾಳಿಮಠ, ತೆಕ್ಕಲಕೋಟಿ - ಸದಸ್ಯರು.

೮. ಶ್ರೀ ಗೊಗ್ಗಾ ಸಿದ್ರಾಮಯ್ಯ, ಗಣಿಮಾಲೀಕರು, ಹೊಸಪೇಟೆ.

೯. ಶ್ರೀ ಬಿ.ಸಿ.ಉಮಾಪತಿ, ಜವಳಿ ವರ್ತಕರು, ದಾವಣಗೇರಿ-ಸದಸ್ಯರು.

೧೦. ಶ್ರೀ. ಬಿ.ಎಸ್.ವೀರಭದ್ರಪ್ಪ, ಮಾಜಿ ಶಾಸಕರು, ಕೊಟ್ಟೂರು-ಸದಸ್ಯರು.

೧೧. ಶ್ರೀ ಬಿ.ನಾಗರಾಜ, ಮಾಜಿ ಅಧ್ಯಕ್ಷರು, ಜಿಲ್ಲಾ ಪಂಚಾಯತ, ಕೊಟ್ಟೂರು-ಸದಸ್ಯರು

೧೨. ಶ್ರೀ ರಾಜಶೇಖರ ಗೌಡ್ರು, ಕೃಷಿಕರು, ಕುರುಗೋಡು-ಸದಸ್ಯರು.

೧೩. ಶ್ರೀ ಎ.ಎಂ.ರೇವಣಸಿದ್ಧಯ್ಯನವರು, ಮಾಜಿಶಾಸಕರು, ಶಿರಿಗೆರೆ-ಸದಸ್ಯರು.

೧೪. ಶ್ರೀ ಎಚ್.ಚಿದಾನಂದಪ್ಪ, ಮಾಜಿ ಪ್ರಧಾನರು, ಎಂ.ಬಿ.ಐಯ್ಯನಹಳ್ಳಿ -ಸದಸ್ಯರು.

ಧರ್ಮ ಹಾಗೂ ತತ್ವ ಸಂಶೋಧನ ಸಂಸ್ಥೆ

ಶ್ರೀ ಪೀಠದಲ್ಲಿ ಧರ್ಮ ಹಾಗೂ ತತ್ವಗಳ ಬಗ್ಗೆ ನಿರಂತರ ಅಧ್ಯಯನ, ಸಂಶೋಧನೆ ನಡೆಯಬೇಕು ಎಂಬುದು ಲಿಂ॥ ಶ್ರೀ ಸಿದ್ಧೇಶ್ವರಶಿವಾಚಾರ್ಯ ಮಹಾಸ್ವಾಮಿಗಳ ಆಶಯವಾಗಿತ್ತು. ಈ ಸಂಸ್ಥೆಯಲ್ಲಿ ಒಂದು ಉತ್ತಮ ಗ್ರಂಥಾಲಯವನ್ನು ಬೆಳೆಸಬೇಕು. ಸಂಶೋಧಕರಿಗೆ ಆಶ್ರಯ ನೀಡಬೇಕು. ವೀರಶೈವ ಧರ್ಮತತ್ವಗಳನ್ನಲ್ಲದೆ ಇನ್ನಿತರ ಪ್ರಮುಖ ಧರ್ಮ, ತತ್ವಗಳೂ ಈ ಅಧ್ಯಯನದ ಪರಿಧಿಯಲ್ಲಿ ಒಳಗೊಂಡಿರಬೇಕು ಎಂಬ ವಿಚಾರ ಅವರದಾಗಿತ್ತು. ಈ ವಿಚಾರವನ್ನು ಕಾರ್ಯರೂಪಕ್ಕೆ ತರಲು ಶ್ರೀ ಪೀಠದ ಆಶ್ರಯದಲ್ಲಿ ಶ್ರೀ ಸಿದ್ದೇಶ್ವರ ಜಗದ್ಗುರುಗಳ ಸಾನಿಧ್ಯದಲ್ಲಿ ಡಾ.ಎಂ.ಶಿವಮೂರ್ತಿ ಅವರ ಮಾರ್ಗದರ್ಶನದಲ್ಲಿ ಧರ್ಮ ಮತ್ತು ತತ್ವ ಸಂಶೋಧನ ಸಂಸ್ಥೆಯು ಕೊನೆಗೆ ಸ್ಥಾಪನೆ ಆಯಿತು. (Research Institute of Religion and Philosophy) ಈ ಸಂಸ್ಥೆಯ ವತಿಯಿಂದ ಈಗಾಗಲೇ ಅನೇಕ ಕಾರ್ಯಗಳು ಯಶಸ್ವಿಯಾಗಿ ನಡೆಯುತ್ತಿವೆ. ವಿಚಾರ ಸಂಕಿರಣಗಳು ಜರುಗಿವೆ. ಕೆಲವು ಧರ್ಮಗ್ರಂಥಗಳೂ ಪ್ರಕಟಗೊಂಡಿವೆ.

ವಿಚಾರ ಸಂಕಿರಣಗಳು

ಧರ್ಮ ಮತ್ತು ತತ್ವಗಳ ಬಗ್ಗೆ ಸದಾ ವಿಚಾರ ಸಂಕಿರಣಗಳು ನಡೆಯುತ್ತಿರಬೇಕೆಂಬುದು ಶ್ರೀಪೀಠದ ನಿಲುವು. ೧೯೮೧ ಮತ್ತು ೧೯೮೨ರಲ್ಲಿ ಧರ್ಮ ಮತ್ತು ತತ್ವಗಳ ಕುರಿತು ಎರಡು ವಿಚಾರ ಸಂಕಿರಣಗಳು ಏರ್ಪಟ್ಟವು. ಈ ವಿಚಾರ ಸಂಕಿರಣಗಳು ಲಿಂ॥ ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರುಗಿದವು. ಡಾ.ಎಂ.ಶಿವಮೂರ್ತಿ ಅವರ ಮಾರ್ಗದರ್ಶನದಲ್ಲಿ ಅವು ನಡೆದವು. ಡಾ.ರುದ್ರಒಡೆಯರಮಠದ ಷಡಕ್ಷರಯ್ಯ ಅವರು ಈ ವಿಚಾರ ಸಂಕಿರಣಗಳನ್ನು ನಡೆಸಲು ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದರು. ಆ ಸಂದರ್ಭದಲ್ಲಿ ಕರ್ನಾಟಕ ಮತ್ತು ಬೆಂಗಳೂರು ವಿಶ್ವವಿದ್ಯಾಲಗಳ ಅನೇಕ ಹಿರಿಯ ಮತ್ತು ಕಿರಿಯ ವಿದ್ವಾಂಸರು ಭಾಗವಹಿಸಿದ್ದರು.★ ಅದರಲ್ಲಿ ಸಿದ್ಧಾಂತ ಶಿಖಾಮಣಿ, ಶ್ರೀ ಪೀಠಗಳ ಪರಂಪರೆ, ಶೈವಧರ್ಮದ ಪ್ರಬೇಧಗಳು, ಉಜ್ಜಯಿನಿ ಸದ್ಧರ್ಮ ಸಿಂಹಾಸನದ ಶಿಲಾಶಾಸನಗಳು ಮತ್ತು ಅದರ ವಾಸ್ತುಶಿಲ್ಪ ಇತ್ಯಾದಿ ವಿಷಯಗಳನ್ನು ಕುರಿತು ಪರಾಮರ್ಶೆ ನಡೆಯಿತು. ಆ ವಿಚಾರ ಸಂಕಿರಣಗಳನ್ನು ಯಶಸ್ವಿಗೊಳಿಸಲು ಇನ್ನಿತರರೂ ಕಾರಣರಾಗಿದ್ದಾರೆ.★★

ಧರ್ಮಗೋಷ್ಠಿಗಳು

ಶ್ರೀ ಪೀಠದ ರಥೋತ್ಸವ ಸಂದರ್ಭದಲ್ಲಿ ಈಗಿನ ಜಗದ್ಗುರುಗಳಾದ ಶ್ರೀಮರುಳಸಿದ್ಧ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರ ಸಾನ್ನಿಧ್ಯದಲ್ಲಿ ವಿಶೇಷ ಧರ್ಮಗೋಷ್ಠಿಗಳು ಬಹು ವಿಜೃಂಭಣೆಯಿಂದ ಹತ್ತು ದಿವಸ ಜರುಗುತ್ತವೆ. ಅದರಲ್ಲಿ ಅನೇಕ ಶಾಖಾಮಠದ ಶ್ರೀಗಳು, ಮಂತ್ರಿಗಳು, ರಾಜಕೀಯ ಧುರೀಣರು, ಸಂಶೋಧಕರು, ಸಾಹಿತಿಗಳು, ಸಂಗೀತಗಾರರು, ಸಮಾಜ ಸೇವಕರು, ದಾನಿಗಳು ಭಾಗವಹಿಸುವರು. ಶ್ರೀ ಪೀಠದ ವತಿಯಿಂದ ಅವರನ್ನು ಸತ್ಕರಿಸುವ ಸಂಪ್ರದಾಯವೂ ಇದೆ.

ಶ್ರಾವಣ ಮಾಸದಲ್ಲಿ ಲಿಂ॥ ಶ್ರೀ ಸಿದ್ಧಲಿಂಗ ಜಗದ್ಗುರುಗಳವರ ಪುರಾಣ ಪ್ರವಚನ ನಡೆಯುವುದು. ಪುರಾಣಮಂಗಲ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮಗಳು ನಡೆಯುತ್ತವೆ. ಈ ಎಲ್ಲ ಸಮಾರಂಭಗಳಲ್ಲಿ ವೀರಶೈವ ಧರ್ಮದ ಬಗ್ಗೆ ಶ್ರೀ ಜಗದ್ಗುರುಗಳವರಿಂದ ಆಶೀರ್ವಚನ ನಡೆಯುವುದು.

★ ಡಾ. ಎಸ್. ಎಂ. ವೃಷಬೇಂದ್ರಸ್ವಾಮಿ, ಡಾ. ಶಿವಕುಮಾರಸ್ವಾಮಿ, ಡಾ. ಮರುಳಸಿದ್ಧಯ್ಯ, ಡಾ. ಅ.ಸುಂದರ, ಡಾ. ಬಿ.ಆರ್. ಹಿರೇಮಠ, ಡಾ. ರು.ಮ.ಷಡಕ್ಷರಯ್ಯ ಮುಂತಾದವರು.

★★ ಧಾರವಾಡದ ಶ್ರೀ ಹನಗೋಡಿಮಠ, ಡಾ. ಎ.ಎಸ್.ಕಡಿ, ಡಾ. ಹಿರೇಮಠ, ಉಜ್ಜಯಿನಿ ಶ್ರೀ ಚನ್ನವೀರಸ್ವಾಮಿ ಮುಂತಾದವರು.

ಶ್ರೀ ಪೀಠದ ಜಗದ್ಗುರುಗಳವರು ದೇಶ ಸಂಚಾರದಲ್ಲಿದ್ದಾಗಲೂ ಅವರಿಂದ ಧರ್ಮೋಪದೇಶ ನಡೆಯುತ್ತದೆ. ಶ್ರೀಪೀಠದ ಹಿಂದಿನ ಲಿಂ॥ ಶ್ರೀ ಮರುಳಸಿದ್ಧ ರಾಜ ದೇಶಿಕೇಂದ್ರ ಸ್ವಾಮಿಗಳವರು ತಾವು ತಂಗಿದ ಕೊಟ್ಟೂರಿನಲ್ಲಿ ಭಕ್ತರಿಗೆ ದಿನನಿತ್ಯ ಶಿವಾನುಭವವನ್ನು ಹೇಳುತ್ತಿದ್ದರು.

ಲಿಂ॥ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಜಗದ್ಗುರುಗಳು ಕಾಶಿಯಲ್ಲಿ ಜರುಗಿದ (೨೧-೨-೧೯೧೮) ಪಂಚಾಚಾರ್ಯರ ಸಮ್ಮೇಳನದಲ್ಲಿ ಪಾಲ್ಗೊಂಡು ಮಹತ್ವದ ಸಲಹೆ ಸೂಚನೆಗಳನ್ನು ನೀಡಿದರು.

ಸದ್ಧರ್ಮ ಪ್ರಭ

ಶ್ರೀ ಪೀಠದ ವತಿಯಿಂದ ಸದ್ಧರ್ಮಪ್ರಭವೆಂಬ ಪತ್ರಿಕೆಯು ೧೯೬೪ ಜನವರಿ ೨೯ ರಂದು ಶ್ರೀ ಪೀಠದ ಲಿಂ॥ ಶ್ರೀ ಸಿದ್ಧೇಶ್ವರ ಶಿವಾಚಾರ್ಯರ ಕೃಪಾಶೀರ್ವಾದದಿಂದ ಬಿಡುಗಡೆಯಾಯಿತು. ಸದ್ಧರ್ಮಪ್ರಭಾ ಪತ್ರಿಕೆಯಲ್ಲಿ ವೀರಶೈವ ಸಾಹಿತ್ಯ, ಇತಿಹಾಸ, ಸಿದ್ಧಾಂತ, ಕಾವ್ಯ, ಸಂಸ್ಕೃತಿ, ಸಮಾಜದ ಚಿಂತನಾತ್ಮಕ ವಿಷಯಗಳನ್ನು ಕುರಿತು ಲೇಖನ ಪ್ರಕಟಿಸುವುದು ಮುಖ್ಯ ಉದ್ದೇಶವಾಗಿದೆ. ಶ್ರೀಪೀಠದ ಅನೇಕ ವಿಷಯಗಳನ್ನು ಈ ಪತ್ರಿಕೆಯಲ್ಲಿ ಪ್ರಟಿಸಲಾಗಿದೆ. ಈ ಪತ್ರಿಕೆಯ ಉಸ್ತುವಾರಿಯನ್ನು ನೋಡಿಕೊಳ್ಳಲು ಒಂದು ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ಶ್ರೀಪೀಠದ ಜಗದ್ಗುರುಗಳ ಅಧ್ಯಕ್ಷತೆಯಲ್ಲಿ ಒಂದು ಪ್ರತ್ಯೇಕ ಸಂಪಾದನ ಮತ್ತು ಕಾರ್ಯಕಾರಿ ಸಮಿತಿಯನ್ನು ಈ ಕೆಳಗಿನಂತೆ ರಚಿಸಲಾಯಿತು.

ಮೊದಲನೇ ಸಮಿತಿ

೧. ಷ॥ಭ್ರ॥ ಶ್ರೀ ಶಿವಪ್ರಕಾಶ ಸ್ವಾಮಿಗಳು : ಪ್ರಧಾನ ಸಂಪಾದಕರು.
೨. ಶ್ರೀ ಜೆ.ವ್ಹಿ.ತಿಪ್ಪೇಸ್ವಾಮಿ ಜಗಳೂರು : ಸಂಪಾದಕರು
೩. ಉಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ೧೦೦೮ ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು: ಅಧ್ಯಕ್ಷರು
೪. ಷ॥ಬ್ರ॥ ಶ್ರೀ ಶಿವಪ್ರಕಾಶ ಸ್ವಾಮಿಗಳು : ಉಪಾಧ್ಯಕ್ಷರು
೫. ಶ್ರೀ ಬಿ.ಎಸ್.ವೀರಭದ್ರಪ್ಪ, ಕೊಟ್ಟೂರು : ಕೋಶಾಧ್ಯಕ್ಷರು
೬. ಶ್ರೀ ಜಿ.ಆರ್.ಹಾಲಸ್ವಾಮಿ, ಜಗಳೂರು : ಕಾರ್ಯದರ್ಶಿ
೭. ಶ್ರೀ ಎಂ. ಸಿದ್ಧಲಿಂಗಪ್ಪ, ಉಜ್ಜಯಿನಿ :ಕಾರ್ಯದರ್ಶಿ.

ಕಾರಣಾಂತರದಿಂದ ಈ ಪತ್ರಿಕೆಯು ನಿಂತು ಹೋಯಿತು. ಈಗಿನ ಶ್ರೀಪೀಠದ ಜಗದ್ಗುರುಗಳಾದ ಶ್ರೀ ಮರುಳಸಿದ್ಧ ರಾಜ ದೇಶೀಕೇಂದ್ರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳು ಈ ಪತ್ರಿಕೆಯನ್ನು ತ್ರೈಮಾಸಿಕವಾಗಿ೧೯೯೯ ಮಾರ್ಚನಿಂದ ಪುನಃ

ಹೊರತರಲು ಆರಂಭಿಸಿದ್ದಾರೆ. ಈಗ ೨೦೦೧ರಿಂದ ಇದು ಮಾಸಿಕ ಪತ್ರಿಕೆಯಾಗಿ ಹೊರಬರುತ್ತಿದೆ. ಅದಕ್ಕಾಗಿ ಈಗಿನ ಶ್ರೀಗಳವರ ಅಧ್ಯಕ್ಷತೆಯಲ್ಲಿ ಒಂದು ಸಂಪಾದನಾ ಸಮಿತಿಯನ್ನು ಈ ಕೆಳಗಿನಂತೆ ರಚಿಸಲಾಗಿದೆ.

೧. ಶ್ರೀ ೧೦೦೮ ಜಗದ್ಗುರು ಮರುಳಸಿದ್ಧರಾಜ ದೇಶೀಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು, ಉಜ್ಜಯಿನಿ : ಅಧ್ಯಕ್ಷರು-ಆಶ್ರಯದಾತರು ಮತ್ತು ಪ್ರಕಾಶಕರು

೨. ಶ್ರೀ.ಷ ||ಬ್ರ|| ಒಡೆಯರ್ ಚಂದ್ರಶೇಖರಶಿವಾಚಾರ್ಯಸ್ವಾಮಿಗಳು - ಗೌರವಾಧ್ಯಕ್ಷರು-ಹಿರೇಕಲ್ಮಠ, ಹೊನ್ನಾಳಿ.

೩. ಶ್ರೀ ಷ.ಬ್ರ.ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು, ಚಾನುಕೋಟಿಮಠ, ಕೊಟ್ಟೂರು- ಗೌರವ ಸದಸ್ಯರು.

೪. ಶ್ರೀ ಷ ||ಬ್ರ|| ಶಿವಲಿಂಗ ಶಿವಾಚಾರ್ಯ ಸ್ವಾಮಿಗಳು, ಕಬ್ಬಿಣಕಂತೆಮಠ, ರಟ್ಟೀಹಳ್ಳಿ : ಗೌರವ ಸದಸ್ಯರು.

೫. ಶ್ರೀ ಷ ||ಬ್ರ|| ಮಹಾಂತ ರಾಜೇಂದ್ರಶಿವಾಚಾರ್ಯಸ್ವಾಮಿಗಳು, ಹಿರೇಮಠ, ಮುದೇನೂರು- ಗೌರವ ಸದಸ್ಯರು.

೬. ಶ್ರೀ ಎಂ.ಪಿ.ಎಂ.ಶಾಂತವೀರಯ್ಯ, ಹರಪನಹಳ್ಳಿ -ಗೌರವ ಸದಸ್ಯರು.

೭. ಡಾ. ಎನ್.ಕೋಟ್ರೇಶ್, ಉತ್ತಂಗಿ, ಹೊನ್ನಾಳಿ-ಗೌರವ ಸದಸ್ಯರು.

೮. ಶ್ರೀ ಷ.ಬ್ರ.ಸಿದ್ಧಪಾದಶಿವಾಚಾರ್ಯಸ್ವಾಮಿಗಳು, ಕಾಮನಾಳ- ಗೌರವ ಸಂಪಾದಕರು.

೯. ಶ್ರೀ ಅ.ಸಿ.ಹಿರೇಮಠ, ರಾಣೆಬೆನ್ನೂರು - ಸಂಪಾದಕರು.

೧೦. ಶ್ರೀ ಹೊಂಬಾಳ್ ಜೋಷಿ, ಸಂಸ್ಕೃತ ಪಂಡಿತರು.

೧೧. ಶ್ರೀ ಷ||ಬ್ರ|| ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ ಜಪದ ಕಟ್ಟೆಮಠ, ಮೈಸೂರು.

ಈ ಸಂಪಾದನಾ ಮಂಡಳಿಯು ಕಾಲಕಾಲಕ್ಕೆ ಬದಲಾವಣೆಯೂ ಆಗುತ್ತದೆ.

ಈ ಸದ್ಧರ್ಮ ಪ್ರಭಾ ಪತ್ರಿಕೆಯಲ್ಲಿ ಅನೇಕ ಉತ್ತಮ ಲೇಖನಗಳೂ ಬಂದಿವೆ. ಲಿಂ|| ಶ್ರೀ ಸಿದ್ಧಲಿಂಗ ಶಿವಾಚಾರ್ಯ ಮಹಾಸನ್ನಿಧಿಗಳು ತಮ್ಮ ಜ್ಞಾನದೃಷ್ಟಿ ಮತ್ತು ಭವಿಷ್ಯವಾಣಿಯಿಂದ, ಸ್ವಹಸ್ತಾಕ್ಷರಗಳಿಂದ ಬರೆದಿರುವ ಸಾರಾಂಶದಲ್ಲಿ ಶ್ರೀ ಪೀಠದಲ್ಲಿ **ಜ್ಞಾನಗುರು ವಿದ್ಯಾಪೀಠ** ಸ್ಥಾಪನೆಯ ಉದ್ದೇಶ ಮಾಹಿತಿಗಳಿವೆ. ಅದರ ವಿವರಗಳು ಸದ್ಧರ್ಮಪ್ರಭಾ, ಸಂಪುಟ೨, ಸಂಚಿಕೆ೧ ರಲ್ಲಿ ಪ್ರಕಟವಾಗಿವೆ. ಅದನ್ನು ಶ್ರೀ ಸಿದ್ಧಲಿಂಗ ಜಗದ್ಗುರುಗಳು ೨೨-೧೦-೧೯೩೦ರಿಂದ ೩೦-೧-೧೯೩೨ರವರೆಗೆ ಬರೆದು ತಯಾರಿಸಿದ್ದಾರೆ.

ಲಿಂ|| ಶ್ರೀ ಮರುಳಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು, ೧೯೯೨ ರ ಸದ್ಧರ್ಮಪ್ರಭಾ ಸಂಚಿಕೆ ೮೬ರಲ್ಲಿ ಉಜ್ಜಯಿನಿ ಶ್ರೀ ಜಗದ್ಗುರುಗಳ ವಂಶಪರಂಪರೆಯ

ವಿಷಯಗಳನ್ನು ನೀಡಿರುವರು. ಹೀಗೆ ವೀರಶೈವ ಸಾಹಿತ್ಯ, ಇತಿಹಾಸ, ಕಾವ್ಯ, ಕಲೆ, ಸಂಸ್ಕೃತಿಯ ವಿಷಯಗಳು ಅದರಲ್ಲಿವೆ.

ಶ್ರೀ ಜಗದ್ಗುರು ಮರುಳಸಿದ್ಧೇಶ್ವರ ಟ್ರಸ್ಟ್ (ರಿ)

ಇತ್ತೀಚೆಗೆ ಶ್ರೀಪೀಠದಲ್ಲಿ ಶ್ರೀ ಮರುಳಸಿದ್ದೇಶ್ವರ ಟ್ರಸ್ಟ್ (ರಿ) ಆರಂಭವಾಗಿದ್ದು ಅದರಲ್ಲಿ ಸಹಾಯಸಂಘಗಳನ್ನು ಮಾಡಿ ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರಿಗೆ, ಅಂಗವಿಕಲರಿಗೆ, ದೀನದಲಿತರಿಗೆ ಎಲ್ಲಾ ರೀತಿಯ ಮಾಹಿತಿಗಳೊಂದಿಗೆ ಆಯವ್ಯಯದಲ್ಲಿ ಮತ್ತು ಬ್ಯಾಂಕ್ ಖಾತೆಗಳನ್ನು ತೆರೆಯುವ ಬಗ್ಗೆ, ಉಳಿತಾಯವನ್ನು ಮಾಡುವ ಬಗ್ಗೆ ನಾನಾ ರೀತಿಯ ತರಬೇತಿಯನ್ನು ಕೊಡುವುದರ ಜೊತೆಯಲ್ಲಿ ಉತ್ತಮ ಸೇವೆಯನ್ನು ಟ್ರಸ್ಟಿನ ಪದಾಧಿಕಾರಿಗಳು ನಿರ್ವಹಿಸುವರು. ಅದರ ವ್ಯವಸ್ಥಾಪಕರು ಶ್ರೀ ಲಿಂಗರಾಜರು.

ಕೃತಿಗಳ ಪ್ರಕಟನೆ

ಉಜ್ಜಯಿನಿ ಸದ್ಧರ್ಮ ಪೀಠದ ಹಿಂದಿನ ಜಗದ್ಗುರುಗಳಾದ ಶ್ರೀ ಮರುಳಸಿದ್ಧ ಶಿವಾಚಾರ್ಯ ಮಹಾಸ್ವಾಮಿಗಳು ಮೂರು ಕೃತಿಗಳನ್ನು ರಚಿಸಿ ಪ್ರಕಟಿಸಿದರೆಂದು ತಿಳಿದುಬರುತ್ತದೆ. **ಶಿಷ್ಯಸಂತಾಪಹರಣ, ಶಿವಾನುಭವ ಸೂತ್ರ** ಮತ್ತು **ಪತಂಜಲಿ ಯೋಗ ಶಾಸ್ತ್ರ** ಇವೇ ಆ ಗ್ರಂಥಗಳು. ಈ ಕೃತಿಗಳು ಜನಮಧ್ಯದಲ್ಲಿವೆ. ಲಿಂ॥ ಶ್ರೀ ಮರುಳಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಕೇಂದ್ರ ಸರ್ಕಾರದ ಆರ್ಥಿಕ ನೆರವಿನಿಂದ ಈಶ, ಕೇನ, ಮುಂಡಕ, ಸಿದ್ಧಾಂತ ಶಿಖೋಪನಿಷತ್ತು ಇತ್ಯಾದಿ ಸಿದ್ಧಾಂತ ಪರವಾದ ಭಾಷ್ಯ ಗ್ರಂಥಗಳು ಹೊರಬರಲು ಕಾರಣರಾಗಿರುವರು. ಈಗಿನ ಜಗದ್ಗುರುಗಳಾದ ಶ್ರೀ ಮರುಳಸಿದ್ಧ ಭಗವತ್ಪಾದ ಶಿವಾಚಾರ್ಯ ಮಹಾಸ್ವಾಮಿಗಳು ಕಾಶಿ ವರ್ತಮಾನ ಜಗದ್ಗುರು ಶ್ರೀ ಡಾ॥ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು ಇವರು ರಚಿಸಿದ **'ಪಂಚಪೀಠ ಪರಂಪರೆ'** ಕೃತಿಯನ್ನು ಶ್ರೀ ಪೀಠದಿಂದ ಪುನರ್ ಮುದ್ರಣ ಮಾಡಲಾಯಿತು.

ಕ್ಯಾಲೆಂಡರ್-ಡೈರಿಗಳು

ಶ್ರೀ ಪೀಠದ ವತಿಯಿಂದ ಪ್ರತಿವರ್ಷ ಕ್ಯಾಲೆಂಡರ್, ಡೈರಿಗಳು ಹೊರಬರುತ್ತಿವೆ. ಶ್ರೀ ಪೀಠದ ಸಾಂಸ್ಕೃತಿಕ ಕಾರ್ಯಕ್ರಮಗಳ ವೇಳಾಪಟ್ಟಿ ಇತ್ಯಾದಿ ಮಾಹಿತಿಗಳನ್ನು ಡೈರಿಯಲ್ಲಿ ನೀಡಲಾಗಿದೆ. ವಿಭೂತಿ ತಯಾರಿಸುವ ವಿಧಾನವನ್ನು ಮೂಲತಃ ಲಿಂ॥ ಸಿದ್ಧಲಿಂಗ ಜಗದ್ಗುರುಗಳು ರಚಿಸಿದ್ದರು. ಮುಂದೆ ಲಿಂ॥ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರ ಪ್ರೇರಣೆಯಂತೆ ವಿಭೂತಿ ತಯಾರಿಸುವ ವಿಧಾನ ಮತ್ತು ಮಹತ್ವವನ್ನು ಈ ಹಿಂದೆ ಪ್ರಕಟಿಸಿದ ಕ್ಯಾಲೆಂಡರ್‌ನಲ್ಲಿ ನೀಡಲಾಗಿದೆ. ತ

ವಿಷಯವನ್ನು ಸಂಗ್ರಹಿಸಿ ನೀಡಿದವರು ಡಾ. ಎಂ. ಶಿವಮೂರ್ತಿ. ಈಗ ಶ್ರೀಪೀಠದಿಂದ ಡೈರಿ, ಕ್ಯಾಲೆಂಡರ್‌ಗಳೂ ಪ್ರತಿವರ್ಷ ತಪ್ಪದೆ ಪ್ರಕಟವಾಗುತ್ತಿವೆ.

ಲಿಂ|| ಶ್ರೀ ಸಿದ್ಧೇಶ್ವರಶಿವಾಚಾರ್ಯಸ್ವಾಮಿಗಳ ಅಧ್ಯಕ್ಷತೆಯಲ್ಲಿ ಬಳ್ಳಾರಿ ಜಿಲ್ಲೆಯ ಒಂದನೆಯ ಪಟ್ಟಚಾರಾಧಿಕಾರಿ ಸ್ವಾಮಿಗಳ ಸಮ್ಮೇಲನವು ಎರಡು ದಿವಸ ೧೯೩೮ ಅಕ್ಟೋಬರ್ ೯ ಮತ್ತು ೧೦ರಂದು ಜರುಗಿತು. ಅನೇಕ ಶ್ರೀಗಳು ನೀಡಿದ ಅಭಿಪ್ರಾಯಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸಲಾಗಿದೆ. ಅದರಲ್ಲಿ ಗುರು ಪಟ್ಟಾಧಿಕಾರಿಯನ್ನಾಗಿ ನಿಯಮಿಸುವ ಬಗ್ಗೆ ಅರ್ಹತೆ, ಸಂಪರ್ಕ, ಪ್ರಚಾರ, ನಡೆವಳಿಕೆ ಇತ್ಯಾದಿ ವ್ಯವಸ್ಥೆಯ ವಿವರಗಳಿವೆ. ಲಿಂ||ಶ್ರೀ ಮರುಳಾರಾಧ್ಯಶಿವಾಚಾರ್ಯರು ಮೊದಲು ಷ||ಬ್ರ|| ಶ್ರೀಶಿವಪ್ರಕಾಶ ಶಿವಾಚಾರ್ಯರಾಗಿ ಮೈಸೂರು ಜಪದ ಕಟ್ಟೆಯ ಮಠದ ಸ್ವಾಮಿಗಳಾಗಿದ್ದಾಗ ಸಿದ್ಧಾಂತ ಶಿಖಾಮಣಿಯ ಪ್ರವಚನವನ್ನು ಲಕ್ಷ್ಮೀಶರದಲ್ಲಿ ಮೂರು ತಿಂಗಳವರೆಗೆ (೧೯೫೮) ನಿರರ್ಗಳವಾಗಿ ನೀಡಿ ಜನತೆಯ ಮೆಚ್ಚುಗೆಯನ್ನೂ ಪಡೆದರು.

ಸದ್ಧರ್ಮ ಗ್ರಂಥಾಲಯ

ಶ್ರೀಪೀಠದಲ್ಲಿ ಒಂದು ಗ್ರಂಥಾಲಯವನ್ನು ತೆರೆಯಲಾಗಿದೆ. ಅದರಲ್ಲಿ ಎಲ್ಲಾ ಭಾಷೆಯ ಪ್ರಾಚೀನ ತಾಡೋಲೆಗಳು, ಧರ್ಮಗ್ರಂಥಗಳು, ವೇದೋಪನಿಷತ್ತುಗಳು, ಪುರಾಣಗಳು, ಇತಿಹಾಸ ಮುಂತಾದ ಗ್ರಂಥಗಳನ್ನು ಸಂಗ್ರಹಿಸಿಡಲಾಗಿದ್ದು, ಅವುಗಳು ಸಂಶೋಧಕರಿಗೆ ಉತ್ತಮ ಪ್ರಾಚೀನ ಗ್ರಂಥಾಲಯವಾಗಿದೆ.

ಅಡಿಟಿಪ್ಪಣಿ

೧. ಈ ಅಧ್ಯಯನದಲ್ಲಿ ಲಿಂ|| ಜಗದ್ಗುರು ಶ್ರೀ ಸಿದ್ಧಲಿಂಗ ಜಗದ್ಗುರುಗಳ ಕಾಲಾವಧಿಯಲ್ಲಿ ಜರುಗಿದ ಶಿಕ್ಷಣ ವಿಷಯಗಳನ್ನು ವೇ|| ಹಿರೇಹಡಗಲಿ ಪುರಾಣಿಕ ವಿರೂಪಾಕ್ಷಶಾಸ್ತ್ರಿಗಳವರ ಕೃತಿ : ೧೯೪೪, **ಶ್ರೀ ಸಿದ್ಧಲಿಂಗೇಶ್ವರ ವಿಜಯ**ದಿಂದ ಆಯ್ದುಕೊಳ್ಳಲಾಗಿದೆ. ಹಾಗೂ ಅನೇಕ ವಿಷಯಗಳನ್ನು ಶ್ರೀಪೀಠದ ಕಚೇರಿಯಿಂದ ಪಡೆಯಲಾಗಿದೆ.

ಶ್ರೀ ಪೀಠದ ವಾಸ್ತುಶಿಲ್ಪ

ಉಜ್ಜಯಿನಿ ಸದ್ಧರ್ಮ ಪೀಠದ ವಾಸ್ತುವೈವಿಧ್ಯದಲ್ಲಿ ಪ್ರಧಾನ ದೇವಾಲಯ ಶ್ರೀ ಮರುಳಸಿದ್ಧ. ಅದರ ಕೆಲವು ವಾಸ್ತು-ಶಿಲ್ಪ ಲಕ್ಷಣಗಳಿಗೆ ಕರ್ನಾಟಕದ ಕಲಾ ಚರಿತ್ರೆಯಲ್ಲಿ ತನ್ನದೇ ಆದ ಸ್ಥಾನವಿದೆ. ಮರುಳಸಿದ್ಧ ದೇವಾಲಯದ ಸಂಕೀರ್ಣದಲ್ಲಿ ಗೌರಮ್ಮ, ವೀರಭದ್ರ, ಚೌಡೇಶ್ವರಿ, ಆರಕೆ ಬಸವಣ್ಣ, ಬಂಗಾರ ಬಸವಣ್ಣ, ಮುದ್ದಿರಾಮ, ಗುಂಡ ಬ್ರಹ್ಮಯ್ಯ ಇತ್ಯಾದಿ ದೇವಾಲಯಗಳು ಕಂಗೊಳಿಸುತ್ತಿವೆ. ಜೊತೆಯಲ್ಲಿ ಶ್ರೀ ಸಿದ್ಧಲಿಂಗ ಶಿವಾಚಾರ್ಯರ ಗದ್ದುಗೆಯೂ ಇದೆ. ಶ್ರೀ ಸದ್ಧರ್ಮ ಪೀಠದಲ್ಲಿ ಇದೊಂದು ಕೇಂದ್ರಮಠ. ಶ್ರೀಮಠದ ಒಳಗಡೆ ಶ್ರೀದಾರುಕ ಮಂಟಪ, ಶಿವಪೂಜಾಮಂದಿರ, ಪಂಚಾಚಾರ್ಯರ ಸಭಾಭವನ, ಗೋಶಾಲೆ, ನ್ಯಾಯಾಲಯ, ಪೂಜ್ಯ ಸನ್ನಿಧಿಗಳ ದರ್ಶನ ತಾಣ ಮುಖ್ಯವಾಗಿ ಪ್ರಜ್ವಲಿಸುತ್ತವೆ. ಬದಿಗೆ ಭವ್ಯವಾದ ತಂಗುದಾಣವಿದೆ. ಶ್ರೀಪೀಠದ ಪ್ರವೇಶಕ್ಕೆ ಭವ್ಯವಾದ ಮಹಾದ್ವಾರಗಳಿದ್ದು, ಅವುಗಳಲ್ಲಿ ತಂಗಾಳಿ ಗೋಪುರ ಎದ್ದುಕಾಣುತ್ತದೆ. ಶ್ರೀ ಮರುಳಸಿದ್ಧಸ್ವಾಮಿಯ ಶಿಖರದಲ್ಲಿ ಶ್ರೀಪೀಠದ ಮೂಲಗೋತ್ರ ಪುರುಷನಾದ ನಂದಿಯು ತನ್ನ ನಾಲ್ಕು ಪಾದಗಳನ್ನು ಊರಿ ನಿಂತಿರುವ ವಿರಳ ದೃಶ್ಯವಿದೆ. ಈ ಶಿಖರಕ್ಕೆ ಪ್ರತಿವರ್ಷ ವೈಶಾಖಶುದ್ಧ ಷಷ್ಠೀ ದಿವಸ ಸಾಯಂಕಾಲ ತೈಲಾಭಿಷೇಕ ವಿಜೃಂಭಣೆಯಿಂದ ಜರುಗುವುದು.

ಶ್ರೀಪೀಠದ ಮಠ ಮತ್ತು ದೇವಾಲಯಗಳ ಸಂಕೀರ್ಣ ಸುತ್ತ ಭವ್ಯವಾದ ಎತ್ತರದ ಗೋಡೆಗಳಿಂದ ಆವೃತ್ತಗೊಂಡಿವೆ. ಶ್ರೀ ಮರುಳಸಿದ್ಧ ಸ್ವಾಮಿಗೆ ಒಂದಿಲ್ಲೊಂದು ರೀತಿಯಲ್ಲಿ ಸಂಬಂಧವುಳ್ಳ ಅನೇಕ ದೇವಾಲಯಗಳು, ವೃಕ್ಷ, ಬಂಡೆ, ಗುಡ್ಡ, ಪಾದಗಟ್ಟೆಗಳು ಉಜ್ಜಯಿನಿ ಗ್ರಾಮ ಪರಿಸರದಲ್ಲಿ ಒಡಮೂಡಿವೆ. ಶ್ರೀ ಪೀಠದ ವಿಶಾಲ ವಾಸ್ತು-ಶಿಲ್ಪಕಲೆ ಹಾಗೂ ಅದರ ಸಾಂಸ್ಕೃತಿಕ ವೈವಿಧ್ಯತೆಯನ್ನು ನೋಡಿ ಶ್ರೀಪೀಠಕ್ಕೆ 'ಹಂಪಿಯನ್ನು ಹೊರನೋಡು, ಉಜ್ಜಯಿನಿಯನ್ನು ಒಳನೋಡು' ಎಂಬ ನಾಣ್ನುಡಿ ಬಂದಿದೆ.

ಮಹಾದ್ವಾರಗಳು

ಶ್ರೀ ಉಜ್ಜಯಿನಿ ಸದ್ಧರ್ಮಪೀಠಕ್ಕೆ ಮುಖ್ಯವಾಗಿ ಎರಡು ಭವ್ಯವಾದ ಮಹಾಪ್ರವೇಶ ದ್ವಾರಗಳು ಉತ್ತರ ಮತ್ತು ದಕ್ಷಿಣಕ್ಕಿವೆ. ಉತ್ತರ ದ್ವಾರಕ್ಕೆ ಎತ್ತರವಾದ ಗೋಪುರವಿದ್ದು ಅದನ್ನು ತಂಗಾಳಿ ಗೋಪುರವೆಂದು ಕರೆಯುವರು. ದಕ್ಷಿಣ ದ್ವಾರಕ್ಕೆ ಕೈಲಾಸ ದ್ವಾರವೆಂದು ಕರೆಯುವರು. ಈ ಮಹಾದ್ವಾರಗಳು ಇತ್ತೀಚಿನ ವರ್ಷಗಳಲ್ಲಿ ಜೀರ್ಣೋದ್ಧಾರಗೊಂಡಿವೆ.

ದಕ್ಷಿಣದ ಮಹಾದ್ವಾರದ ಮೇಲೆ ಕೈಲಾಸವನ್ನು ನಿದರ್ಶಿಸುವ ಇತ್ತೀಚಿನ ವರ್ಣಮಯ ಭವ್ಯ ಶಿವಪಾರ್ವತಿಯರ ವಿಗ್ರಹವನ್ನು ಪ್ರತಿಷ್ಠಾಪಿಸಿರುವುದು ಅರ್ಥಪೂರ್ಣ. ***(ಚಿತ್ರ ಸಂ. ೭೩ ಮತ್ತು ೭೪)*** ಬದಿಗಳಲ್ಲಿ ಶ್ರೀಪೀಠದ ಲಿಂಗೈಕ್ಯ ಜಗದ್ಗುರುಗಳಾದ ಲಿಂ|| ಶ್ರೀ ಸಿದ್ಧಲಿಂಗಶಿವಾಚಾರ್ಯರ ಮತ್ತು ಶ್ರೀ ಸಿದ್ಧೇಶ್ವರಶಿವಾಚಾರ್ಯರ ಆಧುನಿಕ ವಿಗ್ರಹಗಳು ಕಂಗೊಳಿಸುತ್ತಿವೆ. ಈ ವಿಗ್ರಹಗಳನ್ನು ಇಟ್ಟಿಗೆ-ಗಾರೆಯಿಂದ ನಿರ್ಮಿಸಿ ಅವುಗಳನ್ನು ವಿವಿಧ ಬಣ್ಣಗಳಿಂದ ಅಲಂಕರಿಸಿದೆ. ದಕ್ಷಿಣದ ಈ ದ್ವಾರಕ್ಕೆ ಅಧಿಷ್ಠಾನ, ಭಿತ್ತಿ ಮತ್ತು ಛಾವಣಿ ಇವೆ. ಪ್ರವೇಶದ ಪಾರ್ಶ್ವ ಗೋಡೆಗಳು ಸರಳವಾಗಿದ್ದು ಅದರ ಅಧಿಷ್ಠಾನದಲ್ಲಿ ಭಕ್ತರ ಮತ್ತು ಇನ್ನಿತರ ಉಬ್ಬುಶಿಲ್ಪಗಳಿವೆ.

ಉತ್ತರದ ಮಹಾದ್ವಾರಕ್ಕೆ ಎತ್ತರವಾದ ಗೋಪುರವಿದ್ದು ಅದರಲ್ಲಿ ನಾಲ್ಕು ಅಂತಸ್ತುಗಳಿವೆ. ***(ಚಿತ್ರ ಸಂ. ೭೬ ರಿಂದ ೭೮)*** ಅದನ್ನು ಗಾರೆ ಮತ್ತು ಇಟ್ಟಿಗೆಗಳಿಂದ ಕಟ್ಟಲಾಗಿದೆ. ಪ್ರತಿ ಅಂತಸ್ತುಗಳ ಗೋಡೆಗಳಲ್ಲಿ ಅರ್ಧಗಂಬ ಮತ್ತು ಪಂಜರಗಳ ಸಾಲುಗಳಿವೆ. ತಲಾ ಒಂದು ಅಂತಸ್ತಿನ ಮಧ್ಯ ಮುಖದಲ್ಲಿ ಒಂದರ ಮೇಲೆ ಒಂದರಂತೆ ತೆರೆದ ದ್ವಾರಗಳಿವೆ. ಈ ಗೋಪುರವು ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದೆ. ಗೋಡೆಗೆ ಸುಣ್ಣ-ಬಣ್ಣದ ಲೇಪನವಾಗಿದೆ. ಈ ಮಹಾದ್ವಾರವನ್ನು ಶಿಲೆಯಿಂದ ನಿರ್ಮಿಸಿದ್ದು ಅದಕ್ಕೆ ಉಪಪೀಠ, ಅಧಿಷ್ಠಾನ, ಎತ್ತರವಾದ ಭಿತ್ತಿ ಮತ್ತು ಕಪೋತ ಪಟ್ಟಿಕೆಗಳಿವೆ. ಅದರ ಪ್ರವೇಶದ್ವಾರಕ್ಕೆ ಎತ್ತರವಾದ ಬಾಗಿಲು ಚೌಕಟ್ಟನ್ನು ಕೂಡಿಸಿದ್ದು ಅದರ ಮುಖಗಳಲ್ಲಿ ವಿವಿಧ ಚಿತ್ರಗಳ ಅಲಂಕರಣವಿವೆ. ಕೆಳಭಾಗದಲ್ಲಿ ಸೇವಕಿಯು ಚೌರಿಯನ್ನು ಹಿಡಿದುಕೊಂಡು ನಿಂತಿದ್ದಾಳೆ. ಆಕೆಯ ತಲೆಯ ಮೇಲೆ ಮಕರಗಳು ವಲ್ಲಿಶಾಖೆಯನ್ನು ಹೊತ್ತುಕೊಂಡಿವೆ. ಈ ವಲ್ಲಿಯ ವೃತ್ತಗಳಲ್ಲಿ ನರ್ತಕರಿದ್ದಾರೆ. ಅದರ ಬದಿಗಿನ ಒಳಮುಖ ಪಟ್ಟಿಕೆಯಲ್ಲಿ ಶೈವ ದ್ವಾರಪಾಲಕ ತ್ರಿಭಂಗಿಯಲ್ಲಿ ನಿಂತಿದ್ದಾನೆ. ಆತನ ಕೈಗಳಲ್ಲಿ ಗದೆ, ತ್ರಿಶೂಲ, ಡಮರುಗಳಿವೆ. ಕೊನೆಯ ಕೆಳಗಿನ ಎಡಗೈ ಅಭಯಮುದ್ರೆಯಲ್ಲಿದೆ. ಬದಿಗಿನ ಮುಖದಲ್ಲಿ ಸೇವಕಿಯು ಹೂಬಳ್ಳಿಯನ್ನು ಹಿಡಿದು ನಿಂತಿದ್ದಾಳೆ. ಈ ದ್ವಾರಪಟ್ಟಿಯಲ್ಲಿ ಮತ್ತು ಲಲಾಟಗಳಲ್ಲಿ

ನಾಲ್ಕು ಶಾಖೆಗಳಿದ್ದು ಅವುಗಳಲ್ಲಿ ಪತ್ರ, ರತ್ನ ಮತ್ತು ಪತ್ರ ಸಾಲುಗಳ ಅಲಂಕರಣಗಳಿವೆ. ಒಳಮಗ್ಗಲಿನ ಶಾಖೆಯಲ್ಲಿ ಲತಾಸುರುಳಿಯ ಉದ್ದ ಪಟ್ಟಿಯಿದೆ. ಅದರ ಮಧ್ಯ ಕಿರು ಗೂಡಿದ್ದು ಅದರಲ್ಲಿ ಶಿವಪಾರ್ವತಿಯರು ನಂದಿಯ ಮೇಲೆ ಕುಳಿತಿರುವರು.

ಉತ್ತರದ ಮಹಾದ್ವಾರದ ಒಳಗಡೆ ಪ್ರವೇಶದ ಪಾರ್ಶ್ವಗಳಲ್ಲಿ ಎತ್ತರದ ಅಧಿಷ್ಠಾನವುಳ್ಳ ಕಟ್ಟೆಗಳಿವೆ. ಅವುಗಳು ತೆರೆದ ಕೋಣೆಗಳಂತಿದ್ದು ಅದರಲ್ಲಿ ಕಂಬಗಳಿವೆ. ಅಧಿಷ್ಠಾನದಲ್ಲಿ ಸಿಂಹ, ಆಂಜನೇಯ ಮತ್ತು ನಾಗರಹಾವಿನ ಉಬ್ಬುಶಿಲ್ಪಗಳಿದ್ದು ಛತ್ತಿನಲ್ಲಿ ಕಮಲದ ಅಲಂಕರಣವಿದೆ. ಈ ಮಹಾದ್ವಾರದ ದಕ್ಷಿಣದ ಇನ್ನೊಂದು ಮುಖದಲ್ಲೊಂದು ಬಾಗಿಲಿದೆ. ಅದರ ಪಟ್ಟಿಗಳ ಕೆಳಭಾಗಗಳಲ್ಲೂ ಶೈವ ದ್ವಾರಪಾಲಕರಿದ್ದಾರೆ. ಬಾಗಿಲಪಟ್ಟಿಗಳ ಮೇಲ್ಭಾಗ ಮತ್ತು ಲಲಾಟದಲ್ಲಿ ಶಾಖೆಗಳು ಹರಿದಿವೆ. ಲಲಾಟ ಪಟ್ಟಿಯ ಮಧ್ಯದಲ್ಲಿ ಕಿರು ಗೂಡಿದ್ದು, ಅದರಲ್ಲಿ ಗಜಲಕ್ಷ್ಮಿಯನ್ನು ಚಿತ್ರಿಸಲಾಗಿದೆ.

ಈ ಮಹಾದ್ವಾರದ ಬಾಗಿಲಿಗೆ ಗಟ್ಟಿಯಾದ ಕಟ್ಟಿಗೆಯ ದಪ್ಪನೆಯ ಎರಡು ಕದಗಳಿದ್ದವು. ಅವುಗಳನ್ನು ಈಗ ಬದಲಾಯಿಸಲಾಗಿದೆ. ಭಕ್ತರು ಈ ದ್ವಾರದ ಮೂಲಕ ಬಂದು ಹೋಗುವದು ಕಡಿಮೆ. ಆದರೆ ಹೆಚ್ಚಾಗಿ ಕೈಲಾಸ ದ್ವಾರದ ಮೂಲಕ ಓಡಾಡುವರು.

ಉಯ್ಯಾಲೆ ಕಂಬಗಳು

ಉತ್ತರದ ಮಹಾದ್ವಾರದ ಎದುರಿಗೆ ಭವ್ಯವಾದ ಸ್ತಂಭಗಳುಳ್ಳ ಒಂದು ಉಯ್ಯಾಲೆ ಮಂಟಪವಿದೆ. ***(ಚಿತ್ರ ಸಂ. ೭೫)*** ಈ ಮಂಟಪದ ಮೇಲೆ ಎರಡು ಎತ್ತರದ ಕಂಬಗಳಿವೆ. ಈ ಕಂಬಗಳ ಮೇಲೆ ಒಂದು ತೊಲೆಯನ್ನು ಅಡ್ಡವಾಗಿ ಕೂಡಿಸಲಾಗಿದೆ. ತಲಾ ಒಂದು ಕಂಬಕ್ಕೆ ಹೊಂದಿ ಕೆಳಭಾಗದಲ್ಲಿ ಎತ್ತರದ ಕಟ್ಟೆಯಿದೆ. ತೊಲೆಯ ಮಧ್ಯದಲ್ಲಿ ಕಬ್ಬಿಣದ ಪಟ್ಟಿಯಿದ್ದು ಅದಕ್ಕೆ ಕಬ್ಬಿಣದ ಸರಪಳಿಯೊಂದನ್ನು ಕೆಳಗಡೆ ಇಳಿಬಿಟ್ಟು ಕಟ್ಟಲಾಗಿದೆ. ಅದರ ತೊಲೆಗೆ ಹೊಂದಿ ಜೋಕಾಲಿಯನ್ನು ಕಟ್ಟುತ್ತಿರಬೇಕು. ಹೀಗಾಗಿ ಇದೊಂದು ಉಯ್ಯಾಲೆ ಮಂಟಪವಾಗಿದೆ. ಈ ಸರಪಳಿಗೆ ಶ್ರೀಪೀಠದ ಆನೆಯನ್ನು ಹಿಂದೆ ಕಟ್ಟುತ್ತಿದ್ದರೆಂದು ಕೆಲವರು ಹೇಳುವರು. ಕಂಬಗಳ ಮೇಲೆ ಅಲ್ಲಲ್ಲಿ ಉಬ್ಬುಶಿಲ್ಪಗಳಿದ್ದು ಅವು ಆನೆ, ದ್ವಾರಪಾಲಕ, ಹಂಸ, ಬಾಳೆಯ ಗಿಡ, ವ್ಯಕ್ತಿ, ಪ್ರಾಣಿ - ಮನುಷ್ಯರೂಪವುಳ್ಳ ವ್ಯಕ್ತಿ ತನ್ನ ಕಾಲಿನಿಂದ ಶಿವಲಿಂಗವನ್ನು ಪೂಜಿಸುವ ಬೇಡರ ಕಣ್ಣಪ್ಪ, ನೃತ್ಯಗಾರರು, ನಟರಾಜ, ನೃತ್ಯಗಾರ್ತಿ, ಕೈಮುಗಿದು ಕುಳಿತ ಟಗರು ತಲೆಯುಳ್ಳ ದಕ್ಷಬ್ರಹ್ಮ ಇವರ ಉಬ್ಬುಶಿಲ್ಪಗಳು ಮುಖ್ಯವೆನಿಸಿವೆ.

ಶ್ರೀಪೀಠದ ಈ ಮಹಾದ್ವಾರಗಳಿಗೆ ಹೊಂದಿ ಕೋಟೆಯಂತಹ ಎತ್ತರದ ಪ್ರಾಕಾರ ಗೋಡೆಗಳಿದ್ದು, ಅದರ ಪಶ್ಚಿಮ-ಪೂರ್ವಕ್ಕೆ ತಲಾ ಒಂದು ಕಡೆ ಕಿರುದ್ವಾರಗಳಿವೆ. ***(ಚಿತ್ರ ಸಂ. ೭೯ ರಿಂದ ೮೧)***

ಮರುಳಸಿದ್ಧ ದೇವಾಲಯ

ಶ್ರೀ ಮರುಳಸಿದ್ಧ ದೇವಾಲಯವು ಅಲ್ಲಿಯ ದೊಡ್ಡ ದೇವಾಲಯ. ದಕ್ಷಿಣ-ಉತ್ತರವಾಗಿ ಕಟ್ಟಿದ ಈ ದೇವಾಲಯವು ಉತ್ತರಕ್ಕೆ ಮುಖ ಮಾಡಿದ್ದು ಅದರ ಪ್ರವೇಶಗಳು ಮೂರು ಕಡೆಗಳಲ್ಲಿವೆ. ***(ಚಿತ್ರ ಸಂ. ೮೨)*** ಅದರ ತಳಪಾಯದಲ್ಲಿ ಐದು ಗರ್ಭಗೃಹಗಳು, ಒಂದು ಅಂತರಾಳ, ಸಭಾಮಂಟಪ, ಮಹಾಮಂಟಪ ಮತ್ತು ಮೂರು ಮುಖಮಂಟಪಗಳಿವೆ. ಮೂಲ ಗರ್ಭಗೃಹವು ಚೌಕಾಗಿದ್ದು ಅದರ ನಾಲ್ಕು ಮೂಲೆಗಳಲ್ಲಿ ಅರ್ಧಗಂಬಗಳಿವೆ. ಗರ್ಭಗೃಹದ ಶಿಲಾ ವೇದಿಕೆಯ ಮಧ್ಯ ಶಿವಲಿಂಗವಿದೆ. ಆ ಶಿವಲಿಂಗದ ಹೆಸರು ಸಿದ್ಧೇಶ್ವರ ಅಥವಾ ಜಗದ್ಗುರು ಮರುಳಸಿದ್ಧ ಸ್ವಾಮಿ ಎನ್ನುವರು. ಶಿವಲಿಂಗದ ಪೀಠದ ಬುಡಭಾಗ ಚೌಕಾಗಿಯೂ ಮೇಲಿನ ಭಾಗ ವೃತ್ತಾಕಾರವಾಗಿದೆ. ಲಿಂಗದ ಮೇಲೆ ಬ್ರಹ್ಮಸೂತ್ರವಿಲ್ಲ. ***(ಚಿತ್ರ ಸಂ. ೮೩)*** ಶಿವಲಿಂಗಕ್ಕೆ ಸ್ವಾಮಿಯ ಮುಖವಾಡವನ್ನು ಧರಿಸುವರು. ಬೆಳಿಗ್ಗೆ ಮತ್ತು ಮದ್ಯಾಹ್ನದ ಪೂಜಾ ವೇಳೆಗಳ ಸಂದರ್ಭಗಳಲ್ಲಿ ಮಾತ್ರ ಈ ಮುಖವಾಡವನ್ನು ಧರಿಸುವರು. ಶಿವಲಿಂಗಕ್ಕೆ ಮತ್ತು ಮುಖವಾಡಗಳಿಗೆ ಹೊಂದಿ ನಾಗ ಹೆಡೆಮುರಿಯನ್ನು ಕೂಡಿಸುವರು. ಶ್ರೀ ಸ್ವಾಮಿಯನ್ನು ಹೂ, ಪತ್ರಿ ಮತ್ತು ವಸ್ತ್ರಾಭರಣಗಳಿಂದ ಅಲಂಕೃತಗೊಳಿಸುವರು. ***(ಚಿತ್ರ ಸಂ. ೮೪ ಮತ್ತು ೮೫)*** ಶ್ರೀ ಮರುಳಸಿದ್ಧ ಸ್ವಾಮಿಗೆ ನಿತ್ಯ ನಾಲ್ಕು ಸಲ ಪೂಜೆಯನ್ನು ಸಲ್ಲಿಸುವರು. ಶಿವಲಿಂಗದ ಮೇಲೆ ನೀರು ಬೀಳಲು ಜಲಧಾರೆ ಪಾತ್ರೆಯನ್ನು ಕಟ್ಟಿರುವರು. ಸ್ವಾಮಿಯ ಅಭಿಷೇಕದ ಮಜ್ಜನವು ಹೊರಗಡೆ ಹೋಗಿ ಮಜ್ಜನ ಕುಂಡಕ್ಕೆ ಬೀಳಲು ಪ್ರಣಾಳತುದಿಯನ್ನು ಪಶ್ಚಿಮಕ್ಕೆ ಮುಖಮಾಡಿ ಜೋಡಿಸಲಾಗಿದೆ. ಗರ್ಭಗೃಹದ ವಿತಾನ ಸಮತಟ್ಟಾಗಿದೆ. ಗರ್ಭಗೃಹದ ದ್ವಾರಪಟ್ಟಿಯಲ್ಲಿ ನಾಲ್ಕು ಶಾಖೆಗಳಿವೆ. ***(ಚಿತ್ರ, ಸಂ. ೮೬)*** ಅದರಲ್ಲಿ ರತ್ನ, ಲತಾಸುರುಳಿ, ಅರ್ಧಗಂಭ ಮತ್ತು ತಲೆ ಮೇಲಕ್ಕೆತ್ತಿದ ಸಿಂಹಗಳ ಅಲಂಕರಣಗಳ ಸಾಲುಗಳಿವೆ. ಬದಿಗಿನ ಪಟ್ಟಿಗಳಲ್ಲಿ ರತ್ನಸಾಲುಗಳ ಅಲಂಕರಣವಿದೆ. ಕೆಳಭಾಗಗಳು ಸಮತಟ್ಟಾಗಿವೆ. ದ್ವಾರಪಾಲಕರನ್ನು ಚಿತ್ರಿಸಿಲ್ಲ. ಲಲಾಟದಲ್ಲಿ ಗಜಲಕ್ಷ್ಮಿಯನ್ನು ತೋರಿಸಲಾಗಿದೆ. ಬದಿಗಳಲ್ಲಿ ರತ್ನಸುರುಳಿ ಶಾಖೆಗಳಿವೆ. ಉತ್ತರಾಂಗದಲ್ಲಿ ಒಂದೇ ಸಾಲಿನಲ್ಲಿ ನಾಲ್ಕು ಶಿಖರ ನಮೂನೆಗಳಿವೆ. ಮಧ್ಯ ನಾಲ್ವರು ನಿಧಿಗಳು ಕುಳಿತಿರುವರು. ತಲಾ ಒಬ್ಬ ನಿಧಿಗೆ ಲತಾ ತೋರಣದ ಅಲಂಕರಣವಿದೆ.

ಗರ್ಭಗೃಹದ ಮುಂದಿನ ಭಾಗವೇ ಅಂತರಾಳ. ಅಂತರಾಳವು ಚೌಕಾಗಿದ್ದು ಅದರ ನಾಲ್ಕು ಮೂಲೆಗಳಲ್ಲಿ ಅರ್ಧಗಂಬಗಳಿವೆ. ಅದರ ವಿತಾನದಲ್ಲಿ ಕಮಲದ ಅಲಂಕರಣವಿದೆ. ಅಂತರಾಳದ ದ್ವಾರಪಟ್ಟಿಯಲ್ಲಿ ಐದು ಶಾಖೆಗಳ ಅಲಂಕರಣಗಳಿವೆ. ಬದಿಗಿನ ಕೆಳಪಟ್ಟಿಕೆಯಲ್ಲಿ ಶೈವ ದ್ವಾರಪಾಲಕರು ತ್ರಿಭಂಗಿಯಲ್ಲಿ ನಿಂತಿರುವರು. ತಲಾ ಒಬ್ಬರಿಗೆ ನಾಲ್ಕು ಕೈಗಳಿವೆ. ಅವರು ಕೈಗಳಲ್ಲಿ ಅಭಯಮುದ್ರೆ, ತ್ರಿಶೂಲ, ನಾಗ ಮತ್ತು ಡಮರುಗಳನ್ನು ಹಿಡಿದು ಪೀಠದ ಮೇಲೆ ನಿಂತಿದ್ದಾರೆ. ದ್ವಾರಪಾಲಕರ ಮೇಲಿನ ಪಟ್ಟಿಕೆಗಳಲ್ಲಿ ಜಾಲಂಧ್ರಗಳಿವೆ. ಅದರಲ್ಲಿ ನೃತ್ಯಗಾರರು ಮಾಲೆಗಳನ್ನು ಹಿಡಿದು ವೃತ್ತ ಪಟ್ಟಿಕೆಗಳಲ್ಲಿ ನಿಂತಿದ್ದಾರೆ. ಲಲಾಟದಲ್ಲಿ ಗಜಲಕ್ಷ್ಮಿಯಿದ್ದು ಬದಿಗೆ ರತ್ನಬಳ್ಳಿಗಳ ಶಾಖೆಗಳಿವೆ. ಲಲಾಟ ಪಟ್ಟಿಕೆಯ ಮೇಲೆ ಮುಂಚಾಚಿದ ಕಪೋತವಿದ್ದು ಅದರಲ್ಲಿ ಮಣಿಹಾರಗಳ ಅಲಂಕರಣವಿದೆ. ಉತ್ತರಾಂಗದಲ್ಲಿ ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು ಇವರ ಮಧ್ಯ ನಟರಾಜ ಇವರ ಸುಂದರ ಶಿಲ್ಪಗಳನ್ನು ಒಂದೇ ಸಾಲಿನಲ್ಲಿ ತೋರಿಸಲಾಗಿದೆ. ***(ಚಿತ್ರ ಸಂ.೮೭)***. ತಲಾ ಒಬ್ಬ ದೇವತೆಯನ್ನು ಸ್ತಂಭ ಮಕರ ತೋರಣದ ಅಲಂಕರಣವಿದೆ. ಈ ದೇವತೆಗಳ ಬದಿಗಳಲ್ಲಿ ತಮ್ಮ ಪರಿವಾರ ದೇವತೆಗಳು ಮತ್ತು ಭಕ್ತರು ಇರುವರು.

ಭುವನೇಶ್ವರಿ (ವಿತಾನ)

ಅಂತರಾಳದ ಮುಂದಿನ ಮಂಟಪವೇ ಸಭಾಮಂಟಪ. ಈ ಮಂಟಪದಲ್ಲಿ ನಾಲ್ಕು ಸ್ತಂಭಗಳುಳ್ಳ ಸ್ವಲ್ಪ ಎತ್ತರ ಚೌಕಾಕಾರದ ರಂಗಮಂಟಪವಿದೆ. ಅದರ ಮಧ್ಯ ಛತ್ತಿನಲ್ಲಿ ಗೋಲಾಕಾರದ ಸಹಸ್ರದಳವುಳ್ಳ ಕಮಲದ ಭುವನೇಶ್ವರಿಯು ವೈಶಿಷ್ಟ್ಯಪೂರ್ಣವಾಗಿದೆ. ***(ಚಿತ್ರ ಸಂ .೮೮)***. ಕಂಬಗಳ ಬೋದುಗೆಯ ಮೇಲೆ ಛತ್ತಿನಲ್ಲಿ ಚೌಕಾದ ಪಟ್ಟಿಕೆಗಳಿದ್ದು ಅದರ ಮೇಲೆ ಅಷ್ಟಮುಖಗಳ ಪಟ್ಟಿಕೆಯಿದೆ. ಅದರಲ್ಲಿ ಅಷ್ಟ ದಿಕ್ಪಾಲಕರು ಮತ್ತು ರತ್ನಪಟ್ಟಿಕೆಗಳ ಅಲಂಕರಣವಿದೆ. ಈ ದಿಕ್ಪಾಲಕರು ತಮ್ಮ ತಮ್ಮ ಪತ್ನಿಯರ ಸಮೇತ ವಾಹನರೂಢರಾಗಿದ್ದಾರೆ. ಅಷ್ಟದಿಕ್ಪಾಲಕರಾದ ಇಂದ್ರನಿಗೆ ಆನೆ, ಅಗ್ನಿಗೆ ಟಗರು, ಯಮನಿಗೆ ಕೋಣ, ನಿಋತಿಗೆ ನರ, ವರುಣನಿಗೆ ಮಕರ, ವಾಯುವಿಗೆ ಜಿಂಕೆ, ಕುಬೇರನಿಗೆ ಮೇಕೆ ಮತ್ತು ಈಶಾನನಿಗೆ ನಂದಿ ವಾಹನಗಳಿರುತ್ತವೆ. ಆದರೆ ಅದರಲ್ಲಿ ಇಂದ್ರನನ್ನು ಉತ್ತರಕ್ಕೆ, ಅಗ್ನಿಯನ್ನು ನೈಋತ್ಯಕ್ಕೆ, ಹೀಗೆ ಇನ್ನುಳಿದವುಗಳನ್ನು ತಮ್ಮ ಮೂಲ ಸ್ಥಾನಗಳಿಂದ ಬದಲಾಯಿಸಲಾಗಿದೆ.

ಭುವನೇಶ್ವರಿಯಲ್ಲಿ ವೃತ್ತಾಕಾರದ ಗುಮ್ಮಟ ಮಾದರಿಯಲ್ಲಿರುವ ಪದ್ಮಮಂಡಲದ ಅಲಂಕರಣವು ಕಣ್ಮನಗಳನ್ನು ಸೆಳೆಯುತ್ತದೆ. ಅದನ್ನು ಸಹಸ್ರದಳ ಕಮಲವೆಂದು ಕರೆಯುವರು. ಈ ಗುಮ್ಮಟದಲ್ಲಿ ಅಲಂಕರಣವು ಒಳ ಮತ್ತು

ಮಧ್ಯಭಾಗದಲ್ಲಿವೆ. ಒಳವೃತ್ತದಲ್ಲಿ ಸುತ್ತಲೂ ಆರು ರೀತಿಯ ವೃತ್ತ ಪಟ್ಟಿಗಳಿವೆ. ಮೊದಲನೇ ಸುತ್ತಿನಲ್ಲಿ ಪತ್ರಗಳಿವೆ. ಎರಡನೇ ಸುತ್ತು ಝೂಲದಂತೆ ಇಳಿಬಿದ್ದಿದೆ. ಮೂರನೇ ಸುತ್ತಿನಲ್ಲಿ ಮುಂಚಾಚಿದ ಕಪೋತ ಪಟ್ಟಿಕೆಯಿದ್ದು ಅದರ ಮೇಲೆ ಸುತ್ತಲೂ ೧೨೬ ಯತಿವರ್ಯರ ಕಿರುಗಾತ್ರದ ದುಂಡು ವಿಗ್ರಹಗಳಿವೆ. ಈ ಯತಿಯರು ಯೋಗಾಸನದಲ್ಲಿ ಮತ್ತು ಪ್ರಸನ್ನ ಮುದ್ರೆಯಲ್ಲಿ ಕುಳಿತಿದ್ದಾರೆ. ನಾಲ್ಕನೇ ಸುತ್ತಿನಲ್ಲಿ ಕಮಲಗಳ ಅಲಂಕರಣವಿದೆ. ತಲಾ ಒಂದು ಕಮಲವು ಎರಡು ಅರ್ಧಗಂಭಗಳ ಮಧ್ಯಯಿವೆ. ಐದನೇ ಸುತ್ತಿನಲ್ಲಿ ಮೊಳೆತಲೆಗಳ ಅಲಂಕರಣವಿದೆ. ಆರನೇ ವೃತ್ತದಲ್ಲಿ ಅರ್ಧಚಂದ್ರಾಕೃತಿಯುಳ್ಳ ಪಟ್ಟಿಕೆಗಳಿದ್ದು ತಲಾ ಒಂದರ ತುದಿಯ ಮೇಲೆ ಯತಿವರ್ಯರ ೩೨ ಕಿರು ದುಂಡು ಶಿಲ್ಪಗಳಿವೆ. ಗಾತ್ರದಲ್ಲಿ ಅವು ಸ್ವಲ್ಪ ದೊಡ್ಡವು.

ಈ ಗುಮ್ಮಟದ ಮಧ್ಯಭಾಗದಲ್ಲಿ ನಕ್ಷತ್ರಾಕಾರದ ಮೂರು ವೃತ್ತಾಕಾರ ಪಟ್ಟಿಕೆಗಳಿವೆ. ಅದರ ಮಧ್ಯ ಕೆಳಗೆ ಇಳಿಬಿದ್ದ ನಾಭಿಯಿದೆ. ಮೊದಲನೇ ವೃತ್ತ ಪಟ್ಟಿಯಲ್ಲಿ ಕಿರು ಅರ್ಧಗೋಲ ಪಟ್ಟಿಕೆಗಳಿವೆ. ಎರಡು ನಕ್ಷತ್ರಾಕಾರದ ಪಟ್ಟಿಕೆಗಳ ಮಧ್ಯ ವಿದ್ಯಾಧರರು ಹಾರಗಳನ್ನು ಹಿಡಿದು ಹಾರುತ್ತಿರುವ ದೃಶ್ಯವಿದೆ. ಎರಡನೇ ವೃತ್ತ ಪಟ್ಟಿಕೆಯಲ್ಲಿ ಮೂರು ಪದರುಗಳಿದ್ದು ತಲಾ ಒಂದರಲ್ಲಿ ಅರ್ಧವೃತ್ತ ಪಟ್ಟಿಕೆಗಳಿವೆ. ಅದರಲ್ಲಿ ಚಂದ್ರಾಕಾರಗಳಿದ್ದು ತಲಾ ಒಂದರ ತುದಿಯು ತ್ರಿಕೋನಾಕಾರದಲ್ಲಿವೆ. ತಳ-ಬುಡಗಳು ಹೂ-ಬಳ್ಳಿ ಮತ್ತು ಕಮಲಗಳಿಂದ ಅಲಂಕೃತಗೊಂಡಿವೆ. ಮೂರನೇ ವೃತ್ತದಲ್ಲಿ ಮೇಲಿನಂತೆ ಅರ್ಧ ವೃತ್ತಾಕಾರದ ಪಟ್ಟಿಕೆಗಳಿವೆ. ಒಳಮುಖದಲ್ಲಿ ಕಿರು ಕಮಲಗಳಿವೆ. ಈ ಕಮಲ ಪೀಠಗಳ ಮೇಲೆ ಸುತ್ತಲೂ ಯತಿಗಳ ದುಂಡು ವಿಗ್ರಹಗಳಿವೆ. ಒಟ್ಟಾರೆ ೧೭೪ ಯತಿವರ್ಯರ ಶಿಲ್ಪಗಳನ್ನು ಕಂಡರಿಸಲಾಗಿದೆ. ಈ ಯತಿವರ್ಯರು ಉಜ್ಜಯಿನೀ ಸದ್ಧರ್ಮಪೀಠದ ಪೂರ್ವಾಚಾರ್ಯರೆಂದು ಹೇಳುವರು.

ಮಧ್ಯ ಭಾಗದಲ್ಲಿ ಕೆಳಗಡೆ ಇಳಿಬಿದ್ದ ನಾಭಿಯ ತುದಿಯು ಚೂಪಾಗಿದೆ. ಮೈ ನುಣುಪಾಗಿದೆ. ಅದರ ಮೇಲ್ಮೈ ಮಣಿ, ಪತ್ರ ಮತ್ತು ಕಮಲ ಚಿತ್ರಗಳಿಂದ ಅಲಂಕರಣಗೊಂಡಿದೆ.

ಈ ವೈವಿಧ್ಯಮಯ ಭುವನೇಶ್ವರಿಯ ಕಮಲ ಮತ್ತು ಯತಿಗಳನ್ನು ನೋಡಿ ಸ್ಥಳಿಕರು ಹೀಗೆ ಉದ್ಧರಿಸುವರು. ''ಶ್ರೀ ಪೀಠಾಚಾರ್ಯರು ಹೃದಯ ಕಮಲದಲ್ಲಿರುವ ಸಹಸ್ರದಳವನ್ನು ಅಂಡ ಮತ್ತು ಗುದದ್ವಾರ ಮಧ್ಯ ಇರುವ ಸುಷಮ್ನ ನಾಡಿಯು ಭೇದಿಸಿ, ಶಿಖಾ ಚಕ್ರದಲ್ಲಿರುವ ಐದು ದಳಗಳನ್ನು ದಾಟಿ, ಬ್ರಹ್ಮ ಚಕ್ರದಲ್ಲಿರುವ ಮೂರು ದಳಗಳಲ್ಲಿ ಲೀನರಾಗುವ ಯೋಗಸಾಧನೆಯ ಶಕ್ತಿ ಸಾಧಕರಾಗಿದ್ದಾರೆ.'' ಇನ್ನು ಕೆಲವರ ಪ್ರಕಾರ ''ಹಟಯೋಗದಲ್ಲಿ ಆಗ್ನಾ ಚಕ್ರದ ಮೇಲೆ ಒಂದು ಸಾವಿರ ದಳ ಚಕ್ರವಿರುತ್ತದೆ. ಕಮಲದಲ್ಲಿ ಅಮೃತವಿರುತ್ತದೆ. ಎಲ್ಲಾ

ಚಕ್ರಗಳನ್ನು ಭೇದಿಸುತ್ತ ಹೋಗಿ ಸಾವಿರ ದಳದಲ್ಲಿರುವ ಅಮೃತವನ್ನು ಸೇವನೆ ಮಾಡುತ್ತಾರೆ. ಮತ್ತು ಕಮಲದ ಮೇಲೆ ರಂಧ್ರವಿರುತ್ತದೆ. ಇದು ಬ್ರಹ್ಮರಂಧ್ರ. ಇದನ್ನು ಕೈಲಾಸವೆನ್ನುವರು. ಅಲ್ಲಿ ಪಾರ್ವತಿ-ಪರಮೇಶ್ವರರು ಆಸೀನರಾಗಿರುತ್ತಾರೆ. ಅದನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕು. ಅದನ್ನು ಭಾವೈಕ್ಯದಿಂದ ಕೆಲಸಮಯ ಇರುವುದಕ್ಕೆ ಶಿವಯೋಗ ಸಮಾಧಿ ಅಥವಾ ಆತ್ಮ ಐಕ್ಯ ಸಮಾಧಿ ಎನ್ನುತ್ತಾರೆ.''

ಕಂಬಗಳು

ಸಭಾಮಂಟಪದಲ್ಲಿ ಹತ್ತು ಕಂಬಗಳು ಒಟ್ಟು ಎರಡು ಸಾಲುಗಳಲ್ಲಿ ೧೫ ಅಂಕಣಗಳಲ್ಲಿವೆ. ಒಂದು ಸಾಲಿನಲ್ಲಿ ಐದು ಕಂಬಗಳಿವೆ.***(ಚಿತ್ರ, ಸಂ .೮೯)***. ರಂಗಮಂಟಪದ ಕಂಬಗಳು ಸ್ವಲ್ಪ ಭಿನ್ನವಾಗಿವೆ. ಅವುಗಳ ಭೋದುಗೆಗಳಲ್ಲಿ ಮಾತ್ರ ಕುಬ್ಜರಿದ್ದಾರೆ. ಈ ಎಲ್ಲಾ ಕಂಬಗಳಿಗೆ ಪೀಠ, ಪಾದ, ದಂಡ, ಕಲಶ, ತಾಟಿಕಾ, ಘಟ, ಕಂಠ, ಮಂಡಿ, ಫಲಕ, ವೀರಕಂಠ, ಗಳ ಮತ್ತು ಭೋದುಗೆಗಳಿವೆ. ಕೆಳಗಡೆ ಚೌಕಪಟ್ಟಿಕೆ, ಮೇಲೆ ಅನೇಕ ವೃತ್ತಗಳಿವೆ. ಅದರ ಮೇಲೆ ಹೂ-ಬಳ್ಳಿಗಳ ಮತ್ತು ಪತ್ರಗಳ ಅಲಂಕರಣಗಳಿವೆ. ಕುಬ್ಜರು ತಮ್ಮ ಮೇಲಿನ ಕೈಗಳಿಂದ ಛತ್ತನ್ನು ಹೊತ್ತಿರುವರು. ಕುಬ್ಜರ ಹೊಟ್ಟೆ ದಪ್ಪ ಮತ್ತು ಕೈ-ಕಾಲುಗಳು ಕಿರಿದಾಗ್ಗಿವೆ.

ಉಳಿದ ಗರ್ಭಗೃಹ-ದೇವಕೋಷ್ಠಗಳು

ಸಭಾಮಂಟಪಕ್ಕೆ ಹೊಂದಿ ಮೂಲ ಗರ್ಭಗೃಹ ಭಾಗವನ್ನು ಸೇರಿ ಒಟ್ಟು ಐದು ಗರ್ಭಗೃಹಗಳಿವೆ. ಅವುಗಳು ಮೂಲಗರ್ಭಗೃಹ ಮತ್ತು ಸಭಾಮಂಟಪದ ಬದಿಗಳಲ್ಲಿ ತಲಾ ಒಂದು ಕಡೆಗೆ ಎರಡರಂತೆ ನಾಲ್ಕು ಇವೆ. ಮೂಲಗರ್ಭಗೃಹಕ್ಕೆ ಮಾತ್ರ ಅಂತರಾಳವಿರುವುದು. ಈ ದ್ವಾರ ಮತ್ತು ಇನ್ನುಳಿದ ನಾಲ್ಕು ಗರ್ಭಗೃಹಗಳ ದ್ವಾರ ಚೌಕಟ್ಟುಗಳ ಬದಿಗಳಲ್ಲಿ ದೇವಕೋಷ್ಠಗಳಿವೆ. ಒಟ್ಟು ಹತ್ತು ದೇವಕೋಷ್ಠಗಳಿವೆ. ಅವುಗಳು ಅನುಕ್ರಮವಾಗಿ ಮೂಲ ಗರ್ಭಗೃಹದ ಅಂತರಾಳ ಬದಿಗಿನ ಗೋಡೆಗಳಲ್ಲಿ ಎರಡು, ಸಭಾಮಂಟಪದ ಪಾರ್ಶ್ವ ಗರ್ಭಗೃಹಗಳ ದ್ವಾರಗಳ ಬದಿಗೆ ತಲಾ ಒಂದು ಕಡೆ ಮೂರರಂತೆ ಆರು ಮತ್ತು ಅವುಗಳ ಉತ್ತರ ಗೋಡೆಗೆ ಹೊಂದಿ ಒಂದರಂತೆ ಎರಡು ಇವೆ. ಉತ್ತರದ ಗೋಡೆಗಳ ದೇವಕೋಷ್ಠಗಳು ಸಂಪೂರ್ಣವಾಗಿ ಜೀರ್ಣೋದ್ಧಾರಗೊಂಡಿವೆ. ಅವುಗಳ ಮೂಲಪಟ್ಟಿಕೆಗಳು ಅಲ್ಲಲ್ಲಿ ಚದುರಿ ಹೋಗಿವೆ.

ಮೂಲಗರ್ಭಗೃಹದ ಅಂತರಾಳದ ದ್ವಾರ ಬದಿಗಳ ದೇವಕೋಷ್ಠಗಳಲ್ಲಿ ಎಡಗಡೆಗೆ ಗಣೇಶ ಮತ್ತು ಬಲಗಡೆಗೆ ಒಬ್ಬ ಯತಿಯ ಶಿಲ್ಪಗಳಿವೆ.

ಗಣೇಶನು ಸವ್ಯಲಲಿತಾಸನದಲ್ಲಿ ಕುಳಿತಿರುವನು. ***(ಚಿತ್ರ, ಸಂ.೯೦ ಮತ್ತು ೯೧)***. ಆತನು ಚತುರ್ಭುಜನಾಗಿದ್ದಾನೆ. ಕೈಗಳಲ್ಲಿ ದಂತ, ಪರಶು, ಕಮಲ ಮತ್ತು

ಮೋದಕಗಳಿವೆ. ಈ ದೇವಕೋಷ್ಠದ ದ್ವಾರಪಟ್ಟಿಕೆಗಳಲ್ಲಿ ನಾಲ್ಕು ಶಾಖೆಗಳಿದ್ದು ಅವುಗಳ ಅಲಂಕರಣವು ಮೂಲಗರ್ಭಗೃಹದ ಬಾಗಿಲು ಚೌಕಟ್ಟಿನ ಶಾಖೆಗಳಂತಿವೆ. ಲಲಾಟದಲ್ಲಿ ಲಕ್ಷ್ಮಿಯಿದ್ದು ಆಕೆಯ ಬದಿಗಳಲ್ಲಿ ಸೇವಕಿಯರು ಚೌರಿ ಹಿಡಿದು ನಿಂತಿರುವರು. ಉತ್ತರಾಂಗದ ಕಪೋತದಲ್ಲಿ ಸ್ತಂಭ ಮಕರ ತೋರಣವಿದ್ದು, ಮಧ್ಯದಲ್ಲಿ ನೃತ್ಯಗಣೇಶನಿರುವನು. ಗಣೇಶನ ಬದಿಗಳಲ್ಲಿ ವಾದ್ಯಮೇಳದವರಿದ್ದಾರೆ. ಗಂಧರ್ವರು ಆಕಾಶದಲ್ಲಿ ಹಾರುತ್ತಿರುವರು. ಈ ದೃಶ್ಯ ಎರಡು ಮಕರಗಳ ಮಧ್ಯವಿದೆ. ಮಕರಗಳನ್ನು ಸವಾರರು ನಡೆಸುತ್ತಿರುವರು.

ಎಡಬದಿಯ ದೇವಕೋಷ್ಠದಲ್ಲಿ ಯತಿಯ ವಿಗ್ರಹವಿದೆ**(ಚಿತ್ರ ಸಂ .೬೨ ಮತ್ತು ೬೩)**. ಯತಿಯನ್ನು ಪದ್ಮಾಸನ, ಯೋಗಮುದ್ರೆ, ಪ್ರಸನ್ನ ಭಂಗಿಯಲ್ಲಿ ಕಂಡರಿಸಲಾಗಿದೆ. ಯತಿಗೆ ವಸ್ತ್ರಾಭರಣಗಳನ್ನು ಧರಿಸಲಾಗಿದೆ. ಈ ಯತಿಯನ್ನು ಪಂಡಿತಾರಾಧ್ಯನೆಂದು ಕರೆಯುವರು. ಲಲಾಟಪಟ್ಟಿಕೆಯಲ್ಲಿ ಲಕ್ಷ್ಮಿಯಿದ್ದು ಬದಿಗಳಲ್ಲಿ ಸೇವಕಿಯರು ಚೌರಿಗಳನ್ನು ಹಿಡಿದು ನಿಂತಿದ್ದಾರೆ. ಈ ದೇವಕೋಷ್ಠದ ಕಪೋತವು ಈ ಮೇಲೆ ಹೇಳಿದ ಗಣೇಶನ ದೇವಕೋಷ್ಠ ಕಪೋತವನ್ನು ಹೋಲುತ್ತದೆ. ಉತ್ತರಾಂಗದ ಮಕರತೋರಣಲ್ಲೂ ಯತಿಯ ಕಿರು ವಿಗ್ರಹವನ್ನು ತೋರಿಸಲಾಗಿದೆ. ಬದಿಗೆ ಸ್ತ್ರೀಯರು ಆರತಿಗಳನ್ನು ಹಿಡಿದು ನಿಂತಿರುವರು. ದ್ವಾರಬಂಧದಲ್ಲಿ ದ್ವಾರಪಾಲಕರನ್ನು ಚಿತ್ರಿಸಿಲ್ಲ.

ಸಭಾಮಂಟಪದ ಪೂರ್ವಮುಖದ ಗೋಡೆಯ ಎಡಭಾಗದಲ್ಲಿ ಒಂದು ಚೌಕಾಕಾರದ ಗರ್ಭಗೃಹವಿದ್ದು ಅದರ ನಾಲ್ಕು ಮೂಲೆಗಳಲ್ಲಿ ಅರ್ಧಗಂಭಗಳಿವೆ. ಅದರ ಮಧ್ಯಭಾಗದಲ್ಲಿ ಪೂರ್ವಕ್ಕೆ ಮುಖಮಾಡಿ ಒಬ್ಬ ಯತಿಯ ಭವ್ಯ ವಿಗ್ರಹವನ್ನು ಅಲಂಕೃತ ಆಯತಾಕಾರದ ಎತ್ತರ ಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ **(ಚಿತ್ರ ಸಂ .೬೪)**. ಯತಿಯನ್ನು ಚತುರ್ಭುಜನಾಗಿ ಕಂಡರಿಸಿರುವುದು ಗಮನಾರ್ಹ. ಕೆಳಗಿನ ಕೈಗಳು ಪ್ರಸನ್ನ ಮುದ್ರೆಯಲ್ಲಿವೆ. ಮೇಲಿನ ಕೈಗಳು ಅಂಜಲಿ ಮುದ್ರೆಯಲ್ಲಿವೆ. ಯತಿಯು ಪದ್ಮಾಸನದಲ್ಲಿದ್ದು, ದೇಹಾಂಗಕ್ಕೆ ಮಣಿ ಮುತ್ತಿನ ಕಿರೀಟ, ಕುಂಡಲ, ಹಾರ, ಭುಜಸರ, ತೋಳ್ಬಳೆ, ಬಳೆ, ಕಡಗ ಇತ್ಯಾದಿ ವಸ್ತ್ರಾಭರಣಗಳಿವೆ. ಪೀಠವು ಮೊಟ್ಟೆಯಾಕಾರದಲ್ಲಿದ್ದು ಮುಂಭಾಗದಲ್ಲಿ ಯತಿಯ ಪ್ರತಿರೂಪವುಳ್ಳ ಚಿತ್ರವನ್ನು ಕಿರುಗೂಡಿನಲ್ಲಿ ಕಂಡರಿಸಲಾಗಿದೆ. ಈ ಯತಿಯ ಪ್ರಭಾವಳಿಯನ್ನು ಹೂಬಳ್ಳಿಗಳಿಂದ ಅಲಂಕರಿಸಲಾಗಿದೆ. ಕುತ್ತಿಗೆ, ಕೈ ಮತ್ತು ಸೊಂಟದ ಹೊರಬದಿಗಳಲ್ಲಿ ರಂಧ್ರಗಳನ್ನು ಕೊರೆಯಲಾಗಿದೆ. ಈ ಯತಿಯನ್ನು **ಶ್ರೀಮರುಳಸಿದ್ಧಸ್ವಾಮಿ**ಗಳೆಂದು ಕರೆಯುವರು. ಈ ಗರ್ಭಗೃಹದ ಛತ್ತು ಸರಳವಾಗಿದೆ.

ಈ ಗರ್ಭಗೃಹದ ದ್ವಾರಬಂಧದ ಅಲಂಕರಣ ಈ ಮೇಲೆ ಹೇಳಿದ ಅಂತರಾಳ ದ್ವಾರವನ್ನು ಹೋಲುತ್ತದೆ. ಆದರೆ ದ್ವಾರ ಬದಿಗಳಲ್ಲಿ ಆಯತಾಕಾರದ ಪಟ್ಟಿಕೆಗಳಲ್ಲಿ ಎರಡು ಸಾಲುಗಳಲ್ಲಿ ರತ್ನ ಪಟ್ಟಿಕೆಗಳಿವೆ. ಮಧ್ಯದಲ್ಲಿ ಕಮಲಗಳ ಅಲಂಕರಣಗಳಿವೆ. ಕೆಳಗಡೆ ಶೈವ ದ್ವಾರಪಾಲಕರು ತ್ರಿಭಂಗಿಯಲ್ಲಿದ್ದು ಕೈಗಳಲ್ಲಿ ಅಭಯಮುದ್ರೆ, ತ್ರಿಶೂಲ, ಡಮರು ಮತ್ತು ನಾಗಗಳಿವೆ. ಕಾಲುಗಳು ಮತ್ತು ಕೆಳಗಿನ ಕೈಗಳು ಶಿಥಿಲಗೊಂಡಿವೆ.

ಲಲಾಟಪಟ್ಟಿಕೆಯಲ್ಲಿ ಗಜಲಕ್ಷ್ಮಿಯನ್ನು ಕಿರುಗೂಡಿನಲ್ಲಿ ಚಿತ್ರಿಸಲಾಗಿದೆ. ಬದಿಗಿನ ಶಾಖೆಗಳಲ್ಲೂ ರತ್ನ, ಬಳ್ಳಿಗಳ ಅಲಂಕರಣವಿದೆ. ಮುಂಚಾಚಿದ ಕಪೋತಪಟ್ಟಿಕೆಗೆ ಈ ಮೇಲೆ ಹೇಳಿದ ರೀತಿಯಲ್ಲಿ ಅಲಂಕರಣವಿದೆ. ಉತ್ತರಾಂಗದಲ್ಲಿ ***(ಚಿತ್ರ ಸಂ.೯೫)***. ಸ್ತಂಭ ಮಕರ ತೋರಣದ ಮಧ್ಯದಲ್ಲಿ ಗರ್ಭಗೃಹದಲ್ಲಿರುವ ಚತುರ್ಭುಜ ಯತಿಯ ಪ್ರತಿರೂಪದ ಶಿಲ್ಪವಿದೆ. ಬದಿಗಳಲ್ಲಿ ತಲಾ ಒಂದರ ಸ್ತಂಭಗಳ ಮೇಲೆ ಸೇವಕಿಯರು ಚೌರಿ ಹಿಡಿದು ನಿಂತಿರುವರು. ಈ ಸ್ತಂಭಗಳ ಹೊರಬದಿಗಳಲ್ಲಿ ವಾದ್ಯಮೇಳ, ನೃತ್ಯಗಾರರಿದ್ದು ಇವರ ಬದಿಗಳಲ್ಲಿ ಸವಾರರುಳ್ಳ ಮಕರಗಳಿವೆ.

ಈ ಗರ್ಭಗೃಹ ದ್ವಾರದ ಬದಿಗಳಲ್ಲಿ ದೇವಕೋಷ್ಠಗಳಿವೆ. ತಲಾ ಒಂದರಲ್ಲಿ ಅಲಂಕೃತ ಆಯತಾಕಾರದ ಎತ್ತರ ಪೀಠಗಳ ಮೇಲೆ ಯತಿಯ ವಿಗ್ರಹಗಳಿವೆ. ಬಲಗಡೆಯ ದೇವಕೋಷ್ಠದಲ್ಲಿರುವ ಯತಿ ಪದ್ಮಾಸನದಲ್ಲಿದ್ದು ಕೈಗಳು ಅಂಜಲಿ ಮುದ್ರೆಯಲ್ಲಿವೆ ***(ಚಿತ್ರ ಸಂ.೯೬)***. ವಸ್ತ್ರಾಭರಣಗಳನ್ನು ಧರಿಸಲಾಗಿದೆ. ಯತಿಯ ತೋರಣದ ಬಲಗಡೆಯ ಪಟ್ಟಿಕೆಯು ಮುರಿದಿದೆ. ಈ ಯತಿಯನ್ನು **ಏಕೋರಾಮರಾಧ್ಯ**ರೆಂದು ಕರೆಯುವರು. ಈ ಮೇಲೆ ಹೇಳಿದ ರೀತಿಯಲ್ಲಿ ಈ ದೇವಕೋಷ್ಠದ ದ್ವಾರವನ್ನು ಅಲಂಕರಿಸಲಾಗಿದೆ. ಲಲಾಟಪಟ್ಟಿಕೆಯಲ್ಲಿ ಗಜಲಕ್ಷ್ಮಿಯಿದ್ದು ಕಪೋತವು ಮುಂಚಾಚಿದೆ. ದ್ವಾರಬಂಧದ ಕೆಳಭಾಗದಲ್ಲಿ ಶೈವದ್ವಾರಪಾಲಕರು ತ್ರಿಭಂಗಿಯಲ್ಲಿ ನಿಂತಿರುವರು. ತಲಾ ಒಂದು ಕಡೆ ಒಬ್ಬ ದ್ವಾರಪಾಲಕನನ್ನು ಮಕರಸ್ತಂಭ ತೋರಣದ ಮಧ್ಯ ತೋರಿಸಲಾಗಿದೆ. ಉತ್ತರಾಂಗ ಪಟ್ಟಿಕೆಯಲ್ಲಿ ದೇವಕೋಷ್ಠದಲ್ಲಿರುವ ಯತಿಯ ಪ್ರತಿರೂಪವುಳ್ಳ ವಿಗ್ರಹವಿದೆ ***(ಚಿತ್ರ ಸಂ.೯೭)***. ಬದಿಗಳಲ್ಲಿ ಸೇವಕಿಯರಿದ್ದಾರೆ. ಈ ದೃಶ್ಯವನ್ನು ಎರಡು ಮಕರಗಳ ಬಾಯಿಯಿಂದ ಹರಿದ ತೋರಣಪಟ್ಟಿಕೆಯ ಮಧ್ಯ ಚಿತ್ರಿಸಲಾಗಿದೆ.

ಈ ಗರ್ಭಗೃಹ ದ್ವಾರದ ಬದಿಗೆ ಎಡಗಡೆಯ ದೇವಕೋಷ್ಠದಲ್ಲಿ ಅಲಂಕೃತ ಆಯತಾಕಾರದ ಎತ್ತರ ಪೀಠದ ಮೇಲೆ ಯತಿಯ ವಿಗ್ರಹವಿದೆ. ಈ ಯತಿಯು ಪದ್ಮಾಸನ ಮತ್ತು ಪ್ರಸನ್ನ ಮುದ್ರೆಯಲ್ಲಿದ್ದು ಪೀಠದಲ್ಲಿ ಯತಿಯ ಪ್ರತಿರೂಪವಿದೆ. ದೇವಕೋಷ್ಠದ ದ್ವಾರ ಚೌಕಟ್ಟನ್ನು ಈ ಮೇಲಿನಂಥ ಅಲಂಕರಣವನ್ನು

ಮಾಡಲಾಗಿದೆ. ಲಲಾಟದಲ್ಲಿ ಗಜಲಕ್ಷ್ಮಿ ಇರುವಳು. ಕಪೋತ ಮುಂಚಾಚಿದೆ. ಉತ್ತರಾಂಗದಲ್ಲಿ ಮಕರ ತೋರಣವಿದ್ದು, ಮಧ್ಯದಲ್ಲಿ ಯತಿಯ ಶಿಲ್ಪವಿದೆ. ಯತಿಗೆ ವಸ್ತ್ರಾಭರಣಗಳನ್ನು ಧರಿಸಲಾಗಿದೆ. ದ್ವಾರಬಂಧದಲ್ಲಿ ದ್ವಾರಪಾಲಕರ ಚಿತ್ರಗಳನ್ನು ತೋರಿಸಿಲ್ಲ.

ಸಭಾಮಂಟಪ ಮತ್ತು ಉತ್ಸವ ಮಂಟಪಗಳ ಬದಿಗೆ ನಂದಿಯ ವಿಗ್ರಹವಿದೆ. ನಂದಿಯನ್ನು ಶ್ರೀ ಮರುಳಸಿದ್ಧಸ್ವಾಮಿಯ ಕಡೆಗೆ ಮುಖಮಾಡಿ ಕೂಡಿಸಲಾಗಿದೆ.

ಸಭಾಮಂಟಪದ ಬಲಗಡೆಯ ಎರಡನೇ ಗರ್ಭಗೃಹದಲ್ಲಿ ಭವ್ಯವಾದ ಗೋಪಾಲಕೃಷ್ಣನ ವಿಗ್ರಹವನ್ನು ಅಲಂಕೃತ ಆಯತಾಕಾರದ ಎತ್ತರ ಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ ***(ಚಿತ್ರ ಸಂ.೯೮)***. ಕೃಷ್ಣನು ಕೊಳಲನ್ನು ಊದುತ್ತ ನಿಂತಿರುವನು. ವಸ್ತ್ರಾಭರಣಗಳಿಂದ ಭೂಷಿತನಾಗಿದ್ದಾನೆ. ಗರ್ಭಗೃಹವು ಚೌಕಾಗಿದ್ದು ನಾಲ್ಕು ಮೂಲೆಗಳಲ್ಲಿ ಅರ್ಧಗಂಭಗಳಿವೆ. ಅದರ ಬಾಗಿಲ ಚೌಕಟ್ಟಿನ ಅಲಂಕರಣವು ಈ ಮೇಲೆ ಹೇಳಿದ ಎರಡನೇ ಗರ್ಭಗೃಹದ ಚೌಕಟ್ಟಿನಂತಿದೆ. ಕಪೋತವು ಮುಂದಕ್ಕೆ ಚಾಚಿದೆ. ಲಲಾಟಪಟ್ಟಿಕೆಯಲ್ಲಿ ಗಜಲಕ್ಷ್ಮಿಯನ್ನು ತೋರಿಸಲಾಗಿದೆ. ಉತ್ತರಾಂಗದಲ್ಲಿ ಕ್ರಮವಾಗಿ ಒಂದೇ ಸಾಲಿನಲ್ಲಿ ಗೋಪಾಲಕೃಷ್ಣ, ಉಗ್ರನರಸಿಂಹ ಮತ್ತು ವರಾಹ ರೂಪವಿಷ್ಣು ಇವರು ನಿಂತಿದ್ದಾರೆ ***(ಚಿತ್ರ ಸಂ.೯೯)***. ತಲಾ ಒಬ್ಬರನ್ನು ಮಕರ ಸ್ತಂಭ ತೋರಣದ ಮಧ್ಯ ಕಂಡರಿಸಲಾಗಿದೆ. ಈ ದೃಶ್ಯವು ಎರಡು ಮಕರಗಳ ಮಧ್ಯಯಿದೆ. ಮಕರಗಳ ಬಾಯಿಂದ ಹೊರಬಂದ ತೋರಣ ಬಳ್ಳಿಗಳ ಅಲಂಕರಣವಿದೆ. ಮಕರಗಳ ಮೇಲೆ ಸವಾರರು ಕುಳಿತಿರುವರು. ಆದರೆ ದ್ವಾರಬಂಧಗಳಲ್ಲಿ ಶೈವದ್ವಾರಪಾಲಕರಿದ್ದಾರೆ.

ಈ ಗರ್ಭಗೃಹದ್ವಾರದ ಎಡಗಡೆಯ ದೇವಕೋಷ್ಠದಲ್ಲಿ ಅಲಂಕೃತ ಎತ್ತರವಾದ ಪೀಠದ ಮೇಲೆ ಯತಿಯ ವಿಗ್ರಹವಿದೆ***(ಚಿತ್ರ ಸಂ.೧೦೦)***. ಯತಿಯನ್ನು ಅಂಜಲಿ ಮುದ್ರೆ ಮತ್ತು ಪದ್ಮಾಸನದಲ್ಲಿ ರೂಪಿಸಲಾಗಿದೆ. ಈ ಯತಿಯ ಬದಿಗಳಲ್ಲೂ ತನ್ನ ಪ್ರತಿರೂಪದ ಯತಿಗಳನ್ನು ಚಿತ್ರಿಸಿರುವುದು ಗಮನೀಯ. ಯತಿಗೆ ವಸ್ತ್ರಾಭರಣಗಳನ್ನು ಧರಿಸಲಾಗಿದೆ. ದೇವಕೋಷ್ಠದ ದ್ವಾರಚೌಕಟ್ಟಿನ ಅಲಂಕರಣವು ಈ ಮೇಲೆ ಹೇಳಿದ ಬಲಗಡೆಯ ದೇವಕೋಷ್ಠದಂತಿದೆ. ಮುಂಚಾಚಿದ ಕಪೋತವಿದ್ದು ಲಲಾಟಪಟ್ಟಿಕೆಯಲ್ಲಿ ಕುಳಿತ ಲಕ್ಷ್ಮಿಯನ್ನು ತೋರಿಸಲಾಗಿದೆ. ಬದಿಗಳಲ್ಲಿ ಸೇವಕಿಯರು ಚೌರಿಗಳನ್ನು ಹಿಡಿದುಕೊಂಡು ನಿಂತಿರುವರು. ಉತ್ತರಾಂಗದಲ್ಲಿ ಒಂದೇ ಸಾಲಿನಲ್ಲಿ ಮೂರು ಮಕರ ಸ್ತಂಭ ತೋರಣಗಳಿವೆ ***(ಚಿತ್ರ ಸಂ.೧೦೧)***. ತಲಾ ಒಂದರಲ್ಲಿ, ಮಧ್ಯ ಯತಿ ಬದಿಗಳಲ್ಲಿ ಸೇವಕಿಯರಿದ್ದಾರೆ. ಅವರು ಚೌರಿ ಮತ್ತು

ಫಲಗಳನ್ನು ಹಿಡಿದು ನಿಂತಿರುವರು. ಈ ಯತಿ ಮತ್ತು ಸ್ತ್ರೀಯರು ವಸ್ತ್ರಾಭರಣಗಳಿಂದ ಭೂಷಿತರಾಗಿದ್ದಾರೆ. ಈ ಯತಿಯನ್ನು ಭಕ್ತಿ ಭೂಷಣ ಎಂದು ಕರೆಯುವರು. ಈ ದೃಶ್ಯವನ್ನು ಎರಡು ಮಕರಗಳ ಮಧ್ಯ ಚಿತ್ರಿಸಲಾಗಿದೆ.

ಈ ಗರ್ಭಗೃಹದ ಉತ್ತರ ಹೊರಗೋಡೆಯ ಮಧ್ಯದಲ್ಲಿ ಒಂದು ದೇವಕೋಷ್ಠವಿದ್ದು ಅದು ಸಂಪೂರ್ಣವಾಗಿ ಜೀರ್ಣೋದ್ಧಾರಗೊಂಡಿದೆ. ಅದರಲ್ಲಿ ಯತಿವಿಗ್ರಹವಿದೆ ***(ಚಿತ್ರ ಸಂ.೧೦೨)***. ಯತಿಗೆ ವಸ್ತ್ರಾಭರಣಗಳನ್ನು ಧರಿಸಲಾಗಿದೆ.

ಈ ಭಾಗದಿಂದ ಮುಂದೆ ಈ ದೇವಾಲಯವನ್ನು ತದನಂತರದ ಕಾಲದಲ್ಲಿ ಸಂಪೂರ್ಣವಾಗಿ ಪರಿವರ್ತಿಸಲಾಗಿದೆ.

ಸಭಾಮಂಟಪದ ಬಲಭಾಗದ ಮೊದಲನೇ ಗರ್ಭಗೃಹವು ಚಚ್ಚೌಕಾಗಿದ್ದು ನಾಲ್ಕು ಮೂಲೆಗಳಲ್ಲಿ ಅರ್ಧಗಂಭಗಳಿವೆ. ಮಧ್ಯದಲ್ಲಿ ಭವ್ಯವಾದ ಒಬ್ಬ ಯತಿಯ ವಿಗ್ರಹವನ್ನು ಅಲಂಕೃತ ಆಯತಾಕಾರದ ಎತ್ತರ ಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ ***(ಚಿತ್ರ ಸಂ.೧೦೩)***. ಯತಿಯು ಭಕ್ತಿಯಿಂದ ಪದ್ಮಾಸನದಲ್ಲಿ ಕುಳಿತಿದ್ದು ಕೈಗಳು ಪ್ರಸನ್ನ ಭಂಗಿಯಲ್ಲಿವೆ. ಮೇಲೆ ಸುತ್ತಲೂ ಸ್ತಂಭ ಮಕರ ತೋರಣವಿದೆ. ಯತಿಗೆ ವಸ್ತ್ರಾಭರಣಗಳನ್ನು ಧರಿಸಲಾಗಿದೆ. ಪೀಠದಲ್ಲೂ ಯತಿಯ ಪ್ರತಿರೂಪವಿದೆ. ಈ ಯತಿಯನ್ನು **ಶ್ರೀಮಳೆಸ್ವಾಮಿ** ಎಂದು ಕರೆಯುವರು. ಈ ಗರ್ಭಗೃಹದ ಬಾಗಿಲ ಚೌಕಟ್ಟಿನ ಅಲಂಕರಣವು ಎದುರಿನ ಗರ್ಭಗೃಹದಂತಿದೆ. ಲಲಾಟಪಟ್ಟಿಕೆಯಲ್ಲಿ ಗಜಲಕ್ಷ್ಮಿ ಉತ್ತರಾಂಗದಲ್ಲಿ ಒಂದೇ ಸಾಲಿನಲ್ಲಿ, ತ್ರಿಮೂರ್ತಿಗಳನ್ನು ತೋರಿಸಲಾಗಿದೆ ***(ಚಿತ್ರ ಸಂ.೧೦೪)***. ತಲಾ ಒಬ್ಬರನ್ನು ಸ್ತಂಭ ಮಕರ ತೋರಣದ ಮಧ್ಯ ಚಿತ್ರಿಸಲಾಗಿದೆ. ಮಧ್ಯದಲ್ಲಿ ಶಿವನು ಪದ್ಮಾಸನದಲ್ಲಿ ಕುಳಿತಿದ್ದು, ಬದಿಗಳಲ್ಲಿ ಬ್ರಹ್ಮ ಮತ್ತು ವಿಷ್ಣು ಸಮಭಂಗಿಯಲ್ಲಿ ನಿಂತಿರುವರು. ಶಿವನು ಚತುರ್ಭುಜಧಾರಿ. ಕೆಳಗಿನ ಕೈಗಳು ಯೋಗಮುದ್ರೆಯಲ್ಲಿದ್ದು, ಮೇಲಿನ ಕೈಗಳಲ್ಲಿ ತ್ರಿಶೂಲ ಮತ್ತು ಡಮರುಗಳಿವೆ. ವಿಷ್ಣುವಿನ ನಾಲ್ಕು ಕೈಗಳಲ್ಲಿ ಅಭಯಮುದ್ರೆ, ಶಂಖ, ಚಕ್ರ ಮತ್ತು ಗದಾ ಇವೆ.

ಈ ಗರ್ಭಗೃಹದ ಎಡಬಲಗಡೆಯ ದೇವಕೋಷ್ಠಗಳಲ್ಲಿ ಅಲಂಕೃತ ಆಯತಾಕಾರದ ಎತ್ತರ ಪೀಠದ ಮೇಲೆ ಯತಿಗಳ ವಿಗ್ರಹಗಳಿವೆ. ಎಡಗಡೆಯಲ್ಲಿರುವ ಯತಿಯ ವಿಗ್ರಹವನ್ನು ಸೂರ್ಯಪೀಠದ ಮೇಲೆ ಕೂಡಿಸಲಾಗಿದೆ ***(ಚಿತ್ರ ಸಂ.೧೦೫)***. ಆ ಪೀಠದಲ್ಲಿ ಏಳು ಅಶ್ವಗಳನ್ನು ಅರುಣನು ಸವಾರಿ ಮಾಡುತ್ತಿರುವನು. ಹೀಗಾಗಿ ಈ ಯತಿಯ ಮೂಲಸ್ಥಳ ಬದಲಾವಣೆಯಾಗಿದೆ ಎಂದು ತಿಳಿಯುವುದು. ಲಲಾಟಪಟ್ಟಿಯಲ್ಲಿ ಗಜಲಕ್ಷ್ಮಿ ಇರುವಳು. ಉತ್ತರಾಂಗದಲ್ಲಿ ಸೂರ್ಯನನ್ನು ಮಕರಸ್ತಂಭ ತೋರಣದ ಮಧ್ಯ ತೋರಿಸಲಾಗಿದೆ ***(ಚಿತ್ರ ಸಂ.೧೦೬)***. ತೋರಣದ

ಬದಿಗಳಲ್ಲಿ ಕೆಳಗಡೆ ಸೇವಕಿಯರನ್ನು ಮೇಲ್ಗಡೆ ಬಿಲ್ಲು ಹಿಡಿದ ಉಷೆ-ಪ್ರತ್ಯುಷೆಯರನ್ನು ಚಿತ್ರಿಸಲಾಗಿದೆ. ಈ ದೃಶ್ಯವು ಎರಡು ಮಕರಗಳ ಮಧ್ಯ ಇರುವುದು. ಅಲ್ಲಿ ಸೂರ್ಯ ಮತ್ತು ದೇವಕೋಷ್ಠದಲ್ಲಿ ಸೂರ್ಯಪೀಠ ಗಳಿರುವುದರಿಂದ ಅಲ್ಲಿರುವ ಯತಿಯ ಮೂಲಸ್ಥಾನ ಬದಲಾವಣೆಯಾಗಿರುವುದು ತಿಳಿದುಬರುತ್ತದೆ. ಈ ದೇವಕೋಷ್ಠದ ದ್ವಾರಬಂಧದಲ್ಲಿ ಪೂರ್ಣಕುಂಭಗಳ ಚಿತ್ರಗಳಿವೆ. ಈ ದೇವಕೋಷ್ಠದಲ್ಲಿರುವ ಯತಿಯನ್ನು **ವಿಶ್ವಾರಾಧ್ಯ**ರೆನ್ನುವರು. ಈ ಯತಿಯು ಭಕ್ತಿಯಿಂದ ಕೈಮುಗಿದು ಪದ್ಮಾಸನದಲ್ಲಿ ಕುಳಿತಿರುವನು. ಯತಿಗೆ ವಸ್ತ್ರಾಭರಣಗಳನ್ನು ಧರಿಸಲಾಗಿದೆ.

ಈ ಗರ್ಭಗೃಹದ ಬಲಭಾಗದ ದೇವಕೋಷ್ಠದಲ್ಲಿ ಒಬ್ಬ ಯತಿಯ ವಿಗ್ರಹವಿದ್ದು ಆಯತಾಕಾರದ ಅಲಂಕೃತ ಎತ್ತರ ಪೀಠದ ಮೇಲೆ ಕೂಡಿಸಲಾಗಿದೆ***(ಚಿತ್ರ ಸಂ.೧೦೭)***. ಈ ಯತಿಯನ್ನು ಪದ್ಮಾಸನದಲ್ಲಿ ಯೋಗ ಮುದ್ರೆಯಲ್ಲಿ ತೋರಿಸಿದ್ದು ವಸ್ತ್ರಾಭರಣಗಳಿಂದ ಅಲಂಕರಿಸಲಾಗಿದೆ. ಪೀಠದಲ್ಲಿ ಈ ಯತಿಯ ಪ್ರತಿರೂಪವಿದೆ. ಲಲಾಟದಲ್ಲಿ ಗಜಲಕ್ಷ್ಮಿಯಿದ್ದು ಬದಿಗಳಲ್ಲಿ ಸೇವಕಿಯರು ಚೌರಿ ಹಿಡಿದು ನಿಂತಿರುವರು. ಉತ್ತರಾಂಗದಲ್ಲಿ ಮಕರಸ್ತಂಭ ತೋರಣದ ಮಧ್ಯ ಯತಿಯನ್ನು ತೋರಿಸಿದ್ದು ಬದಿಗಳಲ್ಲಿಬ್ಬರು ಸ್ತ್ರೀಯರು ಆರತಿ ಹಿಡಿದು ನಿಂತಿರುವರು ***(ಚಿತ್ರ ಸಂ.೧೦೮)***. ಜೊತೆಯಲ್ಲಿ ವಾದ್ಯಮೇಳವಿದೆ. ಈ ದೃಶ್ಯವನ್ನು ಎರಡು ಮಕರಗಳ ಮಧ್ಯ ಚಿತ್ರಿಸಲಾಗಿದೆ.

ಸಭಾಮಂಟಪದ ಎಡಬದಿಯ ಎರಡನೇ ಗರ್ಭಗೃಹವು ಚಚ್ಚೌಕಾಗಿದ್ದು ಅದರ ಮೂಲೆಗಳಲ್ಲಿ ಅರ್ಧಗಂಭಗಳಿವೆ. ಮಧ್ಯದಲ್ಲಿ ಎತ್ತರ ಆಯತಾಕಾರ ಪೀಠದ ಮೇಲೆ ದ್ವಿಭುಜ ವೀರಭದ್ರನ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ ***(ಚಿತ್ರ ಸಂ.೧೦೯)***. ಆತನ ಕೈಗಳಲ್ಲಿ ಕತ್ತಿ ಮತ್ತು ಗುರಾಣಿಗಳಿವೆ. ಎರಡೂ ಕಾಲುಗಳನ್ನು ಸ್ವಲ್ಪ ಬಗ್ಗಿಸಿ ನಿಂತಿರುವುದು ವೀರಭದ್ರನ ಶಿಲ್ಪಗಳಲ್ಲೇ ಅಪರೂಪದ್ದಾಗಿದೆ. ಕೆಳಗಡೆ ಬದಿಯಲ್ಲಿ ದಕ್ಷ ಇನ್ನಿತರರ ಕಿರು ಚಿತ್ರಗಳಿವೆ. ಹಾಗೂ ಸ್ತಂಭ ಮಕರತೋರಣದ ಅಲಂಕರಣವಿದೆ. ವೀರಭದ್ರನಿಗೆ ವಸ್ತ್ರಾಭರಣದ ಜೊತೆ ರುಂಡಮಾಲೆಯನ್ನು ಧರಿಸಲಾಗಿದೆ. ಆತನ ಪೀಠದಲ್ಲಿ ಯಾವ ಚಿತ್ರಗಳೂ ಇಲ್ಲ. ಅದರ ಬಾಗಿಲ ಚೌಕಟ್ಟಿನ ಅಲಂಕರಣ ಈ ಮೇಲೆ ಹೇಳಿದಂತಿದೆ. ಬಾಗಿಲು ಚೌಕಟ್ಟಿನಲ್ಲಿರುವ ಶೈವ ದ್ವಾರಪಾಲಕರ ಕೈಗಳಲ್ಲಿ ಕತ್ತಿ, ಡಮರು, ತ್ರಿಶೂಲ ಮತ್ತು ನಾಗಗಳಿವೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಮುಂಚಾಚಿದ ಕಪೋತವಿದೆ. ಉತ್ತರಾಂಗದಲ್ಲಿ ಒಂದೇ ಸಾಲಿನಲ್ಲಿ ಮೂರು ಮಕರಸ್ತಂಭ ತೋರಣಗಳಿದ್ದು ತಲಾ

ಒಂದರಲ್ಲಿ ಕ್ರಮವಾಗಿ ಉಗ್ರನರಸಿಂಹ, ವೀರಭದ್ರ ಮತ್ತು ಯತಿಯರ ಶಿಲ್ಪಗಳಿವೆ ***(ಚಿತ್ರ ಸಂ.೧೧೦).*** ತಲಾ ಒಂದು ಮಕರಸ್ತಂಭ ತೋರಣದ ಬದಿಗಳಲ್ಲಿ ಮೇಲ್ಗಡೆ ಗಂಧರ್ವರು ಹಾರವಿಡಿದು ಹಾರುತ್ತಿರುವರು. ಈ ದೃಶ್ಯದ ಬದಿಗಳಲ್ಲಿ ಮಕರಗಳಿವೆ.

ಬಾಗಿಲ ಚೌಕಟ್ಟಿನ ಕೆಳಭಾಗ ಅಲ್ಲಲ್ಲಿ ಶಿಥಿಲವಾಗಿದೆ. ಈ ಗರ್ಭಗೃಹದ ಬಲಗಡೆಯ ದೇವಕೋಷ್ಠದಲ್ಲಿ ಆಯತಾಕಾರ ಪೀಠದ ಮೇಲೆ ಒಬ್ಬ ಯತಿಯ ವಿಗ್ರಹವಿದೆ ***(ಚಿತ್ರ ಸಂ .೧೧೧).*** ಪೀಠದಲ್ಲಿ ಯತಿಯ ಕಿರು ರೂಪದ ಚಿತ್ರವಿದೆ. ಬಾಗಿಲು ಚೌಕಟ್ಟು ಈ ಮೇಲಿನಂತಿದೆ. ಲಲಾಟದಲ್ಲಿ ಲಕ್ಷ್ಮಿ ಇದ್ದಾಳೆ. ಬದಿಗೆ ಸೇವಕಿಯರು ಚೌರಿ ಹಿಡಿದು ನಿಂತಿದ್ದಾರೆ. ಉತ್ತರಾಂಗದಲ್ಲಿ ಸ್ತಂಭತೋರಣದ ಮಧ್ಯದಲ್ಲಿ ಒಬ್ಬ ಯತಿಯು ಪದ್ಮಾಸನದಲ್ಲಿದ್ದಾನೆ***(ಚಿತ್ರ ಸಂ .೧೧೨).*** ಕೈಗಳು ಯೋಗಮುದ್ರೆ, ಪ್ರಸನ್ನಭಂಗಿಯಲ್ಲಿವೆ. ಬದಿಗಳಲ್ಲಿ ಸೇವಕಿಯರಿಬ್ಬರು ಚೌರಿ ಹಿಡಿದು ನಿಂತಿದ್ದು, ಈ ದೃಶ್ಯವನ್ನು ಮಕರಸ್ತಂಭ ತೋರಣದ ಮಧ್ಯ ಚಿತ್ರಿಸಲಾಗಿದೆ.

ವೀರಭದ್ರನ ಗರ್ಭಗೃಹದ ಉತ್ತರ ಮುಖದ ಹೊರಗೋಡೆಯ ಗೂಡಿನಲ್ಲಿ ಯೋಗಮುದ್ರೆಯಲ್ಲಿ ಕುಳಿತ ಯತಿಯ ವಿಗ್ರಹವಿದೆ***(ಚಿತ್ರ ಸಂ. ೧೧೩).*** ಪೀಠದಲ್ಲಿ ಯತಿಯ ಕಿರು ಚಿತ್ರವಿದೆ. ಅದಕ್ಕೆ ಯಾವುದೇ ಈ ಮೇಲೆ ಹೇಳಿದಂತಹ ಅಲಂಕಾರ ಚೌಕಟ್ಟಿಲ್ಲ. ಈ ದೇವಕೋಷ್ಠವನ್ನು ಜೀರ್ಣೋದ್ಧಾರಗೊಳಿಸಲಾಗಿದೆ. ಈ ದೇವಕೋಷ್ಠಗಳಿಗೆ ಸೇರಿದ ಉತ್ತರಾಂಗದ ಪಟ್ಟಿಕೆಗಳೆರಡು ಈ ದೇವಾಲಯದ ಮಹಾಮಂಟಪದಲ್ಲಿ ಇಡಲಾಗಿದೆ. ಒಂದರಲ್ಲಿ ಯೋಗಮುದ್ರೆಯಲ್ಲಿ ಕುಳಿತ ಯತಿ ವಿಗ್ರಹವಿದೆ. ಬದಿಗಳಲ್ಲಿ ಸೇವಕಿಯರು ಹಣ್ಣಿನ ತಾಟುಗಳನ್ನು ಹಿಡಿದು ನಿಂತಿರುವರು. ಬದಿಗಳಲ್ಲಿ ಇಬ್ಬರು ವಾದ್ಯಮೇಳದವರಿದ್ದಾರೆ. ಈ ದೃಶ್ಯವನ್ನು ಮಕರ ಸ್ತಂಭ ತೋರಣದ ಮಧ್ಯ ತೋರಿಸಲಾಗಿದೆ. ಇನ್ನೊಂದರಲ್ಲೂ ಯೋಗಮುದ್ರೆಯಲ್ಲಿ ಕುಳಿತ ಯತಿಯ ಶಿಲ್ಪವಿದೆ. ಬದಿಗಳಲ್ಲಿ ಕಳಸವಿಡಿದು ನಿಂತ ಸೇವಕಿಯರು ಮತ್ತು ಇಬ್ಬರು ವಾದ್ಯಮೇಳದವರಿದ್ದಾರೆ. ಮೇಲೆ ಕೀರ್ತಿಮುಖವಿದೆ. ಈ ದೃಶ್ಯವನ್ನು ಮಕರ ಸ್ತಂಭತೋರಣದ ಮಧ್ಯ ಚಿತ್ರಿಸಲಾಗಿದೆ.

ಹೀಗೆ ಈ ದೇವಾಲಯದಲ್ಲಿ ಸಭಾಮಂಟಪದ ಬದಿಗಿನ ದೇವಕೋಷ್ಠ ಮತ್ತು ಗರ್ಭಗೃಹಗಳಲ್ಲಿ ವೈವಿಧ್ಯಮಯ ಯತಿಯರ ಶಿಲ್ಪಗಳಿರುವುದು ಗಮನೀಯ. ಈ ಯತಿವರ್ಯರ ಶಿಲ್ಪಗಳು ಶ್ರೀ ಉಜ್ಜಯಿನೀ ಪೀಠದ ಪೂರ್ವ ಜಗದ್ಗುರುಗಳೆಂದು ಹೇಳುವರು. ಇಲ್ಲಿಯ ಮಕರ ಪಟ್ಟಿಕೆಗಳೆಲ್ಲಾ ಆಯತಾಕಾರದಲ್ಲಿವೆ.

ಉತ್ಸವಮೂರ್ತಿ ಮಂಟಪ

ಸಭಾಮಂಟಪದ ಎಡಗಡೆ ಮತ್ತು ಗೋಪಾಲಕೃಷ್ಣನ ಗರ್ಭಗುಡಿಯ ಮುಂದೆ ಪೂರ್ವಕ್ಕೆ ಮುಖಮಾಡಿ ಒಂದು ಕಟ್ಟಿಗೆಯ ಮಂಟಪವನ್ನಿಡಲಾಗಿದೆ. ಈ

ಮಂಟಪದಲ್ಲಿ ಶ್ರೀಮರುಳಸಿದ್ಧಸ್ವಾಮಿಯ ಮತ್ತು ಗೌರಮ್ಮರುಳ್ಳ ವಿಗ್ರಹವಿದೆ. ಇವರು ಶಿವ-ಪಾರ್ವತಿಯರ ಪ್ರತಿರೂಪದಲ್ಲಿದ್ದಾರೆ. ಬೆಳ್ಳಿ ಲೋಹದ ಈ ವಿಗ್ರಹವನ್ನು ಉತ್ಸವಮೂರ್ತಿಯನ್ನಾಗಿ ಬಳಸುವರು. ಉತ್ಸವ ಸಂದರ್ಭದಲ್ಲಿ ಉತ್ಸವ ಮೂರ್ತಿಯ ಶ್ರೀ ಮರುಳಸಿದ್ಧಸ್ವಾಮಿಗೆ ಆರುಮಳ ಪಂಜೆಯನ್ನು ಉಡಿಸುವರು.***(ಚಿತ್ರ ಸಂ.೧೧೪ ಮತ್ತು ೧೧೫)***

ಈ ಉತ್ಸವ ಮೂರ್ತಿಯಲ್ಲಿ ಶಿವನ ಕೆಳಗಿನ ಬಲ ಕೈ ಅಭಯ ಮುದ್ರೆಯಲ್ಲಿದೆ. ಇನ್ನೊಂದು ಕೈಯಲ್ಲಿ ಪರಶು, ಇನ್ನೆರಡು ಕೈಗಳಿಂದ ಪಾರ್ವತಿಯನ್ನು ಅಪ್ಪಿಕೊಳ್ಳುವಂತೆ ಚಿತ್ರಿಸಲಾಗಿದೆ. ಪಾರ್ವತಿಯು ಶಿವನ ತೊಡೆಯ ಮೇಲೆ ಕುಳಿತಿರುವಳು. ಆಕೆಯು ತನ್ನ ಒಂದು ಕೈಯಿಂದ ಶಿವನನ್ನು ಅಪ್ಪಿಕೊಂಡಿದ್ದು ಇನ್ನೊಂದು ಕೈಯಲ್ಲಿ ಕಮಲವನ್ನು ಹಿಡಿದಿದ್ದಾಳೆ. ಇಲ್ಲಿ ಈ ರೂಪದಲ್ಲಿ ಮರುಳಸಿದ್ಧ ಮತ್ತು ಗೌರಮ್ಮರಿರುವರು.

ಈ ಮಂಟಪದ ನಾಲ್ಕು ಮೂಲೆಗಳಲ್ಲಿ ತಲಾ ಒಂದರ ಕಂಬದ ಮೇಲೆ ಭೋದುಗೆಗಳಿವೆ. ಭೋದಿಗೆಗಳಿಗೆ ಹೊಂದಿ ಸಿಂಹ ಚಿತ್ರಗಳಿವೆ. ಆದರೆ ಅದರ ಛತ್ತಿನಲ್ಲಿ ಗಂಟೆಗಳನ್ನು ಕಟ್ಟಲಾಗಿದೆ.

ಶಾಸನಗಳು

ಈ ಸಭಾಮಂಟಪದ ಮುಂದಿನ ಕಂಬದಲ್ಲಿ ಸೇವುಣರ ಕಾಲದ (ಕ್ರಿ.ಶ. ೧೨೬೮) ಒಂದು ಶಾಸನವಿದೆ. ಸಭಾಮಂಟಪದ ಮುಂದಿನ ಅಂಕಣದ ತೊಲೆಯಲ್ಲೂ ಒಂದು ಶಾಸನವಿದ್ದು ಅದು ಮಸುಕಾಗಿದೆ. ಸಭಾಮಂಟಪದಲ್ಲಿ ಲೋಹದ ಗಂಟೆಗಳಿದ್ದು ಎರಡು ಗಂಟೆಗಳ ಮೇಲೆ ಶಾಸನಗಳಿವೆ. ಈ ಶಾಸನಗಳ ವಿವರವು ಶಾಸನಗಳ ಅಧ್ಯಾಯ ಭಾಗದಲ್ಲಿವೆ.

ಮುಖಮಂಟಪ

ಸಭಾಮಂಟಪದ ಮುಂದಿನ ಬದಿಗಳಲ್ಲಿ ಪೂರ್ವ-ಪಶ್ಚಿಮದಲ್ಲಿ ಎರಡು ಮುಖಮಂಟಪಗಳಿವೆ. ಪಶ್ಚಿಮ ಮುಖಮಂಟಪದ ಎಡಭಾಗದ ಕಟ್ಟೆಯ ಮೇಲೆ ಭಕ್ತನೊಬ್ಬನ ಶಿಲ್ಪವಿದೆ. ಆತನು ತನ್ನ ಕತ್ತಿಯನ್ನು ಕೆಳಗಡೆ ಇಟ್ಟು ನಿಂತಿರುವನು. ***(ಚಿತ್ರ ಸಂ.೧೧೬)*** ಮುಖಮಂಟಪದ ಬಲಗಡೆಯ ಕಟ್ಟೆಯ ಮೇಲೆ ವಿಜಯನಗರ ಅರಸ ಸದಾಶಿವರಾಯನ ಕಾಲದ ಶಾಸನವಿದೆ. ಪೂರ್ವದ ಮುಖಮಂಟಪದ ಗೋಡೆಗಳಲ್ಲೆರಡು ವಿಜಯನಗರ ಕಾಲದ ಮಸುಕಾದ ಶಾಸನಗಳಿವೆ. ಅದರ ಬಾಗಿಲ ಪಟ್ಟಿಯಲ್ಲಿ ಒಂದು ಶಾಸನವಿದೆ. ಇವುಗಳ ವಿವರಗಳು ಶಾಸನ ಭಾಗದಲ್ಲಿವೆ.

ಈ ಸಭಾಮಂಟಪಕ್ಕೆ ಹೊಂದಿ ಉತ್ತರದಲ್ಲಿ ಒಂದು ವಿಶಾಲವಾದ ಮಹಾ ಮಂಟಪವಿದೆ. ಈ ಮಂಟಪದ ಬಾಗಿಲು ಚೌಕಟ್ಟು ಸರಳವಾಗಿದೆ. ಉತ್ತರಾಂಗದಲ್ಲಿ ಮೂರು ನಾಗರಮಾದರಿ ಶಿಖರಗಳಿವೆ. ಈ ಬಾಗಿಲು ಚೌಕಟ್ಟಿನ ಎಡಗೋಡೆಯಲ್ಲಿ ಒಬ್ಬ ಭಕ್ತನ ಶಿಲ್ಪವಿದೆ. ಆತನನ್ನು ಚೌಡಮ್ಮನೆನ್ನುವರು. ಆತನು ಕೈಮುಗಿದು ತ್ರಿಭಂಗಿಯಲ್ಲಿ ನಿಂತಿದ್ದಾನೆ. ಕತ್ತಿಯನ್ನು ಎಡಗೈಗೆ ಹೊಂದಿಸಿ ಮೇಲಕ್ಕೆ ಹಿಡಿದು ನಿಂತಿದ್ದಾನೆ ***(ಚಿತ್ರ ಸಂ.೧೧೭)***.

ಮಹಾಮಂಟಪದಲ್ಲಿ ಬೃಹದಾಕಾರದ ವೀರಭದ್ರನ ವಿಗ್ರಹವಿದೆ ***(ಚಿತ್ರ ಸಂ.೧೧೮)***. ವೀರಭದ್ರನು ಚತುರ್ಭುಜಧಾರಿ. ಕೈಗಳಲ್ಲಿ ಕತ್ತಿ, ಬಾಣ, ಬಿಲ್ಲು ಮತ್ತು ಗುರಾಣಿಗಳಿವೆ. ಕಿರೀಟದಲ್ಲಿ ಕಿರುಶಿವಲಿಂಗವಿದೆ. ಹಣೆಯ ಮಧ್ಯ ಮೂರನೆಯ ಕಣ್ಣಿದೆ. ಆತನು ಕಿರೀಟಮುಕುಟ, ಕುಂಡಲ, ಹಾರ, ರುಂಡಮಾಲ, ಪಟ್ಟಿ, ಕಡಗ, ಬಳೆ ಇತ್ಯಾದಿ ಆಭರಣಗಳನ್ನು ಧರಿಸಿದ್ದಾನೆ. ಸೊಂಟಪಟ್ಟಿಯಲ್ಲಿ ಕಠಾರಿಯನ್ನು ಕಟ್ಟಿದ್ದಾನೆ. ಕೆಳಗಡೆ ಬಲಕ್ಕೆ ದಕ್ಷನು ಕೈಮುಗಿದು ನಿಂತಿದ್ದಾನೆ.

ಈ ಮಹಾಮಂಟಪದಲ್ಲಿ ಒಂದು ಸಾಲಿನಲ್ಲಿ ನಾಲ್ಕು ಕಂಬಗಳಂತೆ ನಾಲ್ಕು ಸಾಲಿನಲ್ಲಿ ಒಟ್ಟು ೧೬ ಕಂಬಗಳಿವೆ. ಮಧ್ಯದಲ್ಲಿ ಸ್ವಲ್ಪ ಎತ್ತರವಾದ ರಂಗಮಂಟಪವಿದೆ. ಈ ಮಂಟಪದ ಗೋಡೆಗೆ ಹೊಂದಿ ಬಲಕ್ಕೆ, ಮುಂದೆ ಮತ್ತು ಎಡಕ್ಕೆ ಒಂದೇ ಎತ್ತರದ ಕಟ್ಟೆಯಿದ್ದು ಅಲ್ಲಿ ಕಿರುಗಂಬಗಳಿವೆ. ಈ ಮಹಾಮಂಟಪಕ್ಕೆ ಪೂರ್ವ ಮತ್ತು ಉತ್ತರಕ್ಕೆ ಎರಡು ಪ್ರವೇಶದ್ವಾರಗಳಿವೆ. ಈ ಮಂಟಪದ ಅನೇಕ ಛತ್ತುಗಳಲ್ಲಿ ಕಮಲಗಳ ಅಲಂಕರಣವಿದೆ. ಎಡಗಡೆ ಗೋಡೆಯಲ್ಲಿ ಒಂದು ಕಿರುಗರ್ಭಗೃಹವಿದ್ದು ಅದರಲ್ಲಿ ಶಿವಲಿಂಗವಿದೆ. ಮುಂದೆ ನಂದಿಯಿದೆ.

ಕಂಬಗಳಿಗೆ ಪೀಠಗಳಿವೆ. ಕಾಂಡದಲ್ಲಿ ಎರಡು ಚೌಕಪಟ್ಟಿಕೆಗಳು, ಬಹುಮುಖಪಟ್ಟಿ, ಕುಂಭ ಮತ್ತು ನಾಲ್ಕು ಮುಖಗಳುಳ್ಳ ಭೋದುಗೆಗಳಿವೆ. ಕೆಲವು ಕಂಬಗಳ ಕಾಂಡಭಾಗದಲ್ಲಿ ಎರಡು ಚೌಕು ಭಾಗಗಳಿವೆ. ಅದರ ಮಧ್ಯ ಬಹುಮುಖ ಪಟ್ಟಿಕೆಯಿದ್ದು ಕೆಲವೊಮ್ಮೆ ಅಲ್ಲಿ ಉದ್ದವಾದ ಲತಾಸುರುಳಿಗಳ ಅಲಂಕರಣವಿದೆ. ಚೌಕಮುಖದಲ್ಲಿ ನಕ್ಷತ್ರಾಕಾರವನ್ನು ವೃತ್ತಗಳಲ್ಲಿ ಚಿತ್ರಿಸಲಾಗಿದೆ.

ಕಂಬದ ಚೌಕಪಟ್ಟಿಕೆಗಳ ಮೇಲೆ ಚೈತ್ಯ ನಮೂನೆಗಳಿವೆ. ಒಬ್ಬ ಯತಿಯನ್ನು ಒಂದರಲ್ಲಿ ಚಿತ್ರಿಸಿದ್ದು ಆತನು ತಲೆಗೆ ಎಡಗೈಯನ್ನಿಟ್ಟು ಕುಳಿತಿದ್ದಾನೆ. ಅಲ್ಲಿಯ ಶ್ರೀ ಮಠದ ಮುಖಮಂಟಪದ ಕಟ್ಟೆಯ ಮೇಲಿನ ಒಂದು ಕಟ್ಟೆಗೆಯ ಕಂಬದಲ್ಲೂ ಮತ್ತು ಅಲ್ಲಿಯ ನವಗ್ರಹ ಪಟ್ಟಿಕೆಯಲ್ಲೂ ಈ ಶೈಲಿಯಲ್ಲೇ ಯತಿಯನ್ನು ಚಿತ್ರಿಸಲಾಗಿದೆ.

ಈ ಮಹಾಮಂಟಪದ ಮುಖ್ಯ ದ್ವಾರವು ಉತ್ತರಕ್ಕೆ ಮುಖಮಾಡಿದೆ ***(ಚಿತ್ರ ಸಂ.೧೨೪ ಮತ್ತು ೧೨೫)***. ಈ ದ್ವಾರ ಚೌಕಟ್ಟಿನಲ್ಲಿ ಮೂರು ಶಾಖೆಗಳಿವೆ. ಕೆಳಗಡೆ

ಶೈವದ್ವಾರಪಾಲಕರು ತ್ರಿಭಂಗಿಯಲ್ಲಿ ನಿಂತಿದ್ದಾರೆ. ಕೈಗಳಲ್ಲಿ ಅಭಯಮುದ್ರೆ, ತ್ರಿಶೂಲ, ಡಮರು ಮತ್ತು ಗದೆಗಳಿವೆ. ಲಲಾಟದಲ್ಲಿ ಯತಿಯೊಬ್ಬ ಶಿವಲಿಂಗವನ್ನು ಹಿಡಿದು ಕುಳಿತಿರುವುದನ್ನು ಚಿತ್ರಿಸಲಾಗಿದೆ. ಅದರ ಕಪೋತ ಹೆಚ್ಚು ಮುಂಚಾಚಿದ್ದು ಅದರ ಭತ್ತಿನಲ್ಲಿ ಕಮಲದ ಅಲಂಕರಣವಿದೆ. ಕಪೋತದಲ್ಲಿ ಸಾಲಾಗಿ ನಾಲ್ಕು ಕೀರ್ತಿಮುಖಗಳಿವೆ. ಬದಿಗಳಲ್ಲಿ ಅರ್ಧಗಂಭಗಳಿವೆ. ಬಲಗಡೆಯ ಅರ್ಧಗಂಭದಲ್ಲಿ ಭಕ್ತನೊಬ್ಬ ಕೈಮುಗಿದು ನಿಂತಿದ್ದು ಎಡಗಡೆಯ ಅರ್ಧಗಂಭದಲ್ಲಿ ಭಕ್ತ ವೀಣೆ ಹಿಡಿದು ನಿಂತಿದ್ದಾನೆ. ಮಹಾಮಂಟಪದ ಮುಂದಿನ ಪೂರ್ವ ಗೋಡೆಗೆ ಹೊಂದಿ ಒಂದು ಕಿರು ಮಂಟಪವನ್ನು ಜೋಡಿಸಲಾಗಿದೆ. ಒಳಗಡೆ ವೀರಭದ್ರ, ಶಿವಲಿಂಗ ಇತ್ಯಾದಿ ಶಿಲ್ಪಗಳಿವೆ. ಈ ಮಂಟಪವನ್ನು ಅರಕೆಗುಡಿ ಎನ್ನುವರು. ಅದು ಪೂರ್ವಕ್ಕೆ ಮುಖಮಾಡಿದೆ.

ಅರಿಕೆಗುಡಿ

ಶ್ರೀ ಮರುಳಸಿದ್ಧ ದೇವಾಲಯದ ಮಹಾಮಂಟಪಕ್ಕೆ ಹೊಂದಿದ ನಂದಿ ದೇವಾಲಯವಿದೆ. ಅದರ ಹಿಂದಗಡೆ ಒಂದು ದೇವಾಲಯವನ್ನು ಕಟ್ಟಲಾಗಿದೆ. ಅದನ್ನು ಅರಿಕೆಗುಡಿ ಎಂದೂ ಕರೆಯುವರು. ಅದರ ಪ್ರವೇಶ ದ್ವಾರದಲ್ಲಿ ಶೈವದ್ವಾರ ಪಾಲಕರಿದ್ದಾರೆ. ಅದರಲ್ಲಿ ಮೂರು ಶಾಖೆಗಳಿದ್ದು ಅವುಗಳಲ್ಲಿ ಪತ್ರ, ರತ್ನ ಮತ್ತು ಅರ್ಧ ಗಂಭಗಳ ಅಲಂಕರಣವಿದೆ. ಅದರಲ್ಲಿ ಕಂಬಗಳಿವೆ. ಒಳಗಡೆ ವೀರಭದ್ರ, ಕಾಳಮ್ಮ ಇತ್ಯಾದಿ ವಿಗ್ರಹಳಿವೆ. ಶ್ರೀಮರುಳಸಿದ್ಧ ದೇವಾಲಯದ ಮುಂದಿನ ಮಂಟಪವನ್ನು ಅರಿಕೆಗುಡಿಯೆಂದೂ ಕೆಲವರು ಕರೆಯುತ್ತಾರೆ. ಈ ದೇವಾಲಯವನ್ನು ಮೂಲ ದೇವಾಲಯಕ್ಕೆ ಹೊಂದಿಸಿ ನಂತರ ಕಟ್ಟಲಾಗಿದೆ.

ಶಿಖರ *(ಚಿತ್ರ ಸಂ. ೧೯೯ ರಿಂದ ೧೨೨)*

ಶ್ರೀ ಮರುಳಸಿದ್ಧ ದೇವಾಲಯದ ಗರ್ಭಗೃಹದ ಮೇಲೆ ಕರ್ನಾಟಕ ವೇಸರ ಮಾದರಿಯ ಶಿಖರವಿದೆ. ಅಂತರಾಳದ ಮೇಲ್ಗಡೆ ಶುಕನಾಸಿಯಿದೆ. ಅದಕ್ಕೆ ಗವಾಕ್ಷದ ಅಲಂಕರಣವಿದೆ. ಈ ಶುಕನಾಸಿಯ ಮೇಲೆ ನಂದಿ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದು, ನಂದಿಯು ತನ್ನ ನಾಲ್ಕೂ ಕಾಲುಗಳನ್ನು ಊರಿ ನಿಂತಿರುವುದು ವಿಶೇಷವಾಗಿದೆ. ನಂದಿಯ ಮುಂದುಗಡೆ ಶಿವಲಿಂಗವಿದೆ. ಈ ನಂದಿಯನ್ನು ಕೋರು ಬಸವನೆಂದು ಮತ್ತು ಅದು ಉಜ್ಜಯಿನಿ ಪೀಠದ ಸದ್ಧರ್ಮ ರೂಪಿಯೆನ್ನುವರು. ಶುಕನಾಸಿಯ ಹೊರಪಾರ್ಶ್ವ ಮೈಗಳಲ್ಲಿ ಕೀರ್ತಿಮುಖಗಳ ಅಲಂಕರಣಗಳಿವೆ. ಶಿಖರದ ಮೇಲೆ ಸ್ತೂಪಿಗೆ ಹಿತ್ತಾಳೆಯ ಕಲಶವಿದೆ.

ಮೇಲ್ಕಟ್ಟಡಕ್ಕೆ ಮೂರು ತಲಗಳಿದ್ದು, ಅವುಗಳು ಮೇಲಕ್ಕೆ ಹೋದಂತೆ ಕಿರಿದಾಗುತ್ತ ಹೋಗಿದೆ. ತಲಾ ಒಂದು ತಲಗಳ ಮೂರು ಮುಖಗಳ ಮಧ್ಯ

ಪಟ್ಟಿಕೆಗಳಲ್ಲೂ ಯತಿಗಳ ಶಿಲ್ಪಗಳನ್ನು ಕಂಡರಿಸಿದಂತೆ ಕಾಣುವುದು ತೈಲದ ಮೇಣ ದಪ್ಪನಾಗಿ ಅಂಟಿರುವುದರಿಂದ ಹೆಚ್ಚಿನ ವಿವರಗಳು ತಿಳಿದುಬರುವುದಿಲ್ಲ.

ಉಜ್ಜಯಿನೀ ಸದ್ಧರ್ಮ ಪೀಠದ ಪರಂಪರೆಯಂತೆ ಪ್ರತಿವರ್ಷ ಈ ಶಿಖರಕ್ಕೆ ತೈಲಾಭಿಷೇಕವಾಗುವುದು. ಇದರಿಂದ ಶಿಖರವು ಎಣ್ಣೆಯಿಂದ ಮೆತ್ತಿಕೊಂಡಿದ್ದು ಅದರ ಚಿತ್ರ, ಅಲಂಕರಣಗಳು ಮುಚ್ಚಿಹೋಗಿವೆ. ಈ ಶಿಖರದ ದಕ್ಷಿಣ ಮುಖದ ಮಧ್ಯಭಾಗ ಸ್ವಲ್ಪ ಕುಸಿದಿದೆ. ಅಲ್ಲಿ ಕಟ್ಟೆಗೆಯ ಮಂಟಪವೊಂದನ್ನು ಕಟ್ಟಲಾಗಿತ್ತು. ಅದೂ ಸಹಾ ಬಿದ್ದು ಹೋಗಿದ್ದು ಅಲ್ಲಿ ಈಗ ಕೇವಲ ಪಟ್ಟಿಗಳು ಅದರ ಮೇಲೆ ಕಂಬಗಳು ಉಳಿದಿವೆ. ಪ್ರಾಯಶಃ ಈ ಕಟ್ಟೆಗೆಯ ಮಂಟಪದ ಮೇಲೆ ಭಕ್ತರು ನಿಂತು ಮೊದಲು ಶಿಖರಕ್ಕೆ ಎಣ್ಣೆಯನ್ನು ಹಾಕುತ್ತಿದ್ದಿರಬೇಕು!

ಅಧಿಷ್ಠಾನ-ಬಿತ್ತಿ

ಶ್ರೀ ಮರುಳಸಿದ್ಧ ದೇವಾಲಯದ ಗರ್ಭಗೃಹ ಭಾಗ ಮತ್ತು ಅಂತರಾಳ ಭಾಗಕ್ಕೆ ಒಂದೇ ಮಾದರಿಯ ಅಧಿಷ್ಠಾನ, ಭಿತ್ತಿ, ಶಿಖರ ಮತ್ತು ಶುಕುನಾಸಿಗಳು ಸೀಮಿತವಾಗಿವೆ. ಅದರ ಮುಂದಿನ ಸಭಾಮಂಟಪ, ಮಹಾಮಂಟಪ ಮತ್ತು ಮುಖ ಮಂಟಪಗಳ ಭಾಗಗಳ ಅಧಿಷ್ಠಾನ ಮತ್ತು ಭಿತ್ತಿಗಳು ಭಿನ್ನವಾಗಿವೆ. ಹೀಗಾಗಿ ಈ ದೇವಾಲಯವು ಸಭಾ ಮಂಟಪದವರೆಗೆ ಒಂದೇ ಕಾಲದ ವಾಸ್ತು-ಲಕ್ಷಣಗಳಿದ್ದು ಅದು ಸು. ಕ್ರಿ.ಶ. ೧೧-೧೨ನೇ ಶತಮಾನಕ್ಕೆ ಸೇರಿವೆ. ಸಭಾಮಂಟಪದಿಂದ ಉಳಿದ ಭಾಗಗಳು ಮುಖಮಂಟಪಗಳು ಸೇರಿ ವಿಜಯನಗರ ಕಾಲದ್ದಾಗಿವೆ.

ಈ ದೇವಾಲಯದ ಗರ್ಭಗೃಹದ ಅಧಿಷ್ಠಾನದಲ್ಲಿ ಖುರಕ, ಪದ್ಮಪತ್ರಿಕಾ, ಕುಮುದ, ಕಪೋತ, ಮಕರಪಟ್ಟಿಕ, ವೇದಿಗಳಿವೆ. ಗರ್ಭಗೃಹದ ಹೊರ ಭಿತ್ತಿ ಭಾಗಗಳನ್ನು ಎರಡು ಭಾಗಗಳನ್ನಾಗಿ ವಿಂಗಡಿಸಬಹುದು. ಅವು ಒಂದು ಮೇಲ್ಭಾಗ ಮತ್ತು ಎರಡು ಕೆಳಭಾಗ. ಮೇಲ್ಭಾಗದಲ್ಲಿ ವಿವಿಧ ಮಾದರಿಯ ಶಿಖರ ನಮೂನೆಗಳಿವೆ. ಕೆಳಗಿನ ಭಾಗದಲ್ಲಿ ದೇವ ಕೋಷ್ಠಗಳಿವೆ. ಅವುಗಳ ಮೇಲೆ ಶಿಖರಗಳ ಪ್ರತಿಕೃತಿಗಳಿವೆ.

ಭಿತ್ತಿಯ ಮೂರು ಮುಖಗಳ ಮಧ್ಯಭಾಗದಲ್ಲಿಹಾಗೂ ಅದರ ದಕ್ಷಿಣ ಮುಖದ ಬದಿಗಿನ ಮೂಲೆಗಳಲ್ಲೂ ದೇವ ಕೋಷ್ಠಗಳಿವೆ. ಪೂರ್ವಮುಖದ ದೇವಕೋಷ್ಠದ ಒಳಗಡೆ ಶಿವನ ವಿಗ್ರಹವಿದೆ. ಶಿವನು ಪದ್ಮಾಸನದಲ್ಲಿ ಕುಳಿತಿರುವನು. ಆತನ ಕೈಗಳಲ್ಲಿ ಕತ್ತಿ, ತ್ರಿಶೂಲ, ಡಮರು ಮತ್ತು ಕಪಾಲಗಳಿವೆ. ಆತನ ಪೀಠದಲ್ಲಿ ನಂದಿಯಿದೆ. ಆಗ್ನೇಯ ಮುಖದ ಮೂಲೆಯ ದೇವಕೋಷ್ಠದಲ್ಲಿ ನೃತ್ಯಗಣೇಶನಿರುವನು. ನೈಋತ್ಯ ಮುಖದ ಮೂಲೆಯ ದೇವಕೋಷ್ಠದಲ್ಲಿ ಕೊಳಲನ್ನೂದುತ್ತ ಗೋಪಾಲಕೃಷ್ಣ ನಿಂತಿರುವನು. ದಕ್ಷಿಣ ಮುಖದ ಮಧ್ಯದ

ದೇವಕೋಷ್ಠದಲ್ಲಿ ವೀರಭದ್ರನಿರುವನು. ವೀರಭದ್ರನ ಕೈಗಳಲ್ಲಿ ಕತ್ತಿ, ಬಾಣ, ಬಿಲ್ಲು ಮತ್ತು ಗುರಾಣಿಗಳಿವೆ. ಆತನ ಬಲಗಡೆ ಕೆಳಗೆ ದಕ್ಷನಿರುವನು. ಪಶ್ಚಿಮ ಮುಖದ ದೇವಕೋಷ್ಠದಲ್ಲಿ ಚತುರ್ಭುಜ ಶಿವ ಕುಳಿತಿದ್ದಾನೆ.

ಭಿತ್ತಿಯ ತರುವಾಯ ಮತ್ತೆ ಛಾದ್ಯವಿದ್ದು ಅದರ ಮೇಲ್ಗಡೆ ಕಪೋತ, ಮಕರಪಟ್ಟಿಕ, ವೇದಿಕ ಮತ್ತು ಕೂಟ-ಶಾಲಗಳ ಸಾಲು ರಚಿತವಾಗಿದೆ. ಅಲ್ಲಿ ಇದೇ ರೀತಿಯ ಇನ್ನೆರಡು ತಳಗಳಿವೆ. ತುದಿಯಲ್ಲಿ ಶಿಖರ ಮತ್ತು ಸ್ತೂಪಿಗಳಿವೆ. ಅದು ಹೊಯ್ಸಳ ಶೈಲಿಯನ್ನು ನೆನಪಿಸುತ್ತದೆ.

ಶ್ರೀ ಮರುಳಸಿದ್ಧ ದೇವಾಲಯದ ಗರ್ಭಗೃಹದ ಪಶ್ಚಿಮ ಗೋಡೆಯಲ್ಲಿ ಪ್ರನಾಳ ಪಟ್ಟಿಕೆಯಿದ್ದು ಅದನ್ನು ಬದಿಯ ಮಜ್ಜನ ಕುಂಡ ತೀರ್ಥಕ್ಕೆ ಸೇರಿಸಲಾಗಿದೆ. ಹೀಗಾಗಿ ದೇವರ ಅಭಿಷೇಕದ ನೀರು ಪೀಠದ ಜಲಹರಿಯ ಪ್ರನಾಳದ ಮೂಲಕ ಹರಿದು ಮಜ್ಜನ ಕುಂಡವನ್ನು ಸೇರುವುದು. ಈ ಕುಂಡಕ್ಕೆ ಒಂದು ತೆರೆದ ಸ್ತಂಭ ಮಂಟಪವಿದ್ದು ಅದಕ್ಕೆ ಎತ್ತರದ ಅಧಿಷ್ಠಾನ ಮತ್ತು ದ್ರಾವಿಡ ಮಾದರಿಯ ಶಿಖರವಿದೆ.

ಸಭಾಮಂಟಪ ಮತ್ತು ಮಹಾಮಂಟಪದ ಭಿತ್ತಿಯು ಸರಳವಾಗಿದೆ. ಅವುಗಳ ಅಧಿಷ್ಠಾನಗಳು ಎರಡು ರೀತಿಗಳಲ್ಲಿವೆ. ಒಂದರಲ್ಲಿ ಜಗತಿ, ಕಂಠ ಮತ್ತು ಪಟ್ಟಿಗಳಿವೆ. ಇನ್ನೊಂದು ಮಂಚಬಂಧ ಮಾದರಿಯಲ್ಲಿದೆ. ಆದರೆ ಅಂತರಾಳದ ಭಿತ್ತಿಗೆ ಹೊಂದಿ ಸಭಾ ಮಂಟಪದ ಭಿತ್ತಿಯನ್ನು ಜೋಡಿಸಿರುವುದು ಅದರ ಹೊರ ಭಾಗದಲ್ಲಿ ಕಾಣುವುದು. ಹೀಗಾಗಿ ಈ ಭಾಗದಿಂದ ಸಭಾಮಂಟಪದ ವರೆಗಿನ ಭಾಗವನ್ನು ಸು. ಕ್ರಿ. ಶ. ೧೨ನೇ ಶತಮಾನದ ನಂತರ ಕಟ್ಟಿರಬೇಕು ಅಥವಾ ನವೀಕರಿಸಿರಬೇಕು.

ಗಾರೆಯ ವಿಗ್ರಹಗಳು

ಈ ದೇವಾಲಯದ ಸಭಾಮಂಟಪ ಮತ್ತು ಮಹಾಮಂಟಪಗಳ ಮಾಳಿಗೆ ಅಂಚಿನ ಸುತ್ತಲೂ ಇಟ್ಟಿಗೆ-ಗಾರೆಯ ಗೋಡೆಯಿದೆ. ಅದರಲ್ಲಿ ಸಾಲಾಗಿ ಗೂಡುಗಳಿವೆ. ಈ ಗೂಡುಗಳಲ್ಲಿ ವಿವಿಧ ಮಾದರಿಯ ನವೀನ ಗಾರೆಯ ಬಣ್ಣದ ವಿಗ್ರಹಗಳಿವೆ. ಮೂಲ ವಿಗ್ರಹಗಳನ್ನೆಲ್ಲ ಜೀರ್ಣೋದ್ಧಾರಗೊಳಿಸುವಾಗ ಇತ್ತೀಚಿಗೆ ಅವುಗಳನ್ನು ಬದಲಾಯಿಸಲಾಗಿದೆ. ಅದರ ಪ್ರತಿಯೊಂದು ಮೂಲೆ ಗೋಡೆಯ ಮೇಲೆ ಗಾರೆಯ ಎರಡು ಮುಖವುಳ್ಳ ಕುಳಿತ ನಂದಿ ವಿಗ್ರಹಗಳಿವೆ. ಗೂಡಿನಲ್ಲಿರುವ ಗಾರೆಯ ವಿಗ್ರಹಗಳು ಹೀಗಿವೆ: ಚತುರ್ಭುಜ ವೀರಭದ್ರನು ನಿಂತ ಭಂಗಿಯಲ್ಲಿರುವನು. ಚತುರ್ಭುಜ ಶಿವ ತನ್ನ ಕೆಳಗಿನ ಕೈಗಳಲ್ಲಿ ಭಿಕ್ಷಾ ಪಾತ್ರೆಯನ್ನು, ಮೇಲಿನ ಕೈಗಳಲ್ಲಿ ತ್ರಿಶೂಲ ಮತ್ತು ಡಮರುಗಳನ್ನು ಹಿಡಿದು ನಿಂತಿದ್ದಾನೆ. ನಗಾರಿ ಬಾರಿಸುತ್ತ ನಂದಿ ಇರುವನು.

ಅಶ್ವಮುಖಿ ಕಹಳೆ ಊದುತ್ತಿರುವನು. ಶಿವಪಾರ್ವತಿಯರಿದ್ದಾರೆ. ಎಡೆಯೂರ ಸಿದ್ಧಲಿಂಗೇಶ್ವರರಿದ್ದಾರೆ. ಗಣೇಶ, ಹನುಮ, ಕೈಮುಗಿದು ನಿಂತ ಭೃಂಗಿ, ಶಿವ ಮುನಿವರ್ಯನಿಗೆ ಆಶೀರ್ವದಿಸುವುದು, ನಗಾರಿ ಬಾರಿಸುವವನು, ನಾಗ ಹೆಡೆಯುಳ್ಳ ನಂದಿ, ನಾಗಹೆಡೆಯುಳ್ಳ ಶಿವ, ಲಿಂಗದಲ್ಲಿ ಉದ್ಭವಗೊಂಡ ಶಿವನ ಮುಖ, ವೀಣಾಧಾರಿ ಭೃಂಗಿ, ನಟರಾಜ , ಸರಸ್ವತಿ, ಎಡಗೈಯಲ್ಲಿ ಅಗ್ನಿ ಹಿಡಿದು ನಿಂತ ದೇವತೆ, ಲಿಂಗೋದ್ಭವ ದಾರುಕ ವಿಗ್ರಹಗಳಿವೆ. ಚತುರ್ಭುಜ ಪಾರ್ವತಿಯು ಕೈಗಳಲ್ಲಿ ಅಭಯಮುದ್ರೆ, ಎರಡು ಕೈಗಳಲ್ಲಿ ಕಮಲ ಮತ್ತು ವರದ ಮುದ್ರೆಗಳಲ್ಲಿರುವಳು. ಈ ಗಾರೆ ವಿಗ್ರಹಗಳನ್ನು ಇತ್ತೀಚೆಗೆ ಪುನಃ ತಯಾರಿಸಿ ಕೂಡಿಸಲಾಗಿದೆ.

ನಂದಿ ದೇವಾಲಯ

ಶ್ರೀ ಮರುಳಸಿದ್ಧ ದೇವಾಲಯದ ಎದುರಿಗೆ ಕಿರು ಎತ್ತರದ ಗೋಡೆಯಿದ್ದು ಆದಕ್ಕೆ ಮೂರು ಕಡೆಗಳಲ್ಲಿ ಪ್ರವೇಶಗಳಿವೆ. ಈ ಸ್ಥಳಗಳಲ್ಲಿ ನವಗ್ರಹಗಳುಳ್ಳ ಪದ್ಮ ಪೀಠಗಳಿವೆ. ಈ ದೇವಾಲಯದ ಬಲಭಾಗಕ್ಕೆ ಹೊಂದಿ ಒಂದು ಕಿರು ನಂದಿ ದೇವಾಲಯವಿದೆ ***(ಚಿತ್ರ ಸಂ.೧೨೩)***. ಏಕ ಗರ್ಭಗೃಹವುಳ್ಳ ಈ ದೇವಾಲಯದಲ್ಲಿ ಎತ್ತರದ ಏಕಶಿಲೆಯ ಕುಳಿತ ಭವ್ಯವಾದ ನಂದಿ ವಿಗ್ರಹವಿದೆ. ಈ ನಂದಿ ವಿಗ್ರಹ ಪಶ್ಚಿಮಕ್ಕೆ ಮುಖ ಮಾಡಿದ್ದು ಅದು ಇನ್ನೂ ಬೆಳೆಯುತ್ತಿದೆ ಎನ್ನುವ ನಂಬಿಕೆಯಿದೆ. ಈ ನಂದಿ ವಿಗ್ರಹವು ವಿಜಯನಗರ ಕಾಲದ್ದು.

ಯತಿಗಳ ಸ್ತಂಭ ತೋರಣ

ಶ್ರೀ ಮರುಳಸಿದ್ಧ ದೇವಾಲಯದ ಎದುರಿಗೆ ಅರಕೆಗುಡಿ ಪ್ರವೇಶದಲ್ಲಿ ಯತಿಗಳ ಸ್ತಂಭತೋರಣವಿದೆ ***(ಚಿತ್ರ ಸಂ.೧೨೪ ರಿಂದ ೧೨೮)***. ಎರಡು ಸ್ತಂಭಗಳ ಮೇಲೆ ಕೂಡಿಸಿದ ಪಟ್ಟಿಕೆಯ ಎರಡು ಮುಖಗಳಲ್ಲಿ ಒಂದೇ ರೀತಿಯ ಬಹು ಸುಂದರ ಚಿತ್ರವಿನ್ಯಾಸವಿದೆ. ಒಂದು ಮುಖದಲ್ಲಿ ಮೂವರು ಯತಿಗಳು ಯೋಗ ಮುದ್ರೆಯಲ್ಲಿ, ಪದ್ಮಾಸನದಲ್ಲಿ ಕುಳಿತಿರುವರು. ಮಧ್ಯದಲ್ಲಿ ಕುಳಿತ ಯತಿಯ ಬದಿಗಳಲ್ಲಿ ಇಬ್ಬರು ಸೇವಕಿಯರು ಚೌರಿ ಹಿಡಿದು ನಿಂತಿದ್ದಾರೆ. ಬದಿಗಳಲ್ಲಿ ಎರಡು ಮಕರಗಳಿವೆ. ಅವುಗಳ ಬಾಯಿಯಿಂದ ಹೊರಬಂದ ತೋರಣವು ಹಾವಿನಂತೆ ಅರ್ಧವೃತ್ತಾಕಾರದಲ್ಲಿ ಸುತ್ತಿದೆ. ಈ ತೋರಣದ ಮಧ್ಯ ಕೀರ್ತಿಮುಖವಿದೆ. ಈ ಯತಿಗಳ ಮತ್ತು ತೋರಣದ ಮಧ್ಯ ಕಿಂಡಿಗಳನ್ನು ಕೊರೆಯಲಾಗಿದೆ. ಇದೇ ಪ್ರಕಾರದ ದೃಶ್ಯವನ್ನು ಇನ್ನೊಂದು ಮುಖದಲ್ಲೂ ಚಿತ್ರಿಸಲಾಗಿದೆ. ಈ ತೋರಣ ಕಂಬಗಳನ್ನು ಪೀಠಗಳ ಮೇಲೆ ನಿಲ್ಲಿಸಿದ್ದು ಅವುಗಳ ಕಾಂಡ ಭಾಗಗಳಲ್ಲಿ ಚೌಕಪಟ್ಟಿಗಳಿವೆ. ಈ

ಕಂಬಗಳ ಮೂಲೆಗಳಲ್ಲಿ ಹಿಂಚಾಚು ಮುಂಚಾಚುಗಳಿವೆ. ಈ ಸ್ತಂಭ ತೋರಣವು ಸು. ಕ್ರಿ.ಶ. ೧೭ನೇ ಶತಮಾನದ್ದಾಗಿದೆ. ಈ ಸ್ತಂಭ ತೋರಣದ ಮಧ್ಯ ಕೆಳಗಡೆಯಲ್ಲಿ ಪಾದಪೀಠವಿದ್ದು ಅದನ್ನು ಶ್ರೀಮರುಳಸಿದ್ಧ ಸ್ವಾಮಿಯ ಪಾದಗಟ್ಟೆ ಎನ್ನುವರು.

ಗೌರಮ್ಮ ದೇವಾಲಯ

ಶ್ರೀ ಮರುಳಸಿದ್ಧ ದೇವಾಲಯದ ಸಮಾಂತರವಾಗಿ ಎಡಬದಿಗೆ ಗೌರಮ್ಮ ದೇವಾಲಯವಿದ್ದು ಅದೂ ಸಹ ಉತ್ತರಕ್ಕೆ ಮುಖಮಾಡಿದೆ *(ಚಿತ್ರ ಸಂ.೧೨೯)*. ಈ ದೇವಾಲಯದ ತಳಪಾಯದಲ್ಲಿ ಗರ್ಭಗೃಹ, ಶುಕನಾಸಿ ಮತ್ತು ಮುಖ ಮಂಟಪಗಳಿವೆ. ಗರ್ಭಗೃಹ ಚೌಕಾಗಿದ್ದು ನಾಲ್ಕೂ ಮೂಲೆಗಳಲ್ಲಿ ನಾಲ್ಕು ಅರ್ಧಗಂಭಗಳಿವೆ. ಮಧ್ಯದಲ್ಲಿ ಆಯತಾಕಾರದ ಎತ್ತರ ಅಲಂಕೃತ ಪೀಠದ ಮೇಲೆ ಪಾರ್ವತಿಯ ದುಂಡು ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಈ ದೇವಿಯನ್ನು ಗೌರಮ್ಮನೆಂದು ಕರೆಯುವರು. ನಿಂತ ಭಂಗಿಯಲ್ಲಿರುವ ಈ ದೇವಿಯು ದ್ವಿಭುಜಳಾಗಿ, ಕೈಗಳಲ್ಲಿ ಕಮಲಗಳನ್ನು ಎತ್ತಿ ಹಿಡಿದಿದ್ದು, ವಸ್ತ್ರಾಭರಣಗಳಿಂದ ಭೂಷಿತಳಾಗಿದ್ದಾಳೆ. ದೇವಿ ಪೀಠದ ಜಲಧಾರಿ ಪ್ರಣಾಳವನ್ನು ಪಶ್ಚಿಮಗೋಡೆಯಿಂದ ಹೊರಗಿನ ಮಜ್ಜನ ಕುಂಡಕ್ಕೆ ಜೋಡಿಸಲಾಗಿದೆ. ಅಂತರಾಳದ ದ್ವಾರಬಂಧದಲ್ಲಿ ಕೆಳಗಡೆ ಶೈವ ದ್ವಾರಪಾಲಕರಿದ್ದು ತಲಾ ಒಂದು ಪಟ್ಟಿಕೆಯಲ್ಲಿ ನಾಲ್ಕು ಶಾಖೆಗಳಿವೆ. ಮುಖಮಂಟಪದ ಪಾರ್ಶ್ವಗೋಡೆಗಳಿಗೆ ಹೊಂದಿ ಮುಂದುಗಡೆ ಎರಡು ಕಂಬಗಳಿವೆ. ಈ ಪಾರ್ಶ್ವ ಗೋಡೆಗಳನ್ನು ತದನಂತರ ಕಟ್ಟಲಾಗಿದೆ.

ಗರ್ಭಗೃಹದ ಮೇಲೆ ದ್ರಾವಿಡ ಮಾದರಿಯ ಶಿಖರವಿದ್ದು ಅದರ ಮುಂದೆ ದೇವಕೋಷ್ಠವುಳ್ಳ ಅರ್ಧವೃತ್ತಾಕಾರದ ಶುಕನಾಸಿಯಿದೆ. ಈ ಶಿಖರ-ಶುಕನಾಸಿ ಭಾಗಗಳನ್ನು ಇಟ್ಟಿಗೆ ಮತ್ತು ಗಾರೆಯಿಂದ ಹಾಗೂ ಕೆಳಗಿನಿಂದ ಛತ್ತಿನವರೆಗೆ ಶಿಲೆಯಿಂದ ಈ ದೇವಾಲಯವನ್ನು ನಿರ್ಮಿಸಲಾಗಿದೆ. ಈ ದೇವಾಲಯ ಬದಿಗಿನ ಮಜ್ಜನ ಕುಂಡಕ್ಕೆ ಪ್ರತ್ಯೇಕ ತೆರೆದ ಸ್ತಂಭ ಮಂಟಪವು ಎತ್ತರದ ಅಧಿಷ್ಠಾನದ ಮೇಲಿದೆ. ಮಂಟಪದ ಮೇಲೂ ದ್ರಾವಿಡ ಮಾದರಿಯ ಶಿಖರವಿದೆ. ಈ ಮಂಟಪವು ಶ್ರೀ ಮರುಳಸಿದ್ಧ ದೇವಾಲಯದ ಮಜ್ಜನ ಕುಂಡದಂತಿದೆ. ಈ ದೇವಾಲಯಕ್ಕೆ ಎತ್ತರದ ಅಧಿಷ್ಠಾನವಿದ್ದು ಅದರಲ್ಲಿ ಉಪಾನ, ಜಗತಿ ಕುಮುದ ಮತ್ತು ಕಪೋತಗಳಿಂದ ರಚಿತವಾಗಿದೆ. ನಾಲ್ಕು ತಲಗಳಿವೆ. ಭಿತ್ತಿಯು ಸರಳವಾಗಿದೆ.

ದೀಪಸ್ತಂಭಗಳು

ಶ್ರೀ ಪೀಠದ ಒಳ ಆವರಣದಲ್ಲಿ ಶಿಲೆಯ ಮೂರು ದೀಪಸ್ತಂಭಗಳು ಮತ್ತು ಕಬ್ಬಿಣದ ಎರಡು ದೀಪಸ್ತಂಭಗಳಿವೆ. ಶಿಲೆಯ ಎತ್ತರದ ದೀಪಸ್ತಂಭಗಳಲ್ಲಿ

ಶ್ರೀ ಮರುಳಸಿದ್ಧ ದೇವಾಲಯದ ಹಿಂಭಾಗದಲ್ಲಿ ಒಂದು, ಉಳಿದೆರಡು ಹಾಗೂ ಕಬ್ಬಿಣದ ದೀಪಸ್ತಂಭಗಳು ಅದರ ಮುಂಭಾಗದಲ್ಲಿವೆ. ಹಿಂದಿರುವ ಶಿಲೆಯ ದೀಪಸ್ತಂಭದ ಬುಡದಲ್ಲಿ ಎತ್ತರ ಚೌಕಾಕಾರದ ಕಟ್ಟೆಯಿದೆ. ಅದರ ನಾಲ್ಕು ಮುಖಗಳಲ್ಲಿ ಕುಳಿತ ಸಿಂಹ, ಕೈಮುಗಿದುಕೊಂಡು ನಿಂತಿರುವ ಭಕ್ತ, ಪುಂಗಿ ಊದುತ್ತ ನಿಂತಿರುವ ವ್ಯಕ್ತಿ ಇವರ ಉಬ್ಬು ಚಿತ್ರಗಳಿವೆ. ದೇವಾಲಯದ ಮುಂದುಗಡೆಯಲ್ಲಿರುವ ದೀಪಸ್ತಂಭಗಳು ಅಲ್ಲಿಯ ಬಂಗಾರ ಬಸವಣ್ಣನ ಮಂಟಪದ ಬದಿಗಿವೆ. ಈ ಕಂಬಗಳೂ ಎತ್ತರವಾಗಿದ್ದು ಬುಡದಲ್ಲಿ ಕಟ್ಟೆಗಳಿವೆ. ಒಂದರಲ್ಲಿ ಗಣೇಶ, ಕೇಶವನ್ನು ರುಮಾಲಿನಂತೆ ಸುತ್ತಿರುವ ಯತಿ, ಎಡಗೈಯಲ್ಲಿ ಕೊಡೆ ಹಿಡಿದಿರುವ ನೃತ್ಯಗಾರ್ತಿ ಮತ್ತು ಕೈಮುಗಿದು ಕುಳಿತಿರುವ ಭಕ್ತ ಇವರ ಉಬ್ಬು ಚಿತ್ರಗಳಿವೆ. ಇನ್ನೊಂದರಲ್ಲಿ ಕೈಮುಗಿದು ಕುಳಿತ ಭಕ್ತ, ನಂದಿ, ಗಣೇಶ ಹಾಗೂ ನಟರಾಜರ ಚಿತ್ರಗಳಿವೆ. ನಟರಾಜನು ನಾಗರ ಹಾವಿನ ಮೇಲೆ ನೃತ್ಯ ಮಾಡುತ್ತಿದ್ದು ಬಲಗೈಯಲ್ಲಿ ಫಲ ಮತ್ತು ಎಡಗೈಯಲ್ಲಿ ನಾಗರಹಾವಿನ ಬಾಲವನ್ನು ಹಿಡಿದಿರುವನು. ಈ ದೀಪಸ್ತಂಭಗಳ ಮೂಲೆಗಳಲ್ಲಿ ದೀಪಗಳನ್ನು ಇಡಲು ಅಲ್ಲಲ್ಲಿ ಸ್ವಲ್ಪ ಮುಂಚಾಚಿದ ಪಟ್ಟಿಕೆಗಳಿವೆ.

ನಂದಿ ಸ್ತಂಭಗಳು

ಶ್ರೀ ಮರುಳಸಿದ್ಧೇಶ್ವರ ದೇವಾಲಯ ಬದಿಗಳಲ್ಲಿ ಏಕಶಿಲೆಯ ಎರಡು ನಂದಿಕಂಬಗಳನ್ನು ನಿಲ್ಲಿಸಲಾಗಿದೆ. ಅದರಲ್ಲಿ ಕಂಬದ ಮೇಲಿನ ಭಾಗದಲ್ಲಿ ನಂದಿಯನ್ನು ಕಂಡರಿಸಲಾಗಿದೆ.

ಬಂಗಾರದ ಬಸವಣ್ಣನ ಮಂಟಪ

ಶ್ರೀ ಮರುಳಸಿದ್ಧ ದೇವಾಲಯ ಮತ್ತು ಯತಿಗಳುಳ್ಳ ಸ್ತಂಭ ತೋರಣಗಳ ಎದುರಿಗೆ ಒಂದು ಸುಂದರವಾದ ನಂದಿ ಮಂಟಪವಿದ್ದು ಅದನ್ನು ಬಂಗಾರದ ಬಸವಣ್ಣನ ಮಂಟಪವೆಂದು ಕರೆಯುವರು. *(ಚಿತ್ರ ಸಂ.೧೩೦ ಮತ್ತು ೧೩೧)* ಅದು ಶ್ರೀ ಮರುಳಸಿದ್ಧ ದೇವಾಲಯ ಮತ್ತು ಉತ್ತರ ಮಹಾದ್ವಾರದ ಮಧ್ಯದಲ್ಲಿದೆ. ಈ ಮಂಟಪದಲ್ಲಿ ನಂದಿ ವಿಗ್ರಹವನ್ನು ಶ್ರೀ ಮರುಳಸಿದ್ಧ ದೇವಾಲಯದ ಕಡೆ ಮುಖಮಾಡಿ ಕೂಡಿಸಲಾಗಿದೆ. ಈ ಮಂಟಪಕ್ಕೆ ಎತ್ತರದ ಚೌಕ ಅಧಿಷ್ಠಾನವಿದ್ದು ಅದರಲ್ಲಿ ಉಪಾನ, ಜಗತಿ, ಕುಮುದ ಕಪೋತಗಳಿವೆ. ಈ ಮಂಟಪದ ದಕ್ಷಿಣ ಮುಖ ತೆರೆದಿದ್ದು ಉಳಿದ ಮೂರು ಮುಖಗಳಲ್ಲಿ ಗೋಡೆಯ ಬದಲು ಕೇವಲ ಜಾಲಂಧ್ರವುಳ್ಳ ಫಲಕಗಳಿದ್ದು ಅವುಗಳನ್ನು ನಾಲ್ಕು ಮೂಲೆಗಳಲ್ಲಿರುವ ಆಯತಾಕಾರದ ಕಂಬಗಳಿಗೆ ಹೊಂದಿಸಿ ಕೂಡಿಸಲಾಗಿದೆ. ತಲಾ ಒಂದು ಕಂಬದ ಕಾಂಡಭಾಗದಲ್ಲಿ ದುಂಡಾಕಾರದ ನಾಲ್ಕು ಕಿರು ಗಂಬಗಳಿವೆ. ಅವುಗಳ ಬುಡದ ಪೀಠ

ಭಾಗಗಳಲ್ಲಿ ಒಂದೊಂದು ಕಿರು ಗಂಬಗಳ ಕೆಳಗಡೆ ಒಂದೊಂದು ನಿಂತ ಸಿಂಹಗಳನ್ನು ಕಂಡರಿಸಲಾಗಿದೆ. ತಲಾ ಒಂದು ಕಂಬದ ಭೋದುಗೆಯ ನಾಲ್ಕು ಪಟ್ಟಿಕೆಗಳ ತುದಿಗಳು ಬಾಗಿದ್ದು ಅದರಲ್ಲಿ ಮೊಗ್ಗುಗಳ ಅಲಂಕರಣವಿದೆ. ಅದರ ಛತ್ತಿನ ಮೇಲೆ ಸರಳ ದ್ರಾವಿಡ ಮಾದರಿಯ ಶಿಖರವಿದ್ದು ಛತ್ತಿನ ಕಪೋತದ ನಾಲ್ಕು ಮುಖಗಳಲ್ಲಿ ಇಳಿಜಾರು ಪಟ್ಟಿಕೆಗಳಿವೆ. ಕೆಳಗಿನ ಭಾಗವನ್ನು ಶಿಲೆಯಿಂದ ಮತ್ತು ಶಿಖರ ಭಾಗವನ್ನು ಇಟ್ಟಿಗೆ-ಗಾರೆಯಿಂದ ನಿರ್ಮಿಸಲಾಗಿದೆ. ನಂದಿಪೀಠದ ಜಲಧಾರಿ ಪ್ರಣಾಳವು ಪೂರ್ವಕಡೆಗೆ ಹರಿದಿದೆ. ಜಾಲಂಧ್ರ ಪಟ್ಟಿಕೆಯಲ್ಲಿ ಎರಡು ಸಾಲುಗಳ ರಂಧ್ರಗಳಿವೆ.

ನವಗ್ರಹ ಪೀಠ

ಬಂಗಾರದ ಬಸವಣ್ಣ ಮಂಟಪವು ಮತ್ತು ಯತಿಗಳುಳ್ಳ ತೋರಣದ ಮಧ್ಯಭಾಗದಲ್ಲಿ ನವಗ್ರಹ ಪೀಠವಿದ್ದು ಅದನ್ನು ಎತ್ತರದ ಕಟ್ಟೆಯ ಮೇಲೆ ಪ್ರತಿಷ್ಠಾಪಿಸಲಾಗಿದೆ*(ಚಿತ್ರ ಸಂ .೧೩೨)*. ಅದರ ಕಟ್ಟೆ ಚೌಕಾಕಾರವಾಗಿದ್ದು ಮಂಚಬಂಧ ಮಾದರಿಯಲ್ಲಿದೆ. ಈ ಪೀಠವು ವೃತ್ತಾಕಾರವಾಗಿದ್ದು ಅದರ ಮೇಲೆ ಮಧ್ಯದಲ್ಲಿ ಜೋಡು ಪಾದಗಳ ಉಬ್ಬುಶಿಲ್ಪವಿದೆ. ಈ ಪಾದಗಳ ಸುತ್ತಲೂ ಕಮಲಗಳ ಅಲಂಕರಣವಿದೆ. ಅದರ ಕೆಳಭಾಗದ ಅಂಚಿನ ಸುತ್ತಲೂ ಒಬ್ಬ ಯತಿ ಹಾಗೂ ವಾದ್ಯಮೇಳದವರ ಚಿತ್ರಗಳನ್ನು ಕಂಡರಿಸಲಾಗಿದೆ. ಯತಿಯು ಕೈಮುಗಿದು ಪದ್ಮಾಸನದಲ್ಲಿ ಕುಳಿತಿದ್ದು ಆತನ ಸುತ್ತಲೂ ಇಪ್ಪತ್ತೆರಡು ಮಂದಿ ವಾದ್ಯ-ನೃತ್ಯಗಾರರಿದ್ದಾರೆ. ವಾದ್ಯಗಾರರಲ್ಲಿ ಕಹಳೆ ಊದುವವರು, ಡಮರನ್ನು ಬಾರಿಸುವವರು ಹಾಗೂ ಮದ್ದಳೆಯನ್ನು ಬಾರಿಸುವವರು ಒಳಗೊಂಡಿರುವರು. ಈ ಯತಿಯನ್ನು ಈ ಮೇಲೆ ಹೇಳಿದ ಮರುಳಸಿದ್ಧ ದೇವಾಲಯದ ಯತಿಗಳ ಶಿಲ್ಪಗಳನ್ನು ಹೋಲುತ್ತಿದ್ದು ಇದನ್ನು ಶ್ರೀ ಮರುಳಸಿದ್ಧರೆಂದು ಹೇಳುವರು. ಈ ಪೀಠದ ಬುಡದ ಸುತ್ತಲೂ ನವಗ್ರಹಗಳನ್ನು ತೋರಿಸಲಾಗಿದೆ.

ಬಸವಣ್ಣನ ದೇವಾಲಯ

ಈ ಬಸವಣ್ಣನ ದೇವಾಲಯವು ಬಂಗಾರ ಬಸವಣ್ಣನ (ನಂದಿ) ದೇವಾಲಯದ ಪೂರ್ವಕ್ಕಿದ್ದು ಇದು ಸಹ ದಕ್ಷಿಣಕ್ಕೆ ಮುಖಮಾಡಿದೆ. *(ಚಿತ್ರ ಸಂ.೧೩೩)* ಇದನ್ನು ಬಂಗಾರದ ಕಾಳಮ್ಮ ದೇವಾಲಯವೆಂದೂ ಕರೆಯುವರು. ಇದು ಏಕಕೂಟ ಮಾದರಿಯ ದೇವಾಲಯವಾಗಿದ್ದು ಇದರ ನಾಲ್ಕು ಮೂಲೆಗಳಲ್ಲಿ ನಾಲ್ಕು ಅರ್ಧಗಂಭಗಳಿವೆ. ಇದರ ಮಧ್ಯದಲ್ಲಿ ನಂದಿಯ ವಿಗ್ರಹವಿದೆ. ಬದಿಗಳಲ್ಲಿ ಶ್ರವಣಕುಮಾರ ಮತ್ತು ಗುಂಡ ಬ್ರಹ್ಮಯ್ಯರ ವಿಗ್ರಹಗಳಿವೆ. ಈ ದೇವಾಲಯದ ದ್ವಾರ ಚೌಕಟ್ಟಿನಲ್ಲಿ ಭವ್ಯವಾದ ಶೈವ ದ್ವಾರಪಾಲಕರ ಉಬ್ಬುಶಿಲ್ಪಗಳಿವೆ. ಚತುರ್ಭುಜ

ಧಾರಿಗಳಾದ ಇವರ ಕೈಗಳಲ್ಲಿ ಅಭಯ ಮುದ್ರೆ, ತ್ರಿಶೂಲ, ಡಮರು ಮತ್ತು ಗಧಗಳಿವೆ. ಒಂದು ಕಾಲನ್ನು ಅಡ್ಡವಾಗಿಟ್ಟು ನಿಂತಿರುವರು. ಬಾಗಿಲಪಟ್ಟಿಗಳಲ್ಲಿ ಸರಳ ವಲ್ಲಿ ಶಾಖೆಗಳಿವೆ. ಲಲಾಟಪಟ್ಟಿಕೆಯಲ್ಲಿ ಗಜಲಕ್ಷ್ಮಿಯನ್ನು ತೋರಿಸಲಾಗಿದೆ. ಈ ದೇವಾಲಯಕ್ಕೆ ದ್ರಾವಿಡ ಮಾದರಿಯ ಶಿಖರವಿದೆ. ಶಿಖರ ಭಾಗವನ್ನು ಇಟ್ಟಿಗೆ ಮತ್ತು ಗಾರೆಯಿಂದ ಹಾಗೂ ಛತ್ತಿನವರೆಗಿನ ದೇವಾಲಯವನ್ನು ಶಿಲೆಯಿಂದ ನಿರ್ಮಿಸಲಾಗಿದೆ.

ಶ್ರವಣಕುಮಾರನ ವಿಗ್ರಹ (ಚಿತ್ರ ಸಂ.೧೩೪)

ಶ್ರವಣಕುಮಾರನು ತನ್ನ ತಂದೆ-ತಾಯಿಗಳನ್ನು ಎರಡು ಬುಟ್ಟಿಗಳಲ್ಲಿಟ್ಟು ಕೊಂಡು ನಡೆಯುವ ದೃಶ್ಯವಿದೆ. ತಲಾ ಇವರ ಒಂದು ಬುಟ್ಟಿಯನ್ನು ಉದ್ದವಾದ ಕೋಲಿನ ತುದಿಗೆಗಳಿಗೆ ಕಟ್ಟಿಕೊಂಡು ಅದನ್ನು ತನ್ನ ಹೆಗಲ ಮೇಲೆ ಹಾಕಿಕೊಂಡಿರುವನು. ವಸ್ತ್ರಾಭರಣಗಳನ್ನು ಧರಿಸಿರುವನು. ಈ ಶಿಲ್ಪವನ್ನು ನೋಡಿದ ಭಕ್ತರಿಗೆ ತನ್ನ ತಂದೆ-ತಾಯಿಗಳನ್ನು ಭಯಭಕ್ತಿಯಿಂದ ಜೋಪಾನ ಮಾಡಲು ಪ್ರೇರಣೆ ನೀಡುವುದು.

ಗುಂಡಬ್ರಹ್ಮಯ್ಯನ ವಿಗ್ರಹ (ಚಿತ್ರ ಸಂ.೧೩೫)

ಈ ವಿಗ್ರಹದಲ್ಲಿ ಗುಂಡಬ್ರಹ್ಮಯ್ಯರಿಬ್ಬರು ಶಿವಲಿಂಗವನ್ನು ತಮ್ಮ ಎಡಗೈಯಲ್ಲಿ ಹಿಡಿದುಕೊಂಡು ಬಲಗೈಯನ್ನು ಅದರ ಮೇಲಿಟ್ಟು ನಿಂತಿರುವರು. ದಪ್ಪನೆಯ ತುರುಬನ್ನು ಕಟ್ಟಿರುವರು. ವಸ್ತ್ರಾಭರಣಗಳಿಂದ ಭೂಷಿತರಾಗಿದ್ದಾರೆ. ಈರ್ವರ ಮಧ್ಯ ಎರಡು ಈಟಿಗಳನ್ನು ಸಮಾಂತರದಲ್ಲಿ ಮೇಲಕ್ಕೆ ಮುಖಮಾಡಿ ನಿಲ್ಲಿಸಲಾಗಿದೆ. ಈರ್ವರ ಮೇಲೆ ಮಕರ ತೋರಣದ ಅಲಂಕರಣವಿದೆ. ಅದರ ಮೇಲೆ ಮಧ್ಯದಲ್ಲಿ ಕೀರ್ತಿಮುಖವನ್ನು ಚಿತ್ರಿಸಲಾಗಿದೆ.

ಈ ಶಿಲ್ಪದ ಕಾಲ ಸು. ಕ್ರಿ.ಶ. ೧೩ನೇ ಶತಮಾನ. ಗುಂಡಬ್ರಹ್ಮಯ್ಯರನ್ನು ಶೂಲಕ್ಕೇರಿಸಿದ ಶಿಲ್ಪಗಳು ಅನೇಕ ಕಡೆಗಳಲ್ಲಿ ಬೆಳಕಿಗೆ ಬಂದಿರುವುದನ್ನು ಇಲ್ಲಿ ಸ್ಮರಿಸಬಹುದು. ಕೋಗಳಿಯ ಒಂದು ದಾಖಲೆಯಿಂದ ಪಂಚಾಚಾರ್ಯರು ಗುಂಡಬ್ರಹ್ಮಯ್ಯರಿಗೆ ದೀಕ್ಷೆ ನೀಡಿದರೆಂದು ಹೇಳಿದ್ದು, ಅದನ್ನು ಈ ಕೃತಿಯ ವೀರಶೈವ ಪರಂಪರೆ ಮತ್ತು ಆಚರಣೆ ಭಾಗದಲ್ಲಿ ನೋಡಬಹುದು.

ಭಕ್ತರ ಶಿಲ್ಪಗಳು

ಶ್ರೀ ಮರುಳಸಿದ್ಧ ದೇವಾಲಯದ ಸುತ್ತಲೂ ನೆಲದ ಮೇಲೆ ಹಾಸಿರುವ ಶಿಲಾ ಬಂಡೆಗಳ ಮೇಲೆ ಭಕ್ತರ ಚಿತ್ರಗಳಿವೆ. ಅಲ್ಲಿ ಭಕ್ತರು ಭಕ್ತಿಯಿಂದ ಕೈಮುಗಿದು ಸಾಷ್ಟಾಂಗ ನಮಸ್ಕಾರ ಮಾಡುವ ಭಂಗಿಯಲ್ಲಿ ಕಾಣಬಹುದು.

ಶ್ರೀ ಪೀಠದ ಗೌರಮ್ಮ ದೇವಾಲಯ, ಅದರ ಮಜ್ಜನಕುಂಡದ ಮಂಟಪ, ಬಂಗಾರ ಬಸವಣ್ಣನ ದೇವಾಲಯ, ದೀಪಸ್ತಂಭಗಳು, ನಂದಿಸ್ತಂಭಗಳು, ನವಗ್ರಹ ಪೀಠ, ನಂದಿ ದೇವಾಲಯ, ಪ್ರಾಕಾರ ಗೋಡೆ-ಮಹಾದ್ವಾರ-ಗೋಪುರ, ಉಯ್ಯಾಲೆ ಕಂಬ, ಶ್ರವಣಕುಮಾರನ ಶಿಲ್ಪ ಇವುಗಳು ವಿಜಯನಗರ ಕಾಲದ ಶೈಲಿಯಲ್ಲಿವೆ. ಕಾಲ ಸು. ಕ್ರಿ.ಶ. ೧೫ ರಿಂದ ೧೬ನೇ ಶತಮಾನ.

ಸದ್ಧರ್ಮ ಪೀಠದ ಶ್ರೀಮಠ

ಶ್ರೀ ಮರುಳಸಿದ್ಧ ದೇವಾಲಯದ ಎಡ ಬದಿಗೆ ಪಶ್ಚಿಮದ ಪ್ರಾಕಾರ ಗೋಡೆಗೆ ಹೊಂದಿಕೊಂಡು ಉಜ್ಜಯಿನಿ ಸದ್ಧರ್ಮ ಸಿಂಹಾಸನ ಪೀಠದ ಭವ್ಯವಾದ ಮಠವಿದೆ. ಈ ವಿಶಾಲ ಮಠವು ಪೂರ್ವಕ್ಕೆ ಮುಖಮಾಡಿದ್ದು ಅದು ಉಜ್ಜಯಿನೀ ಸದ್ಧರ್ಮ ಸಿಂಹಾಸನ ಪೀಠದ ಪರಮ ಪೂಜ್ಯ ಜಗದ್ಗುರುಗಳ ತಂಗುದಾಣ ಹಾಗೂ ಅದು ಸಾಮಾಜಿಕ, ಧಾರ್ಮಿಕ ಚಟುವಟಿಕೆಗಳ ಕೇಂದ್ರ. ಶ್ರೀ ಮಠದ ಒಳಗಡೆ ದಾರುಕ ಮಂಟಪ, ಜಗದ್ಗುರುಗಳ ಶಿವಪೂಜಾ ಮಂದಿರ, ನ್ಯಾಯಾಲಯ, ಪಾಕ ಶಾಲೆ, ಪಂಚಪೀಠಸ್ಥರ ಮಂಟಪ, ಗೋಶಾಲೆ ಇತ್ಯಾದಿ ಭಾಗಗಳಿವೆ.

ಈ ಮಠವನ್ನು ಇತ್ತೀಚಿಗೆ ಜೀರ್ಣೋದ್ಧಾರಗೊಳಿಸಿದ್ದು ಅದರ ಮೇಲೆ ಮಂಟಪ ಮತ್ತು ಬದಿಗಳಲ್ಲಿ ಕೋಣೆಗಳನ್ನು ನಿರ್ಮಿಸಲಾಗಿದೆ. ಪ್ರವೇಶದ್ವಾರದ ಮೇಲೆ ಶಿವ-ಪಾರ್ವತಿಯರು ನಂದಿಯ ಮೇಲೆ ಆಸೀನರಾಗಿರುವ ಬೃಹತ್ ವರ್ಣಮಯ ಗೊಂಬೆಗಳನ್ನೂ ಪ್ರತಿಷ್ಠಾಪಿಸಲಾಗಿದೆ ***(ಚಿತ್ರ, ಸಂ.೧೩೬)***.

ಮಠದ ಮುಖಮಂಟಪ

ಮಠದ ಮಹಾದ್ವಾರ ಪ್ರವೇಶವು ಪೂರ್ವಕ್ಕೆ ಮುಖಮಾಡಿದ್ದು ಅದರ ಮುಖಮಂಟಪದ ಇಕ್ಕೆಲಗಳಲ್ಲಿ ಎತ್ತರವಾದ ವಿಶಾಲ ಕಟ್ಟೆಗಳಿವೆ. ಈ ಕಟ್ಟೆಗಳ ಮೇಲೆ ಕಟ್ಟಿಗೆಯ ಕಂಬಗಳನ್ನು ನಿಲ್ಲಿಸಿದ್ದು ಅವುಗಳಲ್ಲಿರುವ ವೈವಿಧ್ಯಮಯ ಚಿತ್ರಗಳು ಈ ಭಾಗದಲ್ಲೇ ವಿಶಿಷ್ಟವೆನಿಸಿವೆ. ಪ್ರತಿಯೊಂದು ಕಂಬದಲ್ಲಿ ಚೌಕಪಟ್ಟಿಕೆಗಳಿದ್ದು ತಲಾ ಒಂದರ ನಾಲ್ಕು ಮುಖಗಳಲ್ಲಿ ಒಂದರ ಮೇಲೆ ಒಂದರಂತೆ ಚಿತ್ರಪಟ್ಟಿಕೆಗಳನ್ನು ರೂಪಿಸಲಾಗಿದೆ ***(ಚಿತ್ರ, ಸಂ.೧೩೮ ರಿಂದ ೧೪೩)***.

ಕಂಬ-೧

ಈ ಕಂಬದ ಚೌಕ ಪಟ್ಟಿಕೆಯ ಪೂರ್ವ ಮುಖದ ಚಿತ್ರದಲ್ಲಿ ಪಾರ್ವತಿಯನ್ನು ತೋರಿಸಲಾಗಿದೆ. ಪಾರ್ವತಿಯು ಕಮಲಗಳನ್ನು ಹಿಡಿದು ನಿಂತಿದ್ದಾಳೆ. ಬದಿಗಳಲ್ಲಿ ಸೇವಕಿಯರು ಕಮಲಗಳನ್ನು ಹಿಡಿದುಕೊಂಡು ನಿಂತಿರುವರು. ಎರಡನೆಯ ಪಟ್ಟಿಕೆಯಲ್ಲಿ ನೃತ್ಯಗಾರ್ತಿಯರಿದ್ದಾರೆ. ಮೂರರಲ್ಲಿ ಆನೆಗಳ ಸಾಲು, ಹಾರ-ಹೂ

ಬಳ್ಳಿಗಳ ಅಲಂಕರಣಗಳಿವೆ. ಈ ಕಂಬದ ದಕ್ಷಿಣ ಮುಖದ ಒಂದನೇ ಪಟ್ಟಿಕೆಯಲ್ಲಿ ಶಿವಪಾರ್ವತಿಯರು ನಿಂತಿದ್ದಾರೆ. ತಮಾಷೆಯೆಂದರೆ ಶಿವನು ಪಾರ್ವತಿಯ ಗಲ್ಲವನ್ನು ಹಿಡಿದಿರುವುದು. ಬದಿಗಳಲ್ಲಿ ಸೇವಕಿಯರು ಕಮಲಗಳನ್ನು ಹಿಡಿದು ನಿಂತಿರುವರು. ಎರಡನೆಯ ಪಟ್ಟಿಕೆಯಲ್ಲಿ ನೃತ್ಯಗಾರ್ತಿಯರಿದ್ದಾರೆ. ಮೂರರಲ್ಲಿ ಹಾರ ಮತ್ತು ಗಿಳಿಗಳ ಚಿತ್ರಗಳಿವೆ. ಅಲಂಕರಣವಿದೆ. ಉತ್ತರ ಮುಖದಲ್ಲಿ ಆನೆ ಮತ್ತು ಸಿಂಹಗಳು ತಮ್ಮ ಮುಂದಿನ ಕಾಲುಗಳನ್ನು ಮೇಲಕ್ಕೆ ಎತ್ತಿಕೊಂಡು ನಿಂತಿವೆ. ಈ ಕಂಬದ ಪಶ್ಚಿಮ ಮುಖದ ಮೊದಲನೆಯ ಪಟ್ಟಿಕೆಯಲ್ಲಿ ತಾಯಿ-ಮಗುವನ್ನು ತೋರಿಸಲಾಗಿದೆ. ಅವರ ಬದಿಗಳಲ್ಲಿ ಸೇವಕಿಯರು ಕಮಲಗಳನ್ನು ಹಿಡಿದು ನಿಂತಿರುವರು. ಎರಡನೆಯ ಪಟ್ಟಿಕೆಯಲ್ಲಿ ನೃತ್ಯಗಾರ್ತಿಯರಿದ್ದಾರೆ. ಮೂರರಲ್ಲಿ ಗಜಗಳ ಸಾಲಿದೆ. ನಾಲ್ಕರಲ್ಲಿ ಹೂ, ಬಳ್ಳಿ, ಹಾರಗಳ ಅಲಂಕರಣವಿದೆ.

ಕಂಬ ೨

ಎರಡನೇ ಕಂಬದ ಪಶ್ಚಿಮ ಮುಖದ ಮೊದಲನೆಯ ಪಟ್ಟಿಕೆಯಲ್ಲಿ ಷಣ್ಮುಖನು ನವಿಲನ್ನೇರಿ ಕುಳಿತಿದ್ದಾನೆ. ಎರಡನೇ ಫಲಕದಲ್ಲಿ ಭಕ್ತರು ನಂದಿ ಮುಖವುಳ್ಳ ಮಾನವನನ್ನು ತಮ್ಮ ಮೇಲೆ ಕೂಡಿಸಿಕೊಂಡಿದ್ದಾರೆ. ಮೂರರಲ್ಲಿ ಸಿಂಹಗಳ ಮಧ್ಯ ಯತಿವರ್ಯರು ಕುಳಿತಿದ್ದು ಬದಿಗಳಲ್ಲಿ ಇನ್ನೊಬ್ಬ ಯತಿ ಕುಳಿತ ಭಂಗಿಯಲ್ಲಿದ್ದು (ಪ್ರಾಯಶಃ ಮರುಳಸಿದ್ಧ) ಕೈಯಲ್ಲಿ ಕಮಂಡಲವಿದೆ. ನಾಲ್ಕರಲ್ಲಿ ಹೂ-ಬಳ್ಳಿಗಳ ಅಲಂಕರಣದ ಮೇಲೆ ಅಪ್ಸರೆಯರಿದ್ದಾರೆ. ಅವರಿಗೆ ನವಿಲುಗಳ ರಕ್ಕೆಗಳಿವೆ. ಅವರ ಮುಂಭಾಗದಲ್ಲಿ ಗಜಗಳು ಕಾಲುಗಳನ್ನು ಎತ್ತಿ ಹಿಡಿದು ಒಂದರ ಮೇಲೆ ಒಂದು ನಿಂತಿವೆ. ಅದರ ಮೇಲೆ ಸಿಂಹವಿದೆ. ಈ ರೀತಿಯ ದೃಶ್ಯವು ಮೊದಲನೆಯ ಕಂಬದಲ್ಲೂ ತೋರಿಸಲಾಗಿದೆ. ಈ ಕಂಬದ ಪೂರ್ವಮುಖದ ಮೊದಲನೆಯ ಪಟ್ಟಿಕೆಯಲ್ಲಿ ಶಿವಪಾರ್ವತಿಯರಿದ್ದೂ ಬದಿಗೆ ಪರಶುರಾಮನು ಕೊಡಲಿ ಹಿಡಿದು ನಿಂತಿರುವನು. ತನ್ನ ಕೇಶವನ್ನು ರುಮಾಲಿನಂತೆ ಕಟ್ಟಿದ್ದಾನೆ. ಉದ್ದ ಗಡ್ಡವಿದೆ. ಚತುರ್ಭುಜನಾದ ಶಿವನ ಕೈಯಲ್ಲಿ ಅಭಯ ಮುದ್ರೆ, ಡಮರು, ತ್ರಿಶೂಲ ಮತ್ತು ಜಿಂಕೆಗಳಿವೆ. ಈತನು ಚಂದ್ರಶೇಖರನ ರೂಪದಲ್ಲಿರುವನು. ಎರಡರಲ್ಲಿ ಅಪಸ್ಮಾರನ ಮೇಲೆ ನಟರಾಜ ನೃತ್ಯ ಮಾಡುತ್ತಿರುವನು. ನಟರಾಜನ ಬಲಗಡೆ ಬ್ರಹ್ಮ ಮತ್ತು ಎಡಗಡೆ ವಿಷ್ಣು ಇರುವರು. ಬ್ರಹ್ಮನಿಗೆ ಮೂರು ಮುಖಗಳಿವೆ. ಸಮಭಂಗದಲ್ಲಿ ನಿಂತಿದ್ದಾನೆ. ವಿಷ್ಣು ನೃತ್ಯಭಂಗಿಯಲ್ಲಿದ್ದು ತನ್ನ ಕೆಳಗಿನ ಕೈಗಳಿಂದ ಡಮರು ಭಾರಿಸುತ್ತಿರುವನು. ಮೇಲಿನ ಕೈಗಳಲ್ಲಿ ಶಂಖ ಮತ್ತು ಕಮಲಗಳಿವೆ. ಮೂರರಲ್ಲಿ ಯತಿಯು ಕುಳಿತಿದ್ದು ಬದಿಗಳಲ್ಲಿ ಸಿಂಹಗಳು ನಿಂತಿವೆ. ನಾಲ್ಕರಲ್ಲಿ ಗಿಣಿಗಳು, ಸೇವಕರು, ಹೂ, ಬಳ್ಳಿಗಳ ಅಲಂಕರಣವನ್ನು ತೋರಿಸಲಾಗಿದೆ. ಅವರ

ಮೇಲೆ ಮಧ್ಯ ಚತುರ್ಭುಜಧಾರಣಿ ಲಕ್ಷ್ಮಿ ಕುಳಿತಿರುವಳು. ಬದಿಗಳಲ್ಲಿ ಸೇವಕಿಯರಿದ್ದಾರೆ.

ಈ ಕಂಬದ ಉತ್ತರ ಮುಖದ ಪಟ್ಟಿಕೆಯಲ್ಲಿ ಯತಿವರ್ಯರ ಮಧ್ಯ ಲಕ್ಷ್ಮಿಯಿರುವಳು. ಆಕೆಗೆ ನಾಲ್ಕು ಕೈಗಳು, ಯತಿಯ ಕೈಗಳಲ್ಲಿ ವೀಣೆಯಿದೆ. ಲಕ್ಷ್ಮಿಯ ಎಡಗಡೆಯಲ್ಲಿರುವ ಯತಿಗೆ ಗಡ್ಡವಿದೆ. ಬಲಗಡೆಯ ಯತಿಗೆ ನಂದಿಯ ಮುಖವಿದೆ. ಎರಡರಲ್ಲಿ ಚಾಮುಂಡಿಯಿರುವಳು. ಆಕೆಯ ಬದಿಗಳಲ್ಲಿ ಸೇವಕರಿದ್ದಾರೆ. ಮೂರರಲ್ಲಿ ಯತಿಯು ಕೋಲನ್ನು ಮುಖಕ್ಕೆ ಆನಿಸಿಕೊಂಡು ಕುಳಿತ್ತಿದ್ದು ಅವನ ಎಡಗೈಯಲ್ಲಿ ಈ ಕೋಲಿದೆ. ಶ್ರೀ ಮರುಳಸಿದ್ಧ ದೇವಾಲಯದ ಮಹಾಮಂಟಪದ ಕಂಬದ ಯತಿ ಹಾಗೂ ಈ ಮೇಲೆ ಹೇಳಿದ ನವಗ್ರಹ ಪೀಠದ ಮೇಲೆ ಇದೇ ರೀತಿಯಲ್ಲಿ ಯತಿರ್ಯನನ್ನು ಚಿತ್ರಿಸಿರುವುದು ಗಮನೀಯ. ನಾಲ್ಕರಲ್ಲಿ ಹಂಸ, ನವಿಲು, ಸೇವಕಿಯರಿದ್ದಾರೆ. ಅವರ ಮೇಲೆ ರೆಕ್ಕೆಯುಳ್ಳ ಅಪ್ಸರೆಯರು ಯತಿಯನ್ನು ಒಯ್ಯುತ್ತಿರುವ ದೃಶ್ಯವಿದೆ.

ಕಂಬ ೩

ಬಲಗಡೆ ಕಂಬದ ಪೂರ್ವ ಮುಖದಲ್ಲೂ ಚಿತ್ರಪಟ್ಟಿಕೆಗಳಿವೆ. ಒಂದರಲ್ಲಿ ಯತಿಯಿದ್ದು ಆತನು ಗಡ್ಡಧಾರಿ. ಆತನ ತಲೆಯ ಕೂದಲುಗಳು ಉದ್ದವಾಗಿವೆ. ಬದಿಗೆ ಸೇವಕರು ಶಂಖ ಊದುತ್ತ ನಿಂತಿರುವರು. ಎರಡರಲ್ಲಿ ಐವರು ನೃತ್ಯಮಾಡುತ್ತಿರುವರು.

ದಕ್ಷಿಣ ಮುಖದಲ್ಲೂ ಚಿತ್ರಪಟ್ಟಿಕೆಗಳಿವೆ. ಒಂದರಲ್ಲಿ ಯತಿಯಿದ್ದು ಆತನು ಕಿರೀಟಧಾರಿಯಾಗಿ ಎಡಗೈಯಲ್ಲಿ ಶಿವಲಿಂಗವನ್ನು ಹಿಡಿದು ಪೂಜಿಸುತ್ತಿದ್ದಾನೆ. ಬಲಗೈ ಅಭಯ ಹಸ್ತದಲ್ಲಿದೆ. ಆತನ ಬದಿಗಳಲ್ಲಿ ಭಕ್ತರು ಕೈಮುಗಿದು ನಿಂತಿರುವರು. ಎರಡರಲ್ಲಿ ನೃತ್ಯಗಾರರು ಮತ್ತು ವಾದ್ಯಮೇಳವಿದೆ. ಮೂರರಲ್ಲಿ ಹೂ ಮತ್ತು ಬಳ್ಳಿಗಳ ಅಲಂಕರಣವಿದೆ.

ಪಶ್ಚಿಮ ಮುಖದಲ್ಲೂ ಚಿತ್ರಪಟ್ಟಿಕೆಗಳಿವೆ. ಮೊದಲದರಲ್ಲಿ ನೃತ್ಯಗಾರರಿದ್ದಾರೆ. ಉತ್ತರ ಮುಖದಲ್ಲಿ ಮುಂದಿನ ಕಾಲುಗಳನ್ನು ಎತ್ತಿ ನಿಂತ ಸಿಂಹವಿದೆ. ಈ ರೀತಿಯ ಇನ್ನೊಂದು ಕಂಬ ಸ್ಥಳಾಂತರಗೊಂಡಿದೆ. ಈ ಕಂಬಗಳಲ್ಲಿ ತೋರಿಸಿದ ಯತಿಯೂ ಶ್ರೀ ಮರುಳಸಿದ್ಧರೆಂದು ಹೇಳುವರು.

ಮಠದ ಪ್ರವೇಶ ದ್ವಾರ *(ಚಿತ್ರ ಸಂ.೧೪೪)*

ಮಠದ ಪ್ರವೇಶ ಮಹಾದ್ವಾರದ ಬಾಗಿಲ ಚೌಕಟ್ಟನ್ನು ಗಟ್ಟಿಯಾದ ಕಟ್ಟಿಗೆಯಿಂದ ನಿರ್ಮಿಸಲಾಗಿದೆ. ಈ ಬಾಗಿಲಲ್ಲಿರುವ ಕುಸುರು ಕೆತ್ತನೆಯ

ಅಲಂಕರಣವು ಹೊಯ್ಸಳ ಮಾದರಿಯನ್ನು ನೆನಪು ಮಾಡುತ್ತದೆ. ಈ ದ್ವಾರದ ಚಿತ್ರಗಳು ತುಂಬಾ ಆಕರ್ಷಣೀಯವಾಗಿವೆ. ದ್ವಾರ ಬಂಧದಲ್ಲಿ ಏಳು ಶಾಖೆಗಳಿವೆ. ಮೊದಲನೆಯದು ಪತ್ರಶಾಖೆ. ಅದರಲ್ಲಿ ಒಂದುಸಾಲಿನ ಉದ್ದ ಪಟ್ಟಿಕೆಯಲ್ಲಿ ಸೇವಕಿಯರು ಒಬ್ಬರ ಮೇಲೆ ಮತ್ತೊಬ್ಬರು ನಿಂತಿರುವರು. ಕೈಗಳಲ್ಲಿ ವೀಣೆಯನ್ನು ಹಿಡಿದಿರುವರು. ಎರಡನೆಯ ಶಾಖೆಯಲ್ಲಿ ಏಳು ಪ್ರಾಣಿ ಪಕ್ಷಿಗಳಿದ್ದು ಅವುಗಳು ಕುದುರೆ, ಆನೆಮುಖ ಇತ್ಯಾದಿಗಳ ಚಿತ್ರಗಳಿವೆ. ಆನೆ ಮುಖದ ಕೆಳಗಡೆ ಸೇವಕಿ ನಿಂತಿದ್ದಾಳೆ. ಅವರ ಮೇಲೆ ಸಿಂಹ ಕುಳಿತಿದೆ. ಮೂರನೆಯ ಶಾಖೆಯಲ್ಲಿ ಬಾಲಕಿಯೊಬ್ಬಳು ಕಮಲವನ್ನು ಹಿಡಿದು ನಿಂತಿರುವಳು. ಅದರ ಮೇಲೆ ಸೂರ್ಯನ ಚಿತ್ರವಿದೆ. ನಾಲ್ಕನೆಯ ಶಾಖೆಯಲ್ಲಿ ಉದ್ದವಾದ ಸಾಲಿನಲ್ಲಿ ರತ್ನಗಳ ಅಲಂಕರಣವಿದೆ. ಐದನೆಯ ಶಾಖೆಯಲ್ಲಿ ನಾಗ ಹೆಡೆಗಳ ಸಾಲಿದೆ. ಅದರಲ್ಲಿ ಹೂಗಳ ಅಲಂಕರಣವು ಒಂದರ ಮೇಲೊಂದಿದೆ. ಏಳನೆಯ ಶಾಖೆಯಲ್ಲಿ ಹೂವಿನ ವೃತ್ತ ಪಟ್ಟಿಕೆಯಿದೆ. ಲಲಾಟ ಪಟ್ಟಿಕೆಯ ಮಧ್ಯದಲ್ಲಿ ಶಿವ-ಪಾರ್ವತಿಯರಿದ್ದಾರೆ. ಅವರ ಬಲಗಡೆ ವೀರಭದ್ರ ಮತ್ತು ಎಡಗಡೆ ಗಣಪತಿ ನಿಂತಿರುವರು. ಉತ್ತರಾಂಗ ಪಟ್ಟಿಕೆಯಲ್ಲಿ ಶಿವ-ಚಂದ್ರಶೇಖರ, ನಟರಾಜ, ವಿಷ್ಣು, ಭೈರವ ಮತ್ತು ಅಷ್ಟದಿಕ್ಪಾಲಕರಿರುವರು. ತಲಾ ಒಬ್ಬ ದೇವತೆಗೆ ಮಕರತೋರಣದ ಅಲಂಕರಣವಿದೆ. ಶಿವನು ವೃಷಭರೂಢನಾಗಿರುವನು. ಶಿವನು ಚತುರ್ಭುಜಧಾರಿ, ಆತನ ತೋರಣದ ಬದಿಗೆ ಕುದುರೆ ಸವಾರರಿರುವರು. ಚಂದ್ರಶೇಖರನೂ ಚತುರ್ಭುಜಧಾರಿ, ಕೆಳಗಿನ ಕೈಗಳು ಅಭಯ ಮತ್ತು ವರದ ಮುದ್ರೆಗಳಲ್ಲಿವೆ. ಮೇಲಿನ ಕೈಗಳಲ್ಲಿ ಜಿಂಕೆ ಮತ್ತು ಖಟ್ವಾಂಗಗಳಿವೆ. ತೋರಣದಲ್ಲಿ ಎರಡು ನವಿಲುಗಳಿವೆ. ನಟರಾಜನ ತೋರಣದ ಬದಿಗೆ ಕುದುರೆ ಮತ್ತು ನವಗ್ರಹಗಳಿವೆ. ಆತನ ಎಡಕ್ಕೆ ಟಗರು ಮತ್ತು ಆನೆಗಳಿವೆ ಹಾಗೂ ಬಲಕ್ಕೆ ನಂದಿಯನ್ನು ತೋರಿಸಲಾಗಿದೆ. ಚತುರ್ಭುಜ ವಿಷ್ಣುವಿನ ಕೆಳಗಿನ ಹಸ್ತಗಳು ಅಭಯ ಮುದ್ರೆಯಲ್ಲಿವೆ. ಮೇಲಿನ ಕೈಗಳಲ್ಲಿ ಶಂಖ ಮತ್ತು ಕಮಲಗಳಿವೆ. ಆತನ ತೋರಣದಲ್ಲೂ ನವಿಲು-ಪಕ್ಷಿಗಳಿವೆ. ಭೈರವನ ಕೈಗಳಲ್ಲಿ ಕಪಾಲ, ತ್ರಿಶೂಲ, ಡಮರು ಮತ್ತು ಕತ್ತಿಗಳಿವೆ. ಈ ಕಪಾಲದಿಂದ ಕೆಳಗೆ ಬೀಳುವ ರಕ್ತವನ್ನು ನಾಯಿಯು ಕುಡಿಯುತ್ತಿದೆ. ಈ ದೇವತೆಗಳ ತೋರಣದಲ್ಲಿ ಒಂದೇ ಸಾಲಿನಲ್ಲಿ ಅಷ್ಟದಿಕ್ಪಾಲರನ್ನು ತೋರಿಸಲಾಗಿದೆ.

ಮುಖಮಂಟಪದ ಎಡಕಟ್ಟೆಯ ಮೇಲಿನ ಆಸನದಲ್ಲಿ ಶ್ರೀಪೀಠದ ಜಗದ್ಗುರುಗಳು ಆಸೀನರಾಗಿ ಭಕ್ತರಿಗೆ ಆಶೀರ್ವದಿಸುವರು.

ಶ್ರೀಮಠದ ಕಟ್ಟೆಗೆಯ ಕಂಬಗಳು, ಬಾಗಿಲ ಚೌಕಟ್ಟು ಇತ್ಯಾದಿಗಳ ಕಾಲ ಸು. ಕ್ರಿ.ಶ. ೧೯ನೇ ಶತಮಾನದ ಅಂತ್ಯಭಾಗ. ಈ ಕಟ್ಟೆಗೆಯ ಕಂಬಗಳನ್ನು ಮತ್ತು ಬಾಗಿಲ ಚೌಕಟ್ಟನ್ನು ಕೊಪ್ಪಳ ಜಿಲ್ಲೆಯ ಕಿನ್ನಾಳದಲ್ಲಿ ತಯಾರಿಸಲಾಗಿದ್ದವೆಂದು ಹೇಳುವರು.

ದಾರುಕ ಮಂಟಪ

ಈ ಮಠದ ಒಳಗಡೆ ಒಂದು ವಿಶಾಲವಾದ ಕಟ್ಟಿಗೆಯ ಸ್ತಂಭ ಮಂಟಪವಿದ್ದು ಅದನ್ನು ದಾರುಕ ಮಂಟಪವೆಂದು ಕರೆಯುವರು. ಅಲ್ಲಿ ಧಾರ್ಮಿಕ ಕ್ರಿಯೆಗಳು ಜರುಗುತ್ತವೆ. ಅವು ವಟುಗಳಿಗೆ ಅಯ್ಯಾಚಾರ, ಅಶುದ್ಧರಾದವರನ್ನು ಶುದ್ಧಗೊಳಿಸುವುದು ಇತ್ಯಾದಿಗಳಾಗಿವೆ.

ಈ ಮಂಟಪಕ್ಕೆ ನಾಲ್ಕು ಕಡೆಗಳಲ್ಲಿ ದ್ವಾರಗಳಿದ್ದು ಅದರ ಪ್ರವೇಶ ದ್ವಾರವು ಪೂರ್ವಕ್ಕಿದೆ. ಉಳಿದವುಗಳು ಈ ಮಂಟಪದ ಉತ್ತರ-ಪಶ್ಚಿಮ ದಿಕ್ಕಿಗಿವೆ. ಈ ಮಂಟಪದ ಮಧ್ಯದಲ್ಲಿ ಚೌಕಾದ ತೆರೆದ ವೇದಿಕೆಯಿದ್ದು ಅದರ ಕಟ್ಟೆಯ ಮೇಲೆ ನಾಲ್ಕು ಮೂಲೆಗಳಲ್ಲಿ ನಾಲ್ಕು ಕಂಬಗಳಿವೆ. ಅದರ ಮೇಲಿನ ಭಾಗವು ಗುಮ್ಮಟಾಕಾರದಲ್ಲಿದೆ. ಈ ವೇದಿಕೆಯ ಮಧ್ಯದಲ್ಲಿ ಪೂರ್ವಕ್ಕೆ ಮುಖಮಾಡಿ ದಾರುಕರ ಕಂಚಿನ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ದಾರುಕರು ಶಿವಲಿಂಗದಲ್ಲಿ ಉದ್ಭವಗೊಂಡಿರುವ ರೂಪವನ್ನು ತೋರಿಸಲಾಗಿದೆ. ಕೈಗಳಲ್ಲಿ ಕಮಂಡಲ ಮತ್ತು ದಂಡಗಳಿವೆ. ದಾರುಕರು ಉಜ್ಜಯಿನಿ ಸದ್ಧರ್ಮ ಪೀಠದ ಪೀಠಾಚಾರ್ಯರು. ದಾರುಕರ ವಿಗ್ರಹವನ್ನು ಕಂಚಿನ ತೋರಣ ಪಟ್ಟಿಕೆಯ ಮುಂಭಾಗದಲ್ಲಿ ನಿಲ್ಲಿಸಲಾಗಿದೆ.*(ಚಿತ್ರ, ಸಂ .೧೪೫ ಮತ್ತು ೧೪೬)* ಈ ತೋರಣ ಪಟ್ಟಿಕೆಯಲ್ಲಿ ನಾಗಮುರಿ ಮತ್ತು ಕೀರ್ತಿಮುಖಗಳ ಅಲಂಕರಣಗಳಿವೆ. ಈ ವೇದಿಕೆಯ ಎದುರುಗಡೆ ಗಣೇಶನ ಶಿಲಾ ವಿಗ್ರಹವಿದೆ.

ಈ ವೇದಿಕೆಯ ಸುತ್ತಲೂ ಚೌಕಾದ ಕಟ್ಟೆಯಿದ್ದು ಅದರ ಮೇಲೆ ಬಲಗಡೆ ಎರಡು ಸಾಲುಗಳಲ್ಲಿ ಎಂಟು ಕಂಬಗಳು ಮತ್ತು ಎಡಗಡೆ ಎರಡು ಸಾಲುಗಳಲ್ಲಿ ಎಂಟು ಕಂಬಗಳು ಒಟ್ಟು ವೇದಿಕೆಯ ಕಂಬಗಳೂ ಸೇರಿ ಇಪ್ಪತ್ತು ಕಂಬಗಳಿವೆ. ಈ ಮಂಟಪದ ಪಶ್ಚಿಮದ ಶಿವಪೂಜಾ ಮಂದಿರವಿದ್ದು ಅದಕ್ಕೆ ಹೊಂದಿ ಈ ನಾಲ್ಕು ಸ್ತಂಭ ಸಾಲುಗಳಿಗೆ ಸಮಾಂತರದಲ್ಲಿ ನಾಲ್ಕು ಅರ್ಧಗಂಭಗಳಿವೆ. ವೇದಿಕೆಯ ಎಡ-ಬಲ ಕಟ್ಟೆಯ ಮೇಲಿನ ಮೊದಲ ಸಾಲುಗಳ ಮಧ್ಯದ ನಾಲ್ಕು ಕಂಬಗಳಲ್ಲಿ ವೇದಿಕೆಗೆ ಮುಖಮಾಡಿ ಸಿಂಹಗಳಿವೆ ಹಾಗೂ ಈ ನಾಲ್ಕು ಕಂಬಗಳ ಬದಿಗಿನ ನಾಲ್ಕು ಮೂಲೆ ಕಂಬಗಳಲ್ಲಿ ವೇದಿಕೆಗೆ ಮುಖಮಾಡಿ ಗಿಳಿಗಳಿವೆ. ಈ ಸಾಲುಗಂಬಗಳಿಗೆ ಹೊಂದಿ ಕಮಾನುಗಳಿವೆ. ಅವುಗಳ ಮೇಲೆ ಅಟ್ಟವನ್ನು ನಿರ್ಮಿಸಲಾಗಿದೆ.

ಈ ಮಂಟಪದ ಹಿಂಬದಿಯ ಮೊದಲನೇ ಸಾಲುಗಳ ಕಂಬಗಳಲ್ಲಿ ಚಿತ್ರಗಳ ಅಲಂಕರಣವಿದೆ. ಒಂದರ ಮುಖದಲ್ಲಿ ಬತ್ತಲೆಯ ಹೆಂಗಸಿನ ಕಾಲನ್ನು ಕುಬ್ಜನೊಬ್ಬ ಹಿಡಿದು ಎಳೆಯುತ್ತಿರುವನು. ಇನ್ನೊಂದರಲ್ಲಿ ಟೋಪಿ ಧರಿಸಿದ ಪೋಲೀಸನು

ಸೈಲ್ಯೂಟ್ ಮಾಡುತ್ತ ನಿಂತಿರುವನು. ಆತನು ಒಂದು ಕಾಲನ್ನು ಪಕ್ಷಿಯ ಮೇಲೆ ಇಟ್ಟಿರುವನು.

ಇನ್ನೊಂದರ ಕಂಬದಲ್ಲಿ ಸೇವಕನೊಬ್ಬ ಕೋಲನ್ನಿಡಿದು ನಿಂತಿರುವನು. ಕೊರಳಲ್ಲಿ ಶಿವಲಿಂಗವನ್ನು ಧರಿಸಿರುವನು. ಇನ್ನೊಂದರಲ್ಲಿ ಹೆಂಗಸು ಬತ್ತಲೆಯಲ್ಲಿ ಕೈ ಎತ್ತಿ ನಿಂತಿದ್ದು ಶಿವಲಿಂಗವನ್ನು ಧರಿಸಿರುವಳು.

ಈ ಮಂಟಪದಲ್ಲಿ ಶಿಲೆಯ ಗಣೇಶ ಮತ್ತು ನಾಗ ವಿಗ್ರಹಗಳಿವೆ. ಗಣೇಶನು ಕುಳಿತ ಭಂಗಿಯಲ್ಲಿದ್ದು ಕೈಗಳಲ್ಲಿ ದಂತ, ಪರಶು, ಕಮಲ ಮತ್ತು ಫಲಗಳಿವೆ. ವಸ್ತ್ರಾಭರಣಗಳನ್ನು ಧರಿಸಿರುವನು. ನಾಗ ಶಿಲ್ಪವು ಮುರಿದಿದೆ.

ಈ ಮಂಟಪದ ಬಲಗಡೆ ಕಟ್ಟೆಯ ಮೇಲೆ ಒಂದು ಶಿಲಾ ಹಲಗೆಯ ಆಸನವಿದ್ದು ಅಲ್ಲಿ ಶ್ರೀಪೀಠದ ಜಗದ್ಗುರುಗಳು ಆಸೀನರಾಗಿ ಅಲ್ಲಿ ನಡೆಯುವ ಧಾರ್ಮಿಕ ಕ್ರಿಯೆಗಳಲ್ಲಿ ಪಾಲ್ಗೊಳ್ಳುವರು.

ಶಿವಪೂಜಾ ಮಂದಿರ

ದಾರುಕ ಮಂಟಪಕ್ಕೆ ಹೊಂದಿ ಪಶ್ಚಿಮಕ್ಕೆ ಶಿವಪೂಜಾ ಮಂದಿರವಿದ್ದು ಅದು ಶ್ರೀಪೀಠದ ಪೂರ್ವ ಜಗದ್ಗುರುಗಳಿಗೆ ಮಹಾ ಶಿವಪೂಜಾ ಮಂದಿರವಾಗಿದ್ದಿತು *(ಚಿತ್ರ ಸಂ .೧೪೭)*. ಈ ಮಂಟಪಕ್ಕೆ ಹೊಂದಿರುವ ದಕ್ಷಿಣದ ಕಟ್ಟಡವು ಈಗಿನ ಜಗದ್ಗುರುಗಳ ತಂಗುವ ದಾಣ ದರ್ಶನ ತಾಣ ಹಾಗೂ ಅವರ ಮಹಾ ಪೂಜಾ ಮಂದಿರವಾಗಿದೆ. ಈ ಕಟ್ಟಡದ ಬದಿಗಿನ ಭಾಗ ಅಡುಗೆ-ಸ್ನಾನಗೃಹಗಳಾಗಿವೆ. ಈ ಆವರಣದ ಮಧ್ಯಭಾಗ ತೆರೆದಿದ್ದು ಕೆಳಗಡೆ ಒಂದು ಬಾವಿಯಿರುವುದು.

ನ್ಯಾಯಾಲಯ

ದಾರುಕ ಮಂಟಪಕ್ಕೆ ಹೊಂದಿ ಉತ್ತರಕ್ಕೆ ನ್ಯಾಯಾಲಯದ ಕೊಠಡಿಯಿದೆ. ಅಲ್ಲಿ ವಕೀಲರು ಕೂಡುವ ಕಟ್ಟೆ ಮತ್ತು ಆ ಕಟ್ಟೆಯ ಮೇಲೆ ಮುಖ್ಯ ನ್ಯಾಯಾಧೀಶರಾದ ಶ್ರೀ ಪೀಠದ ಜಗದ್ಗುರುಗಳ ಆಸನದ ಕಟ್ಟೆಯಿದೆ. ಈ ನ್ಯಾಯಾಲಯವು ಮಠದಯ್ಯಗಳ ಮತ್ತು ಇನ್ನಿತರರ ಜಗಳ, ವ್ಯಾಜ್ಯಗಳನ್ನು ಇತ್ಯರ್ಥ ಮಾಡುತ್ತಿತ್ತು. ಆದ್ದರಿಂದ ಇದನ್ನು ಧರ್ಮದ ನ್ಯಾಯಾಲಯವೆಂದು ಕರೆಯುವರು. ಶ್ರೀಸದ್ಧರ್ಮ ಪೀಠದ ಜಗದ್ಗುರುಗಳೇ ಈ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು. ಈ ಕೊಠಡಿಯಲ್ಲಿ ಒಂದು ಹಳೆಯ ಕಟ್ಟಿಗೆಯ ಮಂಚವಿದೆ. ಶ್ರೀ ಪೀಠದ ಪೂರ್ವ ಜಗದ್ಗುರುಗಳು ಈ ಮಂಚದಲ್ಲಿ ವಿಶ್ರಾಂತಿಯನ್ನು ಪಡೆಯುತ್ತಿದ್ದರು.

ಈ ಕೊಠಡಿಯ ಒಂದು ಕಟ್ಟಿಗೆಯ ಕಂಬಕ್ಕೆ ಮಲೆನಾಡಿನ ದುರ್ಗಮ್ಮನ ಲೋಹದ ವಿಗ್ರಹವಿರುವುದು ವಿಶಿಷ್ಟ *(ಚಿತ್ರ ಸಂ .೧೪೮)* ಈ ಕೋಣೆಯ

ಹಿಂಬದಿಯಲ್ಲಿ ಖಜಾನೆ ಮತ್ತು ಸ್ನಾನದ ಕೊಠಡಿಗಳಿವೆ. ಈ ಕೋಣೆಯ ಮೇಲೆ ಉಪ್ಪರಿಗೆಯಿದ್ದು ಅದಕ್ಕೆ ಹೋಗಲು ಮೆಟ್ಟಲುಗಳಿವೆ. ಈ ಕೊಠಡಿಯ ಎದುರಿಗೆ ಒಂದು ಕೋಣೆಯಿದೆ. ಆ ಕೋಣೆಯ ಕಟ್ಟಿಗೆಯ ಚೌಕಟ್ಟಿನಲ್ಲಿ ವೈವಿಧ್ಯಮಯ ಚಿತ್ರಗಳ ಅಲಂಕರಣವಿದೆ. *(ಚಿತ್ರ ಸಂ.೧೪೯)*

ದಾರುಕ ಮಂಟಪ, ಶಿವಪೂಜಾ ಮಂದಿರ, ನ್ಯಾಯಾಲಯ ಇತ್ಯಾದಿ ಭಾಗಗಳು ಸುಮಾರು ಇನ್ನೂರು ವರ್ಷ ಪ್ರಾಚೀನದ್ದಾಗಿವೆ.

ಪಂಚಾಚಾರ್ಯರ ಮಂಟಪ *(ಚಿತ್ರ ಸಂ.೧೪೯)*

ಈ ನ್ಯಾಯಾಲಯಕ್ಕೆ ಹೊಂದಿ ಉತ್ತರಕ್ಕೆ ವಿಶಾಲವಾದ ಪಂಚಾಚಾರ್ಯರ ಶಿಲಾಸ್ತಂಭಗಳುಳ್ಳ ಮಂಟಪವಿದೆ. ಈ ಸ್ತಂಭ ಮಂಟಪದ ಪಶ್ಚಿಮ ಗೋಡೆಗೆ ಹೊಂದಿ ಏಕಸಾಲಿನಲ್ಲಿ ಐದು ಎತ್ತರದ ಆಸನ ಕಟ್ಟೆಗಳಿವೆ. ಶ್ರೀ ಪಂಚಾಚಾರ್ಯರು ಈ ಆಸನಗಳಲ್ಲಿ ಆಸೀನರಾಗಿ ಭಕ್ತರಿಗೆ ಧರ್ಮೋಪದೇಶ ಮಾಡಲು ಈ ಮಂಟಪವನ್ನು ಕಟ್ಟಲಾಗಿದೆ. ೧೯೯೫ ನವ್ಹಂಬರ್ ೫ರಂದು ಈ ಮಂಟಪವನ್ನು ಪೂಜ್ಯ ಶ್ರೀ ಜಗದ್ಗುರು ಪಂಚಪೀಠಾಧೀಶ್ವರರು ಉದ್ಘಾಟಿಸಿರುವರು. ಈ ಸಮಾರಂಭಕ್ಕೆ ಕರ್ನಾಟಕ ಸರ್ಕಾರದ ಆಗಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಚ್. ಡಿ. ದೇವೇಗೌಡರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಈ ಮಂಟಪದ ಮೇಲೆ ಭವ್ಯವಾದ ಶ್ರೀ ಸಿದ್ಧೇಶ್ವರ ಸಭಾಭವನವನ್ನು ಕಟ್ಟಲಾಗಿದೆ.

ಗೋಶಾಲೆ

ಈ ಪಂಚಾಚಾರ್ಯರ ಮಂಟಪಕ್ಕೆ ಹೊಂದಿ ಉತ್ತರಕ್ಕೆ ಒಂದು ವಿಶಾಲವಾದ ಗೋಶಾಲೆಯಿದೆ. ಅದಕ್ಕೆ ಮೂರು ಪ್ರವೇಶದ್ವಾರಗಳು. ಪೂರ್ವ, ಪಶ್ಚಿಮ ಮತ್ತು ದಕ್ಷಿಣಕ್ಕಿವೆ. ಈ ಗೋಶಾಲೆಯನ್ನು ಕಟ್ಟಲು ಮಡ್ರಳ್ಳಿ, ಮಲೆನಾಡು ಮುಂತಾದ ಅಡವಿಗಳಿಂದ ಕಟ್ಟಿಗೆಯನ್ನು ತರಿಸಲಾಯಿತು. ಈ ಗೋಶಾಲೆಯಲ್ಲಿ ಐದು ಸಾಲಿನ ಗೋದಲಿಗಳಿದ್ದು ತಲಾ ಒಂದಕ್ಕೆ ಎರಡು ಬದಿಗಳಲ್ಲಿ ಹತ್ತು ಕಟ್ಟಿಗೆಯ ಕಂಬಗಳಿವೆ. ಈ ಗೋಶಾಲೆಯಲ್ಲಿ ಮಡ್ರಳ್ಳಿ ಚೌಡಮ್ಮನ ಕಿರುಮೂರ್ತಿಯನ್ನು ಇರಿಸಲಾಗಿದೆ. ಈ ಗೋಶಾಲೆಯಲ್ಲಿ ಪರಮಪೂಜ್ಯ ಶ್ರೀ ಸಿದ್ಧಲಿಂಗ ಜಗದ್ಗುರುಗಳ ಕಾಲಾವಧಿಯಲ್ಲಿ ೧೦೮ ಗೋವುಗಳನ್ನು ಕಟ್ಟಲಾಗುತ್ತಿತ್ತು. ವಿವಿಧ ಬಣ್ಣದ ಈ ಗೋವುಗಳ ಸಗಣಿಯಿಂದ ವಿಭೂತಿಯನ್ನು ತಯಾರಿಸುವುದು ಒಂದು ಮುಖ್ಯ ಯೋಜನೆಯೂ ಆಗಿದ್ದಿತ್ತು. ಈ ಗೋವುಗಳ ಸಗಣಿಯನ್ನು ಸಂಗ್ರಹಿಸುವುದು, ಕುಳ್ಳುಗಳನ್ನು ತಟ್ಟಿ ಒಣಗಿಸುವುದು ನಂತರ ಅದನ್ನು ಸುಟ್ಟು ವಿಭೂತಿಯನ್ನು ತಯಾರಿಸುವುದು ಈ ಯೋಜನೆಯಲ್ಲಿ ಒಳಗೊಂಡಿದ್ದಿತು. ಈಗ ಈ ಗೋವುಗಳ ಸಂಖ್ಯೆಯು

ಗಣನೀಯವಾಗಿ ಕಡಿಮೆಯಾಗಿದೆ ಹಾಗೂ ಈ ಯೋಜನೆಯ ಕಾರ್ಯವು ಕಾರಣಾಂತರದಿಂದ ಸ್ಥಗಿತಗೊಂಡಿತು. ಗೋಶಾಲೆಯ ಕಾಲ ಸು. ಒಂದುನೂರು ವರ್ಷ ಪ್ರಾಚೀನ. ಆದರೆ ಕಾಶಿಯ ವಿಶ್ವನಾಥನ ಬೆಳಗಿನ ಪೂಜಾ ಸಂದರ್ಭದಲ್ಲಿ ಅಂದು ಅಲ್ಲಿ ಸುಟ್ಟ ಶವದ ಚಿತಾಭಸ್ಮವನ್ನು ಮೊದಲು ಲೇಪಿಸುವ ಸಂಪ್ರದಾಯವಿದೆ ಎಂಬುದನ್ನು ಇಲ್ಲಿ ಸ್ಮರಿಸಬಹುದು.

ದಾಸೋಹ ಮಂದಿರ

ಈ ಗೋಶಾಲೆಯ ಪೂರ್ವಕ್ಕೆ ವಿಶಾಲವಾದ ಪಾಕಶಾಲೆ ಮತ್ತು ದಾಸೋಹ ಮಂದಿರಗಳಿವೆ. ಸಾಮಾನ್ಯವಾಗಿ ಅಮವಾಸ್ಯೆ, ಉತ್ಸವ ಇತ್ಯಾದಿ ಸಂದರ್ಭಗಳಲ್ಲಿ ಹೆಚ್ಚಿನ ಭಕ್ತರು ಇಲ್ಲಿಗೆ ಆಗಮಿಸುವರು. ಈ ಸಂದರ್ಭಗಳಲ್ಲಿ ಈ ಪಾಕಶಾಲೆ ಮತ್ತು ದಾಸೋಹ ಮಂಟಪವನ್ನು ಬಳಸಲಾಗುವುದು. ಈ ದಾಸೋಹ ಮಂದಿರದ ಮುಖ್ಯ ದ್ವಾರವು ದಕ್ಷಿಣಕ್ಕಿದೆ.

ವೀರಗಲ್ಲು

ಬಂಗಾರ ಬಸವಣ್ಣನ ಮಂಟಪದ ಹತ್ತಿರ ಒಂದು ವೀರಗಲ್ಲಿದ್ದು ಅದರ ಕೆಳಗಿನ ಭಾಗ ಮಣ್ಣಲ್ಲಿ ಹೂತಿದೆ. ಅದರಲ್ಲಿ ಮೂರು ದೃಶ್ಯಗಳು ಕಾಣುತ್ತವೆ. ಕೆಳಭಾಗದಲ್ಲಿ ವೀರರ ಯುದ್ಧ ದೃಶ್ಯವಿದೆ. ಎರಡನೇ ಭಾಗದಲ್ಲಿ ಮಡಿದ ವೀರನನ್ನು ವಿಮಾನದಲ್ಲಿ ಕೂಡಿಸಿ ಅಪ್ಸರೆಯರು ಸ್ವರ್ಗಲೋಕಕ್ಕೆ ಒಯ್ಯುತ್ತಿರುವರು. ಮೂರನೇ ದೃಶ್ಯದಲ್ಲಿ ಮಡಿದ ವೀರನು ಶಿವನ ಸಾನ್ನಿಧ್ಯದಲ್ಲಿ ಆಸೀನನಾಗಿರುವನು. ಕಾಲ ಸು. ಕ್ರಿ.ಶ. ೧೨ನೇ ಶತಮಾನ.

ಬಾವಿಗಳು

ಶ್ರೀ ಸದ್ಧರ್ಮ ಪೀಠದ ಒಳಗಡೆ ಮುಖ್ಯವಾಗಿ ಮೂರು ಬಾವಿಗಳಿದ್ದು ಈಗಾಗಲೇ ಎರಡು ಬಾವಿಗಳನ್ನು ಮುಚ್ಚಲಾಗಿದೆ. ಶ್ರೀ ಪೀಠದ ಮಠದ ಒಳಭಾಗದಲ್ಲಿರುವ ಒಂದು ಬಾವಿಯು ಬಳಕೆಯಲ್ಲಿದೆ.

ಪ್ರಾಕಾರ ಗೋಡೆ

ಶ್ರೀ ಪೀಠದ ಪೂರ್ವ ಗೋಡೆಯ ಒಳಭಾಗದಲ್ಲಿ ಹಲವಾರು ಉಬ್ಬು ಶಿಲ್ಪಗಳಿದ್ದು ಅವುಗಳಲ್ಲಿ ಹಾವು-ಸೂರ್ಯನನ್ನು ನುಂಗಲು ಹೊರಟಿದೆ. ಜೋಡು ಮೀನುಗಳು ಒಂದನ್ನೊಂದು ಮುದ್ದು ಕೊಡುತ್ತಿವೆ. ಬೇಡರ ಕಣ್ಣಪ್ಪ ಮತ್ತು ಬತ್ತಲೆಯಲ್ಲಿ ಕುಳಿತ ಮಹಿಳೆ ಚಿತ್ರ ಮುಖ್ಯವೆನಿಸಿವೆ. ಈ ಮಹಿಳೆಯು ಬತ್ತಲೆಯಲ್ಲಿ ಕುಳಿತ ಭಂಗಿಯಲ್ಲಿ ಇವರನ್ನು ನೋಡಿದರೆ ಈಕೆಯು ಲಜ್ಜಗೌರಿಯೆಂದು ಗುರುತಿಸಬಹುದು. ಇವು ವಿಜಯನಗರ ಕಾಲದ್ದಾಗಿವೆ. (ಸು. ಕ್ರಿ. ಶ. ೧೬ನೇ

ಶತಮಾನ) ಈ ಗೋಡೆ ಚಿತ್ರಗಳಲ್ಲಿ ಲಜ್ಜೆ ಗೌರಿಯು ಈ ಕಾಲದ ಗದಗ ತಾಲೂಕಿನ ಚಿಂಚಲಿಯ ಚಿತ್ರವನ್ನು ನೆನಪಿಸುತ್ತವೆ.

ಶ್ರೀ ಸಿದ್ಧಲಿಂಗ ಸ್ವಾಮಿಗಳ ಗದ್ದುಗೆ *(ಚಿತ್ರ ಸಂ.೧೫೧)*

ಶ್ರೀ ಉಜ್ಜಯನಿ ಸದ್ಧರ್ಮ ಪೀಠದ ದಕ್ಷಿಣ ಪ್ರವೇಶ ದ್ವಾರಕ್ಕೆ ಹೊಂದಿ ಲಿಂ|| ಶ್ರೀ ಸಿದ್ಧಲಿಂಗಶಿವಾಚಾರ್ಯಸ್ವಾಮಿಗಳವರ ಗದ್ದುಗೆಯನ್ನು ನಿರ್ಮಿಸಲಾಗಿದೆ. ಈ ಗದ್ದುಗೆಯ ತಳಪಾಯ ಆಯತಾಕಾರದ ಗರ್ಭಗೃಹ ಮತ್ತು ಮುಖಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಶ್ರೀ ಲಿಂ|| ಶ್ರೀಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳ ಅಮೃತ ಶಿಲಾವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಈ ವಿಗ್ರಹದ ಗದ್ದುಗೆಯ ಮೇಲೆ ಶ್ರೀ ಸಿದ್ಧಲಿಂಗ ಶಿವಾಚಾರ್ಯರು ಲಿಂಗೈಕ್ಯರಾದ ದಿನಾಂಕವುಳ್ಳ ಶಾಸನವಿದೆ. ಅದನ್ನು ಈ ಕೃತಿಯ ಶಾಸನ ಭಾಗದಲ್ಲಿ ವಿವರಿಸಲಾಗಿದೆ.

ಶ್ರೀಪೀಠದ ದಕ್ಷಿಣ ದಿಕ್ಕಿನ ಪ್ರಾಕಾರ ಗೋಡೆ ಭಾಗದಲ್ಲಿ ಕೆಲವು ಕೋಣೆಗಳಿದ್ದು ಅವುಗಳ ಮೇಲೆ ಒಂದು ಭವ್ಯವಾದ ಕಟ್ಟಡವನ್ನು ಕಟ್ಟಲಾಗಿದೆ. ಈಗಿನ ಸನ್ನಿಧಿಗಳು ಹಗಲು ವೇಳೆಯಲ್ಲಿ ಈ ಸ್ಥಳದಲ್ಲಿ ದರ್ಶನ ನೀಡುವರು. ಈ ಕಟ್ಟಡದ ಮುಂದಿನ ಆವರಣದಲ್ಲಿ ವಿದ್ಯಾರ್ಥಿಗಳು ಶ್ರೀಸನ್ನಿಧಿಗಳ ಸಾನ್ನಿಧ್ಯದದಲ್ಲಿ ನಿತ್ಯ ಪ್ರಾರ್ಥನೆಯನ್ನು ಸಲ್ಲಿಸುವರು *(ಚಿತ್ರ ಸಂ.೧೫೨)*.

ಉಜ್ಜಯಿನಿ ಪಟ್ಟಣದ ವಾಸ್ತು-ಶಿಲ್ಪ

ಉಜ್ಜಯಿನಿ ಪಟ್ಟಣದಲ್ಲಿ ಶ್ರೀ ಉಜ್ಜಯಿನಿ ಸದ್ಧರ್ಮ ಪೀಠವಲ್ಲದೇ ಹಲವಾರು ದೇವಾಲಯ, ಮಠ, ಬಾವಿ, ಶಿಲ್ಪ ಮತ್ತು ಶಾಸನಗಳಿದ್ದು ಅವುಗಳ ಅಧ್ಯಯನದಿಂದ ಅಲ್ಲಿಯ ವಾಸ್ತು ಶಿಲ್ಪದ ವೈವಿಧ್ಯವನ್ನು ವಿವರಿಸಲಾಗಿದೆ.

ರಾಮಲಿಂಗ ದೇವಾಲಯ

ಈ ದೇವಾಲಯ ಶ್ರೀ ಉಜ್ಜಯನಿ ಸದ್ಧರ್ಮಪೀಠದ ಪಕ್ಕದಲ್ಲಿದೆ. ಅದನ್ನು ರಾಮಿ ತಂದೆಯ ದೇವಸ್ಥಾನ ಎನ್ನುವರು. ಅದು ನೆಲಮಟ್ಟದಿಂದ ಕೆಳಭಾಗದಲ್ಲಿದೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಅದಕ್ಕೆ ಮೂರು ಗರ್ಭಗೃಹಗಳು, ಒಂದು ಅರ್ಧಮಂಟಪ, ಒಂದು ನವರಂಗ ಮತ್ತು ಒಂದು ಮುಖಮಂಟಪಗಳಿವೆ. ಮೂಲ ಗರ್ಭಗೃಹದಲ್ಲಿ ಮೂರು ಶಿವಲಿಂಗಗಳಿವೆ. ಬಾಗಿಲ ಚೌಕಟ್ಟಿನಲ್ಲಿ ಮೂರು ಸರಳ ಶಾಖೆಗಳಿವೆ. ಅರ್ಧ ಮಂಟಪದ ಹೊರ ಗೋಡೆಗಳಲ್ಲಿ ಎರಡು ಗೂಡುಗಳಿವೆ. ನವರಂಗ ಮಧ್ಯ ರಂಗಮಂಟಪವಿದ್ದು ಅಲ್ಲಿ ನಾಲ್ಕು ಕಂಬಗಳಿವೆ. ಬದಿಗಳಲ್ಲಿ ಎರಡು ಗರ್ಭಗೃಹಗಳಿದ್ದು ಅವು ಸಂಪೂರ್ಣವಾಗಿ ಜೀರ್ಣೋದ್ಧಾರವಾಗಿವೆ. ಪ್ರವೇಶಕ್ಕೆ ಕೆಳಗಿಳಿಯಲು ಮೆಟ್ಟಿಲುಗಳಿವೆ. ಹೀಗಾಗಿ ಮೂಲತಃ ಇದೊಂದು ತ್ರಿಕೂಟ ಮಾದರಿ ದೇವಾಲಯ.

ನವರಂಗದಲ್ಲಿ ಆರು ವೀರಗಲ್ಲುಗಳಿವೆ. ಇವುಗಳಲ್ಲಿ ಒಂದೊಂದರಲ್ಲೂ ಮೂರು ಚಿತ್ರ ಪಟ್ಟಿಕೆಗಳಿವೆ. ಅವುಗಳಲ್ಲಿ ಕಾಲ್ದಳದವರ ಕಾದಾಟ, ಅಪ್ಸರೆಯರು ಮಡಿದ ವೀರರನ್ನು ಸ್ವರ್ಗಲೋಕಕ್ಕೆ ಒಯ್ಯುತ್ತಿರುವುದು ಮತ್ತು ಲಿಂಗದ ಮುಂದೆ ಭಕ್ತ, ಯತಿ ನಿಂತಿರುವ ದೃಶ್ಯಗಳಿವೆ. ಮೇಲೆ ಬದಿಗಳಲ್ಲಿ ನಂದಿ, ಸೂರ್ಯ, ಚಂದ್ರರಿರುವರು. ಎರಡು ವೀರಗಲ್ಲುಗಳಲ್ಲಿ ಕಾಲ್ದಳ, ಕುದುರೆದಳಗಳ ದೃಶ್ಯಗಳಿವೆ. ಮೂರೂ ವೀರಗಲ್ಲುಗಳಲ್ಲಿ ಅಪ್ಸರೆಯರು ಮಡಿದ ವೀರನನ್ನು ವಿಮಾನದಲ್ಲಿ ಕೂಡಿಸಿರುವರು. ಅದರ ಬದಿಗಳಲ್ಲಿ ಭಕ್ತ ಮತ್ತು ನಂದಿ, ಸೂರ್ಯ, ಚಂದ್ರರ ಚಿತ್ರಗಳಿವೆ. ಒಂದರಲ್ಲಿ ಆರು ಆಕಳುಗಳ ಸಾಲಿದೆ. ಇದು ಗೋಗ್ರಹಣ ಪ್ರಸಂಗವನ್ನು ವ್ಯಕ್ತಪಡಿಸುತ್ತದೆ. ಎರಡು ವೀರಗಲ್ಲುಗಳಲ್ಲಿ ವೀರರು ಬಿಲ್ಲುಗಳ ಅಲಂಕರಣ ಮಾಡಿರುವುದು ವಿಶೇಷ.

ಈ ದೇವಾಲಯ ಮತ್ತು ವೀರಗಲ್ಲುಗಳ ಕಾಲ ಸು. ಕ್ರಿ.ಶ. ೧೨ರಿಂದ೧೩ನೇ ಶತಮಾನ. ಈ ದೇವಾಲಯ-ಶಿಲ್ಪಗಳು ಶ್ರೀಮರುಳಸಿದ್ಧ ದೇವಾಲಯಕ್ಕೆ ಸಂಬಂಧಿಸಿದವಲ್ಲ.

ತಲೆಬೋಳು ಸಿದ್ಧಪ್ಪನ ದೇವಾಲಯ

ಈ ದೇವಾಲಯ ಈ ಗ್ರಾಮದ ಶ್ರೀ ಎ. ಎಂ. ಚನ್ನವೀರಸ್ವಾಮಿಗಳ ಮನೆಯ ಎದುರಿನಲ್ಲಿದೆ. ***(ಚಿತ್ರ ಸಂ. ೧೫೩)*** ಈ ದೇವಾಲಯದ ತಳಪಾಯದಲ್ಲಿ ಗರ್ಭಗೃಹ ಮತ್ತು ಅಂತರಾಳಗಳು ಮಾತ್ರ ಇವೆ. ಗರ್ಭಗೃಹದಲ್ಲಿ ಕಿರು ಶಿವಲಿಂಗವಿದೆ. ಭಿತ್ತಿ ಸರಳವಾಗಿದೆ. ಶಿಖರ ದ್ರಾವಿಡ ಮಾದರಿಯದು. ಒಂದು ಐತಿಹ್ಯದ ಪ್ರಕಾರ ಕೆಲವು ಕಳ್ಳ ಒಕ್ಕಲಿಗರು ದಂಪತಿ ಸಮೇತ ಶ್ರೀಪೀಠದ ಶ್ರೀಮರುಳಸಿದ್ಧ ದೇವಾಲಯದ ದರ್ಶನಕ್ಕೆ ಹೋಗುವುದಿಲ್ಲ. ಅಂತಹ ಸಂದರ್ಭವಿದ್ದರೆ ಅವರು ಈ ದೇವಾಲಯಕ್ಕೆ ಮೊದಲು ಬಂದು ತಪ್ಪುಕಾಣಿಕೆಯಾಗಿ ತಲೆಯನ್ನು ಬೋಳಿಸಿಕೊಂಡು ಹೋಗುವರಂತೆ.

ಇನ್ನೊಂದು ಐತಿಹ್ಯದ ಪ್ರಕಾರ ಹರಕೆ ಹೊತ್ತ ಭಕ್ತರು ಮೊದಲು ಈ ದೇವಾಸ್ಥಾನದಲ್ಲಿ ತಲೆ ಬೋಳಿಸಿಕೊಳ್ಳುವರು. ನಂತರ ಶ್ರೀಪೀಠದ ಶ್ರೀಮರುಳಸಿದ್ಧ ಸ್ವಾಮಿಯ ದರ್ಶನ ಪಡೆಯಲು ಹೋಗುವರಂತೆ. ಈ ಐತಿಹ್ಯದ ಕಾರಣವಾಗಿ ಈ ದೇವಾಲಯಕ್ಕೆ ತಲೆಬೋಳು ಸಿದ್ಧಪ್ಪನೆನ್ನುವರು. ಶೈಲಿಯ ದೃಷ್ಟಿಯಿಂದ ಈ ದೇವಾಲಯದ ಕಾಲ ಸು. ಕ್ರಿ.ಶ. ೧೭ನೇ ಶತಮಾನ.

ಹರಿಜನಕೇರಿಯ ಮರುಳಸಿದ್ಧ ದೇವಾಲಯ

ಉಜ್ಜಯಿನೀ ಸದ್ಧರ್ಮ ಪೀಠದ ಸಿದ್ಧಮಲ್ಲೇಶ್ವರ ಜಗದ್ಗುರುಗಳು ಸಿಂದೋಗಿಯಿಂದ ಹರಳನೆಂಬವನನ್ನು ಕರೆದುಕೊಂಡು ಬಂದು ಉಜ್ಜಯಿನೀ ಗ್ರಾಮದ ಮಾದಿಗರ ಕೇರಿಯಲ್ಲಿ ಒಂದು ಚಿಕ್ಕ ಮರುಳಸಿದ್ಧ ದೇವಾಲಯವನ್ನು ಕಟ್ಟಿಸಿದರು. ಆ ದೇವಾಲಯದ ಪೂಜೆಗೆ ಈ ಹರಳನನ್ನೇ ನೇಮಿಸಿದರು. ಈ ಜಗದ್ಗುರುಗಳು ಶಿವೈಕ್ಯರಾದ ಬಳಿಕ ಹರಳನೂ ಶಿವಾಧೀನನಾದನು. ಈ ವಿಷಯವನ್ನು ಮರುಳಾರಾಧ್ಯ ವಿಜಯದಲ್ಲಿ ಪ್ರಸ್ತಾಪಿಸಲಾಗಿದೆ. ಈ ಗ್ರಾಮದ ಹರಿಜನಕೇರಿಯಲ್ಲಿ ಒಂದು ಚಿಕ್ಕ ಮರುಳಸಿದ್ಧನ ದೇವಾಲಯವಿದೆ. ***(ಚಿತ್ರ, ಸಂ. ೧೫೪)*** ಪರಂಪರಾಗತವಾಗಿ ಹರಿಜನರ ಪೈಕಿ ಒಬ್ಬರು ಶ್ರೀಪೀಠದ ಗುರುಗಳಿಂದ ದೀಕ್ಷೆ ಪಡೆದು ಈ ವಿಗ್ರಹವನ್ನು ಪೂಜಿಸುತ್ತಿದ್ದರು. ಈಗ ಅಲ್ಲಿ ಯಾರೂ ಈ ದೇವರನ್ನು ಪೂಜಿಸುತ್ತಿಲ್ಲ. ಅದರಲ್ಲಿ ನಂದಿಯ ಮೇಲೆ ಕುಳಿತ ಶಿವಪಾರ್ವತಿಯರ ಕಂಚಿನ ವಿಗ್ರಹವಿದೆ. ಇವರನ್ನು ಶ್ರೀ ಮರುಳಸಿದ್ಧ ಗೌರಮ್ಮರೆಂದು ಕರೆಯುವರು.

ಶ್ರೀ ಪೀಠದಲ್ಲೂ ಇದೇ ರೀತಿಯಲ್ಲಿ ಉತ್ಸವ ಮೂರ್ತಿಯಿದೆ. ಅದು ಸುಮಾರು ಒಂದು ಶತಮಾನದಷ್ಟು ಪ್ರಾಚೀನ! ಈ ವಿಗ್ರಹವೂ ಸಿಂದೋಗಿಯ ಮರುಳಸಿದ್ಧ ವಿಗ್ರಹವನ್ನು ಹೋಲುತ್ತದೆ.

ನಂದಿಕಂಬ

ವಿವಿಧ ಎತ್ತರದ ಕಂಬಗಳ ತುದಿಯಲ್ಲಿ ಕುಳಿತ ನಂದಿಗಳುಳ್ಳ ನಂದಿ ಕಂಬಗಳು ಸಾಮಾನ್ಯವಾಗಿ ವೀರಶೈವರ ಧಾರ್ಮಿಕ ಸ್ಥಳಗಳಲ್ಲಿವೆ. ಈ ಕಂಬಗಳಲ್ಲಿ ಭಕ್ತರ ಚಿತ್ರಗಳೂ ಇರುತ್ತವೆ. ಈ ರೀತಿಯ ನಂದಿ ಕಂಬಗಳು ಉಜ್ಜಯಿನಿ ಸದ್ಧರ್ಮಪೀಠದ ಸಂಕಿರಣದಲ್ಲಿ, ಈ ಗ್ರಾಮದ ಶ್ರೀ ಸಾಂತನಳ್ಳಿ ಕೊಡದಪ್ಪನ ಮನೆಯ ಮುಂದೆ, ಶ್ರೀಸಿದ್ಧಲಿಂಗಯ್ಯನವರ ಮನೆಯ ಮುಂದೆ ಮತ್ತು ಜಟ್ಟೆಪ್ಪನ ಗುಡಿಯ ಮುಂದೆ ಇರುತ್ತವೆ.

೧. ಹನುಮಂತನ ಗುಡಿಗೆ ಹೋಗುವ ದಾರಿಯ ಬದಿಗಿರುವ ಶ್ರೀಸಿದ್ಧಲಿಂಗಯ್ಯನವರ ಮನೆ ಮುಂದೆ ಒಂದು ನಂದಿ ಕಂಬವಿದೆ. *(ಚಿತ್ರ ಸಂ. ೧೫೫)* ಅದರ ಮೇಲೆ ಕುಳಿತ ನಂದಿಯಿದ್ದು ಅದರ ಒಂದು ಮುಖದಲ್ಲಿ ಭಕ್ತನೊಬ್ಬ ಕೈಮುಗಿದು ನಿಂತಿದ್ದಾನೆ. ಇನ್ನೊಂದು ಮುಖದಲ್ಲಿ ವೀರನೊಬ್ಬನು ಕುದುರೆ ಸವಾರಿ ಮಾಡುತ್ತಿರುವನು. ಬಲಗೈಯಲ್ಲಿ ಕತ್ತಿಯನ್ನು ಹಿಡಿದು ಮೇಲಕ್ಕೆತ್ತಿರುವನು. ಎಡಗೈಯಲ್ಲಿ ಕುದುರೆಯ ಲಗಾಮನ್ನು ಹಿಡಿದಿರುವನು. ತನ್ನ ಕೇಶವನ್ನು ಹಿಂದಕ್ಕೆಳೆದು ಒಂದು ಜಡೆ ಕಟ್ಟಿರುವನು. ಈ ಜಡೆಯ ತುದಿಯು ಕುದುರೆಯ ಬಾಲದ ಮೇಲ್ಗಡೆ ಬಿದ್ದಿದೆ. ಹಣೆಗೆ ಪಟ್ಟಿಯನ್ನು ಕಟ್ಟಿರುವನು. ಕುಂಡಲ, ಸರ, ಬಳೆ, ಕಡಗ ಇತ್ಯಾದಿಗಳನ್ನು ಧರಿಸಿರುವನು. ಆದರೆ ವೀರನಿಗೆ ಹೆಂಗಸರಿಗಿರುವಂತಹ ಉದ್ದ ಜಡೆಯಿದೆ. ಈ ಚಿತ್ರ ಹೆಂಗಸಿನದೇ? ಅಲ್ಲಿಯ ಕೆಲವು ನಂದಿ ಸ್ತಂಭಗಳಲ್ಲಿರುವ ವೀರರಿಗೆ ಈ ರೀತಿಯ ಜಡೆಯನ್ನು ತೋರಿಸಿಲ್ಲ. ಈ ಕಾಲದ ಒಂದು ನಂದಿ ಕಂಬ ಮತ್ತು ಅದರ ಮುಂದೆ ಒಂದು ಕಿರು ಶಾಸನ ಫಲಕ ಸಾಂತನಳ್ಳಿ ಕೊಡದಪ್ಪನ ಮನೆ ಮುಂದಿವೆ. ಅಲ್ಲಿಯ ನಂದಿ ಕಂಬ ಒಬ್ಬರು ಕೆಳದಿ ವೀರಮ್ಮಾಜಿಯ ಸಮಾಧಿ ಎಂದು ಬದಿಗಿರುವ ಶಾಸನವನ್ನು ಓದಿ ಗುರುತಿಸಿದ್ದಾರೆ.[1] ಆದರೆ ಆ ಶಾಸನದಲ್ಲಿ ಉಜ್ಜಯಿನಿ ಶ್ರೀ ಸಿದ್ದೇಶ್ವರ ಸ್ವಾಮಿಯ ಪೂಜಾರಿ ಹೆಂಡತಿಯು ಸಮಾಧಿ ಕೂತಳೆಂಬ ವಿವರವಿದೆ. ವೀರಮ್ಮನ ಹೆಸರಿಲ್ಲ. ಆದರೆ ಶಿವತತ್ವ ರತ್ನಾಕರದಲ್ಲಿ ಆಕೆಯ ಸಮಾಧಿ ಉಜ್ಜಯಿನಿ ಮಠದಲ್ಲಿರುವುದೆಂದು ಉಲ್ಲೇಖವಿದೆ.[2]

ಈ ವಿಷಯಗಳನ್ನು ಪರಾಮರ್ಶಿಸಲಾಗಿ ಕೆಳದಿ ವೀರಮ್ಮಾಜಿಯ ಸಮಾಧಿಯ ಕುರುಹು ಸದ್ಯಕ್ಕೆ ಅಲ್ಲಿ ಸಿಕ್ಕಿಲ್ಲವೆಂದು ಹೇಳಬಹುದು.

ಜಟ್ಟೆಪ್ಪನ ದೇವಾಲಯ (ಚಿತ್ರ ಸಂ. ೧೫೭)

ಐತಿಹ್ಯ : ಈ ಗ್ರಾಮದ ಹೊರಗಡೆ ಪಶ್ಚಿಮಕ್ಕೆ ಜಟ್ಟೆಪ್ಪನ ದೇವಾಲಯವಿದೆ. ಜಟ್ಟೆಪ್ಪನ ಕುರಿತ ಐತಿಹ್ಯ[೪] ಈ ಭಾಗದಲ್ಲಿ ಜನಪ್ರಿಯವಾಗಿದೆ. ಉಜ್ಜಯನಿ ಸದ್ಧರ್ಮಪೀಠದ ಶ್ರೀ ಮರುಳಸಿದ್ಧರು ತಮ್ಮ ಮೂವರು ಶಿಷ್ಯರ ಸಮೇತ ಸಂಚರಿಸುತ್ತ ಈ ಭಾಗದಲ್ಲಿರುವ ಸಿದ್ಧನವರ್ತಿ ಎಂಬ ಸ್ಥಳಕ್ಕೆ ಆಗಮಿಸಿ ಅಲ್ಲಿಯ ಆಲದ ಮರದ ಕೆಳಗಡೆ ತಂಗಿದರು. ಅವರಿಗೆ ಬಾಯಾರಿಕೆಯಾಗಿತ್ತು. ಆಗ ಮರುಳಸಿದ್ಧರು ಅಲ್ಲೊಂದು ವರ್ತಿಯನ್ನು ತಮ್ಮ ಹೆಬ್ಬೆರಳಿಂದ ತೋಡಿದರು. ಅದರಲ್ಲಿರುವ ನೀರನ್ನು ಕುಡಿದು ಬಾಯಾರಿಕೆಯನ್ನು ನೀಗಿಸಿಕೊಂಡರು. ಮರುಳಸಿದ್ಧರು ಆ ಸ್ಥಳದಲ್ಲೇ ಕುಳಿತು ಹತ್ತಿರದಲ್ಲಿದ್ದ ಉಜ್ಜಯಿನಿ ಗ್ರಾಮಕ್ಕೆ ತನ್ನ ಇಬ್ಬರು ಶಿಷ್ಯರಾದ ಭೈರಿಸಿದ್ಧ ಮತ್ತು ಮೈಲಾರಲಿಂಗರನ್ನು ಸ್ಥಳ ಪರಿಶೀಲನೆಗಾಗಿ ಕಳಿಸಿಕೊಟ್ಟರು. ದಾರಿಯಲ್ಲಿ ಹಳ್ಳದಾಟಿದ ಕೂಡಲೇ ಫಲವತ್ತಾದ ಭೂಮಿ ಕಂಡಿತು. ಆ ಸ್ಥಳದಲ್ಲಿದ್ದ ಸಿದ್ಧರು ತಮ್ಮ ತಪೋಬಲದಿಂದ ಆ ಭೂಮಿಯ ಮಣ್ಣನ್ನು ಫಲವತ್ತುಗೊಳಿಸಿದ್ದರು. ಅದರಿಂದ ಆ ಸ್ಥಳ ಪುಣ್ಯ ಭೂಮಿಯಾಗಿತ್ತು. ಆ ಪುಣ್ಯ ಭೂಮಿಯು ಭೈರಿಸಿದ್ಧ ಮತ್ತು ಮೈಲಾರಲಿಂಗರಿಗೆ ತುಂಬಾ ಪ್ರಿಯವೆನಿಸಿತು. ಹೆಚ್ಚು ಆಕರ್ಷಕವೆನಿಸಿತು. ಅಲ್ಲಿಂದ ಮರಳಿಹೋಗಿ ದುರಾಸೆಯಿಂದ ತಮ್ಮ ಗುರುಗಳಾದ ಮರುಳಸಿದ್ಧರ ಮುಂದೆ ಆ ಭಾಗದಲ್ಲಿ ಕಾಣುವ ಊರಿನ ಭೂಮಿ ತಮಗೆ ತಕ್ಕದ್ದಲ್ಲವೆಂದು ಹೇಳಿದರು. ಮರುಳಸಿದ್ಧರು ಯೋಚಿಸಿ ಇದರ ಸತ್ಯಾಸತ್ಯತೆಯನ್ನು ತಿಳಿಯಲು ತಮ್ಮ ನೆಚ್ಚಿನ ಇನ್ನೊಬ್ಬ ಶಿಷ್ಯನಾಗಿದ್ದ ತಳವಾರ ಜಟ್ಟೆಪ್ಪನನ್ನು ಆ ಸ್ಥಳದ ಪರಿಶೀಲನೆಗಾಗಿ ಕಳಿಸಿದರು. ಜಟ್ಟೆಪ್ಪ ಹಳ್ಳದ ಹತ್ತಿರ ಬಂದು ನಿಂತು ಅಲ್ಲಿಯ ಭೂಮಿಯನ್ನು ಭೃಂಗಿಯ ವೇಷದಿಂದ ನೋಡಿದ. ಆ ಭೂಮಿ ಬಂಗಾರದಂತೆ ಹೊಳೆಯುತ್ತಿತ್ತು. ಅದನ್ನು ನೋಡಿ ಆ ಭೂಮಿಯನ್ನು ಸ್ಪರ್ಶ ಮಾಡಲು ತಾನು ಅರ್ಹನಲ್ಲವೆಂದುಕೊಂಡನು. ಗುರುವಿನ ಬಳಿಗೆ ಹೋಗಿ ಆ ಕ್ಷೇತ್ರ ತಮಗೆ ಯೋಗ್ಯವಾದದ್ದೇ ಹೊರತು ಅನ್ಯರಿಗಲ್ಲ ಎಂದು ನಮಸ್ಕರಿಸಿದನು. ವಿಷಯ ತಿಳಿದು ಗುರುಗಳು ಉಜ್ಜಯಿನಿ ಗ್ರಾಮಕ್ಕೆ ಆಗಮಿಸಿದರು. ಅಲ್ಲಿದ್ದ ಸಿದ್ಧರನ್ನು ನೋಡಿ ಅವರಿಗೆ ತಿಳಿವಳಿಕೆ ಹೇಳಿದರು. ಅವರ ಜತೆಯಲ್ಲಿ ನಡೆದ ಧರ್ಮ ಸಂಭಾಷಣೆಯಲ್ಲಿ ಜಯ ಪಡೆದರು. ಅಲ್ಲಿಂದ ಅವರನ್ನು ಕೈಲಾಸಕ್ಕೆ ಕಳಿಸಿ ಸಿದ್ಧರ ಸಿದ್ಧರಾಗಿ ಮರುಳಸಿದ್ಧರಾದರು.

ಅನಂತರ ಮರುಳಸಿದ್ಧರು ಮೂವರೂ ಶಿಷ್ಯರನ್ನು ಕರೆದರು. ದುರಾಸೆಯಿಂದ ಸುಳ್ಳು ಹೇಳಿ ದ್ರೋಹ ಬಗೆದ ತಮ್ಮ ಶಿಷ್ಯರಿಬ್ಬರಿಗೆ ಶಿಕ್ಷೆ ವಿಧಿಸಿದರು. ಭೈರಿಸಿದ್ಧ ಮತ್ತು ಮೈಲಾರರನ್ನು ತಮ್ಮ ಎಡ ಬಲಗಾಲಿನಿಂದ ಕ್ರಮವಾಗಿ ಒಬ್ಬೊಬ್ಬರನ್ನು

ಒದ್ದಾಗ ಭೈರಿಸಿದ್ಧ ಅಲ್ಲಿಯ ಭೈರಿದೇವರ ಗುಡ್ಡದಲ್ಲಿ ಸೊಂಟ ಮುರಿದುಕೊಂಡು ಬಿದ್ದನು. ಆತನನ್ನು ಅಲ್ಲಿರುವ ಸು.ಕ್ರಿ.ಶ. ೧೪ನೇ ಶತಮಾನದ ಭೈರವನ ವಿಗ್ರಹವನ್ನು ಗುರುತಿಸುವರು. ಮೈಲಾರಲಿಂಗ ಉಜ್ಜಯಿನಿ ಗ್ರಾಮದ ಕೆರೆಯ ಕೋಡಿಯಲ್ಲಿ ಬಿದ್ದನು. ಈ ಇಬ್ಬರಿಗೂ ಭಕ್ತರಿಂದ ಪೂಜೆ ಸಲ್ಲದಂತಾಗಲೆಂದು ಶಾಪ ಹಾಕಿದರು. ಈ ಶಾಪದಿಂದಾಗಿ ಅಲ್ಲಿರುವ ಇವರ ದೇವಾಲಯಗಳಿಗೆ ಭಕ್ತರು ಪೂಜೆಯನ್ನು ಇವತ್ತಿಗೂ ಸಲ್ಲಿಸುವುದಿಲ್ಲ.

ನಿಜಸ್ಥಿತಿಯನ್ನು ಮನವರಿಕೆ ಮಾಡಿದ ನೆಚ್ಚಿನ ಶಿಷ್ಯನಾದ ಜಟ್ಟೆಪ್ಪನನ್ನು ಮರುಳಸಿದ್ಧರು ಆಶೀರ್ವದಿಸಿದರು. ತಮ್ಮ ಶ್ರೀಪೀಠದ ಮಗ್ಗುಲಲ್ಲಿ ಆತನನ್ನು ಇಟ್ಟುಕೊಂಡರು. ತನ್ನ ದರ್ಶನ ಪಡೆಯುವ ಭಕ್ತರು ಮೊದಲು ತನ್ನ ಪರಮ ಶಿಷ್ಯನಾದ ಜಟ್ಟೆಪ್ಪನ ದರ್ಶನ ಪಡೆಯಬೇಕೆಂದು ಅಪ್ಪಣೆ ಇತ್ತರು. ಈ ಐತಿಹ್ಯ ತಿಳಿದ ಭಕ್ತರು ಮೊದಲು ಜಟ್ಟೆಪ್ಪನ ದರ್ಶನದ ನಂತರವೇ ಶ್ರೀಮರುಳಸಿದ್ಧರ ದರ್ಶನ ಪಡೆಯುವರು.

ದೇವಾಲಯ

ಈ ರೀತಿಯ ಐತಿಹ್ಯವುಳ್ಳ ಈ ಜಟ್ಟೆಪ್ಪನ ದೇವಾಲಯವು ಈ ಊರಿನ ದಕ್ಷಿಣಕ್ಕಿದೆ. ಅದೂ ಸಹ ಉತ್ತರಕ್ಕೆ ಮುಖಮಾಡಿದೆ. ಈ ದೇವಾಲಯದ ತಳಪಾಯದಲ್ಲಿ ಗರ್ಭಗೃಹ ಮತ್ತು ಅಂತರಾಳಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಅದರ ದ್ವಾರಪಟ್ಟಿಯಲ್ಲಿ ಶೈವ ದ್ವಾರಪಾಲಕರಿದ್ದಾರೆ. ಗರ್ಭಗೃಹಕ್ಕೆ ದ್ರಾವಿಡ ಮಾದರಿಯ ಶಿಖರವಿದೆ. ಈ ಶಿಖರಕ್ಕೆ ಶುಕನಾಸಿಯಿದೆ. ಅಂತರಾಳದ ದ್ವಾರಪಟ್ಟಗಳಲ್ಲಿ ಆನೆ, ಕುದುರೆಗಳ ಚಿತ್ರಗಳಿವೆ. ಈ ದೇವಾಲಯವನ್ನು ತಳವಾರರು ಪೂಜಿಸುವರು.

ಈ ದೇವಾಲಯದ ಭಿತ್ತಿಗಳನ್ನು ಶಿಲೆಯಿಂದ, ಮೇಲಿನಭಾಗವನ್ನು ಇಟ್ಟಿಗೆ, ಗಾರೆಯಿಂದ ನಿರ್ಮಿಸಲಾಗಿದೆ. ಅದರ ಎದುರಿಗೆ ಎತ್ತರದ ಶಿಲೆಯ ದೀಪ ಸ್ತಂಭವಿದೆ. ಆ ಕಂಬದಲ್ಲಿ ಭಕ್ತನೊಬ್ಬ ಕೈಮುಗಿದು ನಿಂತಿದ್ದಾನೆ. ಈ ರೀತಿಯ ಎತ್ತರದ ದೀಪ ಕಂಬಗಳು ಶ್ರೀ ಮರುಳಸಿದ್ಧ ದೇವಾಲಯದ ಸಂಕಿರಣದಲ್ಲಿವೆ. ಪಕ್ಕದಲ್ಲಿನ ಕಟ್ಟೆಯ ಮೇಲೆ ಪಾದಪೀಠವಿದೆ(*ಚಿತ್ರ ಸಂ. ೧೫೯*). ಈ ದೇವಾಲಯದ ಬದಿಗೆ ಒಂದು ಬಾವಿಯಿದ್ದು ಅದು ಹಾಳಾಗಿರುವುದು.

ವೀರಗಲ್ಲುಗಳು ಇತ್ಯಾದಿ

ಈ ದೇವಾಲಯದ ಮುಂದೆ ನಂದಿಕಂಬ ಮತ್ತು ವೀರರ ಕಲ್ಲುಗಳಿವೆ. ಒಂದು ವೀರಗಲ್ಲಿನಲ್ಲಿ ವೀರನೊಬ್ಬ ಬಾಣ ಮತ್ತು ಬಿಲ್ಲನ್ನು ಕೈಗಳಲ್ಲಿ ಹಿಡಿದುಕೊಂಡು

ನಿಂತಿದ್ದಾನೆ (*ಚಿತ್ರ ಸಂ. ೧೫೭*). ಬಿಲ್ಲನ್ನು ಬಾಣ ಬಿಡುವ ರೀತಿಯಲ್ಲಿ ಹಿಡಿದಿದ್ದಾನ. ಬಲಗೈಯಲ್ಲಿ ಹಿಡಿದ ಬಾಣವು ಕತ್ತಿಯಂತಿದೆ. ಆತನನ್ನು ಎರಡು ನಿಂತ ಕುದುರೆಗಳ ಮಧ್ಯ ಚಿತ್ರಿಸಲಾಗಿದೆ. ಈ ದೃಶ್ಯದ ಮೇಲಿನ ಭಾಗ ಅರ್ಧ ವೃತ್ತಾಕಾರದಲ್ಲಿದೆ. ಈ ವೀರನು ತುರುಬುಳ್ಳ ಜಡೆ, ಸರ, ಬಳೆ, ಕಡಗ ಇತ್ಯಾದಿಗಳನ್ನು ಧರಿಸಿರುವನು.

ಇನ್ನೊಂದು ವೀರಗಲ್ಲಿನಲ್ಲಿ ವೀರನೊಬ್ಬ ಕತ್ತಿಯನ್ನು ಹಿಡಿದು ನಿಂತಿದ್ದಾನೆ. ಕತ್ತಿಯನ್ನು ನೆಲಕ್ಕಿಟ್ಟಿರುವನು. ತುರುಬನ್ನು ಕಟ್ಟಿರುವನು. ಇವನೂ ಬಳೆ, ಸರ, ಕುಂಡಲ ಇತ್ಯಾದಿ ಧರಿಸಿದ್ದಾನೆ. (*ಚಿತ್ರ ಸಂ. ೧೫೮*)

ಜಟ್ಟೆಪ್ಪನ ದೇವಾಲಯ, ಎರಡು ವೀರಗಲ್ಲುಗಳು, ನಂದಿಕಂಬ, ದೀಪಸ್ತಂಭಗಳ ಶೈಲಿಯ ದೃಷ್ಟಿಯಿಂದ ಇವುಗಳ ಕಾಲ ಸು. ಕ್ರಿ.ಶ. ೧೬-೧೭ನೇ ಶತಮಾನ.

ಭೈರದೇವರ ಗುಡ್ಡ

ಉಜ್ಜಯಿನಿಯಿಂದ ಸುಮಾರು ಎರಡು ಕಿ.ಮೀ. ಅಂತರದಲ್ಲಿ ಭೈರವ ದೇವರ ಗುಡ್ಡವಿದೆ. ಆ ಗುಡ್ಡದಲ್ಲಿ ಕೋಟೆ ಗೋಡೆಗಳು ಇತ್ಯಾದಿ ಸಾಂಸ್ಕೃತಿಕ ಅವಶೇಷಗಳಿವೆ. ಅವುಗಳಲ್ಲಿ ಭೈರಸಿದ್ಧನ ವಿಗ್ರಹ ಮಹತ್ವದ್ದು. ಈ ಮೇಲೆ ಹೇಳಿದ ಜಟ್ಟೆಪ್ಪನ ಐತಿಹ್ಯದಲ್ಲಿ ಈ ಭೈರಸಿದ್ಧನ ವಿಷಯವನ್ನು ತಿಳಿಸಿದೆ. ಸುಳ್ಳು ಸುದ್ದಿ ನೀಡಿದ ಕಾರಣ ಭೈರಸಿದ್ಧನನ್ನು ಮರುಳಸಿದ್ಧರು ತಮ್ಮ ಕಾಲಿಂದ ಒದ್ದಾಗ ಆತ ಸೊಂಟ ಮುರಿದುಕೊಂಡು ಈ ಗುಡ್ಡದಲ್ಲಿ ಬಿದ್ದನೆಂದು ಹೇಳುತ್ತಾರೆ.[೫] ಈ ಕಾರಣದಿಂದ ಅಲ್ಲಿಯ ಈತನ ವಿಗ್ರಹದ ಸೊಂಟ ಭಾಗ ಮುರಿದಿದೆ ಎನ್ನುವರು.

ಆ ವಿಗ್ರಹ ಮೂಲತಃ ಭೈರವನದು. ಅದರಲ್ಲಿ ಭೈರವನಿಗೆ ನಾಲ್ಕು ಕೈಗಳಿದ್ದು ಅವುಗಳಲ್ಲಿ ಕತ್ತಿ, ತ್ರಿಶೂಲ, ಡಮರು ಮತ್ತು ಕಪಾಲಗಳಿವೆ (***ಚಿತ್ರ ಸಂ. ೧೬೦***). ದೇಹದ ವಿವಿಧ ಭಾಗಗಳಲ್ಲಿ ನಾಗಗಳನ್ನು ಆಭರಣಗಳನ್ನಾಗಿ ಧರಿಸಿದ್ದು ಬತ್ತಲೆಯಾಗಿ ತ್ರಿಭಂಗಿಯಲ್ಲಿ ನಿಂತಿರುವನು. ಬದಿಗಳಲ್ಲಿ ಪ್ರೇತಗಳಿವೆ. ಈ ಶಿಲ್ಪದ ಕಾಲ ಸು. ಕ್ರಿ.ಶ. ೧೩ನೇ ಶತಮಾನ.

ಇನ್ನಿತರ ಮಠ, ಗ್ರಾಮದೇವತೆಗಳು

ಉಜ್ಜಯಿನಿ ಗ್ರಾಮದಲ್ಲಿ ಇನ್ನೂ ಕೆಲವು ವೀರಶೈವ ಮಠಗಳು ಮತ್ತು ಗ್ರಾಮದೇವತೆಗಳ ದೇಗುಲಗಳಿವೆ. ಅವುಗಳಲ್ಲಿ ಚೌಕಿಮಠ, ಹಂಚಿನಮಠ, ಮಸ್ಲಟ್ಟಿ ಬಸಪ್ಪನ ಗುಡಿ, ಮಾಗಣ್ಣನಗುಡಿ, ಮಾರುತಿಗುಡಿ, ವನಿತಾದೇವಿ ಗುಡಿ, ಮಾರೆವ್ವನ ಗುಡಿ, ಬೀರೇಶ್ವರ ದೇವರ ಗುಡಿ, ಬ್ರಹ್ಮ ದೇವರ ಗುಡಿ, ಹುಣ್ಣೆ ಬಸಪ್ಪನ ಕಟ್ಟಿ ಮತ್ತು ಮೈಲಾರಲಿಂಗ ಇವು ಮುಖ್ಯವಾಗಿವೆ. ಈ ದೇವಾಲಯ-ಮಠಗಳು ಸುಮಾರು ನೂರು

ವರ್ಷ ಹಳೆಯವಾಗಿವೆ. ಶ್ರೀಪೀಠದ ಮಠದ ಕಣದಲ್ಲಿ ಕೇದಾರ ಸ್ವಾಮಿಗಳ ಗದ್ದುಗೆ, ಮಳೆಸ್ವಾಮಿ ಗದ್ದುಗೆ ಮತ್ತು ಚನ್ನಬಸವ ಸ್ವಾಮಿಗಳ ಗದ್ದುಗೆಗಳಿವೆ.

ಬಾವಿಗಳು :

ಉಜ್ಜಯಿನಿ ಗ್ರಾಮದಲ್ಲಿ ಅನೇಕ ಬಾವಿಗಳಿವೆ. ಅವುಗಳಲ್ಲಿ ಅರಸಿಬಾವಿ, ಹವಾಲ್ದಾರ ಬಾವಿ, ದಳವಾಯಿ ಬಾವಿ ಮತ್ತು ಗಂಜಿ ಬಾವಿ ಪ್ರಮುಖವಾಗಿವೆ. ಅರಸಿಬಾವಿಗೆ ಶ್ರೀಮಠದ ಬಾವಿ ಎನ್ನುವರು(*ಚಿತ್ರ, ಸಂ. ೧೬೧*). ಅದೊಂದು ಬೃಹದಾಕಾರದ ಆಯತಾಕಾರದ ಕಟ್ಟಡ. ನಾಲ್ಕು ಕಡೆಗಳಲ್ಲಿ ಗೋಡೆಗಳಿವೆ. ತಲಾ ಒಂದು ಗೋಡೆಯ ಮಧ್ಯ ಐವತ್ತಕ್ಕೂ ಹೆಚ್ಚು ಇಳಿಯಲು ಹತ್ತಲು ಮೆಟ್ಟಿಲುಗಳಿವೆ. ಹವಾಲ್ದಾರ ಬಾವಿ ಈ ಗ್ರಾಮದ ಕೆರೆಯ ಹಿಂದೆ ಗದ್ದೆಯಲ್ಲಿದೆ. ದಳವಾಯಿ ಬಾವಿಯು ಈ ಗ್ರಾಮದ ಪಶ್ಚಿಮಕ್ಕಿರುವ ಮೂಗಣ್ಣನ ಗುಡಿಯ ದಾರಿಯಲ್ಲಿದೆ. ಗಂಜಿಬಾವಿ ಮಾಚನಹಳ್ಳಿ ಕೆರೆಯ ಹತ್ತಿರವಿದೆ. ಇವುಗಳಲ್ಲದೆ ನೀರಿಲ್ಲದ ಅನೇಕ ಬಾವಿಗಳು ಇಲ್ಲಿವೆ. ಈ ಗ್ರಾಮಕ್ಕೆ ಬೇಕಾಗುವ ನೀರನ್ನು ಈ ಬಾವಿಗಳಿಂದಲೇ ಮೊದಲು ತರಲಾಗುತ್ತಿತ್ತು. ಕೆಲವು ಬಾವಿಗಳು ಇನ್ನೂ ಬಳಕೆಯಲ್ಲಿ ಉಳಿದಿವೆ.

ಈ ಊರಿನಲ್ಲಿ ಮೈಲಾರಲಿಂಗದ ಬಂಡೆಯಿದೆ. ಅದರ ಮೇಲೆ ಶಿವಲಿಂಗ ಮತ್ತು ಪಾದಮುದ್ರಿಕೆಗಳನ್ನು ಕೆತ್ತಲಾಗಿದೆ. ಹೀಗಾಗಿ ಈ ಊರಲ್ಲೂ ಮೈಲಾರಲಿಂಗದ ಆರಾಧನೆಗೆ ಪ್ರೋತ್ಸಾಹ ನೀಡಲಾಗಿದೆ ಎಂದು ತಿಳಿದು ಬರುವುದು.

ಅಡಿ ಟಿಪ್ಪಣಿ

೧. ಈ ವಿಷಯವನ್ನು ಉಜ್ಜಯಿನಿಯ ಶ್ರೀ ಚೆನ್ನವೀರಯ್ಯನವರು ತಿಳಿಸಿದರು.

೨. ಎಸ್. ಎಂ. ನಾಗಭೂಷಣ; ೧೯೯೪: 'ಉಜ್ಜಯಿನಿಯಲ್ಲಿ ಕೆಳದಿ ರಾಣಿ ವೀರಮ್ಮಾಜಿ ಸಮಾಧಿ ಶೋಧನೆ', **ಇತಿಹಾಸ ದರ್ಶನ**, ಸಂಪುಟ೯, ಪು. ೧೫೨, ೧೫೩. ಬೆಂಗಳೂರು.

೩. ಶಿವತತ್ವ ರತ್ನಾಕರ

೪. ಉಜ್ಜಯಿನಿಯ ಗೊಂಗಡಿ ಶ್ರೀ ಯು. ಎಂ. ವೀರಯ್ಯನವರು ತಿಳಿಸಿದರು.

೫. ಉಜ್ಜಯಿನಿಯ ಗೊಂಗಡಿ ಶ್ರೀ ಯು. ಎಂ. ವೀರಯ್ಯನವರು ತಿಳಿಸಿದರು.

ಶ್ರೀಪೀಠದ ಆದಾಯ

ಪಂಚಪೀಠಗಳಲ್ಲೇ ಉಜ್ಜಯಿನಿ ಸದ್ಧರ್ಮಪೀಠ ಶ್ರೀಮಂತವಾದದ್ದೆಂದು ಅದರಲ್ಲಿ ಸಂಪತ್ತು ನೋಡೆಂಬ ನಾಣ್ನುಡಿಯಿದೆ. ಶ್ರೀಪೀಠಕ್ಕೆ ಅನೇಕ ರೀತಿಯಿಂದ ಆದಾಯ ಬರುತ್ತಿದೆ. ಬರುವ ಆದಾಯವನ್ನು ಧಾರ್ಮಿಕ ಮತ್ತು ಲೌಕಿಕವೆಂದು ಪರಿಗಣಿಸಬಹುದು. ಪ್ರಸ್ತುತ ಅಧ್ಯಾಯದಲ್ಲಿ ಶ್ರೀಪೀಠದ ಆರ್ಥಿಕ ಸ್ಥಿತಿಯನ್ನು ಸ್ಥೂಲವಾಗಿ ಪರಿಚಯಿಸಲಾಗಿದೆ.

ಭೂಮಿ

ಶ್ರೀ ಮರುಳಸಿದ್ಧರು ಈ ಸ್ಥಳಕ್ಕೆ ಆಗಮಿಸಿ ಕಗ್ಗಲ್ಲ ಗೌಡನಿಂದ ಒಂಬತ್ತು ಪಾದ ಭೂಮಿಯನ್ನು ಪಡೆದು ಶ್ರೀ ಸದ್ಧರ್ಮಪೀಠವನ್ನು ಸ್ಥಾಪಿಸಿದರೆಂದು ಕೆಲವರು ಹೇಳುವರು. ಹೀಗಾಗಿ ಈ ಗ್ರಾಮದ ಸುತ್ತಲಿನ ಸುಮಾರು ೨ರಿಂದ ೫ ಕಿ.ಮೀ. ಸುತ್ತಳತೆಯ ಭೂಮಿ ಶ್ರೀಪೀಠದ್ದೆನ್ನುವರು. ಶ್ರೀಪೀಠದ ಇನಾಮ ಭೂಮಿಯು ಉಜ್ಜಯಿನಿಯಲ್ಲದೆ, ಮಂಗಾಪುರ, ಕೊಟ್ಟೂರು ಮುಂತಾದ ಊರುಗಳಲ್ಲಿವೆ.

ಶ್ರೀಪೀಠಕ್ಕೆ ೩೦೦ ಎಕರೆ ಭೂಮಿ ಇದೆ ಉಜ್ಜಯಿನಿಯಲ್ಲಿರುವ ಶ್ರೀಪೀಠದ ಕೆಲ ಭೂಮಿಯನ್ನು ಅನೇಕ ಆಯಗಾರರಿಗೆ ಉಂಬಳಿಯಾಗಿ ನೀಡಲಾಗಿದೆ. ಅವರು ವಂಶಪರಂಪರೆಯಾಗಿ ಶ್ರೀ ಪೀಠಕ್ಕೆ ಸೇವೆ ನಡೆಸಿಕೊಂಡು ಹೋಗಲು ಅವರಿಗೆ ಉಂಬಳಿಯಾಗಿ ಭೂಮಿಯನ್ನು ನೀಡಲಾಗಿದೆ.[೧] ವಿಭಿನ್ನ ಧರ್ಮದವರು ಶ್ರೀಪೀಠದ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗಲು ಸೇವೆಸಲ್ಲಿಸುವರು.

ಶ್ರೀ ಪೀಠಕ್ಕೆ ಆಗಮಿಸಿದ ಹೊರಗಿನ ಭಕ್ತರ ವಸತಿ ವ್ಯವಸ್ಥೆಯನ್ನು ಕಲ್ಪಿಸಲು ೫೦ ಎಕರೆ ಭೂಮಿಯನ್ನು ಸದರೀ ಹಂಚಿನ ಮಠಕ್ಕೆ ನೀಡಲಾಗಿದೆ. ಶ್ರೀಪೀಠಕ್ಕೆ ಆಗಮಿಸುವ ಶಿವಾಚಾರ್ಯರ ಮತ್ತು ಭಕ್ತರ ಪೂಜೆ ಮತ್ತು ಪ್ರಸಾದ ವ್ಯವಸ್ಥೆಗಾಗಿ ಬಾಟಾಸಾರ ನಿಮಿತ್ಯ ೬೦ ಎಕರೆ ಭೂಮಿಯನ್ನು ಚೌಕೀಮಠಕ್ಕೆ ಕೊಡಲಾಗಿದೆ. ಶ್ರೀಪೀಠದ ಶ್ರೀ ಮರುಳಸಿದ್ಧ ಸ್ವಾಮಿಯ ಪೂಜಾರಿಗಳಿಗೆ ೧೯ ಎಕರೆ, ಮಠದಯ್ಯನವರಿಗೆ ಮತ್ತು ಇನ್ನಿತರರಿಗೂ ಭೂಮಿಯನ್ನು ನೀಡಲಾಗಿದೆ. ಮಂಗಳಾರತಿಯ ಹಾಡನ್ನು ಹೇಳುವವರಿಗೆ ೯ ಎಕರೆ ೪೫ ಸೆಂಟ್ಸ್, ವಾದ್ಯಮೇಳದವರಿಗೆ ೧೨ ಎಕರೆ, ಕಾಶಿ ಧರಿಸುವವರಿಗೆ ೪ ಎಕರೆ ಭೂಮಿಯನ್ನು

ಉಂಬಳಿಯಾಗಿಕೊಡಲಾಗಿದೆ. ಶ್ರೀಪೀಠದ ಧರ್ಮಕಾರ್ಯನಡೆಸುವ ಇಸ್ಲಾಂ ಧರ್ಮದವರಿಗೂ ಶ್ರೀಪೀಠದಿಂದ ೪ ಎಕರೆ ಭೂಮಿಯನ್ನು ಮತ್ತು ಜಾಗಕೊಟ್ಟು ಅಲ್ಲೇ ಇಟ್ಟುಕೊಳ್ಳಲಾಗಿದೆ. ಬೆಳ್ಳಿ ಛತ್ರಿ, ಚಾಮರ ಮುಂತಾದ ಸೇವೆಯನ್ನು ಸಲ್ಲಿಸಲು ೫೦ ಎಕರೆ ಭೂಮಿಯನ್ನು ಶ್ರೀಪೀಠದಿಂದ ಅವರಿಗೆ ಉಂಬಳಿಯಾಗಿ ಕೊಡಲಾಗಿದೆ. ಆ ಭೂಮಿಯು ಸೊಕ್ಕೆ ಗ್ರಾಮ ದಾರಿಯಲ್ಲಿ ಮತ್ತು ಸ್ಥಳೀಯ ಜಟ್ಟೆಪ್ಪನ ಗುಡಿಯ ಮಗ್ಗಲಿಗಿದೆ. ಜಟ್ಟೆಪ್ಪನ ಗುಡಿ ಹತ್ತಿರದ ಭೂಮಿಯಲ್ಲಿ ಇಸ್ಲಾಂ ಧರ್ಮದವರು ಸಿದ್ಧಾ ಕಲಿ ಎಂಬ ಹೆಸರಿನ ದರ್ಗಾವನ್ನು ಕಟ್ಟಿರುವರು. ಸಿದ್ದ ಹೆಸರು ಇಲ್ಲಿ ಗಮನೀಯ. ಶ್ರೀಪೀಠದ ಸ್ವಾಮಿಯ ಹೆಸರು ಮರುಳಸಿದ್ದ ಇರುವುದನ್ನು ನೆನಪಿಸಿಕೊಳ್ಳಬಹುದು. ನಾಗೇನಹಳ್ಳಿಯ ಹತ್ತಿರ ಶ್ರೀಪೀಠದ ೨೮ ಎಕರೆ ಭೂಮಿಯನ್ನು ಜರ್ಮಲೆ ಪಾಳೆಗಾರರು ದತ್ತಿ ನೀಡಿದ್ದಾರೆ. ಅಲ್ಲಿ ೫ ಎಕರೆ ಎಣ್ಣೆ ಮಾನೆವ್ವಕ್ಕಾಗಿ ಮಾವಿನ ತೋಟವನ್ನು[೨] ಬಿಡಲಾಗಿದೆ. ಅದರ ವಿವರಗಳು ದೊರೆತಿಲ್ಲ.

ಕೊಟ್ಟೂರಿನ ಶ್ರೀಗುರುಸಿದ್ಧ ಸ್ವಾಮಿಗಳ ಗದ್ದುಗೆ ಪರಿಸರದಲ್ಲಿ ಶ್ರೀಪೀಠದ ೧೮ ಎಕರೆ ಭೂಮಿಯಿದೆ.[೩] ಅದರಲ್ಲಿ ಹುಣಸೆ, ಮಾವು, ಬೇವು ಇತ್ಯಾದಿ ಗಿಡಮರಗಳು ಇವೆ. ಅಲ್ಲಿಯ ಮತ್ತು ಇನ್ನಿತರ ಕಡೆಗಳ ಮರ, ಗಿಡ ಮತ್ತು ಭೂಮಿಗಳಿಂದ ಬರುವ ಉತ್ಪನ್ನ ಅಲ್ಲಿಯ ಸಕಲ ಚಟುವಟಿಕೆಗಳಿಗಾಗಿ ವಿನಿಯೋಗವಾಗುತ್ತಿದೆ. ಅನೇಕ ಗ್ರಾಮಗಳಲ್ಲಿ ಶ್ರೀಪೀಠಕ್ಕೆ ಭಕ್ತರು ನೀಡಿದ ಉಂಬಳಿ ಭೂಮಿಗಳ ಪಟ್ಟಿಯನ್ನು ಸಿದ್ಧಪಡಿಸುವ ಅವಶ್ಯಕತೆಯಿದೆ. ಶ್ರೀಪೀಠಕ್ಕೆ ಈ ದತ್ತಿ ಭೂಮಿಗಳಿಂದ ಹೇಳಿಕೊಳ್ಳುವಂತಹ ಉತ್ಪನ್ನ ಬರುತ್ತಿಲ್ಲ.

ಕಾಣಿಕೆ

ನಿತ್ಯ ಭಕ್ತಾದಿಗಳು ಶ್ರೀಪೀಠದ ಜಗದ್ಗುರುಗಳ ಮತ್ತು ಶ್ರೀಮರುಳಸಿದ್ಧ ಸ್ವಾಮಿಯ ದರ್ಶನಕ್ಕೆ ಆಗಮಿಸುವರು. ಶ್ರೀಮರುಳಸಿದ್ಧ ಸ್ವಾಮಿಯ ಹಬ್ಬ, ಉತ್ಸವ, ಅಮವಾಸ್ಯೆ ಮುಂತಾದ ದಿವಸಗಳಲ್ಲಿ ಭಕ್ತಾಧಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗುತ್ತಿದೆ. ಅವರು ಅಲ್ಲಿಯ ನಿತ್ಯಾನ್ನಕ್ಕೆ, ಅಮವಾಸ್ಯೆ ಮತ್ತು ಕಾರ್ತಿಕೋತ್ಸವ ದಿವಸಗಳಲ್ಲಿ ನಡೆಸುವ ಪ್ರಸಾದಕ್ಕೆ ಹಾಗೂ ಶ್ರೀಸ್ವಾಮಿಯ ರುದ್ರಾಭಿಷೇಕ ನಿಮಿತ್ತ ಕಾಣಿಕೆ ನೀಡುವರು. ಈ ನಿಮಿತ್ತ ಭಕ್ತರು ಶ್ರೀಪೀಠದಲ್ಲಿ ವಿವಿಧ ಸಂದರ್ಭಗಳಲ್ಲಿ ಪ್ರಸಾದ ವ್ಯವಸ್ಥೆ ಕಲ್ಪಿಸಲು ಹಣವನ್ನು ದೇಣಿಗೆಯಾಗಿ ಕೊಡಲು ಗೊತ್ತು ಪಡಿಸಲಾಗಿದೆ. ನಿತ್ಯಾನ್ನಕ್ಕೆ ರೂಪಾಯಿ ೫೦೦೧ ಹಾಗೂ ರುದ್ರಾಭಿಷೇಕ್ಕಾಗಿ ರೂಪಾಯಿ ೧೦೦೮/- ಗೊತ್ತುಪಡಿಸಲಾಗಿದೆ. ಇದಕ್ಕಾಗಿ ೧೦೧೦ಕ್ಕೂ ಹೆಚ್ಚು ಭಕ್ತರು ದೇಣಿಗೆ ನೀಡಿದ್ದಾರೆ. ಅಮವಾಸ್ಯೆ ದಿವಸದ ಪ್ರಸಾದ ವ್ಯವಸ್ಥೆಗೆ ರೂಪಾಯಿ ೧೫೦೦೦/- ಗೊತ್ತು ಪಡಿಸಿದ್ದು

ಅದಕ್ಕೆ ಹೆಚ್ಚು ಭಕ್ತರು ದೇಣಿಗೆ ನೀಡಿದ್ದಾರೆ. ಕಾರ್ತಿಕೋತ್ಸವಕ್ಕೆ ರೂಪಾಯಿ ೩೦೦೮/- ಗೊತ್ತುಪಡಿಸಿದ್ದು ಅದಕ್ಕೂ ಹೆಚ್ಚು ಭಕ್ತರು ದೇಣಿಗೆ ನೀಡಿದ್ದಾರೆ. ಈ ಎಲ್ಲಾ ಕಾರ್ಯಗಳನ್ನು ದೇಣಿಗೆಯಿಂದ ನಡೆಸುವರು.

ಭಕ್ತರು ಶ್ರೀಪೀಠದ ಹೊಸ ಕಟ್ಟಡದ ನಿರ್ಮಾಣಕ್ಕೆ ಮತ್ತು ಜೀರ್ಣೋದ್ಧಾರಕ್ಕಾಗಿ ಕಾಣಿಕೆಯನ್ನು ನೀಡುವರು. ಹಾಗೂ ಶುಲ್ಕ-ಕಾಣಿಕೆಯ ಹಣವನ್ನು ಶ್ರೀಪೀಠದ ವ್ಯವಸ್ಥೆ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಬಳಸುವರು. ಕೃಷಿಕ ಭಕ್ತರು ತಾವು ಬೆಳೆದ ದವಸ, ಧಾನ್ಯ, ಹಣ್ಣು ಹಂಪಲು, ತರಕಾರಿ ಇತ್ಯಾದಿ ವಸ್ತುಗಳನ್ನು ಶ್ರೀಪೀಠಕ್ಕೆ ಅರ್ಪಿಸುವರು. ಅವುಗಳನ್ನು ಶ್ರೀಪೀಠದಲ್ಲಿ ನಿತ್ಯಾನ್ನ ಭೋಜನಕ್ಕಾಗಿ ಉಪಯೋಗಿಸಲಾಗುತ್ತದೆ.

ಕಾರ್ತೀಕ ಮಾಸದಲ್ಲಿ ಶ್ರೀ ಮರುಳಸಿದ್ಧೇಶ್ವರ ಸ್ವಾಮಿಯ ಲಕ್ಷ ದೀಪೋತ್ಸವ ಮತ್ತು ತೈಲಾಭಿಷೇಕ ಇತ್ಯಾದಿ ಹಬ್ಬ-ಉತ್ಸವ ಕಾರ್ಯಗಳನ್ನು ಜರುಗಿಸಲು ಭಕ್ತರಿಂದ ಸಂಗ್ರಹಿಸಲಾಗುತ್ತಿದೆ. ಭಕ್ತರ ಉದಾರ ಕಾಣಿಕೆಯಿಂದ ಶ್ರೀಪೀಠದಲ್ಲಿ ಅನೇಕ ಸಾಂಸ್ಕೃತಿಕ ಚಟುವಟಿಕೆಗಳು ನಿರಂತರವಾಗಿ ಜರುಗುತ್ತಿವೆ. ಜೊತೆಯಲ್ಲಿ ಭವ್ಯವಾದ ವಿವಿಧ ಕಟ್ಟಡಗಳ ನಿರ್ಮಾಣ ಕಾರ್ಯಗಳೂ ಭರದಿಂದ ಸಾಗುತ್ತಿವೆ. ಈಗಿನ ಶ್ರೀಪೀಠದ ಜಗದ್ಗುರುಗಳಾದ ಶ್ರೀ ೧೦೦೮ ಜಗದ್ಗುರು ಮರುಳಸಿದ್ಧ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ಶ್ರೀಪೀಠದ ಅಭಿವೃದ್ಧಿಗೆ ಅನೇಕ ಯೋಜನೆಗಳನ್ನು ಹಾಕಿಕೊಂಡು ಅವುಗಳನ್ನು ಕಾರ್ಯರೂಪಕ್ಕೆ ತರಲು ಸದಾ ಶ್ರಮವಹಿಸುತ್ತಿರುವುದು ಗಮನೀಯ.

ಶ್ರೀಪೀಠದ ಅನಾಥ ಪ್ರಸಾದ ನಿಲಯಗಳು ಹರಪನಹಳ್ಳಿ, ಬಳ್ಳಾರಿ, ಕೊಟ್ಟೂರು ಮುಂತಾದ ಕಡೆಗಳಲ್ಲಿವೆ. ಮೈಸೂರಿನಲ್ಲಿ ಒಂದು ಗುರುಕುಲವಿದೆ.

ಅಡಿ ಟಿಪ್ಪಣಿ

೧. ಈ ವಿಷಯವನ್ನು ಶ್ರೀಪೀಠದ ಕಚೇರಿಯಿಂದ ಪಡೆಯಲಾಗಿದೆ.

೨. ಉಜ್ಜಯಿನಿ ಗ್ರಾಮದ ಶ್ರೀ ಯು. ಎಂ. ವೀರಯ್ಯನವರು ತಿಳಿಸಿದ್ದಾರೆ.


೩. ಈ ವಿಷಯವನ್ನು ಕೊಟ್ಟೂರಿನ ಮಾಜಿ ಪುರಸಭಾ ಅಧ್ಯಕ್ಷರಾದ ಶ್ರೀ ಕೆ. ಸಿದ್ಧಲಿಂಗನಗೌಡರು ತಿಳಿಸಿದ್ದಾರೆ.



೭೫. ಉ॥ಪ॥ಪೀ॥ ಉತ್ತರ ದಿಕ್ಕಿನ ಉಯ್ಯಾಲೆ ಕಂಬಗಳು.




೭೮. ಸವೀಕರಿಸಿದ ತಂಗಾಳಿ ಗೋಪುರ.



೭೬. ಉ॥ಪ॥ಪೀ॥ ಉತ್ತರ ದಿಕ್ಕಿನ ಮಹಾದ್ವಾರ - ತಂಗಾಳಿ ಗೋಪುರ.



೭೭. ಉ॥ಪ॥ಪೀ॥ ಉತ್ತರ ದಿಕ್ಕಿನ ಮಹಾದ್ವಾರದ ಹೊರಬಾಗಿಲ ಚೌಕಟ್ಟು



೭೯. ಉಜ್ಜಯಿನಿ ಸದ್ಧರ್ಮ ಪೀಠದ ತಳಪಾಯ ನಕ್ಷೆ.

೮೦. ಉ॥ಸ॥ಪೀ॥ ಮುಂಭಾಗದ ಸಮುಚ್ಚಯ.






೮೧. ಉ॥ಸ॥ಪೀ॥ ಹಿಂಭಾಗದ ಸಮುಚ್ಚಯ.

೮೨. ಶ್ರೀ ಜ. ಮರುಳಸಿದ್ಧೇಶ್ವರ ದೇವಾಲಯದಲ್ಲಿರುವ ಶಿವಲಿಂಗ.



ಉಜ್ಜಯಿನಿ ಸದ್ಧರ್ಮ ಪೀಠದ ಒಳಗಡೆ ಕೇವಲ ಶ್ರೀ ಜ. ಮರುಳಸಿದ್ಧ ದೇವಾಲಯದ ತಳಪಾಯ



೮೨. ಉಜ್ಜಯಿನಿ ಸದ್ಧರ್ಮ ಪೀಠದ ತಳಪಾಯ ನಕ್ಷೆ.


ತಯಾರಿಸಿದವರು : ಶ್ರೀ ತೇರದಾಳ ಮತ್ತು ಶ್ರೀಮತಿ ಹೇಮಾ ಕುಲಕರ್ಣಿ



೮೭. ಶ್ರೀ ಜ. ಮರುಳಸಿದ್ಧೇಶ್ವರ
ದೇವಾಲಯದ ಅಂತರಾಳದ
ಬಾಗಿಲ ಚೌಕಟ್ಟು.




೮೬. ಶ್ರೀ ಜ. ಮರುಳಸಿದ್ಧೇಶ್ವರ
ದೇವಾಲಯದ ಗರ್ಭಗೃಹದ
ಬಾಗಿಲ ಚೌಕಟ್ಟು.



೮೮. ಶ್ರೀ ಜ. ಮರುಳಸಿದ್ಧೇಶ್ವರ
ದೇವಾಲಯದ ಸಭಾಮಂಟಪದ ಛತ್ತಿನಲ್ಲಿ
ಕಮಲದ ಅಲಂಕರಣವುಳ್ಳ ವಿತಾನ.
(ಭುವನೇಶ್ವರಿ)






೮೯. ಶ್ರೀ ಜ.
ಮರುಳಸಿದ್ಧೇಶ್ವರ
ದೇವಾಲಯದ
ಸಭಾಮಂಟಪದಲ್ಲಿರುವ
ಕಂಬಗಳು.



೯೦. ದೇವಕೋಷ್ಠದಲ್ಲಿ ಗಣೇಶ.



೯೨. ದೇವಕೋಷ್ಠದಲ್ಲಿ ಯತಿ
(ಪಂಡಿತಾರಾಧ್ಯ).




೯೧. ಉತ್ತರಾಂಗದಲ್ಲಿ ನೃತ್ಯ
ಗಣೇಶ ಇತ್ಯಾದಿ.



೯೩. ಉತ್ತರಾಂಗದಲ್ಲಿ ಯತಿ.



೯೫. ಉತ್ತರಾಂಗದಲ್ಲಿ ಯತಿ ಇತ್ಯಾದಿ.



೯೪. ಗರ್ಭಗೃಹದಲ್ಲಿ ಚತುರ್ಭುಜ ಯತಿ (ಮರುಳಸಿದ್ಧೇಶ್ವರ).



೯೬. ದೇವಕೋಷ್ಠದಲ್ಲಿ ಯತಿ (ಏಕೋರಾಮಾರಾಧ್ಯ).



೯೭. ಉತ್ತರಾಂಗದಲ್ಲಿ ಯತಿ ಇತ್ಯಾದಿ.




೯೮. ಗರ್ಭಗೃಹದಲ್ಲಿ ಗೋಪಾಲಕೃಷ್ಣ.



೧೦೦. ದೇವಕೋಷ್ಠದಲ್ಲಿ ಯತಿ (ಭಕ್ತಿ ವಿಭೂಷಣ).




೯೯. ಉತ್ತರಾಂಗದಲ್ಲಿ ಗೋಪಾಲಕೃಷ್ಣ, ನರಸಿಂಹ ಮತ್ತು ವರಾಹ ಇತ್ಯಾದಿ.



೧೦೧. ಉತ್ತರಾಂಗದಲ್ಲಿ ಯತಿ ಇತ್ಯಾದಿ.



೧೦೪. ಉತ್ತರಾಂಗದಲ್ಲಿ ತ್ರಿಮೂರ್ತಿಗಳು ಇತ್ಯಾದಿ.



೧೦೨. ದೇವಕೋಷ್ಠದಲ್ಲಿ ಯತಿ.



೧೦೩. ಗರ್ಭಗೃಹದಲ್ಲಿ ಯತಿ.




೧೦೫. ದೇವಕೋಷ್ಠದಲ್ಲಿ ಯತಿ.




೧೦೬. ದೇವಕೋಷ್ಠದಲ್ಲಿ ಯತಿ.




೧೦೭. ಉತ್ತರಾಂಗದಲ್ಲಿ ಸೂರ್ಯ ಇತ್ಯಾದಿ.



೧೦೮. ಉತ್ತರಾಂಗದಲ್ಲಿ ಯತಿ ಇತ್ಯಾದಿ.



೧೧೦. ಉತ್ತರಾಂಗದಲ್ಲಿ ವೀರಭದ್ರನ ಬದಿಗಳಲ್ಲಿ ನರಸಿಂಹ ಮತ್ತು ಯತಿ ಇತ್ಯಾದಿ.



೧೧೨. ಉತ್ತರಾಂಗದಲ್ಲಿ ಯತಿ ಇತ್ಯಾದಿ.



೧೦೯. ಗರ್ಭಗೃಹದಲ್ಲಿ ವೀರಭದ್ರ.




೧೧೧. ದೇವಕೋಷ್ಠದಲ್ಲಿ ಯತಿ.



೧೧೫. ದೇವಕೋಷ್ಠದಲ್ಲಿ ಯತಿ



೧೧೬. ಪಶ್ಚಿಮ ಮುಖಮಂಟಪದ ಭಕ್ತನ ಶಿಲ್ಪ



೧೧೭. ಸಭಾಮಂಟಪದ ಉತ್ತರ ದ್ವಾರದ ಬದಿಗಿನ ಭಕ್ತನ ಶಿಲ್ಪ



೧೧೮. ಮಹಾಮಂಟಪದಲ್ಲಿ ವೀರಭದ್ರ.



೧೧೯. ಶ್ರೀ ಜ. ಮರುಳಸಿದ್ಧೇಶ್ವರ ದೇವಾಲಯದ ಶಿಖರದ ಮುಂದೆ ನಂದಿ ವಿಗ್ರಹ



೧೨೦. ಶ್ರೀ ಜ. ಮರುಳಸಿದ್ಧೇಶ್ವರ ದೇವಾಲಯದ ಶಿಖರ



೧೨೧. ಶ್ರೀ ಜ. ಮರುಳಸಿದ್ಧೇಶ್ವರ ದೇವಾಲಯದ ಭಿತ್ತಿಯಲ್ಲಿ ದೇವಕೋಷ್ಠಗಳು




೧೨೨. ಶ್ರೀ ಜ. ಮರುಳಸಿದ್ಧೇಶ್ವರ ದೇವಾಲಯದ ಇನ್ನಿತರ ಭಾಗಗಳು



೧೨೩. ನಂದಿ ವಿಗ್ರಹ.



೧೨೪. ಶ್ರೀ ಜ. ಮರುಳಸಿದ್ಧೇಶ್ವರ
ದೇವಾಲಯದ ಉತ್ತರ ದ್ವಾರ.




೧೨೫. ಶ್ರೀ ಜ. ಮರುಳಸಿದ್ಧೇಶ್ವರ ದೇವಾಲಯದ
ಉತ್ತರ ದ್ವಾರ ಚೌಕಟ್ಟಿನ ಲಲಾಟ ಪಟ್ಟಿಕೆ.




೧೨೬. ಶ್ರೀ ಜ. ಮರುಳಸಿದ್ಧೇ
ದೇವಾಲಯದ ಎದುರಿನಲ್ಲಿ
ಯತಿಗಳುಳ್ಳ ಸ್ತಂಭ-ಮಕರ ತೋ



೧೨೭. ಮಕರ ತೋರಣದ ಯತಿಗಳ ಮುಂಭಾಗದ ದೃಶ್ಯ.



೧೨೮. ಮಕರ ತೋರಣದ ಯತಿಗಳ ಹಿಂಭಾಗದ ದೃಶ್ಯ.



೧೨೯. ಗೌರಮ್ಮನ ದೇವಾಲಯ.



೧೨೯. ಗೌರಮ್ಮನ ಮೂರ್ತಿ



೧೩೦. ಬಂಗಾರದ ಬಸವಣ್ಣನ ದೇವಾಲಯ.



೧೩೧. ಬಂಗಾರದ ಬಸವಣ್ಣನ
ದೇವಾಲಯ ಪಾರ್ಶ್ವಭಾಗ.



೧೩೨. ನವಗ್ರಹ ಪಟ್ಟಿಕೆಯಲ್ಲಿ
ಶ್ರೀ ಜ. ಮರುಳಸಿದ್ಧೇಶ್ವರ ಇತ್ಯಾದಿ.



೧೩೩. ನಂದಿ ದೇವಾಲಯ.



೧೩೪. ನಂದಿ ದೇವಾಲಯದಲ್ಲಿ
ಶ್ರವಣಕುಮಾರ.



೧೩೫. ನಂದಿ ದೇವಾಲಯದಲ್ಲಿ
ಗಂಡುಬ್ರಹ್ಮಯ್ಯರ ವಿಗ್ರಹ.



೧೩೬. ಶ್ರೀಪೀಠ
ನವೀಕರಿಸಿದ ಮಠದ
ಪ್ರವೇಶದ್ವಾರ.



೧೩೭. ಶ್ರೀಪೀಠದ ಮಠದ ಹಳೆಯ ಪ್ರವೇಶದ್ವಾರ.



೧೩೮. ಶ್ರೀಮಠದ ಮುಖಮಂಟಪದ
ಕಟ್ಟೆಯ ಮೇಲಿನ ಕಟ್ಟಿಗೆಯ ಕಂಬ.



೧೩೯. ಶ್ರೀಮಠದ ಮುಖಮಂಟಪದ
ಕಟ್ಟೆಯ ಮೇಲಿನ ಕಟ್ಟಿಗೆಯ ಕಂಬ.



೧೪೧. ಶ್ರೀಮಠದ ಮುಖಮಂಟಪದ
ಕಟ್ಟೆಯ ಮೇಲಿನ ಕಟ್ಟಿಗೆಯ ಕಂಬ.



೧೪೦. ಶ್ರೀಮಠದ ಮುಖಮಂಟಪದ
ಕಟ್ಟೆಯ ಮೇಲಿನ ಕಟ್ಟಿಗೆಯ ಕಂಬ.



೧೪೨. ಶ್ರೀಮಠದ ಮುಖಮಂಟಪದ ಕಟ್ಟೆಯ ಮೇಲಿನ ಕಟ್ಟಿಗೆಯ ಕಂಬ.



೧೪೩. ಶ್ರೀಮಠದ ಮುಖಮಂಟಪದ ಕಟ್ಟೆಯ ಮೇಲಿನ ಕಟ್ಟಿಗೆಯ ಕಂಬ.



೧೪೪. ಶ್ರೀಮಠದ ಕಟ್ಟಿಗೆಯ ಮಹಾದ್ವಾರ ಚೌಕಟ್ಟು





೧೪೫. ಶ್ರೀಮಠದಲ್ಲಿ ದಾರುಕಾಚಾರ್ಯರ ಕಂಚಿನ ವಿಗ್ರಹ ಮತ್ತು ತೋರಣದ ಮುಂದೆ ಗಣೇಶನ ಶಿಲಾವಿಗ್ರಹ


೧೪೬. ಶ್ರೀಮಠದಲ್ಲಿ ದಾರುಕಾಚಾರ್ಯರು ಶಿವಲಿಂಗದಲ್ಲಿ ಅವತರಿಸಿದ ವಿಗ್ರಹ.





೧೪೭. ಶ್ರೀಮಠದ ಒಳಗಡೆಯ ಶಿವಪೂಜಾ ಮಂದಿರದ ಬಾಗಿಲು.

೧೪೮. ಶ್ರೀಮಠದ ಒಳಗಡೆ ಕಟ್ಟಿಗೆಯ ದ್ವಾರಫಲಕದಲ್ಲಿ ಗಜಲಕ್ಷ್ಮಿ



೧೪೮. ಶ್ರೀಪೀಠದ ನ್ಯಾಯಾಲಯದಲ್ಲಿರುವ ಕಂಬದಲ್ಲಿ ಕಿರು ವಿಗ್ರಹ (ಮಲೆನಾಡಿನ ದುರ್ಗವ್ವ).



೧೪೯. ನ್ಯಾಯಾಲಯದ ಬದಿಗಿರುವ ಕೋಣೆಯ ಬಾಗಿಲ ಚೌಕಟ್ಟು



೧೫೦. ಶ್ರೀಪೀಠದ ಪಂಚಾಚಾರ್ಯರ ಮಂಟಪ ಹಾಗೂ ಶ್ರೀ ಸಿದ್ಧೇಶ್ವರ ಭವನ



೧೫೧. ಶ್ರೀ ಜ. ಸಿದ್ಧಲಿಂಗ ಮಹಾಸ್ವಾಮಿಗಳ ಗದ್ದುಗೆಯ ಮುಂಭಾಗ.



೧೫೨. ವಿದ್ಯಾರ್ಥಿಗಳು ಶ್ರೀ ಸನ್ನಿಧಿಗಳ ಸಾನ್ನಿಧ್ಯದಲ್ಲಿ ಪ್ರಾರ್ಥನೆ ಸಲ್ಲಿಸುತ್ತಿರುವುದು.



೧೫೩. ಉಜ್ಜಯಿನಿ ತಲೆಬೋಳು ಸಿದ್ಧಪ್ಪನ ದೇವಾಲಯ.



೧೫೪. ಉಜ್ಜಯಿನಿ ಗ್ರಾಮದ ಹರಿಜನ ಕೇರಿಯಲ್ಲಿರುವ ಶ್ರೀ ಜ. ಮರುಳಸಿದ್ಧೇಶ್ವರ ದೇವಾಲಯ.



೧೫೫. ಉಜ್ಜಯಿನಿ ಗ್ರಾಮದ ಶ್ರೀ ಸಿದ್ಧಲಿಂಗಯ್ಯನವರ ಮನೆ ಮುಂದಿನ ನಂದಿ ಸ್ತಂಭ.



೧೫೬. ಉಜ್ಜಯಿನಿ ಗ್ರಾಮದ ಶ್ರೀ ಜಟ್ಟೆಪ್ಪನ ದೇವಾಲಯ



೧೫೭. ಜಟ್ಟೆಪ್ಪನ ಗುಡಿ ಮುಂದಿನ ವೀರಗಲ್ಲು



೧೫೮. ಜಟ್ಟೆಪ್ಪನ ಗುಡಿ ಮುಂದಿನ ವೀರಗಲ್ಲು



೧೫೯. ಜಟ್ಟೆಪ್ಪನ ಗುಡಿ ಮುಂದಿನ ಪಾದಪೀಠ.

ಉಜ್ಜಯಿನಿ ಮಸ್ಲಟ್ಟಿ ಬಸಪ್ಪನ ಮಳೆ ಪವಾಡ

ಉಜ್ಜಯಿನಿ ಗ್ರಾಮದ ದಕ್ಷಿಣಕ್ಕೆ ಮಂಗಾಪುರಕ್ಕೆ ಹೋಗುವ ದಾರಿಯ ಸಮೀಪ ಒಂದು ಹೊಲದಲ್ಲಿ ಬಚ್ಚಲಿನಂತಹ ಒಂದು ಕಟ್ಟೆಯಿದೆ. ಅದರಲ್ಲಿ ಒಂದು ನಂದಿ ವಿಗ್ರಹವಿದೆ. ಈ ವಿಗ್ರಹವನ್ನು ಮಸ್ಲಟ್ಟಿ ಬಸಪ್ಪನೆಂದು ಕರೆಯುವರು. ಈ ನಂದೀಕಟ್ಟೆ ಸುಮಾರು ಒಂದು ಶತಮಾನದಷ್ಟು ಹಳೆಯದು. ಐತಿಹ್ಯದ ಪ್ರಕಾರ ಮಸ್ಲಟ್ಟಿ ಬಸಪ್ಪ ಶ್ರೀ ಮರುಳಸಿದ್ಧೇಶ್ವರರ ಒಬ್ಬ ಪರಮಶಿಷ್ಯ. ಬರಬಿದ್ದರೆ ಸ್ಥಳಿಕರು ಮಳೆತರಿಸಲು ಈ ದೇವರ ಆರಾಧನೆಯನ್ನು ತುಂಬಾ ವೈಶಿಷ್ಟ್ಯಪೂರ್ಣವಾಗಿ ನಡೆಸುವರು. ಆ ಸಂದರ್ಭದಲ್ಲಿ ಉಜ್ಜಯಿನಿಯಿಂದ ಸಿಂದೋಗಿಯ ಶ್ರೀ ಮರುಳಸಿದ್ಧಸ್ವಾಮಿಯ ಗದ್ದುಗೆಗೆ ಹೋಗಿ ಬರುವ ಪರಂಪರೆ ಬೆಳೆದುಕೊಂಡಿದೆ.

ಮಳೆತರಿಸುವ ಪರಂಪರೆ

ಉಜ್ಜಯಿನಿಯಲ್ಲಿ ಮಳೆತರಿಸಲು ಅಲ್ಲಿಯ ವಿವಿಧ ಮತದವರು ಸೇರಿ ವಿಶಿಷ್ಟ ರೀತಿಯಲ್ಲಿ ಪೂಜಾ ಕಾರ್ಯಕ್ರಮವನ್ನು ಒಂಬತ್ತು ದಿವಸಗಳ ಕಾಲ ಆಚರಿಸುವರು. ಸಕಾಲದಲ್ಲಿ ಮಳೆ ಬೀಳದಿದ್ದರೆ ಕೊಪ್ಪಳ (ಜಿಲ್ಲೆಯ) ಹತ್ತಿರದ ಹಿರೇಸಿಂದೋಗಿಯ ಶ್ರೀ ಮರುಳಸಿದ್ಧ ಸ್ವಾಮಿಯ ಗದ್ದುಗೆಗೆ ಉಜ್ಜಯಿನಿಯಿಂದ ಒಂಬತ್ತು ಜನ ಆಯಗಾರರು ಕುಲಕ್ಕೆ ಒಬ್ಬರಂತೆ ಹೋಗುವರು. ಅದರಲ್ಲಿ ಕುರುಬರು, ಅಗಸರು, ಬಡಿಗೇರರು, ನಾಯಕರು, ಲಿಂಗಾಯತರು ಇನ್ನುಳಿದವರು ಇರುತ್ತಾರೆ. ಅವರೆಲ್ಲ ಸೇರಿ ಮೊದಲು ಹೊಸ ಕಂಬಳಿಯನ್ನು ಹಿರೇಸಿಂದೋಗಿಗೆ ತೆಗೆದುಕೊಂಡು ಹೋಗುವ ಬಗ್ಗೆ ನಿರ್ಣಯ ತೆಗೆದುಕೊಳ್ಳುವರು. ಆ ನಿರ್ಣಯ ಹಿರೇಸಿಂದೋಗಿಯಲ್ಲಿರುವ ಶ್ರೀ ಮರುಳಸಿದ್ಧನ ಪೂಜಾರಿಗಳಿಗೆ ಯಾವುದೋ ಒಂದು ರೂಪದಲ್ಲಿ ಗೊತ್ತಾಗುತ್ತದೆಯಂತೆ. ಅದು ಸ್ವಪ್ನಾವಸ್ಥೆಯಲ್ಲಾಗಲೀ ಅಥವಾ ದೇವಸ್ಥಾನದ ಗಂಟೆಗಳು ತಾವಾಗಿಯೇ ಬಾರಿಸುವ ಮೂಲಕವಾಗಲಿ ಅಭಿವ್ಯಕ್ತಗೊಳ್ಳುವುದು. ತದನಂತರ ಅಲ್ಲಿಯ ಮಠ, ದೇವಸ್ಥಾನಗಳಿಗೆ ಸುಣ್ಣ ಬಳಿದು ಸ್ವಾಮಿಯನ್ನು ಎದುರುಗೊಳ್ಳಲು ಸಜ್ಜಾಗುವರಂತೆ.

ಈ ಕಾರ್ಯಕ್ರಮದ ಯೋಜನೆಯು ಗುರುವಾರದಿಂದ ಆರಂಭವಾಗುವುದು. ‿ ದಿನ ಬೆಳಿಗ್ಗೆ ಆ ಊರಿನ ಪ್ರತಿಯೊಬ್ಬ ಕುರುಬ ತನ್ನ ಮನೆಯಲ್ಲಿ ಉಣ್ಣೆಯನ್ನು

ಮಡಿಯಿಂದ ಸಂಗ್ರಹಿಸುವರು. ಆ ಉಣ್ಣೆಯಿಂದ ಐದು ಮೊಳ ಕಂಬಳಿಯನ್ನು ಒಂದೇ ದಿನದಲ್ಲಿ ನೇಯುವನು. ಆ ಕಂಬಳಿಯನ್ನು ಅಲ್ಲಿಯ ಅರಸಿ ಬಾವಿಯಲ್ಲಿ ಮಡಿ ಮಾಡಿ ಕುರುಬರ ದೇವರಾದ ಬೀರದೇವರ ಗುಡಿಯಲ್ಲಿ ಇಡುವರು. ಪೂಜಾರಿ ಅದಕ್ಕೆ ನೈವೇದ್ಯ ಮಾಡುವನು.

ಮಾರನೆಯ ದಿನ ಶುಕ್ರವಾರ ಬೆಳಿಗ್ಗೆ ದೈವದವರು ಶ್ರೀ ಉಜ್ಜಯನಿ ಸದ್ಧರ್ಮ ಪೀಠದಲ್ಲಿ ಸೇರುವರು ಮತ್ತು ಒಂಬತ್ತು ಜನ ಆಯಗಾರರನ್ನು ಸಿಂದೋಗಿಗೆ ಕಂಬಳಿಯನ್ನು ಕಾಲ್ನಡಿಗೆಯಲ್ಲಿ ತೆಗೆದುಕೊಂಡು ಹೋಗಲು ಆರಿಸುವರು. ಅವರಿಗೆ ಐದು ದಿವಸಗಳಿಗೆ ತಗಲುವ ಖರ್ಚನ್ನು ದೈವದವರಿಂದ ಸಂಗ್ರಹಿಸುವರು. ಸಿಂದೋಗಿಯ ಮಠದಲ್ಲಿ ತಗಲುವ ಖರ್ಚನ್ನು ಶ್ರೀಪೀಠದಿಂದ ಕೊಡುವ ವ್ಯವಸ್ಥೆ ಮಾಡುವರು. ದಾರಿಯಲ್ಲಿ ಊಟಕ್ಕಾಗಿ ಅವರು ತಮ್ಮ ಮನೆಯಲ್ಲಿ ಮಡಿಯಿಂದ ಬುತ್ತಿ ತಯಾರಿಸಿ ಚೀಲದಲ್ಲಿ ಕಟ್ಟಿಕೊಳ್ಳುವರು.

ಶನಿವಾರ ಬೆಳಿಗ್ಗೆ ೭.೦೦ ಗಂಟೆಯ ಒಳಗಾಗಿ ಶ್ರೀಪೀಠದ ಶ್ರೀಮರುಳಸಿದ್ಧ ದೇವಸ್ಥಾನದಲ್ಲಿ ಬುತ್ತಿ ಗಂಟಿನೊಂದಿಗೆ ಒಂದು ಬೆತ್ತ ಮತ್ತು ಹೊಸ ಕಂಬಳಿಯನ್ನು ಹಾಕಿಕೊಂಡು ಎಲ್ಲರೂ ಸೇರುವರು. ಅಷ್ಟರಲ್ಲಿ ಅಲ್ಲಿಯ ದೈವದವರು ಸಕಲ ಮಂಗಳ ವಾದ್ಯದೊಂದಿಗೆ ಬೀರಲಿಂಗೇಶ್ವರ ದೇವಸ್ಥಾನಕ್ಕೆ ಹೋಗಿ ಸ್ವಾಮಿಗಾಗಿ ಸಿದ್ಧಪಡಿಸಿದ ಕಂಬಳಿಯನ್ನು ಶ್ರೀಪೀಠದ ಶ್ರೀಮರುಳಸಿದ್ಧಸ್ವಾಮಿಯ ದೇವಸ್ಥಾನಕ್ಕೆ ತರುವರು. ಅಲ್ಲಿಯ ಸಭಾಮಂಟಪದಲ್ಲಿರುವ ಸಹಸ್ರ ಕಮಲದ ಕೆಳಗಡೆ ಒಂದು ಕಬಂಳಿ ಹಾಸಿ ಆ ಕಂಬಳಿಯ ಮೇಲೆ ಸಿಂದೋಗಿಗೆ ಕಳಿಸುವ ಕಂಬಳಿಯನ್ನು ಇಡುವರು. ಅದರೊಂದಿಗೆ ಶಿಖರದ ಎರಡು ಮೇಣದ ಉಂಡೆಗಳು, ೫ ಗಟ್ಟಿ ರೂಪಾಯಿಗಳು, ೫ ಸೇರು ಜೋಳ, ೧ ಸೇರು ಅಕ್ಕಿ, ೨ ತೆಂಗಿನ ಕಾಯಿ, ೧ ವಿಭೂತಿ ಗಟ್ಟಿ ಇವುಗಳನ್ನು ಒಂದೇ ಚೀಲದಲ್ಲಿ ಹಾಕಿ ಗಂಟು ಕಟ್ಟಿ ಇಡುವರು. ಒಂದು ಹೊಸ ಬಟ್ಟೆಯಲ್ಲಿ ಒಂಬತ್ತು ವಿಭೂತಿಗಳನ್ನು ಹಾರದ ರೂಪದಲ್ಲಿ ಕಟ್ಟಿ ಹಾರವನ್ನು ಸದರಿ ಗಂಟಿನ ಮೇಲೆ ಹಾಕುವರು. ಆಗ ಪೂಜಾರಿ ಸದರಿ ಕಂಬಳಿಯ ಗಂಟನ್ನು ಪೂಜೆಮಾಡಿ ವಿಭೂತಿಯ ಹಾರವನ್ನು ಸಿಂದೋಗಿಗೆ ಹೋಗುವ ಮಸ್ಲಟ್ಟಿಯ ೯ ಜನರ ಪೈಕಿ ಯಾರಾದರೂ ಒಬ್ಬರ ಕೊರಳಿಗೆ ಹಾಕುವನು. ಅವನು ಸದರಿ ಕಂಬಳಿಯ ಗಂಟನ್ನು ಸಿಂದೋಗಿಯ ತನಕ ಹೊರಬೇಕು. ಬೇರೆಯವರು ಮುಟ್ಟುವಂತಿಲ್ಲ. ಅವನ ಊಟದ ಗಂಟನ್ನು ಉಳಿದವರು ತೆಗೆದುಕೊಂಡು ಹೋಗುವರು.

ಈ ಒಂಬತ್ತು ಜನರು ಮಳೆಯನ್ನು ತರುವ ದೇವದೂತರಂತೆ ಭಾವನೆ ಇರುವುದುರಿಂದ ಸಕಲ ಮಂಗಳ ಕಾರ್ಯಗಳೊಂದಿಗೆ ಅವರನ್ನು ಊರ ಹೊರಗಿನ ಪಾದದವರಗೆ ಕಳಿಸಲು ಜನರು ಹೋಗುವರು. ಈ ಒಂಬತ್ತು ಜನರನ್ನು ಯಾರೂ

ಮುಟ್ಟುವಂತಿಲ್ಲ. ಪೂಜೆ ಮುಗಿದ ಕೂಡಲೇ ಅವರನ್ನು ಯಾರೂ ಮಾತನಾಡಿಸುವಂತಿಲ್ಲ. ಪೂಜೆಗೆ ಮೊದಲೆ ಅವರನ್ನು ದಾರಿಯಲ್ಲಿ ಯಾರೂ ತಡೆಯದಂತೆ, ಮಾತನಾಡಿಸದಂತೆ ಇರಲು ಅವರ ರಕ್ಷಣೆಗಾಗಿ ಶ್ರೀ ಪೀಠದಿಂದ ಮತ್ತು ಪೋಲೀಸರ ವತಿಯಿಂದ ಅಪ್ಪಣೆ ರಹದಾರಿ ಪತ್ರಗಳನ್ನು ಕಳಿಸಲಾಗುವುದು. ಅವರನ್ನು ಯಾರಾದರೂ ವಿಚಾರಿಸಿದರೆ ದೂರದಿಂದಲೇ ಅವರಲ್ಲಿ ಪತ್ರವನ್ನು ಬೀಸಾಡಿ ಮಾತನಾಡದೆ ಮರಳಿ ಪಡೆಯುವರು. ದಾರಿಯಲ್ಲಿ ಯಾರ ಸಂಗಡವೂ ಎಲ್ಲೂ ಮಾತನಾಡುವಂತಿಲ್ಲ. ಯಾರನ್ನೂ ಮುಟ್ಟುವಂತಿಲ್ಲ ಮತ್ತು ಗ್ರಾಮದಲ್ಲಿ ಉಳಿಯುವಂತಿಲ್ಲ. ರಾತ್ರಿಯನ್ನು ಕಳೆಯಬೇಕಾದಲ್ಲಿ ಗ್ರಾಮಗಳ ಹೊರಗಡೆ ದೂರದ ಜಾಗದಲ್ಲಿ ಕಳೆಯುವರು. ಉಜ್ಜನಿಯಿಂದ ಸು. ೬೦ ಕಿ.ಮೀ. ಅಂತರದ ಹಿರೇಸಿಂದೋಗಿಯನ್ನು ತುಂಗಭದ್ರ ನದಿ ದಾಟಿ ತಲುಪುವರು.

ದಾರಿಯಲ್ಲಿ ಊಟ ಮಾಡುವಾಗ ತಮ್ಮ ಕಂಬಳಿಯನ್ನು ಹಾಸಿಕೊಂಡು ಅದರ ಮೇಲೆ ಕುಳಿತುಕೊಂಡು ಊಟ ಮಾಡಬೇಕು. ಏನನ್ನೂ ನೆಲಕ್ಕೆ ಬೀಳಿಸುವಂತಿಲ್ಲ. ಚುಟ್ಟ ಸೇದಿದವರು ಅದರ ವಸ್ತುಗಳನ್ನು ಜೇಬಿನಲ್ಲಿ ಹಾಕಿಕೊಂಡಿರಬೇಕು. ಕಂಬಳಿ ಹೊತ್ತಿರುವ ದೂತನು ಮಲವಿಸರ್ಜನೆಯನ್ನು, ನೀರು, ಹಸಿರು ಗಿಡಗಳಿರುವ ಜಾಗದಲ್ಲೇ ಮಾಡಬೇಕು. ಹಾಗಾದಲ್ಲಿ ಕಂಬಳಿ ಹೊತ್ತ ಗಂಟನ್ನೂ, ವಿಭೂತಿ ಮೂಟೆಯನ್ನು ಹಸಿರು ಗಿಡಕ್ಕೆ ತೂಗು ಹಾಕಲು ಅನುಕೂಲವಾಗುವುದು. ತನ್ನ ದೈಹಿಕ ಬಾಧೆ ತೀರಿಸಿಕೊಂಡ ಬಳಿಕ ಮಡಿಯಿಂದ ಅವುಗಳನ್ನು ಹೊತ್ತುಕೊಂಡು ಹೋಗುವನು.

ಭಾನುವಾರ ಸಾಯಂಕಾಲ ತುಂಗಭದ್ರಾ ನದಿಯನ್ನು ದಾಟುತ್ತಲೇ ಅವರ ಆಗಮನದ ಕಾರಣವನ್ನು ತಿಳಿದು ಹಿರೇಸಿಂದೋಗಿಯವರು ಅವರನ್ನು ಸ್ವಾಗತಿಸಲು ಬರುವರು. ಅವರನ್ನು ಅಲ್ಲಿಯ ಮಠಕ್ಕೆ ಕರೆದೊಯ್ಯುವರು.

ಸೋಮವಾರ ಹಿರೇಸಿಂದೋಗಿಯ ಮಠದಲ್ಲಿ ಒಂದು ಹಬ್ಬದ ವಾತಾವರಣ. ಅದಕ್ಕೆ ಕಾರಣ ಶ್ರೀ ಪೀಠದಿಂದ ಬಂದಿರುವ ದೇವದೂತರು ಹಾಗೂ ಸ್ವಾಮಿಯ ಕಂಬಳಿ. ಅವರಿಗೆ ಅವು ಅತಿ ಶ್ರೇಷ್ಠವಾದವು. ಅಲ್ಲಿಯ ಮಂಚದ ಮೇಲೆ ಶ್ರೀಪೀಠದ ಕಂಬಳಿಯನ್ನು ಮಾತ್ರ ಹಾಕುವರು. ಆ ಮಂಚದ ಮೇಲೆ ಮರುಳಸಿದ್ಧರು ಧರಿಸಿದ ಮುಳ್ಳಿನ ಹಾವುಗೆ ಮತ್ತು ಬೆತ್ತಗಳಿವೆ. ಅಲ್ಲಿ ಶ್ರೀ ಮರುಳಸಿದ್ಧನ ಪೂಜೆಯನ್ನು ಲಿಂಗಧಾರಿಗಳಾದ ಹರಿಜನರೇ ನಡೆಸುವರು.

ಸೋಮವಾರ ದಿವಸ ಅಲ್ಲಿ ನಡೆಯುವ ಬೆಳಗಿನ ಪೂಜೆಯಿಂದ ಹಿಡಿದು ರಾತ್ರಿಯ ಉತ್ಸವದವರೆಗಿನ ಖರ್ಚನ್ನು ಶ್ರೀಪೀಠ ನೋಡಿಕೊಳ್ಳುವುದು. ನಂತರ ದೇವದೂತರು ಉಪಯೋಗಿಸಿದ ವಸ್ತುಗಳನ್ನು ಮಠದ ಆವರಣದಲ್ಲಿ ಚೆಲ್ಲುವರು.

ಮಂಗಳವಾರ ಬೆಳಿಗ್ಗೆ ಅಲ್ಲಿಂದ ಆ ದೂತರು ಉಜ್ಜಯಿನಿಗೆ ಹೊರಡುವರು. ಆಗ ಕಂಬಳಿ ಹೊತ್ತ ದೂತನಿಗೆ ಅಲ್ಲಿಯ ಹರಿಜನ ಪೂಜಾರಿಗಳು, ಅವನು ಕೊಟ್ಟ ಚೀಲದಲ್ಲಿ ೫ ಸೇರು ಜೋಳ, ೫ ಸೇರು ಅಕ್ಕಿ, ೨ ತೆಂಗಿನಕಾಯಿ, ೧ ರೂ. ದಕ್ಷಿಣೆ ಇಟ್ಟು ಪೂಜೆ ಮಾಡಿ ಕಳಿಸುವರು. ಅಲ್ಲಿಂದ ಹೊರಟ ಆ ಗುಂಪು ಕಂಬಳಿಯ ಕೊಪ್ಪೆಯನ್ನು ಹಾಕಿಕೊಂಡು ತಮ್ಮ ತಮ್ಮ ಗಂಟುಗಳನ್ನು ತಲೆಮೇಲೆ ಹೊತ್ತುಕೊಂಡು ತುಂಗಭದ್ರ ನದಿಯ ತೀರ ಮುಟ್ಟುವವರೆಗೆ ಹಿಂದೆ ತಿರುಗಿ ನೋಡದೆ ಮರಳುವರು. ತಮ್ಮ ತಮ್ಮಲ್ಲಿ ಮಾತನಾಡದೆ ಕೊಪ್ಪಿಯನ್ನು ಮುಟ್ಟದೆ ಗಂಗೆಯನ್ನು ಅಲ್ಲಿ ಪೂಜೆ ಮಾಡಿ ಆ ಕಡೆ ದಂಡೆಗೆ ಬರುವರು. ಅಲ್ಲಿಂದ ಉಜ್ಜಯಿನಿಗೆ ಮರಳಿಬರುವರು.

ಬುಧವಾರ ಸಾಯಂಕಾಲದ ಸಮಯಕ್ಕೆ ಅವರು ಉಜ್ಜಯನಿ ತಲುಪುವರು. ಈ ವಿಧಿ-ನಿಯಮಗಳನ್ನು ಅನುಸರಿಸಿದಿದ್ದರೆ ದೂತರು ಒಂದಿಲ್ಲ ಒಂದು ರೀತಿಯ ಬಾಧೆಗಳನ್ನು ಅನುಭವಿಸಬೇಕಾಗುತ್ತದೆಂಬ ನಂಬಿಕೆ ಇದೆ. ನಂತರ ಸಕಲ ದೈವದವರು ಮಂಗಳ ವಾದ್ಯದಿಂದ ಅವರನ್ನು ಬರಮಾಡಿಕೊಂಡು ಗ್ರಾಮದಲ್ಲಿರುವ ಸಕಲ ದೇವರಿಗೆ ಹಣ್ಣು-ಕಾಯಿಗಳಿಂದ ಪೂಜೆ ಮಾಡಿಸುವರು. ಆ ದಿವಸ ಉಜ್ಜಯಿನಿ ಗ್ರಾಮದ ದೇವರುಗಳಿಗೆ ೩೫೦ ಕಾಯಿ ಒಡೆಯುವರು. ಶ್ರೀಮಠದ ಶ್ರೀಮರುಳಸಿದ್ಧ ದೇವಾಲಯದ ಸಭಾಮಂಟಪದಲ್ಲಿರುವ ಕಮಲದ ಕೆಳಗೆ ಸಿಂದೋಗಿಯಿಂದ ತಂದ ಬೀಜದ ಜೋಳ ಇಡುವರು. ಅಲ್ಲಿ ೧೦೮ ಕಾಯಿ ಒಡೆಯುವರು. ನಂತರ ದೂತರು ಮನೆಗೆ ಹೋಗುವರು.

ಗುರುವಾರ ಬೆಳಿಗ್ಗೆ ಆರು ಗಂಟೆಗೆ ಮಸ್ಲತ್ತಿನ ಬಸವಣ್ಣನ ಆವರಣದಲ್ಲಿ ಪರ್ವ ಮಾಡಲಾಗುವುದು. ರೇವಣಸಾಂಗತ್ಯ ಪಠಣ, ಸಹಸ್ರ ಕುಂಭ ಅಭಿಷೇಕ ಇವುಗಳೆಲ್ಲ ಒಂಬತ್ತು ಜನರ ಸಮ್ಮುಖದಲ್ಲಿ ಶ್ರೀಪೀಠದ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಜರುಗುವುವು. ಮಸ್ಲತ್ತಿನ ಬಸವೇಶ್ವರ ಮತ್ತು ಮರುಳಸಿದ್ಧರನ್ನು ಪೂಜೆಮಾಡಿ ಹೋಳಿಗೆ ನೈವೇದ್ಯ ಮಾಡಿ ದೇಶದ ಸುಭಿಕ್ಷೆಗಾಗಿ ಮಳೆನೀಡಲು ಕೋರುವರು. ಆನಂತರ ಸಿಂದೋಗಿಯಿಂದ ತಂದ ಬೀಜದ ಜೋಳವನ್ನು ಸಕಲ ಭಕ್ತರಿಗೆ ವಿತರಿಸಿ ಆ ಕಾರ್ಯವನ್ನು ಸಮಾಪ್ತಿಗೊಳಿಸುವರು. ಈ ರೀತಿ ವಿಧಿ-ವಿಧಾನದ ಕಾರ್ಯಗಳು ಪೂರ್ಣಗೊಂಡ ನಂತರ ಉಜ್ಜಯಿನಿಗೆ ಮಳೆ ಬಂದೇ ಬರುವುದೆಂಬುದು ಸ್ಥಳಿಕರ ಅನುಭವವಾಗಿದೆ.

ಹಿರೇಸಿಂದೋಗಿಯ ಶ್ರೀ ಮರುಳಸಿದ್ಧ ಸ್ವಾಮಿಯ ಗದ್ದುಗೆ

ಪ್ರಸ್ತುತ ಕೃತಿಯಲ್ಲಿ ಉಜ್ಜಯಿನಿ ಸದ್ಧರ್ಮ ಪೀಠದ ಜಗದ್ಗುರುಗಳ ಪಟ್ಟವಲ್ಲರಿ ಅಧ್ಯಾಯದಲ್ಲಿ ಸಿಂದೋಗಿಯ ಶ್ರೀಮರುಳಸಿದ್ಧರ ಬಗ್ಗೆ

ಪರಿಚಯಿಸಲಾಗಿದೆ. ಶ್ರೀಪೀಠದ ಶ್ರೀ ಜಗದ್ಗುರು ಸಿದ್ಧಮಲ್ಲೇಶ್ವರರು ಸಂಚರಿಸುತ್ತ ಸಿಂದೋಗಿ ಪುರಕ್ಕೆ ಆಗಮಿಸಿ ಅಲ್ಲಿಯ ಗೌಡನಿಗೆ ಸಂತಾನ ಪ್ರಾಪ್ತಿಯಾಗುವಂತೆ ಮಾಡಿದರು. ಅದಕ್ಕಾಗಿ ಗೌಡನು ಸಾವಿರ ಹೊನ್ನನ್ನು ಶ್ರೀಗಳಿಗೆ ದಕ್ಷಿಣೆಯಾಗಿ ಕೊಟ್ಟನು. ಅದನ್ನು ನೋಡಿದ ಗೌಡನ ಆಳಾಗಿದ್ದ ಹರಿಜನ ಮಾರನು ಪೂಜ್ಯಗುರುಗಳ ಆಶೀರ್ವಾದ ಪಡೆದು ಒಂದು ಗಂಡು ಸಂತಾನವನ್ನು ಬೇಡಿದನು. ಅವನು ಗುರುಗಳಿಗೆ ಸಾವರ ಕುಳ್ಳುಗಳನ್ನು ಕೊಟ್ಟನು. ದಾಸೋಹ ಸೇವೆಯನ್ನು ಮಾಡಿ ಗುರುವಿನ ಅನುಗ್ರಹ ಪಡೆದನು. ಮುಂದೆ ತನಗೆ ಹುಟ್ಟಿದ ಮಗುವಿಗೆ ಶ್ರೀ ಮರುಳಸಿದ್ಧನೆಂಬ ಹೆಸರನ್ನಿಟ್ಟನು. ತನ್ನ ಪೂಜೆಗಾಗಿ ಸಿಂದೋಗಿಪುರದ ಹರಿಜನಕೇರಿಯಲ್ಲಿಯೇ ಗುರುಗಳು ಶ್ರೀಮರುಳಸಿದ್ಧ ದೇವಾಲಯವನ್ನು ಕಟ್ಟಿಸಿದರು. ಅದರಲ್ಲಿ ಮರುಳಸಿದ್ಧರ ಹೆಸರಿನಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಿದರು. ಅದರ ಪೂಜೆಯ ಜವಾಬ್ದಾರಿಯನ್ನು ಆ ಮಗುವಿಗೇ ಒಪ್ಪಿಸಿದರು. ಅದೇ ವೇಳೆಗೆ ಹಿರೇಸಿಂದೋಗಿಯ ಹರಳ ಎಂಬವನು ಆ ಮರುಳಸಿದ್ಧ ದೇವಾಲಯದಲ್ಲಿ ಪೂಜಿಸಲು ಅವಕಾಶ ನೀಡಬೇಕೆಂದು ಬೇಡಿಕೊಂಡನು. ಆಗ ಗುರುಗಳು ಆತನನ್ನು ಉಜ್ಜಯಿನಿಗೆ ಕರೆದುಕೊಂಡು ಬಂದರು. ಅಲ್ಲಿಯ ಹರಿಜನ ಕೇರಿಯಲ್ಲಿ ಶ್ರೀ ಮರುಳಸಿದ್ಧ ಸ್ವಾಮಿಯ ಒಂದು ಚಿಕ್ಕ ದೇವಾಲಯವನ್ನು ಕಟ್ಟಿಸಿ ಹರಳನ್ನು ಪೂಜೆ ಮಾಡುವುದಕ್ಕಾಗಿ ನೇಮಿಸಿದರು. ಈರ್ವರಿಗೂ ಶ್ರೀ ಗುರುಗಳಿಂದ ಲಿಂಗಧಾರಣೆ ಅನುಗ್ರಹವಾಯಿತು.

ಕೊನೆಗೆ ಶ್ರೀಸಿದ್ಧಮಲ್ಲೇಶ್ವರರು ಶ್ರೀಸಿದ್ಧನಾಥಚಾರ್ಯರಿಗೆ ಪಟ್ಟವನ್ನು ಕಟ್ಟಿ ಶಿವೈಕ್ಯರಾದರು. ಆ ಸಮಯದಲ್ಲೇ ಅವರ ಶಿಷ್ಯರಾದ ಹಿರೇಸಿಂದೋಗಿಯ ಮರುಳಸಿದ್ಧ ಮತ್ತು ಉಜ್ಜಯಿನಿಯ ಹರಳರೀರ್ವರು ಲಿಂಗೈಕ್ಯರಾದರು. ಈ ವಿಷಯವನ್ನು ಜಗದ್ಗುರು ಮರುಳಾರಾಧ್ಯ ವಿಜಯ ಕೃತಿಯಲ್ಲಿ ಪ್ರಸ್ತಾಪಿಸಲಾಗಿದೆ.

ಹಿರೇಸಿಂದೋಗಿಪುರ ಕೊಪ್ಪಳ ಸಮೀಪದ ಹಿರೇಸಿಂದೋಗಿಯಾಗಿದೆ. ಅಲ್ಲಿ ಶ್ರೀ ಮರುಳಸಿದ್ಧ ಸ್ವಾಮಿಯ ದೇವಾಲಯವಿದೆ. ಈ ದೇವಾಲಯದ ಸಂಕಿರಣವು ಸುಮಾರು ಒಂದು ಹೆಕ್ಟೇರ್ ಭೂ ಪ್ರದೇಶವನ್ನು ವ್ಯಾಪಿಸಿದೆ. ಅದರ ಸುತ್ತಲೂ ಎತ್ತರದ ಪ್ರಾಕಾರ ಗೋಡೆಯಿದೆ. ಪ್ರಾಕಾರಗೋಡೆಗೆ ಹೊಂದಿ ಉತ್ತರಕ್ಕೊಂದು ಮಹಾದ್ವಾರವಿದೆ *(ಚಿತ್ರ, ಸಂ. ೧೬೨ ಮತ್ತು ೧೬೩)* ಮತ್ತು ಪೂರ್ವಕ್ಕೊಂದು ದ್ವಾರವಿದೆ. ದೇವಾಲಯ ಪೂರ್ವಕ್ಕೆ ಮುಖಮಾಡಿದೆ. ಈ ದೇವಾಲಯದ ಗರ್ಭಗೃಹದಲ್ಲಿ ಶ್ರೀಮರುಳಸಿದ್ಧಸ್ವಾಮಿಯ ಗದ್ದುಗೆಯಿದೆ. ದ್ವಾರ ಫಲಕಗಳಲ್ಲಿ ಸೇವಕರಿದ್ದಾರೆ *(ಚಿತ್ರ, ಸಂ. ೧೬೪)*. ಅದರ ಮುಂದೆ ಎರಡು ತೆರೆದ ವಿಶಾಲ ಸ್ತಂಭಗಳುಳ್ಳ ಮುಂಟಪಗಳಿವೆ. ಈ ದೇವಾಲಯದ ಹೊರಗಡೆ ಬಲಬದಿಯಲ್ಲಿ

ಅನೇಕ ಸಮಾಧಿಗಳಿವೆ ***(ಚಿತ್ರ ಸಂ. ೧೬೫)*** ಎದುರಿಗೆ ಒಂದು ದೀಪಸ್ತಂಭವಿದೆ. ಆ ಸ್ತಂಭವನ್ನು ಎತ್ತರದ ಕಟ್ಟೆಯ ಮಧ್ಯೆ ನಿಲ್ಲಿಸಲಾಗಿದೆ. ಅದರ ಮುಂದೆ ಶ್ರೀಮರುಳಸಿದ್ಧೇಶ್ವರ ಸ್ವಾಮಿಗಳ ಒಂದು ಸಮಾಧಿ ಇದೆ. ಈ ಸಮಾಧಿ ಎದುರಿಗೆ ಒಂದು ಹೊಂಡವಿದೆ. ಈ ದೇವಾಲಯದ ಉತ್ತರಕ್ಕೆ ಪ್ರಾಕಾರಗೋಡೆಗೆ ಹೊಂದಿ ಮತ್ತು ದಕ್ಷಿಣಕ್ಕೆ ಪೂಜಾರಿಗಳ ಮನೆಗಳಿವೆ.

ಈ ದೇವಾಲಯದ ಗರ್ಭಗೃಹದಲ್ಲಿ ಬೆಳ್ಳಿಯ ಖಡ್ಗವಿದೆ ಮತ್ತು ಶ್ರೀಮರುಳಸಿದ್ಧರ ಮುಖವಾಡವಿದೆ. ಈ ದೇವಾಲಯದ ಒಳಗಡೆ ಮೊದಲನೇ ಮಂಟಪದ ಬಲಬದಿಗೆ ಉಜ್ಜಯಿನಿ ಸದ್ಧರ್ಮ ಪೀಠದಿಂದ ತಂದ ಒಂದು ಮಂಚವಿದೆ. ಆ ಮಂಚದ ಮೇಲೆ ಶ್ರೀಮರುಳಸಿದ್ಧ ಸ್ವಾಮಿಯ ನಾಗರ ಬೆತ್ತ ಮತ್ತು ಅವರ ಮುಳ್ಳು ಆವಿಗೆಗಳಿವೆ ***(ಚಿತ್ರ ಸಂ. ೧೬೬ ಮತ್ತು ೧೬೭)***.

ಒಂದು ಐತಿಹ್ಯದ ಪ್ರಕಾರ ಅಲ್ಲಿಯ ಮಂಚದ ಮೇಲೆ ಶ್ರೀಮರುಳಸಿದ್ಧರು ಮಲಗಿದ್ದರಂತೆ. ಅಲ್ಲಿಂದ ಎದ್ದು ಉಜ್ಜಯಿನಿಗೆ ಹೋಗುವ ಸಂದರ್ಭದಲ್ಲಿ ತಮ್ಮಲ್ಲಿದ್ದ ಮಳೆಯ ಬೀಗವನ್ನು ಮಂಚದ ಮೇಲೆ ಮರೆತು ಬಿಟ್ಟು ಬಂದರಂತೆ. ಈ ಕಾರಣದಿಂದ ಉಜ್ಜಯಿನಿ ಗ್ರಾಮಸ್ಥರು ತಮಗೆ ಮಳೆಯ ಅಭಾವ ವಾದಾಗ ಮಳೆ ತರಿಸಲು ಈ ಸ್ಥಳಕ್ಕೆ ಬಂದು ಹೋಗುವ ವಿಶಿಷ್ಟ ಪರಂಪರೆ ರೂಢಿಗೆ ಬಂದಿದೆ.

ಹಿರೇಸಿಂದೋಗಿಯ ಇನ್ನೊಂದು ಐತಿಹ್ಯದಲ್ಲಿ ಶ್ರೀ ಮರುಳಸಿದ್ಧರ ಒಂದು ಪವಾಡ ಸೇರಿಕೊಂಡಿದೆ. ಅದರ ಪ್ರಕಾರ ಒಮ್ಮೆ ಅಲ್ಲಿಯ ಅಂಬಿಗನೊಬ್ಬನಿಗೆ ಆ ಗ್ರಾಮದ ಹತ್ತಿರದ ಹೊಳೆಯು ಉಕ್ಕಿ ಹರಿಯುವ ಸಂದರ್ಭದಲ್ಲಿ ಹುಚ್ಚನಂತೆ ಕಾಣುತ್ತಿದ್ದ ಶ್ರೀ ಮರುಳಸಿದ್ಧ ಈ ಹೊಳೆಯನ್ನು ದಾಟಿಸಲು ಮೊರೆ ಹೋದನು. ಅಂಬಿಗ ಆತನ ಮಾತಿಗೆ ಕಿವಿಗೊಡದೆ ಹೊತ್ತಾಗಿದೆಯೆಂದು ಹೇಳಿ ಹೊಳೆಯ ಇನ್ನೊಂದು ದಂಡೆಯ ಕಡೆ ಹೊರಟನು. ಆ ದಂಡೆಯನ್ನು ತಲುಪುವ ಮೊದಲೇ ಶ್ರೀ ಮರುಳಸಿದ್ಧರು ಅಲ್ಲಿಗೆ ಹೋಗಿ ನಿಂತಿದ್ದನ್ನು ನೋಡಿ ಅಂಬಿಗ ಬೆಕ್ಕನೆ ಬೆರಗಾದನು. ಈತನೊಬ್ಬ ಅಸಾಮಾನ್ಯ ಯೋಗಿ ಎಂದು ಅರಿತು ತನ್ನ ತಪ್ಪನ್ನು ಮನ್ನಿಸಲು ಸಾಷ್ಟಾಂಗ ನಮಸ್ಕಾರವನ್ನು ಹಾಕಿ ಕ್ಷಮೆಯಾಚಿಸಿದನು.

ಈ ಮೇಲಿನ ವೃತ್ತಾಂತದಂತೆ ಹಿರೇಸಿಂದೋಗಿಯ ಶ್ರೀ ಮರುಳಸಿದ್ಧ ದೇವಾಲಯದ ಅರ್ಚಕರು ಅಲ್ಲಿಯ ಹರಿಜನರು. ಅವರೇ ಶ್ರೀಮರುಳಸಿದ್ಧ ಸ್ವಾಮಿಯನ್ನು ಪೂಜಿಸುವರು. ಅವರು ಶ್ರೀ ಮರುಳಸಿದ್ಧರ ಅನುಗ್ರಹ ಪಡೆದ ಲಿಂಗಧಾರಿಗಳು. ಅವರು ಊರಲ್ಲಿ ಹೋಗುವಂತಿಲ್ಲ. ಶ್ರೀ ಸ್ವಾಮಿಯ ಮಠದ (ದೇವಾಲಯದ) ಆವರಣದಲ್ಲಿಯೇ ತಂಗಿರಬೇಕು! ಅಲ್ಲಿಯ ಶ್ರೀ ಸ್ವಾಮಿಗೆ ಎಲ್ಲಾ

ಜಾತಿಯ ಜನರು ನಡೆದು ಕೊಳ್ಳುವರು. ಶ್ರೀಸ್ವಾಮಿಯ ಗರ್ಭಗೃಹದ ಒಳಗೆ ಅನ್ಯರಿಗೆ ಹೋಗಲು ಅವಕಾಶ ನೀಡುವುದಿಲ್ಲ. ಆದರೆ ಉಜ್ಜಯಿನಿ ಸದ್ಧರ್ಮಪೀಠದ ಜಗದ್ಗುರುಗಳಿಗೆ ಪ್ರವೇಶವಿದೆ.

ಅಲ್ಲಿಯ ಹರಿಜನ ಅರ್ಚಕರು ಪ್ರತಿನಿತ್ಯ ಶ್ರೀ ಸ್ವಾಮಿಯ ನೈವೇಧ್ಯಕ್ಕಾಗಿ ಭತ್ತವನ್ನು ಕುಟ್ಟಿ ಅಕ್ಕಿಯಿಂದ ಪ್ರಸಾದವನ್ನು ತಯಾರಿಸಿ ತಕ್ಷಣವೇ ನೈವೇದ್ಯ ಮಾಡಿದ ಪರಂಪರೆಯಿದೆ. ಅಂದಿನ ಪ್ರಸಾದವನ್ನು ಅಂದೇ ತಯಾರಿಸಿ ಪ್ರಸಾದ ನೈವೇದ್ಯ ಮಾಡುವರು. ಅಲ್ಲಿ ಹಬ್ಬ-ಉತ್ಸವಗಳು ಬಹು ವಿಜೃಂಭಣೆಯಿಂದ ಜರುಗುತ್ತವೆ. ಶಿವರಾತ್ರಿ ದಿವಸ ಇಡೀ ರಾತ್ರಿ ಶ್ರೀಸ್ವಾಮಿಯ ಉತ್ಸವ ಜರುಗುತ್ತದೆ. ಆ ಉತ್ಸವ ಮುಗಿಯುವ ತನಕ ಯಾರೂ ಅಲ್ಲಿ ಮನೆ ಬಾಗಿಲನ್ನು ಹಾಕುವಂತಿಲ್ಲ. ಕುತೂಹಲದ ಸಂಗಿತಿಯೆಂದರೆ ಈ ದೇವಾಲಯದ ಪೂಜಾರಿಗಳಿಗೆ ಹೆಣ್ಣು ಮಕ್ಕಳು ಹುಟ್ಟಿದರೆ ಅವರನ್ನು ದೇವರಿಗೆ ಬಿಡುವ ಸಂಪ್ರದಾಯವಿದೆ ಎಂದು ಹೇಳುವರು. ಈ ಸ್ಥಳದಲ್ಲಿ ಈಗಿನ ಉಜ್ಜಯಿನಿ ಜಗದ್ಗುರುಗಳ ಉತ್ಸವವೂ ಜರುಗಿದೆ.

ಈ ಗ್ರಾಮದ ಹತ್ತಿರವಿರುವ ಬಿಸರಳ್ಳಿಯಲ್ಲಿ ಶ್ರೀಮರುಳಸಿದ್ಧಸ್ವಾಮಿಯ ಒಂದು ಪಾದ ಹೆಜ್ಜೆಯ ಗುರುತು ಮತ್ತು ಅವರು ಆಶೀರ್ವಾದ ಮಾಡಿಕೊಟ್ಟ ಗೆಜ್ಜೆ ಇವೆ ಎನ್ನುವರು. ಈ ಸ್ಥಳಕ್ಕೆ ಈ ರೀತಿಯ ಸಾಂಸ್ಕೃತಿಕ ಮಹತ್ವವಿರುವುದು ಗಮನೀಯ.

ಅಡಿ ಟಿಪ್ಪಣೆ

ಈ ಅಧ್ಯಯನದ ಅನೇಕ ಮಾಹಿತಿಗಳನ್ನು ಉಜ್ಜಯಿನೀ ಸದ್ಧರ್ಮ ಪೀಠದ ಕಛೇರಿಯಿಂದ ಮತ್ತು ಸ್ಥಳೀಯ ಶ್ರೀ ಯು. ಎಂ. ವೀರಯ್ಯನವರಿಂದ ಹಾಗೂ ಲೇಖಕರ ಒಬ್ಬ ಎಂ.ಎ. ವಿದ್ಯಾರ್ಥಿನಿ ಕು. ಸವಿತಾ ವೀರನಗೌಡ ಅವರಿಂದ ಹಿರೇಸಿಂದೋಗಿಯ ಶ್ರೀ ಮರುಳಸಿದ್ಧ ಮಠದ ಛಾಯಾಚಿತ್ರಗಳನ್ನು ಪಡೆಯಲಾಗಿದೆ.



೧೬೧. ಅರಸಿ ಬಾವಿ.



೧೬೦. ಭೈರವನ ವಿಗ್ರಹ



೧೬೨. ಹಿರೇಸಿಂದೋಗಿಯ
ಶ್ರೀ ಜ. ಮರುಳಸಿದ್ಧೇಶ್ವರ
ದೇವಾಲಯದ ದ್ವಾರ




೧೬೩. ಹಿರೇಸಿಂದೋಗಿಯ
ಶ್ರೀ ಜ. ಮರುಳಸಿದ್ಧೇಶ್ವರ
ದೇವಾಲಯದ
ಮುಖಮಂಟಪ




೧೬೪. ಹಿರೇಸಿಂದೋಗಿಯ
ಶ್ರೀ ಜ. ಮರುಳಸಿದ್ಧೇಶ್ವರ
ಗರ್ಭಗೃಹದ ಬಾಗಿಲ ಚೌಕಟ್ಟು



೧೬೫. ಶ್ರೀ ಜ. ಮರುಳಸಿದ್ಧೇಶ್ವರ ದೇವಾಲಯದ
ಬದಿಗಿರುವ ಸಮಾಧಿಗಳು.



೧೬೬. ಶ್ರೀ ಜ. ಮರುಳಸಿದ್ಧೇಶ್ವರ
ದೇವಾಲಯದಲ್ಲಿರುವ ಮಂಚ
ಮತ್ತು ಆದರ ಮೇಲೆ ದಂಡ
ಇತ್ಯಾದಿ.



೧೬೭. ಶ್ರೀ ಜ. ಮರುಳಸಿದ್ಧೇಶ್ವರ
ದೇವಾಲಯದಲ್ಲಿರುವ ಮಂಚದ
ಮೇಲೆ ಮುಳ್ಳಿನ ಆವಿಗೆಗಳು.

ಜರ್ಮಲೆಯ ಪಾಳೆಯಗಾರರು

ವಿಜಯನಗರ ಪತನದ ನಂತರ ಕರ್ನಾಟಕದಲ್ಲಿ ಅನೇಕ ಪಾಳೆಯಗಾರರ ಮನೆತನಗಳು ಅಸ್ತಿತ್ವಕ್ಕೆ ಬಂದವು. ಈ ಪಾಳೆಗಾರರನ್ನು ನಾಯಕರೆಂದು ಕರೆಯುವರು. ಅವರಲ್ಲಿ ಚಿತ್ರದುರ್ಗ, ಕೆಳದಿ, ಸುರಪುರ, ಹರಪನಹಳ್ಳಿ, ಸೊಂಡೂರು, ಸೋಂದಾ, ಗುಡೆಕೋಟೆ, ಜರ್ಮಲೆ, ಮಾಗಡಿ, ಹೊಳಲ್ಕೆರೆ, ಐಗೂರು, ತರೀಕೆರೆ, ಹಾಗಲ್ವಾಡಿ, ಸುಗಟೂರು ಇತ್ಯಾದಿ ಪಾಳೆಯಗಾರರು ಮುಖ್ಯರಾಗಿದ್ದಾರೆ. ಅವರು ಕರ್ನಾಟಕದ ವಿವಿಧ ಭಾಗಗಳಲ್ಲಿ ದೊರೆಗಳಾಗಿ ಆಳಿದರು. ಅವರು ವೀರಶೈವ ಧರ್ಮದ ಮಠ ಮಾನ್ಯಗಳಿಗೆ, ಸಾಹಿತ್ಯಕೃತಿಗಳ ರಚನೆಗೆ ಅಪಾರ ಪ್ರೋತ್ಸಾಹ ನೀಡಿದರು. ಉಜ್ಜಯಿನಿ ಶ್ರೀ ಮರುಳಸಿದ್ಧರಿಗೆ ಜರ್ಮಲೆನಾಯಕರು, ಚಿತ್ರದುರ್ಗ ಮುರುಘಸ್ವಾಮಿಗಳಿಗೆ ಚಿತ್ರದುರ್ಗದ ನಾಯಕರು, ಶ್ರೀ ಕೊಟ್ಟೂರೇಶ್ವರರಿಗೆ ಹರಪನಹಳ್ಳಿ ಮತ್ತು ಸೊಂಡೂರು ನಾಯಕರು, ಹೀಗೆ ಹತ್ತಾರು ನಾಯಕ ಮನೆತನಗಳು ವೀರಶೈವ ಮಠಮಾನ್ಯ ಮತ್ತು ಆಶ್ರಮಗಳಿಗೆ ರಕ್ಷಣೆ ನೀಡಿದರು. ಡಾ. ಎಂ. ಎಂ. ಕಲಬುರ್ಗಿ ಅವರಿಂದ ಸಂಪಾದಿತ ಕೃತಿ 'ವೀರಶೈವ ಅರಸುಮನೆತನಗಳು' ಈ ಬಗ್ಗೆ ಹೆಚ್ಚಿನ ವಿವರಗಳನ್ನು ನೀಡುತ್ತದೆ. ವಿಚಾರ ಸಂಕಿರಣದಲ್ಲಿ ವಿದ್ವಾಂಸರು ಮಂಡಿಸಿದ ಪ್ರಬಂಧಗಳು ಈ ಕೃತಿಯಲ್ಲಿವೆ.

ಈ ನಾಯಕರಲ್ಲಿ ಜರ್ಮಲೆಯ ನಾಯಕರು ಶ್ರೀ ಉಜ್ಜಯಿನಿ ಸದ್ಧರ್ಮ ಪೀಠದ ಜೊತೆ ವಿಶಿಷ್ಟ ರೀತಿಯ ಸಾಂಸ್ಕೃತಿಕ ಸಂಬಂಧವನ್ನು ಇಂದಿಗೂ ಉಳಿಸಿಕೊಂಡಿದ್ದಾರೆ. ಜರ್ಮಲೆಯ ನಾಯಕರ ಇತಿಹಾಸ ಮತ್ತು ಸಂಸ್ಕೃತಿ ಕುರಿತ ಅಧ್ಯಯನ ಇಲ್ಲಿಯವರೆಗೆ ಸರಿಯಾಗಿ ನಡೆದಿಲ್ಲ. ಅವರ ಚರಿತ್ರೆ ಬಗ್ಗೆ ಒಂದೆರಡು ಲೇಖನಗಳು ಮಾತ್ರ ಬೆಳಕನ್ನು ಕಂಡಿವೆ. ಅವುಗಳಲ್ಲಿ ಪ್ರೊ. ಲಕ್ಷ್ಮಣ ತೆಲಗಾವಿ ಅವರು ಸಂಪಾದಿಸಿದ ಜರ್ಮಲೆಯ ಪಾಳೆಗಾರರ ಕುರಿತ ಹಸ್ತಪತ್ರಿಕೆಯ ಲೇಖನ[1] ಮತ್ತು ಶ್ರೀ ಸಿ. ಎಂ. ವೀರಭದ್ರಯ್ಯನವರ ಲೇಖನಗಳು[2] ಮುಖ್ಯವೆನಿಸಿವೆ. ತದನಂತರ ಪ್ರಸ್ತುತ ಕೃತಿಯ ಲೇಖಕರು ಜರ್ಮಲೆಯಲ್ಲಿ ಕ್ಷೇತ್ರಕಾರ್ಯ ಕೈಕೊಂಡು ಅದರ ವಿವರಗಳನ್ನು ಒಳಗೊಂಡು ಇಲ್ಲಿ ಅಭ್ಯಾಸ ಮಾಡಿರುವರು. ಅದರಲ್ಲಿ ಕೆಲವು ಐತಿಹ್ಯಗಳು, ಪ್ರಾಚೀನ ಜನವಸತಿಯ ನೆಲೆಗಳು, ಸ್ಮಾರಕಗಳು, ಶಿಲ್ಪಗಳು ಮುಂತಾದ ಪ್ರಾಚ್ಯಾವಶೇಷಗಳ ಅಧ್ಯಯನವಿದೆ.

ಕ್ಷೇತ್ರಕಾರ್ಯ

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಒಂದು ಚಿಕ್ಕ ಗ್ರಾಮ ಜರ್ಮಲೆ. ಅದು ಗುಡ್ಡಗಾಡು ಪ್ರದೇಶದ ಬುಡದಲ್ಲಿದೆ. ಈ ಗ್ರಾಮವನ್ನು ಜರ್ಮಲೆ, ಜರುಮಲೆ, ಜರಿಮಲೆ ಎಂದು ಕರೆಯುವರು. ಈ ಜರ್ಮಲೆಯು ಈ ಮುಂಚೆ ಅಲ್ಲಿಯ ಗುಡ್ಡಪ್ರದೇಶದಲ್ಲಿ ಮೂರು ಸ್ಥಳಗಳಲ್ಲಿತ್ತು ***(ಚಿತ್ರ ಸಂ. ೧೬೮ ರಿಂದ ೧೭೦)***. ಈಗಿನ ಗ್ರಾಮ ನಾಲ್ಕನೇ ಸ್ಥಳ.

ಪ್ರಾಚೀನ ಜನವಸತಿ ನೆಲೆಗಳು

ಈ ಮುಂಚಿನ ಮೂರು ಸ್ಥಳಗಳಲ್ಲಿ ಹಾಳುವಸತಿಯ ಕುರುಹುಗಳಿವೆ. ಅವುಗಳು ಒಂದಕ್ಕೊಂದು ಹತ್ತಿರವಿವೆ. ಈ ನೆಲೆಗಳ ಸಾಂಸ್ಕೃತಿಕ ಅವಶೇಷಗಳು ಅಲ್ಲಿಯ ಗುಡ್ಡ ಸಂದುಗಳಲ್ಲಿ ಮತ್ತು ಮುಂಭಾಗದಲ್ಲಿ ಹರಡಿವೆ. ಅವು ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ಅವಶೇಷಗಳಾಗಿವೆ. ಒಂದು ಕಡೆಯಲ್ಲಿ ಮಾತ್ರ ನೂತನ-ತಾಮ್ರ ಶಿಲಾ ಸಂಸ್ಕೃತಿಯ ಶಿಲಾ ಕೊಡಲಿ ಮತ್ತು ಅತ್ಯಲ್ಪ ಪ್ರಮಾಣದಲ್ಲಿ ಈ ಕಾಲದ ಮಣ್ಣಿನ ಪಾತ್ರೆ ಚೂರುಗಳು ಸಿಕ್ಕಿವೆ. ಇದರಿಂದ ಇವುಗಳ ಪ್ರಾಚೀನತೆ ಸುಮಾರು ಮೂರು ಸಾವಿರ ವರ್ಷ ಹಿಂದಕ್ಕೆ ಹೋಗುತ್ತದೆ.

ಅಲ್ಲಿಯ ಗುಡ್ಡದಲ್ಲಿ ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ಕೋಟೆಗೋಡೆಗಳಿವೆ. ಗುಡ್ಡಗಳ ಮುಂದಿನ ವಸತಿ ನೆಲೆಗಳಲ್ಲಿ ಈ ಕಾಲದ ಅನೇಕ ಕಟ್ಟಡಗಳಿವೆ. ಅವುಗಳು ಕೋಟೆ ಗೋಡೆಗಳು, ಬುರುಜುಗಳು, ದ್ವಾರಗಳು, ರಾಜಮಾರ್ಗಗಳು, ದೇವಾಲಯಗಳು, ಬೃಹತ್ ಬಂಡೆಯ ಮೇಲೆ ಕೆತ್ತಿದ ಆಂಜನೇಯ, ಅರಮನೆಯ ಕಟ್ಟಡಗಳು, ಗರಡಿಮನೆಗಳು, ಮದ್ದುಗುಂಡಿನ ಕೋಣೆಗಳು, ಮನೆಮಠಗಳು, ಬಾವಿಗಳು, ಸಮಾಧಿಗಳು, ಗೋರಿಗಳು ಇತ್ಯಾದಿಗಳಾಗಿವೆ. ***(ಚಿತ್ರ ಸಂ. ೧೭೧)*** ಅವುಗಳನ್ನು ಇಲ್ಲಿ ಪರಿಚಯಿಸಲಾಗಿದೆ.

ಬಾಗೇಶ್ವರ ದೇವಾಲಯ *(ಚಿತ್ರ ಸಂ. ೧೭೨)*

ಈ ನೆಲೆಯಲ್ಲಿರುವ ಬಾಗೇಶ್ವರ ದೇವಾಲಯ ಭವ್ಯಸ್ಮಾರಕವಾಗಿದೆ. ಅದರ ತಳಪಾಯದಲ್ಲಿ ಗರ್ಭಗೃಹ, ಅಂತರಾಳ ಮತ್ತು ನವರಂಗಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಅದನ್ನು ಬಾಗೇಶ್ವರ ದೇವರೆಂದು ಕರೆಯುವರು. ಗರ್ಭಗೃಹದಮೇಲೆ ದ್ರಾವಿಡ ಮಾದರಿಯ ಶಿಖರವಿದೆ. ನವರಂಗ ತೆರೆದಿದ್ದು ಅದಕ್ಕೆ ಮೂರು ಕಡೆಗಳಲ್ಲಿ ಪ್ರವೇಶ ದ್ವಾರಗಳಿವೆ. ಈ ದೇವಾಲಯಕ್ಕೆ ಎತ್ತರವಾದ ಜಗಲಿಯಿದೆ.

ಅಲ್ಲಿಯ ಅನೇಕ ಶಿಲ್ಪಗಳನ್ನು ಈಗಿನ ಜರ್ಮಲೆ ಗ್ರಾಮಕ್ಕೆ ತರಲಾಗಿದೆ *(ಚಿತ್ರ ಸಂ. ೧೭೩)*. ಅವುಗಳಲ್ಲಿ ಮನುಷ್ಯ-ಪ್ರಾಣಿ ಆಕಾರದ ನಾಗರಾಜರ ನಾಲ್ಕು ಉಬ್ಬು ಶಿಲ್ಪಗಳು, ಎರಡು ಶಿಲೆಯ ಆನೆಗಳು, ನಾಲ್ಕು ಶೈವ ದ್ವಾರಪಾಲಕರು, ಶಿವಲಿಂಗ, ನಂದಿ ವಿಗ್ರಹಗಳು ಇತ್ಯಾದಿ ಮುಖ್ಯವೆನಿಸಿವೆ. ಅವುಗಳ ಕಾಲಮಾನ ಸು. ಕ್ರಿ. ಶ. ೧೬ನೇ ಶತಮಾನ.

ಅರಮನೆ ಸಂಕಿರಣ

ಈ ನೆಲೆಯಲ್ಲಿ ಹಾಳಾದ ಅರಮನೆಯ ಕಟ್ಟಡವಿದ್ದು ಅದರ ಸಂಕೀರ್ಣದಲ್ಲಿ ಭವ್ಯವಾದ ಎತ್ತರ ಗೋಡೆ ಉಳಿದಿದೆ. ಈ ಗೋಡೆಯ ಬದಿಯಲ್ಲಿ ಶಿಲಾ ಫಲಕಗಳನ್ನು ಇಳಿಜಾರಾಗಿ ಹಾಸಿ ರಸ್ತೆಯನ್ನು ನಿರ್ಮಿಸಲಾಗಿದೆ. *(ಚಿತ್ರ ಸಂ. ೧೭೪)* ರಸ್ತೆಯ ಇಕ್ಕೆಲಗಳಲ್ಲಿ ಕೆಲವು ಬಾವಿಗಳಿವೆ. ಎತ್ತರದ ಒಂದು ಬಂಡೆಯ ಮೇಲೆ ಸುಂದರವಾದ ಆಂಜನೇಯನ ಚಿತ್ರವನ್ನು ಕೊರೆಯಲಾಗಿದೆ.

ಕೋಟೆ

ಈ ಗ್ರಾಮದ ಬಳಿಯಿರುವ (ಪೂರ್ವಕ್ಕೆ) ಅರ್ಧವೃತ್ತಾಕಾರದಲ್ಲಿ ಹರಡಿರುವ ಗುಡ್ಡಗಳ ಸಾಲಿನ ಮೇಲೆ ಉದ್ದವಾದ ಕೋಟೆಯಿದೆ. ಈ ಕೋಟೆ, ಗೋಡೆಗಳಿಗೆ ಹೊಂದಿ ಅಲ್ಲಲ್ಲಿ ವೃತ್ತಾಕಾರದ ಬುರುಜುಗಳಿವೆ (ಕೊತ್ತಳೆ). ಈ ಕೋಟೆ-ಕೊತ್ತಳಗಳ ಕಟ್ಟಡಗಳ ಕಾಲ ಸುಮಾರು ಕ್ರಿ.ಶ. ೧೭ನೇ ಶತಮಾನವೆಂದು ತರ್ಕಿಸಬಹುದು.

ಮಠ *(ಚಿತ್ರ ಸಂ. ೧೭೫)*

ಈ ನಲೆಯಲ್ಲಿ ವಿಶಾಲ ಪ್ರಾಂಗಣವುಳ್ಳ ಒಂದು ಕಟ್ಟಡವಿದೆ. ಅದರ ತಳಪಾಯದಲ್ಲಿ ಒಂದು ಆಯತಾಕಾರದ ಕೋಣೆ ಮತ್ತು ವಿಶಾಲ ಪಡಸಾಲೆಯಿದೆ. ಈ ಕಟ್ಟಡದ ಬದಿಗಳಲ್ಲಿ ಮತ್ತು ಹಿಂದೆ ಒಟ್ಟು ಮೂರು ಬಾವಿಗಳಿವೆ. ಈ ಕಟ್ಟಡದ ವಿನ್ಯಾಸದಿಂದ ಇದೊಂದು ಮಠವಾಗಿತ್ತೆಂದು ಭಾವಿಸಬಹುದಾಗಿದೆ. ಸ್ಥಳಿಕರು ಇದನ್ನು ಮಠವೆನ್ನುವರು.

ದುರ್ಗಮ್ಮನ ದೇವಾಲಯ

ಈ ನೆಲೆಯಲ್ಲಿ ದಂಡಿನ ದುರ್ಗಮ್ಮನ ದೇವಾಲಯವಿದೆ. ಈ ದೇವಿಯ ಬಗೆಗಿರುವ ಐತಿಹ್ಯದ ಪ್ರಕಾರ ಒಮ್ಮೆ ಜರ್ಮಲೆಯ ದೊರೆಗಳು ಚಿತ್ರದುರ್ಗದ ಪಾಳೆಯಗಾರರ ಸಂಗಡ ಯುದ್ಧ ನಡೆಸಿದರು. ಈ ಯುದ್ಧ ಸಂದರ್ಭದಲ್ಲಿ ದಂಡಿನ ದುರ್ಗಮ್ಮನ ದೇವಸ್ಥಾನದಲ್ಲಿ ಅಲ್ಲಿಯ ಪಾಳೆಯಗಾರ ಒಂದು ಖಡ್ಗವನ್ನು ಬೀಸಿದಾಗ, ದುರ್ಗಮ್ಮನ ರುಂಡವು ಕತ್ತರಿಸಿ ಹೊರ ಬಂದಿತು. ದೇವತೆಯ ಆ

ರುಂಡವು ಇಮ್ಮಡಿ ಜರ್ಮಲೆ ರಾಜರ ಬಳಿಯೆ ಸುಳಿಯುತ್ತ ''ನಿಮ್ಮನ್ನು ನಾನು ರಕ್ಷಿಸುತ್ತೇನೆಂದು'' ಹೇಳಿ ಜರ್ಮಲೆಗೆ ಬಂದು ಸೇರಿತಂತೆ. ಈ ಕಾರಣದಿಂದ ಜರ್ಮಲೆಯ ಗುಡ್ಡ ಪ್ರದೇಶದಲ್ಲಿ ಈಕೆಯು ಒಬ್ಬ ಅಧಿದೇವತೆಯಾಗಿ ಈಗಲೂ ಪೂಜೆಗೊಳ್ಳುತ್ತಿರುವಳು. ಈ ದೇವತೆಯ ಮುಖ ಲಕ್ಷಣಗಳು ಬಳ್ಳಾರಿಯ ದುರ್ಗಮ್ಮನಂತಿರುವಳೆಂದು ಹೇಳುವರು.

ಜರ್ಮಲೆ ಪಾಳೆಗಾರರ ಕುರಿತು ಅನೇಕ ಐತಿಹ್ಯಗಳಿವೆ. ಅವುಗಳನ್ನು ಇಲ್ಲಿ ಅಧ್ಯಯನ ಮಾಡಿದ್ದು ಅವುಗಳಿಂದ ಜರ್ಮಲೆ ಪಾಳೆಗಾರರ ಚರಿತ್ರೆಯನ್ನು ಪುನಃ ರಚಿಸಲು ಸಹಕಾರಿಯಾಗಿವೆ.

ಐತಿಹ್ಯಗಳಲ್ಲಿ ಜರ್ಮಲೆ ಪಾಳೆಯಗಾರರು

ಐತಿಹ್ಯ-೧

ಒಂದನೇ ಐತಿಹ್ಯದ ಪ್ರಕಾರ ಜರ್ಮಲೆ ಪಾಳೆಗಾರ ಸಂಸ್ಥಾನದವರು ತಮ್ಮ ಪರಿಚಾರಕರೊಂದಿಗೆ ದೆಹಲಿಯಿಂದ ಬಳ್ಳಾರಿಗೆ ಬಂದರು. ಅಲ್ಲಿಂದ ಸೊಂಡೂರು, ಬಂಡ್ರಿ ಮಾರ್ಗವಾಗಿ ಹಂದಿಯ ಬೇಟೆಯಾಡುತ್ತ ಸಿರಮಸೆಟ್ಟಿಹಳ್ಳಿಯ ಸಮೀಪ ಆಗಮಿಸಿದರು. ಬಿಟ್ಟ ಬಾಣ ಹಂದಿಗೆ ಬೀಳದೆ ಒಂದು ಕಲ್ಲು ಗುಂಡಿಗೆ ಬಿದ್ದು ಅದು ಎರಡು ಹೋಳಾಯಿತು. ಈ ಕಲ್ಲುಗುಂಡು ಬೇನಳ್ಳಿ ದುರ್ಗಮ್ಮನ ದೇವಸ್ಥಾನ ಹತ್ತಿರವಿದೆ. ಅಲ್ಲಿಂದ ಬೇಟೆಯಾಡುತ್ತ ಗಂಗೇನಹಳ್ಳಿಗೆ ಸಾಯಂಕಾಲ ಬಂದು ತಂಗಿದರು. ಆ ಸ್ಥಳದಲ್ಲಿ ಬಾಯಾರಿಕೆಯನ್ನು ನೀಗಿಸಿಕೊಳ್ಳಲು ನೀರನ್ನು ಹುಡುಕಬೇಕಾಯಿತು. ಬಿಸಿಲಿನ ತಾಪದಿಂದ ಅವರ ಬಾಯಿ ಒಣಗಿ ಹೋಗಿತ್ತು. ಆದ್ದರಿಂದ ಅವರ ಪರಿಚಾರಕರು ನೀರನ್ನು ಹುಡುಕಲು ಆ ಕಡೆ ಈ ಕಡೆ ಅಲೆದಾಡಿದರು. ಅವರ ಬೇಟೆ ನಾಯಿಗಳು ಬಹುದೂರ ಹೋಗಿ ಹಿಂದಕ್ಕೆ ಬಂದಾಗ ಆ ನಾಯಿಗಳ ದೇಹದ ಅರ್ಧಭಾಗ ಕೆಸರಿನಿಂದ ಕೂಡಿತ್ತು. ಈ ಕೆಸರನ್ನು ನೋಡಿ ಅಲ್ಲಿ ನೀರು ಇರಬೇಕೆಂದು ತಿಳಿದು ಪುನಃ ಆ ನಾಯಿಗಳನ್ನು ಮುಂದೆ ಬಿಟ್ಟುಕೊಂಡು ಆ ಸ್ಥಳಕ್ಕೆ ಹೋದರು. ದಾರಿಯಲ್ಲಿ ದಟ್ಟಪೊದೆ ಬಂದಿತು. ಅದರ ಮಧ್ಯ ಮಾವಿನ ಮರವಿತ್ತು. ಆ ಪೊದೆಯನ್ನು ಹೊಕ್ಕು ನಾಯಿಗಳು ದೇಹವನ್ನು ಒದ್ದೆ ಮಾಡಿಕೊಂಡು ಹೊರಬಂದವು. ಆ ಪೊದರಿನ ಮೂಲಕ ಒಳಗಡೆ ಹೋಗಲು ದಾರಿ ಇರಲಿಲ್ಲ. ಆದುದರಿಂದ ಆ ಪೊದೆಯನ್ನು ಕಡಿದು ಕಿರುದಾರಿಯನ್ನು ನಿರ್ಮಿಸಿದರು.

ಹಿರಿಯ ದೊರೆಗಳು ಮೊದಲು ಒಳಗಡೆ ಹೋಗಿ ನೀರು ಕುಡಿದು ಹಿಂದುರಿಗಿದರು. ಹೀಗೆ ಒಟ್ಟು ಆರು ಮಂದಿ ಸಹೋದರರು ನೀರು ಕುಡಿದು ಮರಳಿಬಂದರು. ಕೊನೆಗೆ ಏಳನೆಯ ಸಹೋದರ ಇಮ್ಮಡಿ ಭೂಮರಾಜ ದೊರೆ

ನೀರು ಕುಡಿಯಲು ಪೊದೆ ಮಧ್ಯೆ ಹೋದನು. ಅಲ್ಲಿಯ ನೀರು ಕಂಡು ಆನಂದ ಭರಿತನಾದ. ತನ್ನ ಬೊಗಸೆಯಲ್ಲಿ ನೀರನ್ನು ತುಂಬಿಕೊಂಡನು. ಬದಿಯ ಮಾವಿನ ಮರದ ಮೇಲೆ ಒಂದು ಟೊಂಗೆಯಲ್ಲಿ ಶಿವಪಾರ್ವತಿಯರು ಮಾತನಾಡುತ್ತ, ಕೈಗಳಲ್ಲಿ ಮಾವಿನ ಹಣ್ಣನ್ನು ಹಿಡಿದು ತಿನ್ನುವುದನ್ನು ಕಂಡನು. ದೊರೆ ಅವರನ್ನು ನೋಡಿ ಬೇಡಿಕೊಳ್ಳಲಾಗಿ, ಶಿವನು ''ಇದು ಬರಿಯ ಮಾತಲ್ಲ, ನಿನ್ನಿಂದ ಮಹತ್ತರ ಕಾರ್ಯ ನಡೆಯಬೇಕು. ನಿನ್ನ ಕೀರ್ತಿ ಅಜರಾಮರವಾಗಿ ಹಬ್ಬಬೇಕೆಂದು'' ಹೇಳಿದನು. ಅಗ ''ಇದೇನು ವಿಶೇಷ ವಿಪರೀತ'' ಎಂದು ದೊರೆಯು ಕೇಳಿದನು. ಅದಕ್ಕೆ ಶಿವನು ''ಈ ಸ್ಥಳವು ಪುಣ್ಯ ಭೂಮಿ ಆಗುತ್ತದೆ. ಈ ಜಲಮಾರ್ಗವನ್ನು ಹಿಡಿದು ಅಗೆಯಬೇಕು. ಅಲ್ಲಿ ಸಿದ್ಧೇಶ್ವರ ಲಿಂಗವು ಕಾಣುತ್ತದೆ. ಅದರಲ್ಲಿ ಏಳು ಕೊಪ್ಪರಿಗೆ ದ್ರವ್ಯ ಲಭ್ಯವಾಗುವುದು. ನಂತರ ಶಿವ ದೇವಾಲಯ ಕಾಣುತ್ತದೆ. ಅಲ್ಲಿ ನಿಮ್ಮ ಗುರುಗಳಿರುವರು. ಅವರನ್ನು ಕರೆದುಕೊಂಡು ಹೋಗಿರಿ'' ಎಂದು ಸೂಚಿಸಿದನು. ಆಗ ದೊರೆಯು ''ಇದಕ್ಕೆ ಏನು ಸಾಕ್ಷಿ'' ಎಂದಾಗ ಶಿವನು ತಾನು ತಿನ್ನುತ್ತಿದ್ದ ಮಾವಿನಗೊಟ್ಟ(ವಾಟೆ)ವನ್ನು ಮೇಲಿಂದ ಅವನ ಬೊಗಸೆಯಲ್ಲಿ ಹಾಕಿ ಪಾರ್ವತಿಯೊಡನೆ ಅಂತರ್ಧಾನವಾದನು.

ಈ ವೃತ್ತಾಂತವನ್ನು ಭೂಮರಾಜನು ತನ್ನ ಆರು ಜನ ಅಣ್ಣಂದಿರಿಗೆ ತಿಳಿಸಿದನು. ಅವರ ಸಮ್ಮತಿಯ ಮೇರೆಗೆ ಭೂಮರಾಜನು ಆ ಸ್ಥಳದಿಂದ ಭೂಮಿಯನ್ನು ಅಗಿಸಲು ಆರಂಭಿಸಿದನು. ಶಿವನು ಹೇಳಿದ ಪ್ರಕಾರ ಅಲ್ಲಿ ದ್ರವ್ಯ ಮತ್ತು ಸಿದ್ಧೇಶ್ವರ ದೇವಾಲಯ ಸಿಕ್ಕವು. ಅಲ್ಲಿ ಚನ್ನಕೇಶವ ಗುರುಗಳನ್ನು ಕಂಡರು. ತದನಂತರ ಆ ಗುರುಗಳನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ಬೇರೆಡೆಗೆ ನಡೆದರು.[೩]

ಐತಿಹ್ಯ ೨

ಈ ಐತಿಹ್ಯದ ಪ್ರಕಾರ ಜರ್ಮಲೆ ಪಾಳೆಗಾರರು ಮತ್ತು ಉಜ್ಜಯಿನೀ ಸದ್ಧರ್ಮ ಪೀಠದ ಮಧ್ಯೆ ನಿಕಟ ಸಂಬಂಧವಿತ್ತು. ಒಮ್ಮೆ ಜರ್ಮಲೆ ಪಾಳೆಗಾರರಿಗೂ ಮತ್ತು ಟಿಪ್ಪು ಸುಲ್ತಾನ-ಹೈದರಾಲಿಗಳ ಸಂಗಡ ಯುದ್ಧ ನಡೆಯಿತು. ಈ ಯುದ್ಧದಲ್ಲಿ ಜರ್ಮಲೆಯ ಪಾಳೆಗಾರ ಸೋತು ಹೈದರಾಲಿಗೆ ಸೆರೆಯಾದನು.

ಆತನನ್ನು ಸೆರೆಮನೆಯಲ್ಲಿಟ್ಟಾಗ ಹೈದರಾಲಿಯ ಮಗಳನ್ನು ಜರ್ಮಲೆರಾಜ ಅಪಹರಿಸಿ ಉಜ್ಜಯಿನಿ ಶ್ರೀಪೀಠದ ನೆಲಮಾಳಿಗೆಯ ಒಂದು ಕೋಣೆಯಲ್ಲಿ ಅವಳನ್ನು ಬಚ್ಚಿಟ್ಟನು. ಗುರುಗಳು ಅವನ ಈ ವರ್ತನೆಯನ್ನು ಕಟುವಾಗಿ ವಿರೋಧಿಸಿದರು. ಜರ್ಮಲೆಯ ರಾಜ ಈ ವಿಷಯದಲ್ಲಿ ಗುರುಗಳಿಗೆ ವಿರೋಧವಾಗಿ ನಡೆದುಕೊಂಡು ಕೊನೆಗೆ ಗುರುಗಳ ಶಾಪಕ್ಕೆ ಗುರಿಯಾದನು. ಅದರಿಂದ ರಾಜ ಕುರುಡನಾದ. ತನ್ನ

ಹೆಂಡತಿಗೆ ಈ ವೃತ್ತಾಂತವನ್ನು ತಿಳಿಸಿದ. ಅವನ ಮಂತ್ರಿಗಳು ಗುರುಪಿನಲ್ಲಿಗೆ ಹೋಗಿ ರಾಜನ ಶಾಪ ವಿಮೋಚನೆಯ ಉಪಾಯವನ್ನು ಕೇಳಿದರು. ಕೊನೆಗೆ ಗುರುಗಳು ಪ್ರತಿವರ್ಷ ಒಂದು ಧಡೆ ಎಣ್ಣೆಯನ್ನು, ೧೨ ಟಂಕಿ ಹಣವನ್ನು ರಾಜನು ಕಾಣಿಕೆಯಾಗಿ ಉಜ್ಜಯಿನೀ ಸದ್ಧರ್ಮ ಪೀಠಕ್ಕೆ ಸಲ್ಲಿಸಬೇಕು. ಈ ಎಣ್ಣೆಯನ್ನು ಶ್ರೀಪೀಠದ ಮರುಳಸಿದ್ದೇಶ್ವರ ದೇವಾಲಯದ ಶಿಖರಕ್ಕೆ ಪ್ರತಿವರ್ಷ ಸುರಿದಂತೆ ಶ್ರೀಮರುಳಸಿದ್ಧರ ನೆತ್ತಿ ನೆನೆದು ತಂಪಾಗುವುದು. ಇದರಿಂದ ರಾಜನಿಗೆ ಕ್ರಮೇಣ ಶಾಪ ಪರಿಹಾರವಾಗುವುದೆಂದರು. ಅಂದಿನಿಂದ ಗುರುಗಳ ಅಪ್ಪಣೆಯನ್ನು ರಾಜರು ಪಾಲಿಸಲಾರಂಭಿಸಿದರು. ಈ ನಿಮಿತ್ತ ಜರ್ಮಲೆಯ ದೊರೆಗಳು ತಮ್ಮ ಮನೆಯಲ್ಲೇ ಶ್ರೀ ಮರುಳಸಿದ್ಧರ ಮೂರ್ತಿಯನ್ನು ಸ್ಥಾಪಿಸಿ ಶಿವ ನೀಡಿದ ಮಾವಿನಗೊಟ್ಟವನ್ನು ಚಿನ್ನದ ಕವಚದಲ್ಲಿಟ್ಟು ಪೂಜೆ ಮಾಡುತ್ತಿರುವರು.[೪]

ಐತಿಹ್ಯ ೩

ಇನ್ನೊಂದು ಐತಿಹ್ಯದ ಪ್ರಕಾರ ಬೇಟೆಯಾಡುವುದೇ ಜರ್ಮಲೆ ನಾಯಕರ ಮೂಲ ಕಸುಬಾಗಿತ್ತು. ಬೇಟೆಯಾಡುತ್ತ ಜರ್ಮಲೆಯ ಏಳು ಮಂದಿ ಸಹೋದರರು ಮತ್ತು ಅವರ ಪರಿಚಾರಕರು ನಾಯಿಗಳ ಸಮೇತ ಕಂಚಿಯಿಂದ ಈಗಿನ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕ ಪ್ರದೇಶಕ್ಕೆ ಒಮ್ಮೆ ಆಗಮಿಸಿದರು.[೫] ಈ ತಾಲೂಕಿನ (ಕೂಡ್ಲಿಗಿ) ಗಂಗಮ್ಮನಹಳ್ಳಿ ಡೋಣಿಗುಡ್ಡದವರೆಗೆ ಬಂದರು. ಆ ಗುಡ್ಡದ ಮೇಲೆ ನಿಂತು ಸುತ್ತಲೂ ಕಂಗೊಳಿಸುತ್ತಿದ್ದ ಅಭಯಾರಣ್ಯವನ್ನು ವೀಕ್ಷಿಸಿದರು. ಒಂದು ಕಡೆಯಿಂದ ಶಂಖ ಜಾಗಟೆಗಳ ನಾದಕೇಳಿ ಬಂದಿತು. ಆ ಸ್ಥಳಕ್ಕೆ ಹೋದಾಗ ಅಲ್ಲಿ ಮಹಾಯೋಗಿಗಳ ಶಿಬಿರ ಕಂಡಿತು. ಅದರಲ್ಲಿ ಮಹಾಸ್ವಾಮಿಗಳ ಶಿವಪೂಜೆ ನಡೆಯುತ್ತಿತ್ತು. ಪೂಜೆ ಮುಗಿದ ಬಳಿಕ ಅವರು ಆ ಯೋಗಿಗಳ ದರ್ಶನ ಪಡೆದರು. ಅವರ ಜೊತೆ ಮಾತನಾಡುತ್ತಿದ್ದಾಗ ಯೋಗಿಯ ಬದಿಯಲ್ಲಿ ನಿಂತ ಸುರಭಿ (ಆಕಳು) ಯೊಂದರ ಮೊಲೆಗಳಿಂದ ಹಾಲು ತನ್ನಷ್ಟಕ್ಕೆ ತಾನೇ ಸುರಿಯಲಾರಂಭಿಸಿತು. ಅದನ್ನು ನೋಡಿ ಈ ಸಹೋದರರು ವಿಸ್ಮಿತರಾದರು. ಆಕಳು ನಿಂತಿದ್ದ ಈ ಸುರಭಿಗೆ ಸಿರಬಿ, ಚಿರಬಿ (ಕೂಡ್ಲಿಗಿ ತಾಲೂಕ) ಎಂದು ಹೆಸರು ಬಂದಿತು.

ಈ ಯೋಗಿಗಳ ಅಪ್ಪಣೆಯ ಮೇರೆಗೆ ಅಲ್ಲಿಂದ ಅವರು ಮಳೆ ಭೂಪಸಮುದ್ರಕ್ಕೆ ಬಂದು ತಂಗಿದರು. ಆ ಸ್ಥಳದಲ್ಲಿ ಬಿಳಿಹಂದಿಯ ಕಾಟವಿತ್ತು. ಈ ಹಂದಿಯ ಕಾಟಕ್ಕೆ ಬೇಸತ್ತು ಅಲ್ಲಿಯ ಜನ ಆ ಗ್ರಾಮದ ಒಡೆಯನಾಗಿದ್ದ ಬೈಯಪ್ಪನಲ್ಲಿಗೆ ಹೋದರು. ಆತನು ತನ್ನ ಗ್ರಾಮ ಪರಿವಾರದವರು ಮತ್ತು ಶ್ರೀ ಮರುಳಾರಾಧ್ಯರ ಸಹಾಯದಿಂದ ಅಲ್ಲಿ ನೆಲಸಿದ್ದ ಭೂಪರಿಗೆ ಹಂದಿ ಬೇಟೆಯಾಡಲು ಅಪ್ಪಣೆ ಕೊಡಿಸಿದರು. ಆ ಏಳು ಮಂದಿ ಭೂಪರು ತಮ್ಮ ಏಳು

ನಾಯಿಗಳೊಂದಿಗೆ ಅಲ್ಲಿಯ ಹಂದಿಯನ್ನು ಬೆನ್ನಟ್ಟಿದರು. ಅವರಿಂದ ತಪ್ಪಿಸಿಕೊಳ್ಳುತ್ತ ಚಿಕ್ಕಕೆರೆನಳ್ಳಿಯ (ಸೊಂಡೂರು ತಾ.) ಗುಡ್ಡದ ಸಮೀಪದ ಹಳ್ಳದಲ್ಲಿ ಅದು ಸ್ನಾನ ಮಾಡಿ ಒಂದು ದೊಡ್ಡ ಗುಂಡಿನ ಪಕ್ಕ ಮಲಗಿಕೊಂಡಿತು. ಅಲ್ಲಿಗೆ ಬಂದ ಭೂಪರಲ್ಲಿ ಭೂಮರಾಜನೆಂಬುವನು ಆ ಹಂದಿಗೆ ಭರ್ಚಿ ಹಾಕಿದ. ಹಂದಿ ಭಯಗ್ರಸ್ತವಾಗಿ ಗರ್ಜಿಸುತ್ತ ಅಲ್ಲಿಂದ ಓಡಿ ಹೋಯಿತು. ಅದರ ಗರ್ಜನೆಗೆ ಹಂದಿ ಮಲಗಿದ್ದ ಆ ಶಿಲಾ ಗುಂಡು ಸಿಡಿದು ಎರಡು ಹೋಳಾಯಿತು. ಆ ಗುಂಡನ್ನು, ಈಗ ಹಂದಿ ಒಡೆದ ಕಲ್ಲು ಎಂದು ಕರೆಯುತ್ತಾರೆ.

ಐತಿಹ್ಯ ೪

ಈ ಐತಿಹ್ಯದಂತೆ ಜರ್ಮಲೆ ಭೂಪರು ಬಳ್ಳಾರಿಯಿಂದ ಬಂಡ್ರಿಗೆ ಬಂದು ಅಲ್ಲಿಂದ ಬೇಟೆಯಾಡುತ್ತ ಸಿರಮಸೆಟ್ಟಿಹಳ್ಳದ ಕಡೆ ಬಂದರು. ಅಲ್ಲಿ ಅವರು ಬಿಟ್ಟ ಬಾಣ ಹಂದಿಗೆ ತಾಗದೆ ಪಕ್ಕದಲ್ಲಿದ್ದ ಕಲ್ಲು ಗುಂಡಿಗೆ ತಾಗಿತು. ಅದರಿಂದ ಈ ಗುಂಡು ಎರಡು ಹೋಳಾಯಿತೆಂದು ಹೇಳುವರು. ಆ ಕಲ್ಲು ಈಗ ಬೇನಳ್ಳಿ ದುರ್ಗಮ್ಮನ ದೇವಸ್ಥಾನದ ಹತ್ತಿರವಿದೆ ಎಂದು ಹೇಳುತ್ತಾರೆ.[೬]

ಆ ಹಂದಿಯು ಅಲ್ಲಿಂದ ಉಜ್ಜಯಿನಿ ಗ್ರಾಮದ ಕಡೆ ಓಡಿ ಹೋಯಿತು. ಆ ನಾಯಕರು ಆ ಹಂದಿಯನ್ನು ಹಿಂಬಾಲಿಸುತ್ತಾ ಬಹುದೂರ ಓಡಿದರು. ದಾರಿಯಲ್ಲಿ ಅವರಿಗೆ ತುಂಬಾ ಬಾಯಾರಿಕೆಯಾಯಿತು. ಹಂದಿಯು ಪೊದೆ ಒಂದರಲ್ಲಿ ಹೊಕ್ಕು ಬಯಲಾಯಿತು. ದಣಿದು ಬಾಯಾರಿದ ಆ ಭೂಪರು ಅಲ್ಲಿಯ ಮರಗಳ ನೆರಳಿನಲ್ಲಿ ಕುಳಿತರು. ಬೇಟೆಯ ನಾಯಿಗಳು ಪೊದೆಯಲ್ಲಿ ಹೊಕ್ಕು ಮೈ ರಾಡಿ ಮಾಡಿಕೊಂಡು ಹೊರಬಂದವು. ಅದನ್ನು ನೋಡಿ ಈ ಪೊದೆಯಲ್ಲಿ ನೀರಿರಬೇಕೆಂದು ಊಹಿಸಿ ಪೊದೆ ಕಡಿದು ದಾರಿ ನಿರ್ಮಿಸಿದರು. ಆಮೇಲೆ ಕ್ರಮವಾಗಿ ಮೊದಲು ಹಿರಿಯನಿಂದ ಆರು ಮಂದಿ ಒಳಹೋಗಿ ನೀರುಕುಡಿದು ಹೊರಬಂದರು. ಕೊನೆಯ ಭೂಪನಾದ ಭೂಮರಾಜ ಒಳಗಡೆ ಹೋಗಿ ಅಲ್ಲಿದ್ದ ನೀರಿನ ಹೊಂಡವನ್ನು ಮತ್ತು ಮಾವಿನ ಮರಗಳನ್ನು ನೋಡಿ ಆನಂದಭರಿತನಾದನು. ತನ್ನ ಬೊಗಸೆಯಿಂದ ನೀರನ್ನು ತುಂಬಿ ಕುಡಿಯಲು ಮೇಲಕ್ಕೆತ್ತಿದಾಗ ಅದರಲ್ಲಿ ಮಹಾಸ್ವಾಮಿಗಳೊಬ್ಬರು ಮರದ ಟೊಂಗೆಯ ಮೇಲೆ ಕುಳಿತು ಮಾವಿನ ಹಣ್ಣು ತಿನ್ನುತ್ತಿರುವ ಪ್ರತಿಬಿಂಬ ಕಾಣಿಸಿತು. ಆಶ್ಚರ್ಯ ಭರಿತನಾಗಿ ಮೇಲೆ ನೋಡಲು ಮರದ ಟೊಂಗೆಯ ಮೇಲೆ ಯೋಗಿಯೊಬ್ಬ ಮಾವಿನಹಣ್ಣನ್ನು ತಿನ್ನುತ್ತ ಕುಳಿತಿದ್ದ. ಆ ದಿವ್ಯ ಯೋಗಿಯನ್ನು ಅಲ್ಲಿಂದಲೇ ನೋಡಿ ನಮಸ್ಕರಿಸಿದನು. ಅದಕ್ಕೆ ಆ ಯೋಗಿಗಳು ಕೈಯಲ್ಲಿ ಉಳಿದಿದ್ದ ಮಾವಿನ ವಾಟೆ(ಗೊಟ್ಟ) ಯನ್ನು ಅವನ ಉಡಿಯಲ್ಲಿಟ್ಟು ''ನೀನು ರಾಜನಾಗೆಂದು''

ಆಶೀರ್ವದಿಸಿದರು. ಆ ಸ್ಥಳದಲ್ಲಿ ಹೂತು ಹೋಗಿದ್ದ ಮಠವನ್ನು ಬಯಲು ಮಾಡಿ ಜೀರ್ಣೋದ್ಧಾರ ಮಾಡಲು ಅಪ್ಪಣೆ ಕೊಡಿಸಿದರು. ಆ ಪೊದೆಯಲ್ಲೇ ಈಗಿನ ಉಜ್ಜಯಿನಿ ಶ್ರೀಪೀಠಮುಚ್ಚಿ ಹೋಗಿತ್ತೆನ್ನುವರು.

ಭೂಮರಾಜನನ್ನು ಜರ್ಮಲೆ ಗುಡ್ಡ ಪ್ರದೇಶದಲ್ಲಿಯೆ ಅವನ ಸಹೋದರರು ಬಿಟ್ಟುಹೋದರು. ಪೂಜ್ಯರ ಅನುಗ್ರಹದಿಂದ ಭೂಮರಾಜನೇ ಈ ಪ್ರದೇಶದ ರಾಜನಾದ. ಸ್ವಾಮಿಗಳಿಗೆ ವಚನ ನೀಡಿದ ಪ್ರಕಾರ ಪೊದಯ ಆವರಣವನ್ನು ಸಂಪೂರ್ಣ ಬಯಲು ಮಾಡಿ ಹುದುಗಿದ್ದ ದೇವಾಲಯ, ಮಠ ಸಂಕಿರಣವನ್ನು ಬಯಲು ಮಾಡಿ ಜೀರ್ಣೋದ್ಧಾರಗೊಳಿಸಿದ. ಆ ಕಾರ್ಯದಿಂದ ಅವನ ಕೀರ್ತಿ ದಶದಿಕ್ಕುಗಳಲ್ಲಿ ಹಬ್ಬಿತು.

ಪ್ರಸ್ತುತ ಅಧ್ಯಾಯದಲ್ಲಿ ತಿಳಿಸಿದ ಹೆಚ್ಚಿನ ವಿವರಗಳು ಜರ್ಮಲೆ ಪಾಳೆಗಾರರ ಹಸ್ತಪ್ರತಿಯಲ್ಲಿ ಮರುಕಳಿಸಿವೆ.

ಐತಿಹ್ಯ ೫

ಮತ್ತೊಂದು ಐತಿಹ್ಯದ ಪ್ರಕಾರ ಹೈದರಾಲಿ ಒಮ್ಮೆ ಚಿತ್ರದುರ್ಗ ಪಾಳೆಗಾರರ ಮೇಲೆ ಯುದ್ಧ ಸಾರಿದ. ಅವನ ಆಸ್ಥಾನದ ವಿದ್ವಾಂಸನಾಗಿದ್ದ ದಿವಾನ ಪೂರ್ಣಯ್ಯನು ಜರಿಮಲೆಯ ದೊರೆಗಳ ಸಹಾಯ ಪಡೆಯಲು ಸಲಹೆ ನೀಡಿದ. ಹೈದರಾಲಿ ಒಂದು ಬೂದಿ ದಿಬ್ಬದ ಹಳ್ಳಿಯ ಬದಿಗೆ ಬಂದು ಅಲ್ಲಿಂದ ಜರಮಲೆಯ ದೊರೆಯನ್ನು ಓಲೆಗಳ ಮೂಲಕ ಪರಿಚಾರಕರ ಸಹಾಯದೊಂದಿಗೆ ಸಂಪರ್ಕ ಮಾಡಿದ. ಹೈದರಾಲಿಯ ಯುದ್ಧದಲ್ಲಿ ಸಹಾಯ ಮಾಡಲು ಭೂಮರಾಜ ಸಮ್ಮತಿ ನೀಡಿದ. ಆ ಯುದ್ಧದಲ್ಲಿ ಭಾಗಿಯಾಗಿ ಜಯವನ್ನು ತಂದುಕೊಟ್ಟ ತನಗೆ ನೆರುವು ನೀಡಿದ ಪರಾಕ್ರಮಿಗಳಾದ ಈ ಏಳು ಮಂದಿ ನಾಯಕರನ್ನು ಮುಂದೆ ಬೆಳೆಯಗೊಡಬಾರದೆಂದು ಹೈದರಾಲಿ ಮೋಸದಿಂದ ಅವರನ್ನು ಶ್ರೀರಂಗಪಟ್ಟಣದ ಸೆರೆಮನೆಯಲ್ಲಿ ಹಾಕಿದ. ಆ ಸ್ಥಳ ಸೆರೆಮನೆ ಎಂಬುದು ಅವರಿಗೆ ತಿಳಿಯದಾಯಿತು ಮತ್ತು ಅದು ತಪ್ಪಿಸಿಕೊಳ್ಳಲು ಅಸಾಧ್ಯವಾದ ಸ್ಥಳವಾಗಿತ್ತು. ಅಲ್ಲಿಯ ಕಾವಲುಗಾರರು ಒಂದು ರಾತ್ರಿ ಮೈಮರೆತು ಮಲಗಿದ್ದಾಗ ಆ ವೀರರು ಹೈದರಾಲಿ ಸಂಬಂಧಿ ಸುಂದರ ಹೆಂಗಸೊಬ್ಬಳನ್ನು ಅಪಹರಿಸಿಕೊಂಡು ಆ ಸೆರೆಯಿಂದ ಪರಾರಿಯಾದರು. ಆ ಹೆಂಗಸನ್ನು ಉಜ್ಜಯಿನಿಯ ಶ್ರೀಮಠದಲ್ಲೇ ಬಚ್ಚಿಟ್ಟರು. ಈ ವಿಷಯ ತಿಳಿದ ಶ್ರೀಮಠದ ಜಗದ್ಗುರುಗಳು ಅದನ್ನು ತೀವ್ರವಾಗಿ ವಿರೋಧಿಸಿದರು. ಆ ಜಗದ್ಗುರುಗಳೇ ಶ್ರೀಮರುಳಸಿದ್ಧ ಗುರುಗಳು. ಗುರುಗಳ ಹಿತೋಪದೇಶ ಅವರ ಮನಸ್ಸಿಗೆ ಹಿಡಿಸಲಿಲ್ಲ. ಕೊನೆಗೆ ಆ ಗುರುಗಳು ಮುನಿದು ಅವರ ದರ್ಶನಕ್ಕೆ ಇನ್ನು

ಮುಂದೆ ಅವರೂ, ಅವರ ವಂಶಸ್ಥರೂ ಬರಕೂಡದೆಂದು ಆಜ್ಞೆಯಿತ್ತರು. ಅದು ಶಾಪವಾಗಿ ಪರಿಣಮಿಸಿತು. ಅದರಿಂದ ದೊರೆಗೆ ಕಣ್ಣು ಕಾಣದಾದವು. ಈ ರಾದ್ಧಾಂತವನ್ನು ಮನೆಮಂದಿಗೆ, ಮಡದಿಗೆ ಭೂಮರಾಜನು ತಿಳಿಸಿದನು. ಅವರ ಪರಿಚಾರಕರು ಮತ್ತು ಮಂತ್ರಿಗಳ ಪರಿಪರಿಯ ವಿನಂತಿಯ ಮೇರೆಗೆ ಕೊನೆಗೆ ಗುರುಗಳು ತಮ್ಮ ದರ್ಶನ ಭೂಮರಾಜ ದೊರೆಯಿರುವ ಮನೆಯಲ್ಲೇ ಆಗಲೆಂದು ಆಶೀರ್ವದಿಸಿದರು. ಮತ್ತು ಪ್ರತಿವರ್ಷ ತನ್ನ ಸಾನ್ನಿಧ್ಯಕ್ಕೆ ಒಂದು ಕೊಡ ಎಣ್ಣೆ, ೧೨ ಟಂಕ ಹಣವನ್ನು ಕಾಣಿಕೆಯಾಗಿ ಸಲ್ಲಿಸತಕ್ಕದ್ದೆಂದು ವಿಧಿಸಿದರು. ಆ ಎಣ್ಣೆಯನ್ನು ತನ್ನ ದೇವಾಲಯದ ಶಿಖರಕ್ಕೆ ಎರೆದಾಗ ಜಠರವು (ನೆತ್ತಿ) ನೆನೆದು ತಂಪಾಗುವುದು. ಮುಂದೆ ಅವರ ಆತ್ಮಕ್ಕೆ ಸ್ವಲ್ಪ ಸಮಾಧಾನ, ಪರಿಹಾರ ದೊರೆಯುವುದೆಂದು ಹೇಳಿ ಸುಮ್ಮನಾದರು. ಈ ವಿಷಯವನ್ನು ಅವರು ಭೂಮರಾಜನಿಗೆ ಭಿನ್ನವಿಸಿದರು. ಆಗ ಇಮ್ಮಡಿ ಭೂಮರಾಜರು ''ಉಜ್ಜಯಿನಿಯಲ್ಲಿ ಇರುವುದು ಬೇಡ, ಅದನ್ನು ದಾಟುವುದು ಬೇಡ. ನಮ್ಮ ಉಡಿದಾರ ನಾವು ಕಟ್ಟುವುದು ಬೇಡ'' ಎಂದರು.

ಶಾಪವಿಮೋಚನೆಗಾಗಿ ಜರ್ಮಲೆಯ ಇಮ್ಮಡಿ ಭೂಮರಾಜರು ತಮ್ಮ ಮನೆಯಲ್ಲೇ ಶ್ರೀ ಮರುಳಸಿದ್ಧೇಶ್ವರ ಸ್ವಾಮಿಯ ಮೂರ್ತಿಯನ್ನು ಪ್ರತಿಷ್ಠಾಪಿಸಿಕೊಂಡರು. ಈ ಹಿಂದೆ ನೀಡಿದ ಮಾವಿನ ಗೊಟ್ಟಕ್ಕೆ ಬಂಗಾರದ ಕವಚವನ್ನು ತೊಡಿಸಿ ಅದನ್ನು ಸ್ವಾಮಿಯ (ಮೂರ್ತಿಯ) ಕೊರಳಲ್ಲಿಟ್ಟು ಆರಾಧಿಸತೊಡಗಿದರು. ಕೊಟ್ಟ ವಚನದಂತೆ ಪ್ರತಿವರ್ಷ ಒಂದು ಕುಂಭ ಎಣ್ಣೆ, ೧೨ ಟೆಂಕೆ ದಕ್ಷಿಣೆಯನ್ನು ವೈಶಾಖ ಶುದ್ಧ ಷಷ್ಠಿಗೆ ಜರ್ಮಲೆಯಿಂದ ಬೇರೆಯವರ ಸಂಗಡ ಉಜ್ಜಯಿನಿಯ ಶ್ರೀಪೀಠಕ್ಕೆ ಮಡಿಹುಡಿಯಿಂದ ಪಾದಯಾತ್ರೆ ಮುಖಾಂತರ ಕಳಿಸಿಕೊಡುವ ಪರಂಪರೆಯನ್ನು ಆರಂಭಿಸಿದರು.[೭]

ಐತಿಹ್ಯ-೬

ಮರುಳಸಿದ್ಧಸ್ವಾಮಿಯ ತೈಲಾಭಿಷೇಕದ ಬಗ್ಗೆ ಇರುವ ಇನ್ನೊಂದು ಐತಿಹ್ಯದ ಪ್ರಕಾರ ಜರ್ಮಲೆಯ ಪಾಳೆಗಾರರು ಬೇಟೆಯಾಡುವಾಗ ಪೊದೆಯಲ್ಲಿ ಹೋಗುವ ಹಂದಿಗೆ ಬಾಣಬಿಟ್ಟರು. ಆ ಬಾಣ ಆ ಪೊದೆಯಲ್ಲಿ ಯೋಗಸಮಾಧಿಯಲ್ಲಿ ಕುಳಿತಿದ್ದ ಶ್ರೀಮರುಳಾರಾಧ್ಯ ಯತಿವರ್ಯರ ತಲೆಗೆ ತಾಗಿತು. ಅವರ ತಲೆಯಿಂದ ರಕ್ತ ಚಿಮ್ಮತೊಡಗಿತು ರಾಜನು ನೆಟ್ಟ ಬಾಣವನ್ನು ಕಿತ್ತು ಎಣ್ಣೆ ಹಾಕಿ ತಂಪು ಮಾಡಿದನು. ಮುಂದೆ ಗುರುವಿತ್ತ ಶಾಪ ವಿಮೋಚನೆಗಾಗಿ ಮತ್ತೆ ಅವರ ತಲೆಗೆ ಎಣ್ಣೆ ಎರೆದನಂತೆ.[೮] ಈ ವಿಷಯ ಉಜ್ಜಯಿನಿ ಪೀಠದ ಶ್ರೀಮರಳುಸಿದ್ಧಸ್ವಾಮಿಯ ತೈಲಾಭಿಷೇಕಕ್ಕೆ ಸಂಬಂಧಿಸಿದ್ದಾಗಿದೆ.

ಹಸ್ತಪ್ರತಿಯಲ್ಲಿ - ಜರ್ಮಲೆಯ ಪಾಳೆಗಾರರು

ಸಾರಾಂಶ :

ಜರಿಮಲೆ ಸಂಸ್ಥಾನದ ಒಂದು ಹಸ್ತಪ್ರತಿಯಲ್ಲಿ ಅನೇಕ ಮೌಲಿಕ ವಿಚಾರಗಳಿದ್ದು ಅವುಗಳನ್ನು ಸ್ಥೂಲವಾಗಿ ಇಲ್ಲಿ ಪರಿಚಯಸಲಾಗಿದೆ.*

ಹಸ್ತಪ್ರತಿಯ ಆರಂಭದಲ್ಲಿ ಗುರುಬಸವಲಿಂಗ, ಶ್ರೀ ಶಾರದಾಂಬಾ, ಗಣಪತಿ, ಗುರು ಮರುಳಾರಾಧ್ಯರನ್ನು ಸ್ತುತಿಸಿ ಗುರುಪ್ರಸನ್ನ ಮತ್ತು ಶುಭಮಸ್ತುವನ್ನು ಬರೆಯಲಾಗಿದೆ. ಅಂತ್ಯದಲ್ಲಿ ಮರುಳಾರಾಧ್ಯ ಎಂದಿದೆ. ಮೂಲಪ್ರತಿಯನ್ನು ಸುಮಾರು ೧೯೨೭-೨೮ರಲ್ಲಿ ನಕಲು ಮಾಡಲಾಗಿದೆ ಎಂದಿದ್ದಾರೆ. ಅದರ ಪೂರ್ಣ ಪಾಠ ಈ ಅಧ್ಯಯನದ ಅಂತ್ಯದಲ್ಲಿದೆ.

ಜರಿಮಲೆಯ ಸಂಸ್ಥಾನದವರು ಆರಿಷಿಯಿಂದ ಬಂದವರು. ಅವರು ಕಂಚಿ ದೇಶದವರು. ಅವರು ಅಲ್ಲಿರುವಾಗ ಆ ದೇಶವನ್ನು ಮುಸಲ್ಮಾನ ದೊರೆ ಮೀಯ್ಯಾ ಎಂಬುವರು ಆಳುತ್ತಿದ್ದರು. ಸದ್ರಿಯ ಬೂದಿಶಿದ್ಧರಾಜನೊಬ್ಬ ಸದ್ರಿ ಕಂಚಿ ಪ್ರದೇಶದಲ್ಲಿ ಕಾಲ ಕಳೆಯುತ್ತಿದ್ದನು. ಆತನು ಜಂಗಮ ಸೇವೆ, ಶಿವಪೂಜೆ, ಉಪವಾಸ ಶಿವಧ್ಯಾನ, ಶಿವನಾಮ ಪಾರಾಯಣ ಇತ್ಯಾದಿ ವ್ರತದಿಂದ ಅವನು ಕ್ಷೇಮವಾಗಿದ್ದನು.

ಬೂದಿಶಿದ್ಧರಾಜನ ಭಕ್ತಿಭಾವ ನೋಡಿ ಮಾಯದ ಸ್ವಾಮಿಗಳು ಪ್ರತ್ಯಕ್ಷರಾಗಿ ಬಂದು ನಿಂತರು. ಅವನಿಗೆ ಆ ಸ್ಥಳವನ್ನು ಬಿಟ್ಟು ತನ್ನ ಕಂಬಳಿಯನ್ನು ತೆಗೆದುಕೊಂಡು ತಾವು ತೋರಿಸಿದ ಜಾಗದಲ್ಲಿ ಒಂದು ಹಟ್ಟಿಯನ್ನು ಹಾಕೆಂದರು. ಬೂದಿಶಿದ್ಧನ ಹೆಂಡತಿ ಲಿಂಗಮ್ಮನಾಗತಿ. ಈ ದಂಪತಿಗಳಿಗೆ ಏಳು ಮಂದಿ ಮಕ್ಕಳು. ಅವರು ೧. ಬೋಮ್ಮಂತರಾಜು, ೨) ಇಮ್ಮಡಿರಾಜು, ೩) ಮುಮ್ಮಡಿರಾಜು, ೪) ಮಲ್ಲಿಕಾರ್ಜುನನಾಯ್ಕ, ೫) ಲಿಂಗ ನಾಯ್ಕ, ೬) ಕುಕ್ಕುಲಪೊನ್ನಪ್ಪನಾಯ್ಕ ಮತ್ತು ೭) ಕಲಿಪುರಷ ಭೂಮರಾಜು. ಅವರ ಮನೆದೇವರು ಕಂಚಿಯ ಓಬಳದೇವ. ಬೊಮ್ಮದೇವ, ಗಾದ್ರಿಲಿಂಗ, ಕಂಕಾಳೈಯಾ. ಈ ದೇವರುಗಳ ಪೆಟ್ಟಿಗೆಗಳನ್ನು ಪೂಜಾರಿಗಳ ಮೇಲೆ ಹೊರಿಸಿಕೊಂಡು ಇಪ್ಪತ್ತೊಂದನೆಯ ದಿವಸಕ್ಕೆ ಕಂಚಿ ದೇಶದಿಂದ ಮಳೆ ಭೂಮ ಸಮುದ್ರಕ್ಕೆ ಬಂದರು.

ಮಾಯದ ಗುರುಗಳೆನಿಸಿದ ಚನ್ನಬಸವಸ್ವಾಮಿಗಳ ಅಪ್ಪಣೆ ಪ್ರಕಾರ ಮಳೆ ಭೂಮಸಮುದ್ರದಲ್ಲಿ ಹಟ್ಟಿಯನ್ನು ಹಾಕಿಕೊಂಡು ಅಲ್ಲಿ ಬೂದಿಶಿದ್ಧ ತನ್ನ ಏಳು ಮಂದಿ ಮಕ್ಕಳೊಂದಿಗೆ ನೆಲೆಸಿದನು. ಅಲ್ಲಿಯ ಅರಣ್ಯದೊಳಗೆ ಅವರು ಬೇಟೆ ಆಡುತ್ತ ನಡೆದಾಗ ಅಲ್ಲಿ ಅರಣ್ಯ, ಗುಡ್ಡ, ಗವಿಗಳು, ಸರೋವರಗಳು, ಗಿಡ ಮರಗಳು ಕಾಣಿಸಿದವು.

ಬೂದಿಶಿದ್ಧರಾಜು ತನ್ನ ಕಾಲ ಬಲಗಡೆಯ ಸ್ಥಳವನ್ನು ಏನೆಂದು ಕರೆಯುತ್ತಾರೆಂದು ತನ್ನ ಮಕ್ಕಳ ಮುಂದೆ ಚನ್ನಬಸವ ಸ್ವಾಮಿಗಳಿಗೆ ಅರಿಕೆ ಮಾಡಿಕೊಂಡರು. ಅದು ಮಹಾಶಂಕರ ಸ್ಥಳ. ಅಲ್ಲಿ ಬೇಟೆಯನ್ನು ಎಚ್ಚರಿಕೆಯಿಂದ ಆಡಿರಿ ಎಂದರು. ಅಲ್ಲೊಂದು ಕೊಳ ಮತ್ತು

ಗವಿಯಿದ್ದಿತು. ಇವರ ಮಾತಿನ ಶಬ್ದ ಕೇಳಿ ಅಲ್ಲಿಯ ಗವಿಯಿಂದ ಝರಿಯೊಂದು(ಚಿರಿ) ಹೊರ ಬಂದಿತು. ಅದು ಈ ಬೇಟಗಾರರ ಮತ್ತು ನಾಯಿಗಳ ಸಂಗಡ ಜಗಳಮಾಡಿ ಪ್ರಾಣಬಿಟ್ಟಿತು.

ಈ ಸ್ಥಳ ಗಂಡುಭೂಮಿಯಾಗಿದೆ. ಮುಂದಕ್ಕೆ ಸಾಗಿರೆಂದು ಚನ್ನಬಸವಸ್ವಾಮಿಗಳು ಹೇಳಿದಾಗ ಅವರು ಒಂದು ಗುಡ್ಡಕ್ಕೆ ಹೋದರು. ಆ ಪ್ರದೇಶದಲ್ಲಿ ಸರೋವರದ ಬಳಿ ಮಲಗಿದ್ದ ಮೊಲವನ್ನು ನೋಡುವುದರೊಳಗೆ ಅದು ಎದ್ದು ಬಂದು ಅವರ ಸಂಗಡ ಜಗಳವಾಡತೊಡಗಿತು. ಬೂದಿಸಿದ್ಧನ ಚಿಕ್ಕ ಮಗನಾದ ಭೂಮರಾಜ ತನ್ನ ಬಿಲ್ಲಿನಿಂದ ಆ ಮೊಲವನ್ನು ಹೊಡೆದುಬಿಟ್ಟನು.

ಇದನ್ನು ನೋಡಿ ಅಲ್ಲಿರುವ ಜನರು ಆಶ್ಚರ್ಯಪಟ್ಟರು. ಬೂದಿಶಿದ್ಧರಾಜುವಿನ ಏಳು ಮಂದಿ ಮಕ್ಕಳು ಆ ಸ್ಥಳವನ್ನು ತಮಗೆ ಸ್ಥಿರ ಮಾಡಿಸಿಕೊಡಬೇಕೆಂದು ಮಳೆಬಗೆ ಚನ್ನಬಸಪ್ಪ ಸ್ವಾಮಿಗಳಿಗೆ ವಿನಂತಿಸಿದರು. ಸ್ವಾಮಿಗಳು ತಮ್ಮ ಕೈಯಲ್ಲಿದ್ದ ಬೆತ್ತದಿಂದ ಸುತ್ತ ಮಂಡಲವನ್ನು ಬರೆದು ಅಪ್ಪಣೆ ಕೊಟ್ಟರು. ಅವರೆಲ್ಲ ಮಳೆ ಭೂಮ ಸಮುದ್ರಕ್ಕೆ ಬಂದು ಬೇಟೆಯಾಡಿದ ಮೊಲದ ಹೊಟ್ಟೆಯನ್ನು ಬಗೆದರು. ಅದರಲ್ಲಿ ಹಶಿ ಕಡ್ಲೆಕಾಳು ಇದ್ದವು. ಈ ಕಡ್ಲೆಕಾಳು ದೊಯುವ ಸ್ಥಳ ಕೊಟ್ಟೂರಿನ ಕೇರಿಯೊಳಗೆ ಲಿಂಗಶೆಟ್ಟಿ ತನ್ನ ಮನೆಯ ಕಟ್ಟೆಯ ಮೇಲೆ ಹಾಕಿದ್ದನ್ನು ಪತ್ತೆ ಹಚ್ಚಿದರು. ಈ ಕಡ್ಲಿಯನ್ನು ಮೊಲ ತಿಂದು ಜರಿಮಲೆ ಮೇಲುದುರ್ಗದ ಮೇಲೆ ಮಲಗಿದ್ದನ್ನು ನೆನಸಿಕೊಂಡರು. ಅದನ್ನು ಕೊಯಿದು ಪಾಕಮಾಡಿ ಸರ್ವರು ಊಟ ಮಾಡಿರೆಂದು ಹೇಳಿ ಆ ಸ್ವಾಮಿಗಳು ಅಲ್ಲಿಂದ ಹೊರಟು ಹೋದರು.

ಈ ಸಂದರ್ಭದಲ್ಲಿ ಲೇಖಣಿಕೇರಿ (ಲಕ್ಕಣಕೇರಿ) ಗ್ರಾಮದಲ್ಲಿ ಒಂದು ಕಾಡುಹಂದಿ (ವರಾಹ) ಅಲ್ಲಿಯ ಹಳ್ಳದ ಕಡೆಗೆ ಬ್ಯಾಟಿಗೆ ಹೋದವರಿಗೆ, ಓಡಾಡುವವರಿಗೆ ಹಿಂಸೆ ನೀಡಿ ಹೆದರಿಸಿ ಕಾಡುತ್ತಿತ್ತು. ಆ ಗ್ರಾಮದ ಬೇಟೆಗಾರ ಬೈಯ್ಯಪ್ಪನು ಬೂದಿಶಿದ್ಧರ ಬೇಟೆಯ ಪರಾಕ್ರಮವನ್ನು ಅರಿತು ಅವರಿಗೆ ತನ್ನ ಗ್ರಾಮದ ಕಾಡು ಹಂದಿಯನ್ನು ಬೇಟೆ ಆಡಲು ವಿನಂತಿಸಿಕೊಂಡನು. ಈ ಕಾರ್ಯಕ್ಕೆ ಬೂದಿಸಿದ್ಧರ ಪರಿವಾರವನ್ನು ಕಳಿಸಲು ಗುರುಗಳಾದ ಚನ್ನಬಸವಸ್ವಾಮಿಗಳ ಅನುಗ್ರಹವಾಯಿತು. ಅವರು ಗುರುಗಳ ಸಮೇತ ಲೆಖಣಿಕೆರೆ ಹತ್ತಿರದ ಕೋಣನದಿನ್ನೆಯ ಹಳ್ಳದ ಕಡೆ ಬಂದರು. ಒಂದು ಪೊದೆಯಿಂದ ಆ ಕಾಡು ಪ್ರಾಣಿಯು ಹೊರಬಂದು ಗರ್ಜನೆ ಮಾಡಿತು. ಬೂದಿಶಿದ್ಧನ ಏಳು ಮಂದಿ ಮಕ್ಕಳು ನಾಯಿಗಳ ಸಮೇತ ಆ ಕಾಡಹಂದಿಯನ್ನು ಬೆನ್ನಹತ್ತಿದರು. ಅದು ಉಜ್ಜಯಿನಿ ಗ್ರಾಮದ ಹತ್ತಿರದ ಶೀಗಿ ಪೊದೆಯೊಳಗಡೆ ಹೋಗಿ ಮಾಯವಾಯಿತು.

ಅಷ್ಟೊತ್ತಿಗೆ ಅವರೆಲ್ಲ ಅನ್ನ ನೀರಿಲ್ಲದೆ ನಿತ್ರಾಣರಾಗಿದ್ದರು. ಬದಿಯ ಪೊದೆಯೊಳಗೆ ಸಿಂಹ ಹೋಗಿ ಮೈ ತೊಳೆದುಕೊಂಡು ಹೊರಬಂದದ್ದನ್ನು ಅವರು ನೋಡಿದರು. ಆ ಸ್ಥಳಕ್ಕೆ ಅವರು ಹೊರಟರು. ಅಲ್ಲೊಂದು ನೀರಿನ ವರತೆ ಕಂಡಿತು. ಹಿರಿಯ ಮಗನಾದ ಮುಮ್ಮಡಿ ಅರಸ ಅಲ್ಲಿ ಒಂದು ತೂಗು ಮಂಚದ ಮೇಲೆ ಸಾಕ್ಷಾತ್ ಪರಮಾತ್ಮನಂತೆ ಒಬ್ಬ ಗುರುವು ಕುಳಿತಿದ್ದನ್ನು ನೋಡಿದನು. ಆತನು ಯಾರೆಂದು ಅವನು ಕೇಳಿದನು ಅದಕ್ಕೆ ತನ್ನ ಕಿರಿಯ

ತಮ್ಮನಿಗೆ ತಾನು ಯಾರೆಂಬುದನ್ನು ಹೇಳುವೆನೆಂದನು. ಆಗ ಅವನು ತನ್ನ ಚಿಕ್ಕ ತಮ್ಮನಾದ ಭೂಮರಾಜನನ್ನು ಕಳಿಸಿದನು. ಆತ ಅಲ್ಲಿಗೆ ಹೋಗಿ ನೀರಿನ ವರತೆಗೆ ಇಳಿಯುವ ಮೊದಲು ಕೈ ಜೋಡಿಸಿ ನಿಂತನು. ಆಗ ಗುರು ಆತನು ರಾಜನಾಗಲೆಂದು ಹೇಳಿ ತನ್ನ ಕೈಯಲ್ಲಿದ್ದ ಚತುಷ್ಕದ ಬೀಜವನ್ನು ಕೊರಳಲ್ಲಿ ಧರಿಸಿಕೊ ಎಂದು ತಿಳಿಸಿ ಅದನ್ನು ಅವನ ಕರದೊಳಗೆ ಇಟ್ಟನು. ಮುಂದುವರಿದು ಆ ಸ್ಥಳದಲ್ಲಿ ತನ್ನ ಮಠ ಭೂಗತವಾಗಿದೆ. ಕಾಮಾಟಿಗರನ್ನು ಅಲ್ಲಿಗೆ ಕರೆಸು ಅದರಲ್ಲಿ ಏಳು ಕೊಪ್ಪರಿಗೆ ಲಕ್ಷ್ಮಿಯಿದೆ. ಆ ಮಠವನ್ನು ತೆಗಿಸಿ ಜೀರ್ಣೋದ್ಧಾರ ಮಾಡಿ ನಿಮ್ಮ ಜತೆಯಲ್ಲಿದ್ದ ಮಾಯದ ಸ್ವಾಮಿಗಳಿಗೆ ಮಂಟಪವೊಂದನ್ನು ನಿರ್ಮಾಣ ಮಾಡು, ಈ ಭೂಲೋಕದಲ್ಲಿ ಏಕ ಚಕ್ರವರ್ತಿಯಾಗಿ ಬಾಳು, ಸಿಂಹಾಸನವನ್ನು ಪ್ರತಿಷ್ಠೆ ಮಾಡು ಎಂದರು. ಇದೂ ಅಲ್ಲದೆ ದೇಶದಲ್ಲಿರುವ ಪೇಟಿಶೆಟ್ಟಿ, ಪಟ್ಟಶೆಟ್ಟಿ ಮೊದಲಾದ ದೊಡ್ಡ ದೊಡ್ಡ ಪೇಟೆಯವರನ್ನು ಕರೆಸಿ ಅಲ್ಲಿ ಒಬ್ಬರನ್ನು ಜಗದ್ಗುರುಗಳನ್ನು ಮಾಡೆಂದು ಸೂಚಿಸಿದನು.

ಮೂರು ದೇಶದ ಸಂಸ್ಥಾನಿಕರು, ಮೂವತ್ತು ಸಾವಿರ ಪೇಟೆಸ್ತರು ಈ ಸಿಂಹಾಸನವನ್ನು ನಿರ್ಮಾಣಮಾಡಲು ದಾನಕಾಣಿಕೆ ಕೊಟ್ಟು ಆ ದೇವಸ್ಥಾನ ಮತ್ತು ಮರುಳಾರಾಧ್ಯನ ಭಾರ ನಿಮ್ಮದೇ ಇರುತ್ತದೆ ಎಂದು ಹೇಳಿ ಹೊರಟು ಹೋದರು.

ಈ ವಿಷಯವನ್ನು ತನ್ನ ಸಹೋದರರಿಗೆ ತಿಳಿಸಿದನು. ಆರು ಮಂದಿ ಅಣ್ಣ-ತಮ್ಮಗಳು ಸೇರಿ ತಂದೆಗೆ ಈ ವೃತ್ತಾಂತವನ್ನು ತಿಳಿಸಿದರು. ಮುಂದೆ ಅವರು ಭೂಮಸಮುದ್ರವನ್ನು ಬಿಟ್ಟು ಬೇಟೆಯಾಡಿದ ಜಾಗಕ್ಕೆ ಬಂದರು. ಅಲ್ಲಿ ಅವರ ಗುರುಗಳು ಬೆತ್ತದಿಂದ ಬರೆದ ಮಂಡಲದಲ್ಲಿ ಹುಗ್ಗಿಯನ್ನು ನೀಡಿ ಬುಡ್ಡೆಕಲ್ಲು ನಿರ್ಮಾಣ ಮಾಡಿದರು.

ಚಿತ್ರಭಾನು ಸಂವತ್ಸರ, ಕಾರ್ತೀಕ ಶುದ್ಧ ಬುಧವಾರ ಜರಿಮಲೆಯಲ್ಲಿ ಭಟ್ಟಂಗಿಯವನಿಂದ ರಾಜನು ೩ ಸಾರಿ ಕೂಗಿಸಿದರು. ೪೮ ಲಕ್ಷ ವರಹಗಳನ್ನು ತರಿಸಿ ಅಲ್ಲಿ ಕೋಟೆ, ಕೊತ್ತಳ, ಬಾವಿ, ಕೆರೆ, ಪಟ್ಟಣ ಮಾಡಿಸಿದನು. ಹತ್ತು ವರುಷಕ್ಕೆ ಬೇಕಾಗುವ ಹುಲ್ಲನ್ನು ರೈತರಿಗೆ ಕೊಡಿಸಿದನು.

ಗುಡಿಕೋಟೆ, ಸೊಂಡೂರು, ವಡ್ಡು, ದರೋಜಿ ಬಾಂಡ್ರಾಲಿ, ತುಡುತುಸಿ, ಕೊಳಗಲ್ಲು, ಬಳ್ಳಾರಿಯನ್ನು ಗೆದ್ದುಕೊಂಡನು. ಮಲುಕಾರ್ಜುನ ನಾಯ್ಕ ೫೦೦ ಕಾಲ್ದಳ, ೩೦೦ ಕುದುರೆದಳ, ೫ ಆನೆದಳ, ೯ ಒಂಟೆದಳ ಸೈನ್ಯವನ್ನು ಸುರಪುರಕ್ಕೆ ತೆಗೆದುಕೊಂಡು ಹೋಗಿ ಯುದ್ಧ ಮಾಡಿದ. ಸುರುಪುರದ ಹೆಣ್ಣುಮಗಳ ತಲೆಯನ್ನು ಕೊಯ್ದನು. ಆಕೆಯ ಭಕ್ಷ್ಯ, ಭಂಡಾರವನ್ನು ಜರಮಲೆಗೆ ತರುವದರೊಳಗೆ ಆ ರುಂಡ ಬಂದು ಮನಿಯೊಳಗೆ ಕುಳಿತಿದ್ದಿತು. ತಾನು ಅವನ ಮನೆ ದೇವತೆಯಾಗಿ ತನ್ನ ದಂಡಿನಲ್ಲಿದ್ದು, ತನ್ನ ಹೆಸರನ್ನು ದುರ್ಗಾದೇವತೆಯೆಂಬ ನಾಮಕರಣದಿಂದ ಪೂಜಿಸಿದರೆ ಅಪಜಯವಿರುವುದಿಲ್ಲವೆಂದಳು.

ಈ ಕಡೆ ಭೂಮರಾಜನು ತನ್ನ ಮನೆಯ ಗುರುವೂ ಆದ ಮರುಳಸಿದ್ಧನ ಸೇವಾ ಮಂಟಪ, ದೇವಸ್ಥಾನ, ಬಾವಿಗಳು, ಬೀದಿ, ಬಜಾರುಗಳು, ಗುಡಿಯ ಸುತ್ತ ಆವರಣಗಳು, ಮಹಾದ್ವಾರ, ಗೋಪುರಗಳು, ಕಾಮಟಗರ ಕಡೆಯಿಂದ ಕಟ್ಟಸಿದನು.

ಮಹಾಸ್ವಾಮಿಯ ಪೂಜೆಗೆ ಪಟ್ಟದ ಕಾಶಿಯ ಪೂಜಾರಿಯನ್ನು ನೇಮಿಸಿದರು. ಉಗ್ರಾಣಿಕರನ್ನು ಭಾಧ್ಯಸ್ಥರನ್ನಾಗಿ ಮಾಡಿಯಿಟ್ಟರು. ಗುಡಿನಾಯ್ಕನಿಗೆ ಮಡಿ, ಮಾನ್ಯ, ಇನಾಮು ಕೊಟ್ಟರು. ಅಲ್ಲಿಗೆ ಬರುವ ಮಾಲು, ನಿಧಿ, ನಿಕ್ಷೇಪ ಬಂದರೆ ಖರ್ಚು ಬಂದರೆ ಅದನ್ನು ಈ ಮೂವರು ನೋಡಿಕೊಳ್ಳಬೇಕೆಂದಿದೆ. ಇದರಲ್ಲಿ ಉಳಿದ ಭಾಗವನ್ನು ಅವರು ತೆಗೆದುಕೊಳ್ಳಬಹುದು. ಇದಲ್ಲದೆ ಮಹಾಸಂಸ್ಥಾನದ ರಥೋತ್ಸವಕ್ಕೆ, ಮಹೋತ್ಸವಗಳಿಗೆ ಮರುಳಾರಾಧ್ಯರ ಸೇವೆಗೆ ವರ್ಷ ಒಂದಕ್ಕೆ ೫೦ ವರಹಾ ಸಂಸ್ಥಾನದಿಂದ ಗುಡಿಗೆ ಒಪ್ಪಿಸತಕ್ಕದ್ದೆಂದು ವಿಧಿಸಲಾಗಿದೆ.

ವಿಕ್ರಮ ಸಂವತ್ಸರ ಕಾರ್ತೀಕ ಶುದ್ಧ ೧೦ ಗುರುವಾರ ಮುಹೂರ್ತ ದಶನಾಮ ವರ್ತಿಯಲ್ಲಿ ವುಜೀಯ ಎಂಬ ನಾಮ ಮಾಡಿ ೧೨ ಮಂದಿ ಆಯಗಾರರನ್ನು ನೇಮಿಸಿ ಉತ್ತರ ದಿಕ್ಕಿನಲ್ಲಿ ಬುರ್ಜುಕಟ್ಟಿಸಿ ಆ ಸ್ಥಳದಲ್ಲಿ ಹುಗ್ಗಿ ಮನೆಯೊಂದನ್ನು ಕಟ್ಟಿಸಿ ಹುಗ್ಗಿ ಶಾಸ್ತ್ರವನ್ನು ಮಾಡಿ ಶಾಸ್ತ್ರೀಕರಾದ ಬುಡ್ಡೇಕಲ್ಲು ಪೂಜಾರಿಯಿಂದ ನಿರ್ಣಯಮಾಡಿ ಅವರ ಗುರುಗಳಾದ ಚನ್ನಬಸವ ಸ್ವಾಮಿಗಳವರಿಗೆ ಪಟ್ಟಾಭಿಷೇಕವನ್ನು ಹರಪನಹಳ್ಳಿ, ಚಿತ್ರದುರ್ಗ, ಜರಿಮಲೆ ಸಂಸ್ಥಾನದವರು, ಮಧ್ಯವರ್ತಕರು, ಸಾಹುಕಾರರು, ಪೇಟಿಶೆಟ್ಟಿ, ಪಟ್ಟಣಶೆಟ್ಟಿ ಮುಂತಾದವರ ಸಮ್ಮುಖದಲ್ಲಿ ಮಾಡಿದನು. ಮಠವನ್ನು ತಯಾರು ಮಾಡಿಸಿ ಆ ಸಿಂಹಾಸನದ ಗದ್ದುಗೆ ಮೇಲೆ ಕೂಡಿಸಿದರು. ಪಾದಗಾಣಿಕೆಯನ್ನು ಇಟ್ಟು ಈ ಮಠಕ್ಕೆ ಕಾರ್ಯಕರ್ತರಾಗಿರುವಿರೆಂದು ಸರ್ವಜನರನ್ನು ಒಪ್ಪಿಸಿದರು. ಇತ್ತಲಾಗಿ ಶ್ರೀ ಮರುಳಸಿದ್ಧೇಶ್ವರ ದೇವರ ಗುಡಿ ಭೂಸ್ಥಾಪನೆಯಾಯಿತು. ಅದನ್ನು ಕೊಮಟಿಗರನ್ನು ಕರಿಸಿ ಅವರಿಗೆ ಖರ್ಚು ಆದ ಮೂರು ಲಕ್ಷ ನಾಣ್ಯ ಕೊಟ್ಟರು. ಕೊನೆಗೆ ಮರುಳಾರಾಧ್ಯ ಎಂದಿದೆ.

ಡಾ. ಎಂ. ಶಿವಮೂರ್ತಿ ಅವರು ತಮ್ಮ ಲೇಖನದಲ್ಲಿ ಜರ‍್ಮಲೆಯ ಪಾಳೆಗಾರರು ಉಜ್ಜಯಿನಿಯ ಶ್ರೀ ಮರುಳಸಿದ್ಧ ಸ್ವಾಮಿಯ ದೇವಸ್ಥಾನದ ಸುತ್ತಮುತ್ತಲಿನ ಒಂಬತ್ತು ಪಾದಗಟ್ಟೆಗಳಿರುವ ಭೂಪ್ರದೇಶವನ್ನು ಶ್ರೀಪೀಠದ ಜಗದ್ಗುರುಗಳಿಗೆ ಸಮರ್ಪಿಸಿದರೆಂದು ಹೇಳಿರುವರು.[೧೦]

ಜರ‍್ಮಲೆಯ ಪಾಳೆಗಾರರ ಮನೆ

ಜರ‍್ಮಲೆಯ ಪಾಳೆಗಾರರ ಮನೆಯ ದೇವರ ಕೋಣೆಯಲ್ಲಿ ಶ್ರೀ ಮರುಳಸಿದ್ಧಸ್ವಾಮಿಯ ಬೆಳ್ಳಿಯ ಮುಖವಾಡವಿದೆ. ಈ ದೇವರ ಕೊರಳಲ್ಲಿ ಬಂಗಾರದ ಕವಚವುಳ್ಳ ಮಾವಿನ ಗೊಟ್ಟವಿದೆ ***(ಚಿತ್ರ, ನಂ. ೧೭೭-೧೭೮)*** ಹಾಗೂ ಕೊರಳಲ್ಲಿ ರುದ್ರಾಕ್ಷಿಸರ ಮತ್ತು ಸುರಗಿಗಳನ್ನು ಧರಿಸಲಾಗಿದೆ. ಬದಿಯಲ್ಲಿ ನಂದಿ, ಗಣೇಶರ ವಿಗ್ರಹಗಳಿವೆ. ಈ ದೊರೆಗಳು ಶಾಕಾಹಾರಿಗಳು. ಶ್ರೀ ಸ್ವಾಮಿಯ ಭಕ್ತರು. ಅವರ ಮನೆತನದ ಗುರುಗಳು ಜರ‍್ಮಲೆ ಬಾಲ ಒಡೆಯರ ಮಠದವರಾಗಿದ್ದಾರೆ.[೧೧]

ಜರ್ಮಲೆಯ ಪಾಳೆಗಾರರ ಪರಂಪರೆ

ಪ್ರತಿವರ್ಷ ಈ ಗ್ರಾಮದ ವೀರಶೈವ ಮಠದ ಸ್ವಾಮಿಯೊಬ್ಬರನ್ನು ಜರ್ಮಲೆ ಪಾಳೆಗಾರರು ತಮ್ಮ ಮನೆಗೆ ಕರೆಸಿ ಅವರ ಪಾದಪೂಜೆ ಮಾಡಿ ಉಲುಪಿ (ಅಕ್ಕಿ, ಬೇಳೆಕಾಳು, ಬೆಲ್ಲ, ದಕ್ಷಿಣೆ) ಕೊಡುವರು. ಆ ಸ್ವಾಮಿಗಳಿಂದ ಉಜ್ಜಯಿನಿ ಮರುಳಸಿದ್ಧ ಸ್ವಾಮಿಗೆ ಮತ್ತು ಉಜ್ಜಯಿನಿ ಕಳಿಸುವ ಎಣ್ಣೆ ತುಂಬಿದ ಕುಂಭಕ್ಕೆ ಜರ್ಮಲೆ ದೊರೆಗಳು ಮೊದಲು ಮಾಡಿ ಮಂಗಳಾರತಿ ಮಾಡುವರು. ಆ ಕುಂಭವನ್ನು ಮುಚ್ಚಿ ವೈಶಾಖ ಶುದ್ಧ ಪಂಚಮಿ ದಿವಸ ಉಜ್ಜಯಿನಿ ಪೀಠಕ್ಕೆ ಕಳಿಸುವರು. ವೈಶಾಖಶುದ್ಧ ಷಷ್ಠಿಯ ದಿನ ಬೆಳಿಗ್ಗೆ ೮ ಗಂಟೆಗೆ ಮಂಗಳವಾದ್ಯ ಸಮೇತ ಜರ್ಮಲೆ ಗ್ರಾಮದಿಂದ ಆ ಕುಂಭವನ್ನು ಬೀಳ್ಕೊಡುವರು. ಆ ಎಣ್ಣೆಯ ಕುಂಭ (ಕೊಡ) ವನ್ನು ದೊರೆಗಳ ಅನುಯಾಯಿಗಳೇ ಒಯ್ಯುವರು.

ಉಜ್ಜಯಿನಿಯ ಶ್ರೀಪೀಠದಲ್ಲಿ ಜರ್ಮಲೆ ರಾಜರು ಕಳಿಸಿದ ಆ ಎಣ್ಣೆಯ ಕುಂಭವನ್ನು ಮಂಗಳವಾದ್ಯದೊಂದಿಗೆ ಸ್ವಾಗತಿಸಿ ಪೂಜ್ಯ ಜಗದ್ಗುರುಗಳ ಸನ್ನಿಧಾನಕ್ಕೆ ಅರ್ಪಿಸುವರು. ಜಗದ್ಗುರುಗಳ ಆಶೀರ್ವಾದ ಪಡೆದ ನಂತರ ಆ ದಿನ ಸಾಯಂಕಾಲ ನಿಗದಿತ ವೇಳೆಯಲ್ಲಿ ಜರ್ಮಲೆಯ ಎಣ್ಣೆಯ ಕುಂಭವನ್ನು ಪ್ರಥಮವಾಗಿ ಶ್ರೀ ಮರುಳಸಿದ್ಧಸ್ವಾಮಿಯ ಶಿಖರಕ್ಕೆ ಎರೆಯುವರು. ತದನಂತರ ಇನ್ನಿತರ ಭಕ್ತರ ಎಣ್ಣೆಯನ್ನು ಎರೆಯುವರು. ಎಣ್ಣೆ ತಲುಪಿದ ಬಗ್ಗೆ ಶ್ರೀಜಗದ್ಗುರುಗಳು ಜರ್ಮಲೆ ರಾಜರಿಗೆ ಆಶೀರ್ವಾದರೂಪದ ಪತ್ರವನ್ನು ಕಳಿಸುವರು.

ಈ ಸಂಪ್ರದಾಯ ಆರಂಭವಾದ ನಂತರ ಜರ್ಮಲೆಯ ನಾಲ್ಕುಮಂದಿ ಭೂಪರಿಗೆ ಹೈದರಾಲಿಯು ಮೈಸೂರು ಸಂಸ್ಥಾನದ ೧೩೩ ಹಳ್ಳಿಗಳನ್ನು ಜಹಗೀರಾಗಿ ಹಂಚಿದನೆಂದು ಹೇಳುವರು. ಈ ಹಳ್ಳಿಗಳ ಮುಖ್ಯ ಪಟ್ಟಣಗಳು ಉಜ್ಜಯಿನಿ ಪಕ್ಕದ ಬೈರವದೇವರ ಗುಡ್ಡ, ಗುಡೆಕೋಟೆ, ವೀರನದುರ್ಗ ಮತ್ತು ಸೊಂಡೂರು ಎನ್ನುವರು.

ಜರ್ಮಲೆ ಪಾಳೆಗಾರರ ಮನೆತನವು ಮುಂದೆ ಕಾರಣಾಂತರದಿಂದ ಕ್ರಮೇಣ ಅವನತಿಗೊಂಡಿತು. ಆನೆಗುಂದಿಯ ಒಬ್ಬ ಸಿಪಾಯಿಯ ಶ್ರದ್ಧಾಭಕ್ತಿಯ ಸೇವೆಗೆ ಮೆಚ್ಚಿದ ಜರ್ಮಲೆಯ ಅರಸನೊಬ್ಬನಿಂದ ಅವರ ಅಧೀನದಲ್ಲಿ ಕೆಲಭಾಗದ ಅಧಿಪತ್ಯವನ್ನು ನೀಡಲಾಯಿತು. ಈ ರೀತಿಯ ವಿವಿಧ ಕಾರಣಗಳಿಂದ ಜರ್ಮಲೆಯ ಸಂಸ್ಥಾನ ಕಾಲಂತರದಲ್ಲಿ ಕಣ್ಮರೆ ಆಯಿತಂತೆ. ಕೊನೆಗೆ ಅವರ ಅಧೀನದಲ್ಲಿದ್ದ ಅರಣ್ಯ ಸಂಪತ್ತನ್ನು ಸರ್ಕಾರ ಕೈವಶಕ್ಕೆ ತೆಗೆದುಕೊಂಡಿತು. ಈ ಕಾರಣಕ್ಕಾಗಿ ಪ್ರತಿತಿಂಗಳು ಜರ್ಮಲೆ ರಾಜರು ಸರ್ಕಾರದಿಂದ ಸಂಭಾವನೆಯನ್ನು ಪಡೆಯುತ್ತಿದ್ದರು. ಆ

ಸಂಭಾವನೆಯ ಹಣ ಶ್ರೀ ವೆಂಕಟಪ್ಪ ನಾಯಕರ ಕಾಲದವರೆಗೆ ಜಾರಿಯಲ್ಲಿತ್ತು. ಅವರ ಕೊನೆಯ ಪಿಂಚಣಿ ಮೊತ್ತ ರೂ. ೫೦.೦೦.[೧೨]

ಗುಡೇಕೋಟೆ ನಾಯಕರು

ಗುಡೇಕೋಟೆಯ ಒಬ್ಬ ನಾಯಕ ಹಿರೇಬೊಮ್ಮಂತ ರಾಜನ ವಿನಂತಿಯ ಮೇರೆಗೆ ವಿಜಯನಗರದ ಅರಸ ಕೃಷ್ಣದೇವರಾಯನು ನಾಡ ತಳವಾರಿಕೆಯನ್ನು ಮತ್ತು ಸ್ವಾಸ್ತಿ ಗ್ರಾಮಗಳನ್ನು ಅವನಿಗೆ ಜಾಗೀರ ನೀಡಿದನೆಂದು ಕೈಫಿಯತ್ತನಲ್ಲಿ ಬರುತ್ತದೆ.

ಜಾಗೀರು ಕೊಟ್ಟ ಗ್ರಾಮಗಳೆಂದರೆ ಉಜ್ಜನಿ, ಜರಿಮಲೆ, ಗುಡೇಕೋಟೆ, ಬಾಂಡ್ರಾಲಿ, ಸಂಡೂರು ಮತ್ತು ಕುಡಿತಿನಿ. ಹೀಗೆ ಈ ಕಾಲಘಟ್ಟದಲ್ಲಿ ಉಜ್ಜಯಿನಿ ಮತ್ತು ಜರಿಮಲೆ ಗ್ರಾಮಗಳು ನೆರೆಯ ಗುಡೇಕೋಟೆಯ ನಾಯಕರ ವಶದಲ್ಲಿದ್ದವೆಂದು ತಿಳಿಯುತ್ತದೆ.

ನಾಗೇನಹಳ್ಳಿಯ ಪಾಳೆಗಾರರು

ನಾಗೇನಹಳ್ಳಿ-ಜರ್ಮಲೆ ಪಾಳೆಗಾರರು ಪರಸ್ಪರ ಯುದ್ಧಮಾಡಿ ಅವರಲ್ಲಿ ಯಾರು ಗೆಲ್ಲುವರು ಅವರು ಅಲ್ಲಿ ಗುಡಿಸ್ಥಾಪನೆ ಮಾಡಬೇಕೆಂದು ಗುರುಗಳ ಅಪ್ಪಣೆಯಾಯಿತು. ಕೂಡಲೇ ಜರ್ಮಲೆ ಪಾಳೆಗಾರ ತನ್ನ ಉಡುದಾರವನ್ನು ಕಿತ್ತು ಎಸೆದು ನಾಗೇನಹಳ್ಳಿ ಪಾಳೆಗಾರರನ್ನು ಗೆಲ್ಲುವವರೆಗೆ ತಾನು ಉಡುದಾರವನ್ನು ಕಟ್ಟುವುದಿಲ್ಲವೆಂದು ಪಣತೊಟ್ಟನು. ಆದರೆ ಯುದ್ಧದಲ್ಲಿ ಜರ್ಮಲೆರಾಜ ಜಯಗಳಿಸದ ಕಾರಣ ಅವನ ವಂಶಸ್ಥರು ಉಡುದಾರವನ್ನು ಕಟ್ಟುವುದಿಲ್ಲವೆನ್ನುವರು.

ಈ ಯುದ್ಧದಲ್ಲಿ ಕೊಟ್ಟೂರು, ಬಳ್ಳಾರಿಗೋಣ್ಯ, ತಳವಾರ ಓಬಣ್ಣ, ಮ್ಯಾಸರ ಓಬವ್ವ ಇವರ ಮುಂದೆ ಜರ್ಮಲೆ ದಂಡು ದಿಕ್ಕು ಕಾಣದಾಯಿತು. ಗೋಣ್ಯನ ವೀರಾವೇಶ ನೋಡಿ ಜರ್ಮಲೆಯ ೧೦,೦೦೦ ದಂಡು ದಿಕ್ಕಾಪಾಲಾಗಿ ಓಡಿತು ಎನ್ನುವರು.

ಇನ್ನೊಂದೆಡೆಯಲ್ಲಿ ಕ್ರಿ.ಶ. ೧೭೪೨ ರ ಹೊತ್ತಿಗೆ ಜರ್ಮಲೆಯ ಪಾಳೆಗಾರರು ತಮ್ಮ ಕೋಟೆಯ ಸುತ್ತಮುತ್ತ ಕೆಲವು ಹಳ್ಳಿಗಳನ್ನು ಬಿಟ್ಟು ಉಳಿದ ಪ್ರದೇಶವು ಚಿತ್ರದುರ್ಗ ಪಾಳೆಯಗಾರರ ಮತ್ತು ಹರಪನಹಳ್ಳಿ ಪಾಳೆಗಾರರ ಅಧೀನಕ್ಕೆ ಒಳಗಾಗಿದ್ದಿತು. ಹಾಗೂ ಜರ್ಮಲೆಯ ಪಾಳೆಗಾರರ ಕೈವಶದಲ್ಲಿದ್ದ ಉಜ್ಜಯಿನಿಯನ್ನು ಕಳೆದುಕೊಂಡಿದ್ದರು. ಈ ವಿಷಯ ಬಳ್ಳಾರಿ ಜಿಲ್ಲೆಯ ಗೆಜೆಟಿಯರ್‌ನಲ್ಲಿ ಉಲ್ಲೇಖವಾಗಿದೆ.[೧೩] ಅದು ಇವರಿಗೆ ಅವಮಾನವೆನಿಸಿ ''ಸೋತವನು ಹೆಂಗಸಿಗೆ ಸಮಾನನು'' ಗೆಲ್ಲದ ಗಂಡಸು ತನ್ನ ಉಡದಾರವನ್ನು ಕಟ್ಟಬಾರದೆಂದು ಪ್ರತಿಜ್ಞೆಗೈದರೆಂದು ಹೇಳುವರು.

ಉಚ್ಚಂಗಿ ರಾಜ

ಉಜ್ಜಯಿನಿ ದೇವಾಲಯವನ್ನು ಉಚ್ಚಂಗಿ ದೊರೆ ಕಟ್ಟಿಸಿದನೆಂದು ಒಂದು ಲಾವಣಿಯಲ್ಲಿ ಹೇಳಲಾಗಿದೆ.

ಸ್ಥೂಲ ಚರಿತ್ರೆ

ಜರ್ಮಲೆ ಪಾಳೆಗಾರರ ಕುರಿತ ಪುರಾತತ್ವ ನೆಲೆ, ಐತಿಹ್ಯ ಮತ್ತು ಸಾಹಿತ್ಯ ಕೃತಿಗಳಲ್ಲಿ ಬರುವ ಅಂಶಗಳನ್ನು ಪರಾಮರ್ಶಿಸಿ, ಅವರನ್ನು ಕುರಿತ ಒಂದು ಚರಿತ್ರೆಯನ್ನು ಹೀಗೆ ಪುನಃ ರಚಿಸಲಾಗಿದೆ. ಈ ಮನೆತನದಲ್ಲಿ ಮೂಲತಃ ಬೂದಿಸಿದ್ಧ ಮತ್ತು ಲಿಂಗಮ್ಮ ನಾಗತಿಯೆಂಬವರಿಗೆ ಏಳು ಮಂದಿ ಮಕ್ಕಳಿದ್ದರು. ಅವರು ಬೊಮ್ಮಂತರಾಜು, ಇಮ್ಮಡಿರಾಜು, ಮುಮ್ಮಡಿರಾಜು, ಮಲ್ಲಿಕಾರ್ಜುನ ನಾಯ್ಕ, ಲಿಂಗಣ್ಣನಾಯ್ಕ, ಭೂಪರಾಜ, ಕುಕ್ಕುಲ ಹೊನ್ನಪ್ಪನಾಯಕ ಮತ್ತು ಕಲಿಪುರುಷ. ಇವರು ಆರಂಭಿಕವಾಗಿ ಭೂಪರೆಂದು ಕರೆಸಿಕೊಂಡರು. ಬೇಟೆಯಾಡುವುದೇ ಅವರ ಮುಖ್ಯ ವೃತ್ತಿಯಾಗಿತ್ತು. ಒಂದು ಐತಿಹ್ಯದಲ್ಲಿ ಈ ನಾಯಕರು ಕಂಚಿಕಡೆಯಿಂದಲೋ ಅಥವಾ ದೆಹಲಿ ಕಡೆಯಿಂದಲೋ ತಮ್ಮೊಂದಿಗೆ ಬೇಟೆನಾಯಿ ಮತ್ತು ಸಹಚರರನ್ನು ಕರೆದುಕೊಂಡು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಗಂಗಮ್ಮನ ಹಳ್ಳಿ, ಸಿರಬಿ ಕಡೆ ಬಂದರು. ಅಲ್ಲಿ ನೀರಿಗಾಗಿ ಅಥವಾ ಹಂದಿಬೇಟೆ ಆಡುತ್ತ ಒಂದು ಸ್ಥಳಕ್ಕೆ ಆಗಮಿಸಿದರು. ಬಾಯಾರಿಕೆಯಾಗಿದ್ದ ಅವರಿಗೆ ಅಲ್ಲಿ ಪೊದೆಯ ಒಳಗಿದ್ದ ನೀರಿನ ಸ್ಥಳ ಕಾಣಿಸಿತು. ಪೊದೆಯನ್ನು ಕಡಿದು ಕಿರುದಾರಿ ಮಾಡಿ ಒಬ್ಬೊಬ್ಬರಾಗಿ ಈ ಭೂಪರು ಒಳಗಡೆ ಹೋಗಿ ನೀರು ಕುಡಿದು ಬಂದರು. ಕೊನೆಯವನಾದ ಭೂಮರಾಜನು ತಾನು ನೀರು ಕುಡಿಯಲು ಒಳಗೆ ಹೋಗಿ ತನ್ನ ಬೊಗಸೆಯಲ್ಲಿ ನೀರು ತೆಗೆದುಕೊಂಡು ಕುಡಿಯುವಾಗ ಮರದಲ್ಲಿ ಕುಳಿತ ಶಿವ ಪಾರ್ವತಿಯರ ಪ್ರತಿಬಿಂಬ ಕಂಡಿತೆಂದು ಒಂದೆಡೆ ಹೇಳಲಾಗಿದ್ದರೆ ಇನ್ನೊಂದು ಕಡೆಯಲ್ಲಿ ಭೂಮರಾಜ ತನ್ನ ಬೊಗಸೆಯಲ್ಲಿ ನೀರನ್ನು ಕುಡಿಯುವಾಗ ಮರದ ಮೇಲೆ ಕುಳಿತು ಮಾವಿನ ಹಣ್ಣನ್ನು ತಿನ್ನುತ್ತಿರುವ ಮಹಾಸ್ವಾಮಿಗಳ ಪ್ರತಿಬಿಂಬ ಕಂಡಿತು ಎನ್ನಲಾಗಿದೆ. ಶಿವಪಾರ್ವತಿಯರಿಂದ ಅಥವಾ ಮಹಾಸ್ವಾಮಿಯಿಂದ ಅವರು ತಿಂದ ಹಣ್ಣಿನ ಗೊಟ್ಟ ಭೂಮರಾಜನಿಗೆ ದೊರೆಯಿತು ಮತ್ತು ಅವರಿಂದ ಭೂಮರಾಜನಿಗೆ ರಾಜನಾಗೆಂದು ಆಶೀರ್ವಾದವೂ ಲಭಿಸಿತು.

ಭೂಮರಾಜನಿಗೆ ಆ ಸ್ಥಳದಲ್ಲಿ ಹೂತ ಮಠ, ದೇವಾಲಯಗಳನ್ನು ಹೊರದೆಗೆಯಲು ಅಪ್ಪಣೆಯಾಯಿತು. ಅವರ ಆಶೀರ್ವಾದದ ಬಲದಿಂದ ಭೂಮರಾಜ ಜರ್ಮಲೆಯ ಅರಸನಾದ. ಅವರಿಗೆ ನೀಡಿದ ವಚನದಂತೆ ಹೂತ ಮಠವನ್ನು ಮತ್ತು ಮರುಳಸಿದ್ಧ ದೇವಾಲಯವನ್ನು ಬಯಲುಮಾಡಿ ಅವುಗಳನ್ನು

ಜೀರ್ಣೋದ್ಧಾರಗೊಳಿಸಿದ. ಅವರ ಗುರುಗಳಾದ ಚನ್ನಬಸವಸ್ವಾಮಿಗಳಿಗೆ ಉಜ್ಜಯನಿಯ ಮಠಕ್ಕೆ ಸ್ವಾಮಿಗಳನ್ನಾಗಿ ಮಾಡಿ ಪಟ್ಟಕಟ್ಟಿದನು.

ಹೈದರಾಲಿಯು ಇವರ ಸಹಾಯವನ್ನು ಪಡೆದು ಚಿತ್ರದುರ್ಗದ ನಾಯಕರನ್ನು ಸೋಲಿಸಿದ. ಈ ಭೂಮರಾಜ ನಾಯಕನನ್ನು ಹೈದರಾಲಿಯು ಶ್ರೀರಂಗಪಟ್ಟಣದಲ್ಲಿ ಅವನಿಗೆ ತಿಳಿಯದ ಹಾಗೆ ಅಲ್ಲೇ ಸೆರೆಮನೆಯಲ್ಲಿ ಇಟ್ಟುಕೊಂಡನು. ಆ ಸಂದರ್ಭದಲ್ಲಿ ಹೈದರಾಲಿ ಸಂಬಂಧಿಯೊಬ್ಬಳನ್ನು ಭೂಮರಾಜ ಅಪಹರಿಸಿಕೊಂಡು ಉಜ್ಜಯಿನಿ ಶ್ರೀಪೀಠದ ನೆಲಮಾಳಿಗೆಯಲ್ಲಿ ಬಚ್ಚಿಟ್ಟನು. ಶ್ರೀಪೀಠದ ಗುರುಗಳು ರಾಜನ ಈ ವರ್ತನೆಯನ್ನು ವಿರೋಧಿಸಿ ಆತನಿಗೆ ಶಾಪಹಾಕಿದರು. ಇದರಿಂದ ರಾಜನಿಗೆ ತನ್ನ ಕಣ್ಣು ಕಾಣದಾದವು. ಈ ವೃತ್ತಾಂತವನ್ನು ಜರ್ಮಲೆಯಲ್ಲಿ ತನ್ನ ಹೆಂಡತಿ, ಮಂತ್ರಿ ಇನ್ನಿತರರಿಗೆ ತಿಳಿಸಿದನು. ಅವರು ಶ್ರೀಪೀಠದ ಗುರುಗಳ ಬಳಿ ಹೋಗಿ ಅಂಗಲಾಚಿ ಬೇಡಿಕೊಂಡರು. ಆಗ ಗುರುಗಳು ಭೂಮರಾಜನು ಪ್ರತಿವರ್ಷ ಶ್ರೀಪೀಠದ ಮರುಳಸಿದ್ಧಸ್ವಾಮಿಯ ತೈಲಾಭಿಷೇಕಕ್ಕೆ ಒಂದು ಕುಂಭ ಎಣ್ಣೆ ಮತ್ತು ೧೨ ಟಂಕಿ ಹಣವನ್ನು ಕಾಣಿಕೆಯಾಗಿ ಕಳಿಸಬೇಕು. ಪ್ರತಿವರ್ಷ ಆ ಎಣ್ಣೆ ಶ್ರೀಸ್ವಾಮಿಯ ಶಿಖರದ ಮೇಲೆ ಸುರಿದಂತೆ ಶ್ರೀಸ್ವಾಮಿಯ ಜಠರವು ನೆನೆದು ನೆತ್ತಿ ತಂಪಾಗುವುದು. ಇದರಿಂದ ರಾಜನಿಗೆ ಕ್ರಮೇಣ ಶಾಪವು ವಿಮೋಚನೆಯಾಗುವುದೆಂದು ಹೇಳಿದರು.

ಇನ್ನೊಂದು ಐತಿಹ್ಯದ ಪ್ರಕಾರ ಜರ್ಮಲೆಯ ಪಾಳೆಗಾರರು ಬೇಟೆ ಆಡುವಾಗ ಹಂದಿಗೆ ಬಾಣಬಿಟ್ಟರು. ಆ ಬಾಣ ಯೋಗ ಸಮಾಧಿಯಲ್ಲಿ ಕುಳಿತಿದ್ದ ಶ್ರೀ ಮರುಳಾರಾಧ್ಯ ಯತಿವರ್ಯರ ತಲೆಗೆ ಬಿದ್ದು ರಕ್ತ ಇಳಿಯತೊಡಗಿತು. ಬಾಣ ಕಿತ್ತು ಆ ಪಾಳೆಗಾರ ಆ ನೋವಿಗೆ ಎಣ್ಣೆ ಹಚ್ಚಿ ತಂಪುಮಾಡಿದ. ಗುರುಗಳಿಂದ ಶಾಪಗ್ರಸ್ತನಾದ. ಈ ಕಾರಣದಿಂದ ಶ್ರೀಮರುಳಾರಾಧ್ಯರ ಶಾಪ ಪರಿಹಾರಕ್ಕೆ ರಾಜ ತನ್ನ ಮನೆಯಿಂದ ಆತನ ತೈಲಾಭಿಷೇಕಕ್ಕೆ ಪ್ರತಿವರ್ಷ ಎಣ್ಣೆಯನ್ನು ಕಳಿಸುವ ಸಂಪ್ರದಾಯ ಆರಂಭಿಸಿದ.

ಮೇಲಿನ ಒಂದು ವೃತ್ತಾಂತದಲ್ಲಿ ಜರ್ಮಲೆ ಪಾಳೆಗಾರರ ಗುರುಗಳು ಚನ್ನಕೇಶವರೆಂದು ಕಾಣುವರು. ಈ ಗುರುಗಳ ಹೆಸರೇ ಸೂಚಿಸುವಂತೆ ಅವರೊಬ್ಬ ವೈಷ್ಣವರೆಂಬುದು ಸ್ಪಷ್ಟ. ಈ ಗುರುಗಳ ಪ್ರಭಾವ ಶ್ರೀಪೀಠದ ಮೇಲೆ ಬೀರಿರಬೇಕು. ಹೀಗಾಗಿ ಉಜ್ಜಯನೀ ಶ್ರೀ ಮರುಳಸಿದ್ಧ ದೇವಾಲಯದ ಒಂದು ಗರ್ಭಗೃಹದಲ್ಲಿ ಮತ್ತು ಮೂಲ ಗರ್ಭಗೃಹದ ಭಿತ್ತಿಯ ಒಂದು ದೇವಕೋಷ್ಠದಲ್ಲಿ ಗೋಪಾಲಕೃಷ್ಣನ ವಿಗ್ರಹಗಳನ್ನು ಸ್ಥಾಪಿಸಿಸಲು ಕಾರಣವಾಗಿರಬಹುದು.

ಈ ನಾಯಕರ ಊರಾದ ಜರ್ಮಲೆ (ಕೂಡ್ಲಿಗಿ ತಾಲೂಕ) ಮೊದಲು ಅದರ ಪಕ್ಕದಲ್ಲಿ ಮೂರು ಕಡೆ ಇದ್ದಿತು. ಈ ಸ್ಥಳದಲ್ಲಿ ದೊರೆತ ಅತೀ ಹೆಚ್ಚಿನ

ಅವಶೇಷಗಳೆಲ್ಲಾ ಸುಮಾರು ಕ್ರಿ.ಶ.೧೬ರಿಂದ ೧೯ನೇ ಶತಮಾನಕ್ಕೆ ಸೇರಿವೆ. ಈ ಗ್ರಾಮದಲ್ಲಿರುವ ವಿಜಯನಗರ ಕಾಲದ ಶಿಲ್ಪಾವಶೇಷಗಳು ಬದಿಯ ಹಾಳು ನೆಲೆಯಿಂದ ಸ್ಥಳಾಂತರಗೊಂಡಿವೆ. ಹೀಗಾಗಿ ಈ ಸ್ಥಳಕ್ಕೆ ಜನರು ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಬಂದಿರುವ ಸಾಧ್ಯತೆಯಿದೆ.

ಈ ಪಾಳೆಗಾರರು ಮುಂದೆ ಮೈಸೂರು ಸಂಸ್ಥಾನದ ೧೩೩ ಹಳ್ಳಿಗಳ ಒಡೆಯರಾದರು. ಅವುಗಳು ಬೈರದೇವರಗುಡ್ಡ (ಉಜ್ಜಯನಿ ಪಕ್ಕ), ಗುಡೇಕೋಟೆ ಇತ್ಯಾದಿಗಳಾಗಿವೆ. ಶ್ರೀವೆಂಕಟಪ್ಪನಾಯಕರ ಕಾಲದವರೆಗೆ ಈ ವಂಶಕ್ಕೆ ಸರ್ಕಾರದಿಂದ ಪಿಂಚಣಿಯನ್ನು ನೀಡಲಾಗುತ್ತಿತ್ತೆಂದು ಹೇಳುವರು.

ಈಗಿರುವ ವಂಶಸ್ಥರು

ಶ್ರೀಸಿದ್ಧಪ್ಪ ನಾಯಕರ ಅಜ್ಜ ದೊಡ್ಡ ಸಿದ್ದಪ್ಪ ನಾಯಕ ಮತ್ತು ಶ್ರೀ ಸಿದ್ಧಪ್ಪನಾಯಕರ ಮಗ ಶ್ರೀ ವೆಂಕಪ್ಪ ನಾಯಕ. ಅವರ ಪುತ್ರರು ಶ್ರೀರಾಜ ಸಿದ್ಧಪ್ಪ ಮತ್ತು ಶ್ರೀರಾಜ ಚಂದ್ರಶೇಖರರಾಜ ***(ಚಿತ್ರ ಸಂ. ೧೭೫)*** ಶ್ರೀ ಸಿದ್ಧಪ್ಪ ಅವರಿಗೆ ಇಬ್ಬರು ಹೆಣ್ಣು ಮಕ್ಕಳು. ಈ ಅರಸರ ಗುರುಗಳು ಜರ್ಮಲೆಮಠದವರೆಂದು ಈ ಮನೆತನಕ್ಕೆ ಸೇರಿದ ಕ.ವಿ.ವಿ.ಯ ಡಾ. ಜೆ.ಎಂ. ನಾಗಯ್ಯನವರು ಹೇಳಿರುವರು.

ಚಂದ್ರಶೇಖರ ರಾಜರಿಗೆ ಇನ್ನೂ ಸಂತಾನವಿಲ್ಲ. ಈಗ ಅವರ ತಾಯಿಯ ವಯಸ್ಸು ಸುಮಾರು ೭೭ ವರ್ಷ. ಜರ್ಮಲೆಯ ರಾಜರಿಗೆ ಚಿತ್ರದುರ್ಗ, ಕೋಸಿಗೆ, ಚಂಡಿ, ಹೊಸಕೋಟೆ, ಕೊಡೇಕಲ್ಲು, ಸುರಪುರ ದೊರೆಗಳ ಮನೆತನದ ಜೊತೆ ವೈವಾಹಿಕ ಸಂಬಂಧವಿದೆ. ಈಗ ಅವರಿಗೆ ಆಸ್ತಿಯಲ್ಲಿ ಸುಮಾರು ಹದಿನಾರು ಎಕರೆ ಭೂಮಿ ಮಾತ್ರ ಉಳಿದಿದೆ.

ದರ್ಶನ ಪವಾಡ

ಸಂಪ್ರದಾಯದಂತೆ ಜರ್ಮಲೆಯ ದೊರೆಗಳ ವಂಶಸ್ಥರಾರೂ ಯಾವ ಕಾರಣಕ್ಕೂ ಉಜ್ಜಯಿನಿ ಶ್ರೀಪೀಠಕ್ಕೆ ಹೋಗುವಂತಿಲ್ಲ. ಈ ದಿಗ್ಬಂದನವನ್ನು ತಪ್ಪಿ ನಡೆಯಲು ಪ್ರಯತ್ನಿಸಿದಾಗ ಕೆಲ ಪವಾಡಗಳೇ ಜರುಗಿವೆ. ಅದರ ಒಂದೆರಡು ಉದಾಹರಣೆಗಳು ಹೀಗಿವೆ.

ಈ ಮನೆತನದ ಶ್ರೀ ಸಿದ್ದಪ್ಪ ನಾಯಕರು ಮತ್ತು ಅವರ ಅಜ್ಜ ಸೇರಿಕೊಂಡು ಉಜ್ಜಯಿನಿಗೆ ಹೋದರೆ ಏನಾಗುತ್ತದೆಂದು ಪರೀಕ್ಷಿಸಲು ಉಜ್ಜಯಿನಿ ಮಾರ್ಗದಲ್ಲಿ ಹಾದು ಹೋದರು. ಈ ನೆಪದಿಂದ ಜ್ವರ, ಹೊಟ್ಟೆಶೂಲಿ ಬಂದು ಶ್ರೀಸಿದ್ದಪ್ಪ ನಾಯಕ ಸಾವನ್ನಪ್ಪಿದನಂತೆ. ಈ ರೀತಿಯ ಅನಾಹುತಗಳನ್ನು ತಡೆಯಲು ಶ್ರೀಮರುಳಸಿದ್ಧ ಸ್ವಾಮಿಗೆ ಮುಡುಪುಕಟ್ಟಿದರಂತೆ.

ಇನ್ನೊಂದು ಸಂದರ್ಭದಲ್ಲಿ ಶ್ರೀಸಿದ್ಧಲಿಂಗ ಜಗದ್ಗುರುಗಳು ಒಮ್ಮೆ ಜರ್ಮಲೆಯಲ್ಲಿ ಮುಕ್ಕಾಂ ಮಾಡಿದ್ದರು. ಆಗ ಶ್ರೀಮಹಾಸ್ವಾಮಿಗಳು ಉಜ್ಜಯಿನಿಗೆ ಹೋಗಲು ಒಪ್ಪಿಸಿದರಂತೆ. ಆ ಪ್ರಕಾರ ಪರಂಪರೆಯಂತೆ ಶ್ರೀಸ್ವಾಮಿಗೆ ಎಣ್ಣೆ ಕಳಿಸಿ ಜಾತ್ರೆಯಿಂದ ಸ್ವಾಮಿಯ ಭಾವಚಿತ್ರ ತರಿಸಿ ಅದನ್ನು ಪೂಜಿಸಿ ರಾತ್ರಿ ಮಲಗಿದರಂತೆ. ಮಧ್ಯರಾತ್ರಿ ಸಮಯದಲ್ಲಿ ಘಟಸರ್ಪ ಭೋರ್ಗರೆದು ಧ್ವನಿ ಮಾಡಿತು. ಆ ಧ್ವನಿ ಕೇಳಿ ಮನೆ ಹೆಂಗಸರು, ಮಕ್ಕಳು ಹೆದರಿ ಮೂರ್ಛೆ ಹೋದರು. ಈ ಘಟನೆಯಿಂದ ಭೀತರಾದ ಅವರು ಉಜ್ಜಯಿನಿಯಿಂದ ತಂದ ಸ್ವಾಮಿಯ ಭಾವಚಿತ್ರವನ್ನು ಬೇರೆಯವರಿಗೆ ಕೊಟ್ಟರು. ಸ್ವಾಮಿಗೆ ತಪ್ಪು ಕಾಣಿಕೆಯನ್ನು ಸಲ್ಲಿಸಿದರಂತೆ.[೧೫]

ಗ್ರಾಮದೇವತೆಗಳು

ಈಗಿನ ಜರ್ಮಲೆ ಗ್ರಾಮದಲ್ಲಿ ಬಸವಣ್ಣ ಮತ್ತು ಈಶ್ವರ ಗುಡಿಗಳು ಮುಖ್ಯವಾಗಿವೆ. ಹೊಸದಾಗಿ ಕಟ್ಟಿದ ಈ ಗುಡಿಗಳಲ್ಲಿ ಅನೇಕ ಶಿಲ್ಪ, ದ್ವಾರ ಇತ್ಯಾದಿ ದೇವಾಲಯಗಳ ಅವಶೇಷಗಳು ಅಲ್ಲಿಯ ಹಾಳೂರಿನವು. ಆ ಶಿಲ್ಪಗಳಲ್ಲಿ ಎರಡು ಆನೆಗಳು, ಶಿವಲಿಂಗ, ನಂದಿ, ನಾಗಕನ್ನೆಯರ ಉಬ್ಬು ಶಿಲ್ಪಗಳು ಮಹತ್ವದ್ದಾಗಿವೆ. *(ಚಿತ್ರ ನಂ. ೧೭೩)*

ಈ ಗ್ರಾಮದಲ್ಲಿ ಒಂದು ಹೆಬ್ಬಾಗಿಲನ್ನು ಇತ್ತೀಚೆಗೆ ಕಟ್ಟಲಾಗಿದೆ. ಈ ದ್ವಾರವು ಜರ್ಮಲೆ ರಾಜರ ಊರೆಂದು ಮತ್ತು ಇದು ಉಜ್ಜಯನಿ ಸದ್ಧರ್ಮ ಶ್ರೀಪೀಠದ ಜೊತೆಗಿರುವ ಸಾಂಸ್ಕೃತಿಕ ಪರಂಪರೆಯ ದ್ಯೋತಕವಂತೆ.

ಜರ್ಮಲೆಯ ರಾಜರ ಮನೆಯು ರಸ್ತೆ ಬದಿಯಲ್ಲಿದೆ. ಆ ಮನೆಗೆ ಸಾಧಾರಣ ಕಟ್ಟಡವಿದೆ. ಅವರು ಸಾಮಾಜಿಕವಾಗಿ ಬಲಿಷ್ಠರು ! ಅವರಿಗೆ ಆರ್ಥಿಕ ಬೆಂಬಲ ಅತ್ಯವಶ್ಯಕವೆಂದು ಹೇಳಬಹುದು.

ಜರ್ಮಲೆ ಪಾಳೆಗಾರರು ಉಜ್ಜಯಿನಿ ಶ್ರೀಮರುಳಸಿದ್ಧೇಶ್ವರ ಸ್ವಾಮಿಯ ತೈಲಾಭಿಷೇಕಕ್ಕೆ ಎಣ್ಣೆಯನ್ನು ಕಳಿಸುವ ಸಂಪ್ರದಾಯ ಕ್ರಿ.ಶ. ೧೭ನೇ ಶತಮಾನ ಅಂತ್ಯದಿಂದ ಆರಂಭವಾಯಿತೆಂದು ಹೇಳಬಹುದು. ಅವರು ತಮ್ಮ ಮನೆಯಲ್ಲಿ ಶ್ರೀಮರುಳಸಿದ್ಧ ಸ್ವಾಮಿಯ ಮುಖವಾಡವನ್ನಿಟ್ಟು ನಿತ್ಯ ಪೂಜಿಸುತ್ತಿರುವರು.

ಕಾಲಮಾನ :

ಈ ಮೇಲಿನ ಐತಿಹ್ಯಗಳು ಮತ್ತು ಹಸ್ತಪ್ರತಿಗಳಿಂದ ಈ ಜರ್ಮಲೆ ಪಾಳೆಗಾರರು ಅರಸರಾಗಿ ಮೆರೆದ ಕಾಲ ಸು. ಕ್ರಿ.ಶ. ೧೭ನೇ ಶತಮಾನದ ಅಂತ್ಯಭಾಗವೆಂದು ಹೇಳಬಹುದು ಹಾಗೂ ಈ ಕಾಲಪೂರ್ವದಲ್ಲೇ ಇವರು ಈ ಪ್ರದೇಶದಲ್ಲಿ ನೆಲೆಸಿರುವ ಸಾಧ್ಯತೆ ಇದೆ.

ಲಕ್ಷ್ಮಣ್ ತೆಲಗಾವಿ (ಸಂ) ಜರಿಮಲೆ ಸಂಸ್ಥಾನದ ವಂಶಾವಳಿ : (ಹಸ್ತಪ್ರತಿಯ ಪಾಠ)[೧೬]

ಶ್ರೀಗುರು ಬಸವಲಿಂಗಾಯ ನಮಃ ಶ್ರೀ ಶಾರದಾಂಬಾಯ ನಮಃ

ಶ್ರೀ ಗಣಾಧಿಪತಿಯೇನ್ನಮಃ ॥

ಶ್ರೀಗುರು ಮರುಳಾರಾಧ್ಯಾನ್ನಮಃ

ಶ್ರೀಗುರು ಪ್ರಸನ್ನಂ ॥

ಶ್ರೀ ಶುಭಮಸ್ತು ॥

ಆರಿಷಿಯಿಂದ ಬಂದಂಥಾ ಜರಿಮಲಿ ಸಮುಸ್ಥಾನತರುದ ವಂಶಾವಳಿ ಬಂದದ್ದೂ.

* ಈ ಹಸ್ತಪ್ರತಿಯು ಬೆಳ್ಳಿಬಟ್ಲು ಶ್ರೀ ಸುಬ್ಬರಾಯರಿಗೆ ನಿಡುಗಲ್ಲಿನಲ್ಲಿ ದೊರೆಯಿತು. ಅವರ ನೆಂಟರಾದ ಜಾನಕಲ್ಲು ಹೋಟೆಲ್ ಮಾಲೀಕ ಶ್ರೀ ಆನಂದರಾಯರಲ್ಲಿ ಕಾರಣಾಂತರದಿಂದ ಬಂದು ಸೇರಿದ್ದು, ಚಿತ್ರದುರ್ಗದ ಸರ್ಕಾರಿ ಪ್ರಾಚ್ಯವಸ್ತು ಸಂಗ್ರಹಾಲಯದ ಶ್ರೀ ಕೆ. ವಿ. ಮಂಜುನಾಥರಾಯರ ಮೂಲಕ ನನಗೆ ತಲುಪಿತು. ಈ 'ವಂಶಾವಳಿ'ಯ ಮೂಲ ಪ್ರತಿಯಲ್ಲಿರುವ ಭಾಷೆಗೆ ಸ್ವಲ್ಪವೂ ಲೋಪ ಬಾರದಂತೆ ಇಲ್ಲಿ ಪ್ರಕಟಿಸಲಾಗಿದೆ. ಈ ಪ್ರತಿಯು ಉಪಲಬ್ಧವಿರಬಹುದಾದ ಮೂಲಪ್ರತಿಯೊಂದರ ನಕಲಾಗಿದೆ. ೧೯೨೭-೨೮ರಲ್ಲಿ ಈ ನಕಲನ್ನು ತಯಾರಿಸಿದಂತೆ ತೋರುತ್ತದೆ. ಅಲ್ಲದೆ ಇದೇ ಹಸ್ತಪ್ರತಿಯಲ್ಲಿ ಸುಮಾರು ಏಳು ಪುಟಗಳಷ್ಟು ವೃತ್ತಾಂತವನ್ನು ತೆಲುಗಿನಲ್ಲಿ ಬರೆಯಲಾಗಿದೆ. ಸದ್ಯಕ್ಕೆ ಅದನ್ನಿಲ್ಲಿ ಪ್ರಕಟಿಸಲಾಗಿಲ್ಲ.

ಶ್ರೀ ಗುರು ಪ್ರಸನ್ನಂ

ಆರಿಷಿಯಿಂದ ಜರಿಮಲಿಸಮುಸ್ಥಾನ್ ತರು ಆರಿಷಿಯಿಂದ ಬಂದ ವಂಶಾವಳಿಯೊರು ಬಂದದ್ದೂ-ಬರಿಯುವುದಕ್ಕೆ ಶುಭಮಸ್ತು. ಇವರು ಕಂಚಿ ದೇಶದಲ್ಲಿ ಹಟ್ಟಿಯಂಹಾಕಿಕೊಂಡು ದಿವ್ಸವನ್ನು ಕಳೆಯುತ್ತಿಲಿದ್ದರು. ಆ ದೇಶವನ್ನು ಆಳುವ ಮುಸಲ್ಮಾನ ಅತ್ರಿದರು (?) ಮೀಯ್ಯಾ ಎಂಬುವರು ರಾಜ್ಯವಂನ್ನು ಆಳುತ್ತಾಯಿದ್ದ್ರರು. ಕದ್ರಿಮೂಲ ಪುರುಷರಾದ ಯೀ ಬೂದಿಶಿದ್ಧರಾಜು ಯಂಬುವರು ಕದ್ರಿ ಕಂಚಿ ಪ್ರದೇಶದಲ್ಲಿ ಕಾಲವನ್ನು ಕಳೆಯುತ್ತಾಯಿದ್ದರು. ಅವರ ಯೀ ವ್ರತ ಯಂಥಾದ್ದು ಅಂದರೆ ಜಂಗಮಯಿಲ್ಲದೆ, ಶಿವಪೂಜೆಯಿಲ್ಲದೆ ವೂಟ ವಗ್ಯೆರೆ ಯಾಹೊತ್ತು ಬಿಟ್ಟು ಸುಮ್ಮನೆ ಕ್ಷೇಮವಾಗಿ ಯಿರುತ್ತಾ ಯಿರಲಾಗಿ ಶಿವಧ್ಯಾನ ಪಾರಾಯಣರಾಗಿ ಶಿವಸ್ಮರಣೆಯಿಂ ಯಿರುವದಂ ಕಂಡು ಕದ್ರಿಮೂಲಪುರುಷರಾದ ಬೂದಿ ಶಿದ್ಧ ರಾಜೂರ ಭಕ್ತಿಬಾವವಂ ಕಂಡು ಮಾಯದ ಸ್ವಾಮಿಗಳು ಬಂದು ಪ್ರತ್ಯಕ್ಷವಾಗಿ ಕಂಡು ಮಾತನಾಡಿದ್ದರೆಂದರೆ ನೀನು ಇಲ್ಲಿ ಯಿರಬೇಡ. ನಿನ್ನ ಕಂಪಳವನ್ನು ತೆಗೆದುಕೊಂಡೂ ಮುಂದೆ ನಿನ್ನಗೆ ನಾನು ತೋರಿಶಿದ್ದಲ್ಲಿ ಹಟ್ಟಿಯಂ ಹಾಕು ಎಂದು ಮಾಯದ ಗುರುಗಳು ಹೇಳಿದರು. ಮೂಲಪುರುಷ ಬೋಧಿಸಿದ್ದ ರಾಜೂರು ಈತನ ಭಾರ್ಯಳೂ ಲಿಂಗಮ್ಮ ನಾಗತಿಯವರು ಈ ಯಮ್ಮಗೆ ಏಳು ಮಂದಿ ಮಕ್ಕಳು. ತಮ್ಮ ಮನೆದೇವರೂ (ಕಂಚಿ ಓಬಳದೇವರೂ), (ಬೊಮ್ಮ ದೇವರೂ), (ಗಾದ್ರಿಲಿಂಗ), (ಕಂಕಾಳಯ್ಯ) ಈ ದೇವರುಗಳ ಸಟ್ಟಿಗೆಗೆಳೂ ಪೂಜಾರಿಗಳ ಮೇಲೆ ವರಿಸಿಕೊಂಡು ೨೧ ದಿನಕ್ಕೆ ಕಂಚಿದೇಶದಿಂದ ಮಳೆಭೂಮ ಸಮುದ್ರಕ್ಕೆ ಬಂದರೂ ಮಾಯಾದ ಗುರುಗಳೂ ಆದ ಚನ್ನಬಸವಸ್ವಾಮಿಗಳ ಅಪ್ಪಣೆ ಪ್ರಕಾರ ಮಳೆಭೂಮ ಸಮುದ್ರದಲ್ಲಿ

ಹಟ್ಟಿಯಂ ಹಾಕಿಕೊಂಡು ದಿನ ಕಳೆಯುತ್ತಾ ಇದ್ದರು. ಇತ್ತಲಾಗಿ ಮೂಲ ಪುರುಷರಾದಂತಹ ಭೂದಿಸಿದ್ಧರಾಜು ಈತನ ಮಕ್ಕಳೂ ಏಳು ಮಂದಿ ವತ್ತು ಕಳೆಯುವ ನಿಮಿತ್ಯವಾಗಿ ಅರಣ್ಯದೊಳು ಶಿಕಾರಿ ಉದ್ದಿಶ್ಯವಾಗಿ ಕೆಲವು ಮಂದಿ ಕೊಪ್ಪಲ ಗ್ರಾಮ ಶಿಂಮ್ಹುಗಳು ತಮಗೆ ಬೇಕಾದ ಆಯುಧ ಸಮೇತರಾಗಿ ಅರಣ್ಯದೊಳು ಬೇಂಟೆಯಂ ಆಡುತ್ತಾ ಬಂದರೂ. ಅಲ್ಲಿ ಗುಡ್ಡ ಗಂಹಾರ ಗವಿಗಳೂ, ಸರೋವರಗಳೂ, ಗಿಡವೃಕ್ಷಗಳೂ ಬಹಳ ಅದ್ಭುತವಾಗಿ ಯಿರುವುದೂ ಯಿವರ ಕಂಣಿಗೆ ಕಾಣಿಸುತ್ತಯಿತ್ತು. ಮೂಲ ಪುರುಷರಾದಿ ಭೂದಿಶಿದ್ದರಾಜು ತನ್ನ ಮಕ್ಕಳಿಗೆ ಕಾಲಬಲಕ್ಕೆ ಯೇನೆಂದು ಹೇಳುತ್ತಾರೆ ಯಂದೂ ಯೀ ಮಾಯದ ಸ್ವಾಮಿಗಳನ್ನು ಅರಿಕೆಮಾಡಿ ಅರುವು ತೊಕೊಂಡರೂ ಮಕ್ಕಳಿರಾ ಯಿಲ್ಲಿ ಮಹಾ ಶಂಕರವಾದ ಸ್ಥಳ ಬಹು ಯಚ್ಚರಿಕೆಯ ಮೇಲೆ ಆಡಿರಿ ಯಂದು ಮಾಯದ ಸ್ವಾಮಿಗಳೂ ಹೇಳಿದರೂ. ಅಷ್ಟರೊಳಗೆ ಅಲ್ಲಿ ಅದ್ಭುತವಾದ ಕೊಳಲು ಜಲ ಯಿರುವ ಸ್ಥಳಾ. ದೊಡ್ಡಗವಿ. ಅದರ ವಳಗಿಂದ ವಂದು ಬೆರಿಯು ಯಿವರ ಸಪ್ಪಳಿಗೆ ವರಹೊಂಟು ಬಂದೂ ನಾಯಿಗಳನ್ನೂ ಯೀ ೭ ಮಂದಿ ಧೊರಿ ಮಕ್ಕಳನ್ನೂ (೭ ಮಂದಿಯಂನ್ನೂ) ಬಹಳ ಭಯಂಕರವಾಗಿ ಜಗಳಮಾಡಿ ಪ್ರಾಣವನ್ನೂ ಬಿಟ್ಟಿತೂ.

ಯಿವರೂ ಮಾತನಾಡಿದ್ದೂ ಯೀ ಭಾಗ್ಯ ಬಹಳ ಗಂಡುಭೂಮಿಯಾಗಿ ಕಾಣಿಸುತ್ತದೆ. ವಳ್ಳೆದು. ಮುಂದಕ್ಕೆ ಸಾಗಿರಿ ಯಂದು ಮಾಯದ ಸ್ವಾಮಿಗಳೂ ಹೇಳಿದರೂ ಮತ್ತು ವಂದು ಗುಡ್ಡಕ್ಕೆ ಹೋದರೂ. ಅಲ್ಲಿ ಸರೋವರಗಳೂ ಮೇಲು ಯತ್ತರದ ಮೇಲೆ ತಂಗಾಳಿಗೆ ವಂದು ಮೊಲ ಮಲಗಿಯಿತ್ತು. ಯೀ ಜನರೂ ಧೂರಿ ಮಕ್ಕಳೂ ಕಂಣುತುಂಬಾ ನೋಡೋದರೊಳಗೆ ಮೊಲವು ಯದ್ದು ಬಂದೂ ಬಹಳ ಜಗಳ ಮಾಡೋದರೊಳಗೆ ಮೂಲಪುರುಷರಾ ಚಿಕ್ಕ ಮಗನಾದ ಭೂಮರಾಜರೂ ತಂನ ಬಿಲ್ಲಿನಿಂದ ವಡದೂ ಬಿಟ್ಟರೂ. ಅಲ್ಲಿ ಯಿದ್ದವರೂ ಯಿದು ಯೇನು ಆಶ್ಚ್ಯರ್ಯ್ಯಯೀ ಸ್ಥಳ ಬಹಳಾ ಕಲಿಯ ಜಾಗವಾಗಿಯಿದೆ ಯಂದರೂ. ಮೂಲಪುರುಷರಾದ ಬೂದಿಶಿದ್ದರಾಜು ಯೀತನ ಮಕ್ಕಳೂ ೧ ಬೊಮ್ಮಂತ್ರರಾಜು ೨. ಯಿಮ್ಮಡಿ ರಾಜು ೩. ಮುಮ್ಮಡಿ ರಾಜು ೪. ಮಲ್ಲಿಖಾರ್ಜುನ ನಾಯ್ಕ ೫. ಲಿಂಗಳ ನಾಯಕಾ ೬. ಕುಕ್ಕುಲ ಪೆನ್ನಪ್ಪನಾಯಕಾ ೭. ಕಲಿಪುರಷ ಭೂಮರಾಜೂ ಯಿವರೂಗಳೂ ಆಲೋಚನೆ ಯಂಮಾಡಿಕೊಂಡೂ ಶ್ರೀಮಾಯದ ಸ್ವಾಮಿಗಳಾದ ಮಳೆಬಗೆ ಚನ್ನಬಸಪ್ಪಸ್ವಾಮಿಯವರಂನು. ೩ ಅಪ್ಪಣೆ ಕೇಳಿಕೊಂಡರೂ. ಯೀ ಸ್ಥಳದಮೇಗೆ ಸ್ಥಿರಪಡಿಶಿಕೊಡಬೇಕು ಯಂದು ಸಾಷ್ಟಾಂಗ ನಮಸ್ಕಾರಂಗಳಂ ಮಾಡಿ ನಿಂತ್ತು ಕರಗಳಂ ಮುಗಿದೂ ಅಪ್ಪಣೆ ಕೊಡಬೇಕೂ ಯಂದೂ ಕೇಳಿಕೊಂಡರೂ. ವಳ್ಳೆದು ಮಕ್ಕಳಿರಾ ನೀವು ನೆನದಲ್ಲಿ ನಾನೂ ಮನನಿಷ್ಟ ಪ್ರಕಾರ ನಡೆಯುತ್ತೇನೆಯಂದೂ ಅಭಯ ಹಸ್ತಮಂ ಕೊಟ್ಟು ತನ್ನ ಕೈಯ್ಯಲ್ಲಿಯಿದ್ದ ಬೆತ್ತವಂ ತೆಗೆದುಕೊಂಡು ಸುತ್ತ ಮಂಡಲವಂ ಬರದೂ ನಿರ್ನಯವಂ ಮಾಡಿಸು ಯಂದು ಅಪ್ಪಣೆಯಾಯಿತು. ಮಾಯದ ಸ್ವಾಮಿಗಳೂ ತಂದಿ ಮಕ್ಕಳೂ ಕಾಲಬಲ ಯಾಹೊತ್ತು ಮಳೆ ಭೂಪ ಸಮುದ್ರಕ್ಕೆ ಬಂದೂ ತಮ್ಮ ಹಟ್ಟಿಯನ್ನೂ ಆಕಿದ್ದ ಸ್ತಳಕ್ಕೆ ಬಂದು ತಾವು ಲಡಾಯಿ ಮಾಡಿದ ಮೊಲ ಅದರ ಹೊಟ್ಟೆಯಂ ಬಗಿದೂ ನೋಡಲಾಗಿ ವಟ್ಟೆಯ ವಳಗೆ ಅಸಿ ಕಡ್ಲೆಕಾಳೂ ಯಿದ್ದುವೂ. ಯಿದು ಯಲ್ಲಿ ಹಾಹಾರಕ್ಕೆ ಹೊಗಿಯಿತ್ತು. ಯೀ ಕಡ್ಲಿಕಾಳೂ ಯಾವ ಸ್ಥಳದಲ್ಲಿ ಮೇಯುತ್ತದೊ ನೋಡಿ ಬರ್ರಿಯಂದು ಪರಿಚಾರಕರನ್ನೂ ಕಳೂಹಿಶಿ ನೋಡಲಾಗಿ ಮೂಡಲು ನಿಂತ್ತು ನೋಡಿದರೂ ಯಿಲ್ಲಾ. ವುತ್ತರಕ್ಕೆ ನೋಡಿದರೂ ಯಿಲ್ಲಾ. ದಕ್ಷಿಣಕ್ಕೆ ನೋಡಿದರೂ

ಯಿಲ್ಲಾ. ಪಡುವಲು ನೋಡಿದರೆ ಕೊಟ್ಟೂರು ತೆರಿವಳಗೆ ಲಿಂಗಶೆಟ್ಟಿ ಯಂಬಾತನೂ ಸ್ವಲ್ಪ ಕಟ್ಟಿಗೆ ಹಾಕಿಶಿ ಆ ಕ್ಕಟ ವಳಗೆ ಸ್ವಲ್ಪ ಆಕಿದ್ದರೂ. ಆ ಕಡ್ಲಿಯನ್ನೂ ಯೀ ಮೊಲವೂ ತಿಂದು ಜಿರಿಮಲೆ ಮೇಲುದುರ್ಗದ ಮೇಲೆ ಮಲಗಿಯಿತ್ತು. ಅದನ್ನೂ ಕೊಯಿದೂ ಪಾಕಮಾಡಿ ಸರ್ವರೂ ವೂಟಮಾಡಿಯಿಂದೂ ಮಾಯದ ಸ್ವಾಮೀ ಅಪ್ಪಣೆ ಕೊಟ್ಟು ತಮ್ಮ ಠಾವಿಗೆ ದಯಮಾಡಿದರೂ ಮಾಯದಾ ಮಾತೂ.

(ಯಿತ್ತಲಾಗಿ ನಾಲ್ಕನಿ ?) ಅದೇ ಪ್ರಾಂತ್ಯದಲ್ಲು ಲೇಖಣಿಕೆರಿ ಯಂಬ ಗ್ರಾಮದಲ್ಲಿ ವಂದು ವರಹಾ ಯಂದರೆ ಕಾಡುಹಂದಿ ಆ ಗ್ರಾಮದ ಅತ್ತರಾ ಸರೋವರದಲ್ಲಿ ಸೇರಿಕೊಂಡು ಬ್ಯಾಂಟಿಗೆ ಹೊದಂತವರನ್ನೂ ಕಾಲುಗಳನ್ನೂ ಆದಿಬಟ್ಟಿಯವರನ್ನೂ ಅನೇಕ ಜನರನ್ನೂ ಬಡಿದು ಬಹಳಾ ಗಾಭರಿ ಮಾಡಿ ಆ ಸರಹದ್ದು ಆಳುಗಳವರೂ ತಮ್ಮ ತಮ್ಮ ಕೆಲಸಕ್ಕೆ ಹೋಗುವುದಕ್ಕೆ ಭಯಸ್ತರಾಗಿ ಮನೆಗಳಲ್ಲಿ ಶೇರಿಕೊಂಡುಯಿದ್ದರೂ. ಯಿದರ ಪೈಕಿ ಬೇಟೆಗಾರ ಬೈಯ್ಯಪ್ಪ ಯಂಬುವನೂ ಕಂಚೀದೇಶದಿಂದಾ ಧೊರಿಮಕ್ಕಳೂ ಯೇಳೂ ಮಂದಿ ಬಂದು ಭೂಮುಸಮುದ್ರದಾ ಅತ್ತಿರ ಹಟ್ಟಿಯಂ ಹಾಕಿಕೊಂಡು ಯಿರುತ್ತಾರೆಂತ್ತೆ. ವರು ಮಹಾ ಸಮರ್ಥರಂತ್ತೆ. ಮಹಾಬಲ್ಲಿದರೂ ಯಂದು ಹೇಳುತ್ತಾರೆ. ಅವರಂನ್ನು ಕರಕೊಂಡು ಬರಬೇಕೂ ಯಂದು ಯಲ್ಲಾ ಜನರಂನ್ನೂ ತರಶಿ ಯಮಾನನಾದ ಭೈರಪ್ಪನೂ ಯೀ ಧೊರಿಮಕ್ಕಳಿಗೆ ಬಿನ್ನೈಶಿ ಕೇಳಿದರೂ. ಅವರೂ ಅಂದುದೂ ನಮ್ಮ ತಂದಿ ವಿಚಾರ ಮಾಡಿರಿ ಯಂದೂ ಹೇಳಿದರೂ. ಅವರೂ ಬಂದೂ ಮುಜೂರಿ ಸಲಾಮು ಮಾಡಿ ಕೇಳೊದರೊಳಗೆ ಭೂದಿಶಿದ್ದ ರಾಜು ಅಂದುದೂ ನಮ್ಮ ಗುರುವುಗಳೂ ಅಪ್ಪಣೆ ಕೇಳುತ್ತೇವೆ ಯಂದೂ ಬಂದೂ ಸದರಿ ಭೂದಿಸಿದ್ದ ರಾಜಗೆ ಸಾಷ್ಟಾಂಗ ನಮಸ್ಕಾರ ಮಾಡಿ ಯಿವರೊಬ್ಬರಿಂದ ವರ್ತಮಾನವನ್ನೂ ಹೇಳೊದರೊಳಗೆ ಅಪ್ಪಾ ಮಗನೆ ನಿಮ್ಮ ಕಾರ್ಯ್ಯ ಜಯವಾಯಿತು. ಯೀಗಲೇ ಹೇಳಿರಿ ತಡಮಾಡಕೂಡದೂ ಯಂದೂ ಕಾರಣ ನೀವೇ ಹೋಗಿ ಬನ್ನಿರಿ ಯೇನೂ ಸಂಸಯವಿಲ್ಲಾ ಯಂದೂ ಅಪ್ಪಣೆ ಆಯಿತೂ. ಗುರುವುಗಳೂ ಅಷ್ಟರೊಳಗೆ ಕೆಲವು ಧೊರಿಮಕ್ಕಳೂ ಕೆಲವೂ ಮಂದಿ ತಮ್ಮ ತಮ್ಮ ಆಯುಧಗಳನ್ನೂ ತೆಗೆದುಕೊಂಡು ಸರ್ವರೂ ಲೆಖಣಿಕೆರೆ ಯಂಭಾ ವೂರೂ ಅತ್ರ ಯಿರೋ ಕೊಣಸದಿನ್ನೆ ಹಳ್ಳಿಗೆ ಯಾಹೊತ್ತು ಜನರೂ ಧೊರಿಮಕ್ಕಳೂ ಹಳ್ಳ ಕೊಳ್ಳ ಸರೋವರಗಳೂ ಭೇಧಿಸಿಲ್ ಡಲಾಗಿ ವಂದು ಕೊಳಲೂ ಶೀಗೇಪೊದೆಯಾಗಳಿಂದ ಯೆದ್ದು ನಿಂತ್ತು ತನ್ನ ಘರ್ಪಸ್ವರದಿಂದಾ ವರದಿ ಮುಂದಕ್ಕೆ ಸಾಗಿ ಈ ಜನರು ನೋಡುವ ಹಾಗೆ ಗದ್ದಲಿಶಿ ಹಾರಲು ಕೆಲವು ಧೊರಿಮಕ್ಕಳೂ ಭಂಟರೂ ಗಧಗಧನೆ ನಡುಗಿ ನಿಂತ್ತ ಠಾವಿನಲ್ಲಿ ನಿಂತ್ತರೂ. ಬೂದಿಶಿದ್ದ ರಾಜರ ಮಕ್ಕಳೂ ಯೇಳು ಮಂದಿ ತಮ್ಮ ಬಾಣ ಬತ್ತಳಿಕೆಯಂ ತೆಗೆದುಕೊಂಡೂ ಆ ಕಾಡಹಂದಿ ಬೆನ್ನ ಜಿಡದ ನಾಯಿಗಳನ್ನೂ ಕರೆದುಕೊಂಡೂ ಆ ಕಾಡಹಂದಿಯ ಬೆನ್ನ ಮೇಲೆ ಬಂದರೂ. ವಂದು ಗುಂಡಿನ ಕೆಳಗೆ ದಮ್ಮ ತ್ತಿ ನಿಂತ್ತು ಯಿವರೂ ತ್ರಾಣದಪ್ಪಿ ಬಾಯಾರಿ ನಿಂತ್ತರೂ ಹಿರೇ ಮಗನಾದ ಮುಮ್ಮಡಿ ಅರಸೂ ಯೆಬ್ಬಿಶಿದರೂ ಅದು ಕೋಪಕ್ಕೆ ಬಂದು ತಾನು ನಿಂತ್ತ ಕಲ್ಲು ನಾಲ್ಕು ಅಂಗುಲ ಪ್ರಮಾಣ ಕಲ್ಲು ಕತ್ತರಿಶಿ ಜಿದ್ದದ್ದೂ ಯೀ ಧೊರಿಗಳೂ ನೋಡಿ ಚೋಧ್ಯಬಟ್ಟರೂ ಅಂತೂ ತಮ್ಮಗಳೂ ಕೂಡಿಯೇಕಾಂತ್ತ ಮಾತನಾಡಿ ಮುಂದಕ್ಕೆ ಇಟ್ಟ ಕಾಲು ಯಿಂದಕ್ಕೆ ತೆಗೆಯಬಾರದೂ. ಯಿದು ರಾಜರಾ ಪದ್ಧತಿ ಲ್ಲಾ ಅಂದ ಮಾತಿಗೆ ದೋಷ ಹುಟ್ಟಿ ಯಿ ಕಾಡಹಂದಿಯ ಜೆನ್ನೂ ಹತ್ತಿ ವಪ್ಪತ್ತಿಗೆ ಯರಡು ದಿನ ಮಧ್ಯಾನ್ನವಾಯಿತೂ. ಅಲ್ಲಿ ಯಿಂದಾ ವುಚೇನಿ (ಉಜ್ಜಿಯಿನಿ) ಯಂಬಾ ಗ್ರಾಮವೂ ರೂಪವಾಗಿಯಿತ್ತು. ಅಲ್ಲಿ ಶೀಗೆಪೊದೆವಳಕ್ಕೆ

ಮುದಯದವರ ಹತ್ತಿ ಸರಿ ಮಾಯವಾಯ್ತು. ಅಲ್ಲಿಗೆ ಯೀ ಅಂಣತಮ್ಮಗಳೂ ನೀರೂಯಿಲ್ಲದೆ ಅನ್ನವಿಲ್ಲದೇ ಬಳಲಿ ಬಾಯಾರಿ ತ್ರಾಣವಿಲ್ಲದೆ ಕಂದಿ ಕಂದಿ ನಿಂತ್ತರೂ. ಅದರ ಪೈಕಿ ವಂದೂ ಗ್ರಾಮ ಶಿಂಮ್ಡವೂ ತೂರಿಹೋಗಿ ಆ ಪೊದೆಯಲ್ಲಿ ಕರು ಮುಣಿಗಿ ಮತ್ತು ಬಂತ್ತೂ. ಯೀ ಧೊರೆ ಮಕ್ಕಳಾಯದುರಿಗೆ ನಿಲ್ಲಲೂ ಅವರೂ ಕಂಡೂ ಯೀ ರಾಷ್ಟ್ರವನ್ನೂ ನೋಡಿದರೂ. ಕರು ಕಾಣಲಿಲ್ಲಾ. ಯಿಲ್ಲೆ ಯೀ ಗ್ರಾಮ ಶಿಂಮ್ಡವೂ ವೈ ತೊಳಕೊಂಡೂ ಬಂತೂ ಯಂದೂ ನೋಡೋಮಯಂದು ಯೇಳು ಮಂದಿ ಧೊರಿಮಕ್ಕಳೂ ವಬ್ಬರಿಗೊಬ್ಬರೂ ಆಶ್ರಾ ಮಾಡಿಕೊಂಡೂ ಹೋಗೊದರೊಳಗೆ ಅಲ್ಲಿ ವಂದು ವರ್ತಿಯೂ ಯಿವರ ಕಂಣಿಗೆ ಕಾಣಿಶಿತೂ. ಹಿರಿಯ ಮಗನಾದ ಮುಮ್ಮಡಿ ರಸೂ ನೋಡೋದರೊಳಗೆ ಯತ ಪ್ರಕಾರ ತಾವು ಯಾರುಯಂದೂ ಕೇಳಿದಲ್ಲಿ ನಿಂಮ್ಮ ಮುಂದೆ ಹೇಳುವದುಯಿಲ್ಲಾ. ನಿಂಮ್ಮ ಬೆನ್ನಲಿ ಬಂದಂಥ ಚಿಕ್ಕಾತನನ್ನು ಯಿಲ್ಲಿಗೆ ಕಳುಹಿಸಿದರೆ ನಾನು ಹೇಳುತ್ತೇನೆ ಯಂದರೂ. ಆ ಮಾತು ಅಂಣನವರಿಗೆ ನಮಸ್ಕಾರವಂ ಮಾಡಿ ತನ್ನ ಗುರುಗಳಾ ಧ್ಯಾನವಂನ್ನೂ ಮಾಡಿ ವರ್ತಿಯವಳಕ್ಕೆ ಯಿಲಿದು ಯರಡು ಕರಗಳಂ ಜೋಡಿಸಿಕೊಂಡು ಯದುರಿಗೆ ನಿಂತನೂ. ಅಪ್ಪಾ ಮಗನೆ ನಿನ್ನಗೆ ರಾಜ್ಯಪಟ್ಟವಾಗಲಿ, ದೇಶಾ ಸಾಧನವಾಗಲಿ ನೀನು ನೆನದ ಕೂಡ್ಲೆ ಪ್ರತ್ತೆಕ್ಷವಾಗುತ್ತವೆಯಂದೂ ತಮ್ಮ ಹಸ್ತದಲ್ಲಿ ಚತುಷ್ಕದ ಬೀಜವನ್ನೂ ನಿಂನ್ನ ಕೊರಳಲ್ಲಿ ಧರಿಶಿಕೋ ಯಂದೂ ಯರಡು ಕರದೊಳಗೆ ಯಿಟ್ಟರೂ. ನೀನು ಯೀ ಸ್ಥಳದಲ್ಲಿ ನನ್ನ ಮಠಮಹತ್ತು ಅನುವದೂ ಭೂಗತವಾಗಿ ಯಿರುತ್ತದೆ. ಕಾಮಟಿಗರನ್ನೂ ಕರಶಿ ಯಾಹೊತು ತಯಾರು ಮಾಡ್ಸಿ ಯಿಲ್ಲಿ ಯೆಳು ಕೊಪ್ಪರಿಗೆ ಲಕ್ಷ್ಮಿ ಯಿರುತ್ತಾಳೆ. ನೀನು ಯೀ ಮಠಮಹತ್ತು ತಯಾರು ಮಾಡ್ಸಿ ನಿನ್ನ ಹಿಂದೆ ಬಂದಾ ಮಾಯದ ಸ್ವಾಮಿಯವರಾ ಮಂಟಪ ಮಹಾತ್ಮೆಯನ್ನೂ ನಿರ್ಮಾಣ ಮಾಡುಯಂದರೂ. ಯೀ ಭೂಲೋಕ ಯೇಕ ಚಕ್ರವರ್ತಿಯಾಗಿ ಸಾಧನ ಮಾಡಿ ಸಿಂಹ್ಮಾಸನನಾವಂನ್ನೂ ಪ್ರತಿಷ್ಟೆ ಮಾಡುವುದೂ. ದೇಶಮಧ್ಯಾ ಯಿರುವಂಥಾ ಪೇಟಿಶೆಟ್ಟಿ, ಪಟ್ಲಶೆಟ್ಟಿ ದೊಡ್ಡ ದೊಡ್ಡ ಪೇಟೆಯವರನ್ನೂ ಕರಶಿ ನೀನು ನಿರ್ಮಾಣವಮಾಡಿದ್ದು ದೇಶಕ್ಕೆ ಜಗದ್ಗುರುವು ಮಾಡಿಸು. ಮೂರು ದೇಶದ ಸಮುಸ್ಥಾನೀಕರೂ ಮುವ್ವತ್ತು ಸಾವಿರ ಪೇಟೆಸ್ತರೂ ಕಲಿತೂ ಯಿ ಸಂಹ್ಮಾಸನವನ್ನೂ ನಿರ್ಮಾಣ ಮಾಡಿ ಪಾದ ಕಾಮಿಕೆಯಿಟ್ಟು ಯೀ ದೇವಸ್ಥಾನ ಮರುಳಾರ್‍ಯನ ಭಾರ ತಮ್ಮದೇ ಯಿರುತ್ತದೆ(ಯಿರುತ್ತಾರೆ) ಯಂದು ಹೊರಟು ಹೋಗುತ್ತಾರೆ. ಯಿತ್ತಲಾಗಿ ಭೂಮರಾಜರು ದೇಶಸಾಧನೆ ಮಾಡಿಕೊಂಡು ಬಂದೂ ಕಲಿಗದ್ದಿಯಾ ಹೊತ್ತು ಮಹಿಯಾದಿ ಜನಗಳಿಗೆ ಮರಿಯಾದಿ ನಡಶಿ ಮಹಾಸ್ವಾಮಿ ಯಾಶೆ..... ದೊಡನೆ ಯಿದ್ದರೂ. ಆರು ಮಂದಿ ಅಂಣತಂಮ್ಮಗಳೂ ಹೋಗಿ ತಂಮ್ಮ ತಂದಿಯ ಮುಂದೆ ಯೀ ವೃತ್ತಾಂವಂ ಹೇಳಿ ಭೂಮಸಮುದ್ರವಂನ್ನೂ ಬಿಟ್ಟು ಬೇಂಟೆಯಾಡಿದ ಜಾಗಕ್ಕೆ ಮಾಯದ ಗುರುವುಗಳೂ ಚೆತ್ತದಿಂದಾ ಮಂಡಲವಂ ಬರದು ಯಿದ್ದಷ್ಟು ವುಗ್ಗಿಯನ್ನು ವಯಿಶಿ ಬುಡ್ಡೆಕಲ್ಲೂ ನಿರ್ಮಾಣಮಾಡಿದ್ದೂ ಚಿತ್ರಭಾನು ಸಂಕಾರ್ತಿಕ ಶುದ್ಧ ಬುಧವಾರ ಜರಿಮಲಿಯಂದು ಭಟ್ಟಂಗಿಯವನ ಕೂಡಾ ೩. ಸಾರಿ ಕೂಗಿಶಿ ಮುಂದೆ ಕೊಟೆಕೊತ್ತಳಾ ಭಾವಿತೆರೆ ಗ್ರಾಮ ಭಕ್ತಿಗೆ ೪೮ ಲಕ್ಷ ವರಹಂ ತರಿಶಿ ಪಟ್ಲ ತಯಾರು ಮಾಡ್ಸಿ ೧೦ ವರುಷಕ್ಕೆ ವುಲ್ಲು ರೈತರಿಗೆ ಕೊಡಿಶಿ ರಾಜ್ಯವನ್ನೂ ಸಾಧನೆ ಮಾಡಿದ್ದೂ.....

ಗುಡಿಕೋಟೆ, ಸೊಂಡೂರು, ವಡ್ಡು, ಧರೊಜಿ ಬಾಂಡ್ರಾವಿ ತುಡುತುಸಿ ತೊಳಗಲ್ಲೂ ಬಳ್ಳಾರಿ ಪರಿಯಾಂತ್ರ ಸಾಧನೆ ಮಾಡಿದರೂ. ಮಲುಖಾರ್ಜುನ ನಾಯ್ಕ ೫೦೦ ಕಾಲಬಲದೊಡನೆ

೩೦೦ ಕುದುರೆ ೫ ಆನೆ ೯ ವಂಟೆ ಯಿಷ್ಟು ದಂಡು ತೆಗೆದುಕೊಂಡು ಹೋಗಿ ಯುದ್ಧ ಮಾಡಿ ಸುರಾಪುರ ಹೆಂಣುಮಗಳೂ ತಲೆ ಕೊಯಿದೂ ಬಿಟ್ಟು ಹೆಂಣು ಮಗಳು ಸಂಪಾದಿಶಿದ ಭಕ್ಷ ಭಂಡಾರವನ್ನೂ ತೆಗೆದುಕೊಂಡು ಬಂದೂ ಜರಿಮಲಿಗೆ ಶೆರೊದರೊಳಗೆ ಆ ರುಂಡಾ ಬಂದೂ ಮನಿವಳಗೆ ಕುಂತುಯಿತ್ತು. ನಾನು ನಿಮ್ಮ ಮನೆ ದೇವತೆ ಆಗಿ ಯಿರುತ್ತೇನೆ. ನಾನು ದಂಡಿನವಳಿಗೆ ಯಿರುತ್ತೇನೆ. ನಂನ ನಾಮಕರಣ ದುರ್ಗದೇವತೆಯಂದು ಪೂಜಿಸೂ. ನಿನ್ನ ಕಾರ್‍ಯ್ಯಕ್ಕೆ ಅಪಜಯವಿಲ್ಲಾ.

ಯಿತ್ತಲಾಗಿ ಭೂಮರಾಜರೂ ತನ್ನ ಮನೆಗುರುವೂ ಆದ ಮುರಳಶಿದ್ಧ[illegible] ಶೇವಾ ಮಂಟಪಗಳೂ ದೇವಸ್ಥಾನಗಳೂ ಬಾವಿಗಳೂ ಬೀದಿ ಬಾಜಾರುಗಳೂಗುಡಿಸುತ್ತ ಆವರಣಂಗಳೂ ಮಹಾದ್ವಾರ ಗೋಪುರಗಳೂ ಕಾಮಟಿಗರ ಕಡೆಯಿಂದ ಕಟ್ಟಿಶಿದರೂ. ಮಹಾಸ್ವಾಮಿಯಾ ಪೂಜೆಯಂ ಮಾಡುವುದಕ್ಕೆ ಪುಟ್ಟದ ಕಾಶಿಯ ಪೂಜಾರಿಯಂ ನೇಮಿಶಿದರೂ. ವುಗ್ರಾಣೀಕರು ಯಂದೂ ಭಾಧ್ಯನ್ನ ಮಾಡಿಯಿಟ್ಟರೂ. ಗುಡಿನಾಯ್ಕ ಯಂದು ಯೀತಗೆ ಮಡಿ ಮಾನ್ಯೆವೊ ಹಿನಾಮು ನಾಯ್ಕನಿಗೆ ಕೊಟ್ಟರೂ. ಯೀ ಗುಡಿಗೆ ನೀವು ಮುವ್ವರೂ ಕರ್ತರೂ. ಮಾಲು ಯಾಹೊತ್ತು ನಿಧಿ ನಿಕ್ಷೇಪಣೆ ಯೇನು ಬಂದರೂ ಖರ್ಚು ವಗ್ಯೆರೆ ನಿಮ್ಮದೇ ಯಿರುತ್ತದೆ. ಯಾವತ್ತು ಖರ್ಚು ಸಾಧನ ಮಾಡಿದಲ್ಲದೆ ವುಳಿದ ಮಾಲು ನಿಮ್ಮ ಭಾಗಕ್ಕೆ ತೆಗೆದುಕೊಳ್ಳಬಹುದು ಮೇಲಾಗಿ ಮಹಾ ಸಂಸ್ತಾನದಿಂದ ರತೋತ್ಸಕ್ಕೆ ಮೆಹೋತ್ಸಗಲಿಗೆ ಮರುಳಾರ್‍ಯನ ಶೇವಕ್ಕೆ ವರುಷಾ ವಂದಕ್ಕೆ ೫೦ ವರಹಾ ಸಂಸ್ತಾನದಿಂದಾ ಗುಡಿಗೆ ವಪ್ಪಿಸತಕ್ಕದ್ದೂ...ಶ್ರೀಶ್ರೀ ಶ್ರೀ ಶ್ರೀ ಶ್ರೀ ಶ್ರೀ

ವಿಕ್ರಮನಾಮ....ಕಾರ್ತಿಕ ಶುದ್ಧ ಗುರುವಾರ ಮುಹೂರ್ತದಶನಾಮ ವರ್ತ್ತಿಯಲ್ಲೂ .....ವುಜೀಯನಿ ಯಂಬ ನಾಮ.....ಮಾಡಿ ಹನ್ನೆರಡು ಮಂದಿ ಅಯಗಾರರನ್ನು ನಿರ್ನಯವಂ ಮಾಡಿ ವುತ್ತರದಿಕ್ಕಿನಲ್ಲಿ ಬುರ್ಜು ಕಟ್ಟಿಸಿ ಆ ಸ್ಥಳದಲ್ಲಿ ವುಗ್ಗಿಮನೆಯಂದೂ ಹೆಸರು ಕರೆದೂ ವುಗ್ಗಿ ಶಾಸ್ತ್ರವಂ ಮಾಡಿ ಶಾಸ್ತ್ರೀಕರಿಂದ ಬುಡ್ಡೆಕಲ್ಲು ಪೂಜರಿಂದ ನಿರ್ನಯವಂ ಮಾಡಿ ಮ[illegible]ವ ಸ್ವಾಮಿಯಾದ ಕಂಚಿ ದೇಶದಿಂದ ತಂದ ಮಳೆಬಗೆ ಚನ್ನ ಬಸವಸ್ವಾಮಿಗಳನ್ನು ಪಟ್ಟಾಭಿಷೇಕ ಮಾಡುವುದಕ್ಕೆ ಹರಪನಹಳ್ಳಿ ಸಮುಸ್ತಾನದವರೂ ಚಿತ್ರದುರ್ಗದ ಸಮುಸ್ಥಾನದವರೂ ಜರಿಮಲಿ...ಯಿವರುಗಳು ಬಂದು ದೇಶ ಮಧ್ಯವರ್ತಕರೂ ಸಾವುಗಾರರೂ ಪೇಟಿಶೆಟ್ಟಿ ಪಟ್ಟಣಶೆಟ್ಟಿಯವರೂ ಯಿನ್ನು ಮುಂತಾದವರೂ ಕಲಿತೂ ಯಿ ಸಿಂಹಾಸನಕ್ಕೆ ಅಧಿಪತಿಯನ್ನು ಮಾಡಿ ಮಠ ಮಹುತ್ತು ತಯಾರು ಮಾಡ್ಸಿ ಆ ಸಿಂಹಾಸನದ ಗದಿಗೆ ಮೇಲೆ ಕೂಡ್ರಿಸಿ ಪಾದಗಾಣಿಕೆಯನ್ನು ಯಿಟ್ಟು ಯಿ ಮಠಕ್ಕೆ ಕಾರ್‍ಯ ಕರ್ತ್ತರಾಗಿಯಿರುವುದೂ ಯಂದೂ ಸರ್‍ವಜನರನ್ನೂ ವಪ್ಪಿಶಿದರೂ. ಯಿತ್ತಲಾಗಿ ಶ್ರೀ ಮರುಳೂಸಿದ್ಧೇಶ್ವರ ದೇವರಗುಡಿ ಭೂಸ್ತಾಪನೆ ಆಗಿಯೀತ್ತು. ಅದನ್ನು ಕಾಮಟಿಗರನ್ನು ತರಿಶಿ ತೆಗಿಸಲಾಗಿ ಮರ್‍ಮದ್ವಾರ ಆಳ್ವೆರಿ ಯಾಹೊತ್ತೂ ಖರ್ಚು ಆದ್ದು ೩ ಲಕ್ಷ ನಾಣ್ಯವಾರ ಮುಟ್ಟಿಯಿರುತ್ತೆ - ಮರುಳಾರ್‍ಯ

ಅಡಿಟಿಪ್ಪಣಿ

೧. ಲಕ್ಷ್ಮಣತೆಲಗಾವಿ: ''ಜರ್‍ಮಲಿ ಪಾಳೆಗಾರರ ವಂಶಾವಳಿ (ಹಸ್ತಪ್ರತಿಯಿಂದ)'', ಚಂದ್ರವಳ್ಳಿ, ಚಿತ್ರದುರ್ಗ.

೨. ಸಿ. ಎಂ. ವೀರಭದ್ರಯ್ಯ : ೧೯೯೮, 'ಕೂಡ್ಲಿಗಿ ತಾಲೂಕಿನ ಪಾಳೇಗಾರರು', **ಮುನ್ನಡೆವ ಕೂಡ್ಲಿಗಿ**; ಪು. ೨೬-೩೩., ಬೆಂಗಳೂರು.

೩. ಅದೇ.

೫. ಸಿ. ಎಂ. ವೀರಭದ್ರಯ್ಯ: ಅದೇ.

೬. ಮೊರಬದ ಡಾ. ಶಿವಣ್ಣನವರು ಹೇಳಿದ್ದಾರೆ.

೭. ಅವರೇ.

೮. ಅವರೇ.

೯. ಲಕ್ಷ್ಮಣ ತೆಲಗಾವಿ: ಅದೇ

೧೦. ಡಾ.ಎಂ. ಶಿವಮೂರ್ತಿ; ೧೯೯೯, ''ಶ್ರೀಮದ್ ಉಜ್ಜಯಿನಿ ಸದ್ಧರ್ಮ ಸಿಂಹಾಸನಪೀಠ ಹಿನ್ನೆಲೆ ಮತ್ತು ಕಾರ್ಯಚಟುವಟಿಕೆಗಳು'', **ಗುರುಕಾರುಣ್ಯ**, ಪು. ೪೦-೪೧, ಬೆಂಗಳೂರು.

೧೧. ಮೊರಬದ ಡಾ. ಶಿವಣ್ಣನವರು ತಿಳಿಸಿರುವರು.


೧೨. ಅವರೇ.

೧೩. ಬಳ್ಳಾರಿ ಜಿಲ್ಲೆಯ ಗೆಜ್ಜೆಟ್ಟಿಯರ್.

೧೪. ಲಕ್ಷ್ಮಣ ತೆಲಗಾವಿ: ಅದೇ.

೧೫. ಮೊರಬದ ಡಾ. ಶಿವಣ್ಣನವರು ಮತ್ತು ಜರ್ಮಲೆ ದೊರೆಗಳಾದ ಶ್ರೀ ಚಂದ್ರಶೇಖರ ದೊರೆಗಳು ತಿಳಿಸಿರುವರು.


೧೬. ಲಕ್ಷ್ಮಣ ತೆಲಗಾವಿ: ಅದೇ.



೧೬೮. ಜರ್ಮಲೆಯ ಗುಡ್ಡಪ್ರದೇಶದಲ್ಲಿ ಕೋಟೆ ಇತ್ಯಾದಿ




೧೬೯. ಜರ್ಮಲೆಯ ಗುಡ್ಡಪ್ರದೇಶದಲ್ಲಿ ಕೋಟೆ-ಕೊತ್ತಳ ಇತ್ಯಾದಿ




೧೭೦. ಜರ್ಮಲೆಯ ಗುಡ್ಡಪ್ರದೇಶದ ನೆಲೆ






೧೭೧. ಹಳೆ ಜರ್ಮಲೆಯಲ್ಲಿ ಹಾಳುನೆಲೆಯಲ್ಲಿ ಬಾವಿ, ಗೋರಿ ಇತ್ಯಾದಿ





೧೭೨. ಹಳೆ ಜರ್ಮಲೆಯಲ್ಲಿ
ಬಾಗೇಶ್ವರ ದೇವಾಲಯ.





೧೭೩. ಈಗಿನ ಜರ್ಮಲೆಯ
ಗ್ರಾಮದಲ್ಲಿಯ
ಶಿಲ್ಪಗಳು







೧೭೪. ಹಳೇ ಜರ್ಮಲೆಯ ಗುಡ್ಡಪ್ರದೇಶದಲ್ಲಿ ಹಾಳಾದ ರಸ್ತೆಗಳು, ಅರಮನೆ ಇತ್ಯಾದಿ.



೧೭೫. ಹಳೆಯ ಜರ್ಮಲೆಯಲ್ಲಿ
ಬೃಹನ್ಮಠ,
ಬಾವಿ ಇತ್ಯಾದಿ.






೧೭೬. ಜರ್ಮಲೆಯ ದೊರೆ
ಶ್ರೀ ಚಂದ್ರಶೇಖರ
ರಾಜರೊಂದಿಗೆ ಮಿತ್ರರು.



೧೭೭. ಜರ್ಮಲೆಯ ಪಾಳೆಗಾರರ
ಮನೆಯಲ್ಲಿ ಶ್ರೀ ಜ.
ಮರುಳಸಿದ್ಧೇಶ್ವರ ಸ್ವಾಮಿಯ
ಕೊರಳಲ್ಲಿ ಚಿನ್ನ
ಕವಚದಲ್ಲಿ ಮಾವಿನ ಗೊಟ್ಟ.



೧೭೮. ಜರ್ಮಲೆಯ
ಪಾಳೆಗಾರರ ದೊರೆ
ಚಂದ್ರಶೇಖರ
ಹೊರೆಯವರು
ತಮ್ಮ ಮನೆಯ
ದೇವರ ಮನೆಯಲ್ಲಿ

ಉಪಸಂಹಾರ

ವಿಭಿನ್ನ ಧರ್ಮ, ಭಾಷೆ ಮತ್ತು ಸಂಸ್ಕೃತಿಗಳ ಬೀಡು ಭಾರತ. ಪ್ರತಿಯೊಂದು ಧರ್ಮಕ್ಕೆ ತನ್ನದೇ ಆದ ಸಾಂಸ್ಕೃತಿಕ ಪರಂಪರೆಗಳು ಮತ್ತು ವ್ಯವಸ್ಥಿತ ಶಾಸ್ತ್ರಗಳಿವೆ. ಅಂಥವುಗಳಲ್ಲಿ ವೀರಶೈವ ಧರ್ಮ ಒಂದು. ಅದರ ಪಂಚಪೀಠಗಳಲ್ಲೊಂದಾದ ಉಜ್ಜಯಿನೀ ಸದ್ಧರ್ಮ ಪೀಠವು ಒಂದು ಬೃಹತ್ ಸಂಸ್ಥಾನವಾಗಿ ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯ, ಕೂಡ್ಲಿಗಿ ತಾಲೂಕಿನ ಒಂದು ಕಿರು ಪಟ್ಟಣದ ಹೃದಯ ಭಾಗದಲ್ಲಿ ನೆಲಸಿದ್ದು ಅದರ ಸಾಂಸ್ಕೃತಿಕ ಪರಂಪರೆಯ ಈ ಸದ್ಯ ಇಪ್ಪತ್ತಕ್ಕೂ ಹೆಚ್ಚು ಭಾಗಗಳನ್ನಾಗಿ ವಿಂಗಡಿಸಿ ಪ್ರಸ್ತುತ ಈ ಕೃತಿಯಲ್ಲಿ ಪರಿಚಯಿಸಲಾಗಿದೆ. ಈ ಅಧ್ಯಯನಕ್ಕೆ ಮೂಲ ಆಕರ ಸಾಮಗ್ರಿಗಳು ಅಲ್ಲಿಯ ಪರಂಪರೆಗಳು, ಐತಿಹ್ಯಗಳು, ಸಾಹಿತ್ಯ, ಶಾಸನ ಮತ್ತು ವಾಸ್ತು-ಶಿಲ್ಪಕಲೆ ಇತ್ಯಾದಿ.

ಶಾಸನಗಳ ಮತ್ತು ಸಾಹಿತ್ಯಕೃತಿಗಳ ಅಧ್ಯಯನದಿಂದ ಶ್ರೀಪೀಠದ ಚರಿತ್ರೆಯಲ್ಲಿ ಕೆಲವು ಅರಸು ಮನೆತನಗಳು ಗೋಚರಿಸುತ್ತವೆ. ಅವು ಕಲ್ಯಾಣ ಚಾಲುಕ್ಯ, ಪಾಂಡ್ಯ, ಸೇವುಣ, ಹೊಯ್ಸಳ, ಕಾಕತೀಯ, ವಿಜಯನಗರ, ಜರಿಮಲೆಯ ಪಾಳೆಯಗಾರರು, ಚಿತ್ರದುರ್ಗದ ಪಾಳೆಯಗಾರರು, ಬಾಗಳಿಯ ಪಾಳೆಯಗಾರರು ಮತ್ತು ಕೆಳದಿಯ ಪಾಳೆಯಗಾರರು, ಆಧುನಿಕವಾಗಿ ಬ್ರಿಟಿಷರ ಆಳ್ವಿಕೆ.

ಪ್ರಸ್ತುತ ಅಧ್ಯಯನದಲ್ಲಿ ಇಂದಿಗೂ ಶ್ರೀಪೀಠಕ್ಕೂ ಮತ್ತು ಜರಿಮಲೆಯ ಪಾಳೆಯಗಾರರಿಗೆ ನಿಕಟ ಸಂಬಂಧವಿದ್ದುದರಿಂದ ಈ ಪಾಳೆಯಗಾರರ ಬಗ್ಗೆ ಸಮಗ್ರವಾಗಿ ಅಧ್ಯಯನ ಮಾಡಲಾಗಿದೆ. ಜರ್ಮಲೆಯ ಪಾಳೆಯಗಾರರ ಇತಿಹಾಸಕ್ಕೆ ಸಂಬಂಧಿಸಿದ ಐತಿಹ್ಯ, ದಾಖಲೆಗಳನ್ನಲ್ಲದೆ, ಅವರ ಮನೆಯಲ್ಲಿ ಆರಾಧಿಸುವ ಶ್ರೀ ಮರುಳಸಿದ್ಧರ ಮುಖವಾಡ ಇತ್ಯಾದಿ ಉಪಕರಣಗಳು ಹಾಗೂ ಈ ಸ್ಥಳದ ಕೋಟೆ-ಕೊತ್ತಲ ದೇವಾಲಯ-ಶಿಲ್ಪ, ಪ್ರಾಚೀನ ಜನವಸತಿ ನಿವೇಶ ಇತ್ಯಾದಿಗಳ ವಿವರಗಳಿವೆ. 'ಮರುಳಾರಾಧ್ಯ ವಿಜಯ' ಕೃತಿಯಲ್ಲಿ ಶ್ರೀಪೀಠದ ಚರಿತ್ರೆಯಿದೆ. ಅದರಲ್ಲಿ ಕಲ್ಯಾಣ ಚಾಲುಕ್ಯ, ಕಳಚೂರಿ, ಹೊಯ್ಸಳ, ಓರಂಗಲ್ಲಿನ ಕಾಕತೀಯ ಅರಸರು ಮತ್ತು ಅವರ ಕಾಲದ ಕೆಲವು ವಿವರಗಳು ಕಾಣುತ್ತವೆ. ಜಗದ್ಗುರುಗಳ ಪಟ್ಟವಲ್ಲರಿಯ ಅಧ್ಯಯನದಲ್ಲಿ ಶ್ರೀಪೀಠವು ಮಧ್ಯಪ್ರದೇಶದಿಂದ ಈಗಿರುವ ಸ್ಥಳಕ್ಕೆ

ಹೇಗೆ, ಯಾರಿಂದ ವರ್ಗಾವಣೆ ಆಯಿತೆಂಬ ವಿವರಗಳಿವೆ. ಆದರೆ ಈ ಪಟ್ಟಾವಲ್ಲರಿಯಲ್ಲಿ ಇನ್ನೂ ಅನೇಕ ಹೆಸರುಗಳು ಸೇರಿಕೊಂಡಿಲ್ಲ. ಹಾಗೂ ಪಟ್ಟಾವಲ್ಲರಿಯ ವಿವರದಲ್ಲಿ ಕಾಣುವ ಕೆಲವು ಹೆಸರುಗಳು ಅದರ ಹೆಸರುಗಳುಳ್ಳ ಪಟ್ಟಿಯಲ್ಲಿ ಕಾಣುವುದಿಲ್ಲ. ಇದನ್ನು ಪುನಃ ಪರಾಮರ್ಶಿಸಬೇಕಾಗಿದೆ. ಬಹುಕಾಲದ ಇತಿಹಾಸವುಳ್ಳ ಯಾವುದೇ ಒಂದು ಕ್ಷೇತ್ರದಲ್ಲಿ ಈ ರೀತಿಯ ಸನ್ನಿವೇಶಗಳು ಜರುಗುವುದುಂಟು!

ಶ್ರೀಪೀಠದ ಹಬ್ಬ-ಉತ್ಸವಗಳಲ್ಲಿ ಶಿಖರದ ತೈಲಾಭಿಷೇಕವು ಕರ್ನಾಟಕದಲ್ಲಿಯೇ ಅಪರೂಪದ್ದೆನಿಸಿದೆ. ಈ ರೀತಿಯ ತೈಲಾಭಿಷೇಕವನ್ನು ವಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಸರೂರಿನ ರೇವಣಸಿದ್ಧ ದೇವಾಲಯದ ಹಬ್ಬ-ಉತ್ಸವ ಆಚರಣೆಯಲ್ಲಿ ಸಾಂಕೇತಿಕವಾಗಿ ಬದಿಯ ಗುಡ್ಡದ ಮೇಲೆ ಕಟ್ಟಿರುವ ಕಿರು ಬಚ್ಚಲಿನಲ್ಲಿ ಎಣ್ಣೆ ಎರೆಯುವ ಸಂಪ್ರದಾಯದಲ್ಲಿ ಕಾಣಬಹುದು. ಶ್ರೀಪೀಠದಲ್ಲಿ ಶಿಖರಕ್ಕೆ ಎರೆಯುವ ತೈಲಾಭಿಷೇಕದಲ್ಲಿ ಮೊದಲು ಜರ್ಮಲೆಯ ಪಾಳೆಗಾರರು ಕಳಿಸಿದ ಎಣ್ಣೆಯನ್ನು ಎರೆದ ಮೇಲೆಯೇ ಉಳಿದ ಭಕ್ತರ ಎಣ್ಣೆಯನ್ನು ಎರೆಯುವರು. ಹೀಗಾಗಿ ಜರ್ಮಲೆಯ ಪಾಳೆಯಗಾರರಿಗೆ ಶ್ರೀಪೀಠವು ವಿಶೇಷ ಮಹತ್ವವನ್ನು ಕೊಟ್ಟಿರುವುದು ಕಾಣುತ್ತದೆ. ಅದೇ ರೀತಿ ಶ್ರೀಪೀಠದ ಕಾರ್ತಿಕೋತ್ಸವದ ಆರಂಭವನ್ನು ಉಜ್ಜಯಿನಿ ಪಟ್ಟಣದ ಗೌಡರ ಮನೆಯವರು ಮಾಡುತ್ತಾರೆ. ದಸರಾ ಸಂದರ್ಭದಲ್ಲಿ ಬನ್ನಿ ಮುಡಿಯುವ ಮೊದಲು ಅಂಬನ್ನು ಹೊಡೆಯುವರು ಶ್ರೀಪೀಠದ ಮರುಳಸಿದ್ಧಸ್ವಾಮಿಯ ಅರ್ಚಕ ಮನೆತನದವರು. ಭಾರತ ಹುಣ್ಣಿಮೆಯಲ್ಲಿ ಶ್ರೀಮರುಳಸಿದ್ಧನ ಪಾಲಿಕೆ ಉತ್ಸವದಲ್ಲಿ ಶ್ರೀ ಮರುಳಸಿದ್ಧನಿಗೆ ಮೊದಲನೆಯ ಆರತಿಯನ್ನು ಎತ್ತುವವರು ಸದರೀ ಪಟ್ಟಣದ ಹರಿಜನ ಮಹಿಳೆಯರು ಹಾಗೂ ಅವರೇ ಶ್ರೀ ಮರುಳಸಿದ್ಧನ ಕಂಕಣ ಬಿಚ್ಚುವ ಶುಭ ಸಂದರ್ಭದಲ್ಲೂ ಶೋಬಾನೆ ಪದಗಳನ್ನು ಹಾಡುವರು. ಶ್ರೀಸ್ವಾಮಿಯು ಭಾರತಹುಣ್ಣಿಮೆಯಲ್ಲಿ ಒಂಬತ್ತು ಪಾದಗಟ್ಟೆಗಳಿಗೆ ಬೆಟ್ಟಿ ಕೊಟ್ಟು ಮರಳುವಾಗ ಹಾರಕನಾಳ ಗ್ರಾಮದ ಹತ್ತಿರ ಕಡುಬಿನ ಕಾಳಗ ನಡೆಯುತ್ತದೆ. ಮುಂದೆ ಈ ಉತ್ಸವ ಶ್ರೀಪೀಠದ ಸದರೀ ಪಟ್ಟಣಕ್ಕೆ ಆಗಮಿಸುವಾಗ ಕುಂಟಬಸಪ್ಪನ ವಿಗ್ರಹವನ್ನು ಶ್ರೀಪೀಠದಿಂದ ತಂದು ಕುರುಬರು, ಊರಗೌಡರು, ತಳವಾರರು ಮತ್ತು ಮಠದಯ್ಯಗಳು ಅದನ್ನು ತಡೆದು ನಿಲ್ಲಿಸುವರು. ಈ ಸಂದರ್ಭದಲ್ಲಿ ಎರಡೂ ಗುಂಪಿನವರು ಲಕ್ಕೆಜುಳ್ಳಿನಿಂದ ಸಾಂಕೇತಿಕವಾಗಿ ಹೊಡೆದಾಡುವರು. ಕೊನೆಗೆ ಶ್ರೀ ಸ್ವಾಮಿಯ ಪಾಲಕಿಯನ್ನು ಹೊತ್ತವರು ಕುಂಟಬಸಪ್ಪನ ವಿಗ್ರಹವನ್ನು ಹಿಡಿದವನನ್ನು ಬದಿಯ ಬೇಲಿಯ ಕಡೆಗೆ ದಬ್ಬಿ, ಅವರಿಂದ ಕಪ್ಪಕಾಣಿಕೆಗಳನ್ನು ಸ್ವೀಕರಿಸಿ

ಶ್ರೀ ಸ್ವಾಮಿಯನ್ನು ಊರ ಒಳಗಡೆ ತರುವರು. ಆಗ ಶ್ರೀಸ್ವಾಮಿಗೆ ಮೊದಲು ಪೂಜೆಯನ್ನು, ಕ್ರಿಯಾಪ್ರಸಾದ ಮತ್ತು ಕ್ರಿಯಾದಾರತಿಯನ್ನು ಮಾಡುವರು. ಮೊದಲು ಹರಿಜನ ಮಹಿಳೆಯರಿಂದಲೇ ಆಗಸಿಯ ಆರತಿಯಾಗುವುದು. ಶ್ರೀ ಮರುಳಸಿದ್ಧನ ಪರಮಶಿಷ್ಯನೆನಿಸಿದ ತಳವಾರ ಜೆಟ್ಟೆಪ್ಪನ ವಂಶಸ್ಥರು ಇದನ್ನು ಮಾಡುವರು. ಈ ಘಟನೆಯಲ್ಲಿ ಸೋಲನ್ನುಂಡವರಲ್ಲಿ ಕುರುಬರು ಮತ್ತು ಇನ್ನಿತರ ಪುರಪ್ರಮುಖರನ್ನು ಕಾಣುತ್ತೇವೆ. ಒಟ್ಟಾರೆ ಶ್ರೀಪೀಠದ ಹಬ್ಬ-ಉತ್ಸವಗಳಲ್ಲಿ ಊರಗೌಡರಿಗೆ, ಅರ್ಚಕರಿಗೆ, ಹರಿಜನ ಮಹಿಳೆಯರಿಗೆ ಮತ್ತು ತಳವಾರರಿಗೆ ಪ್ರಾಶಸ್ತ್ಯ ನೀಡಿರುವುದು ಕಾಣುತ್ತದೆ.

ಶ್ರೀಸ್ವಾಮಿಯ ಹಬ್ಬ-ಉತ್ಸವ ಭಾಗದಲ್ಲಿ ಪಂಜನ್ನು ಹಿಡಿಯುವವರು ಬಾರಿಕರು ಮತ್ತು ಮಡಿ ಬಟ್ಟೆಯ ನಡೆಮಡಿ ಶ್ರೀಸ್ವಾಮಿಗೆ ಮತ್ತು ಶ್ರೀಪೀಠದ ಜಗದ್ಗುರುಗಳಿಗೆ ಹಾಸುವವರು ಮಡಿವಾಳರು ಕಾಣುವರು. ಈ ಹಿಂದೆ ಶ್ರೀಪೀಠದ ಜಗದ್ಗುರುಗಳನ್ನು ದಮಣಿ ಅಥವಾ ಮೇಣೆಯಲ್ಲಿ ಕೂಡಿಸಿಕೊಂಡು ಅದನ್ನು ಹೊತ್ತು ಪ್ರವಾಸ ಮಾಡುವವರು ವಾಲ್ಮೀಕಿ ಜನಾಂಗದ ಜಟ್ಟಿಗಳಾಗಿದ್ದರು. ಸದರೀ ಪಟ್ಟಣದ ಮಾರುತಿ ದೇವಾಲಯದ ಅರ್ಚಕ ದಾಸಯ್ಯನಾಗಿದ್ದು ಆತನಿಗೆ ಕಾಣಿಕೆಯನ್ನು ಶ್ರೀಪೀಠವು ಕೊಡುವುದು ಕಂಡುಬರುತ್ತದೆ. ಶ್ರೀ ಪೀಠದಲ್ಲಿ ಮೊದಲು ಆನೆ ಮತ್ತು ಒಂಟೆಗಳಿದ್ದವು. ಅವುಗಳ ಮಾಹುತರು ಮುಸ್ಲಿಂ ಜನಾಂಗದವರು. ಈ ಸಮಾಜದವರ ಹಬ್ಬದಲ್ಲಿ ಅವರ ದೇವರಿಗೆ ಬಟ್ಟೆ ಇತ್ಯಾದಿಯನ್ನು ಮೊದಲು ಶ್ರೀಪೀಠವೇ ನೀಡುವುದು. ಹೀಗೆ ಶ್ರೀಪೀಠದ ಸಾಂಸ್ಕೃತಿಕ ಚಟುವಟಿಕೆಗಳನ್ನು ನಿರ್ವಹಿಸಲು ಹಿಂದುಳಿದವರಿಗೆ, ಪರಿಶಿಷ್ಟ ಜಾತಿಯವರಿಗೆ, ಅಲ್ಪ ಸಂಖ್ಯಾತರಿಗೆ ಮುಂತಾದವರಿಗೆ ಅವಕಾಶವನ್ನು ನೀಡಿರುವುದು ಕಂಡುಬರುವುದು. ಸಮಾಜದ ವಿವಿಧ ವರ್ಗದವರಿಗೆ ಒಂದೊಂದು ರೀತಿಯಲ್ಲಿ ವಿಶೇಷ ಸ್ಥಾನಮಾನವನ್ನು ಕೊಟ್ಟಿರುವುದು ತಿಳಿದು ಬರುತ್ತದೆ. ಇದಲ್ಲದೆ ಶ್ರೀಪೀಠದ ಸಾಮಾಜಿಕ ವ್ಯವಸ್ಥೆಯಲ್ಲಿ ಶ್ರೀಪೀಠದ ಜಗದ್ಗುರುಗಳಿಗೇ ಉಚ್ಚಸ್ಥಾನ. ಹೀಗಾಗಿ ಶ್ರೀಪೀಠವು ಧರ್ಮಸಮನ್ವಯವನ್ನು ಸಂರಕ್ಷಿಸುತ್ತಿರುವುದು ಎದ್ದು ಕಾಣುತ್ತದೆ.

ನ್ಯಾಯಾಲಯದ ಅಧ್ಯಯನದಲ್ಲಿ ಆಗಿನ ಬ್ರಿಟಿಷ ಸರಕಾರ ಧರ್ಮ ವ್ಯಾಜ್ಯಗಳನ್ನು ನಡೆಸಿಕೊಂಡು ಹೋಗಲು, ಇನ್ನಿತರ ಕಡೆಗಳಂತೆ (ಜಮಖಂಡಿ, ಬೀಳಗಿ, ಮುಧೋಳ ಇತ್ಯಾದಿಸಂಸ್ಥಾನಗಳಂತೆ) ಶ್ರೀಪೀಠಕ್ಕೂ ತನ್ನದೇ ಆದ ಒಂದು ಪ್ರತ್ಯೇಕ ನ್ಯಾಯಾಲಯವನ್ನು ನಡೆಸಲು ಅನುಮತಿ ನೀಡಿತ್ತೆಂದು ಕಾಣುತ್ತದೆ. ಈ ನ್ಯಾಯಾಲಯದ ಕಾರ್ಯವೈಖರಿ, ಅದರ ಸಿಬ್ಬಂದಿ ಮತ್ತು ನಿರ್ಣಯಗಳು

ಕುತೂಹಲಕಾರಿ ಮಾಹಿತಿಯನ್ನು ನೀಡುತ್ತವೆ. ಇಂದಿಗೂ ಪಾದರಕ್ಷೆ ಮೋಕ್ಷ ಪಡೆದ ವೀರಶೈವರು ಶ್ರೀಪೀಠಕ್ಕೆ ಆಗಮಿಸಿ ಶುದ್ಧೀಕರಿಸಿಕೊಳ್ಳುವವರನ್ನು ಕಾಣುತ್ತೇವೆ.

ಶಿಕ್ಷಣ ಅಧ್ಯಯನವನ್ನು ವೀಕ್ಷಿಸಿದಾಗ ಶಾಲೆ, ಕಾಲೇಜು ಮುಂತಾದ ವಿದ್ಯಾಕೇಂದ್ರಗಳನ್ನು ತೆರೆಯುವುದು ಸರ್ಕಾರದ ಕೆಲಸವಾಗಿದ್ದರೂ ಶ್ರೀಪೀಠವು ಹಿಂದುಳಿದ ಗ್ರಾಮಾಂತರ ಪ್ರದೇಶದ ತನ್ನ ಬಡ ಭಕ್ತರ, ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ಅನೇಕ ಶಾಲೆ, ಕಾಲೇಜುಗಳನ್ನು ತೆರೆದು ಅವರನ್ನು ಉದ್ಧರಿಸುತ್ತಿರುವುದು ಗಮನೀಯ. ಶ್ರೀಪೀಠವು ತನ್ನ ಸಮಾಜಕ್ಕೆ ಧರ್ಮ ಪ್ರಸಾರ ಮಾಡಲು ಮತ್ತು ಜಾಗೃತಿಯನ್ನುಂಟು ಮಾಡಲು ಆಗಿಂದ್ದಾಗ್ಗೆ ಅನುಷ್ಠಾನ, ಕೀರ್ತನೆ, ಭಜನೆ, ಪುರಾಣ, ಪೂಜೆ ಪುನಸ್ಕಾರ, ಧರ್ಮಗೋಷ್ಠಿ ಮುಂತಾದ ಚಟುವಟಿಕೆಗಳನ್ನು ನಡೆಸುತ್ತಿರುವುದು ಗಮನೀಯ. ಇದಲ್ಲದೆ ವಿಚಾರ ಸಂಕಿರಣ, ಏರ್ಪಡಿಸುವುದು ಮತ್ತು ಪ್ರಕಟಣೆಗಳನ್ನು ಹೊರತರುತ್ತಿರುವುದು ಮುಂತಾದ ಶೈಕ್ಷಣಿಕ ಹಾಗೂ ಧರ್ಮಸಾಹಿತ್ಯ ಕಾರ್ಯಕ್ರಮಗಳು ಶ್ರೀಪೀಠದಲ್ಲಿ ಜರುಗುತ್ತಿರುವುದು ತನ್ನ ಭಕ್ತ ಸಮುದಾಯಕ್ಕೂ ಸಂತಸದ ಸಂಗತಿಯಾಗಿದೆ.

ದೂರ ದೂರದಿಂದ ಬರುವ ಭಕ್ತ ಸಮುದಾಯಕ್ಕೆ ಹಸಿವು ಮತ್ತು ನೀರಡಿಕೆಯನ್ನು ನೀಗಿಸಲು ನಿತ್ಯ ಅನ್ನದಾಸೋಹ ಹಾಗೂ ವಸತಿ ವ್ಯವಸ್ಥೆಯನ್ನು ಕಲ್ಪಿಸಿರುವುದು ಮಹತ್ವದ ಸಂಗತಿ. ಶ್ರೀಪೀಠದ ಸಮಗ್ರ ಸಾಂಸ್ಕೃತಿಕ ಚಟುವಟಿಕೆಗಳನ್ನು ನಿರಂತರವಾಗಿ ನಡೆಸಿಕೊಂಡು ಹೋಗಲು ದತ್ತಿ-ದಾನಗಳನ್ನು ನೀಡುವ ಭಕ್ತರ ಸಂಖ್ಯೆಯು ದಿನೇ ದಿನೇ ಹೆಚ್ಚಾಗುತ್ತಿ ರುವುದು ಆದಾಯದ ವಿಷಯದಲ್ಲಿ ಗಮನಿಸಲಾಗಿದೆ.

ಶ್ರೀಪೀಠವು ತನ್ನ ವೀರಶೈವ ಧರ್ಮವನ್ನು ಜಾಗ್ರತಗೊಳಿಸಲು ದೇಶದ ವಿವಿದೆಡೆಗಳಲ್ಲಿ ಮೊದಲು ಮಾಡಿ ತೆರೆದ ಇಪ್ಪತ್ತೆಂಟು ಸಾವಿರಕ್ಕೂ ಹೆಚ್ಚು ಶಾಖಾಮಠಗಳು ಕಾರಣಾಂತರದಿಂದ ಈಗ ಕೇವಲ ಕೆಲವೇ ಕಡೆಗಳಲ್ಲಿ ಉಳಿದುಕೊಂಡಿರುವುದು ದುರದೃಷ್ಟಕರ ಸಂಗತಿ. ಇವುಗಳ ಬಗ್ಗೆ ಹೆಚ್ಚಿನ ಅಧ್ಯಯನ ನಡೆಯಬೇಕಾಗಿದೆ.

ಸು.ಕ್ರಿ.ಶ. ೧೨ನೇ ಶತಮಾನದಲ್ಲಿ ಉತ್ತರ ಕರ್ನಾಟಕದಲ್ಲಿ ಸಾಮಾಜಿಕ-ಧಾರ್ಮಿಕ ಕ್ರಾಂತಿಗೆ ಕಾರಣರೂ ಮತ್ತು ಸರಳ ಕನ್ನಡ ಭಾಷೆಯಲ್ಲಿ ಅಮೋಘ ವಚನ ಸಾಹಿತ್ಯವನ್ನು ನೀಡಿದವರೂ ಆದ ಬಸವಣ್ಣನವರಿಗೆ ದೀಕ್ಷಾ ಗುರು ಮತ್ತು ವಿದ್ಯಾಗುರುಗಳು ಶ್ರೀಪೀಠದ ಶಾಖಾಮಠವಾದ ಸಾರಂಗಮಠದ ಜಾತವೇದ ಮುನಿಗಳು (ಈಶಾನ್ಯ ಮುನಿಗಳು)

ಎಂಬುದನ್ನು ಈ ಕೃತಿಯಲ್ಲಿ ತಿಳಿಸಿರುವುದು ಶ್ರೀಪೀಠಕ್ಕೆ ಒಂದು ಅಭಿಮಾನದ ಸಂಗತಿಯಾಗಿದೆ.

ಉಜ್ಜಯಿನಿ ಪಟ್ಟಣದಲ್ಲಿ ಬರ ಕವಿದರೆ ಸ್ಥಳೀಯ ಮಸ್ಲೆತ್ತಿ ಬಸಪ್ಪನ ಮಳೆಪವಾಡದ ಸಂಗತಿಗಳು ಕುತೂಹಲದ್ದಾಗಿವೆ. ಹಾಗೂ ಇಂದಿಗೂ ಈ ಆಚರಣೆಯು ಶ್ರೀಪೀಠದಿಂದ ಕೊಪ್ಪಳ ಜಿಲ್ಲೆಯ ಹಿರೇ ಸಿಂದೋಗಿಯ ಶ್ರೀ ಮರುಳಸಿದ್ಧೇಶ್ವರ ಮಠಕ್ಕೆ ಹೋಗಿಬರುವ ವಿಷಯ ಈ ಎರಡು ಸ್ಥಾನಗಳ ಸಾಂಸ್ಕೃತಿಕ ಸಂಬಂಧವನ್ನು ಸೂಚಿಸುತ್ತದೆ. ಮತ್ತು ಅಲ್ಲಿಯ ಪರಂಪರೆಗಳು ಹಾಗೂ ವಾಸ್ತು ವೈವಿಧ್ಯವೂ ತಿಳಿದು ಬರುತ್ತದೆ.

ಶ್ರೀಪೀಠದ ಕಲೆ ಮತ್ತು ವಾಸ್ತು ವಿವಿಧತೆಯಲ್ಲಿ ಅನೇಕ ವಿರಳ ಅಂಶಗಳೂ ಗೋಚರಿಸುತ್ತವೆ. ಆದರೆ ಅವರಲ್ಲಿರುವ ಹೆಚ್ಚಿನ ಸಂಖ್ಯೆಯ ಯತಿಗಳ (ಆಚಾರ್ಯರ?) ಶಿಲ್ಪ ವಿಶೇಷ ಗಮನವನ್ನು ಸೆಳೆಯುತ್ತವೆ. ಅವುಗಳಲ್ಲಿ ಒಂದು ಶಿಲ್ಪವನ್ನು ಬಿಟ್ಟು ಆ ಉಳಿದೆಲ್ಲವು ದ್ವಿಭುಜವಾಗಿವೆ. ಒಬ್ಬ ಯತಿಯ ಶಿಲ್ಪ ಮಾತ್ರ ಚತುರ್ಭುಜದಲ್ಲಿದೆ. ಈ ಯತಿಗಳೆಲ್ಲ ಪದ್ಮ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಿರುವರು. ಅವರ ಕೈಗಳು ಯೋಗಮುದ್ರೆಯಲ್ಲಿದ್ದು, ಬೆರಳುಗಳು ಪ್ರಸನ್ನ ಮುದ್ರೆಯಲ್ಲಿವೆ. ಕೆಲವರ ಕೈಗಳು ಅಂಜಲಿ ಮುದ್ರೆಯಲ್ಲಿವೆ. ಹೀಗಾಗಿ ಈ ಯತಿಗಳು ಪದ್ಮಾಸನದಲ್ಲಿ ಕುಳಿತು ಯೋಗಮುದ್ರೆ ಮತ್ತು ಪ್ರಸನ್ನ ಮುದ್ರೆಯಲ್ಲಿ ತಪಸ್ಸು ಮಾಡುತ್ತಿರುವಂತೆಯೂ ಹಾಗೂ ಭಕ್ತರ ಬಯಕೆಯನ್ನು ಈಡೇರಿಸಲು ದೇವರಿಗೆ ನಮಸ್ಕರಿಸುವ ಮುದ್ರೆಯಲ್ಲಿರುವುದನ್ನು ಕಾಣಬಹುದು. ಈ ಎಲ್ಲಾ ಯತಿಗಳು ವಸ್ತ್ರಾಭರಣಗಳನ್ನು ಧರಿಸಿರುವುದು ಗಮನೀಯ.

ಒಬ್ಬ ಯತಿಗಿರುವ ನಾಲ್ಕು ಕೈಗಳಲ್ಲಿ ಕೆಳಗಿನ ಕೈಗಳು ಯೋಗಮುದ್ರೆ(ಪ್ರಸನ್ನ ಮುದ್ರೆ) ಮತ್ತು ಮೇಲಿನ ಕೈಗಳು ಅಂಜಲಿ ಮುದ್ರೆಯಲ್ಲಿಟ್ಟುಕೊಂಡು ಪದ್ಮಾಸನದಲ್ಲಿ ಕುಳಿತಿರುವುದು ವಿಶೇಷ ಗಮನವನ್ನು ಸೆಳೆಯುತ್ತದೆ. ಇಲ್ಲಿರುವ ಯತಿ ಶಿಲ್ಪಗಳಲ್ಲೇ ಈ ಶಿಲ್ಪ ವಿಶಿಷ್ಠ ಸ್ಥಾನಮಾನವನ್ನು ಹೊಂದಿರಬೇಕೆಂದು ಹೇಳಬಹುದು.

ಈ ಕ್ಷೇತ್ರದಲ್ಲಿ ಹೀಗೆ ಹೆಚ್ಚಿನ ಸಂಖ್ಯೆಯಲ್ಲಿ ಈ ಯತಿಗಳ ಶಿಲ್ಪಗಳನ್ನು ಕಂಡರಿಸಲು ಕಾರಣವೇನಿರಬೇಕೆಂದು ಪ್ರಶ್ನೆ ಮಾಡಿದಾಗ ಈ ಸ್ಥಳವು ಮೂಲತಃ ಯತಿಗಳ ಬೀಡಾಗಿದ್ದಿತೆಂದು ಅಭಿಪ್ರಾಯಪಡಬಹುದು. ಬಹುಶಃ ಈ ಕಾರಣಕ್ಕಾಗಿ ಈ ದೇವಾಲಯದಲ್ಲಿ ಅವರನ್ನು ಹೆಚ್ಚಿನ ಸಂಖ್ಯೆಯಲ್ಲಿ ತೋರಿಸಿರಬೇಕು. ಹಾಗಾದರೆ ಈ ಯತಿಗಳು ಯಾರು? ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಈ ಯತಿಗಳು ಧರಿಸಿದ

ವಸ್ತ್ರಾಭರಣ ಮತ್ತು ಅವರು ಕುಳಿತ ಭಂಗಿ ಮತ್ತು ಕೈಗಳ ಮುದ್ರೆ ಇವುಗಳನ್ನು ಪರಾಮರ್ಶಿಸಿದಾಗ ಈ ಎಲ್ಲಾ ಲಕ್ಷಣಗಳು ಶ್ರೀಪೀಠದಲ್ಲಿ ಇಂದು ಕಾಣುವ ಜಗದ್ಗುರುಗಳಿಗೆ ಹೋಲುತ್ತವೆ. ಮೊದಲನೆಯದಾಗಿ ವೇಷಭೂಷಣಗಳಲ್ಲಿ ಹೋಲಿಕೆಯಿದೆ. ಎರಡನೆಯದಾಗಿ ಶ್ರೀಪೀಠದ ಜಗದ್ಗುರುಗಳು ಜಪ-ತಪಗಳನ್ನಾಚರಿಸುತ್ತಾರೆ. ಹಾಗೂ ಭಕ್ತರ ಉದ್ಧಾರಕ್ಕೆ ಶಿವನಮುಖದಿಂದ ಅವತರಿಸಿದರೆಂದು ಹೇಳುವ ಇವರು ಶಿವನನ್ನು ಕೈಮುಗಿದು ಪ್ರಾರ್ಥಿಸುವರು. ಇದು ಅಂಜಲಿ ಮುದ್ರೆಯ ಸಂಕೇತವನ್ನು ವ್ಯಕ್ತಪಡಿಸುತ್ತದೆ. ಇಂದಿಗೂ ಶ್ರೀ ಮರುಳಸಿದ್ಧ ದೇವಾಲಯದಲ್ಲಿರುವ ಅನೇಕ ಯತಿ ವಿಗ್ರಹಗಳನ್ನು ಶ್ರೀಪೀಠದ ಅನೇಕ ಪೂರ್ವಾಚಾರ್ಯರ ಹೆಸರುಗಳಿಂದ ಕರೆಯುವುದುಂಟು. ಹಾಗೂ ಈ ವಿಗ್ರಹಗಳನ್ನು ಸ್ಥಾಪನೆ ಮಾಡಿದ ಸಂಗತಿಯು ಶ್ರೀ ಮರುಳಾರಾಧ್ಯ ವಿಜಯ ಕೃತಿಯಲ್ಲಿ ಪ್ರಸ್ತಾಪ ಮಾಡಿರುವುದನ್ನು ಇಲ್ಲಿ ನೆನಪಿಸಿಕೊಂಡರೆ ನಾಲ್ಕು ಕೈಗಳುಳ್ಳ ಯತಿಯ ವಿಗ್ರಹವನ್ನು ಈಗಿರುವ ಸ್ಥಳದಲ್ಲಿ ಶ್ರೀಪೀಠವನ್ನು ಸ್ಥಾಪನೆ ಮಾಡಲು ಕಾರಣರಾದ ಶ್ರೀ ಮರುಳಸಿದ್ಧರದೆಂದು ಗುರುತಿಸಿದರೆ ತಪ್ಪಾಗಲಾರದು. ಶ್ರೀ ಮರುಳಸಿದ್ಧ ದೇವಾಲಯದಲ್ಲಿರುವ ಈ ಯತಿಗಳ ಸಂಖ್ಯೆಯು ಇನ್ನೂರಕ್ಕೂ ಹೆಚ್ಚಿರುವುದನ್ನು ಗಮನಿಸಿದಾಗ ಪ್ರಸ್ತುತ ಅಧ್ಯಯನದಲ್ಲಿ ಶ್ರೀಪೀಠದ ಜಗದ್ಗುರುಗಳು ೧೧೧ಕ್ಕೂ ಹೆಚ್ಚಿರಬೇಕೆಂದು ಅಭಿಪ್ರಾಯಪಟ್ಟಿರುವುದು ಸಮಂಜಸವೆನಿಸುತ್ತದೆ. ಈಯತಿ ಶಿಲ್ಪಗಳ ಕಾಲ ಸು.ಕ್ರಿ.ಶ. ೧೩ನೇ ಶತಮಾನ. ಕಾಲಾಂತರದಲ್ಲಿ ಈ ಯತಿಗಳನ್ನು ಸ್ವಲ್ಪ ಭಿನ್ನ ಶೈಲಿಯಲ್ಲಿ ನಿರ್ಮಿಸಿರುವುದು ಅಲ್ಲಿಯ ಕಟ್ಟೆಗೆಯ ಕಂಬಗಳಲ್ಲಿ ಮತ್ತು ನವಗ್ರಹ ಪೀಠಗಳಲ್ಲಿ ಕಾಣಬಹುದು. ಈ ಚಿತ್ರಗಳ ಕಾಲ ಸು.ಕ್ರಿ.ಶ. ೧೬ ರಿಂದ೧೭ನೇ ಶತಮಾನ. ಈ ರೀತಿಯ ಶಿಲ್ಪಗಳು ಇನ್ನಿತರ ಕಡೆಗಳಲ್ಲೂ ಕಂಡುಬಂದಿವೆ.

ಈ ಯತಿಗಳು ಶ್ರೀಪೀಠದ ಪೂರ್ವಾಚಾರ್ಯರವೆಂದು ಒಪ್ಪಿಕೊಂಡರೆ ಈಗಿನ ಶ್ರೀ ಮರುಳಸಿದ್ಧ ದೇವಾಲಯವು ಮೂಲದಿಂದಲೂ ಅದೇ ಹೆಸರು ಪಡೆದಿರಬೇಕಾಗಿತ್ತು. ಆದರೆ ಅಲ್ಲಿಯ ಶಾಸನದಲ್ಲಿ ಅದು ಮಲ್ಲಿಕಾರ್ಜುನನೆಂದು ವ್ಯಕ್ತವಾಗಿದೆ. ಈ ಮಲ್ಲಿಕಾರ್ಜುನನ ಹೆಸರು ಹೇಗೆ ಈ ದೇವಾಲಯಕ್ಕೆ ಬಂದಿತು ಎಂಬುದನ್ನು ತಿಳಿಯಬೇಕಾಗುತ್ತದೆ. ಈ ಕುರಿತು ಶ್ರೀಪೀಠದ ಜಗದ್ಗುರುಗಳ ಪಟ್ಟವಲ್ಲರಿಯನ್ನು ಅವಲೋಕಿಸಿದಾಗ ಶ್ರೀ ಮರುಳಾರಾಧ್ಯರ ತರುವಾಯ ಎರಡನೇಯವರಾಗಿ ಬಂದವರು ಶ್ರೀ ಮಲ್ಲಿಕಾರ್ಜುನರೆಂದು ಕಾಣುವರು. ಹಾಗೂ ಈ ಪಟ್ಟಿಯ ೬೨ ರಲ್ಲಿ ಮತ್ತೊಬ್ಬ ಮಲ್ಲಿಕಾರ್ಜುನರು ಗೋಚರಿಸುವರು. ಇದೂ ಅಲ್ಲದೆ ಈ ಪಟ್ಟಿಯಲ್ಲಿ ಈ ಹೆಸರಿನ ಹಿಂದೆ ಕೆಲ ಶಬ್ದಗಳನ್ನು ಕೂಡಿಸಿದ ಹೆಸರುಗಳೂ ಇವೆ. ಹೀಗಾಗಿ ಇವರಲ್ಲಿ ಬಹುತೇಕ ಎರಡನೇ ಜಗದ್ಗುರುಗಳೆನಿಸಿದ

ಮಲ್ಲಿಕಾರ್ಜುನರ ಹೆಸರನ್ನು ಈ ದೇವಾಲಯಕ್ಕೆ ನೀಡಲಾಯಿತೆ ಹೇಗೆ? ಈ ಕುರಿತು ಹೆಚ್ಚಿನ ಸಂಶೋಧನೆಯನ್ನು ಕೈಗೊಳ್ಳಬೇಕಾಗಿದೆ.

ಇಲ್ಲಿನ ಶಾಸನಗಳ ಅಧ್ಯಾಯವನ್ನು ಪರಿಶೀಲಿಸಿದಾಗ ಶ್ರೀಪೀಠದ ಹೆಸರು ಪ್ರಾಚೀನವಾಗಿ ಹರಪನಹಳ್ಳಿ ತಾಲೂಕಿನ ಕಸವನ ಹಳ್ಳಿಯ ಕ್ರಿ.ಶ. ೧೬೬೦ ರ ಶಾಸನದಲ್ಲಿ ಕಾಣುತ್ತದೆ. ಅಲ್ಲಿ **ಉಜನಿ ಸಿಂಹಾಸನ**ದ ಉಲ್ಲೇಖವಿದೆ. ಶ್ರೀ ಮರುಳಸಿದ್ಧರ (ದಾರುಕರ ಇತ್ಯಾದಿ) ಹೆಸರು ಶಾಸನದಲ್ಲಿ ಪ್ರಾಚೀನವಾಗಿ ಮಂಡ್ಯ ಜಿಲ್ಲೆಯ ಮರಡೀಪುರದ ಕ್ರಿ.ಶ. ೧೩೧೫ರ ಶಾಸನದಲ್ಲಿ ಕಾಣುತ್ತದೆ. ಮರುಳಸಿದ್ಧರ ಹೆಸರು ಲಕ್ಷ್ಮೇಶ್ವರದ ಕ್ರಿ.ಶ. ೧೫೧೩ ರ ಶಾಸನದಲ್ಲಿದೆ. ಮರುಳಸಿದ್ಧರನ್ನು ಉಜ್ಜನಿ ಸಿದ್ದೇಶ್ವರ ಎಂದು ದಿನಾಂಕ ೨೭.೭.೧೭೧೨ ರ ಉಜ್ಜಯಿನಿಯ ಶ್ರೀ ಮರುಳಸಿದ್ಧ ದೇವಾಲಯದ ಒಂದುಗಂಟೆಯ ಶಾಸನದಿಂದ ತಿಳಿಯುತ್ತದೆ. ಈ ದೇವಾಲಯಕ್ಕೆ ಸಿದ್ದೇಶ್ವರ ಎಂದು ಕರೆದ ಪ್ರಾಚೀನ ದಾಖಲೆ ಈ ಗಂಟೆ ಶಾಸನವಾಗಿದೆ. ಮುಂದೆ ಈ ಹೆಸರು ಇಂದಿಗೂ ಹಾಗೆಯೇ ಉಳಿದಿದೆ. ಹೀಗಾಗಿ ಶ್ರೀ ಮರುಳಸಿದ್ಧರನ್ನು ಶ್ರೀ ಸಿದ್ಧೇಶ್ವರನೆಂದು ಇಂದಿಗೂ ಕರೆಯುವುದನ್ನು ಇಲ್ಲಿ ನೆನಪು ಮಾಡಿಕೊಳ್ಳಬೇಕು.

ಶ್ರೀ ಮರುಳಸಿದ್ಧ ದೇವಾಲಯದಲ್ಲಿ ಶೈವ ಮತ್ತು ವೈಷ್ಣವ ಧರ್ಮದ ದೇವತೆಗಳ ಶಿಲ್ಪಗಳಿರುವುದು ಏಕೆ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಶೈವಕ್ಕೆ ಸೀಮಿತವಾಗಿ ಶಿವಲಿಂಗ, ತ್ರಿಮೂರ್ತಿ, ಶಿವ-ಪಾರ್ವತಿ, ಗಣೇಶ ಇತ್ಯಾದಿ ವಿಗ್ರಹಗಳನ್ನು ಉದಾಹರಣೆ ಕೊಡಬಹುದು. ಇಲ್ಲಿರುವ ವೈಷ್ಣವ ಧರ್ಮದ ದೇವತೆಗಳ ಶಿಲ್ಪಗಳು ಗೋಪಾಲಕೃಷ್ಣ, ವರಾಹ ಮತ್ತು ಉಗ್ರ ನರಸಿಂಹ. ಜರ್ಮಲೆಯ ಪಾಳೆಗಾರರ ಚರಿತ್ರೆಯನ್ನು ಅವಲೋಕಿಸಿದಾಗ ಒಂದು ಐತಿಹ್ಯದಲ್ಲಿ ಮಾಯಾದ ಗುರು ಅಥವಾ ಮರುಳಸಿದ್ಧರು ಅವರ ಗುರುಗಳಾಗಿ ಕಾಣುವರು. ಇನ್ನೊಂದು ಐತಿಹ್ಯದಲ್ಲಿ ಅವರ ಗುರು ಚನ್ನಕೇಶವ ಎಂದು ಹೇಳಲಾಗಿದೆ. ಮೊದಲನೇ ಐತಿಹ್ಯದ ಪ್ರಕಾರ ಭೂಮಿಯಲ್ಲಿ ಮುಚ್ಚಿದ್ದ ಈ ದೇವಾಲಯವನ್ನು ಜರ್ಮಲೆಯ ಪಾಳೆಗಾರರ ಒಬ್ಬ ಅರಸ ಅದನ್ನು ಅಗೆಸಿ, ಹೊರಗಡೆ ತೆಗಿಸಿ ಜೀರ್ಣೋದ್ಧಾರಗೊಳಿಸಿದ ಬಳಿಕ ಅವರ ಗುರುವಾದ (ಮಾಯಾದ ಗುರು) ಶ್ರೀ ಮರುಳಸಿದ್ಧರಿಗೆ ಪಟ್ಟ ಕಟ್ಟಿಸಿದನೆಂದು ಹೇಳಲಾಗಿದೆ. ಇನ್ನೊಂದೆಡೆ ಕಾಣುವ ಅವರ ಗುರು ಚನ್ನಕೇಶವನನ್ನು ಆ ಸ್ಥಳದಿಂದ ಬೇರೆಡೆಗೆ ಕರೆದುಕೊಂಡು ಹೋದರೆಂದು ಹೇಳಲಾಗಿದೆ. ಇವರು ವೈಷ್ಣವ ಸಂಪ್ರದಾಯದವರಾಗಿದ್ದರಿಂದ ಈ ದೇವಾಲಯದಲ್ಲಿ ಅವರ ಆರಾಧನಾ ದೇವತೆಗಳನ್ನು ಪ್ರತಿಷ್ಠಾಪಿಸಿ ಸಮಾನ ಸ್ಥಾನವನ್ನು ನೀಡಿರಬೇಕೆಂದು ಊಹಿಸಬಹುದು. ಈ ಕಾರಣದಿಂದ ಈ ದೇವಾಲಯದಲ್ಲಿ ವೈಷ್ಣವ ದೇವತೆಗಳನ್ನು ಪ್ರತಿಷ್ಠಾಪಿಸಿರಬಹುದು. ಈ ದೇವಾಲಯದ ಕಾಲ ಸು.ಕ್ರಿ.ಶ. ೧೩ನೇ ಶತಮಾನ. ಆದರೆ

ಈ ಐತಿಹ್ಯಗಳ ಕಾಲ ಸು.ಕ್ರಿ.ಶ. ೧೭ನೇ ಶತಮಾನ. ಹೀಗಾಗಿ ಕಾಲಮಾನದಲ್ಲಿ ಅನೇಕ ಶತಮಾನಗಳ ವ್ಯತ್ಯಾಸವಿರುವುದು ತಿಳಿದು ಬರುತ್ತದೆ. ಇದರಿಂದ ಈ ವಿಷಯವನ್ನು ಕುರಿತು ಇನ್ನೂ ಹೆಚ್ಚಿನ ಸಂಶೋಧನೆ ಮಾಡಬೇಕಾಗಿದೆ.

ಈ ದೇವಾಲಯದ ವಾಸ್ತು-ಶಿಲ್ಪ ಮತ್ತು ಶಾಸನದಲ್ಲಿ ಕೆಲವು ವೀರಶೈವರ ಕುರುಹುಗಳಿರುವುದನ್ನು ಗಮನಿಸಬಹುದು. ಅಲ್ಲಿ ವೀರಭದ್ರನ ಭವ್ಯವಾದ ಎರಡು ಮತ್ತು ಕಿರಿದಾದ ಒಂದು ವಿಗ್ರಹಗಳಿವೆ. ಎರಡು ಸು.ಕ್ರಿ.ಶ. ೧೩ನೇ ಶತಮಾನದ್ದು. ಇನ್ನೊಂದು ಸು.ಕ್ರಿ.ಶ. ೧೬ನೇ ಶತಮಾನದ್ದು. ಎರಡನೇ ಶಿಲ್ಪವು ಈ ದೇವಾಲಯದ ಮಹಾಮಂಟಪದಲ್ಲಿದ್ದು ಅದರ ಕಿರೀಟಮುಕುಟದಲ್ಲಿ ಶಿವಲಿಂಗವಿದೆ. ವೀರಭದ್ರನು ಹೆಚ್ಚಿನ ವೀರಶೈವರಿಗೆ ಮನೆ ದೇವರಾಗಿರುವನು ಎಂಬುದು ಗಮನಾರ್ಹ ಸಂಗತಿ. ರಂಭಾಪುರಿ, ಶ್ರೀಶೈಲ ಸಂಸ್ಥಾನಗಳಲ್ಲೂ ಶ್ರೀವೀರಭದ್ರ ಮೂರ್ತಿಗಳಿರುವುದನ್ನು ಗಮನಿಸಬೇಕು.

ಉಜ್ಜಯಿನಿಯ ಈ ದೇವಾಲಯದ ಕ್ರಿ.ಶ. ೧೨೬೮ ರ ಸ್ತಂಭ ಶಾಸನದ ಶಾಪಾಶಯದಲ್ಲಿ ''ಈ ಧರ್ಮವನ್ನು ಯಾರಾದರೂ ಮೀರಿ ನಡೆದರೆ ಮಹಾಗಣಂಗಳು ನಡೆಸುವರು'' ಎಂದಿದೆ. ಮಹಾಗಣಂಗಳು ಈ ಪ್ರದೇಶದಲ್ಲಿ ವೀರಶೈವರಲ್ಲಿ ಕಾಣುವ ಪುರೋಹಿತ ವರ್ಗದವರು. ಅವರು ಜಂಗಮರಾಗಿದ್ದಾರೆ. ವೀರಶೈವರು ತಮ್ಮ ಹಬ್ಬ-ಉತ್ಸವಾದಿ ದಿವಸ ಜಂಗಮರನ್ನು ಮನೆಗೆ ಬಿನ್ನಹ ಮಾಡುವರು. ಜಂಗಮ ಮನೆತನಗಳ ೧೦೧, ೧೧೧ ಇತ್ಯಾದಿ ಸಂಖ್ಯೆಯಲ್ಲಿ ಮಕ್ಕಳನ್ನು ಬಿನ್ನಕ್ಕೆ ಕರೆಯುವರು. ಇವರೆಲ್ಲ ಬಿನ್ನಹ ತೀರಿಸಿದ ಬಳಿಕ ದಕ್ಷಿಣೆಯನ್ನು ಪಡೆದು ಅವರು ಮರಳಿ ತಮ್ಮ ಮನೆಗಳಿಗೆ ಹೋಗುವರು. ಹೀಗಾಗಿ ಈ ಜಂಗಮ ಮಕ್ಕಳನ್ನು ಬಿನ್ನಹಕ್ಕೆ ಆಹ್ವಾನಿಸುವ ಪದ್ಧತಿಗೆ ಮಹಾಗಣಂಗಳ ಕಾರ್ಯ ಎನ್ನುವರು. ಮಹಾಗಣಂಗಳೆನಿಸುವ ಜಂಗಮ ಮಕ್ಕಳಿಗೆ ಆಗ ಆಯ್ಯಾಚಾರವಾಗಿರುವುದಿಲ್ಲ. ಈ ಗಣಂಗಳು ವೀರಶೈವರ ಪಂಚಪೀಠಗಳಲ್ಲಿ ಯಾವುದಾದರೂ ಒಂದು ಪೀಠಕ್ಕೆ ಸೇರಿರುತ್ತಾರೆ. ಹೀಗಾಗಿ ಈ ಕಾಲಕ್ಕಿಂತ ಮೊದಲೇ ಗಣಂಗಳ ಕಾರ್ಯವನ್ನು ಮಾಡುವ ಪರಂಪರೆ ಈ ಪ್ರದೇಶದಲ್ಲಿ ಅಸ್ಥಿತ್ವದಲ್ಲಿತ್ತೆಂದು ಹೇಳಬಹುದು. ಹಾಗೂ ಬ್ರಾಹ್ಮಣರಿಗೆ ನೀಡುವ ಸ್ಥಾನಮಾನದಂತೆ ಇವರಿಗೂ ತಮ್ಮ ಧರ್ಮದಲ್ಲಿ ನೀಡುವ ಪರಂಪರೆಯಿರುವುದು ತಿಳಿದು ಬರುತ್ತದೆ.

ಪ್ರಾಚೀನ ಶಾಸನಗಳ ಪರಂಪರೆಯಲ್ಲಿ ಅವುಗಳ ಶಾಪಾಶಯದಲ್ಲಿ ನೀಡಿದ ದತ್ತಿಯನ್ನು ಯಾರಾದರೂ ಅಳಿದರೆ ಅವರು ಕುರುಕ್ಷೇತ್ರ, ವಾರಣಾಸಿಯಲ್ಲಿ ಸಾವಿರ ಬ್ರಾಹ್ಮಣರು ಇತ್ಯಾದಿಯರನ್ನು ಕೊಂದ ಪಾಪಕ್ಕೆ ಹೋಗುವರೆಂದು ಉಲ್ಲೇಖಿಸ

ಲಾಗಿದೆ. ಅಲ್ಲಿ ಬ್ರಾಹ್ಮಣರಿಗೆ ವಿಶೇಷ ಸ್ಥಾನವನ್ನು ನೀಡಿದ್ದು ಕಾಣುತ್ತದೆ. ಆದರೆ ಇಲ್ಲಿ ವೀರಶೈವರ ಮಹಾಗಣಂಗಳು ಕಾಣುವದು ವಿರಳವೆನಿಸಿದೆ. ಹೀಗಾಗಿ ಈ ದೇವಾಲಯ ಪರಿಸರದಲ್ಲಿ ಈ ಗಣಂಗಳಿಗೆ ಅಂದರೆ ಜಂಗಮರಿಗೆ ಇಂದಿನಂತೆ ಹೆಚ್ಚಿನ ಸ್ಥಾನಮಾನವನ್ನು ಸಮಾಜದಲ್ಲಿ ನೀಡಲಾಗುತ್ತಿತ್ತೆಂದು ತರ್ಕಿಸಬಹುದು. ಈ ವಿಷಯ ವೀರಶೈವ ಧರ್ಮದ ಮತ್ತೊಂದು ಕುರುಹಾಗಿದೆ.

ಶ್ರೀಪೀಠದ ಸಾಹಿತ್ಯ ಹಾಗೂ ಶಾಸನಗಳಲ್ಲಿ ಪ್ರಸ್ತಾಪವಾದ ಶ್ರೀ ರೇವಣಸಿದ್ಧರ ಅವತಾರ ಹಾಗೂ ಶ್ರೀ ಮರುಳಸಿದ್ಧರ ವಿಷಯಗಳನ್ನು ಅವಲೋಕಿಸಿದಾಗ ಇವರ ಕಾಲಮಾನ ಸುಮಾರು ೨೦೦೦ ವರ್ಷ ಹಿಂದಕ್ಕೆ ಹೋಗುವುದೆಂದು ತಿಳಿಸುತ್ತಾರೆ. ಈ ಬಗೆಗೆ ಹೆಚ್ಚಿನ ಪರಿಶೀಲನೆ ನಡೆಯಬೇಕಾಗಿದೆ.

ಶ್ರೀಪೀಠದ ಶ್ರೀಮರುಳಸಿದ್ಧಸ್ವಾಮಿಯ ನಿತ್ಯ ಆರಾಧನೆಯನ್ನು ಮಾಡಲು ಉಜ್ಜಯಿನಿಯಲ್ಲಿ ಪ್ರತ್ಯೇಕವಾಗಿ ಅರ್ಚಕರ ಆರು ಮನೆತನಗಳಿರುವುದನ್ನು ಈ ಕೃತಿಯದಲ್ಲಿ ತಿಳಿಸಲಾಗಿದೆ. ಈ ರೀತಿಯ ವ್ಯವಸ್ಥೆ ಸುಪ್ರಸಿದ್ಧ ಉಡುಪಿಯ ಶ್ರೀಕೃಷ್ಣನ ದೇವಸ್ಥಾನದಲ್ಲಿರುವುದನ್ನೂ ನೆನಪಿಸಿಕೊಳ್ಳಬಹುದು. ಅಲ್ಲಿ ಶ್ರೀಕೃಷ್ಣನನ್ನು ಆರಾಧಿಸಲು ಅಷ್ಟ ಮಠಗಳಿವೆ. ಒಂದೊಂದು ಮಠದವರು ಪಾಳಿಯಂತೆ ಎರಡು ವರ್ಷಕ್ಕೊಮ್ಮೆ ಶ್ರೀಕೃಷ್ಣನ ಪೂಜೆಯನ್ನು ಸಲ್ಲಿಸುವರು. ಒಮ್ಮೆ ಸಲ್ಲಿಸಿದವರ ಸೇವೆ ಪುನಃ ಬರಬೇಕಾದರೆ ಹದಿನಾರು ವರುಷ ಗತಿಸ ಬೇಕಾಗುತ್ತದೆ. ಈ ರೀತಿಯ ಸೇವಾ ವ್ಯವಸ್ಥೆಯು ಅನೇಕ ದೇವಸ್ಥಾನಗಳಲ್ಲಿದೆ.

ಹೀಗೆ ಈ ಕೃತಿಯಲ್ಲಿ ಶ್ರೀಪೀಠದ ಇನ್ನಿತರ ಸಾಂಸ್ಕೃತಿಕ ವಿವರಗಳನ್ನು ಅಧ್ಯಯನ ಮಾಡಿದ್ದು ಕಾಣುತ್ತದೆ. ಈ ಅಧ್ಯಯನವು ಇನ್ನಿತರ ಮಠಗಳನ್ನು, ಸಿಂಹಾಸನಗಳನ್ನು ಇದೇ ರೀತಿ ಅಧ್ಯಯನ ಮಾಡಲು ಹಾಗೂ ಈ ಕೃತಿಯ ವಿಭಿನ್ನ ವಿಷಯಗಳನ್ನು ಹೆಚ್ಚಿನ ಸಂಶೋಧನೆಗೆ ಬಳಸಿಕೊಳ್ಳಲು ನೆರವಾಗುವುದೆಂದು ನಂಬಿದ್ದೇನೆ. ವೀರಶೈವ ಧರ್ಮ ಸಂಸ್ಥಾನವೊಂದರ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಸಂಶೋಧನಾತ್ಮಕ ವಿಸ್ತಾರ ಅಧ್ಯಯನಕ್ಕೆ ಮಾದರಿ ಹಾಗೂ ಮೊದಲು ಎಂದು ಭಾವಿಸಲಾಗಿದೆ. ಇಲ್ಲಿನ ಕುಂದು-ಕೊರತೆಗಳನ್ನು ಮುಂದೆ ತುಂಬಿಕೊಳ್ಳುವ ಉದ್ದೇಶ ನನ್ನದಾಗಿದೆ. ಸಹೃದಯ ಸಂಶೋಧಕರು ಇತ್ತ ಗಮನವಿರಿಸಬೇಕಾಗಿ ವಿನಂತಿ.

ತಪ್ಪೋಲೆ

ಪುಟ	ಪಂಕ್ತಿ	ತಪ್ಪು	ಸರಿ
xxv	೧೫	ನವಗ್ರಹ	ರಾಶಿ
xxvii	೨೨	ಭಂಡಾರ (ಟ್ರಜರಿ)	ಆಭರಣಗಳನ್ನು
೭೬	೨೪	ಅರ್ಚಕರಿಂದ	ಕೆಲವು ಅರ್ಚಕರಿಂದ
೯೦	೧೦	ಭಂಡಾರ	ಆಭರಣಗಳು
೯೦	೧೨,೧೩,೧೫,೨೧	ಭಂಡಾರ (ಟ್ರಜರಿ)	ಆಭರಣಗಳು
೧೧೯	೨೩	ಈಗ ಅಳಿದುಳಿದ ಉಜ್ಜಯಿನಿ ಸದ್ಧರ್ಮ ಪೀಠದ	ಉಜ್ಜಯಿನಿ ಸದ್ಧರ್ಮ ಪೀಠದ
೧೪೨	೭	ಪ್ರಥಮದಲ್ಲಿ	ಎರಡನೆಯವರಾಗಿ
೧೪೨	೯	ಎರಡನೆಯದಾಗಿ	ಪ್ರಥಮದಲ್ಲಿ
೧೪೨	೧೧	ಅನಂತರ	ಎರಡನೆಯವರಾದ ಬಳಿಕ
೧೫೨	೧೬	ಈ ಅರ್ಚಕರ ಪೂರ್ವಜರು	ಕೆಲವು ಅರ್ಚಕರ
೧೯೬	೧೨	ನವಗ್ರಹ	ರಾಶಿ
೧೯೯	೮ ಮತ್ತು ೨೧	ನವಗ್ರಹ	ರಾಶಿ
೨೦೮	೨೦	ಮೂರು	ನಾಲ್ಕು
೨೦೮	೨೨	ಒಂದು ಬಾವಿಯು	ಎರಡು ಬಾವಿಗಳು
೨೬೦	೧೧	ಆರು	ಒಂಬತ್ತು

ಛಾಯಾಚಿತ್ರಗಳ ಸಂಖ್ಯೆ	ತಪ್ಪು	ಸರಿ
೬೭	ಐ.ಎಸ್.ಎಂ.	ಐ.ಎಚ್.ಎಂ.
೧೩೨	ನವಗ್ರಹ	ರಾಶಿ
೧೮೧	ಟ್ರಜರಿ	ಆಭರಣಗಳು

4

OM NAMA SHIVAYA

God is Great Bless Me

ಗಾಯತ್ರಿ ಮಂತ್ರ

॥ ಓಂ ಭೂರ್ಭುವಸ್ಸ್ವಃ ।
ತತ್ಸವಿತುರ್ವರೇಣ್ಯಂ ಭರ್ಗೋ
ದೇವಸ್ಯ ಧೀಮಹಿ ।
ಧಿಯೋ ಯೋನಃ ಪ್ರಚೋದಯಾತ್ ॥

ಮೃತ್ಯುಂಜಯ ಮಂತ್ರ

ಓಂ ಹೌಂ ಜೂಂ ಸಃ ಓಂ ಭೂರ್ಭುವಸ್ವಃ
ಓಂ ತ್ರಯಂಬಕಂ
ಯಜಾಮಹೇ ಸುಗಂಧಿ ಪುಷ್ಟಿವರ್ಧನ
ಉರ್ವಾರುಕಮಿವ ಬಂಧನಾತ್
ಮೃತ್ಯೋರ್ಮುಕ್ಷೀಯ ಮಾಮೃತಾತ್ ॥
ಓಂ ಸ್ವಃ ಭುವಃ ಭೂಃ ಓಂ ಸಃ ಜೂಂ
ಹೌಂ ಓಂ

ಸತ್ಯ ಮಂತ್ರ

ಓಂ ಭೂಃ । ಓಂ ಭುವಃ । ಓಂ ಸುವಃ । ಓಂ ಮಹಃ । ಓಂ ಜನಃ
ಓಂ ತಪಃ । ಓಂ ಸತ್ಯಂ । ಓಂ ತತ್ಸವಿತುರ್ವರೇಣ್ಯಂ
ಭರ್ಗೋ ದೇವಸ್ಯ ಧೀಮಹಿ । ಧಿಯೋ ಯೋನಃ ಪ್ರಚೋದಯಾತ್
ಓಂ ಆಪೋಜ್ಯೋತಿ ರಸೋಮೃತಂ ಬ್ರಹ್ಮ ಭೂರ್ಭುವಸ್ಸುವರೋಂ

ಗೀತಾ ಸಾರ

ಆದುದೆಲ್ಲಾ ಒಳ್ಳೆಯದಕ್ಕೆ ಆಗಿದೆ
ಆಗುವುದೆಲ್ಲಾ ಒಳ್ಳೆಯದೇ ಆಗುತ್ತಿದೆ
ಆಗಲಿರುವುದೂ ಸಹ
ಒಳ್ಳೆಯದೇ ಆಗಲಿದೆ
ರೋಧಿಸಲು ನೀನೇನು ಕಳೆದುಕೊಂಡಿರುವೆ?
ಕಳೆದುಕೊಳ್ಳಲು, ನೀನು ತಂದಿರುವುದಾದರೂ ಏನು?
ನಾಶವಾಗಲು ನೀನು ಮಾಡಿರುವುದಾದರೂ ಏನು?
ನೀನೇನು ಪಡೆದಿದ್ದರೂ ಅದನ್ನು ಇಲ್ಲಿಂದಲೇ
ಪಡೆದಿರುವೆ, ಏನನ್ನು [illegible] ಅದನ್ನೇ
ಇಲ್ಲಿಗೆ ಅರ್ಪಿಸಿರುವೆ ನಿನ್ನೆ ಬೇರಾರದ್ದೋ ಆಗಿದ್ದು
ಇಂದು ನಿನ್ನದಾಗಿದೆ ಮತ್ತು ನಾಳೆ ಇನ್ನಾರದ್ದೋ ಆಗಲಿದೆ.
ಪರಿವರ್ತನೆ ಜಗದ ನಿಯಮ

ಮುಕ್ತಾಬಿ ಧ್ರುಮ ಹೇಮ ನೀಲ
ಧವಳಚ್ಛಾಯೈರ್ಮುಖೈಸ್ತ್ರೀಕ್ಷಣೈರ್ಯುಕ್ತಾಮಿಂದು
ನಿಬದ್ಧರತ್ನಮುಕುಟಾಂ ತತ್ತ್ವಾರ್ಥವರ್ಣಾತ್ಮಿಕಾಂ ಗಾ
ವರದಾಭಯಾಂಕುಶ ಕಶಾಂ ಶುಭ್ರಂ ಕಪಾಲ
ಶಂಖಂ ಚಕ್ರಮಥಾರವಿಂದ ಯುಗಳಂ ಹಸ್ತೈರ್ವ
ಭಜೇ....

ಲೇಖಕರ ಪರಿಚಯ



ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಕೊಟ್ಟೂರು ಪಟ್ಟಣದಲ್ಲಿ ಜನಿಸಿದ ಡಾ.ಆರ್.ಎಂ.ಷಡಕ್ಷರಯ್ಯ ಅವರು ಬಿಎಸ್.ಸಿ. ಪದವಿವರೆಗೆ ತಮ್ಮ ಹುಟ್ಟೂರಲ್ಲೇ ಅಭ್ಯಾಸ ಮಾಡಿದರು. ಎಂ.ಎ., ಡಿಪ್ಲೋಮಾ ಇನ್ ಎಪಿಗ್ರಾಫಿ, ಪಿಎಚ್.ಡಿ. ಪದವಿಗಳನ್ನು ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನವಿಜ್ಞಾನ ವಿಭಾಗದಿಂದ ಪಡೆದುಕೊಂಡರು. ಪ್ರಾಚೀನ ಭಾರತ ಇತಿಹಾಸ, ಸಂಸ್ಕೃತಿ, ಪುರಾತತ್ವಶಾಸ್ತ್ರ, ವಾಸ್ತುಶಿಲ್ಪ, ಶಾಸನಶಾಸ್ತ್ರ ಇತ್ಯಾದಿ ಅವರ ವಿಶೇಷ ಅಧ್ಯಯನದ ವಿಷಯಗಳು. ಸುಮಾರು ಒಂದು ನೂರಕ್ಕೂ ಹೆಚ್ಚು ಲೇಖನಗಳನ್ನೂ, **Pre-historic and Early Historic Cultures in Bidar District** ಎಂಬ ಕೃತಿಯನ್ನೂ ಪ್ರಕಟಿಸಿರುವರು. **Bidar District Inscriptions Under Karnataka Inscriptions Series** ನಲ್ಲಿ ಮತ್ತು ಬಸವಕಲ್ಯಾಣದ ಕಲೆ ಮತ್ತು ಸಂಸ್ಕೃತಿ ಎಂಬೆರಡು ಕೃತಿಗಳು ಅಚ್ಚಿನಲ್ಲಿವೆ. ನೂರಕ್ಕೂ ಹೆಚ್ಚು ಅಂತರ್ರಾಷ್ಟ್ರೀಯ, ರಾಷ್ಟ್ರೀಯ ಇತ್ಯಾದಿ ವಿಚಾರ ಸಂಕಿರಣ ಮತ್ತು ಸಮ್ಮೇಳನಗಳಲ್ಲಿ ಭಾಗವಹಿಸಿ ತಮ್ಮ ಪ್ರಬಂಧಗಳನ್ನು ಮಂಡಿಸಿರುವರು. ಯುನೆಸ್ಕೋದ ಶಿಷ್ಯವೇತನದಿಂದ ಇಟಲಿ ದೇಶದಲ್ಲಿ ಅಂತರ್ರಾಷ್ಟ್ರೀಯ ಮಟ್ಟದ ಬಂಡೆ ಚಿತ್ರಗಳ ಸಂಶೋಧನೆ ಮತ್ತು ಸಂರಕ್ಷಣೆ ಕುರಿತು ವಿಶೇಷ ತರಬೇತಿಯನ್ನು 1983ರಲ್ಲಿ ಪಡೆದಿದ್ದಾರೆ. ಅನೇಕ ಶೈಕ್ಷಣಿಕ ಸಂಘ ಸಂಸ್ಥೆಗಳ ಸದಸ್ಯರೂ ಆಗಿದ್ದಾರೆ.

ಭಾರತೀಯ ಪುರಾತತ್ವ ಇಲಾಖೆಯ ಶಿಷ್ಯವೇತನ ಪಡೆದು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಲ್ಲಿ ಹಿರಿಯ ಪುರಾತತ್ವಶಾಸ್ತ್ರಜ್ಞ ಡಾ.ಅ.ಸುಂದರ ಅವರ ಮಾರ್ಗದರ್ಶನದಲ್ಲಿ 1985 ರಲ್ಲಿ ಬೀದರ ಜಿಲ್ಲೆಯ ಪುರಾತತ್ವ ವಿಷಯ ಕುರಿತು ತಮ್ಮ ಪಿಎಚ್.ಡಿ. ಪದವಿಯನ್ನು ಗಳಿಸಿಕೊಂಡರು.

ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಇತಿಹಾಸ ಅಧ್ಯಾಪಕರಾಗಿ, ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯಲ್ಲಿ ರೀಡರ್ ಆಗಿ, ನಂತರ ಪ್ರಾಧ್ಯಾಪಕರಾಗಿ ಪದೋನ್ನತಿ ಪಡೆದರು. ಈಗ ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನವಿಜ್ಞಾನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆಯನ್ನು ಸಲ್ಲಿಸುತ್ತಿರುವರು.

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯಲ್ಲಿ ವಸ್ತುಸಂಗ್ರಹಾಲಯದಲ್ಲಿ ಹತ್ತು ವರ್ಷ ಕಾಲ ಕಾರ್ಯನಿರ್ವಾಹಕ ಕ್ಯೂರೇಟರ್ ಆಗಿ ಕೆಲಸ ಮಾಡಿರುವರು. ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದಲ್ಲಿ ಅಲ್ಪ ಕಾಲ ಹಾಗೂ ಕನ್ನಡ ಸಂಶೋಧನ ಸಂಸ್ಥೆಯಲ್ಲಿ ಹನ್ನೊಂದು ವರ್ಷಗಳ ಕಾಲ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಸೇವೆ ಸಲ್ಲಿಸಿರುವರು.

ಹದಿನೇಳು ವರ್ಷಗಳ ಉಪನ್ಯಾಸ ನೀಡಿದ ಅನುಭವ ಹಾಗೂ ಇಪ್ಪತ್ತೈದು ವರ್ಷಗಳ ಸಂಶೋಧನೆಯ ಅನುಭವ ಇರುವ ಇವರ ಮಾರ್ಗದರ್ಶನದಲ್ಲಿ ಇಬ್ಬರು ಸಂಶೋಧನಾ ವಿದ್ಯಾರ್ಥಿಗಳು ಪಿಎಚ್.ಡಿ. ಪದವಿಯನ್ನು ಹಾಗೂ ಐವರು ಎಂ.ಫಿಲ್. ಪದವಿಗಳನ್ನು ಗಳಿಸಿದ್ದಾರೆ.

ಉತ್ತರ ಕರ್ನಾಟಕದಲ್ಲಿ ಸುಮಾರು 2500 ಹಳ್ಳಿಗಳ ಪುರಾತತ್ವ ಅನ್ವೇಷಣೆಯನ್ನು ಮಾಡಿ ಅನೇಕ ಪ್ರಾಗೈತಿಹಾಸಿಕ ಕಾಲದ ಜನವಸತಿ ನಿವೇಶನಗಳನ್ನೂ, ಶಾಸನಗಳನ್ನೂ, ದೇವಾಲಯಗಳನ್ನು, ಶಿಲ್ಪ ಮುಂತಾದ ಪ್ರಾಚ್ಯಾವಶೇಷಗಳನ್ನೂ ಶೋಧಿಸಿದ್ದಾರೆ. ಆರು ಸ್ಥಳಗಳಲ್ಲಿ ಪುರಾತತ್ವ ಉತ್ಖನನ ಮಾಡಿರುವರು. ಅನೇಕ ಪ್ರಾಚೀನ ಶಿಲ್ಪಗಳನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ ವಸ್ತು ಸಂಗ್ರಹಾಲಯಕ್ಕೆ ಸಂಗ್ರಹಿಸಿರುವರು.